UNIVERSAL LIBRARY
OU_200547
UNIVERSAL LIBRARY

Osmania University Library

Call No. K 81·1 S51S

Accession No. K·181

Author

Title

This book should be returned on or before the date last marked below.

PADYA KÁVYAM

ŚESHARÁMÁYANAM.

ಪದ್ಯಕಾವ್ಯಂ

ಶೇಷರಾಮಾಯಣಂ

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ
ವಿದ್ವಾಂಸರಾದ
ಸೋಸಲೆ, ಅಯ್ಯಾಶಾಸ್ತ್ರಿಗಳಿಂದ
ರಚಿಸಲ್ಪಟ್ಟಿದು.

ಪ್ರಥಮಮುದ್ರಣಂ.

ಮೈಸೂರು:
ಜಿ. ಟಿ. ಎ. ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

೧೯೦೧.

(*All Rights Reserved.*)

ಈ ಗ್ರನ್ಥವು

ಮಹಾಮಾತೃಶ್ರೀಯವರಾದ ಮೈಸೂರು ಸಂಸ್ಥಾನದ

ಶ್ರೀಮನ್ಮಹಾರಾಣಿ ರೀಜನ್ಟ್

ವಾಣೀವಿಲಾಸ ಸನ್ನಿಧಾನ ಸಿ. ಐ.

ಯವರ ಮಹಾಸನ್ನಿಧಿಗೆ

ಗ್ರನ್ಥಕರ್ತನಿಂದ

ಅತ್ಯಂತಭಕ್ತಿವಿನಯಪುರಸ್ಸರವಾಗಿ

ಸಮರ್ಪಿಸಲ್ಪಟ್ಟಿದೆ.

ಪೀಠಿಕೆ.

ರಾಮಾಯಣವನ್ನು ಪಾರಾಯಣಮಾಡಿದ ಮಾತ್ರದಿಂದ ಇಹಪರ ಸುಖಗಳೆರಡೂ ಲಭಿಸುವುವೆಂಬಲ್ಲಿ ರಾಮಕಥೆಯನ್ನು ಗ್ರಂಥರೂಪವಾಗಿ ರಚಿಸಿದರೆ ಇಷ್ಟಾರ್ಥ ಪ್ರಾಪ್ತಿಯಾಗದಿರಲಾರದೆಂಬ ದೃಢವಾದ ನಂಬಿಕೆಯಿಂದ ರಾಮಕಥೆಯನ್ನು ರಚಿಸಬೇಕೆಂಬ ಕುತೂಹಲವು ನನಗುಂಟಾಯಿತು. ಆದರೆ ಪೂರ್ವರಾಮಾಯಣದ ಕಥಾಭಾಗವು ಅನೇಕ ಕವಿಗಳಿಂದ ಅನೇಕ ಪ್ರಕಾರವಾಗಿ ರಚಿಸಲ್ಪಟ್ಟಿರುವುದು. ಇದನ್ನು ಲೋಕದಲ್ಲಿ ಅರಿಯದವರೇ ಇಲ್ಲ. ಆದಕಾರಣ ಉತ್ತರರಾಮಾಯಣದ ರಾಮಾಶ್ವಮೇಧದ ಕಥಾಭಾಗವನ್ನು ಮಾತ್ರ ಪದ್ಮಪುರಾಣೋಕ್ತ ರೀತಿಯಿಂದ ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ವಾರ್ಧಿಕಷಟ್ಪದಿಯಲ್ಲಿ ಯಥಾಮತಿಯಾಗಿ ರಚಿಸಿರುವೆನು. ಗುಣೈಕಪಕ್ಷಪಾತಿಗಳು ಇದರಲ್ಲೇನಾದರೂ ದೋಷವಿದ್ದರೆ ಅದನ್ನು ಗಣನೆಗೆ ತಾರದೆ ಕ್ಷಮಿಸುವರೆಂದು ನಂಬುತ್ತೇನೆ. ಈ ಗ್ರಂಥವು ಸ್ತ್ರೀಯರಿಗೂ ಪಠನಯೋಗ್ಯವಾಗಿರಬೇಕೆಂಬ ಉದ್ದೇಶದಿಂದ ಕಾವ್ಯಲಕ್ಷಣಾನುಸಾರವಾಗಿ ಉಕ್ತವಾಗಿರುವ ಅಷ್ಟಾದಶವರ್ಣನೆಗಳೂ ಶೃಂಗಾರಾದಿ ನವರಸಗಳೂ ಸಂಗತವಾಗಿಯೂ ಗಂಭೀರವಾಗಿಯೂ ಇರುವುವು.

ಇದನ್ನು ಮೈಸೂರು ಗವರ್ನಮೆಂಟ್ ಕನ್ನಡ ಸ್ಕೂಲ್ ಹೆಡ್ಮಾಸ್ಟರ್ ಮಹಾರಾಜಶ್ರೀ ಬಿ. ಮಲ್ಲಪ್ಪನವರೂ ಆಸ್ಥಾನ ಪಂಡಿತರಾದ ವೇದಮೂರ್ತಿ ಚಾಮರಾಜನಗರದ ರಾಮಶಾಸ್ತ್ರಿಗಳೂ ಆಮೂಲಾಗ್ರವಾಗಿ ಶೋಧಿಸಿ ನೋಡಿ ಸಮ್ಮತಿಸಿರುವುದಕ್ಕಾಗಿ ಕೃತಜ್ಞನಾಗಿರುವೆನು.

ಕ್ರಿ ೧೯೦೧ ನೇ ಜನವರಿ.

ಸೋಸಲೆ, ಅಯ್ಯಾಶಾಸ್ತ್ರಿ.

ವಿಷಯಾನುಕ್ರಮಣಿಕೆ.

	ಪುಟ
ಮಂಗಳಾಚರಣೆ ..	೧
ಸುಜನಪ್ರಾರ್ಥನೆ ..	೩
ಕವಿಕುಲಾದಿವಿವರಣ ..	,,
ಕಾವ್ಯರಚನಾಕಾಲ ..	೪
ಕಥಾರಂಭ ..	೫
ರಾಮರಾಜ್ಯಭಾರಕ್ರಮ ..	,,
ರಾಮನಿಗೆ ವಸಿಷ್ಠರು ರಾಜನೀತಿಯನ್ನು ಬೋಧಿಸುವಿಕೆ	೭
ಸೀತಾದೇವಿಯ ಗರ್ಭೋದಯವರ್ಣನೆ ..	೧೫
ಗೂಢಚಾರರು ನಗರವೃತ್ತಾಂತವನ್ನು ತಿಳಿಯಲು ಹೊರಡುವಿಕೆ	೧೬
ರಾತ್ರಿಕಾಲಿಕಚಂದ್ರೋದಯಾದಿವರ್ಣನೆ ..	೧೭
ಪುರಜನರ ಸಮಾಚಾರಗಳು	೧೮
ನಾಯಿಕಾನಾಯಕರ ಅಕ್ಷದ್ಯೂತ	೨೧
ರಜಕನದುರುಕ್ತಿ ..	೨೨
ರಾಮನು ಸೀತಾಪರಿತ್ಯಾಗವನ್ನು ನಿಶ್ಚಯಿಸುವಿಕೆ ..	೨೪
ಲಕ್ಷ್ಮಣನು ಸೀತೆಯನ್ನು ಕಾಡಿಗೆ ಬಿಡಲು ಹೊರಡುವಿಕೆ	೨೯
ಅರಣ್ಯದಲ್ಲಿ ಸೀತಾಪ್ರಲಾಪ ..	೩೨
ಸೀತೆಯು ವಾಲ್ಮೀಕಿಮಹರ್ಷಿಗಳಾಶ್ರಮವನ್ನು ಸೇರುವಿಕೆ	೩೬
ಕುಶಲವರುತ್ಪತ್ತಿ ..	,,
ಅಯೋಧ್ಯೆಗೆ ಅಗಸ್ತ್ಯರಾಗಮನ	೩೮
ಶುಕಶಾಪವೃತ್ತಾಂತ ..	೪೦
ರಾಮನು ಬ್ರಹ್ಮಹತ್ಯಾಪರಿಹಾರಕ್ಕೆ ಅಗಸ್ತ್ಯರೊಡನೆ ಆಲೋಚಿಸುವಿಕೆ	೫೦
ಅಗಸ್ತ್ಯರು ರಾಮನಿಗೆ ಅಶ್ವಮೇಧವನ್ನು ಉಪದೇಶಿಸುವಿಕೆ	,,
ಅಶ್ವಮೇಧೋಪಕ್ರಮ ..	೫೬
ಅಶ್ವಮೇಧದ ಕುದುರೆಗೆ ಬಿರುದಿನ ಪಟ್ಟವನ್ನು ಕಟ್ಟುವುದು ..	೫೭
ಶತ್ರುಘ್ನನ ವಿಜಯಯಾತ್ರೆ	೬೦
ಪುಷ್ಕಲನ ವಿಜಯಯಾತ್ರೆ ..	೬೨
ರಾಮಲಕ್ಷ್ಮೀನಿಧಿಗಳ ಸರಸಪರಿಹಾಸ	೬೩
ಅಶ್ವಮೇಧದ ಕುದುರೆಯನ್ನು ದಿಗ್ವಿಜಯಾರ್ಥವಾಗಿ ಬಿಡುವುದು	,,
ಅಹಿಚ್ಛತ್ರಪುರವರ್ಣನೆ ..	೬೫
ಉಪವನವರ್ಣನೆ ..	೬೭
ಕಾಮಾಕ್ಷೀದೇವತಾಮಂದಿರವರ್ಣನೆ	೬೮
ಸುಮದರಾಜನ ತಪೋಭಂಗಕ್ಕೆ ಅಪ್ಸರಸ್ಸ್ತ್ರೀಯರೊಡನೆ ಮನ್ಮಥನು ಹೊರಡುವುದು ..	೬೯
ವಸಂತಾವಿರ್ಭಾವವರ್ಣನೆ ..	೭೦
ಅಪ್ಸರಸ್ಸ್ತ್ರೀಯರ ಶೃಂಗಾರವಿಲಾಸಗಳು ...	೭೧
ಸುಮದನ ಜಿತೇಂದ್ರಿಯತೆ	೭೩
ಮನ್ಮಥತಿರಸ್ಕಾರ ..	,,
ಕಾಮಾಕ್ಷಿಯು ಸುಮದನಿಗೆ ವರವನ್ನು ನೀಡುವುದು ..	೭೫
ಕುದುರೆಯು ಅಹಿಚ್ಛತ್ರವನ್ನು ಪ್ರವೇಶಿಸುವಿಕೆ ..	,,

ಸುಮದನು ಶತ್ರುಘ್ನಾದಿಗಳೊಡನೆ ಕುದುರೆಯನ್ನು ಉತ್ಸವದಿಂದ ರಾಜಧಾನಿಗೆಕರೆತರುವಿಕೆ ... ೭೬
ಚ್ಯವನಋಷ್ಯಾಶ್ರಮವರ್ಣನೆ ೭೮
ಸುಕನ್ಯೋಪಾಖ್ಯಾನ .. ೮೦
ಪತಿವ್ರತಾಧರ್ಮ .. ೮೨
ಸುಕನ್ಯಾಚ್ಯವನರ ದಿವ್ಯಸುಖಭೋಗ .. ೮೬
ಅಶ್ವಿನೀದೇವತೆಗಳಿಗೆ ಯಾಗದಲ್ಲಿ ಹವಿರ್ಭಾಗವುಂಟಾಗುವಿಕೆ .. ೮೮
ನೀಲಪರ್ವತವರ್ಣನೆ .. ೯೦
ಚತುರ್ಭುಜಶ್ರೀಹರಿಮೂರ್ತಿಯ ಮಹಿಮೆ .. ೯೧
ಕುದುರೆಯು ಚಕ್ರಪುರದಕಡೆಗೆ ತಿರುಗುವಿಕೆ . ,,
ದಮನನು ಕುದುರೆಯನ್ನು ತಡೆಯುವುದು .. ೯೨
ಯುದ್ಧೋಪಕ್ರಮ ... ೯೬
ಯುದ್ಧವರ್ಣನೆ .. ,,
ದಮನಪ್ರತಾಪಾಗ್ರ್ಯರಯುದ್ಧ ... ೯೮
ದಮನ ಪುಷ್ಕಲರಯುದ್ಧ .. ೧೦೫
ಸುಬಾಹುವಿನ ಕ್ರೌಂಚವ್ಯೂಹರಚನೆ .. ೧೦೯
ಸುಕೇತು ಲಕ್ಷ್ಮೀನಿಧಿಗಳಯುದ್ಧ ೧೧೧
ಪುಷ್ಕಲ ಚಿತ್ರಾಂಗರಯುದ್ಧ .. ೧೧೩
ಪುಷ್ಕಲನಿಂದ ಹತನಾದ ಚಿತ್ರಾಂಗನನ್ನು ನೋಡಿ ಸುಬಾಹುವು ಪ್ರಲಾಪಿಸುವುದು .. ೧೧೬
ಸುಬಾಹುವು ಆಂಜನೇಯನ ಪಾದತಾಡನೆಯಿಂದ ಮೂರ್ಛೆಯನ್ನು ಪಡೆಯುವಿಕೆ .. ೧೧೮
ಸುಬಾಹುವಿಗೆ ಮೂರ್ಛಾಂತನಿದ್ರಾವಸ್ಥೆಯಲ್ಲಿ ರಾಮದರ್ಶನವಾಗುವಿಕೆ ೧೧೯
ಸುಬಾಹುವು ಶತ್ರುಘ್ನನಿಗೆ ಶರಣಾಗತನಾಗುವುದು .. ೧೨೧
ತೇಜಃಪುರವರ್ಣನೆ .. ೧೨೩
ಋತಂಭರೋಪಾಖ್ಯಾನ .. ೧೨೪
ಗೋಸೇವಾಮಹಿಮೆ .. ೧೨೫
ಯಮಲೋಕವೃತ್ತಾಂತ ... ೧೨೬
ರಾಮಭಕ್ತನಾದ ಸತ್ಯವಂತನು ಶತ್ರುಘ್ನಾದಿಗಳನ್ನು ಪುರಸ್ಕರಿಸುವುದು ೧೩೦
ಸಮುದ್ರವರ್ಣನೆ .. ೧೩೨
ರಾಕ್ಷಸಮಾಯೆ .. ೧೩೪
ರಾಕ್ಷಸರು ಕುದುರೆಯನ್ನು ಅಪಹರಿಸುವುದು .. ೧೩೫
ರಾಕ್ಷಸರೊಡನೆ ಯುದ್ಧ .. ೧೩೭
ರಾಮಸೇನೆ ವಿದ್ಯುನ್ಮಗರವನ್ನು ಆಕ್ರಮಿಸುವುದು .. ,,
ವಿದ್ಯುನ್ಮಾಲಿಯು ಕಾಮಗವಿಮಾನವನ್ನೇರಿ ಯುದ್ಧಮಾಡುವುದು ೧೩೮ ,,
ಪುಷ್ಕಲವಿದ್ಯುನ್ಮಾಲಿಗಳ .. ೧೪೧
ಮತ್ತು ಉಗ್ರದಂಷ್ಟ್ರ ಲಕ್ಷ್ಮೀನಿಧಿಗಳ ಯುದ್ಧ .. ,,
ಶತ್ರುಘ್ನವಿದ್ಯುನ್ಮಾಲಿಗಳಯುದ್ಧ ೧೪೨
ವಿದ್ಯುನ್ಮಾಲಿಯ ಮತ್ತು ಉಗ್ರದಂಷ್ಟ್ರನಸಂಹಾರ .. ೧೪೩
ರಾಕ್ಷಸಿಯರು ಕುದುರೆಯನ್ನು ವಿದ್ಯುನ್ಮಾಲಿಯಸಂಪತ್ತಿನೊಡನೆ ಶತ್ರುಘ್ನನಿಗೆ ಸಮರ್ಪಿಸುವುದು ೧೪೪
ನರ್ಮದಾವರ್ಣನೆ .. ೧೪೫
ಆರಣ್ಯಕಮುನಿಗೆ ಲೋಮಶಮುನಿ ಹೇಳಿದ ರಾಮಮಹಿಮೆ .. ೧೪೮

ರಾಮಧ್ಯಾನಪ್ರಕಾರ .. ೧೪೯
ಪ್ರಾತಃಕಾಲವರ್ಣನೆ .. ೧೫೦
ಸೂರ್ಯೋಪಾಸನೆ .. ೧೫೨
ಸೂರ್ಯೋದಯವರ್ಣನೆ .. ೧೫೩
ಕುದುರೆಯು ಮಡುವಿನಲ್ಲಿ ಮುಳುಗುವಿಕೆ .. ,,
ಶತ್ರುಘ್ನಾದಿಗಳು ಮಡುವನ್ನು ಹೊಕ್ಕು ಸಿದ್ಧಯೋಗಿನಿಯನ್ನು ಕಾಣುವದು ೧೫೪
ಯೋಗಿನಿಯು ಆಂಜನೇಯನೆಳಸಿದಂತೆ ವರವನ್ನು ಕೊಟ್ಟು ಶತ್ರುಘ್ನನಿಗೆ ಸಿದ್ಧಮಹಾಸ್ತ್ರವನ್ನು ಕೊಡುವುದು ೧೫೬
ದೇವಪುರವರ್ಣನೆ .. ೧೫೭
ವೀರಮಣಿಪುತ್ರನಾದ ರುಕ್ಮಾಂಗದನು ತನ್ನ ರಾಣಿವಾಸದ ಸ್ತ್ರೀಯರೊಡನೆ ವನವಿಹಾರಕ್ಕೆ ಹೊರಡುವಿಕೆ .. ೧೫೯
ಉದ್ಯಾನವರ್ಣನೆ .. ,,
ನಾಯಿಕಾ ನಾಯಕರ ಸರಸಸಲ್ಲಾಪ .. ೧೬೦
ದೋಹಳ, ವೀಣಾಗಾನ ವಿನೋದಗಳು .. ೧೬೧
ಪುಷ್ಪಾಪಚಯ, ಡೋಲಾವಿಹಾರ, ಮಧುಪಾನಗಳು .. ೧೬೨
ರುಕ್ಮಾಂಗದನು ಕುದುರೆಯನ್ನು ತಡೆಯುವದು .. ೧೬೪
ಶಿವನು ವೀರಮಣಿಗೆ ಸಹಾಯನಾಗುವಿಕೆ .. ೧೬೬
ಯುದ್ಧಸನ್ನಾಹ .. ೧೬೭
ಪುಷ್ಕಲ ರುಕ್ಮಾಂಗದರ ಯುದ್ಧ .. ೧೬೯
ಸುಮದಬಲ ಮಿತ್ರಾದಿಗಳ ದ್ವಂದ್ವಯುದ್ಧ ೧೭೦
ಪುಷ್ಕಲ ವೀರಮಣಿಗಳ ಯುದ್ಧ ೧೭೧
ಆಂಜನೇಯ ರುಕ್ಮಾಂಗದರಯುದ್ಧ ೧೭೪
ಶಿವನು ಪ್ರಮಥಗಣದೊಡನೆ ಯುದ್ಧರಂಗಕ್ಕೆ ಬರುವುದು .. ೧೭೫
ಪ್ರಮಥರ ಯುದ್ಧ .. ೧೭೬
ಆಂಜನೇಯನು ದಿವ್ಯೌಷಧಿಗಳನ್ನು ತರಲು ದ್ರೋಣಪರ್ವತಕ್ಕೆ ಹೊರಡುವಿಕೆ ೧೭೭
ಶತ್ರುಘ್ನ ವೀರಭದ್ರರ ಯುದ್ಧ ,,
ದಿವ್ಯೌಷಧಿಯಿಂದ ಪುಷ್ಕಲಾದಿಗಳು ಚೇತನವನ್ನು ಪಡೆಯುವಿಕೆ .. ೧೭೮
ಶತ್ರುಘ್ನ ವೀರಮಣಿಗಳ ಯುದ್ಧ ೧೭೯
ರಾಮನೂ ಶಿವನೂ ಪ್ರತ್ಯಕ್ಷರಾಗುವುದು .. ೧೮೦
ಶಿವನು ತನ್ನ ಭಕ್ತನಾದ ವೀರಮಣಿಯನ್ನು ರಾಮನ ವಶ ಮಾಡುವುದು ೧೮೧
ವೀರಮಣಿ ಮಾಡಿದ ರಾಮಸ್ತುತಿ ೧೮೨
ಮಹಾರಣ್ಯವರ್ಣನೆ .. ೧೮೫
ಯಕ್ಷವನದಲ್ಲಿ ಅಶ್ವಸ್ತಂಭ ೧೮೮
ಶತ್ರುಘ್ನನಿಗೆ ಶೌನಕಾಶ್ರಮಪ್ರವೇಶ .. ,,

ಸಾತ್ವಿಕೋಪಾಖ್ಯಾನ .. ೧೮೯
ಸಾತ್ವಿಕನ ಜಲಕ್ರೀಡೆ .. ೧೯೦
ಅಶ್ವಸ್ತಂಭವಿಮೋಚನೆ .. ೧೯೧
ಸುರಥನು ಯಾಗಾಶ್ವವನ್ನು ತಡೆಯುವಂತೆ ಚಾರರಿಗೆ ನೇಮಿಸುವುದು .. ೧೯೨
ಯಮಧರ್ಮನು ಮುನಿವೇಷದಿಂದ ಕುಂಡಲಪುರಿಗೆ ಬರುವಿಕೆ ೧೯೩
ಕರ್ಮಪ್ರಸಂಗ .. ೧೯೪
ಯಮಧರ್ಮನು ಸುರಥನಿಗೆ ವರವನ್ನು ಕೊಡುವುದು .. ೧೯೫
ಅಂಗದನ ಸನ್ಧಿ .. ೧೯೬
ಸುರಥನ ಯುದ್ಧಸನ್ನಾಹ .. ೧೯೮
ಪುಷ್ಕಲಚಂಪಕಾದಿಗಳ ದ್ವಂದ್ವಯುದ್ಧ .. ೨೦೧
ಚಂಪಕನು ಪುಷ್ಕಲನನ್ನು ಸೆರೆಹಿಡಿಯುವುದು .. ೨೦೩
ಆಂಜನೇಯನು ಪುಷ್ಕಲನ ಸೆರೆಯನ್ನು ಬಿಡಿಸುವುದು ೨೦೪
ಸುರಥನೊಡನೆ ಆಂಜನೇಯಾದಿಗಳ ಯುದ್ಧ .. ೨೦೫
ಸುರಥನ ನವಕುಮಾರರಿಂದ ಲಕ್ಷ್ಮೀನಿಧಿ ಮೊದಲಾದ ನವವೀರರ ಪರಾಜಯ .. ೨೦೮
ಸುರಥನು ಶತ್ರುಘ್ನಾದಿಗಳನ್ನು ಸೆರೆಯಲ್ಲಿಡುವುದು .. ,,
ಆಂಜನೇಯನು ಮಾಡಿದ ರಾಮಸ್ತುತಿ .. ೨೦೯
ಶ್ರೀರಾಮನು ಪ್ರತ್ಯಕ್ಷನಾಗುವುದು ೨೧೦
ಸುರಥನು ರಾಮನಿಗೆ ಶರಣಾಗತನಾಗಿ ಶತ್ರುಘ್ನಾದಿಗಳನ್ನು ಸೆರೆಯಿಂದ ಬಿಡುವಿಕೆ .. ,,
ವಿಮಲನು ಉಪಮನ್ಯು ಮುನಿಯಲ್ಲಿ ವಿದ್ಯಾಭ್ಯಾಸಮಾಡುವುದು ೨೧೨
ಸುಲೋಚನೆಗೆ ವಿಮಲನಲ್ಲಿ ಅನುರಾಗೋದಯವಾಗುವುದು .. ೨೧೪
ಉಪಮನ್ಯುವು ಗುರುದಕ್ಷಿಣೆಗಾಗಿ ರಾಕ್ಷಸಸಂಹಾರವನ್ನು ವಿಮಲನಿಗೆ ನೇಮಿಸುವುದು .. ,,
ಸುಲೋಚನೆಯ ವಿರಹವೇದನೆ ೨೧೫
ಸುಲೋಚನಾ ಸ್ವಯಂವರಯತ್ನ ,,
ಪಟ್ಟಣದ ಶೃಂಗಾರ ಮತ್ತು ಸ್ವಯಂವರಮಂಟಪವರ್ಣನೆ .. ೨೧೬
ಸ್ವಯಂವರಮಂಟಪದಲ್ಲಿ ರಾಜಕುಮಾರರ ಶೃಂಗಾರಚೇಷ್ಟೆಗಳು ೨೧೮
ಸುಲೋಚನೆ ವಿಮಲನನ್ನು ವರಿಸುವುದು .. ೨೨೦
ಸುಲೋಚನಾವಿಮಲರ ವಿವಾಹಮಹೋತ್ಸವ .. ,,
ವಸಂತೋತ್ಸವ .. ೨೨೧
ಪತಿಗೃಹಕ್ಕೆ ತೆರಳುವ ಸುಲೋಚನೆಗೆ ತಂದೆತಾಯ್ಗಳು ಬುದ್ಧಿವಾದವನ್ನು ಹೇಳುವಿಕೆ .. ೨೨೨
ಶಿಶಿರಋತುವರ್ಣನೆ .. ೨೨೩
ವಿಮಲನು ರಾಕ್ಷಸರನ್ನು ಸಂಹರಿಸಿ ಗುರುಯಾಗರಕ್ಷಣೆಯನ್ನು ಮಾಡುವಿಕೆ .. ೨೨೩
ಧವಳಾಶ್ವನ ಅಶ್ವಮೇಧಯತ್ನ ೨೨೮
ವಿಮಲನು ರಾಮನ ಅಶ್ವಮೇಧಾಶ್ವವನ್ನು ತಡೆಯುವುದು .. ,,
ಶತ್ರುಘ್ನನು ರತ್ನಾನದೀತೀರದಲ್ಲಿ ಸೇನಾನಿವೇಶಮಾಡುವುದು .. ೨೨೯
ಸುಲೋಚನೆ ವಿಮಲನಿಗೆ ಅಸಿತಮುನಿ ವಚನವನ್ನು ತಿಳಿಸುವುದು ,,
ಕಾಶೀಸ್ಥಲಮಹಿಮೆ .. ೨೩೦
ಧವಳಾಶ್ವನು ಸದಾನಂದರಿಂದ ರಾಮಮಹಿಮೆಯನ್ನು ಕೇಳುವಿಕೆ ೨೩೧

ಸುಮತಿಯು ಸನ್ನಿಧಿಗೆ ತೆರಳುವಿಕೆ ೨೩೩

ಧವಳಾಶ್ವನು ಶತ್ರುಘ್ನನನ್ನು ಬಹುಮಾನದಿಂದ ಚಿತ್ರಧರೆಗೆ ಕರೆತರುವುದು .. ೨೩೪

ಗಂಗಾನದೀವರ್ಣನೆ .. ೨೩೫

ಮಧ್ಯಾಹ್ನವರ್ಣನೆ .. ೨೩೬

ಸೈನ್ಯದ ಜಲಖೇಲನ .. ೨೩೭

ಲವನು ಕುದುರೆಯನ್ನು ತಡೆದು ಭಟರ ತೋಳ್ಗಳನ್ನು ಕತ್ತರಿಸುವುದು ೨೩೯

ಲವಕಾಲಜಿತ್ತುಗಳ ಯುದ್ಧ ೨೪೧

ಲವಪುಷ್ಕಲರ ಯುದ್ಧ .. ೨೪೪

ಲವಾಂಜನೇಯರ ಯುದ್ಧ .. ೨೪೭

ಲವಶತ್ರುಘ್ನರ ಯುದ್ಧ .. ೨೪೮

ಶತ್ರುಘ್ನನು ಲವನನ್ನು ಸೆರೆ ಹಿಡಿಯುವುದು ... ೨೫೨

ಸನ್ಧ್ಯಾಕಾಲವರ್ಣನೆ .. ,,

ಋಷಿಪುತ್ರರಿಂದ ಲವನ ವೃತ್ತಾಂತವನ್ನು ಕೇಳಿ ಸೀತೆ ಪ್ರಲಾಪಿಸುವುದು .. ೨೫೩

ಕುಶನು ಯುದ್ಧಕ್ಕೆ ಹೊರಡುವುದು .. ೨೫೫

ಕುಶನು ಲವನನ್ನು ಸೆರೆಯಿಂದ ಬಿಡಿಸಿಕೊಂಡು ಬರುವುದು ೨೫೬

ಕುಶಶತ್ರುಘ್ನರ ವಾಗ್ವಾದ ೨೫೮

ಕುಶಶತ್ರುಘ್ನರ ಯುದ್ಧ ೨೫೯

ಕುಶಸುರಥರ ಯುದ್ಧ .. ೨೫೦

ಕುಶಾಂಜನೇಯರ ಯುದ್ಧ ೨೬೦

ಕುಶಸುಗ್ರೀವರ ಯುದ್ಧ .. ೨೬೧

ಲವಕುಶರು ಸುಗ್ರೀವಾಂಜನೇಯರನ್ನು ಸೆರೆ ಹಿಡಿದುಕೊಂಡು ಕುದುರೆಯೊಡನೆ ಆಶ್ರಮಕ್ಕೆ ಬರುವುದು ೨೬೨

ಸೀತೆಯ ಹರಕೆಯಿಂದ ರಾಮಸೈನ್ಯವುಜ್ಜೀವಿಸುವಿಕೆ .. ೨೬೫

ಶತ್ರುಘ್ನನು ಕುದುರೆಯೊಡನೆ ಅಯೋಧ್ಯೆಗೆ ಹೊರಡುವಿಕೆ .. ,,

ರಾಮನು ವಾಲ್ಮೀಕಿ ವಚನವನ್ನು ಕೇಳಿ ಕುಶಲವರೊಡನೆ ಸೀತೆಯನ್ನು ಕರೆತರಲು ಲಕ್ಷ್ಮಣನಿಗೆ ಆಜ್ಞಾಪಿಸುವುದು ೨೬೯

ಸೀತಾಲಕ್ಷ್ಮಣರ ಪ್ರಶ್ನೋತ್ತರಗಳು .. ೨೭೧

ಸೀತೆಯೂ ಕುಶಲವರೂ ಅಯೋಧ್ಯೆಗೆ ಬರುವಿಕೆ .. ೨೭೪

ಕುಶಲವರು ರಾಮಾಯಣವನ್ನು ಗಾನಮಾಡುವುದು ೨೭೬

ಶ್ರೀರಾಮನು ಸೀತೆಯನ್ನು ಪರಿಗ್ರಹಿಸುವಿಕೆ .. ೨೭೮

ರಾಮನು ಸಾಕ್ಷಾತ್ಸೀತೆಯೊಡನೆ ಸಾಂಗವಾಗಿ ಅಶ್ವಮೇಧವನ್ನು ನೆರವೇರಿಸುವಿಕೆ .. ೨೮೪

ಶೇಷರಾಮಾಯಣ ಪಠನ ಶ್ರವಣಫಲ. .. ೨೮೫

ಶ್ರೀ

ಶ್ರೀಷರಾಮಾಯಣಂ.

ಪೀಠಿಕಾಸಂಧಿ.

॥ ವಾರ್ಧಿಕಷಟ್ಪದಿ ॥

ಶ್ರೀಮಂತನಾವಗಂ ಶ್ರುತಿಮತ್ತಕಾಶಿನೀ |ಸೀಮಂತರತ್ನಾಯಮಾನಂ ಮಹಾಮಹಿಮ ॥ ಸೀಮಂತರಂಗಿತಕೃಪಾಪೂರಪರಿಪೂರ್ಣನಯನದ್ವಯಂ ಜಡರನು ॥ ಧೀಮಂತರಂಮಾಳ್ಪವಿದ್ಯಾಬ್ಧಿನವಪೂರ್ಣ | ಸೋಮಂತಮಿಸ್ರಾಯಮಾಣಾಂತರಾಯೋಗ್ರ | ಧಾಮಂತಪೋಧನಮನಸ್ಸದನನಿಭವದನನೆಮಗೀಗೆಶುಭತತಿಯನು ॥೧॥

ನಳನಳಿನಕರತಳದಿನೊತ್ತುತಿರೆಸಿರಿಪಾದ | ನಳಿನಮಂಪವಡಿಸಿಮಹಾಶೇಷಶಯನದೊ | ಳ್ಸೆಳೆಮಿಂಚಿನೊಡನೆರಜತಾಚಲವನಡರ್ದಕಾರ್ಮುಗಿಲಂತೆ ಶೋಭೆವಡೆದು ॥ ಲಲಿತನಾಭೀಕಮಲಗತಚತುರ್ಮುಖನಮಂ | ಗಳನುತಿಯನಾಲಿಸುತೆಮೊಗಸಿರಿಯಿನಿಂದುವಂ | ಪಳಯುತ್ತದೊಂದುನಿದ್ರಾಲೀಲೆಯಂ ತಳೆದಹರಿನಮಗೆಶುಭಮೀಯಲಿ ॥ ೨ ॥

ಆವನವಧೂತಕಾಮನುಮಖಿಲಕಾಮಗಳ | ನೀವನುಂಕ್ರತುಫಲದನುಂಕ್ರತುಧ್ವಂಸಿಯುಮ | ದಾಮವಂಮಿಥುನಸ್ವರೂಪನುಂತಾನೇಕಪುರುಷನೆಂದೆನಿಸಿರ್ಪನುಂ ॥ ಆವಂಮಹೇಶ್ವರನುಮಂತುಭಿಕ್ಷುಕನುಮಿ | ನ್ನಾವವಂ ಭವ್ಯಮೂರ್ತಿಯುಮಭವನುಂದೇವ | ದೇವನೆನಿಪಾಪರಶಿವಂನಮಗೆಸಕಲಕಾವ್ಯಂಗಳಂದಯೆಗೈಯಲಿ ॥೩॥

ಅಂತಪುರಮಾವಳ್ಗೆವನಮಾಲಿಕಾಲಂಕೃ | ತಂತೋಯಜಾಕ್ಷವಕ್ಷಸ್ಸ್ಥಳಂಸೌರಭ್ಯ | ದಿಂತೀವಿದಬ್ಜಾಕರಂಭ್ರಮರಿಕಾಗೀತಿಬಂಧುರಂಕೇಳೀವನಂ ॥

ಶಾಂತಮೆನಿಸಿರ್ಪಯಮಿಹೃದಯಮತಿವಿಮಲವಿ | ಶ್ರಾಂತಿಪದಮಾಲೋಕ
ಮಾತೆಲಕ್ಷ್ಮೀದೇವಿ | ಸಂತತಮುಮೆನ್ನೊಳ್ಸುಧಾವೃಷ್ಟಿಯಂತಿಹಕಟಾಕ್ಷ
ವೃಷ್ಟಿಯಕರೆಯಲಿ ‖ ೪ ‖

ಭ್ರೂಭಂಗಮಾತ್ರದಿಂದಾವಳಸರೋಜಭವ | ನೀಭುವನಚಕ್ರಮಂ
ಸೃಜಿಸುವಂಪಾಥೋಜ | ನಾಭನೊಲಿದೋವುವಂಕಾಲರುದ್ರಂಬಳಿಕಪ್ರೋದ್ದಿಪ
ನರ್ದನವನು ‖ ಆಭೂಧರಾಧಿಪತಿಬಾಲೆನತಪರಿಪಾಲೆ | ಸೌಭಾಗ್ಯಶಾಲಿನಿಕೃ
ಪಾಘುನಿಜಪಾಕುಸುಮ | ಶೋಭಾಪರೀಭಾವಚಣಕಾಯೆಮನಿಗೇಯೆನಿಪ
ಜಾಯೆಶುಭಮೀಯಲಿ ‖ ೫ ‖

ವಾಣಿವೀಣಾಪ್ರಸ್ತಕೋಲ್ಲಸಿತಪಾಣಿಫಣಿ | ವೇಣಿನಿಜಚರಣಾಂಬುರು
ಹವಿನತಸಕಲಗೀ | ರ್ವಾಣಿಕಾರುಣ್ಯರಸನಿರ್ಝರಿಣಿಕಲ್ಯಾಣಿ ಸರಸಿಜೋದ್ಭವ
ನರಾಣಿ ‖ ಮಾಣದೆನ್ನಯಮುಖದೆನೆಲಸಿನೀಂಸುರಸರಿ | ದ್ವೇಣಿಯಂತಿರೆ
ನಿರರ್ಗಳನಿರ್ಮಲಸ್ವಾದು | ವಾಣಿಯೆನ್ನಯಜಿಹ್ವೆಯಿಂಸೂಸುವಂತನುಗ್ರಹಿ
ಸಂಬೆಪೇಳಿಕೊಂಬೆ ‖ ೬ ‖

ತನಗೆಶಕ್ಯಂಮನೋಭವಜಯಂಶಾಸ್ತ್ರಲೋ | ಚನದಿಂದಮೋಮೂ
ರನೆಯಕಣ್ಣಿನೆಂಪ್ರಯೋ | ಜನಮೆಂಬುಬಗೆದುಳಿದದಂಜಗದ್ಗುರುವೆನಿಸಿನೆಲ
ದೊಳವತಾರಗೈದು ‖ ಘನಮಹಿಮಶಂಕರಾಚಾರ್ಯರೆಂದೆಂಬಪೆಸ | ರನುಗೊಂ
ಡುಷಣ್ಮತಸ್ಥಾಪನವನೆಸಗಿಸ | ದ್ವಿನುತಮಾವದ್ವೈತಸಿದ್ಧಾಂತಮಂಗೈದಶಂಕ
ರಂಗಾಂನಮಿಪೆನು ‖ ೭ ‖

ಆದಿಕವಿಯಾದವಾಲ್ಮೀಕಿಮುನಿಮುಖ್ಯಂಗ | ವೈದನೆಯವೇದವೆಂದೆ
ನಿಪಭಾರತವನ | ಷ್ಟಾದಶಪುರಾಣಂಗಳೊಡನೆವಿರಚಿಸಿದವೇದವ್ಯಾಸಪರಮ
ರ್ಷಿಗಂ ‖ ಸಾದರದೊಳೆರಗಿವರವೇಂಕಟಾಚಲವಾಸಿ | ಯಾದಪದ್ಮಾವತೀಪ್ರಿ
ಯವೇಂಕಟೇಶ್ವರನ | ಪಾದಪಂಕೇಜಮಂನೆನೆಯುತಾಂಪೇಳ್ವನೀಕೃತಿಯನಾ
ಲಿಪುದೆಲ್ಲರೂ ‖ ೮ ‖

ಪರಿಪಕ್ವಫಲಗಳಂಪುದಿದಿರ್ಪಬಂದವಾ | ಮರಗಳೆಸಿತಿರ್ದೊಡಂಬನಗೆ
ಬೇವಿನಪಣ್ಣ | ನರಸಿಕೊಂಡೈದುವಂತಿರೆಕಾಗೆಸತ್ಕಾವ್ಯಮಂನೋಡುತದರೊ

ಳೆನಿತು ॥ ಸರಸಗುಣಪದಪದಾರ್ಥಂಗಳದೋಡಮುಮಂ । ನಿರುಕಿಸದವಜ್ಞೆಯಿಂದೋಷವನೆಕಣ್ಣಿಟ್ಟು । ಪಿರಿದಕ್ಕರಿಂದರಸುವಕ್ಕಜದನೆಲೆಯಮಾಡದುರ್ಜನರವಾತದಿರಲಿ ॥ ೯ ॥

ಪೂವಿನೊಳಧ್ಧ್ಯಯಂತೊರೆದುಮಕರಂದವನೆ । ಸೇವಿಪಂತಿರೆತುಂಬಿ ಬೆರೆದನೀರಂತೊರೆದು । ಕೇವಲಕ್ಷೀರವನೆಕೊಂಬಂತೆಪೋಲಂಚೆಪಾರದಂಕಸವನುಳಿದು ॥ ಸೌವರ್ಣರಜವನೇಪಿಡಿವಂತೆದೋಷಮಂ । ಭಾವಿಸದೆಸರಸಹೃದಯರ್ಕಳೆಂದೆನಿಸಿರ್ಪ । ಕೋವಿದರ್ಗುಣವನೇನೆರೆಕೊಂಡುಕೇಳ್ವುದೀರಾಮಾಶ್ವಮೇಧಕಥೆಯಾ ॥ ೧೦ ॥

ಧರೆಯೊಳಗೆರಾಮಕಥೆಯೆಂಬಮೃತರಸದ ಪೇ । ರ್ದೊರೆವೊದಲೊಳುರೆಪಲಬರೆಸಗಿರ್ಪಪಲತೆರದ । ಪರಿಕಾಲ್ಗಳಿಂದಿಟ್ಟಳಂಗೊಂಡುನೆರವಿಲ್ಲದುದರಿಂದೆನಾಂಕೊನೆಯೊಳು ॥ ಪಿರಿದೆನಿಪರಾಮಚಂದಿರನನುಗ್ರಹದಿಂದೆ । ವಿರಚಿಪೆಂ ನವರಸೋದಯಮೆನಿಪ ಪೊಸತೊಂದು । ಪರಿಕಾಲನೆಲ್ಲರುಂತಂತಮ್ಮಬಗೆಗೊಪ್ಪಿದಂದದಿಂಕೊಳ್ವುದಿದನು ॥ ೧೧ ॥

ಸಾರನವರಸಮೆಂಬಬಂಡಿನಿಂತೀವಿಸದು । ದಾರಸ್ಫುರದ್ವ್ಯಂಗ್ಯಮೆಂಬನರುಗಂಪೊದವಿ । ಚಾರುತರಷಟ್ಪದಿಗಳೆಂಬ ಲತೆಗಳೊಳೆಸೆವ ಶಬ್ದಾರ್ಥಸುಮಗಳಿಂದೆ ॥ ಭೂರಿಶೋಭೆಯನಾಂತು ಬುಧಷಟ್ಪದವ್ರಜಕೆ । ಪೇರಳ್ತಿಯಂಜನಿಸುವೀಕಾವ್ಯಮೆಂಬಬನ । ಮಾರಾಮಮಾರಾಮನಭಿರಾಮನಾಮಕೀರ್ತನಫಲವನೀಯದಿರದು ॥ ೧೨ ॥

ವರಕಾಶ್ಯಪಾನ್ವಯಪಯೋರಾಶಿಪೀಯೂಷ। ಕರನೆನಿಸಿ ಶಬ್ದಶಾಸ್ತ್ರನ್ಯಾಯಸಾಹಿತ್ಯ । ನಿರುಪಮಾಲಂಕಾರ ಶಾಸ್ತ್ರಂಗಳೊಳಗಸದೃಶ ಜ್ಞಾನವೈಭವವನು ॥ ದೊರೆಕೊಂಡುಸರಸಕವಿತಾವಧೂಟೀಸ್ವಯಂ । ವರಕಾಂತನೆನಿಸಿ ಬುಧಕುಲಮೌಳಿಮಣಿಯೆಂದು । ಧರಣಿಯೊಳ್ಪಡಿಯಿಲ್ಲದಿಹನೆಗಳ್ತೆಯನಾಂತಗರಪುರೀಶ್ವರಶಾಸ್ತ್ರಿಯಾ ॥ ೧೩ ॥

ತನುಜನತಿಧರ್ಮ್ಮದಿಂದೊರೆವೆತ್ತ ಕರ್ಣಾಟ । ಜನಪದವನಾಳುತಿರ್ದಾಚಾಮರಾಜನುಂ । ವಿನುತಗುಣನಿಕುರುಂಬೆಯುಹ ಕೆಂಪನಂಜಾಂಬೆಯುಂ

ಸುಕೃತದಿಂದೆಪಡೆದ ॥ ಘನವಿಭವಮಹಿಶೂರಪುರಸಿಂಹಪೀಠಮಂ । ಡನೆನಪ್ಪ ಕೃಷ್ಣರಾಜಪ್ರಭುಗುಪಾಧ್ಯಾಯ । ನನುಪಮತದಾಸ್ಥಾನ ವಿದ್ವಾಂಸನು ಭಯಕವಿತಾಭಿಜ್ಞನಯ್ಯಾಶಾಸ್ತ್ರಿ ॥ ೧೪ ॥

ವಿರಚಿಸಿದನೀಶೇಷರಾಮಾಯಣವ ನಿಂತು । ಪರತರಪುರಾವೃತ್ತರೂಪ ದಿಂಜಗದೊಳಗೆ । ಪೆರನೊರ್ವನಂಕಾಣದಿಂತಪ್ಪ ಗುಣಶಾಲಿ ಸತ್ಕಥಾನಾಯಕ ನನು ॥ ದುರಿತವನದಾರುಣಕುಠಾರ ನಿಜನಾಮಸಂ । ಸ್ಮರಣನಪರಾತ್ಪರನ ರಾಮನಮಹಾತ್ಮತೆಗೆ । ಪಿರಿದೊಲ್ದುಗುಣನೇತ್ರವಸುಚಂದ್ರಮಿತಶಾಲಿವಾಹ ಶಕವತ್ಸರದೊಳು ॥ ೧೫ ॥

ಆದಿಶೇಷಂಮಹತ್ತತ್ವಾದಿ ಸೃಷ್ಟಿಯುಂ । ಮೇದಿನೀಗೋಳದಖಗೋಳದಾಭೋಗಮುಂ । ದ್ವಾದಶಾತ್ಮಾನ್ವಯ ಪ್ರಥಮರಾಜರ ಪರಂಪರೆಯುಮಂ ತುಸಿರ್ದಬಳಿಕ ॥ ಭೂದೇವಕುಲ ಸಮುತ್ಪನ್ನ ದಶಕಂಠ ಹ । ತ್ಯಾದೋಷಪರಿಹಾರಕಾ ರಾಮಚಂದ್ರನುಂ । ಗೈದಶ್ವಮೇಧಮುಂ ಮಾತ್ಸ್ಯಾಯುನಂಗಿಂ ತುಪೇಳ್ವನಾಯತಮೆನಲ್ಕೆ ॥ ೧೬ ॥

ಇಂತು ಮೊದಲನೆಯ ಪೀಠಿಕಾ ಸನ್ಧಿ ಸಂಪೂರ್ಣವಾದುದು.

೨ನೆಯ ಸಂಧಿ.

ಸೂಚನೆ ॥ ಧರಣಿಪತಿಮೌಳಿಮಣಿ ದಾಶರಥಿ ಧರ್ಮೈಕ ನಿರತನಾಗೊಲವಿಂದೆ ರಾಜ್ಯಭಾರಂಗೈಯೆ ತಿರೆಗುರುವಸಿಷ್ಠನಾತಂಗಖಿಳರಾಜಧರ್ಮಂಗಳಂ ಬೋಧಿಸಿದನು ॥

ಶ್ರೀರಾಘವಂ ಘೋರರಾವಣಾಸುರನ ಸಂಹಾರಮಂ ಮಾಡಿ ಜಾನಕಿಯನೊಡಗೊಂಡು ಲಂಕಾರಾಜಧಾನಿಯಿಂ ಪೊರಮಟ್ಟು ಸಕಲಪರಿವಾರಜನ ಸಹಿತನಾಗಿ ॥ ಭೂರಿವೈಭವದಿಂದಯೋಧ್ಯಾಪುರಂಬೊಕ್ಕು ಪೌರರೆಲ್ಲರುಮಿಂತು ಸಲಹಿದವರಿಲ್ಲೆಂದು ಕೊಂಡಾಡುತಿರೆ ಸಲಹುತಿರ್ದಂ ಧರ್ಮದಿಂ ಧರೆಯನು ॥ ೧ ॥

ದಿನನಾಥನಂ ತ್ರಿಕಾಲಂಗಳನು ಸರಿಸುವಂ ತನುಜಾತರಾದ ಲಕ್ಷ್ಮಣಭರತಶತ್ರುಘ್ನರನು ಸರಿಸಿಕೊಂಡಿರ್ದಗ್ರಭವ ರಾಮಚಂದ್ರಮನನಾಮಹಿತಾತ್ಮನು ॥ ಅನುಜರಂ ಭಾವಿಸುತೆ ಭೇದಮಂ ಮಾಡದೆ ಸ್ವಮನದೆ ಧರ್ಮಾರ್ಥಕಾಮಂಗಳಂ ನೀತಿವಿದನನುವರ್ತಿಸಂತೇಕರೀತಿಯಿಂ ರಾಜ್ಯಸುಖಮಂ ಭೋಗಿಸುತ್ತಿರ್ದನು ॥ ೨ ॥

ಉದಯಿಸಿದ ಜೊನ್ನದಲನಂ ಜೊನ್ನವಕ್ಕಿಗಳ್ ಮುದದಲಕಾರಿನವಮುಗಿಲವೊರಗಳ್ ನೀರ ಸರಂ ಪದುಮಗಳ್ ಪ್ರೀತಿ ನಲಿವಂದದಿಂದಾನಾಡೊಳಿರ್ಪ ಸಕಲಪ್ರಜೆಗಳು ॥ ಪದಪಿಂದೆ ಸರ್ವಲೋಕಾನಂದ ಜನಕನಂ ವಿದಳಿತೋತ್ಪಲನೀಲ ಕೋಮಲಾಕಾರನಂ ಸಮುದಾರತೇಜೋಭಿರಾಮನಂ ರಾಮನಂ ನೋಡಿ ನಲಿಯುತ್ತಿರ್ದರು ॥ ೩ ॥

ಆನಾಡೊಳಂಗನೆಯರೆಲ್ಲರುಂ ಸುಂದರಿಯರೇನೆಂಬೆನತಿಶುದ್ಧಚರಿತೆಯರ್ನೀತಿಪರ ಧಾನವಿದ್ಯಾಬೋಧೆಯಿಂದೈದೆ ಜಾಣೆಯರು ಸೌಶೀಲ್ಯಶಾಲಿನಿಯರು ॥ ಮಾನಿತಪತಿವ್ರತಾಧರ್ಮಜನಿಭೂಮಿಯರ್ ಮಾನಿನಿಯರತಿಥಿಗುರು

ದೇವತಾಭಕ್ತಿಯುತ । ಮಾನಸೆಯರೆನಿಸಿರ್ದರಿಂತಪ್ಪವರೆ ಲೋಕಸುಸ್ಥಿತಿಗೆ
ಕಾರಣರಲಾ ॥ ೪ ॥

ಪುರುಷರ್ಕಳೆಲ್ಲರುಂ ಸತ್ಯಶೌಚಾಚಾರ । ಪರರಾಗಿ ತಂತಮ್ಮಕುಲವ
ರ್ಣಧರ್ಮಗಳ । ಸರಣಿಯುಂಮೀರದೆಳ್ಳನಿತಾದೊಡಂ ಲೋಕಮರ್ಯಾದೆಯುಂ
ತಪ್ಪದೆ ॥ ನಿರವದ್ಯವಿದ್ಯಾವಿನೋದದಿಂ ಸುಖಿಸುತ್ತೆ । ಪರಹಿಂಸೆಯಿಲ್ಲದಾವಗ
ಮುಂಪರೋಪಕೃತಿ । ಪರರೆನಿಸಿಸನ್ಮಾರ್ಗಮಂಬಿಡದೆ ಸದ್ವೃತ್ತಿಯಿಂದಿರ್ದ
ರಾನಾಡೊಳು ॥ ೫ ॥

ಮರಗಿಡುಗಳೊಳೆಕಂಟಕಂಜೂಜುಗಾರರೊಳೆ । ಪರಿದೇವನಂತೊರೆಗ
ಳೊಳೆ ಕುಟಿಲಗತಿಯೆಂಬು । ದಿರುಳೊಳೆ ತಮೋಯೋಗಮೆಲರೊಳಂ ನೀ
ರೊಳಂಜಾಡ್ಯಮೊಳ್ಪನ್ನಗಳೊಳೆ ॥ ನಿರುಕಿಸಲ್ವೇಧಬಿಲ್ಗಳೊಳೆ ಗುಣವಿಶ್ಲೇ
ಷ । ಮುರೆಸೊಕ್ಕಿದಾನೆಯೊಳೆದಾನವಿಚ್ಯುತಿನಾರಿ । ಯರೊಳಂತುವಿಭ್ರಮಂ
ಕಾಣಿಸಿದುವಾನಾಡೊಳನ್ನೆಲ್ಲುಮಿರಲಿಲ್ಲವು ॥ ೬ ॥

ಗಂಡಂದಿರಳವನೇಕಾಣರಾ ನಾಡೊಳಗೆ । ಪೆಂಡಿರರಿಯರ್ಮಕ್ಕಳಳಿವನೇ
ಪಡೆವವ । ರ್ಕಂಡರಿಯರೀತಿಬಾಧೆಯುಮಂತು ಚೋರಬಾಧೆಯುಮೆಲ್ಲರುಂಪ್ರಜೆ
ಗಳೂ ॥ ಮಂಡಲಾಧೀಶನಾಗಿರೆ ರಾಮನನಿಮಿತ್ತ । ದಂಡಭಯಮುಮಣಮಾ
ರ್ಗಮಿರಲಿಲ್ಲ ಶತ್ರುಗ । ಳ್ದಂಡೆತ್ತಿಬರ್ಪರೆಂದೆಂಬ ಭಯಮಿಲ್ಲವಾಧಿವ್ಯಾಧಿಭಯ
ವಿಲ್ಲವು ॥ ೭ ॥

ಧರ್ಮಮಯರಾದಖಿಲವರ್ಣದ ಜನಂಗಳಂ । ನಿರ್ಮಮತೆಯಿಂತಪೋನಿ
ಷ್ಠರಸಮುನಿಗಳಂ । ಕರ್ಮಠತೆವೆತ್ತನಿಗಮಾಗಮಪ್ರವಣ ಭೂದೇವರ್ಕಳಂದೆ
ಲ್ಲಿಯೂ ॥ ನಿರ್ಮಲಸ್ವಾದುಜಲಮಯ ಜಲಾಶಯಗಳಂ । ಧರ್ಮಮಯಮಾದ
ಸಂಖ್ಯಾತಭವನಂಗಳಂ । ದಿರ್ಮಡಿಯಫಲಮಾಂತ ಸಸ್ಯಂಗಳಿಂದಾಗಳಾನಾಡ
ದೇಂಮೆರೆದುದೋ ॥ ೮ ॥

ಕ್ಷಿತಿಸುತಾಲೋಚನಚಕೋರಕಾಸೇಚನಕ । ನತಿಮಾತ್ರನಿರ್ಮಲ
ಯಶಶ್ಚಂದ್ರಿಕಾಭಿಶೋ । ಭಿತನಪಾಕೃತತಮೋವೃತ್ತಿಕಮಲಾಂಕಪದನಾ
ರೂಢಸನ್ಮಾರ್ಗನು ॥ ನುತನರಸ್ಮಿತಸುರುಚಿರಂಜಿತ ನಿಶಾಚರಂ । ವಿತತಸಾ

ಗರಜನನಸಮುಭಿಶ್ರುತಂಬುಧಾ | ಶ್ರಿತನಂತುಸುಧಿಯೆನಿಪ ರಾಮಚಂದ್ರಂ ಕುವಲಯಾನಂದಕರನೆನಿಸನೇ || ೯ ||

ಆವನಂನೆನೆದೊಡಳವುದೆ ಪಾಪಸಂಕುಲಮು | ದಾವನುದರದೊಳು ಹುದೊವಿಶ್ವಂಡಕೋಟಿಮು | ತ್ತಾವನಂನಿಗಮಗಳುಪಾಧಿರ್ಭೇದದೆಸುಗುಣನೆಂದಗುಣನೆಂದೋರೆವುವೊ || ಆವಿಶ್ವರೂಪನೇ ರಾಮನೆಂದೆಂಬ ಭಿ | ಖ್ಯಾವಿಶೇಷವನಾಂತು ಮಾನುಷವಿಲಾಸದಿಂ | ದೋವುತಿರೆಸದ್ಧರ್ಮದಿಂದವನಿಯಂ ಭೂಮಿದೇವಿಯಾಸುಕೃತಮೆನಿತೋ || ೧೦ ||

ನಳನಸಮವಂಶಮಣಿಯಿಂ ತನುಜರಿಂದೆಯುಂ | ತಿಳಿದರೆಂದೆನಿಸಿದಮುನಿಶ್ರೇಷ್ಠರಿಂದೆಯುಂ| ಕುಲಪರಂಪರೆಯಿಂದೆಬಂದ ಸನ್ಮಂತ್ರಿಜನರಿಂದೆಯುಂ ಸಹಿತನಾಗಿ || ಪೊಳೆವಮಣಿಪೀಠದೊಳ್ಮಂಡಿಸಿ ಮಹಾಸ್ಥಾನ | ದೊಳಗೆ ರಾಜ್ಯಂಗೈಯುತೊಂದಿನಂ ಸಂತಸಂ | ದಳೆದು ಗುರುವಾದರಂಧತಿಯಾಣ್ಮನಂ ನೋಡಿ ಬೆಸಗೊಂಡನೀತೆರದೊಳು || ೧೧ ||

ಗುರುಗಳರಪಟ್ಟಾಭಿಷಿಕ್ತನಾಗೀ ರಾಜ್ಯ | ಧುರವನಖಿಲಪ್ರಜಾಕಾಂಕ್ಷೆಯಿಂಕಯ್ಕೊಂಡು | ಪರಮಹರ್ಷದೊಳಂತು ತಳೆದಿರ್ಪೆನಾದೊಡಾನೆಂತಾಳವೇಳ್ಕುಮಿದನು || ಹಿರಿಯರೆನಿಸಿರ್ಪನೀವದನೆನಗನುಗ್ರಹದೊ | ಳರುಹುವುದೆನಲ್ವಿನಯಭಾರದಿಂ ತಲೆವಾಗಿ | ವರಮುನಿಮಹಾರಾಜಕೇಳಾಪ್ರಜಧರ್ಮಮಂಪೇಳ್ವೆನೆಂದಿಂತೆಂದನು || ೧೨ ||

ಅರಸರ್ಗೆಮೊದಲಿರಲ್ವೇಳ್ಕುಂನಯಜ್ಞಾನ | ಮಿರದಿರ್ದೊಡದು ತಿಳಿಯಲಾರರೇನೊಂದುಮಂ | ಕುರುಡರಂತಿರೆ ನೀತಿವಿದರೆನಿಸಿದರಸರ್ಗೆ ದಿನದಿನಕ್ಕಭಿವೃದ್ಧಿಯು || ಪರರದಾರಂಪ್ರೇರಿಸದೆ ಬಯಸುವರ್ನೀತಿ | ಸರಣಿವಿಡಿದಿರ್ಪರಸಗೊಳ್ಳತಂಪ್ರಜೆಗಳೆ | ಲ್ಲರುಮಂತು ನೀತಿಜ್ಞನಾದರಸನಾರಾಜ್ಯಮಚಲಮಾಗಿಹುದಿಳೆಯೊಳು || ೧೩ ||

ಉಳಿದುನೀತಿಯನರಸು ದುರ್ಮಾರ್ಗದೊಳ್ಬೀಳೆ | ಖಳರೇಳ್ಗೆಯಾಗುವುದಮಾತ್ಯರುಂ ಪ್ರಜೆಗಳುಂ | ದಳಪತಿಗಳುಂ ಭಿನ್ನರಾಗರಸನಂ ತುಳಿದುಬಿಡುವರಾ ರಾಜ್ಯದೊಳಗೆ || ಅಳವುದಾಧರ್ಮಮರ್ಯಾದೆಯೆಂಬುದು ಸುಜನ |

ಕುಲಕೆಕೇಡೆಹುದರಿಗಳಂತಪ್ಪ ರಂಧ್ರವನೆ । ತಿಳದುಬಲುಹಿಂದಾಕ್ರಮಿಸುವ ರಾರಾಜ್ಯವಂಕೇಳ್ಕೆ ಮಹಾರಾಜನೆ ॥ ೧೪ ॥

ರಾಜನೇ ಕಾಲಕ್ಕೆ ಕಾರಣನೆನುತ್ತೊರೆವ । ರೈಜಗದೊಳರಿದರಾದುದರಿಂದೆ ರಾಜಾಧ । ರಾಜಕೇಳಾವಾವಕಾಲದೊಳಗೆಂತೆಂತುನಡೆಯುವೇಳ್ಕ್ಕೆ ಮೊಜನಗಳುಂ ॥ ಸಾಜದಿಂದಂತೆಂತು ವಿಧಿನಿಷೇಧಂಗಳಂ । ರಾಜನೆಂದೆನಿಸಿಕೊಂಡಿರ್ಪ ವಂನೇಮಿಪ್ಪುದು । ಭಾಜನಂತಾನಕ್ಕುಮಪಕೀರ್ತಿಗೆಂತಿಲ್ಲದಿದ್ದೊಡಾ ಧರಣೀಶನು ॥ ೧೫ ॥

ವಸುಮತ್ಕುಲೇಂದ್ರಕೇಳ್ತ್ರೈಗುಣ್ಯಭೇದದಿಂ । ವಸುಧೆಯೊಳ್ಸಾತ್ವಿಕಂರಾಜಸಂಮತ್ತೆ ತಾ । ಮಸನೆಂದು ನೃಪತಿಗಳ್ತ್ರಿವಿಧರೈದುರ್ಜನದ್ವೇಷಿಸಜ್ಜನಪಾಲನು ॥ ರಸಿಕಂಸ್ವಧರ್ಮನಿರತಂದಾತೃಶಾಂತಮಾ । ನಸನಧಿಕಶೌರ್ಯಂಯಶಸ್ವಿಸದ್ವಿಷಯಲಾ । ಲಸನಂತುಗುರುದೇವತಾತಿಥಿಪ್ರಿಯನುಮೆನಿಸಿದನೆ ಸಾತ್ವಿಕರಾಜನು ॥ ೧೬ ॥

ಧನಯೌವನಾದಿಮದಮತ್ತಂ ದುರಾಚಾರ । ನನವರತದುರ್ವಿಷಯಲಂಪಟಂಕಪಟಿಸ । ಸಜ್ಜನಶತ್ರುದುರ್ಜನಪ್ರಿಯನಲಂಕಾರಲೋಲಂದ್ಯೂತಕೇಳೀರತನು ॥ ಮನದೊಳಂನುಡಿಯೊಳಂ ಕ್ರಿಯೆಯೊಳಂಬೇರೆಬೇ । ರೆನಿಸಿದುಜ್ಜುಗವುಳ್ಳನಂಪಂಡಿತಂಮಾನಿ । ವಿನಯಹೀನಂಡಾಂಭಿಕಂ ನಾಣಿಲಿಯುಮೆನಿಸಿದನೆ ರಾಜಸಂನೃಪತಿಯು ॥ ೧೭ ॥

ಲೋಲನಾರೀಗಣೆಯೊಳಂ ನಿದ್ರೆಯೊಳಮಂತು । ಲಾಲಸಂಕಾಮಿನೀಕೂಟದೊಳಗಾವಗಮು । ಮಾಲಸ್ಯಮುಳ್ಳವಂ ರಾಜಕಾರ್ಯಂಗಳೊಳ್ಮೂಢಸಂಸರ್ಗಪರನು ॥ ಸ್ಥೂಲಮತಿಮೃಗಯಾವಿನೋದೈಕರುಚಿಕೋಪ । ಶೀಲಂಸದಾಚಾರಪಥವಿಮುಖನಜ್ಞಾನ । ದಾಲಯನಸದ್ಭಾಷಣಂದುಶ್ಚರಿತನುಮೆನಿಸಿವನೆತಾಮಸರಾಜನು ॥ ೧೮ ॥

ಸಕಲಪ್ರಜಾನುರಾಗಕೆ ಪಾತ್ರನಾಗಿ ಸಾ । ತ್ವಿಕನಿವರೊಳರಿಗಳಂಮೆಟ್ಟನಿಜರಾಜ್ಯಮಂ । ಸುಕೃತಿಯೆಂದೆನಿಸಿಕೊಂಡಾಳ್ವ ಸ್ವೈರಾಜಸಂನಿಜಸುಖಾಪೇಕ್ಷೆಯಿಂದೆ ॥ ಪ್ರಕೃತಿಗಳ್ಗಹಿತನಾಗರಿಪರೀಭಾವಮಂ । ಸಕಳಂಕನಾಗಿಶಂ

ಕಿಸುತಾಳ್ವನನಿಯಮಂ । ನಿಕೃತನಾಗೆಲ್ಲರಿಂ ತಾನುಸಂರಾಜ್ಯಮಂಕಳೆದುಕೊ ಳ್ವಂಬೇಗನೆ ॥ ೧೯ ॥

ಶಿರವರಸುಕಣ್ಮಂತ್ರಿಮೊಗವಂತುಬೊಕ್ಕಸಂ । ಕರಮಣಿಸೆಕೋಂಟೆ ಕಿವಿಮಿತ್ರಂಮನಂಸೇನೆ । ಚರಣಮಾರಾಷ್ಟ್ರಮೆಂದಿಂತುಸಪ್ತಾಂಗಂಗಳಿಂ ಸೇರ್ದರಾಜ್ಯಮೊಡಲು ॥ ನಿರುತಂಪ್ರಜಾರಾಗಸತ್ಯಧರ್ಮಾಚರಣ । ಪರಿಪೋಷಮಂಪಡೆಯುತಿರ್ದೊಡಮ ಕುಶಲದಿಂ । ಮೆರೆವುದೈ ಬಹುಕಾಲಮರಿಗಳೆಂ ದೆಂಬರೋಗಂಗಳುಪಟಲಮಿಲ್ಲದೆ ॥೨೦॥

ವಿಧುಮುಖಿಯುರುಪಭೋಗದೊಳಗಂತುಬೇಂಟೆಯೊಳ । ಗಧಿಕಲಂ ಪಟುನಾಗದಿರವೇಳ್ಕುಮಿಲ್ಲದಿರಲಧಿಕೃತಿಯೊಳಲಸುತಲೆದೋರುವುದು ಮತ್ತೆ ಹಗುರಪ್ಪುದೈಜನಜನದೊಳು ॥ ಸುಧಿಯೆಕೇಳ್ಳೈರಾಮಚಂದ್ರಮನೆಭೂತಲ । ಕಧಿಪನೆನಿಸಿರ್ಪವಂಜೂಜಿನಾಟವನಂತು । ಮಧುಪಾನಮಂಬಿಡುವುದಿಲ್ಲದಿರೆ ಧಿಟಮಿಹಪರಂಗಳಗಡುಂಕೆಡುವುವು ॥೨೧॥

ಇಳೆಯೊಣ್ಮನೆನಿಪವಂಪಾತ್ರನಾಗದೆಜನರ । ಪಳವಿಗೆಚ್ಚರದೆನಡೆಯುತೆಧರ್ಮಮಾರ್ಗದೊಳ । ಗೊಳಗಾಗಿಸುತ್ತೆನಾಡೆಲ್ಲಮಂ ತನ್ನ ಶಿಕ್ಷೆಗೆದಂಡನೀತಿ ಬಲದೆ ॥ ಕಳಲದಂತವರವರಧರ್ಮಪದ್ಧತಿಯಿಂದೆ । ಸಲೆನಡಸುವುದುಯೋಗ್ಯ ಧರ್ಮವಂತಿಲ್ಲದಿರೆ । ಬಲಹೀನನನೆನಿಸಿ ತೇಜೋಹೀನನೆನಿಸಿ ಗುರಿಯಾಗುವಂ ದುಷ್ಕೀರ್ತಿಗೆ ॥೨೨॥

ಮನವೆಳಸದಂದದಿಂಪಿರದಪ್ಪವಿಷಯಕಾ । ನನದೆಚರಿಪಿಂದ್ರಿಯಮದೇಭಗಳನುಪಶಾಂತಿ । ಯೆನಿಪನೆಲಗಪ್ಪಿನೊಳುಪಾಯದಿಂಕಡಹಿಸುಜ್ಞಾನವೆಂ ಬಂಕುಶದೊಳು ॥ ಅನುವಿಂದೆಶಿಕ್ಷಿಸಿವಶೀಕರಿಕುಮಿಲ್ಲದಿರೆ । ಮನುಜನಯ್ದಿಂ ದ್ರಿಯಂಗಳನೆಂತುಬರ್ದುಕುವಂ । ವಿನಿಹತಗಳಪ್ಪವೊಂದೊಂದರಿಂಗಜಮೃಗ ಪತಂಗಮೀನಾಳಿಗಳೆನೆ ॥೨೩॥

ಕಾಮಾದಿಸಾಮಾನ್ಯರಿಪುಗಳಂಜಿತರಾವ | ಭೂಮೀಂದ್ರರೆಂತುತಾಂಜಿತರಾಗದಿರ್ದರು | ದ್ವಾದಶಬಲರಾಜಿಗಳಂಜಿತೇಂದ್ರಿಯರಾವನೃಪರಪ್ರಧೃಷ್ಯರಹರು || ರಾಮಕೇಳ್ದೈಸತ್ಯವೊಂದರಿಂನಿಂದಿರ್ಪರ್ | ದೀಮಹಿಮೆಯುಮುಲ್ಲಂಘಿಸದೆಪೋರೆಯುಂ | ತಾಮಿಕರ್ಮದರಿಂದೆನೃಪತಿಗಳ್ಸತ್ಯವ್ರತಾಚರಣನಿಷ್ಠರಾಗಿ ||೨೪||

ಆರೊಪ್ಪುಹರೊತನ್ನರಾಜ್ಯಭಾರಕ್ರಮಮ | ನಾರೊಪ್ಪದಿಹರೊ ತನ್ನಂಮತ್ತೆದೂರುವರ | ದಾರೊಭೂಷಿಪರಾರೊಸುಜನರ್ಕಳಾರೊದುರ್ಜನರಾರೊಮತ್ತೆ ತನಗೆ || ಆರೆಳಸುವರೊ ಹಿತವನಾರೆಳಸುವರೊ ಕೇಡ | ನಾರೊದಾಂಭಿಕರಾರೊ ಪರಮಾರ್ಥವೃತ್ತಿಗ | ಳ್ಭ್ರಮಣರದನರಿಯುತ್ತಾಪ್ತಚರರಿಂನಡೆಯುವೇಳ್ಕುಂ ಸುಸ್ಥಿತಿಪಥದೆ ||೨೫||

ತನ್ನನಾರಾದೊಡಂಪಳಿಯೆ ತಾಂ ಕೋಪಿಸದೆ | ತನ್ನೊಳುಸೈರಿಸಿತಪ್ಪಂತಿದ್ದಿಕೊಳವೇಳ್ಕು | ಮಿನ್ನದಾರಾದೊಡಂಪೊಗಳೆತನ್ನಂಬೆರೆಯಬಾರದುಮದೋದ್ರೇಕದೆ || ಮುನ್ನರಿದು ದೂರೀಕರಿಸುವುದೈದುಷ್ಟರಂ | ಮನ್ನಿಸಿಸಮೀಪದೊಳಗಿರಿಸಿಕೊಂಡಿರ್ಪುದೈ | ಸನ್ನುತಚರಿತ್ರರಹಪಿರಿಯರುಂಕೇಳ್ದೈಮಹೀಪಾಲಕುಲಸಿಂಹನೇ ||೨೬||

ದುರುಳರಹಪೆರರಾಯರಂನಿಗ್ರಹಿಸಿ ರಣಾ | ಜಿರದೊಳವರಾಳ್ಕೆಯುಂಬಸಗೊಳ್ಪುದುನ್ನತಿಗೆ | ಪರನೃಪರಬಾಯ್ಕೆಯೆಳಸುವುದಂತು ತನ್ನ ರಾಜ್ಯದಮೇಲೆಪರರಾಯರು || ಬರಲವರನೆಬ್ಬಟ್ಟಿನಿಜರಾಷ್ಟ್ರಮಂಬಿಡದೆ | ಪರಿರಕ್ಷಿಸುವುದುಮರಸರಕಾರ್ಯಮದಕರಸ | ನಿರಿಸವೇಳ್ಕುಂ ಸುಶಿಕ್ಷಿತಬಲವನಾಯುಕ್ತತಕ್ಕನಿತುರಾಜ್ಯದೊಳಗೆ ||೨೭||

ರಾಮಚಂದ್ರಮನೆಕೇಳರಮನೆಯಸುತ್ತಲುಂ | ಭೂಮಿಪತಿಯೆಚ್ಚರದೆ ಕೋಂಟೆಯಮಾಸುತ್ತಲುಂ | ಧಾಮಿಕರನಂತುತಾಣೆಗಳೊಳಂಗಡಿವೀದಿಯೊಳ್ಕೇರಿಕೇರಿಗಳೊಳು || ನೇಮಿಸುವುದುಕಾವಲ್ಗೆ ಚೋರರಿಂಪರದಾರ | ಕಾ

ಮುಕರಿನಂತು ರಾಜದ್ರೋಹಿಗಳನಾಗ । ದಾವಮಾಳ್ಕೆಯಿಂ ಜನಗಣಪಟಲಂ
ರಕ್ಷಿಸಲ್ಕೋಸುಗಂ ಮಂಡಲಪನು ॥೨೮॥

ರಾಯಕೇಳ್ವಾಗ್ಗ್ಮಿರಹಮಂತ್ರಿಪ್ರಧಾನರಂ । ನ್ಯಾಯಾಧಿಪತಿಗಳಂ
ಶೂರರಹವಾಹಿನೀ । ನಾಯಕರನಂತು ನಂಬುಗೆವೆತ್ತಭಾಂಡಾರಿಕರನೈಷ್ಟಿಕರ
ಲಿಪಿಕಾರರ ॥ ಸ್ಥಾಯುಕರವರ್ಗಮಂ ದಕ್ಷರಹಗೋಪರನು । ಪಾಯವಿದರ
ಹಕರ್ಮಕಾರರಂಗಣ್ಯರಾ । ದಾಯವ್ಯಯಾಧಿಪರನಿರಿಸುವುದು ರಾಜ್ಯಸುಸ್ಥಿತಿ
ಗರಸುಗಳ ಕಟ್ಟಳೆ ॥೨೯॥

ಮತಿಯುತನೀತಿಶಾಸ್ತ್ರಪ್ರವೀಣಂಹಿತಾ । ಹಿತಕೃತ್ಯಸಂವಿಭಾಗವ
ನರಿವ ತರ್ಕ್ಕದಂ । ಕ್ಷಿತಿಪತಿಗೆಕಾಲದೊಳ್ಬೋಧಿಸುವ ಪೂರ್ವ್ವಾಪರಜ್ಞಂ ಯ
ಥಾರ್ಥವಾದಿ। ಅತಿಧೈರ್ಯ್ಯಶಾಲಿ ದುಷ್ಕೃತ್ಯವಿಮುಖಿಂಪರೇಂ । ಗಿತವಿದನುದಾ
ರಂಕ್ರಮಾರ್ಗ್ಗವಂ ಲೋಕೋಪ । ಕೃತಿ ನಿರತನಧಿಕೃತಸ್ಥಾನ ರಚನಾಕು
ಶಲನರ್ಹನಲೆಮಂತ್ರಿಪದಕೆ ॥ ೩೦ ॥

ಇತರಾಧಿಕಾರಿಗಳ್ನೀತಾದಿಶಾಸ್ತ್ರದಂ । ನಿತರಾಗಿಯುಂ ಸ್ವಾಮಿಭ
ಕ್ತಿಯುತರಾಗಿಯುಂ । ಸತತಮುಂನಿಯುತವೆನಿಸಿದ ಕಾರ್ಯ್ಯಮಂ ನಿರ್ವ್ವಹಿಸುವ
ರಾಗಿಯು ಮಲಸದೆ ॥ ಧೃತಿವಂತರಾಗಿಯುಂ ಸಚ್ಚರಿತರಾಗಿಯುಂ । ಪ್ರಿತವಿನ
ಯರುಂ ಕೃತಜ್ಞರುಮಾಗಿಯುಂ ನರಕ । ಗತಿಭೀತರಾಗಿಯು ಮಿರಲ್ವೇಳ್ಕು
ಮಾಲಿಸೈ ರಘುಕುಲಾಲಂಕಾರನೇ ॥ ೩೧ ॥

ಅರಮನೆಯೊಳಿರಿಸುವುದು ಕೇಳ್ರಾಯಕುಲಜರಂ । ಪರೆಯಿಂದ ಬಂದ
ವಿಶ್ವಸನೀಯರಾದ ಪಡಿ । ಯರರಂಜಳಂಬಾಯ್ತರಂ ಬೆಜ್ಜರಂ ಸೆಜ್ಜೆವಳರ
ನಂತಡುವಳರನು ॥ ಕರಣಿಕರಪಾಸಿಯು ಧಾರಕರನಚ್ಚುಳಾ । ಯತ್ತರನಡಪ
ವಳರ ಪಚ್ಚಾಯ್ಯರಂಮತ್ತಮೋಂ । ದಿರುವಂಗರಕ್ಷಕರನಂತವುರದೊಳಮು
ತುಸೇವಕರನಧಿಕೃತರನು ॥ ೩೨ ॥

ಪ್ರತಿದಿನವುಮೋಲಗಂ ಗುಡುವುದುದ್ದಾಮಪಂ । ಡಿತರೊಳರಿವುದು ವೇದಶಾಸ್ತ್ರಾರ್ಥ ನಿರ್ಣಯಮ । ನತಿಥಿಗುರು ದೇವತಾಪೂಜೆಗೈವುದು ಬಿಡದೆ ವೈಹಾಳಿಯಂಚರಿಪುದು ॥ ಮತಿಶಾಲಿಮಂತ್ರಿಗಳೊಳಾಲೋಚಿಪುದು ರಾಜ್ಯ । ಗತಿಯುನೆಣಿಪುದು ರಾಜ್ಯದಾಯುವ್ಯಯಂಗಳಂ । ಸತತಮಪ್ರತಂನೃಪಗೆ ಮತ್ತ ಮುರವುನೆವಾರ್ತೆಯಂ ವಿಚಾರಿಸಿಕೊಳ್ವುದೂ ॥ ೩೩ ॥

ತಿರಿಮಂತೆಪೂರ್ವದಿಗನಲರ್ಗಳಂ ಕೆಡಿಸದಂ । ತಿರೆ ಗಿಡುಗಳಂ ಪ್ರಜೆಗಳಂ ನೋಯಿಸದೆ ಕರವು । ನರಸುಕೊಳ್ವುದು ಯುಕ್ತಮೈ ಕಾಷ್ಠವಿಕ್ರಯಿಯುರುಳ್ವಂತಿರೆ ಮರಗಳ ॥ ಪಿರಿದರ್ಥತೃಷ್ಣೆಯಿಂ ಪ್ರಜೆಗಳಂ ಬಾಧಿಸಿದೊ । ಡಿರದೆ ಶಿಥಿಲಾರಗಳಜೋಡಣೆಯುಚಕ್ರದಂ । ತಿರೆ ವೊಲೇಂನಡೆದಪುದೆ ಶಿಥಿಲಪ್ರಜೋಪೇತರಾಜ್ಯವದುಸುಗತಿಯಿಂದೆ ॥ ೩೪ ॥

ಕ್ಷಿತಿಪತಿಗಳಧಿಕಾರಿ ವರ್ಗಕ್ಕೆ ಭೃತ್ಯಸಂ । ಹತಿಗೆ ಸೈನ್ಯಕ್ಕೆ ತಪ್ಪದೆ ಕಾಲಕಾಲಕ್ಕೆ । ಭೃತಿಯನೀವುದು ಮತ್ತ ರಾಷ್ಟ್ರೋಪಯುಕ್ತವಹ ಮಾರ್ಗಾದಿರಚನೆಗಳ್ಗೆ ॥ ಪ್ರತಿದಿನಂ ದ್ರವ್ಯಮಂ ವಿನಿಯೋಗಿಪುದು ತಕ್ಕ । ನಿತು ಕೊಳ್ವುದರಮನೆಯು ಬೇಹಾರಕಾದೊಸಂ । ಸತತಮಿರ್ಕುಂ ದ್ರವ್ಯಮಬ್ಧಿಯಂತಿರೆ ಪೂರ್ಣಮಾಗಿ ಭಂಡಾರದೊಳಗೆ ॥ ೩೫ ॥

ಭೂಪಕೇಳ್ವ್ವಸ್ವರೂಪವು ನನ್ಯದಿ ಯುಸ್ವ । ರೂಪಮಂ ಕಾರ್ಯಸ್ವ [illegible]ಯುಸ್ವ । ರೂಪಮಂ ತಿಳಿದು ಪರಿಣಾಮಸ್ವರೂಪಮಂ ಕಾರ್ಯರೂಪಮನು[illegible] ಸಿರಿದುರಾಗದಿಂದಂ ಸ್ವಯಂವರಿಸುಗುಂ । ಕೋಪಮಂ ಸಾಧಿಪನನು ॥ ಶ್ರ[illegible] ಬ[illegible]ವ್ಯಂಗಳ್ಗಂ ಕಳ[illegible] ದಿನಶನಾಗಿ ಮಡುಕಿ ಕಾರ್ಯಂಗೈವ । ಕಾಪುರುಷನರ್ಥವ್ಯಂಗಳ್ಗಂ ಕೊಂಡಾಪತ್ತಿಗೆಡೆಯಪ್ಪನು ॥ ೩೬ ॥

ಸಿರಿವಂತನನಿಪರಸೆಮಾನ್ಯನೆಂದೆನಿಪನೈ । ಧರೆಯೊಳದರಿಂದರಸು ನಿಜಧರ್ಮಚರ್ಯೆಯಿಂ । ದಶರಥನವನಾರ್ಜಿಸುತ್ತದರಿಂದೆ ಯಜ್ಞಾದಿ ಮಹನೀಯ ಕರ್ಮಗಳನು ॥ ವಿರಚಿಸಿದಿಗಂತವಿಶ್ರಾಂತಸತ್ಕೀರ್ತಿಯಂ । ದೊರೆಕೊಳ್ವುದು

ತ್ತಮವೆನಿಕ್ಕುಮಂತಿಲ್ಲದಿರೆ । ಪೊರೆಯುಕೊಳ್ಳುವೆ ಪಶುಗಳುಂ ತಮ್ಮೊಡಲ
ನಾವುದೈ ಫಲಂನಿಜಜನ್ಮಕೆ ॥ ೩೭ ॥

ವರಕವಿಗಳಂ ವೇದಶಾಸ್ತ್ರಸಂಪನ್ನರಾ । ಗಿರುವವಿದ್ವಾಂಸರಂ ಗಾನ
ವಿದ್ಯಾಪಂಡಿ । ತರನಂತು ಪರಿಪರಿಯಕುಶಲವಿದ್ಯಂಗಳೊಳ್ಪಡೆಜಾಣುಳ್ಳ
ವರನು ॥ ಪರಿಕಿಸಿ ಸುಹೃದ್ಬಂಧುಜನರೊಡನದೊವ್ವೊಮ್ಮೆ । ಪರಿತೋಷದಿಂ
ಯೋಗ್ಯತಾನುಸಾರದೆ ಪ್ರರ । ಸ್ಕರಿಸಿ ಧನಕನಕಾದಿಗಳನಿತ್ತು ಮಾನಿಸುವುದ
ರಸರ್ಗೆ ಕೀರ್ತಿಸರಣಿ ॥೩೮॥

ಪೆಡವೆಟ್ಟದಡಿಯನೊಂದಾದೊಡಂ ರಣದಲ್ಲಿ । ಕೊಡೆದಾಡುವುದು
ಮರಿಗಳೊಡನೆ ಸತ್ಪಾತ್ರದೊ । ಳ್ಕೊಡುವುದುಂ ಧರ್ಮದಿಂದಾರ್ಜಿಸಿದವಿತ್ತಮಂ
ಮರೆವೊಕ್ಕರಂಕೃಪೆಯೊಳು ॥ ಬಿಡದೆರಕ್ಷಿಸುವುದುಂ ಸ್ವಜನರಂ ಪೂರ್ವರಂ ।
ಕಡೆಗಣಿಸದೋವುವುದು ಮಂತುನಿಜಗೌರವಂ । ಕೆಡದಂತೆ ನಡೆವುದುಂ ಪಳವಿ
ಗಿಂಬಾಗದುತ್ತಮಧರ್ಮವವನಿಪರ್ಗೆ ॥೩೯॥

ದೂರರಾಗಾರ್ತಿಗೆವಿಚಾರಿಸುತೆ ನಿಗಮಾಂತ । ಸಾರಮಂ ವೈರಾಗ್ಯರಾ
ಜ್ಯಾಧಿಕೃತಿಗೈವು । ದಾರಾತ್ಮಬೋಧಕ್ಕೆಮೇರೆಗಳೆನಿಪ್ಪ ಸಾಧುಗಳಂತ ಪಸ್ವಿ
ಗಳನು ॥ ಭೂರಮಣರಭಿರಕ್ಷಿಸಕ್ಕೆಶಿಕ್ಷಿಸುವುದೈ । ಕ್ರೂರಕೃತ್ಯಂಗಳಂ ನಡ
ಸುವ ದುರಾತ್ಮರಂ । ಗೋರಕ್ಷಣಂ ವ್ಯಾಘ್ರಮುಖದುಷ್ಟಮೃಗಗಳನರಣ್ಯ
ದೊಳ್ಕೊಲದಪ್ಪುದೇ ॥೪೦॥

ಜ್ಞಾನಿಯುಂ ಯೋಗಿಯುಂ ಪರಮಹಂಸನನಂತು । ಮಾನಿಸುವುದೊ
ಲ್ದು ಗುರುವೃದ್ಧರಂಸೇವಿಪುದು । ದೀನರಂ ವಿಕಲೇಂದ್ರಿಯಾಂಗರಂ ಪೊರೆವು
ದನ್ನಾಚ್ಛಾದನಂಗಳಿಂದೆ ॥ ಮಾನಸದೊಳಾವಗಂಬಿಡದೆ ಪರಮಾತ್ಮನಂ ।
ಜಾನಿಪುದು ದಾರಿದಾರಿಯೊಳ್ಬಳ್ಳಿಗರ್ಗನ್ನ । ಪಾನಸತ್ರಂಗಳಂ ರಚಿಸುವುದು
ಮರಸರ್ಗೆ ಧರ್ಮವೈ ರಘುಪುಂಗವಾ ॥೪೧॥

ಸ್ವಾಯತ್ತಸಿದ್ಧಿ ಸಚಿವಾಯತ್ತಸಿದ್ಧಿಯುಂ ಭ | ಯಾಯತ್ತಸಿದ್ಧಿಯೆಂ
ದೀಧರಿತ್ರಿಯೊಳವನಿ | ನಾಯಕರ್ತ್ರಿವಿಧರಾಗಿರ್ಪ್ಪರುತ್ತಮಾಧಮಮಧ್ಯಮ
ಕ್ರಮದೊಳು || ರಾಯಕೇಳ್ಮಂತ್ರಿಸಿ ಮೊದಲ್ಮಂತ್ರಿಜನರೊಡನೆ | ದಾಯ
ವರಿದಾಬಳಿಕಬಗೆದುತನ್ನೊಳ್ತಾನು | ಪಾಯದಿಂ ಕಾರ್ಯಮಂ ನಡಸುವಂ
ಸ್ವಾಯತ್ತಸಿದ್ಧಿರಾಜಶ್ರೇಷ್ಠನು ||೪೨||

ತೋಯಜಸಖಾನ್ವಯೋದ್ಭವ ಕೇಳ್ತನ್ನಭಿ | ಪ್ರಾಯಮಂ ಮಂ
ತ್ರಿಗಳ್ಗಂಮತಿಸಿದಾಬಳಿಕ | ಪಾಯದಿಂ ಕಾರ್ಯಮಂನಡಸುವ ನರೇಂದ್ರನು
ಭಯಾಯತ್ತಸಿದ್ಧಿಯುತನು || ಶ್ರೇಯಸ್ಸಿಮಧ್ಯಮಂ ತನಗಣಂನೀತಿವಿ | ದ್ಯಾ
ಯೋಗಮಿರದೆನಿಜ ಮಂತ್ರಿಗಳ್ಪೇಳ್ದಂತೆ | ರಾಯನಾವಂ ರಾಜ್ಯಮಂ ಪಾಲಿ
ಸುವನೆ ಸಚಿವಾಯತ್ತಸಿದ್ಧಿಯುತನು ||೪೩||

ಅರಸನೆನಿಸಿರ್ಪವಂ ಪ್ರಜೆಗಳಿಂದಲ್ಲದಾ | ಅರಸನಿಂ ಪ್ರಜೆಗಳಲ್ಲದ
ರಿಂದೆತಾನೆನಿತು | ಸಿರಿವಂತನಾಗಿರ್ದೊಡಂಮತ್ತೆ ಬಲವಂತನಾಗಿರ್ದೊಡಂಕ್ಷಿತಿ
ಯೊಳು || ಗರುವಪಡದೀನೀತಿಯುಂಮರೆಯದಾಶಯದೊ | ಳರಿಸಿಕೊಂಡಾ
ವಗಂ ಪ್ರಜೆಗಳಂರಂಜಿಸು | ತ್ತರಸಂಗೆನಡೆವುದೇ ಮೊದಲಸಿಯಧರ್ಮವೆಂದರಿವು
ದೈರಾಜೇಂದ್ರನೇ ||೪೪||

ಆಮಹಾಮುನಿಯಿಂತುರಾಜಧರ್ಮವನೊರೆಯೆ | ರಾಮಚಂದ್ರಂಕೇಳ್ದು
ಲಕ್ಷ್ಮಣಾದ್ಯನುಜರೊಡ | ನಾವಗಂ ಯಿಂಧರ್ಮಪಥವಿಡಿದುನಿರತಿಶಯವಿಭವ
ಸಂಪನ್ನನಾಗಿ || ಭೂಮಿಯುಂಪಾಲಿಸುತ್ತಿರ್ದನೊಲವಿಂದದಿ | ಕ್ಕಾಮಿನೀಕುಲ
ಮುಕುಲಾಯಿತೋದ್ಯದ್ಯಶೋ | ಭೂಮನಾಗವನಿಸುತೆಯೊಡಗೂಡಿಮೊರೆಯು
ತ್ತೆನಿತ್ಯೋತ್ಸವಂಗಳಿಂದೆ ||೪೫||

ಎರಡನೆಯ ಸಂಧಿ ಸಂಪೂರ್ಣಂ.

ಸಂಧಿ ಎರಡಕ್ಕೆ ಪದ್ಯಗಳು ೬೧ ಕ್ಕೆ ಮಂಗಳಮಸ್ತು.

ಮೂರನೆಯ ಸಂಧಿ.

॥ ಸೂಚನೆ ॥ ಪುರದಶೋಧನೆಗಿರುಳ್ಪೋಗಿರ್ದಗೂಢಚರ | ರರುಹಿದೂರರಜಕನದುರುಕ್ತಿಯಂಕೇಳ್ದುರಘು | ವರನಳ್ಕಿಲೋಕಾಪವಾದಕ್ಕೆಕಳುಹಿದನರಣ್ಯಕ್ಕೆಜಾನಕಿಯನು ॥

ಎಲೆಮುನಿಪಮುನ್ನಡೆದುದಂಪೇಳ್ವೆನೊಲ್ದುಕೇಳ್ | ಇಳೆಯನಾರಾಮಚಂದ್ರಂಸಹೋದರರೊಡನೆ | ಸಲಹುತ್ತೆಧರ್ಮದಿಂಸಾಕೇತಪುರದೊಳಿರೆಶುಭಗಾತ್ರಿಧರಣಿಪುತ್ರಿ ॥ ತಳೆದುಗರ್ಭವನೆಸೆವಳಾತ್ಮಭೃಚ್ಛ್ರುತಿಯಂತೆ | ಕಳೆಯೆಮೂರುತಯ್ದುತಿಂಗಳ್ತುಂಬಲಾಸಮಯ | ದೊಳಗೆವಿವಿಧೋತ್ಸವಂಗಳನಾರಘೂದ್ವಹಂಬಳೆಯಿಸಿದನತಿಮುದದೊಳು ॥ ೧ ॥

ಬಿರಿದಪೊಂದಾವರೆಯಕಳೆಯಾಂತನುಸೌರಗಂ | ಪರಮುದ್ಗತೇಂದುಮಂಡಲರುಚಿಯನಾಳ್ದತ್ತು | ಚರಣಕ್ಕೆತೊಡರುತೊಡವರುತಿರ್ದಕೇಳಿಹಂಸೆಗಳೈದಿದುವುಮುಂದೆ ॥ ಸಿರಿಯಾಂತುದಡಸಿರ್ದಬಡತನದನಡುಮುನ್ನೀ | ಹರದೃಷ್ಟಿಸಂಜೆಯೊಳಗಾಡುತಿಹವಿಮಾನನನು | ಕರಿಸಿದುದುಶಶವಿಷಾಣಾಭಮಾದುದುವಳಿತ್ರಯನಾಗಳವನಿಸುತೆಯಾ ॥ ೨ ॥

ಅಂಗದೊಳ್ಪಾಟವಂಕುಂದುತಿರೆದಿನದಿನ | ಕ್ಕಂಗನಾಮಣಿಧರಣಿಸುತೆಬಿಟ್ಟುಮಣಿಭೂಷ | ಣಂಗಳಂಸೂಕ್ಷ್ಮಾಂಬರಮನುಟ್ಟುಮುಡಿಗೆಪೂರಲಾರದಲರಂಸೂಡದೆ ॥ ಸಂಗಡಿಸಿಸಖಿಯರೊಲ್ದುಚರಿಪಬಗೆಬಗೆಯ | ಸಿಂಗರಕ್ಕಲಸಿದಯೆಯಂಪುಟ್ಟಿಸುತ್ತಿರ್ದಳ್ | ಕಂಗೊಳಿಸಿವಳ್ಮರುಗನಿಕ್ಕಿದೊಳ್ಜಂತದಮನೋಹರಪ್ರತಿಮೆಯಂತೆ ॥ ೩ ॥

ಪ್ರಸವತೆನಲ್ಕಿಗುಂಡಿದಮಾಧವೀಲತೆಯಂತೆ | ಬಸುರಾಂತುಕಂಗೊಳಿಪಸತಿಯಂಪಲರ್ಕ್ಕದಿ | ಟ್ಟಿಸಿಸಂತಸಂಬಡುತವೊಂದುದಿನವೇಕಾಂತದೊಳಗಾಕೆ

ಯುಂಮುದ್ದಿಸಿ ॥ ವಸುಮತ್ಕುಲೇಂದ್ರನೆಲೆಜೀವಿತಪ್ರಿಯೆಮಾಜ | ದುಸಿರಾವ ಬಯಕೆನಿನಗೆನ್ನಾಣೆನುಡಿಯೆಂದು | ಬೆಸಗೊಂಡೊಡಾಸಾಧ್ವಿನಾಣಿಂದೆತಲೆವಾಗಿನಸುನಗೆಯೊಳಂತೆಂದಳು ॥೪॥

ಆವುದಕ್ಕಂಕೊರತೆಯೆಂಬುದಿಲ್ಲಖಿಲನರ | ದೇವಕುಲಮೌಳಿಪ್ರಸೂನಮಧುಲೋಲಭೃಂ | ಗಾವಳೀಭಂಗೀಭೃದಾಜ್ಞನಹನಿನ್ನಕಯ್ವಿಡಿದೆನಗೆನೀಂಚೋದ್ಯಕೆ ॥ ಈವಿಧದೆಬೆಸಗೊಳ್ವಬಿನ್ನವಿಪೆನದರಿಂದೆ | ಭಾವಗತಮಾದೊಂದುಬಯಕೆಯಂನಿನ್ನಯಡಿ | ದಾವರೆಯೊಳೆಲೆನಾಥನೀನೊಲ್ದುದಂಪೂರಯಿಪುದೆಂದುಯಾಚಿಸಿದಳು ॥೫॥

ನುಡಿನುಡಿಯದೇನೆಂದು ಬೆಸಗೊಳೆಕಡಂಗಿ ಪತಿ | ಮಡದಿಮಣಿಕಾಂತಕೇಳಾ ವಾಸಿಪಂದುನಾ | ನಡವಿಯೊಳಗೆನ್ನೊಳುರೆನೇಹಮಂಬಳೆಯಿಸಿರ್ದಮುನಿ ಸತೀಜನರನು ॥ ನಡೆದಡವಿಗಿನ್ನೊರ್ಮೆನೋಡಲೆಳಸಿದಪೆನಾಂ | ಕಡುಮಹಿಮೆಯಾಂತ ಲೋಪಾಮುದ್ರೆ ಮೊದಲಾದ | ರಡಿಗೆ ಕುಂಬಿಟ್ಟವರಹರಕೆಯಂ ಕಯ್ಕೊಂಡುಬರಲು ಮೆಳಸುವೆನೆಂದಳು ॥ ೬ ॥

ಮತ್ತಮವರ್ಗೆಲ್ಲರ್ಗಮುಚಿತಕೌಶೇಯಗಳ | ನುತ್ತಮಾಭರಣಗಳನಿತ್ತು ಮನ್ನಿಸೆ ಕುತುಕಿ | ಸುತ್ತಿರ್ಪೆನೆಂದು ಮೃದುಮಧುರಮೆನೆ ನುಡಿಯೆಕೇಳ್ದುಜಗತ್ಪತಿಯುದಕ್ಕೆ ॥ ಚಿತ್ತದೊಳ್ಪಿರಿದೊಲವನಾಂತಿದಕ್ಕೇತಕ್ಕೆ | ನಿತ್ತುಸಂಕೋಚಮಾಬನಕೆ ಬೀಳ್ಕೊಡುವೆನೆಲೆ | ಮತ್ತಕಾಶಿನಿ ನಾಳೆಯೋ ನಿನ್ನನೊದೊಲ್ದು ಮೊಗವೆತ್ತಿ ಮುತ್ತಿಟ್ಟನು ॥ ೭ ॥

ನಿಜಪತಿಯನಲ್ನುಡಿಯ ನಾಲಿಸಿ ವಸುಂಧರಾ | ತ್ಮಜೆ ಮುದಂಗೊಂಡು ವನಕೈದಲು ತ್ಸುಕಿಸುತಿರೆ | ರಜನಿಯೊಳಗಂದು ರಘುಪುಂಗವನ ಶಾಸನದೊಳಾ ರಾಜಧಾನಿಯೊಳಗೆ ॥ ಪ್ರಜೆಗಳಾಡುವ ಸುದ್ದಿಯಂ ತಿಳಿಯಲೋಸುಗಂ | ಗಜಬಜೆಸದೋರೊರ್ವರೊಂದೊಂದುವೇಷಮಂ | ಭಜಿಸಿ ಪೊರಮಟ್ಟೈತಂತಮ್ಮ ಮನೆಗಳಿಂದಲ್ಲಲ್ಲಿ ಗೂಢಚರರು ॥ ೮ ॥

ರವಿಯೆಂಬ ಸೂತ್ರಧಾರಂ ಧರಾತಲವೆಂಬ | ಸುವಿಶಾಲರಂಗದೊಳ್ಕಿ
ರಣ ಸೂತ್ರಂಗಳಿಂ | ವಿವಿಧಚೇತನಗಳೆಂದೆಂಬಕೀಲ್ಬೊಂಬೆಗಳನಾಯಾಪರಿ
ಯೊಳಾಡಿಸಿ || ಅವಸಿತಿಯೊಳೆಳ್ದ ಕರಿದೆರೆಯೆಂಬವೋಲ್ಪಾಡೆ | ಕವಿದು
ಕೊಂಡಿರ್ದುದೆತ್ತಲುಮಾಗಳೇನೆಂಬೆ | ನವಿರಳಭ್ರಮರಪಟಲಶ್ಯಾಮತಾವ
ದವನಳ್ಕುಸುವ ಕಗ್ಗತ್ತಲೆ ||೯||

ಅವಿರತಂ ತೇಜೋನಿಧಿ ಪ್ರಾಪ್ತಿಸಿದ್ಧಿಸ | ಲ್ಪವನಿಸಿ ಮಹಾಯೋಗ
ಮಂ ಕುಳಿತುಕೊಂಡಿರ್ಪ | ದಿವಿಜಾಧರಾಪದಿಕ್ಕೆಂಬಕಾಪಾಲಿಕೆಯ ಭಸಿತಾನು
ಲೇಪದಿಂದೆ || ಧವಳಮೆನಿಸಿದ ಫಾಲತಲವೆಂಬ ಭಾವನೆಯ | ನವಲೋಕಿಸು
ವರ್ಗೆ ಪುಟ್ಟಿಸುತೊಂದುನಿಮಿಷವೊಡ | ನಸಗಳ್ತಲಾಂಛನಂ ಮೂಡಲೊಗೆ
ದರ್ಧೇಂದುಶಕಲಮೆಂಕಣ್ಗೊಳಿಸಿತೋ ||೧೦||

ನಿರುಕಿಸಲದೆತ್ತೆತ್ತಲುಂ ಸಾಂಧ್ಯರಾಗವೆಂ | ಬುರಿಯಿಕ್ಕಿ ಪಿರಿದೆನಿಸಿದಾ
ಕಾಶವೆಂದೆಂಬ | ಸಿರಿವಂತಿಗೆಯೊಳಸಂಖ್ಯಾತಲೋಕಗಳೆಂಬ ಯುವನಾಳಬೀ
ಜಗಳನು || ಹುರಿಯುತ್ತಿರಲ್ಕೇಳೆಯೆಂದೆಂಬ ವಧು ರಜನಿ | ಕರರೂಪಸಾಧ
ನದಿನಾಗಳೇನೆಂಬೆನಾ | ನರಳ್ಗಳೆಂಬಂತೆ ಪೊಲದೆಂ ಮನಂಗೊಳಿಸಿದುವೊ
ಥಳಥಳಿಪ ತಾರಗೆಗಳು ||೧೧||

ಪೆರೆಯುಬೆಳ್ದಿಂಗಳಡಿಕಿರಿದ ಕರುಸಾಡಗಳ | ಶರದಮಂಡಲವನಟ್ಟಿಸಿ
ಸುಧಾಲೇಪಪಾಂ| ಡರವೆನಿಸಿ ದುತ್ತುಂಗಶಿಖರದೊಳ್ಪೊಳೆಯುತಿರೆ ನೆರಳ್ಗಿಂ
ಡಿರಲ್ಕೀಳಡೆ || ಶಿರದೊಳಪಿರ್ದು ಪಿನಕಾಂತಿಯಿಂ ಶೋಭಿಸು | ತ್ತಿರೆಭೂತಿ
ಧವಳೋತ್ತರಾಂಗಮಿಭಕೃತ್ತಿಯುಂ | ಧರಿಸಿ ಪೂರ್ವಾಂಗದೊಳ್ಕರೆವಿಂದು ಚೂ
ಡನಂಗಮನಾಪುರಂ ಪೋಲ್ತುದು ||೧೨||

ದಿನದಿನಕೆ ಕಳೆಯುತಿರೆ ಶೈಶವಾವಸ್ಥೆಯುಂ | ವನದಶೆ ಸಮುಜ್ಜೃಂಭಿ
ಸುತ್ತಮಿರೆ ಮಧ್ಯವ | ರ್ತಿನಿಯೆನಿಸಿದಬಲೆಯಂತಿರೆ ಪೊಲವಿಶೇಷಜ್ಞನಾದ
ನನಮತಿಯಂತಿರೆ || ವಿನಿಸರ್ಗ್ಭವದುಃಖನಾಗುದಯದಾನಂದ | ನೆನಿಪಯೋಗಿ
ಯಮನಸ್ಸ್ಥಿತಿಯಂತೆ ತೋರಿದ | ತ್ತನತಿಪ್ರಕಾಶತೆಯನಾಂತರ್ಧಚಂದ್ರ
ಮನ ಕೌಮುದಿಯೊಳಾಯಮಿನಿ ||೧೩||

ಮರುದಿನವೆ ಶುಕಶಾಪದಿಂದಹುದು ಧರಣಿಜಾ | ಚರಣಾಬ್ಜವಿನ್ಯಾಸಧನ್ಯತಾವಿರಹಮುಂ | ದರಿದು ವೇಳಾಸಖೀಮುಖದಿಂದೆ ಪಿರಿದು ಚಿಂತೆಯುನಾಳ್ದು ಮಱುಗಿಸುತ್ತೆ ॥ ದೊರೆಕೊಂಡವೋಲ್ಮೂರ್ಛೆಯುಂ ಸ್ತಿಮಿತಭಾವಮಿರೆ | ಪರಿಕಿಪೊಡೆ ನಿಶ್ಶಬ್ದಭಾವಮಿರೆ ನಸುಗಾಳಿ | ಚರಿಸುತಿರಲು ಸಿರಾಡುವಂತೆ ಕಳೆಗುಂದಿದುದಾಗಳಾರಾಜಧಾನಿ ॥೧೪॥

ಪರಿಮವತಿದೀರ್ಘಂಗಳಾಗಿ ದಿಕ್ಕುಗಳಂಟು | ನಿರುಕಿಪೊಡೆ ಬೀದಿಬೀದಿಗಳಲ್ಲಿ ಕೇತನಾಂ | ಬರಪಟಪಟತ್ಕಾರವೊಂದಲ್ಲದಿನ್ನೊಂದು ಸದ್ದೆತ್ತಲುಂ ಕೇಳ್ದುದಿಲ್ಲ ॥ ಪುರಜನರದಾರುಮಾಗಳ್ಚರಿಸುತಿರಲಿಲ್ಲ | ಪರಿಪರಿಯ ಪರಿಮಳದ್ರವ್ಯಂಗಳಾಮೋದ | ಭರಮಾಂತು ಭೋಗಿಗಳ ಬೀಡುಗಳನೊಯ್ಯನೈತರ್ಪತಂಗಾಳಿ ಪೊರತು ॥೧೫॥

ಎರಡನೆಯಜಾವದಾಯಾಮಿನೀ ಸಮಯದೊ | ಳ್ಚರರಾಮಹಾಪತ್ತನದ ಕೇರಿಕೇರಿಯೊ | ಳ್ಚರಿಸುತಿರೆ ಮೆಲ್ಮೆಲ್ಲನಾರುಮರಿಯದತೆರದಿನವರೊಳಗದೊರ್ವ ಚರನು ॥ ಪರಿತಂಪದೊರ್ವಧನಪತಿಯ ಪೆಸರ್ಮಾಳಿಗೆಯ | ಪೊರೆಯಲ್ಲಿ ಮರೆಗೊಂಡಣಂ ಸದ್ದುಗೈಯದೆ | ಚ್ಚರದಿ ನೊಳಗಣನುಡಿಗಳಂ ಬಿಡದೆ ಕಿವಿಗೊಟ್ಟು ಸಂಚುಗೇಳುತ್ತಿರ್ದನು ॥೧೬॥

ಆಮನೆಯೊಳೊರ್ವವಾಮಾಕ್ಷಿಯಣುಗಂಗತಿ | ಪ್ರೇಮದಿಂದೆದೆಯೂಡುತಲೆಕಂದ ಕುಡಿಕುಡಿನಿ | ಕಾಮವೆನಲೆದೆವಾಲನಿನ್ನಲ್ಲಿನಿನಗುಂಟು ನಾಂಕೊಟ್ಟುದೇಂಕೊಟ್ಟುದು ॥ ಈಮಹಾರಾಜಧಾನಿಗೆ ರಾಮಚಂದಿರಂ | ಸ್ವಾಮಿಯಿಲ್ಲಿಯಜನಕೆ ಜನ್ಮವಿನ್ನಿಲ್ಲವೆಂ | ದಾಮುದ್ದುಕಂಪನೆಳನಗೆಯ ಮೊಗದಾವರೆಯ ನಡಿಗಡಿಗೆ ಮುತ್ತಿಟ್ಟಳು ॥೧೭॥

ಇಂತಲ್ಲಿಕೇಳ್ದು ರಾಘವನಕಡುಮೈಮೆಯುಂ | ಸಂತಸಂಗೊಂಡು ಚರನಲ್ಲಿಂದೆ ಪೊರಮಟ್ಟು | ಮುಂತೊರ್ವ ಭಾಗ್ಯಶಾಲಿಯ ಮನೆಯೊಳಿರ್ವರಾಡುವನುಡಿಯ ಹೊಳವನರಿಪು ॥ ನಿಂತಲ್ಲಿಕೇಳುತಿರಲಾಗೃಹಸ್ಥನ ಗೃಹಿಣಿ | ಕಾಂತಮಣಿಮಂಚದೊಳ್ಕುಳಿತೊಡನೆ ಪತಿಯನ | ತ್ಯಂತರಾಗದೆನೋಡಿ ಕಂಕಣಂ ಝಣಝಣಿಸೆ ವೀಳಯಂಗುಡುತೆಂದಳು ॥೧೮॥

ಎಂತುರಾಜೀವನಯನಂ ಶರದಾಭ್ರಕೇಂದು | ಕಾಂತಮುಖನಾಜಾನು
ಬಾಹು ಯುಗನಾತತಭು | ಜಾಂತರಂದರವಿದಳಿತೋತ್ಪಲಶ್ಯಾಮನಾರಾಮ
ಚಂದ್ರಮನಿಸರ್ಗನೋ ‖ ಅಂತೆನ್ನ ಕಣ್ಗೆ ತೋರ್ದಪೆ ಕಾಂತನೀನೆನೆನಿ | ತಾಂ
ತಮಾದದಿಂದೆಂದನಾಮದನರೂಪನೆಲೆ | ಕಾಂತೆ ಸುಚರಿತ್ರೆಯಹನೀನೆನ್ನನಿಂ
ತು ಭಾವಿಪುದು ಸರಿಕೇಳಾದೊಡೆ ‖೧೯‖

ಎಲ್ಲಿ ನಾನೊಂದು ಪುಳುವಿಧಿ ಮುಖಾರ್ಚಿತಪಾದ | ನೆಲ್ಲಿದಾಮಂ ಪು
ರಂದರಗೋಪನೆಲ್ಲಿರವಿ | ಯೆಲ್ಲಿ ತಿರಿಕುಳಿಯೆಲ್ಲಿ ಕೋಟೀಶನೆಲ್ಲಿ ಮೊಲನೆಲ್ಲಿ
ಮೃಗರಾಜನೆಲ್ಲಿ ‖ ಎಲ್ಲಿಬೊಬ್ಬುಲಿ ಯೆಲ್ಲಿಮಂದಾರತರುಮತ್ತೆ | ದೆಲ್ಲಿರಥ್ಯಾಲ್ಪ
ಜಲವೆಲ್ಲಿ ಗಂಗಾಪೂರ | ವೆಲ್ಲಿಗಾಜೆಲ್ಲಿ ಕೌಸ್ತುಭರತ್ನವೆಲ್ಲಿ ತಾಂಗುಂಜೆಮತ್ತೆಲ್ಲಿ
ಮೇರು ‖೨೦‖

ಸುಂದರಸ್ತ್ರೀಯಾವುದಾವವನಪದಧೂಳಿ | ಯಿಂದೆಶಿಲೆಯಾಪರಾತ್ಪರ
ನೆಲ್ಲಿ ಜಡರೂಪ | ನೆಂದೆನಿಸನಾನೆಲ್ಲಿ ಪೇಳೆಂದೊಡಾಸತೀಮಣಿಯತಿಪ್ರೇಮ
ವಾಂತು ‖ ಸುಂದರಾಂಗನೆ ನಿನ್ನನೇರಾಮನೆಂದೆಣಿಪೆ | ನೆಂದಪ್ಪಿದಳ್ಕಣಿಯೆ
ಕಾಡಿಪುರ್ವುನಿರ್ಭರಾ | ನಂಹದಿಂದವನನಾನುಡಿಗೇಳ್ದು ಚರಣವಂಮೆಲ್ಲನಲ್ಲಿಂ
ತಳರ್ದನು ‖೨೧‖

ನಡೆದಂಗಡಿಯಬೀದಿಗಿನ್ನೊರ್ವನೊಂದುಚಾ | ವಡಿಯೆಡೆಗೆಬಂದು ಮ
ರೆಗೊಂಡು ನಿಲಲಲ್ಲಿತೂ | ಕಡಿಸುತತ್ತಿತ್ತಣಿಂದೋರೊರ್ವಯಾಮಿಕರ್ಬಂ
ದುಬಂದೊಗ್ಗುಗೂಡಿ ‖ ಬಿಡುಬಿಡೀರಾಜಧಾನಿಯೊಳಿಮಗೆ ಪಗಲಿರು | ಳ್ಕಡು
ಕಲೇನಾನು ಮಿನಿಸೆಡೆಯಿಲ್ಲಮುಕಟತೂ | ಕಡಿಸುವುದೆಕೆಲಸವಾಯ್ತೆಂದುಕೊ
ಳುತಿರಲವರೊಳೊರ್ವನಿರದಿಂತೆಂದನು ‖೨೨‖

ತಲೆದೋರವೀರಾಮರಾಜ್ಯದೊಳ್ಕ್ಲೇಸವಂ | ಡಲೆರಾಜವಿದ್ರೋಹ
ವಂತುಕೀಳ್ನಡೆಕಳವು | ಕೊಲೆಯುಮೆಮಗಾರುಮಂಜುವರಿಲ್ಲಸದ್ಗೈವರು
ಮೆಮ್ಮನಾರುಮಿಲ್ಲ ‖ ಬಳಲುತಿಹುದೇಕೆ ಗೌರವಮಿಲ್ಲದೆಂದುಸುಖ | ಕೆಳಸಿ
ನಿದ್ರಿಸುವೆವೆನೆ ತಾನೆಬರೆರಾಮನೀ | ಪೊಳಲಸೋದನೆಗಪ್ಪೆವಾವೆತಪ್ಪಿದರೇನೆ
ವೆಂದನೂರ ಬೇಸರಾಂತು ‖೨೩‖

ಬೆರಸೊರ್ವನಿನ್ನೊಂದು ಕೇರಿಯೊಳಗೊಂದುಮಂ । ದಿರದೊಳಗದೊರ್ವಬಿನ್ನಣಿಯ ಸತಿಯುವತಿಸಿಂ । ಗರಿಸಿಕೊಂಡೊಲ್ದು ನಿಜತನುಮನಳವಡಿಸಿ ಬಹುವಿಧಭೋಗ್ಯವಸ್ತುಗಳನು ॥ ನಿರುಕಿಸಿ ನಿಜೇಶನಂ ರಾಮನಡಿಯಂಬಿಡದೆ । ಗುರುಭಕ್ತಿಯಿಂ ಭಜಿಸಿ ತತ್ಕೃಪೆಯೊಳಾನಿಂತು । ದೊರೆಕೊಂಡೆನು ಪಭೋಗ್ಯವಸ್ತುಗಳನಂತುಬಗೆಯೊಪ್ಪೆನಿನ್ನುಮನೆಂದಳು ॥೨೪॥

ಅದನವಂಕೇಳ್ದು ನಸುನಕ್ಕು ಕೇಳ್ಪ್ರಿಯೆ ರಾಮ । ಪದಸಮರ್ಚನೆಗೈದು ತತ್ಕೃಪೆಯೊಳಾಂಪಡೆದೆ । ನಿದನೆಲ್ಲಮಂ ನಿನ್ನುಮಂ ಸ್ರಕ್ಚಂದನಂ ತಂಬುಲಂ ಮಂಗಳಾಂಗಿ ॥ ಮೊದಲಾದುವೆಲ್ಲಮುಂ ಪುರುಷನುಪಭೋಗಕ್ ಎಲ್ಲದೆ ಬೇರೆಯೇನುಂಟೆನಲ್ಕೆ ರಾಮನ ಯಶೋ । ಭ್ಯುದಯಮಂಕೇಳ್ದು ಚರನಲ್ಲಿಂದೆ ಮೆಲ್ಲನಿನ್ನೊಂದು ಕೇರಿಗೆ ನಡೆದನು ॥೨೫॥

ರಾಮನಯಶಃಪ್ರಬಂಧಮನೊಂದು ಕುಸುಮಿತಾ । ರಾಮಮಧ್ಯದೊಳೊರ್ವಕಲಕಂಠಕಂಠಿಯುಭಿ । ರಾಮಮೆನೆಪಾಡಿ ಮಣಿವೀಣೆಯಂ ಬಾಜಿಸುತ್ತಿನ್ನೊಂದುಕೇರಿಯಲ್ಲಿ ॥ ರಾಮಣೀಯಕನಿಧಿಯೆ ಕೇಳೆಮ್ಮನಗರಿಗೆಧ । ರಾಮಹಿತಪುಣ್ಯದಿಂ ರಾಮನರಸಾದನವಿ । ರಾಮದಿಂದಾವನ ಮುಖಾಬ್ಜಮಂ ನೋಳ್ಪ ಪುಣ್ಯಂ ತಮಗೆ ದೊರಕಿರ್ಪುದೋ ॥೨೬॥

ಜೀವಿತೇಶ್ವರ ಕೇಳ್ಸಮುದ್ರಕ್ಕೆ ಸೇತುವನ । ದಾವಮಂ ಕಟ್ಟಿದನೊ ಭುವನಭೀಕರರಣದೆ । ರಾವಣನ ಸಂಹಾರಮಂಗೈದು ಬಿಡಿಸಿತಂದನೊ ಭೂಮಿನಂದಿನಿಯನು ॥ ಆವೀರಶೇಖರನ ಸದ್ಗುಣಾವಳಿಯನಾ । ನೇವರ್ಣಿಸುವೆನೆನೆ ನಿಜೇಶಂಗವಂನಗುತೆ । ಭಾವಿಪರೆ ರಾಮನಂ ಮನುಜಪತಿಮಾತ್ರನೆಂದೆಲೆ ಮುಗುದೆಕೇಳೊರೆವೆನು ॥೨೭॥

ಶರಧಿಯೊಳ್ಸೇತುಬಂಧನಮುಂ ದಶಾಸ್ಯಸಂ । ಹರಣಮುಂ ರಿದಲ್ಲ ರಾಮಂಗೆ ನೀನವನನರಿಯದಿರು ಮನುಜನೆಂದಂಬುಜಭವಾದಿದಿವಿಜಾಳಪ್ರಾರ್ಥಿತಪಾದನು ॥ ಧರೆಯೊಳವತರಿಸಿದಂ ದುಷ್ಟರಂ ನಿಗ್ರಹಿಸೆ । ನರಲೀಲೆಯಿಂ ಭುವನಚಕ್ರಮಂ ಸೃಷ್ಟಿಸುವ । ಪರಿಪಾಳಿಸುವ ಲಯಮನೊಂದಿಸುವ ಸಚ್ಚಿದಾನಂದಮಯನವನೆಂದನು ॥೨೮॥

ಇಂತು ಕೇಳ್ದಾರಾಮಭಕ್ತನುಕ್ತಿಯನೊರ್ವ | ನಾಂತುಮುದವಂ ಬೇರದೊಂದೆಡೆಗೆಪೋಗೆ ನಿಜ | ಕಾಂತನೊಡನೊರ್ವಸುಖಿಯಾದತೋಳ್ವಲನರಸಿಲಾವಣ್ಯಸಾರಸರಸಿ || ಸಂತಸದೆ ಯಕ್ಷಧೂಪಾಧಿವಾಸಿತನೀಲ | ಕುಂತಲೆ ಝಣಂಝಣಿಸೆ ಮಣಿವಲಯಮೊಡೆಯಾಡೆ | ಕಾಂತಮಣಿಮಾಲೆ ಕಂಠದೊಳೊಂದು ನೆಲೆವನೆಯೊಳಾಡುತಿರ್ದಳ್ನೃತ್ತವ || ೧೯ ||

ಮೆಲ್ಲನೈತಂದು ಮರೆಗೊಂಡು ಮತ್ತೊರ್ವಚರ | ನಲ್ಲಿನಿಲೆತಾನೆಳಸಿದಂತೆನೆತ್ತಂಬಿದ್ದು | ವಲ್ಲಭನನಾಚದುರೆಗೆಲ್ದು ನನೆಕೊನೆವೋಗಿ ಪರಿಹಾಸಮಂಮಾಡುತೆ || ನಲ್ಲನೀಂಬಂದೆಯೆನ್ನಯಕಯ್ಗೆ ಸೋತೆಂದು | ಸಲ್ಲಲಿತಭುಜಲತೆಗಳಂದಪ್ಪಿದೊಡನವಂ | ಪಲ್ಲವಾಧರೆ ರಾಮನಂ ನೆನೆದು ಗೆಲ್ವೆನಾನಿನ್ನೊಮ್ಮೆಯಾಡೆಂದನು ||೨೦||

ಒಡನೆಮನದೊಳ್ರಾಮನಂನೆನೆದು ನೆತ್ತವಂ | ಬಿಡುಬೀಳುತೊಲವಿಂದ ಪೇಕ್ಷಿಸಿದದಾಯಮಂ | ಪಡೆದು ಗೆಲ್ದಿನಿಯಳಂಗೆಲ್ದೆ ನಿದೊನೋಡೆನ್ನ ಕಯ್ಗೆ ನೀಂಬಂದೆಯೆಂದು || ನುಡಿವ ಪರಿಹಾಸಮಂಮಾಡಿ ಕೇಳ್ರಾಮನಂ | ಪೊಡವಿಯೊಳ್ನೆನೆದರ್ಗೆ ಸೋಲುಂಟೆಯೆಂದವಳ | ನಡಸಿದಾನಂದದಿಂದಪ್ಪಿದಂ ಚರನದಂಕೇಳ್ದು ಬೇರೆಡೆನಡೆದನು ||೨೧||

ಚರರಿಂಕೆಲಂಬರಾಯಾಮಂಟಪಂಗಳೊಳ್ಪುರದೇಶಜನಸಂಘಮಿಳಿವ ಚಾವಡಿಗಳೊಳ್ಬರಿಸುತ್ತೆ ತಾಟಕಾಸಂಹಾರಮೊದಲಾದ ರಘುಕುಲಾಲಂಕಾರನ || ಚರಿತಂಗಳಂಕಥಿಸುತನ್ಯೋನ್ಯಮಲ್ಲಲ್ಲಿ | ಪಿರಿದುಮುಚ್ಚರಿವಡುತ್ತಿರೆ ಪಲರದಂಕೇಳ್ದು | ಪೆರಪೆರತುದೆಸೆಗೈದಲವರೊಳಗೆಮಡಿವಳರಕೇರಿಗೊರ್ವಂಬಂದನು ||೨೨||

ನೆಲಸಿಪರಗೃಹವಲ್ಲಿತನ್ನೆಡೆಗೆಬಂದನಿಜ | ಲಲನೆಯಂಮನೆಯೊಳಗೆಕೂಡಲೀಯದೆಗಜರು | ತೆಲೆದುಷ್ಟಶೀಲೆನಿನ್ನೆನ್ನಕಯ್ವಿಡಿದಾಕೆಯಲ್ಲನೀನಿರ್ದಲ್ಲಿಗೆ|| ತೊಲಗೀಗಳೆಂದುಮಡಿವಳ್ಳನೊರ್ವನಂ | ಡಲೆದಲ್ಲಿಕೋಪದಿಂದೊರೆಯಲೊಡನವನತಾ | ಯೆಂವೆಲವೊದುರುಳಮಾಣ್ಕಿಣಿನಳ್ಸಲ್ಲದವಳಲ್ಲವೊಳ್ನಡೆಯಳೆನಲು ||೨೩||

ಆಮಡಿವಳಂಕೇಳ್ದುದಂಸಾಕುಸಾಕುನಡೆ | ರಾಮನೇನಾಂಪೆರನಮನೆ
ಯೊಳಗೆನೆಲಸಿರ್ದ | ಭಾಮೆಯಂ ಕೂಡಿಕೊಳಲೆನಗದೇಂ ನಿಲ್ಲವೇಮಾನಾವ
ಮಾನಂಗಳು || ಏನಾಜ್ಞೆಯಿಂದೆಯುಂಮನೆವುಗಿಸೆನಿವಳನೆನೆ | ಆಮಾತ
ನಾಲಿಸದನೆರೆಹೊರೆಯಜನರಿದೇಂ | ನೀಮುಂಚೆಗಳನ್ನೆವರಮಿಲ್ಲದೀವಾರ್ತೆಯೊಂ
ದೊಗೆದುದೇಹಾಎಂದರು ||೨೪||

ಮಡಿವಳನನುಡಿಗೆಕಿಡಿಕಿಡಿವೋಗಿಚರನವಂ | ಖಡುಗಮಂಹಿರಿದು
ಕೊಂಡೊರೆಯಿಂದೆಮುಂಬರಿದು | ಕಡಿಯಲವನಂ ಪ್ರಜಾಹಿಂಸೆತಗದೆಂಬರಾ
ಮಾಜ್ಞೆಯಂನೆನೆದೊಡನೆಯೇ || ಪೆಡಮೆಟ್ಟಿದಂಚಿಂತಿಸುತೆ ಬಳಿಕಚರರೆಲ್ಲ |
ರೊಡಗೂಡಿಸಂಕೇತದಿಂಬಿನೊಳ್ಮಡಿವಳನ | ನುಡಿಹೊರತುಬಿನ್ನವಿಪುದೊಡೆ
ಯಂಗೆತಕ್ಕುದಲ್ಲಮೆಂದುಮಂತ್ರಿಸಿದರು ||೨೫||

ಬಳಿಕವದಿರೆಲ್ಲರಾಗುಳಸುತ್ತೆ ತಂತಮ್ಮ | ನೆಲೆಗಳಂಸೇರ್ದುನಿದ್ರಿಸಿವ
ರಾಪ್ರೊಡನೆಮುಂ | ಬೆಳಗುಸಿಂದೂರಲೇಪನವಾಗೆಪೂರ್ವದಿಗ್ಭಿತ್ತಿಗಿನಕುಲತಿಲ
ಕನು || ತೊಳಗಿಬೆಳಗುವ ಸೌಮ್ಯಮಾದಮುಖಮಂಡಲದ | ಬೆಳಗನತ್ತಿತ್ತ
ಕೆದರುತೆವಿಬೋಧಕರಮಂ | ಗಳನುತಿಯನಾಲಿಸುತೆಸೆಜ್ಜೆಯಿಂದುಪ್ಪವಡಿಸಿ
ದನುದಯಗಿರಿಯಿನಿನನು ||೨೬||

ಪ್ರಾತರಾಹ್ನಿಕವನಾಗಿಸಿಭರತಮುಖ್ಯಾನು | ಜಾತರಿಂದಂವಸಿಷ್ಠಾತ್ರಿ
ಕಶ್ಯಪಮುಖನು | ಹಾತಪೋಧನರಿಂದಮೊಡಗೂಡಿಮೆರೆಯುತ್ತೆರಾಜೋಪ
ಚಾರದಿಂದೆ || ಸೀತಾಮನಃಕಾಂತನೋಲಗಂಗೊಟ್ಟುಸಂ | ಪ್ರೀತಿಯಿಂಪಟ್ಟ
ವಣೆಯೊಳ್ಮಂಡಿಸಿರೆಧರ್ಮ | ನೀತಿವಾದಂಗೈಯುತಾಚರರಲಂಕರಿಸಿಕೊಂಡಲ್ಲಿ
ಗೈತಂದರು ||೨೭||

ಆಮನುಕುಲೋತ್ತಂಸರತ್ನನಾಬಳಿಕಂಮ | ಹಾಮುನಿಗಳುತ್ತಮಾ
ಶೀರ್ವಚನಮಂಸಕಲ | ಸಾಮಂತರರ್ಪಿಸಿದಕಾಣ್ಕೆಯಂಮಂತ್ರಿಸಚಿವಾದಿಗ
ಳವಂದನೆಯನು || ಸಾಮನಸ್ಯವನಾಂತುಕಯ್ಕೊಂಡುಮನ್ನಣೆಯೊ | ಳಾಮ
ಹಾಜನಗಳಂಬೀಳ್ಕೊಟ್ಟುನಿಜಗುಪ್ತ | ಧಾಮಕ್ಕೆಬಂದುಬೆಸಗೊಂಡನೇ ನೀಂ
ಪುರದವಾರ್ತೆಯೆಂದಾಚರರನು ||೨೮||

ಅರಸಕೇಳೀಪುರದಕೇರಿಕೇರಿಗಳಲ್ಲಿ | ಪರಿಪರಿಯವೇಷಮಂತಳೆದು ನಾವೆಲ್ಲರುಂ | ಪರಿಪರಿದುಮನೆಮನೆಯೊಳುಂನಿನ್ನ ಕಡುಮುಷ್ಯಮೆಯ್ಯುಂನಿನ್ನ ಕೊಡುಗಯ್ಯನು ‖ ಪರಮಾದ್ಭುತಂಗಳಹನಿನ್ನ ಚರಿತಂಗಳಂ | ಪಿರಿದೆನಿಪ ನಿನ್ನ ಶೌರ್ಯವನಂತುಕೇಳ್ದವುರೆ | ಹರಹಿಕೊಂಡಿರ್ಪುದೆತ್ತಲುಮೊಳ್ಜಸಂನಿನ್ನದೆಂದನವರೊಳಗೊರ್ವನು ‖೩೯‖

ನಿನ್ನನಾಮಸ್ಮರಣೆಯಂ ಮಾಡದವರಿಲ್ಲ | ನಿನ್ನಸುಗುಣಾತಿಶಯಮಂ ಪೊಗಳದವರಿಲ್ಲ | ನಿನ್ನ ಚರಿತಪ್ರಬಂಧಂಗಳಂ ಪಠಿಸದವರಿಲ್ಲವೀಪಟ್ಟಣದೊಳು ‖ ನಿನ್ನ ಚರಣಾಂಬುರುಹಮಂ ಭಜಿಸದವರಿಲ್ಲ | ನಿನ್ನಭುಜಶೌರ್ಯಕಚ್ಚರಿವಡೆಯದವರಿಲ್ಲ | ನಿನ್ನರಾಜ್ಯದಮಾಳ್ಕೆಯಂ ಮೆಚ್ಚದವರಿಲ್ಲವೆಂದೊರೆದನಿನ್ನೊರ್ವನು ‖೪೦‖

ದೇವಕೇಳ್ಸ್ವರತರಂಗಿಣಿಯ ನಿರ್ಝರಿಯಂತೆ | ಪಾವನಂಗೈವುದೀಲೋಕಮಂ ರಾಕಾವಿ | ಭಾವರೀಕಾಂತಕೌಮುದಿಯಂತೆ ಬೆಳಗುತಿರ್ಪುದು ನಿನ್ನ ವಿಮಲಕೀರ್ತಿ ‖ ದೇವತೆಗಳೀಂಟ ಮುಂತಣಿದರರ್ಣವಸುಧೆಯ | ನೇವೇಳ್ವೆನೀಪುರದೊಳೆಲ್ಲರುಂ ನಿನ್ನ ಸುಗು | ಣಾವಳೀಸುಧೆಯನೆರಡುಂ ಕಿವಿಗಳಿಂದೀಂಟುತಿರ್ದೊಡಂ ತಣಿಯರಮಮಾ ‖೪೧‖

ಎನಲೊರ್ವನಿಂಕೆಲಂಬರುಮುಸಿರಲಿಂತುಕೆ | ಮ್ಮನೆನುಡಿಯದೇನುಮಂನಿಂದಿರ್ಪದೊರ್ವನಂ| ಮನುವಂಶಕೇತು ನೀನೇತಕ್ಕೆಬಾಯ್ದೆರೆಯದಿರ್ದಪೆಯದೇನದುಸಿರು ‖ ಮನದೊಳನುಮಾನಮುಳ್ಳನಿತಾದೊಡಂಬೇಡ | ನಿನಗದೇನಾದೊಡಂಕುಂದೆನ್ನೊಳೆನ್ನರಸು | ತನದೊಳಾದೊಡಮಿರ್ದೊಡದನರಿದುತಿದ್ದಿಕೊಳ್ವುದುತಕ್ಕುದೆನಗೆಂದನು ‖೪೨‖

ಒಡೆಯನಾನೇಂಬಿನ್ನವಿಪೆನೆಂದುಚರನವಂ | ನುಡಿಯದಿರಲೀನೊಂದುಮಂ ಮುಗುಳ್ ರಾಘವಂ | ನುಡಿನಿಜದೆಕೇಳ್ದಂತೆ ನಿನ್ನತಪ್ಪೇನುಮಿಲ್ಲಂಮಾಜಬೇಡವೆಂದು ‖ ಬಿಡದೆಬೆಸಗೊಳೆ ಮೀರಲಾರದದನಾಚರಂ | ತಡಬಡಿಸುತೊಡನೊಡನೆ ಗದ್ಗದಸ್ವರದಿಂದೆ | ಮಡಿವಳನಹದನನೆಲ್ಲಮನಾಂತಸುಗುಣದಿಂ ಬಿನ್ನವಿಸಿದಂ ಮೆಲ್ಲನೆ ‖೪೩‖

ಬಸವಳಿವನಕಟಕಟ ಹಾ ಎಂದು ರಾಮನಾ | ಲಿಸಿದೊಡನದಂ ಸಿಡಿಲ
ಧಗೆತಟ್ಟಿದವನವೋಲ್ | ಉಸವಸಂಗೊಂಡು ಶೀತೋಪಚಾರಂಗೈದು ಸಂತವಿಸ
ಲಾಚಾರರರು || ಮುಸುಕಿರ್ದ ಕಣ್ಮಲರ್ಗಳಂ ತೆರೆದು ತರದಿಂದೆ | ಬಿಸುಸು
ಯ್ಯುತ್ತೆಪ್ಪರಿಸುತೆದ್ದು ಮೆಲ್ಲನೆ ಬಳಿಕ | ಬೆಸಸಿ ಬೀಳ್ಕೊಟ್ಟನಾ ಚಾರರಂ ಭರತ
ನಂ ಬರವೇಳ್ವುದಿಲ್ಲಿಗೆಂದು ||೪೪||

ದೇವನಾಣತಿಯೆಂದು ಚರರೈದೆ ಬಳಿಕನರ | ದೇವಮಣಿಯೆನಗೆ ಕಣ್ಗ
ತ್ತಲೆಯಿದೇನಡರಿ | ತೋವ್ರೋಪೆ ಮಗೊಂಡೆನೇನಲ್ಲಲ್ಲಧಿಟವಿಡಿಯಿಟ್ಟಳಪ
ಕೀರ್ತಿನಾರಿ || ಪಾವನದಿವಾಕರಾನ್ವಯದೊಳಕಟಕಟ ದು | ರ್ದೈವವಿಮಾಪ
ರಿವಂಚಿಸಿದುದೆನ್ನನೀಗಳೇ | ಗೈವೆನೆನುತಂ ಮರುಳ್ನಾಯ್ಗಚ್ಚಿದನನಂತೆ ಕ
ಳವಳಂಗೊಂಡುಮನದೆ ||೪೫||

ಹರಹರ ಮಹಾದೇವ ತಾನಗ್ನಿಯೊಳಗಂದು | ಪರಿಶುದ್ಧೆಯೆಂದಖಿಲ
ಲೋಕಮಂ ಮೆಚ್ಚಿಸಿದ | ಧರಣಿಜೆಯೊಳಲ್ಲದಿಹ ಹೊಲ್ಲಹವನಾರೋಪಿಸುವೆ
ನೆಂತು ಮೂಢನಾಗಿ || ಧರೆಯೊಳಪವಾದದೂಷಿತನಾಗಿ ಮೆಚ್ಚಿದುರ್ಗಂ | ಕಿ
ರುಮೆನೆಂತೆಣಿಸಿದೊಡೆ ಗುರುಗಳಾಣತಿಯನನು | ಸರಿಸಿ ಜಗವಂ ಮೆಚ್ಚಿಸಲ್ಬಿ
ಡುವುದೇ ಯುಕ್ತಮವನಿಜೆಯನೆಂದು ಬಗೆದು ||೪೬||

ಹಾ ದೇವಿ ವಸುಮತೀ ಗರ್ಭಸಂಜಾತೆ ಹಾ | ವೈದೇಹಿ ರವಿವಂಶಸೌ
ಭಾಗ್ಯ ಲಕ್ಷ್ಮಿ ಹಾ | ಗೋದಾವರೀಪುಳಿನಖೇಲನಪ್ರಿಯಸಖೀ ಹಾ ಹಾ ಜಗನ್ಮಂ
ಗಳೆ || ಹಾ ದಹನಸಾಕ್ಷಿಕಾಶ್ಚರ್ಯಕರಸೌಶೀಲ್ಯೆ | ಹಾ ದಯಿತೆ ಹಾ ಲಲಿತೆ ಹಾ
ಮಹಿತೆ ನಿನಗಮಿಂ | ತೀದಶಾಪರಿಣಾಮವೆನೆ ದುರ್ವಿಭಾವ್ಯಮಾದುದು ವಿಧಿ
ವಿಲಾಸಮಕಟಾ ||೪೭||

ಹಳುವದೊಳ್ಪದುಳದಿಂದೊಂದು ನಿಮಿಷದತೆರದೆ | ಕಳೆದೆನೋ ನಾನಾ
ವಳೊಡನೆ ಬಹುಕಾಲಮಂ | ಬಳಿಯಿಸಿದನೇಹದಿಂ ಕಟ್ಟೆ ವಾನರಬಲವನಾವ
ಳ ನಿಮಿತ್ತದಿಂದೆ || ಜಳಧಿಯಂ ದಾಂಟಿ ಬಲ್ಲ್ಯತನದಿಂದೊರಸಿದೆನೊ | ಖಳರಾ
ಕ್ಷಸರ್ಕಳಾಯುಮವನಾಮನೋರಮೆಯ | ನುಳಿವೆನಾನೆಂತು ನಿರ್ನೆರಮೆ ಕಲ್ಲೆ
ದೆಯನಾಗಸುವನಾದೊಡಮುಳಿಯದೆ ||೪೮||

ಈತೆರದೊಳೆಣಿಸಬಾರದುದನೆಣಿಸಾನದೇಂ | ಘಾತುಕನೊಕಟ್ಟೆಳ್ಚರಿಂ ಸಾಕಿದರಗಿಳಿಯು | ನೋತುವಿನಬಾಯ್ಗಿಪವ್ರೋಲೀವೆನೋವಳಂ ಕ್ರೂರರಾಕ್ಷಸರ ಬಾಯ್ಗೆ || ಏತಕಿನ್ನುಂಬಿರಿಪುದಿಲ್ಲೆನ್ನ ಹೃದಯವವಮು | ವಮಾ ತಿಳಿದೆನಿದುವಜ್ರಮಯವದೇಗೈವೆನೀ | ರೀತಿಸಂಸಾರಮಾಯ ಸಾರವೆಂದೆನುತೆ ಕಯ್ಕದಪಿನೊಳ್ಕಾಂತಿಸುತಿರೆ || ೪೯ ||

ಚರರನುಡಿಯಂಕೇಳ್ದನಂತರದೊಳಲ್ಲಿಗಾ | ಭರತನೈತಂದು ತಾಂಬಂದುವನೆದಿಟ್ಟಸದೆ | ಪಿರಿದೆನಿಸಿದುಮ್ಮಳದ ಕಡಲೊಳಗೆ ಮುಳುಗಿರ್ಪಪೂರ್ವಜನನಾಲೋಕಿಸಿ || ಹರಹರಾಪಸಿದೇನಗ್ರಜಾತನ ಮುಖಂ | ನೆರೆರಾಹುನುಂಗಿರ್ಪ ಚಂದ್ರಮಂಡಲದಂತೆ | ಮೆರೆಯುತಿರ್ದಪ್ರುದಿಂತು ಚಿಂತೆಗೇಂ ಕಾರಣವೆನುತ್ತೆ ಸೈವೆರಗಾದನು || ೫೦ ||

ಅಡಿಗೆರಗಿ ವಿನಯದಿಂ ಕಯ್ಮುಗಿದುಕೊಂಡು ಬಳಿ | ಕೊಡೆಯನಾಸಿದೊ ಬಂದೆನೀತಕ್ಕೆ ಚಿಂತಿಸುವೆ | ನುಡಿನಿನ್ನ ಹರ್ಷರಸದಡೆಯೊಳಾದೇಪಿಸಿದ ನಾವವಂ ಶೋಕರಸವ || ಕಡುಸೊಂಪನಾಂತಸನ್ನಯ ಮೊಗದಸಿರಿವೆಳೆಯ | ನಡಸಿದ ಮನಸ್ತಾಪವಾವುದಿಂತೊಗಿಸಿತು | ನುಡಿಮನಸ್ಸಿನಕಂದುಕುಂದನೊರಸೆಂದು ಸಂತೈಸಿದಂಮತ್ತೆಮತ್ತೆ || ೫೧ ||

ಆವವಂಕೇಸರಿಯ ಬಾಯೊಳಗೆ ತಲೆಯಿಟ್ಟ | ನಾವವಂಮುಳಿದ ಕಾಳಾಹಿಯಂಮೆಟ್ಟಿದವನ | ದಾವವಂ ಧಗಧಗಿಪಕಾಳ್ಗಿಚ್ಚನೊಳಹಾಯ್ದನಾವನಾಂತಂಸಿಡಿಲ್ಗೆ || ಆವಿನುಂ ಧಾತ್ರಿನಾಯಮುಸ್ಸಳಿಸಿತಿಂದಿಗೆ ನ | ಗಾವಕರ್ತವ್ಯಮಾಜ್ಞಾಪಿಸಲ್ವೇಳ್ಕುಮೆಂ | ದಾವೀರಭರತನುರವಣಿಸಿಬೆಸಗೊಳೆ ರಾಮನಿಂತು ಬಿಸುಸುಯ್ದೆಂದನು || ೫೨ ||

ಭರತಕೇಳ್ವೈವತ್ಸ ನಮ್ಮಪೂರ್ವಿಕರೆನಿಸಿ | ದರಸರ್ಕಳಿಂದಣಂನಿಂದೆಯಂ ಪೊರ್ದದೀ | ಧರಣಿಪರೊಳ್ನಿರುಪಮಪ್ರಖ್ಯಾತಿಯಂಪಡೆದ ನಳಿನಸಖವಂಶವ ಕಟಾ || ದೊರೆಕೊಂಡುದೆನ್ನಿಂದಪಖ್ಯಾತಿಯಂ ಬಾಯೆ | ಬರದೆನಗೆಪೇಳ್ವೊಡಾನುಡಿಯನೆಂದಡಿಗಡಿಗೆ | ಮರುಗುತ್ತತಿಪ್ರಯಾಸದಿನೊರೆದನಾ ಗೂಢಚರರರುಹಿದಾಹದನನು || ೫೩ ||

ಆಲಿಪುದುಮಾಹೊಲ್ಲನುಡಿಯುಕಿಡಿಕಿಡಿವೋಗಿ | ಭಾಳಮಂಹಿರಿದುಕೆಂಡೊರೆಯಿಂದದಾವನಂ | ಖೂಳನೀದುರ್ವಾರ್ತೆಯಂ ಕಲ್ಪಿಸಿದನೋತಾನೀಕ್ಷಣದೊಳಾಖುಲ್ಲನ || ನಾಲಗೆಯನೆರಡಾಗೆಸೀಳ್ದು ಬಹೆನೊಡೆಯನೀ | ನೇಳನ್ನಿವಕ್ಕೆ ಚಿಂತಿಸಬೇಡವಿಷಮಮೀ | ಕಾಲವಕಟಕಟನಾಯ್ಬಗುಳದೊಡೆ ದೇವಲೋಕಂಪಾಳಯೆನೆ ಭರತನು || ೫೪ ||

ಜನದಬಾಯ್ಗಡರುಂಟೆ ದುಡುಕದಿರುಲೋಕರಂ | ಜನಮೆಮಗೆಮುಖ್ಯಮೈಲೋಕಮಾರ್ಗದೆನಡೆವ | ಜನಪತಿಗೆಸತ್ಕೀರ್ತಿಯಿಹದಲ್ಲಿ ಪರದಲ್ಲಿಸದ್ಗತಿಯುಮುಂಟಾತನ || ಜನಪವಕ್ಕಂಹಾನಿಯಿಲ್ಲಪದದಿಂದೆ ನಾಂ | ಜನಪರೀವಾದದುಷ್ಕೀರ್ತಿಗೊಳಗಾಗದೆಯೆ | ಜನಕಜಾತೆಯನಸುವನಾದೊಡಂ ಬಿಡುವುದೇಲೇಸೆಂದನಾರಾಮನು || ೫೫ ||

ಕಿವಿಗಳಂಭರತನೆರಡುಂ ಕಯ್ಗಳಿಂಮುಚ್ಚಿ | ಶಿವಶಿವಾ ನಾಂ ಕೇಳಲಮ್ಮೆನೀಕಠಿನವಚ | ನವನಣ್ಣ ಕೇಳ್ಬನ್ನಪವನಗ್ನಿಶುದ್ಧೆಯಾಗಳನಂದುಲಂಕೆಯಲ್ಲಿ || ದಿವಿಜಪಾಲನುಮಬ್ಜಭವನುಮಾಗಳಿತಂದು | ವಿವರಿಸಿದಪರಿಯಿಂ ಮಹಾಪತಿವ್ರತೆಯೆನಿಸಿ | ದವನಿಜೆಯನೋರ್ವಖುಲ್ಲನ ನುಡಿಗೆಬಿಡುವರೇಪೇಳಲೇಂಪಿರಿಯರ್ಗೆನೆ || ೫೬ ||

ಆನುಡಿಯನಾಲಿಸಿ ರಘುಪ್ರವರನೆಲೆವತ್ಸ | ನೀನೊರೆದುದೆಲ್ಲಮುಂ ದಿಟಮಾದುದರಿದಿರ್ಪೆ | ನಾನುಂಮಹಾಪತಿವ್ರತೆ ಪತಿಪರಾಯಣೆ ಸುಶೀಲೆ ಪಾವನೆಯುಮೆಂದು || ಜಾನಕಿಯನಾದೊಡಂ ಬಂದಮೇಲಪಕೀರ್ತಿ | ಮಾನಿನಿಯನಾದೊಡಂ ಸೋದರರ ನಾದೊಡಂ | ತಾನಸುವನಾದೊಡಂ ಬಿಡುವೆನೆನ್ನಂ ತಂದೆಸತ್ಯಕ್ಕೆ ಬಿಡಲಿಲ್ಲವೇ || ೫೭ ||

ಆದುದರಿನೀಗಳೇ ನೀನೆನ್ನಕೊರಳನು | ಚ್ಛೇದಿಸಿಬಿಡಸಿಯಿಂದಮಿಲ್ಲದೊಡೆ ಸೀತೆಯಂ | ವಾದಿಸದೆ ಬೇರೊಂದನಡವಿಯೊಳ್ಬಿಟ್ಟುಬಾರೆಂದು ನೇಮಿಸೆ ಭರತನು || ಖೇದಮಂನೆರೆತಳೆದು ಮನದೊಳಂತರ್ವ್ಯಥಿ | ಯಾದಿಳಾಸುತೆಯು ನಡವಿಯೊಳಂತುಬಿಡುವೆನಾಂ | ಹಾದೈವವೇಯೆಂದು ಬಸವಳಿಯೆ ಸಂತೈಸುತಾತನಂ ರಾಮನೊಡನೆ || ೫೮ ||

ಪಡಿಯರಂಗೊರೆಯೆ ಶತ್ರುಘ್ನ ಲಕ್ಷ್ಮಣರ ನೀಂ । ಗಡೆಬರಿಪ್ಪುದೆಂದು
ತಡೆಯದೆ ಬರಿಸಲವನವದಿ । ರೊಡನೆ ಮೈಮರೆದು ತಲೆವಾಗಿ ಚಿಂತಿಸುತಿರ್ಪ
ರಾಮನಂ ಮೂರ್ಛೆದಿಳಿದು ॥ ನಿಡುಸುಯ್ಯುಡುತ್ತಿರ್ಪಭರತನಂಕಂಡಿದೇಂ ।
ನಡಸಿತತ್ಯಾಹಿತಂ ತಪ್ಪಾರದೆನುತೆಸುಗಿ । ದಡಿಗೆರಗೆ ಹರಸಿಕುಳ್ಳಿರಿಸಿಕೊಂಡೆ
ಡೆಯೊಳಂತೆಂದನಾ ರಘುವೀರನು ॥೫೯॥

ಅನುಜಾತರೇಂಕೇಳಿ ರಿಳೆಯೊಳಮಲಪ್ರಸರ । ವೆನಿಸಿರ್ದತರಣಿವಂಶದ
ಕೀರ್ತಿಚಂದ್ರಿಕೆಗೆ । ಜನದಹೊಲ್ಲಹವೆಂಬ ಮೋಡವಾವರಿಸೆ ನೆರೆಮಸುಕಿ
ದುದು ಕಗ್ಗತ್ತಲೆ ॥ ಎನುತರುಹಿ ನಡೆದನುವನಪವಾದದೂಷಿತೆಯು । ಜನಕ
ಜೆಯನೆಣಿಸದಂತರ್ವತ್ನಿಯೆಂದುಕಾ । ನನಕೆ ನೀವೀಗಳೇಬಿಟ್ಟುಬಂದಲ್ಲದೀ
ಮನದಕಲುಷಂ ಕಳೆಯದು ॥೬೦॥

ಎಂದುದಂಕೇಳ್ದು ಮುಂದೆಸೆಯತೋರದೆ ಲಕ್ಷ್ಮ । ಣಂದುಗುಡವಾಂ
ತುಮುನ್ನುಂಡ ವನವಾಸಸುಖ । ದಿಂದೆ ಪಿರಿದೆನಿಪಿದೊಂದುಂಬೇರೆ ಕುಶಲ
ಮೊಗೆತಂದುದೇಹಾ ಕಟಕಟಾ ॥ ಎಂದು ಕಂಬನಿದುಂಬಿ ತಲೆವಾಗಿ ಕಡುಚಿಂ
ತೆ । ಯಿಂದಸಹ್ಯತಸ್ವಾಂತ ನಿರಲವನತಮ್ಮನುರೆ । ದಂದುಗಂಗೊಂಡುನಿಜ
ಮಾನಸದೊಳಾಕಪಟ ಮಾನವಂಗಿಂತೆಂದನು ॥೬೧॥

ಶ್ರುತಿಯುಪ್ರಮಾಣವೇಂ ದುರ್ಜನಂನಿಂದಿಸಿದೊ । ಡತಿಗಳೆಯೆ ಗೂಗೆರ
ವಿರುಚಿಯನಾರೊಪ್ಪುವ । ಕ್ಷಿತಿಯೊಳೊರ್ವಂಪಾಪಿ ಮುಟ್ಟಿದೊಡೆಗಂಗೆಯಂ
ಲೋಕಂಪರಿಗ್ರಹಿಸದೇ ॥ ಅತಿರೋಷದಿಂ ಪೃಜ್ಞೆಯುಳದಾವನೋತನ್ನ ।
ಸತಿಯನೊಲ್ಲದೆ ಖುಲ್ಲನಾಡಿದುದೆಪವಣೆಂದು । ನುತಸತ್ಯಶೀಲೆಯಂ ವಸುಮ
ತೀಬಾಲೆಯಂ ಧರ್ಮವೇಬಿಡುವುದಕಟಾ ॥೬೨॥

ಅದರಿಂದವೊತ್ತರಿಸಿ ಮನದಕಾಲುಷ್ಯಮಂ । ಸದುದಾರಭಾವಶುದ್ಧಿ
ಯನಾಂಪುದೆಂದು ತಿಳು । ಹಿದನದಂಕೇಳ್ದುವತ್ಸ ಬಲ್ಲೆನಾನಖಿಲ ನೀತಿಧರ್ಮ
ಗಳನೆಂದು ॥ ಬದಗಿದಗ್ಗದ ದುಗುಡದಿಂದೆ ಭರತಂಗೊರೆದ । ಹದನನೆಂದೊಡೆ
ಶಿವಶಿವಾಯೆಂದು ಕಿವಿಮುಚ್ಚಿ । ಕುದಿಯುತ್ತೆಮನದೊಳತಿಕರ್ತವ್ಯತಾ ಮೂ
ಢನಾದನಾ ಶತ್ರುಘ್ನನು ॥೬೩॥

ಬಿಡನೆಲಕ್ಷ್ಮಣನಾಂತ ದುಗುಡದಿಂದಣ್ಣ ಕೇ | ಳೊಡೆಯನಾಳ್ಕೆಯೊಳಾವನಂ ಬಾಧಿಸುವನಿಲ್ಲ | ಮಡದಿಯರ ನೀಧರ್ಮರಾಜ್ಯದೊಳ್ಮತಿವಿಭ್ರಮಮೊ ಕನಸೊ ಮಡಿವಳಂಗೆ || ಅಡಸಿಕರ್ಗುಮವನನಿಲ್ಲಿಗೆ ಕರೆಯಿಸುವೆನವನ | ನುಡಿಯದೇಪರಿಯದೊವಿಚಾರದಿಂ ತಿಳಿವೆನಾಂ | ದುಡುಕಬಾರದು ಬಗೆಯದೆ ಸೆಗಿದುದು ಬಳಿಕವಮಾನಸವನುರೆ ಚುರ್ಚುವುದಲೆ ||೬೪||

ಮಾತೆ ಧರಣೀಜಾತೆ ಮೂಲೋಕದೊಳಗೆ ವಿ | ಖ್ಯಾತೆ ಪಾತಿವ್ರತ್ಯಸತ್ಯಸೌಶೀಲ್ಯದೊ | ಳ್ಪ್ರಾತೆ ರವಿವಂಶದರಮನೆಗೆ ಮಂಗಳಭೂತೆ ಹಾಹಾವಿನೀತೆ ಸೀತೆ || ಈತೆರದ ಲೋಕಾಪವಾದಕ್ಕೆ ಗುರಿಯಾಗೆ | ಭೂತಲದೊಳಂಗನಾಜನದ ಮರ್ಯಾದೆಯಿ | ನ್ನೇತಕ್ಕೆ ಕಟಕಟಾ ವಿಧಿಗತಿವಿಚಿತ್ರಮಾದುದು ಬಗೆಯೆತಿಳಿಯಲರಿದು ||೬೫||

ಎನ್ನೊಳೊಲ್ದಲೆದೇವ ನೀನಾಲಿಸುವುದೆನ್ನ | ಬಿನ್ನಪವನೆಂಬನಿತರೊಳ್ ರಾಮ ನನುಜನೀ | ವಿನ್ನೆಗಂಮಾರುತ್ತರವನಿತ್ತರಲ್ಲೆನ್ನನುಡಿಗಿಂದು ಹಿಂದೆಗೆವರೆ || ಮುನ್ನಡಸಪೂರ್ವರಾಮನ ಶಾಸನವನೆಂದಿ | ಗಂ ನಿಜಸ್ಥಿತಿಗದೇಗೈದೊಡಂ ಕೇಡಿಲ್ಲ | ಮಿನ್ನೊಂದನೆಣಿಸಬೇಡೈ ಸೈಸಲಾರೆನೀಗಾರಣದ ಬೇಗುದಿಯನು ||೬೬||

ಎನೆಮೀರಲಾಗದೆಂತಾದೊಡಂ ಗುರ್ವಾಜ್ಞೆ | ಜನನಿಯಂ ಪಿತಾಜ್ಞೆಯಿಂದೆ ಮುಂ ಜಮದಗ್ನಿ | ಮುನಿಸುತಂ ಘಾತಿಸಿದನಿಲ್ಲವೇತಾನೆಂದು ಲಕ್ಷ್ಮಣಂ ಮನದೊಳೆಣಿಸಿ || ಇನಿಸುಮನುಮಾನಿಸದೆ ದೇವನಾಂನಿನ್ನಶಾ | ಸನವನಿದೊ ತಲೆಯೊಳೇರಿಸಿದೆನೆಂದೆದ್ದು ಪದ | ವನರುಹಕ್ಕೆರಗಿದಾಬಳಿಕವಂ ಗಿಂತೆಂದನಾ ದಶಗ್ರೀವಹರನು ||೬೭||

ಇಂದೊಲ್ದು ವೈದೇಹಿನಡೆದು ಕಾಂತಾರಕಭಿ | ವಂದಿಸಿ ಮಹಾಮುನಿಸತೀಜನವನವದಿರಭಿ | ನಂದಿಸುತೆ ವಿರಚಿಸುವ ಹರಕೆಯಂ ಕಯ್ಕೊಂಡವಗೆರ್ ಬೇಕಾದುದಿತ್ತು || ಬಂದೆರಡುದಿವಸ ಮವರೊಡನಿರ್ದುಬರ್ವೆಳ್ಕೆ | ಮೆಂದು ಬಯಸುತ್ತಿರ್ಪಳಾನೆವದಿ ನವಳನಿ | ಲ್ಲಿಂದಡವಿಗೊಯ್ದುನೀಂ ಗಂಗಾತಟಪ್ರಾಂತವನದಲ್ಲಿ ಬಿಟ್ಟುಬಹುದು ||೬೮||

ಇಂತೆಂದು ಬೆಸಸೆ ಲಕ್ಷ್ಮಣನೊಡೆಯನಾಜ್ಞೆಯಿಂ । ದಾಂತ ಕಡುದುಮ್ಮಾನದಿಂದಿರದೆ ರಘುಪುಂಗ । ವಂತಳರ್ವ್ವಮಂತನ್ನ ಮಂದಿರಕೆ ಬಿಸುಸಯ್ಯದೆ ತೊಡನೆಯೆ ಸುಮಂತ್ರನಿಂದೆ ॥ ಕಾಂತಮಣಿ ರಥವ ಸನ್ನಣಗೊಳಿಸಿ ವೈದೇಹಿ । ಯಂತಃಪುರಕ್ಕೆ ನಡೆತಂದನೆನ್ನನೆ ದೈವ । ಮಿಂತಪ್ಪ ಕಾರ್ಯಕ್ಕೆ ನೂಕಿತೇ ಹಾಯೆಂದು ತಳೆವಾಗಿ ಚಿಂತಿಸುತ್ತ ॥ ೧೯ ॥

ಮೊದಲೆ ವಿಪಿನಪ್ರಯಾಣಕೆ ತವಕಿಸುತ್ತ ಮುನಿ । ಸುದತೀಜನಕ್ಕೀವ ವಸ್ತು ಸಂಭಾರಮಂ । ಪದಪಿಂದೆ ಸಜ್ಜುಗೊಳಿಸುತ್ತೆಸೆವ ಮಣಿಪೀಠದೊಳ್ಮಂಡಿಸಿಹ ಸೀತೆಯ ॥ ಪದಕಮಲಮಂ ಕಂಡು ಮಣಿದೆಲೌ ಮಾತೆ ನೀ । ಮುದದೊಳಾರ್ಯ ರಾಮಚಂದ್ರಮನ ನೀನೆಳಸಿದಂ । ತಿದೊ ನಿನ್ನ ನಡವಿಗೊಯ್ಯಲ್ಬಂದೆನಾಂ ರಥಂ ಸನ್ನದ್ಧವಾಗಿರ್ಪುದು ॥ ೨೦ ॥

ಎಂದು ಬಿನ್ನವಿಸೆ ಲಕ್ಷ್ಮಣನನಂ ಕೇಳ್ದುಳಾ । ನಂದಿನಿಯತೀವ ಹರ್ಷಿತೆಯಾಗಿ ಕಯ್ಮುಗಿ । ದಿಂದೆನ್ನ ಮನದ ವಾಂಛಿತವೊಂದು ತತ್ಕ್ಷಣದೊಳತ್ತೆ ವಿರಮೂವರಡಿಗೆ ॥ ವಂದನಂಗೈದು ಪಡೆದವದಿರಾಣತಿಯನಾ । ನಂದದಿಂ ನೆಸೆಯುತ್ತೆ ನಿಜಪತಿಯ ಪಾದಾರ । ವಿಂದಮಂ ಮನದೊಳಗೆ ಸನ್ನದ್ಧೆಯಾಗುತ್ಸುಕಂಬಡುತೆ ಪೊರಮಟ್ಟಳು ॥ ೨೧ ॥

ಬರುತೆ ಹೊಸ್ತಿಲೊಳೆಡಹಿದೊಡಮದಂ ಲೆಕ್ಕಿಸದೆ । ಪಿರಿದುಮೌತ್ಸುಕ್ಯದಿಂ ಪರಿಜನದ ಕಯ್ಯಿಂದೆ । ತರಿಸಿ ಕೌಶೇಯವಸನಾಭರಣ ಚಂದನಾಗರು ಮುಖ್ಯ ವಸ್ತುಗಳನು ॥ ಇರಿಸಿಕೊಂಡೇರಿದಳ್ತೇರನವನಿಜೆ ಬಳಿಕ । ಶರಚಾಪಧರನಾಗಿ ಲಕ್ಷ್ಮಣಂ ಮುಂದೆ ಕು । ಳ್ಳಿರೆ ಸುಮಂತ್ರಂ ಮೆಲ್ಲಮೆಲ್ಲನೊಡನಾತೇರನಲ್ಲಿಂದೆ ನಡೆಯಿಸಿದನು ॥ ೨೨ ॥

ತೋರಿಬರೆ ಹಲವು ದುಶ್ಶಕುನಂಗಳಾಗಳಾ । ದಾರಿಯೊಳಗಾದೇವಿಯಿದು ನಿರ್ನಿಮಿತ್ತಕೇಂ । ಕಾರಣವೊ ಮೈದುನಾ ನೋಡು ನೀನಾರ್ಯಪುತ್ರಂ ಕ್ಷೇಮದಿಂದಿರ್ಪನೆ ॥ ಭೂರಿಭಯಮವಹುದೆನಗೆ ಭರತನುಂ ಶತ್ರುಘ್ನಂ । ತಾರನುಂ ಗುರುಜನರುಮಿರ್ದಪರೆ ಸೇವದಿಂ । ದಾ ರಾಜಧಾನಿಗೇನಾದೊಡಂ ಕೇಡುಂಟೆ ಪೇಳೆಂದು ಬೆಸಗೊಂಡಳು ॥ ೨೩ ॥

ಆವಚನಮಂ ಕೇಳ್ದು ಲಕ್ಷ್ಮಣನೆಲೌಮಾತೆ । ಯೋವೇಳ್ವೆನಾನೆಂದು ಚಿಂತಿಸುತ್ತು ಸಿಕನಿರೆ । ಭೂವಧೂಜಾತೆಯುಥನಾ ಪತಿವ್ರತೆಯರ್ಗೆ ಪತಿಪಾದಸನ್ನಿಧಿಯೊಳು ॥ ಆಪಗಮುಮಿರ್ದಪುದೆ ಧರ್ಮವದರಿಂದೆನ್ನ । ಜೀವಿತೇಶ್ವರನ ಪಾವನಪಾದಪಂಕೇಜ । ಸೇವೆಯುಂಬಿಟ್ಟು ಬಂದೆನಗಿಂತು ದುಶ್ಶಕುನವಪ್ಪುದಾಶ್ಚರ್ಯವೇನು ॥ ೨೪ ॥

ಮಂಗಳಂಸರ್ವಥಾತಾನಕ್ಕೆ ರಾಮಚಂ । ದ್ರಂಗೆನುತೆ ಹಾರೈಸುತಾಧರಣಿಸುತೆ ತಾಪ । ಸಾಂಗನೆಯರಂನೋಡಲೌತ್ಸುಕ್ಯದಿಂದಾಂಟಿ ಪಲಗಾವುದಂಪಥವನು ॥ ಕಂಗೊಳಿಸುವಿಕ್ಕೆಲದ ವಿವಿಧಫಲಕುಸುಮ ವೃ । ಕ್ಷಂಗಳಂಶುಕಭರದ್ವಾಜಾದಿಬಹುವಿಧ ವಿ । ಹಂಗಮಂಗಳ ನೀಕ್ಷಿಸುತ್ತೆ ಪಾವನಜಾಹ್ನವೀತೀರಮಂ ಸಾರ್ದಳು ॥ ೨೫ ॥

೩ ನೆಯ ಸನ್ಧಿ ಸಂಪೂರ್ಣಂ.

ಸನ್ಧಿ ೩ ಕ್ಕೆ ಪದ್ಯಗಳು ೧೩೬ ಕ್ಕೆ ಮಂಗಳಮಸ್ತು.

ನಾಲ್ಕನೆಯ ಸನ್ಧಿ.

ಸೂಚನೆ || ಆಮಹಾಕಾನನಾಂತರದೆಸೌಮಿತ್ರಿ ತೊರೆದ | ಭೂಮಿಸುತೆ ಸೇರಿವಲ್ಮೀಕಸಂಭವನ | ಹಾಮುನಿಪನಾಶ್ರಮವನಲ್ಲಿನಂದನರತ್ನಯುಗಳವುಂ ಪ್ರಸವಿಸಿದಳು ||

ಮುಂದೆಕೇಳೆಲೆಮುನಿಪಕಂಡೊಡನೆಸೀತೆರಘು | ನಂದನಿಳಿದುಪೂಜಿಸಿನಮಸ್ಕರಿಸಿದೇವನದಿ | ಯಂದಾಂಟಿದೋಣಿಯಿಂಬಳಿಕಕಲ್ಮುಳ್ಗಳಿಂದಟ್ಟೈತಹ ವನಪಥದೊಳು || ಸುಂದರಮುಖಾರವಿಂದಂಬಾಡೆಬಿಸಿಲಧಗೆ | ಯಿಂದಗುಂದಲೆ ಯಾಯಸಂಗೊಂಡುಗರ್ಭಭರ | ದಿಂದೆಮೆಲ್ಲಮೆಲ್ಲನೈದುತ್ತೊಡನೆಬರುತಿರ್ದ ಸೌಮಿತ್ರಿಗಿಂತೆಂದಳು ||೧||

ಆವುದೀದಾರಿಪೇಳೆತ್ತಲಿದುಪೋಪುದು | ದೇವರಾಮುಂದಾವುದುಂಕಾಣದಿರ್ಪುದುಮತ | ಪೋಪನಂಬಹುಳತರಂಬರಂ ಬಂದೆವಿಲ್ಲಿಂಮುಂದೆಮುಂದೆ ನೋಡೆ || ಈವನಮತಿಭೀಕರವೆನಿಸಿದಪುದು ನಾ | ನಾವಿಧದ ಮರಗಿಡುಗಳಿಂದೆ ಪಟ್ಟೈಸಿತ್ತಾಗಿ | ಕಾವಳಂಗೊಂಡಹಹ ನಡೆನಡೆದುಪಿರಿದಾಯಸಂಗೊಂಡೆ ನಾನೆಂದಳು ||೨||

ಆಮಾತನಾಲಿಸಿಯುಮುಸಿರದೆಸೊಂದುವಂ | ಸೌಮಿತ್ರಿ ಸುಮ್ಮನಿರೆ ತಡೆದುಕೊಂಡುಕ್ಕಿಬ | ರ್ಪಾಮಹಾದುಃಖದಿಂತಲೆವಾಗಿ ಮುಕ್ಕುಳಿಸಿಕಣ್ಗಳೆರಡುಂನೀರನು | ಭೂಮಿಸುತೆಕಂಡದಂಸುಗಿದುವತ್ಸಲಕ್ಷ್ಮ | ಣಾವಮಾನವೇಕಿಂತುತೋರ್ಪುದಿಲ್ಲನಗೆನಿಂ | ಸೌಮನಸ್ಯದೊಳಿರ್ಪ ಲಕ್ಷಣವೆಸಾಜದುಸಿರೇಕೆಶೋಕಿಪೆಯೆಂದಳು ||೩||

ತಡೆಯಲಾರದೆ ಮನದೊಳಾದುಃಖವಂಬಳಿಕ | ನುಡಿಯಲಾರದೆಮಿರಲಾರದೆತದಾಜ್ಞೆಯುಂ | ತತಬಡಿಸುತಡಿಗಡಿಗೆಗದ್ಗದಸ್ವರದೆತಲೆವಾಗಿಕಯ್ಮುಗಿದುಕೊಂಡು || ಒಡೆಯನಾನೆಯಮವಂಬಿನ್ನವಿಸೆಲಕ್ಷ್ಮಣಂ | ಮಡದಿಮಣಿ ಕಾದಕಾಬೆರ್ಗೊಂಜಲಾಕೆಯುಮಪ್ರೊಲಾ | ನುಡಿಕಿವಿಗೆಬಿದ್ದೊಡನೆ ಹರಹರಾಪರಮೇಶ್ವರಾಎಂದು ಬಿದ್ದಳಿಳೆಗೆ ||೪||

ಬರಸಿಡಿಲ್ತಾಗೆಭೂಮಿಗೆಬಿರ್ದ್ದಸ್ತ್ರರದಂಗೋ | ಪುರದ ಚೆಲ್ವಾಂತಪೊಂಬು
ತ್ಥಳಿಯೆಕಾಡಾನೆ | ಕರದಿಂದೆಕಿತ್ತಿಟ್ಟಪದ್ಮಲತೆಯೋಸುರಪಶಾಪದಿಂಸಗ್ಗದಿಂ
ದೆ || ಧರೆಗುರುಳ್ದಸ್ವರ್ಗಸುರಸುಂದರಿಯೊಎಂಬಂತೆ | ದೊರೆಕೊಂಡುಮೂರ್ಛೆ
ಯಂಕೆಡೆದಿರ್ದಸೀತೆಯಂ | ಸುರದೆಂಗೆಗಳಂಬೀಸಿನೀರ್ದಳಿಯೆಲಕ್ಷ್ಮಣಂತಿಳಪು
ದಾಮೂರ್ಛೆತರದೆ ||೫||

ಕಣ್ಮಲರ್ಗಳಂತೆರೆದುತೆಪ್ಪಗಿಸಿಕೊಂಡೆದ್ದು | ಪೆಣ್ಮಣಿಯಿದೇನೆನಗೆದು
ಸ್ಸ್ವಪ್ನವಲ್ಲಕರೆ | ಗಣ್ಮಿರುದಮಿಥ್ಯಾಪವಾದವಿದುಪತ್ನಿನೆಂದಿಗಂಪುಸಿಗನಲ್ಲ||
ಅಣ್ಮುಪಿರಿದೆನಿಸಿಕರ್ಗನುಕಟದುರ್ವಿಧಿಯುಕ | ಯುಗ್ಗಣ್ಮಿದುದಕೇಗ್ಗೆವೃದಲ್ಲಿದುಃಖ
ಕುನಂಗ | ಳುಣ್ಮಿದುದಕೇಸಲವೆ ಹಾಯೆಂದು ಮೂರ್ಛೆಯಂಪಡೆದುಮತ್ತಂ
ಕೆಡೆದಳು ||೬||

ಬಳಕಸಂತವಿಸೆಮೊದಲಂತೆ ಸೌಮಿತ್ರಿಜಂ | ಗುಳತಿಳಿದುಸೋತಕ
ಯುಮ್ಮಳಿಕೊಂಡೊಯ್ಯನೆ | ದ್ದಳಲುತಾಸ್ಯವನಳುರ್ದು ಕಯ್ಗಳಂತಲೆವಾಗಿ
ನಿಂದವೈದುನನನೋಡಿ || ಜಳನಿಧಿಯೊಳನಗೋಸುಗವೆಸೇತುವಂಕಟ್ಟಿ |
ಖಳನಿಶಾಚರಕುಲವನಂತೊರಸಿದೆನ್ನರಸ | ನುಳದನೆಂತೆನ್ನನಾಮುಡಿವಳ್ಳನಳಿ
ವಾತಿಗೆಂದ್ಯೆದೆ ರೋದಿಸಿದಳು ||೭||

ಆವುದುಂತಪ್ಪೆನ್ನೊಳಿಲ್ಲದುದರಿಂದೆನ್ನ | ಭಾವದೊಳಗೀಗಳುಂಭಯ
ವೊಂದಿನಿಸುಮಿಲ್ಲ | ಸಾವನೊಂದುವುದಾದೊಡಂತನುವಿದಿಂದೆಶೋಕಿಪಳಲ್ಲನಾ
ನದಕ್ಕೆ||ದೇವರಾಕೇಳಾದೊಡೆಲ್ಲರುಂಲೋಕದೊಳ | ಗೀವಾರ್ತೆಯಂಕೇಳ್ದು
ಡಪಹಾಸಗೈವುದ | ಕ್ಕೇವೇಳ್ವೆನೆಂತುನಿರ್ಲಜ್ಜೆಯಾಗವಮಾನದಿಂಜೀವಿಸುವೆ
ನೆಂದಳು ||೮||

ಮೊಳೆತುಹಾನಾಥಮುರಿದಂದು ಹರಧನುವನ | ಗ್ಗಳಿಸಿಬೆಳದಾ ಚಿತ್ರ
ಕೂಟವಾಸದೊಳನಗೆ | ಕಳುಹುವಂದಂಗುಳಿಯುಕವಂಕವಲುತ್ತ ಪುಸಂಹಾ
ರವಾದಬಳಿಕ || ತಲೆಯುರಿವಬಳಿಕನಾನಗ್ನಿಯಂಪೊಕ್ಕಂದು | ತಳರಿಡಿದು
ದೋಹವಂಗೊಂಡಂತೆರಾಜ್ಯವುಂ | ಗಳಸುಖದೊಳಿರ್ಪಂದು ಪ್ರೀತನಿನ್ನನುರಾ
ಗತರುಎಂತುಹಾಪನ್ನುತ್ತದೇ ||೯||

ಎನಗೆಪತಿಕುಲದೆವಾಸಂತಪ್ಪಿದಾಬಳಿಕ | ಜನಕನಪವಾದದೂಷಿತೆಯನೆನ್ನಂತನ್ನ | ಮನೆಯಂಪುಗಿಪನೆಂತುಬಾಳ್ವೆನಾನೆಲ್ಲಿಹಾವತ್ಸಪೇಳೆನ್ನರಸನು|| ನಿನಗೆನ್ನಶಿರವನರಿಯೆಂದು ನೇಮಿಸದೇಕೆ | ವನವಾಸಮಂ ಕರುಣಿಸಿದನೆನಗೆ ತೊರೆವೆನಾ | ನೆನೆ ಸುಖದೊಳಸುವನಾದೊಡಮಕಟ ಗರ್ಭವತಿಯಾಗಿರ್ಪೆನೇಗೈವೆನು || ೧೦ ||

ಮಡಿವಳಂತಾಂನುಡಿವುದೆಂದೊಡೇ ನಿಲ್ಲದಾ | ನುಡಿಯನದನಾಲಿಸುವುದೆಂದೊಡೇಂರಾಘವಂ | ಘಡಘಡಾಭಾವಿಸಲಿದೆಲ್ಲಮುಂದೈವಕೃತಮಲ್ಲದಿನ್ನೊಂದುಮಲ್ಲ || ಪ್ರೊಡವಿಯೊಳಗಾಂಜನ್ಮಮಂಪಡೆದುದೇಕಷ್ಟ | ಪಡುವುದಕ್ಕಾದುದಿನ್ನಾಡಿಫಲವೇನಕಟ | ಮಡದಿಯರ ಜನ್ಮಮೇಂ ಕೆಟ್ಟುದೀಹೊತ್ತಿಗೆನ್ನಯಬಾಳ್ಕೆಹಾಮಾಗಿದುದೇ || ೧೧ ||

ಬಿಡುಬಿಡಿನ್ನೇಕೆನೀನಳಲುತ್ತೆನಿಂದಿರ್ಪೆ | ಯೊಡೆಯನಾಣತಿಸಿದಂತೆನ್ನನುಳಿದಿಲ್ಲಿನೀಂ | ನಡೆಪರಾಧೀನನಲ್ಲಪಿಂಪಿರುಂಗಿಲ್ಲದೊಡೆಮುನಿಯನೇರಘುವೀರನು || ಬಿಡದೆನಾಂಪತಿಪಾದಯುಗಳಮಂನೆನೆಯುತೀ | ಯಡವಿಯೊಳ್ದುಷ್ಟಂಗಳಹಮೃಗಂಗಳಬಳಗ | ದೊಡನೆವಾಸಿಸುವೆನೆಲೆವತ್ಸ ಲಕ್ಷ್ಮಣನಿನಗೆ ಮಾರ್ಗದೊಳ್ಶುಭವಾಗಲಿ || ೧೨ ||

ಎನ್ನ ಬಿನ್ನಪವನಿದನೆಲೆವತ್ಸಲಕ್ಷ್ಮಣಾ | ಬಿನ್ನವಿಸು ಕುಲಗುರುಗಳಿದಿರಾರ್ಯಪುತ್ರಂಗೆ | ಸನ್ನುತಚರಿತ್ರಂಗೆ ನಿನಗೆ ಶುಭತತಿಯಕ್ಕೆಮಿಥ್ಯಾಪವಾದದಿಂದೆ || ಎನ್ನನುಳಿದಿರ್ಪೆಮದ್ವಿಧಿದುರ್ವಿಲಾಸವಿದು | ನಿನ್ನಡಿಗಳಂನೆನೆಯುತೀವನದೊಳಿರ್ಪೆನಾ | ನೆನ್ನನಾಪದ್ಗತರುಪಾಖ್ಯಾನದೊಳ್ನೆನೆವುದೆನ್ನಬಿನ್ನಪವಿದೆಂದು || ೧೩

ಮತ್ತೆಬಿನ್ನವಿಸುಕೌಸಲ್ಯೆಮೊದಲಹಮೂವ | ರತ್ತೆವಿರ್ಗೆನ್ನನಂತರ್ವತ್ನಿಯಾದವಳಂ | ಪೊತ್ತಮಿಥ್ಯಾಪವಾದದಿನೊಡೆಯನಡವಿಗಟ್ಟಿದನೆನ್ನದುರ್ವಿಧಿಯಿದು || ಚಿತ್ತದೊಳ್ನಿಮ್ಮಡಿಗಳಂನೆನೆಯುತಾವಾಸಿ | ಸುತ್ತಿರ್ಪೆನಿಲ್ಲಿನಾನೆಂದೆಂಗಿದಳ್ನಿಮಗೆ | ನುತ್ತೆಪೋಗಯ್ಯನೀನಿರುರಾಮಚರಣಾಬ್ಜಸೇವೆಯೊಳ್ನಿರತನಾಗಿ || ೧೪ ||

ಎನುತೆನುಡಿದಾಪ್ರೌಢೆಮೆಯ್ಮಣುಗಿಮಿಡಿಯುತ್ತೆ ಕಂ । ಬನಿಯನಡಿಗಡಿಗೆ ನೆರೆಧೀರ್ಘಮೆನೆ ಬಿಸುಸುಯ್ಯು । ತನಿಯನಂಮನದೊಳಗೆ ಜಾನಿಸುತೆ ಕಯ್ಯಲ್ಲಿ ಕದಪಿಟ್ಟುರೋದಿಸುತಿರೆ ॥ ಜನನಿ ನಿನ್ನಕ್ಕಿತ್ತಿಯುಂ ಚಿನ್ನ ವಿಪಿನೆಲ್ಲರ್ಗೆ । ಮೆನಗೆ ನೇಮವೆನಿನ್ನನಷ್ಟದಿಕ್ಪಾಲರುಂ । ವನದೇವತೆಯುಮೊಲ್ದು ರಕ್ಷಿಸಲೆನುತ್ತೆ ವೆಡಮೆಟ್ಟಿದಂರೋದಿಸುತ್ತೆ ॥ ೧೫ ॥

ಮರೆಯಾಗುವನ್ನೆಗಂ ಲಕ್ಷ್ಮಣಂ ಪೋಪುದನೆ । ನಿರುಕಿಸುತ್ತಾ ಭೀರು ಘೋರಮೆನಿಪಾವನಾಂ । ತರದೊಳಿರಲಾರದೊರ್ವಳೆ ಭೋರ್ಗರೆವ ಮೃಗಗಳಬ್ಬರವನಾಲಿಸುತ್ತೆ ॥ ಮರಮರಗಳಂ ಸಾರ್ದು ಶೂನ್ಯಶೂನ್ಯಂಗಳಾ । ಗಿರುವದಿಕ್ಕುಗಳ ನೀಕ್ಷಿಸುತೆ ಕಯ್ಕಾಲ್ನಡುಗು । ತಿರೆ ಸುಗಿದು ತರಹರಿಸಲಾರದಾ ದುಃಖದುಂ ಹಾಎಂದು ಬಸವಳಿದಳು ॥ ೧೬ ॥

ಬಳಿಕಲ್ಲಿ ತೀಡೆ ವಿಧಿಯೋಗದಿಂ ಬಹುಳಶೀ । ತಳಮಾದ ನೀರಮೋಲಣಗಾಳಿ ಲಲಿತಾಂಗಿ । ತಿಳಿದು ತರತರದಿಂದೆ ಮೂರ್ಛೆಯುಂ ಕಂದೆರೆದು ಹಾರಾಮರಾಮ ಎಂದು ॥ ಕಳವಳಂಗೊಂಡು ಹಾ ಪ್ರಾಣಕಾಂತನೆಯೆನ್ನನುಳಿವರೇನಿರ್ದರಂ ನಿನ್ನ ಸುಮನಸ್ತ್ರಣಂ । ತಿಳಿದಿರ್ದೆಯಲೆ ಕರಂ ಪ್ರಿಯೆಯೆಂದು ದೂರವಾಯ್ತೆ ನೇಹಮಿಂಗಳಿಂತು ॥ ೧೭ ॥

ಕಾನನಮೃಗಂಗಳಿದೊ ಭೋರ್ಗರೆಯುತಿರ್ದಪುವು । ಮಾನಸದೊಳೆನಗೆದಿಗಿಲಾದಪುದು ಹಾರಾಮ । ಹಾನಾಥ ದೀನಬಂಧುವೆ ದಯಾಸಿಂಧುವೆ ವಿಪನ್ನಜನಜೀವಾತುವೇ ॥ ನೀನಲ್ಲದಾರೆನ್ನನಿಲ್ಲಿ ಕಾವವರೀಗ । ಳಾನಳಿವುದಕ್ಕೆ ಚಿಂತಿಪಳಲ್ಲ ನಿನ್ನಸಂ । ತಾನಕ್ಕೆ ಕೇಡಾಗದೆಂದಿಂತು ಮೊರೆವೆನಾಂ ಕೃಪೆಗೈದು ಸಲಹೆಂದಳು ॥ ೧೮ ॥

ರಾಮನೇ ಲೋಕಾಭಿರಾಮನೇ ಸದ್ಗುಣಾ । ರಾಮನೇ ಕೃತಪುಲವಿರಾಮನೇ ರವಿಕುಲಲ । ಲಾಮನೇ ವದನಜಿತಸೋಮನೇ ಪಾಪಹರನಾಮನೇ ಶುಭಕಾಮನೇ ॥ ಶ್ಯಾಮನೇ ಸೌಜನ್ಯಸೀಮನೇ ಕಾರುಣ್ಯ । ಧಾಮನೇ ರಣರಂಗಭೀಮನೇ ರಾಮರಾಮ । ಸ್ವಾಮಿ ನೀ ನಿಂತೆನ್ನನುಳಿವರೇ ನಿನ್ನನಳಿದು ನಾನೆಂತು ಜೀವಿಸುವೆನು ॥ ೧೯ ॥

ಭಿನ್ನವಾಯ್ತೆನೆಜಲಕ್ಷೀರಂಗಳಂತೆವೊಲ | ಭಿನ್ನಮಾಗಿರ್ದೆಮ್ಮ ನೇಹ
ಮಕಟಾವಿಧಿಯು | ಗನ್ನಗತಕವನೆನಲದೇಂಪಾಪ ಶಂಕ್ಯತಿಸ್ನೇಹ ಎಂಬುದು
ದಿಟವಲೆ ‖ ಇನ್ನಾಡಿಫಲವೇನದಾರನೋಪಿಂತೆನಾಂ | ಭಿನ್ನರಂಮಾಡಿರ್ದೆನವರ
ಶಾಪಂಪಣ್ತು | ದೆನ್ನೊಳಿಂತಾರೊಳಾನೊರೆವೆನಿ ದುಃಖಮಂ ಹಾ ಎಂದು
ಗೋಳಿಟ್ಟಳು ‖೨೦‖

ಅಳಲುತಿಂಪರಿಯಿಂದೆ ರಾಘವನರಾಣಿನರೆ | ಬಳಲುತ್ತೆ ತೊಳಲುತ್ತೆ
ನಡೆಯಲಸವಳಮೆನಿಪ | ಹಳುವದೊಳ್ತಾಗೆ ಕಲ್ಮುಳ್ಗಳೊಡೆದಡಿಗಳಿಂ ಬಸಿ
ವರುಣವಾರಿಯಿಂದೆ ‖ ಇಳೆಸನೆಯೆ ಬಿಸುಸುಯ್ಯುತಲ್ಲಲ್ಲಿ ಸುಕುಮಾರಿ | ಕು
ಳಿತುವಿಶ್ರಮಗೊಳುತೆ ಮರಗಳೊಳ್ಭೀರುಮರೆ | ಗೊಳುತೆಕಾಳ್ಮೃಗಗಳಂ
ಕಂಡೊಡನೆ ನಡೆದಳೀಷದ್ದ್ರವಮಾಪಥದೊಳು ‖೨೧‖

ಚರಿಸುತ್ತೆವಾಲ್ಮೀಕಿಮುನಿ ಸಮಿತ್ಕುಶಫಲಾ | ಹರಣಾರ್ಥದಿಂ ಶಿಷ್ಯ
ರೊಡನಾವನಾಂತದೊ | ಳ್ಪರಿದೇವನಧ್ವನಿಯಕೇಳ್ದದಾರಿಲ್ಲಿರೋದಿಪರೆಂಬು
ದುಂಶಿಷ್ಯರು ‖ ಅರಸಿಕಂಡಾರಾಮ ನರಸಿಯುನದೊರ್ವಳಾ | ಗರಿಕಸತಿಯುತಿ
ದೈನ್ಯದಿಂಪಿತ್ತಲೀವನಾಂ | ತರದೊಳಳಲುತ್ತಿರ್ಪಳೆಂದರುಪಲೊಡನತ್ತಲಾ
ದಯಾಂಬುಧಿನಡೆದನು ‖೨೨‖

ಮುಂದೆಬರ್ಪಾಯೋಗಿವರ್ಯನಂ ಕಂಡು ಬಿಸಿ | ಲಿಂದೆಬಾಯಾರಿ ತಳ
ವೆಳಗಾಂತನಂಪ್ರಪಾ | ಮಂದಿರವ ನೀಕ್ಷಿಸಿದವೋಲವನಿಸುತೆ ತತ್ಪದಕ್ಕೆಗುರು
ಭಕ್ತಿಯಿಂದೆ ‖ ವಂದನಂಗೈಯಲಾಮುನಿ ನಿನಗೆಶುಭವಾಗ | ಲೆಂದಾದರಿಸಿ
ಹರಸಿ ನೀನಾರೆಲೌ ಮಗಳೆ | ಬಂದಹದನೇನಿಲ್ಲಿ ಗೇಕೆಶೋಕಿಪೆಯೆಂದು ಬೆಸ
ಗೊಂಡೊಡಿಂತೆಂದಳ್ ‖೨೩‖

ಮೌನಿಕುಲಪುಂಗವನೆಕೇಳೆನ್ನದುರ್ದಶೆಯ | ನೇನೊರೆವೆನೆಂದು ತನ್ನ
ಖಿಲವೃತ್ತಾಂತಮಂ | ಮಾನಿನೀಮಣಿ ವಿನಯದಿಂದೆ ತಲೆವಾಗಿಕಯ್ಮುಗಿದು
ತಾಂಬಿನ್ನವಿಸಲು ‖ ಕಾನನನಿವಾಸಿಯಾಗಿರ್ದೊಡಂ ಮರುಗುತುರೆ | ಮಾ
ನಸದೊಳೇನಿದೇನನ್ಯಾಯವೆಂದೆಲೌ | ಜಾನಕಿಯೆ ಬಿಡುಬ್ಬಿಡಿನ್ನೀ ಮನೋ
ವ್ಯಥೆಯನೆಂದಡಿಗಡಿಗೆಸಂತವಿಟ್ಟು ‖೨೪‖

ಅಂತರದವೃಷ್ಟಿಯೊಳ್ಬಗೆದು ತತ್ಕ್ಷಣದೊಳಾ | ಶಾಂತಮುನಿ ಯೆಲೆ ಮಗಳೆ ಪತಿತೊರೆದನೆಂದುನೀಂ | ಚಿಂತಿಸದಿರಾ ನೀನಿದಕೆ ಕಾರಣವನರಿಯೆ ತಾನದಂತಿಳಿದಿರ್ಪೆನು || ಮುಂತೆ ನಿನಗಪ್ಪುದು ಶುಭೋದಯಂ ಬಿಡುಬಿಡಿ | ನ್ನಾಂತಮನದಳಲನೊರಸೊರಸಲಘುಭೀತಿಯಂ | ಸಂತಸವನಾನೆಂದು ನುಡಿ ಯಲಾಸಾಧ್ವಿ ಕಥಮುಪಿಸಮಾಹಿತೆಯಾದಳು ||೭೫||

ಎನಗೆಕೇಳ್ಮಗಳೆ ಶಿಷ್ಯೆಯಾ ನಿಮ್ಮತಂದೆಯುಹ | ಜನಕಭೂಮೀಶ್ವರಂ ಸ್ಥಾನಾಂತರದೊಳಿರ್ಪ | ಜನಕಗೃಹವೆಂದರಿದುನೀನಿರೆಮ್ಮಾಶ್ರಮದೊಳನ್ನೊಂದ ನೆಣಿಸಬೇಡ || ಅನಘಚಾರಿತ್ರೆ ನಡೆಯೆಂದು ಶಿಷ್ಯರ್ವೆರಸಿ | ಘನಕೃಪಾಸಿಂಧು ಮುಂಬರಿಯೆ ಮೆಲ್ಲಮೆಲ್ಲನಾ | ಜನಕಸುತೆ ನಡೆದಳಾತಾಪಸರ ನನುಸರಿ ಸಿತನ್ಮುನಿಪನಾಶ್ರಮಕ್ಕೆ ||೭೬||

ಆ ಪರಮಯೋಗಿಪುಂಗವಂಬಳಿಕಾಶ್ರಮದ | ನಾಪುಣ್ಯಚರಿತೆಗೆಲೆವ ನೆಯನಾಕ್ಷಣಮೆನಿ | ಮಾರ್ಪಿಸಿದ ನನುಕೂಲ ರಚನೆಯಿಂ ನಿಜಶಿಷ್ಯವರ್ಗ ದಿಂದಲ್ಲಿ ಸೀತೆ || ತಾಪಸಿಯರೊಡಗೂಡಿ ನೇಹದಿಂ ರಘುವಂಶ | ದೀಪನಡಿದಾ ವರೆಯ ನಾವಗಂ ಸ್ಮರಿಸುತೆಮ | ಹಾಪತಿವ್ರತೆ ತಾರುಮನೆಯೊಳಿರ್ದಪ್ರೀತಿ ದರ್ಳಾದರಣೆಯಿಂ ಮುನಿಪನಾ ||೭೭||

ಆಗಳಲ್ಲಿರ್ದ ತಾಪಸಿಯರ್ಗೆ ರತ್ನಗ | ರ್ಭಾಗರ್ಭಸಂಜಾತೆಯೀಸು ಚಾರಿತ್ರ ವಿಧಿ | ಯೋಗದಿಂ ಸೇರ್ದಳೆಮ್ಮಾಶ್ರಮವ ನರಿಯಿರಿವಳುಂರತ್ನ ಗರ್ಭೆಯೆಂದು || ಏಗಳುಂ ನೀಂಗಳಡೆವಿಡದೀಕೆಯುಂ ಪಿರಿದು | ರಾಗದಿಂದುಪ ಚರಿಸುತಿಹುದೆಂದು ಬೆಸಸಲಾ | ಯೋಗಿ ಸೋದರಿಯರಂತವರೆಲ್ಲ ರೊಡನಿ ರ್ದರುಪಚರಿಸುತಾಸತಿಯನು ||೭೮||

ಧರಣಿಸುತೆಯಿಂತಿರಲ್ಕೊಂಭತ್ತು ತಿಂಗಳುಂ | ಪರಿಪೂರ್ಣಮಾಗೆಶುಭ ತಿಥಿವಾರನಕ್ಷತ್ರ | ಕರಣಯೋಗದ ನಿಶಾವಸರದೊಳ್ರಾಮಚಂದ್ರಪ್ರತಿಚ್ಛಾ ಯರೆನಿಸಿ || ಧರಣಿಯೊಳಗವತಾರಮಂಮಾಡಿದಾಶ್ವಿನೀ | ಯರೊ ಎಂಬವೋ ಲ್ಪರಸ್ಪರಸದೃಶರೂಪರಂ | ನಿರುಪಮಮನೋಹರಾಕಾರರಂ ಯಮಳರಾದ ಣುಗರಂ ಪ್ರಸವಿಸಿದಳ್ಸತಿ ||೭೯||

ಆ ಮಹಾಮುನಿ ತಪೋಧನ ಸತೀಜನಮುಖದಿ । ನಾಮಂಗಳೋ
ದಂತಮಂ ಕೇಳ್ದು ಮನದೊಳ್ । ಕಾಮವೆನೆ ಸಂತಸಂದಳೆದು ಕುಶಲವಗ
ಳಿಂದಾಗಮೋಕ್ತಕ್ರಮದೊಳು ॥ ಆ ಮಕ್ಕಳರ್ವರ್ಗಮೊಡಗೂಡಿ ಶಿಷ್ಯರಿಂ
ಕ್ಷೇಮಂಕರಕ್ರಿಯೆಯನೆಸಗಿದ ನಿಮಿತ್ತದಿಂ । ನಾಮಕರಣಂಗೈದ ನೊಲ್ದು
ಕುಶಲವರೆಂದೆಬಾಹುಜರ್ಗುಕ್ತವಿಧದೆ ॥ ೩೦ ॥

ದಿನದಿನಕ್ಕಭಿವೃದ್ಧಿಯಂ ಪಡೆಯುತಿಹ ವಿದಿತ । ದಿನಪವಂಶಸ್ಥೂಲ
ಮುಕ್ತಾಫಲಂಗಳಂ । ದೆನಿಸಿದಾ ಕುವರರ್ಗೆ ಚೌಲೋಪನಯನಂಗಳಂ ಕಾಲ
ಮಂಮೀರದೆ ॥ ಮುನಿಪತಿಯೊಡರ್ಚಿ ಧನುರಾಗಮವನಂತುಪ್ರಾಸ । ತೆನೆತಾಂಸಗ
ಳ್ದಿಕಾವ್ಯ ರಾಮಾಯಣವ । ನನುನಯದೆ ಶಿಕ್ಷಿಸಲ್ಕೊಲ್ದು ಕಲಿತಿರ್ವರುಂ
ಪಾಂಡಿತ್ಯಮಂಪಡೆದರು ॥ ೩೧ ॥

ಇಂತು ವಿದ್ಯಾವಂತರಾಗಿ ಶರಚಾಪಗಳ್ । ನಾಂತು ನಿಜಜನನಿಯಂ
ವಾಲ್ಮೀಕಿಮುನಿಪನಂ । ಸಂತಸಂ ಗೊಳಿಸುತ್ತೆ ಧೈರ್ಯಗಾಂಭೀರ್ಯ ವಿನಯಾದಿ
ಸದ್ಗುಣಗಳಿಂದೆ ॥ ಕಂತುಸಮರೂಪರಾಗೆಸೆಯುತಿಂದ್ರೋಪೇಂದ್ರ । ರಂತಿರ್ಪ
ಕುಶಲವರಚಂಡಭುಜವಿಕ್ರಮವ । ನಂತಸದೃಶಪ್ರತಿಭೆಯಂ ನೋಡಿ ಹಿಗ್ಗು
ತಿರ್ದಳ್ರಾಮಚಂದ್ರನರಸಿ ॥ ೩೨ ॥

೪ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೪ ಕ್ಕೆ ಪದ್ಯಗಳು ೧೭೮ ಕ್ಕೆ ಮಂಗಳಮಸ್ತು.

ಅಷ್ಟಮೆಯ ಸನ್ಧಿ.

॥ ಸೂಚನೆ ॥ ಚಿಂತೆಯಂನೀಗಿ ದಾಶರಥಿ ಶುಕಶಾಪವೃ | ತ್ತಾಂತವಂ ಕೇಳ್ದು ಘಟಸಂಜಾತಮುನಿಯಮುಖ | ದಿಂತುರಗಮೇಧ ಯಾಗಾರ್ಥದಿಂ ಸರಯೂ ನದೀತೀರವಂ ಸಾರ್ದನು ॥

ಎಲೆಮುನಿಪಕೇಳಿಂತು ರಘುವರಂಸೀತೆಯಂ | ಹಳುವಕಟ್ಟಿದ ಬಳಿಕ ಪಿರಿದು ಕಕ್ಕುಲಿತೆಯಿಂ | ತಳೆದು ಮಾನಸದೊಳಗೆ ಚಿಂತೆಯಂ ವಿಮನಸ್ಕನಾಗಿ ಸಭ್ಯರ್ಕಳೊಡನೆ ॥ ಕಳೆಗುಂದಿದಾನನವನೆತ್ತದಾಸಭೆಯೊಳಗೆ | ಕುಳಿತಿರಲ್ಕೃಷ್ಣಾಜಿನವನುಟ್ಟು ಕಾರ್ಮುಗಿಲ | ಬಳಿಸಂದಸೇಸರಂತೆಸೆಯುತ್ತೆ ಮೈತ್ರಾವರುಣಿಯಲ್ಲಿಗೈತಂದನು ॥ ೧ ॥

ಕಂಡಾಮುನೀಂದ್ರನಂ ರಘುನಾಥನನುಜರೊಡ | ಗೊಂಡುಬಂದಿದಿರಾಗಿವಿನಯದಿಂ ತಚ್ಚರಣ | ಪುಂಡರೀಕಕ್ಕೆರಗಿ ಸತ್ಕರಿಸಿ ಪಾದ್ಯಾರ್ಘ್ಯವಿಷ್ಟರಾದಿಗಳನಿತ್ತು ॥ ಖಂಡಿಸಿದುದೆಮ್ಮಪಾತಕವೆಲ್ಲನಿಮ್ಮಡಿಯ | ಕಂಡುದರಿನೊಲ್ದು ನೀವಿತ್ತ ಬಿಜಯಂಗೈಯೆ | ಚಂಡಕಿರಣಾನ್ವಯಂ ಸುಪ್ರತಿಷ್ಠಿತಮಾಯ್ತು ಧನ್ಯನಾನಾದೆನೆಂದ ॥ ೨ ॥

ಇಂತುಸತ್ಕೃತನಾಗಿ ಪರಸಿವೇದೋಕ್ತಿಯಿಂ | ಶಾಂತಮುನಿತನಗನುಜ್ಞೆಯನಿತ್ತ ಬಳಿಕಾಖ | ರಾಂತಕಂ ಪಟ್ಟವಣೆಯೊಳ್ಕುಳಿತು ನಿಟ್ಟಿಸುತ್ತಾಮುನಿಯವದನಾಬ್ಜವ ॥ ಸಂತತಂ ನಿಮ್ಮ ಮಹನೀಯತಪವೆಡರಿಲ್ಲ | ದಂತೆ ಬಳೆದಪುದೆ ನಿಮ್ಮಾಶ್ರಮಂಕಡುಹಮ್ಮ | ನಾಂತಖಳರಾಕ್ಷಸರಕಿರುಕುಳಗಳಿಲ್ಲದೆ ನಿರಾತಂಕಮಾಗಿರ್ಪುದೆ ॥ ೩ ॥

ಪರಮಪಾತಿವ್ರತ್ಯಶೌಶೀಲ್ಯಸೌಭಾಗ್ಯ | ಗುರುದೇವತಾಭಕ್ತಿಸುಜ್ಞಾನಸದ್ವ್ರತಾ | ಚರಣ ಮಿತವಚನ ಮೊದಲಾದ ಸದ್ಗುಣಗಳಿಂದೀಮಹೀತಲದೊಳಿರ್ಪ ॥ ವರವರ್ಣಿನೀಜನಕ್ಕುಪಮಾನಮೆನಿಸುತನ | ವರತಪತಿಶುಶ್ರೂಷಣಾಚರಣನಿರತೆಸ | ಚ್ಚರಿತೆಲೋಪಾಮುದ್ರೆ ನಿಮಗೆಸಹ ಧರ್ಮಚಾರಿಯಾಗಿ ಸುಖಮಿರ್ಪಳೆಯೆನೆ ॥ ೪ ॥

ಆ ಮುನಿಪ್ರವರ ನಾವಚನಮಂ ಕೇಳ್ದಲ್ಲೈ । ರಾಮಚಂದ್ರಮನೆ ಕೇಳೀಮಹೀವಲಯಮಂ । ಯಾಮಿನೀಚರವಂಶ ದಾವಾಗ್ನಿಯೆನಿಸಿನೀನಾಳುತಿರೆ ಧರ್ಮದಿಂದೆ ॥ ಹೋಮಧೇನುಗಳಿಂದೆ ವೇದಘೋಷಗಳಿಂದೆ । ಸೋಮಪೀಥಿಗಳಿಂದೆ ಕೂಡಿನಮ್ಮಾಶ್ರಮಂ । ಕ್ಷೇಮದಿಂದಿರ್ದುದೊಂದಚ್ಚರಿಯೆ ವಿಶ್ವವೆಲ್ಲಿಯುದಸ್ಮದೀಯತಪಕೆ ॥ ೫ ॥

ಎಂದಿನಂತಿರದೆ ನಿನ್ನಯ ವದನಪಂಕಜಂ । ಕಂದಿಕಳೆಗುಂದಿರ್ಪುದೇತಕ್ಕೆ ರಘುವರಾ । ಸಂದಿಸಿರ್ದಪುದಾವದಾರುಣಕುಠಾರಹತಿ ನಿನ್ನಸಂತೋಷಲತೆಗೆ ॥ ಕುಂದಿದೇತಕ್ಕೆ ನಿನ್ನನುಜಾತರಾನನಂ । ಪೊಂದಿರದೆ ತಲೆವಾಗಿ ಪಿರಿದುಚಿಂತಿಸುತಿರ್ಪ । ರೆಂದುಮಿಲ್ಲದನುಸುಳಿದೇಂ ಸಭೆಯೊಳೆಂದು ಬೆಬ್ಬಳಗೊಂಡು ಬೆಸಗೊಳಲ್ಕೆ ॥ ೬ ॥

ಎಲೆಮುನಿಪಕೇಳಲೆಂ ಮನದೊಳಲಸಿಂದುವಿ । ಹ್ವಲನಾಗಿ ಮೊದಲಿಂದೆ ಕೊನೆವರಂ ಸೀತೆಯಂ । ಹಳುವಕಟ್ಟಿದಹದನ ನೆಲ್ಲಮಂ ತಲೆವಾಗಿ ವಿನಯಮಿಂ ರಘುನಾಥನು ॥ ತಿಳುಹಿದಂಕೇಳ್ದುಕಿರಿದುಂಪ್ರೊತ್ತು ಚಿದ್ದೃಷ್ಟಿ । ಯೊಳಗೆಣಿಸಿತಿಳಿದು ಪೂರ್ವಾಪರಂಗಳನೊಡನೆ । ಕಳಚಜಂದುಃಖವಿಸ್ಮಯವಿಲಕ್ಷಣ ಮನೋವೃತ್ತಿಯಾಗಿಂತೆಂದನು ॥ ೭ ॥

ಪುರುಷೋತ್ತಮನೆಸಂತವಿಸು ಸಂತವಿಸುರಾಮ । ನರಜನ್ಮವಂಪಡೆದ ಘೋರಸಂಸಾರಸಾ । ಗರದೊಳೋಲಾಡುವರ್ಗಮ ಸುಖದುಃಖಂಗಳೆರಡುಂ ಸದೃಶವಾದೆಡೆ ॥ ಅರೆನಿಮಿಷವಂತೆಪ್ರೊಲ್ತೋರ್ಪುದಿಳೆಯಲ್ಲಿಬಹು ।ತರಮಪ್ಪ ಸುಖಕಾಲವಂತುಬಹುಯುಗಗಳಂ । ತಿರೆಪ್ರೊಲತ್ಯಲ್ಪವೆನಿಸಿದ ದುಃಖಕಾಲವೀಮಾಯೆ ಸಹಜಂಜಗದೊಳು ॥ ೮ ॥

ಉರಲಾಂತುಮೆರೆವಪ್ರೊಲ್ಸುಖಭೋಗಮದ್ರಿಯುಂ । ತಲೆಯೊಳಾಂತಿರ್ಪಪ್ರೊಲ್ದುಃಖಾನುಭವಮೆಂಬು । ದೆಲೆ ರಾಮಸಿಲ್ಕದೀಮಾಯಾವಿಲಾಸಕ್ಕೆ ಕಾಲಾನುಸಾರದಿಂದೆ ॥ ತಿಳಿದು ಹಿಗ್ಗದೆ ತಗ್ಗದೆರಡುಮಂಸಮತೆಯಿಂ । ದಿಳೆಯೊಳನುಭವಿಸುತ್ತೆ ಲೋಕಸ್ವರೂಪಮಂ । ಪಲತೆರಗಳಪ್ಪನುಭವಂಗಳಂ ನಿಶ್ಚಯಿಸಿ ತಿಳಿವನೆ ವಿವೇಕಿಯಹನು ॥ ೯ ॥

ಪ್ರಾರಬ್ಧಕರ್ಮವನನುಭವಿಸದಿರೆ ಬಿಡದು ಕಾಂ | ತಾರಕ್ಕೆ ನೀನವನಿಸುತೆಯನಟ್ಟುದದಕ್ಕೆ | ಕಾರಣಂಮಡಿವಳನವರಾರವಕ್ಕಂ ಪಿಂದೆ ನಡಸಿರ್ಪ ಬೇರದೊಂದು || ಕಾರಣಂತಾನಿರ್ಪುದೆಂದೊರೆವುದುಂ ಸಭಾ | ಸ್ತಾರರೆಲ್ಲರುಮಿದೇನೆಂದು ಬೆಬ್ಬಳಿಸೆ ರಘು | ವೀರನಚ್ಚರಿಗೊಂಡದೇನದೇನೆಂದೊಲ್ದು ತಿಳುಹುವುದೆಂದು ಬೆಸಗೊಂಡನು || ೧೦ ||

ಬಳಿಕಾಘಟೋಜಾತನಿಂತೆಂದನೆಲ್ಲರುಂ | ತಲೆಯೆತ್ತಿಕೊಂಡೆವೆಯನಿಕ್ಕಪಕ್ಷಿಗಳಿಂದೆ | ಚಲಿಸದೀಕ್ಷಿಸುತಿರೆ ನಿಜಾನನವನುತ್ಸುಕದೊಳಾ ಕಪಟಮಾನವಂಗೆ || ಎಲೆರಾಮಚಂದ್ರಮನೆ ಚಿತ್ತವಿಸು ಜನಕನೃಪ | ನಲಘುತರಪುಣ್ಯಪರಿಪಾಕದಿಂದಧ್ವರದ | ನೆಲದೆಪುಟ್ಟಿದಸೀತೆ ದಿನದಿನಕ್ಕಭಿವೃದ್ಧಿಯಾಂತುಮೆರೆಯುತ್ತಿರ್ದಳು || ೧೧ ||

ಯುವತಿ ಜಾನಕಿ ಕೆಳದಿಯರನೊಡಂಗೊಂಡೊಂದು | ದಿವಸಮಾಮಿಥಿಲೆಯೊಳ್ಕೌತುಕದಿ ರಮಣೀಯ | ವಿವಿಧತರುಲತೆಗಳಿಂ ಕಂಗೊಳಿಸುವುಪವನದೊಳಾಡುತಿರೆ ಲೀಲೆಯಿಂದೆ || ಅವಿರಳಾನಂದದಿಂಪಲ್ಲವಿತವೆಪಣ್ತೆ | ಸೆನ ಮಾವುದಾಳಂಬ ಮೊದಲಾದ ಪಣ್ಗಳಿಂ | ಸವಿದುಬಂದೊಂದು ಮರನೆಲೆಗಳಂತರದೆಕುಳಿತುದು ಮಿಥುನವರಗಿಳಿಗಳಾ || ೧೨ ||

ಗಿಳಿಗಳಮಚಡಮುಡನೆ ಕುಪ್ಪಳಿಸುತತ್ತಿತ್ತ | ಕುಳಿತುಕೊಂಡಲ್ಲಿಹವಣಾದೊಂದುಕೋಡಿನೊ | ಳ್ಪೆಳಗೊಂಬಿಗೊರಸಿಮುಂಕೊಕ್ಕನೊಡನಿರದೆಕೆದರಿರ್ದರಂಕೆಯುಗಂಗಳ || ಕೆಳೆಗೊಳಿಸಿಕೊಂಡು ಸರಿಯಾಗೆನುಣ್ದಲೆಯ ತು | ಪ್ಪುಳನಡಿಮೆರಲ್ಗಳಿಂನೇವರಿಸಿ ಮೈಗೊಡಹಿ | ಬಳಿಕ ನಲಿದಾಡುತನ್ಯೋನ್ಯಮಾಗಿಂತು ಸವಿಮಾತನಾಡುತ್ತಿರ್ದುವು || ೧೩ ||

ಭಾವಜಮನೋಜ್ಞಮಂಗಳಮೂರ್ತಿ ಸುಗುಣಪಾ | ರಾವಾರನಖಿಲನಿಗಮಾಗಮವಿಚಕ್ಷಣಂ | ಪಾವನಚರಿತ್ರನುದ್ದಾಮಭುಜವಿಕ್ರಮಂತ್ರಿಭುವನಖ್ಯಾತಕೀರ್ತಿ || ಭೂವಧೂಜಾತೆಯುಂ ಸೀತೆಯುಂಕಯ್ವಿಡಿದು | ಭೂವಲಯಮಂಪೊರೆವನೊಲ್ದು ಸಾಮಂತಶತ | ಸೇವಿತ ಪದಾರವಿಂದಂ ರಾಮಚಂದ್ರನುಂ ಬಹುಕಾಲಮತಿಸುಖದೊಳು || ೧೪ ||

ಎನುತಿಂತುನುಡಿವುದುಂ ಮುಸುಕಿ ನ್ಮೈಯೆಲ್ಲವಂ । ಘನಪುಳಕನಿಕು
ರುಂಬಮತಿಮಾತ್ರಕುತುಕದಿಂ । ಜನಕನಂದಿನಿಕೇಳ್ದು ಕಿವಿಗೊಟ್ಟುಸದ್ಭಾ
ಗ್ಯೆಯುದೆ ಕೆಳದಿಯರನೀಕ್ಷಿಸಿ ॥ ವನಜಗಂಧಿಯರೆನೀಂಕೇಳ್ದರೇನೀನುಡಿಯ ।
ನೆನಗೆ ಸಂಬಂಧಿಸಿರ್ಪಂತೆಕಾಣ್ಬುದು ಸೀತೆ । ಯೆನಿಪವನಿಜಾತೆಯಿನ್ನಾವವ
ಳುಪಾಯದೊಳವಂ ಪಿಡಿದುಕೊಳ್ವೆವೆಂದು ॥ ೧೫ ॥

ಬಳಿಕ ದೀಹದಗಿಳಿಗಳಂ ಬಿಟ್ಟುಪಾಯದಿಂ । ದಿಳೆಯಣುಗಿಯಿರದೊ
ಯ್ಯನವನೆರಡುಮಂ ಪಿಡಿದು । ಕೊಳಲವೇಗ್ಗೈದೊಡಂ ಬಿಡಿಸಿಕೊಳಲಾರದವರೆ
ಚೀಚೀಎನುತ್ತಮಿರಲು ॥ ಕೆಳದಿಯರಸಂತಸದ ಕರತಾಳಮಂ ನಿಲಿಸಿ । ತಳದೆ
ನೇವರಿಸುತ್ತವಂ ಮೆಲ್ಲನೆಲೆ ಮುದ್ದು । ಗಿಳಿಗಳರಪೆಳರಿಂತಿದೇತಕ್ಕೆ ನಿಮ್ಮನಾ
ನಂಡಲೆವಳಲ್ಲೆಂದಳು ॥ ೧೬ ॥

ಇಂದುಮುಖಿಯಿಂತುಸಂತೈಸಿದೊಡಮತಿಚಿಂತೆ । ಯಿಂದವಕಟಾವಿಧಿ
ಯೆ ಕಾನನಂಗಳೊಳಾರ್ಗ । ಮೊಂದಿನಿಸುಬಾಧೆಯಿಲ್ಲದತೆರದೆ ಮುನಿವೃತ್ತಿ
ಯಿಂಜೀವಿಪೆಮ್ಮನಿಂತು ॥ ದಂದುಗಕ್ಕೊಳಗಾಗಿಪರೆ ಶಿವಶಿವಾನಮಗೆ । ಮುಂ
ದೆಗತಿಯೇನಿಂತು ಚಿಂತೆಯಿರಲಿಲ್ಲೆಮ್ಮ । ಕೊಂದುಬಿಟ್ಟರೆಲ್ದೊಡೆನಮ್ಮಂ
ಕೃಪಾಶೂನ್ಯ ಹಾಎಂದು ಶೋಕಿಸಿದುವು ॥ ೧೭ ॥

ಕಿವಿಗಳಂಸಬಳದಂತಿರಿದುಮುತಿರ್ಪಾರೋದ । ನವ ನವನಿಸುತೆಕೇಳು
ತೆಲೆಗಿಳಿಗಳರನಿಮ್ಮ । ಸವಿನುಡಿಗಳಂ ಕೇಳಲೋಸುಗವೆಪಿಡಿದೆನಾನಿನಿತೇಕೆ
ಚಿಂತೆ ನಿಮಗೆ ॥ ಭುವನದೊಳಾ ರಾಮಚಂದ್ರಮನೆಂಬ ಪುರುಷನಾ । ರವನಿಸಂ
ಭವೆಯೆನಿಪ ಸೀತೆಯೆಂಬಬಲೆಯಾ । ರ್ವಿವರಿಸಿರಿದಂ ಬಳಿಕ ನಿಮ್ಮನಾಂಬಿಡು
ವೆನೆನೆಪೆಣ್ಗಿಳಿಯದಿಂತೆಂದುದು ॥ ೧೮ ॥

ರಾಮಚಂದ್ರಮನಯೋಧ್ಯಾಪತಿಪಙ್ಕ್ತಿರಥ । ಭೂಮಿಪತಿನಂದನಸಂತ್ರಿ
ಭುವನಾನಂದನಂ । ರಾಮಣೀಯಕಸೀಮೆ ಯೆಲೆಭಾಮೆ ಮಿಥಿಲಾಪುರೀನಾ
ಯಕನಜನಕನ ॥ ಲಮಹಿತಮಖಭೂಮಿಸಂಜಾತೆಯಾಸೀತೆ । ತಾಮರಸ
ನಯನೆ ಭಾವಿಪೊಡಾಕೆ ನಿನ್ನಂತೆ । ಕೋಮಲಮನೋಜ್ಞ ಮಂಗಳಮೂ
ರ್ತಿಯಾಗಿರ್ಪಳೆಂದಿಂಪುಗರೆಯೆನುಡಿಯೆ ॥ ೧೯ ॥

ಅಮೃತರಸಧಾರೆಗಳ ನನುಕರಿಸುವಾವಿಹಂ । ಗಮರತ್ನದೊಳ್ನುಡಿಗಳಂಕೇಳ್ದು ಚಿತ್ತದೊ । ಳ್ಪ್ರಮುದಾತಿರೇಕವಾಂತಬಲೆಯೆನ್ನಯ ಪಟ್ಟದರಗಿಳಿಯೆನೀವದಾರು ॥ ಅಮರನಗರಾಧಿಪಾಸಿಗಳೊಮೋಣ್ರಪಾಂತ । ರಮನಾಂತಸಿದ್ಧರಹಯೋಗೀಂದ್ರರೋ ಪೇಳ । ರಮಮುನೀವಿಸಕಲಲೋಕವೃತ್ತಾಂತಮಂ ತಿಳಿದಬಗೆಯೆಂತೆಂದಳು ॥ ೨೦ ॥

ಆವಚನಮಂಕೇಳ್ದು ಪೆಣ್ಗಿಳಿಯುದೆಲೆ ತರುಣಿ । ಯಾವಿರ್ವರುಂ ಪ್ರಥಿತವಾಲ್ಮೀಕಿಯಾಶ್ರಮದೊ । ಳಾವಾಸಿಸುತ್ತಿರ್ಪೆವಾ ಪರಾಪರವೇದಿಯಲ್ಲಿರ್ಪತಾಪಸರ್ಗೆ ॥ ಭಾವಿರಾಮಾಯಣವೆನಿಪ್ಪೊಂದುಕಥೆಯನೊ । ಲ್ದಾವಗಂ ಬೋಧಿಸುತ್ತಿರ್ದಪನದಂಕೇಳ್ದು । ತಾವವರನುಗ್ರಹದೆಕಲಿತು ಬಂದಲ್ಲಲ್ಲಿ ನುಡಿವುದೆಮಗಭ್ಯಾಸವು ॥ ೨೧ ॥

ನಿನ್ನಕೋರಿಕೆಯಂತಿದೆಲ್ಲಮಂ ವಿವರಿಸಿದೆ । ನಿನ್ನೆಮ್ಮನೊಲ್ದು ನೀಂ ಬಿಟ್ಟುಪಾಲಿಸು ಸತ್ಯ । ಮಂನಿನಗೆ ಶುಭವಾಗಲೆನೆಕೇಳ್ದು ಸೀತೆನೀವಾಡಿದಂತಾರಾಮನು ॥ ಎನ್ನಕಯ್ವಿಡಿದೊಡಾಬಳಿಕನಿಮ್ಮಂಬಿಡುವೆ । ನನ್ನೆಗಂನೀವಿರ್ಪುದೆಮ್ಮರಮನೆಯೊಳೆನ್ನ । ಸಾನ್ನಿಧ್ಯದೊಳ್ನಿರತಿಶಯಸುಖದೆನಿಮ್ಮಿರ್ವರಂ ಪೊರೆವೆನಾನೆಂದಳು ॥೨೨॥

ಒಡನೆಶುಕಿನುಡಿದುದೆಲೆತರುಣಿನೀನಾರೆನ್ನ । ನುಡಿಯೊಳೇನಿನಿತೊಂದುಕೌತುಕಂನಿನಗೆಂದು । ಮಡದಿಮಣಿಯೆಲೆಗಿಳಿಯೆಸೀನರುಹಿದಾಸೀತೆಯೆಂಬಳೀಜನವೆಂದರೆ ॥ ಕಡುಸಂತಸದವಾರ್ತೆಯಂನುಡಿದನಿಮ್ಮನಾಂ । ಬಿಡಲಾರೆನೆನ್ನಮನದರಿಕೆಯಂಸೀವ್ರೊಲ್ದು । ನಡಪುದೆಂದತಿಕುತುಕದಿಂದೆನಲ್ವಾತಿನಿಂಬೇಡಲ್ಕದಿಂತೆಂದುದು ॥೨೩॥

ಬಿಸಜಮುಖಿಯಿಷ್ಟಾನುಸಾರದಿಂವನದೆಮಾ । ಸಿಸುವೆಮಗೆನಿನ್ನಭವನದೆನೀನೆನಿತ್ತುಪಚ । ರಿಸುವೊಡಂಸುಹಿತಮೊಂದೆನಿಸದೆಮ್ಮಯುಮನಕ್ಕಾಸುಖಂಕೇಳೆನ್ನುವೆ ॥ ಬಸುರನಾಂತಿರ್ಪೆನಾನೆಮ್ಮತಾಣಕ್ಕೈದಿ । ಬೆಸಲೆಯಾದಾಬಳಿಕ್ಕೈತ್ತಲೈತಂದುನಾ । ವೊಸೆದುಮಾಸಿಪೆವಿಲ್ಲಿನೀನೆಳಸಿದಂತೆಕೆಲಕಾಲವಿದುನಿಜವೆಂದುದು ॥೨೪॥

ಕೇಳದಾಮಾತನಿಲ್ಲಿಯೆ ಬೆಸಲೆಯಾಗುಸುವಿ | ಕಾಲವಾಗನುಕೂಲವೆನಿ
ಪಿಂಬಿನೊಳಗಿಟ್ಟು | ಪಾಲಿಸುವೆ ನತಿಸುಖದೆನಿಮ್ಮನೆನಲಾ ಗಂಡುಗಿಳಿಯಮುಳಿ
ದು ತರಳೆ ಕೇಳು || ಪೇಳಲಾಗದು ಪೇಳಲಾಗದೇನುಮನೆಂಬ | ರೀಲೋಕ
ದೊಳ್ತಳದರದರಿಂದೆ ಮೌನಮಂ | ತಾಳಿದೊರ್ಡೀದುಃಖವೆಮಗಿರ್ದುದಿಲ್ಲಬಿಡು
ಹಿಡಿಯಬೇಡೀಫಲವನು || ೨೫ ||

ನುಡಿಯಲಿಂತೆಂದದಂ ನೀನೆಲ್ಲಿಯಾದೊಡಂ | ನಡೆಬಿಡೆನಿದೊಂದನಾನೆಂ
ದವನಿತನುಜೆ ಬಿ | ಟ್ಟೊಡೆ ಪಾರಿವಂದಡರೆಘೋರನಾಮರನನುಲಿಯುತ್ತದತಿ
ದೀನವಾಗಿ || ಕಡುದುಗುಡವಾಂತು ಪೆಣ್ಗಿಳಿಯುದಂನೋಡುತ್ತೆ | ಬಿಡುಮುಗು
ದೆತನ್ನನುಮಂ ಬಿಟ್ಟು ಬದುಕಿರಲಾರೆ | ನೊಡನಾಡಿಯುಂ ಬಲಾತ್ಕರಿಸಬೇಡೆಂದೆ
ನಿತುಬೇಡಲುಂ ಬಿಡಿದಿರ್ದಳು || ೨೬ ||

ವಿರಹದಾವಿಗೆಬೆಂದು ಕಡುನೊಂದುಶುಕಲಲನೆ | ದುರುಳೆ ಗರ್ಭಿಣಿ
ಯಾಗಿ ನೀನುಮೆನ್ನಂತೆ ನಿ | ನ್ನರಸನನಗಲ್ದಿಂತು ದುಃಖವನುಭವಿಸೆಂದು
ಘೋರತರಶಾಪವಿತ್ತು || ಹರಣಮುಳಿದುದು ಗಂಡುಗಿಳಿ ಮರುಕವೆತ್ತದಂ |
ನಿರುಕಿಸುತೆಮುಂಬುಟ್ಟಿನೊಳಗಿವಳನಿಂತುನಾಂ | ತೊರೆಯಿಸುವೆ ನಿನನಿನೆಂ
ದೊರೆದು ಗಂಗಾವರ್ತದೊಳ್ಕಡೆದು ಮಡಿದುದಹಹ || ೨೭ ||

ಮನುಜೇಂದ್ರ ಕೇಳ್ಕ್ರೋಧದಿಂದದಳಿದುದರಿಂದೆ | ಜನನಮಂಕ್ರೋಧ
ನಾಹ್ವಯಮಾಂತುಮಡಿವಳ್ಳ | ನೆನಿಸಿಪಡೆದಿಲ್ಲಿಪಿಂದಣವಾಸನಾಬಲದಿನಪವಾ
ದಮಂಕಲ್ಪಿಸಿ || ಅನಘಸಚ್ಚರಿತ್ರೈಕವಸತಿಯಂ ಗರ್ಭವತಿ | ಯೆನಿಸಿರ್ಪ ಸೀತೆ
ಯಂ ನಿನ್ನಿಂದಗಲ್ಚಿಮದು | ಜನಕಜೆಯನಿಂತೀನಿಮಿತ್ತದಿಂಪೂರ್ದಿತ್ತೈ ಮಿಥ್ಯಾ
ಪವಾದವಕಟಾ || ೨೮ ||

ಕೆಲಕಾಲಮಿರವೇಳ್ಕುಮಿಂತು ಜಾನಕಿಯೆಂದು | ತಿಳಿದಿರ್ಪರ್ಕೈಪರಾಪ
ರವಿದರಶೇಷ ಮುನಿ | ಕುಲತಿಲಕರುಂ ಜನಕರಾಯನುಂಮುಂದೆ ತಾನಹು
ದು ಲೇಸೆಂದುಪೇಳೆ || ಅಳಲುತನುಭವಿಪರಲೆನಗುತೆ ಜನರೆಸಗಿದುದ | ನಿಳೆ
ಯೊಳೇಂ ಕಡಿದೊದುಷ್ಕೃತಿಯೆಂದು ವಿಸ್ಮಯಂ | ಗೊಳೆಸಭಿಕರಾಚಿಂತೆ
ಯಂನೀಗಿ ರಾಮಂಸಮಾಹಿತಮನಸ್ಕನಾಗಿ || ೨೯ ||

ಭುವನದೊಳ್ನಿಸ್ಪೃಹರೆನಿಪ್ಪನಿಮಗಾಪಭೀ | ಷ್ಟವನೊಲ್ದುಸಲಿಸಿ ನಾಂಧನ್ಯನಹೆನಾಜ್ಞಾಪಿ | ಸುಪ್ರದನನುಗ್ರಹದೊಳೆನೆಘಟೀಭವನಿಂತುಸಂ ತಸಂಮಿಗೆನುಡಿದನು || ರವಿಕುಲಾಂಬುಧಿರತ್ನರಾಜೀವಭವಮುಖ್ಯ | ದಿವಿಜ ಗ೯ಮರಿದೆಂದೆನಿಪ್ಪನಿನ್ನಯುದರ್ಶ | ನವನೆಕಯೆತ್ನಳಲೋಸುಗಂಬಂದೆನಾನಿಂ ತುತವೆಕೃತಾರ್ಥನುಮಾದೆನು ||೨೦||

ರಣದೊಳಗೆಲೋಕಕಂಟಕರಾದಘೋರರಾ | ವಣಕುಂಭಕರ್ಣರಂಸಂ ಹರಿಸಿವರವಿಭೀ | ಷಣಗೆ ಲಂಕಾಪುರೀಸಾಮ್ರಾಜ್ಯಪದವಿಯಂ ಕರುಣಿಸಿಜಗ ತ್ರಯಕ್ಕೆ || ಅಣಿಯರಂಹಿತಗೈದೆಕುಸಿದಿರ್ದಗೋಣಸಾ | ಫಣಿರಾಯನಿಗು ಚಿದಂಸುರಸಿದ್ಧಗಂಧರ್ವ | ಗಣಕೆಸಂತುಷ್ಟಿಯಾದುದುನಿಖಿಲಮುನಿಜನಂನಿ ರ್ಭೀಕವಾದುದೆನಲು ||೨೧||

ಆರವದಿರತಿಭಯಂಕರವೆನಿಸಿದನುವರದೆ | ಹೋರಾಡಿಪರಿವಾರಸಹಿತ ಮೆನ್ನಿಂದೆಸಂ | ಹಾರವಂಪಡೆದರಾವಣಕುಂಭಕರ್ಣರೆಂಬಿರ್ವರತಿದುಷ್ಟಾತ್ಮ ರು || ಆರವಂಶದೆಪುಟ್ಟಿದವರಾವಜಾತಿಯೊ | ಳ್ಸೇರಿದವರಸುರರೋಗಂಧರ್ವ ರೋಯಕ್ಷ | ರೋರಾಕ್ಷಸರೊವಿವರಿಸುವುದೆಂದುದಾಶರಥಿಬೆಸಗೊಂಡನಾಮು ನಿಯನು ||೨೨||

ಆವಚನವಂಕೇಳ್ದಗಸ್ತ್ಯನೆಲೆರಾಘವನೆ | ಸಾವಧಾನದೊಳಾಲಿಪುದು ಸೃಷ್ಟಿಕರ್ತನಾ | ದಾವಿಧಾತ್ರನಪುತ್ರನಹಪುಲಸ್ತ್ಯಂಗೆಸುತನಾದನಾವಿಶ್ರವ ಸ್ಸು || ಕೋವಿದಂತಾನವಂವೇದಶಾಸ್ತ್ರಂಗಳೊ | ಳ್ಕೈವಿಡಿದರವನಂಪತಿವ್ರ ತಾಧರ್ಮದಧಿ | ದೇವತೆಯರೆಂಬೊಲಿಹಮಂದಾಕಿನೀಕೇಕಸಿಯರೆಂಬಬ್ಬೆಣ್ಮಣಿ ಗಳು ||೨೩||

ದೇವತಾಕುಲಸಮುತ್ಪನ್ನೆಮಂದಾಕಿನೀ | ದೇವಿಕೇಕಸಿನಿಶಾಚರಕು ಲೋದ್ಭವೆಯೆಂದು | ಭಾವಿಸೈಭಾನುಕುಲರತ್ನಮೊದಲನೆಯಳುದರದೊಳಧಿ ಕಪುಣ್ಯಶಾಲಿ || ಆವಿರ್ಭವಿಸಿದಂಕುಬೇರನೆರಡನೆಯವ | ಳಾ ರಾವಣಂಕುಂಭ ಕರ್ಣಂವಿಭೀಷಣನೆಂಬ | ಮೂವರಂಪೆತ್ತಳಣುಗರನನುಕ್ರಮದಿನವರಭಿ ವೃದ್ಧಿಯಂಪಡೆದರು ||೨೪||

ಈರಯ್ದುಮೊಗಗಳಿಂದಿರ್ಪತ್ತುತೋಳ್ಗಳಿಂ । ದಾರಾವಣಂಕೂಡಿ ತಾಂಜನಿಸಿದಂರಜನಿ । ಯಾರಂಭದೊಳ್ಸಂಭವಿಸಿದುದರಿನವನುಮಹಾಕುಂಭಕರ್ಣನುಮಿಳೆಯೊಳು ॥ ಘೋರಸ್ವರೂಪದಿಂಲೋಕಕಂಟಕರಾದ । ರೈ ರಾಮಚಂದ್ರಮನೆಕೇಳಾವಿಭೀಷಣನು । ದಾರಸ್ವಭಾವದಿಂಲೋಕೈಕಹಿತನಾಗಿಧರ್ಮಪರನಾಗಿರ್ದನು ॥೧೫॥

ಆನಾಲ್ವರೊಳ್ಕುಬೇರಂಮಹಾತಪದಿಂದು । ಮಾನಾಯಕನನೊಲಿಸಿ ಪಡೆದನಾಪುಷ್ಪಕವಿ । ಮಾನಮುಂನವನಿಧಿಯುಮಂತಪ್ಪಲಂಕೆಯುಂಲೋಕಪಾಲತೆಯುಮಂತು ॥ ಸೂನುವಿನಪೇರ್ಮೆಯುಂನೋಡಿಮಾತಾಪಿತೃಗ । ಳಾನಂದಿಸುತಮಿರಲ್ಸೈರಿಸದೆಕೇಕಸಿದ । ಶಾನನಂಗಿಂತೆಂದಳುರೆಮನದೊಳಳಲಾಂತುಕಿಸುಗಣ್ಣುಕಯ್ಗಣ್ಮಲು ॥೧೬॥

ಮಗನೆ ಮಗನೇನೋಡಿದೆಯನಿನ್ನಪೂರ್ವಜಂ । ಸುಗುಣನೆಂದೆನಿಸಿದ ಕುಬೇರಂಮಹಾತಪದೆ । ಜಗದೊಡೆಯನೆನಿಪ್ಪುಮಾಕಾಂತನಂಮೆಚ್ಚಿಸಿಪಿನಾಕಿಸಖನೆನಿಸಿಕೊಂಡು ॥ ಬಗೆಗೊಳ್ವಲಂಕೆಯೊಳ್ವಾಸಿಸುತೆಪವನನಿಂ । ಮಿಗಿಲೆನಿಪವೇಗದವಿಮಾನಮಂಪಡೆದುತಾಂ । ದಿಗಧಿಪತಿಯೆನಿಸಿತಾಯ್ತಂದೆಗಳಕುಲವನುದ್ಧರಿಸಿದಂನೀನೇತಕೆ ॥೧೭॥

ಸವತಿಯುಳಗರ್ಭದೊಳ್ಪಿರಿದೆನಿಪನಿಧಿವೊಲು । ದ್ಭವಿಸಿದಂಧನದನವನಂಪೆತ್ತೊಡಲೆಧನ್ಯ । ಮವನಜನ್ಮವೆಸಫಲವೆನ್ನಬಸುರೊಳ್ಪುತ್ತುತಲೆಯಪುಳುವಂತೆನೀನು ॥ ಸವನಿಸಿದೆಜನ್ಮವಂಫಲಮಿಲ್ಲದಾವಗಂ । ವಿವಿಧಶಯನಾಸನಾಹಾರಾದಿಸುಖವನನು । ಭವಿಸುತ್ತೆಕಣ್ಣನೇಬಿಡದಿರ್ಪಹಸುಳೆಯಂದದೊಳಿರ್ಪೆಯೇನೆಂಬೆನು ॥೧೮॥

ಏಸುಪುಣ್ಯಾತ್ಮಳೋಮಂದಾಕಿನೀದೇವಿ । ಯಾಸುಕೃತವೆನಗಿಲ್ಲವಾದುದೀಚಿಂತೆಯುಂ । ಸೈಸುವೆನದೆಂತುನಾನಕಟನೀಂನೆಗಳ್ದಪದ್ಮಾಸನನಕುಲದೆಜನಿಸಿ ॥ ಲೇಸನೆಣಿಸದೆಸತತಮುಂದೇಹಪೋಷಣದೊ । ಳಾಸಕ್ತನಾಗಿಮತಿಹೀನನೆಂದೆನಿಸಿರ್ಪೆ । ಪೇಸರುಂತನ್ನೊಡಲಹೊರೆಯದೇನಿನ್ನಜನ್ಮಕ್ಕೆಫಲವೇನೆಂದಳು ॥೧೯॥

ಆವಚನವಂಕೇಳ್ದುಘುಡಿಘುಡಿಸಿಹುರುಡಿಂದೆ । ರಾವಣಂದಾರುಣಮಹಾತಪವನಾಚರಿಪ । ಭಾವದಿಂದಿಂತೆಂದನೆಲೆಜನನಿಮಂದಾಕಿನೀದೇವಿಗೊರ್ವಸುತನು ॥ ಮೂವರಂಲೋಕೈಕವೀರರಂಪಡೆದೆನೀಂ । ಭಾವಿಸಿದೊಡೆಣೆಯಿಲ್ಲನಿನ್ನಪುಣ್ಯಕೆಧನವ । ನಾವಪುಳುತಪವವನದೆನಿತರದುಸಿರಿಯೆನಿತರದುತನ್ನನುವನಾಲಿಸು ॥೪೦॥

ತೊರೆದುನಿದ್ರಾಹಾರಸುಖಗಳಂತಾನೇಕ । ಚರಣದೊಳ್ನಿಂತುದುಷ್ಕರಮೆನಿಪತಪವನಾ । ಚರಿಸಿಶತಪತ್ರಾಸನನನೊಲಿಸಿಬೇಕಾದವರಗಳಂಕಯ್ಕೊಂಬೆನು ॥ ಸುರನರೋರಗಯಕ್ಷರಾಕ್ಷಸರನೆನ್ನಕಿಂ । ಕರರನಾಗಿಸುವೆನಾಮೂಲೋಕವನೆವಶೀ । ಕರಿಸದಿರೆನೀಂವಿಭೀಷಣಕುಂಭಕರ್ಣರುಂತನ್ನಂತೆನಡೆವರೆಂದು ॥೪೧॥

ಒಡನೆತಮ್ಮಂದಿರೊಡಗೂಡಿಜನನಿಯಬೆಸಂ । ಪಡೆದುಪೊರಮಟ್ಟುಗಿರಿಕಾನನದೆನಿಂತುಮೇ । ಗಡಿಯಾಗೆನಿಟ್ಟುಸುತೆನೇಸರಂನೇಮದಿಂಕನಸುಣಿಸುಸೊಗಗಳುಳಿದು ॥ ಮಿಡುಕದಿರ್ಪೇಕಾಗ್ರಭಾವದಿಂಬಹುಕಾಲ । ಮೊಡೆವಿಡದೊಡರ್ಚಿದಮಹಾತಪದೊಳೊಲಿಸಿಪೊಂ । ಬೊಡೆಯನಂಪಡೆದನಾರಾವಣಂತ್ರೈಲೋಕ್ಯರಾಜ್ಯಾಧಿಕಾರಪದವ ॥೪೨॥

ಮತ್ತಮಾಮುದಮತ್ತನಾವಿತ್ತನಾಥನಿಂ । ದುತ್ತಮೋತ್ತಮಮಪ್ಪಪುಷ್ಪಕವಿಮಾನಮಂ । ಕಿತ್ತುಕೊಂಡಾತನಂಪೊರವಡಿಸಿನಿಶ್ಶಂಕನಾಗಿಲಂಕಾಪುರವನು ॥ ಒತ್ತಿಸುರಪತಿಗೆಮಿಗಿಲೆನಿಪಸಿರಿಯಿಂದೆಮೆರೆ । ಯುತ್ತರಾಕ್ಷಸಚಕ್ರವರ್ತಿಯೆಂದೆನಿಸಿಬಾ । ಳುತ್ತಿರ್ದನಾಳುತ್ತೆಮೂಜಗವನನುಮಕಿಂಕರರಾಗೆಸುರರೆಲ್ಲರೂ ॥೪೩॥

ಆಕುಂಭಕರ್ಣನಾಪರಿಯಿಂದೆತಪವೆಸಗಿ । ಕೋಕನದಗರ್ಭನಿಂಬೇಕಾದವರಗಳಂ । ಕೈಕೊಂಡುತಾಮಸಪ್ರಕೃತಿಯಾಗಿರ್ದನಿಂತಿರ್ವರುಂದುರುಳರಾಗಿ ॥ ಲೋಕಕಂಟಕರಾದರಾವಿಭೀಷಣನಂತ । ನೇಕವರ್ಷದತಪದೊಳೊಲಿಸಿನಾಲ್ಮೊಗನಂವಿ । ವೇಕದಿಂಧರ್ಮಬುದ್ಧಿಯನೊಂದನೇವರಿಸಿಲೋಕಹಿತಮತಿಯಾದನು ॥೪೪॥

ಅಮರಾವತೀಪುರದ ದೌರ್ಭಾಗ್ಯದಾಕೃತಿಯು | ಯಮಿಜನದತಪಕೆ ವಿಘ್ನಾಕೃತಿಯು ಜಗದೊಳಹ | ಕಮಲಾಕ್ಷಿಯರ ಸಚ್ಚರಿತವಲ್ಲರಿಗೆ ಕುಠಾರಾಕೃತಿಯುಗೋವ್ರಜಕ್ಕೆ || ಯಮದೇವತಾಕೃತಿಯು ದಶಶಿರೋಧಿಯುಪರಾ | ಕ್ರಮವಹಾವಳಿಗೆತಲ್ಲಣಿಸೆ ಲೋಕತ್ರಯಂ | ಕಮಲಜನನಾಗಳತಿಮಾತ್ರಭಯದಿಂದಮರರೆಲ್ಲರುಂ ಮರೆವೊಕ್ಕರು || ೪೫ ||

ಅಂತುಮರೆವೊಕ್ಕಪುರುಹೂತಮುಖದಿವಿಜರಂ | ಸಂತವಿಟ್ಟರವಿಂದಭವನವರನೊಡಗೊಂಡ | ನಂತಶಯನನ ಸನ್ನಿಧಾನಕ್ಕೆತಳುವದೈತಂದುಮುಂದಾಗಿನಿಂದು || ಶಾಂತಸ್ವರೂಪದಿಂದಹಿತಲ್ಪದೊಳ್ರಮಾ | ಕಾಂತೆಯೊಡಗೂಡಿ ಸುಖದಿಂಪವಡಿಸಿರ್ಪದನು | ಜಾಂತಕನನುರುಭಕ್ತಿಯಿಂ ಕಂಡುನುತಿಸೆ ತೊಡಗಿದನಿಂತುಕುಂಬಿಡುತ್ತೆ || ೪೬ ||

ಜಯಜಯಜಗತ್ಪಾಲ ಜಲಧಿಕನ್ಯಾಲೋಲ | ಜಯಜಯಕೃಪಾಪಾಲನತಲೋಕಸುರಸಾಲ | ಜಯಜಯತಮಾಲಕಂದಳನೀಲ ಕಸ್ತೂರಿಕಾತಿಲಕಲಸಿತಫಾಲ || ಜಯಜಯಸುಶೀಲ ಧೃತತುಂಗಮಂದರಶೈಲ | ಜಯಜಯಪರಿತ್ರಾತದನುಜಾಧಿಪತಿಬಾಲ | ಜಯಜಯವಿಶಾಲ ವಕ್ಷೋಲಂಬಿವನಮಾಲತೇ ನಮಸ್ತೇ ನಮೋಸ್ತು || ೪೭ ||

ಶರಣಾಗತಾರ್ತಿಹರ ತರುಣಾಂಬುಧರ ರುಚಿರ | ಸುರಯೋಗಿಕುಲವಿನುತ ಪರಿಹೃತಾಖಿಲದುರಿತ | ಸರಸಿರುಹದಳನೇತ್ರ ನಿರುಪಮಿತಚಾರಿತ್ರ ಗಿರಿಸುತಾಕಾಂತಮಿತ್ರ || ವರಕೌಸ್ತುಭಾಭರಣ ಶರನಿಧಿಸುತಾರಮಣ | ನಿರತಿಶಯಗುಣಯುಕ್ತ ನಿರಪಾಯನಿಜಭಕ್ತ | ಕರಕಲಿತಚಕ್ರಧರ ನರಸಿಂಹರೂಪಧರತೇ ನಮಸ್ತೇನಮೋಸ್ತು || ೪೮ ||

ಪುಂಡರೀಕಾಕ್ಷಾಯ ಪುಣ್ಯಕೃದ್ರಕ್ಷಾಯ | ಚಂಡರಿಪುಮಥನಾಯ ಚಂದ್ರನಿಭವದನಾಯ | ದಂಡಧರಭಯದಾಯದಂತಿಪತಿವರದಾಯದಮಿತಮಧುಕೈಟಭಾಯ || ಕುಂಡಲಿಪತಲ್ಪಾಯ ಕುಂಡಲಾಕಲ್ಪಾಯ | ಪಂಡಿತಪ್ರಣುತಾಯ ಪಾಂಡುಸುರಹಸಿತಾಯ | ಖಂಡಿತಕ್ಲೇಶಾಯ ಖಾದಿಭೂತೇಶಾಯತೇ ನಮಸ್ತೇನಮೋಸ್ತು || ೪೯ ||

ತಂದೆತಂದೈವೇದಮಂ ಸೋಮಕಾಸುರನ | ಕೊಂದು ಮೀನಾಗಿನೀಂ ಕಡಲೊಳಗೆ ಮುಳುಗಿರ್ದ | ಮಂದರಾದ್ರಿಯನಾಮೆಯಾಗೆತ್ತಿ ಸುರರನೊಲ್ದೋವಿದೆ ಹಿರಣ್ಯಾಕ್ಷನಂ || ಹಂದಿಯಾಗಿಕ್ಕಿಳೆಯನುಳುಹಿದೆ ನೃಸಿಂಹನಾ | ಗಂದುರದೆ ಭೇದಿಸಿ ಹಿರಣ್ಯಕಶಿಪುವಕಾದೆ | ಕಂದನಂಪ್ರಹ್ಲಾದನಂ ಬಲಿಯ ಮೆಟ್ಟಿವಾಮನನಾಗಿ ಹರಿಯ ಪೊರೆದೆ || ೫೦ ||

ಮತ್ತೆ ಭಾರ್ಗವರಾಮನಾಗವತರಿಸಿ ಮದೋ | ನ್ಮತ್ತದುಷ್ಟಕ್ಷತ್ರಿಯರ ಮೊತ್ತಮೊತ್ತಮನೆ | ಕತ್ತರಿಸಿ ಧರ್ಮಸಂಸ್ಥಾಪನೆಯಮಾಡಿದೆಗಡಾ ಮಹೀಮಂಡಲದೊಳು || ಉತ್ತರತ್ರಮುಮಂತು ಮೂಲೋಕಮಂಪೀಡಿ | ಸುತ್ತಿರ್ಪ ರಾವಣನನಳಿಸುವಂತಿರೆ ಭಾನು | ಕತ್ತಲೆಯನಳಿಸಿ ನೀನೊಲ್ದು ಕಾವುದು ಜಗವನೆಂದೆರಗಿಬೇಡಿಕೊಳಲು || ೫೧ ||

ಸಿರಿಯರಸನೊಡನವಂಕೇಳ್ದು ಮಂದಸ್ಮಿತಂ | ಶರದಿಂದುಕಾಂತಿಪ್ರಕರ್ಷವಂ ಜರಿಯುತಿರ | ಅರವಿಂದಸಂಭವ ಪುರಂದರಪ್ರಮುಖರಹ ಸುರರೆಲ್ಲರುಂಕೇಳ್ವುದು || ದುರುಳನಹರಾವಣನ ಸಂಹಾರಕೀವಸುಂ | ಧರೆಯೊಳವತರಿಪೆನಾಂ ನರನಾಗಿನೀವು ಮ | ಚ್ಚರಸಿಯರೊಳ್ನಗೆ ಕಯ್ಮೆರವಾಗಿಜನಿಯಿಪುದು ಪರಿಪರಿಯ ವಾನರರನು || ೫೨ ||

ಎಂದನುಗ್ರಹಿಸಲಾಹರಿ ಕೇಳ್ದುದಂಶತಾ | ನಂದ ಸಂಕ್ರಂದನಪ್ರಮುಖರಪ್ಪಖಿಲಸುರ | ರಂದಮರ್ದುರ್ಗಡಲೊಳಾಳ್ದುದರೆಂಬೊಲಾನಂದಮಯರಾಗಿ ಸಂಭ್ರಮದೊಳು || ಸಂದಣಿಸಿಭಕ್ತಿಯಿಂ ಶ್ರೀಹರಿಯಚರಣಕಭಿ | ವಂದನಂಗೈದು ಮರಳಿದರೊಡನೆ ಸುರಲೋಕ | ಸುಂದರಿಯರೊಳ್ನಿಜಾಂಶಂಗಳಂಸೃಜಿಸಿದರ್ಪರಿಪರಿಯ ವಾನರರನು || ೫೩ ||

ಕೋಸಲವಸುಂಧರಾರಮಣಕೇಳ್ನಿಮ್ಮಯ್ಯ | ನಾಸಮಯದೊಳ್ ತನಗೆ ಸಂತಾನಮಿಲ್ಲದಿರೆ | ಭೂಸುರರಮತದಿಂದೆ ಪುತ್ರಕಾಮೇಷ್ಟಿಯನೊಡರ್ಚಲುಕ್ತಕ್ರಮದೊಳು || ಆಸರೋಜಾಂಬಕನೆ ನರಲೀಲೆಯಿಂದಿಂತು | ಕೌಸಲ್ಯೆಯಲ್ಲಿಜನಿಸಿದನೊಗೆದರಂತುನಿ | ನ್ನೀಸಹೋದರರೊಡನೆತದನುಬಂಧಿಗಳಾಗಿ ಮಿಕ್ಕಿರ್ವರಾಣಿಯರೊಳು || ೫೪ ||

ಸಿಂಹಸಂಹನನಕೇಳಾಬಳಿಕವಿಶ್ರುತ | ಬ್ರಹ್ಮವಂಶದೆ ಜನ್ಮವೆತ್ತಿರ್ದ
ನಾದೊಡಂ | ಜಿಹ್ಮಮಾರ್ಗಂಬಿಡಿದು ಕಾಮಾಂಧನಾಗಿ ಜಾನಕಿಯುನಪಹರಿಸಿ
ಜಗವ || ಅಂಹಸ್ಸ್ವರೂಪನೆನಿಸಿದ ದಶಗ್ರೀವನಂ | ಸಿಂಹಮುರುದಂತಿಯುಂಸಂ
ಹರಿಸುವಂದದಿಂ| ಸಂಹರಿಸಿರಕ್ಷಿಸಿದೆಜಗವನೆನೆ ದಾಶರಥಿ ಹಂವೈಸಿ ಮೈಮರೆ
ದನು || ೫೫ ||

ಕೇಳೆಲೈಮುನಿವರ್ಯ ಕುಂಭಸಂಭೂತನೊಡ | ನಾಲೋಕಿಸುತೆ ರಾ
ಮಚಂದ್ರಮನನೆಲೆ ಜಗ | ತ್ಪಾಲಲಕ್ಷ್ಮೀಲೋಲ ಕಮಲಾಕ್ಷಪಕ್ಷೀಂದ್ರವಾ
ಹನ ಭುಜಂಗಶಯನ || ಪೇಳಲೇನಾಳ್ದಪರೆ ನೀನಿಂತುಮೋಹವಂ | ಕಾಲ
ಕರ್ಮಂಗಳೆಲ್ಲಾ ನಿನ್ನವಶವಲಾ | ಜಾಲವೇನಿದುದೇವ ಸಂತೈಸಿಕೊಳ್ಳೆಂ
ದು ಕಯ್ಯಿಂದೆನೇವರಿಸಲು || ೫೬ ||

ತಿಳಿದೊಡನೆ ಕಂದೆರೆದಗಸ್ತ್ಯನಂ ನೋಡಿ ರಘು | ಕುಲತಿಲಕನಪ್ರಾಕೃ
ತಂಪ್ರಾಕೃತನದಶೆಯೊ | ಳೆಲೆಮುನಿವರೇಣ್ಯನೋಡಿದಿರ ಮುಗ್ಧಾತ್ಮನಾದೆ
ನ್ನಮತಿವಿಭ್ರಮವನು || ನೆಲದೊಳುರೆನೆಗಳ್ದ ರವಿಕುಲದೊಳಾನುದ್ಭವಿಸಿ |
ಲಲನಾನಿಮಿತ್ತದಿಂ ಕಾಮದಿಂ ಮೋಹದಿಂ | ಬಲವತ್ತರಕ್ರೋಧದಿಂ ದ್ವಿಜಕು
ಲೀನನಂಕೊಂದು ಪಾತಕಿಯಾದೆನು || ೫೭ ||

ಮುನಿಪಕೇಳೈದಾನಮಾನಂಗಳಿಂ ಪೂಜ್ಯ | ಮೆನಿಸಿರ್ಪಬಾಡಬಾನ್ವ
ಯದೊಳಗೆಜನಿಸಿ ಮೂ | ರನೆಯ ಸಾಂಗೋಪಾಂಗವಾದ ವೇದಮನೋದಿ
ಶಿವಭಾಗವತನೆನಿಸುತ್ತೆ || ಅನುಪಮಪ್ರಖ್ಯಾತಿಯಂಪಡೆದ ವಿಶ್ರವ | ಸ್ತನುಜ
ನಂ ಕುಲಸಹಿತಮವಿವೇಕಬುದ್ಧಿಯಿಂ | ಹನನಗೈದೆನಗೆ ಕಡುಪಾತಕಿಗೆ ನರ
ಕಗತಿಯಾಗುವುದೆ ನಿಜವೆಂದನು || ೫೮ ||

ವೇದಗಳೆಧರ್ಮಮೂಲಂಗಳೆನಿಸುವುವು ವಸು | ಧಾದಿತೇಯರೆ ವೇದ
ಮೂಲರೆಂದೆನಿಸರಲೆ | ವೈದಿಕೋಕ್ತಿಗಳಂತುಚಿತ್ತರಿಪವಿದನರಿಯದಾಮಹಾ
ಬ್ರಾಹ್ಮಣನನು || ವೈದೇಹಿಗೋಸುಗಂಕೊಂದೆನಾಂ ಬ್ರಹ್ಮಹ | ತ್ಯಾದೋ
ಷಮವರಿಂದೆಪೊರ್ದಿತೆನ್ನಂಶಿವಮ | ಹಾದೇವ ನಿಷ್ಕಳಂಕಂಸೂರ್ಯವಂಶಮೆ
ನ್ನಿಂಕಳಂಕಿತವಾದುದೇ || ೫೯ ||

ತಿಳಿದಿರ್ದೊಡಂ ಸಚ್ಚರಿತೆಯೆಂದು ಸತಿಯನು | ಜ್ವಳದಗ್ನಿಯೊಳ್ಪೊಕ್ಕಡ
ಹಿಲೋಕವಂ ಮೆಚ್ಚಿಸಿದೆ | ನಳಂಕಿಲೋಕಾಪವಾದಕ್ಕೆ ನಾನಂದಹಹ ಬಳಿ
ಕೆರ್ವರ್ದಮುಡಿವಳ್ಳನ ‖ ಅಳನುಡಿಗೆ ಗರ್ಭವತಿಯೆನಿಸಿದವಳಂದುತ್ತೆ | ಹಳು
ವಕೊರ್ವರ್ಗಳನಟ್ಟಿ ಮನದಕಾಲುಷ್ಯಮಂ | ಕಳೆದೆನಾಬಳಿಕಿದೊಂದಜ್ಞಾನಕೃ
ತದುಷ್ಕೃತಂಬಂದುದೇಗೈವೆನು ‖ ೬೦ ‖

ದುರಿತವೊದಾರುಣಂ ಬ್ರಹ್ಮಹತ್ಯಾಜನ್ಯ | ದುರಿತಮದರೊಳುಮಧಿ
ಕದಾರುಣಮಿದಕ್ಕೆ ಸರಿ | ಹರಣಮೊಂತರಿನಪ್ಪುದೋ ತಿಳಿಯೆನಾನದಂಶಾಸ್ತ್ರ
ಭಿಮತಿಯೊಳೆನಗೆ ‖ ಕರುಣಿಸಿಕೃತಾರ್ಥನಂನೀವೆನ್ನನಾಗಿಪುದು | ಪಿರಿದುಚಿಂ
ತೆರ್ಗುವುದೆನ್ನಮನದನೀವಂದುಗಂ | ತರಣಿಕುಲದರಸರ್ಕಳಸುಪನಾದೊಡ
ಮುಳಿವರಸಮಾವಕಿಂಬಾಗರು | ೬೧ ‖

ಎಂದುಬೆಸಗೊಂಡೆಇಕ್ಷ್ವಾಕುಭೂಪಾಲಕುಲ | ನಂದನಂಕೇಳ್ದದಂ.
ಮೈತ್ರಾವರುಣಿ ಮನದೊ | ಳೆಂದುಶಾಸ್ತ್ರಾರ್ಥಮಂನೆನೆದೆಲೆರಘೂತ್ತಮ
ನೆನೀನಿಂತುಚಿಂತಿಸುವುದು ‖ ಚಂದಮೇಜಗದೊಳಗೆನಿನ್ನನಾಮಸ್ಮರಣೆ | ಯಿಂ
ದಮೋ ಬ್ರಹ್ಮಹತ್ಯಾದೋಷಮುಳಿವುದೆನೆ | ಲೆಂದಮೆನದೇನನಾಂ ನಿನ್ನನೆದು
ಪೊರ್ದುವುದೆ ಶೋಕಮಂನೂಕೆಂದನು ‖ ೬೨ ‖

ನೋಡಲಿದನೆಲ್ಲಮಂ ನಿನಗೆಲ್ಲಿಯದುದೇವ | ಬಾಡಬಾಘಾತಪಾತಕ
ಮೆಂಬುದಾದೊಡಂ | ಮಾಡುನೀನಖಿಲದುರಿತಾಪಹರಮೆನಿಪಶ್ವಮೇಧಮಂಜನ
ಮೆಚ್ಚಿಗೆ ‖ ಜೋಡಿಯಾರಥಟನೊಳುಮೈಸಿರಿಯೊಳುಂ ನಿನಗೆ | ನಾಡೆನೀನ
ಹರ್ನೈನಿಮ್ಮಪ್ರಾರ್ವಿಕರಿಂ | ಮಾಡಿರ್ಪರಿಂದಿರಂಶತತುರಗಮೇಧಮಂಗೈದು
ಸುರಪತಿಯಾದನು ‖ ೬೩ ‖

ಎಂದಮಾತಂಕೇಳ್ದುದಿನಮಣಿಕುಲೋಪಮನ | ಚಂದನಂಮುನಿಪನೀ
ಮರುಹಿದುದುತಕ್ಕುದಭಿ | ನಂದಿಸುವೆನಾನುಮಾದೆ ಡೆಪತ್ನಿಯಿಂದಗಲ್ದೆನಗೆ
ಮಖದೀಕ್ಷೆಯೆಂತು ‖ ಸಂದಪುದುಬೆಸವೆಳ್ಪುದೆನೆಘಟಜನೆಲೆ ರಾಮ | ಚಂದಿ
ರನೆಕೇಳಾದೊಡೇಂಕನಕಮಯಪತ್ನಿ | ಯಿಂದೆನೀನೊಡಗೂಡಿಮಖದಾರಂ
ಭಿಸಿದುಶಾಸ್ತ್ರಸಮ್ಮತಮಾದುದು ‖ ೬೪ ‖

ಎನಲವಂಕೇಳ್ದು ವಿಪ್ರಘೋತಭೀತನಾ । ಮನುಕುಲಾಲಂಕಾರನಾ
ಮಹಾಧ್ವರಮೆಸಗ । ಲನುಗೈದು ಪಿರಿಯರೊಪ್ಪಿರ್ದ ಉರವಾಳ್ಕೆಯುಂ ತಿಳಿ
ಯಲುತ್ಸಾಹದಿಂದೆ ‖ ಮುನಿಪತಿಯೆ ಗೆಲ್ವುದಾರಂ ಮನ್ನಿಸುವುದಾರ । ನೆನಿತು
ದಕ್ಷಿಣೆ ಕುದುರೆಯೆಂತಹುದೊಡರ್ಚಲದು । ತನಗೆಕ್ಕುವೇನಿದಂ ಬೆಸವೇಳ್ವು
ದೆಂದುಬೆಸಗೊಳೆ ಮುನಿಪನಿಂತೆಂದನು ‖ ೬೫ ‖

ಬಲವೈರಿಮೊದಲಾದ ಸಕಲದಿಕ್ಪತಿಗಳಂ । ಗೆಲಲರಿಯದಿರ್ದ ರಾವಣ
ಕುಂಭಕರ್ಣಾದಿ । ಖಲರಾಕ್ಷಸರ್ಕಳಾಯುವನೊರಸಿ ಲೋಕೈಕವೀರನೆಂ
ಬಾಪೆಸರನು ‖ ತಳೆದು ಸಾಮಂತಭೂಕಾಂತಶತಮಕುಟತಟ । ವಿಲಸನ್ಮ
ಣೀಕಿರಣಪಟಲಪರಿಪಾಟಲಿತ । ಕಲಧೌತಪದಪೀಠನೆನಿಪ ನಿನಗಲ್ಲದಾರ್ಗೀ
ಕ್ರತುವನೆಸಗಲಹುದು ‖ ೬೬ ‖

ಅರಸಕೇಳ್ಗಂಗಾಂಬುವಂತಿರೆ ಬೆಳತೊಗಲ । ಕರಿದೆನಿಸಿದೊಕೆರ್ಗ
ಡಕೆಯಿಂದೆಸೆವ ಚೆಮ್ಮೊಗದ । ಮಿರುಪಕನಕಚ್ಛವಿಯ ಪುಚ್ಛದೊಳ್ನಡೆಯ
ಪವನಂಗೆಮಿಗಿಲೆನಿಪಜವದ ‖ ತುರಗಮಂತಂದದರಪಣೆಗೆ ನಿಜವಿಕ್ರಮದ ।
ಬಿರುದನಂಕಿಸಿದಪೊಂಬಟ್ಟಮಂಕಟ್ಟಿ ಯೋ । ಧರನೊಡಗೊಳಿಸಿ ಪೂಜೆಗೈದು
ವೈಶಾಖಪೂರ್ಣಿಮೆಯೊಳಗದಂ ಬಿಡುವುದು ‖ ೬೭ ‖

ಇಂತಪ್ಪಕುದುರೆಬಿಟ್ಟೊಂದುವತ್ಸರದ ಪ । ರ್ಯಂತಮೀಧರಣಿಯಂ
ಬಳಸುತ್ತಮಿರ್ಕೆ ಬಲ । ವಂತರಾವರಸರ್ಕಳಲ್ಲಲ್ಲಿ ತಡೆಯಲದನೊಡನೆ ಪೋ
ಗಿರ್ಪಭಟರು ‖ ನಿಂತುಬವರಕ್ಕೆ ಪರರಾಯರಂಕಾದಿ ಗೆ । ದ್ದಂತಾದೊಡಂಬಿಡಿಸಿ
ತಹುದನ್ನೆಗಂ ಕರ್ತ । ನಾಂತು ಮೃಗಶೃಂಗಮಂ ಸುಬ್ರಹ್ಮಚರ್ಯದಿಂ ವ್ರ
ತನಿಷ್ಠನಾಗಿರ್ಪುದು ‖ ೬೮ ‖

ಬಂದುವರ್ಷಮನಾಹಯಂತಿರುಗಿ ತನ್ನೆಳೆಗೆ । ಬಂದಬಳಿಕಾಯಾಗ
ದೀಕ್ಷಿತಂ ದೆಸೆದೆಸೆಗ । ಳಿಂದೆ ಕರೆಯಿಸಿದ ಪಲಸಾಸಿರದ ನಿಗಮಾಗಮಜ್ಞರ
ಹಭೂಸುರರನು ‖ ಕುಂದಿಲ್ಲದಂತನ್ನಪಾನವಸ್ತ್ರಂಗಳಂ । ನಂದನೀಯಂಗಳ
ಹಪಾಲ್ಗರೆವ ಪಲದುರುಗ । ಳಿಂದೆಣಿಕೆಯಿಲ್ಲದಿಹ ದಕ್ಷಿಣಾದ್ರವ್ಯದಿಂದಳ್ಕರಿಂ
ಸತ್ಕರಿಸುತೆ ‖ ೬೯ ‖

ಕರೆಕರೆದುಪಥಿಕರಂ ಬಡವರಂ ಕಿವುಡರಂ । ಕುರುಡರಂ ಪಲತೆರದವಿ
ಕಲಾಂಗರಂ ಭಿಕ್ಷು । ಕರನಬಲೆಯರನರ್ಭಕರನನ್ನ ಪಾನಧನವಸ್ತ್ರಂಗಳಿಂ
ದಣಿಸುತೆ ॥ ಪರಮಾರ್ಥಬುದ್ಧಿಯಿಂದಶ್ವಮೇಧಕ್ರತುವ । ವಿರಚಿಸುವುದಿದರಿಂದೆ
ಭೂದೇವಹತ್ಯಾದಿ । ದುರಿತಂಗಳಳಿವುವೆನಲಾಘಟಭವನೊಡನೆ ರಾಘವೇಂ
ದ್ರಂ ನುಡಿದನು ॥ ೨೦ ॥

ಪೂಜನೀಯರಿವಾಜಿಮೇಧಾಧ್ವರಕೆ ತಕ್ಕ । ತೇಜಿನಮ್ಮಶ್ವಶಾಲೆಯೊ
ಳಿರ್ಪ ಸಿಂಧುಕಾಂ । ಭೋಜಮೊದಲಾದದೇಶದ ಕುದುರೆಗಳೊಳಿರ್ದಪುದೆನೀ
ವೆ ನೋಳ್ಪುದೆಂದು ॥ ರಾಜಾಧಿರಾಜನಾತಾಪಸೋತ್ತಮನೊಡನೆ । ವಾಜಿಶಾಲೆ
ಯುಪೊಕ್ಕು ಪರಿಪರಿಯಬಂಣದಿಂ। ರಾಜಿಸುತೆ ತರವಿಡಿದು ಕಟ್ಟಿರ್ದ ಕುದುರೆಗ
ಳ ಸಾಲ್ಗಳಂ ತೋರಿಸಿದನು ॥ ೨೧ ॥

ಕ್ಷೀರಾಂಬುರಾಶಿಯತರಂಗಗಳೊ ನೋಡಲಿವು । ಧಾರಿಣಿಗೆಬಂದಮರ
ಪುರಹಯದಸಂತಾನ । ಪ್ರೋರಘೋತ್ತಮನಜಸದೇಳ್ಗೆಯೋ ಎಂಬಂತೆತೋರ್ಪ
ಬೆಳ್ಗುದುರೆಗಳನು ॥ ವೀರರಾಮನಪ್ರತಾಪಕ್ಕಳುಕಿ ಪಲವುಮಾ । ಕಾರದಿಂದ
ವನೋಲಗಿಸೆಬಂದಾರ್ವನಾ । ಕಾರಗಳೊ ಎಂಬಂದದಿಂದೆ ಪರಿಶೋಭಿಸುತ್ತಿ
ರ್ಪಚೆಂಗುದುರೆಗಳನು ॥ ೨೨ ॥

ಬೆಳದಿಂಗಳುಂ ಮರದನೆಳಲುಮೊಂದಿರ್ಪಂತೆ । ಬಿಳಿದುಕರಿದುಂಬಣ್ಣ
ಮೊಂದಿಹತುರಂಗಮಂ । ಗಳತಂಡಮಂ ಸಂಜೆಗೆಂಪುಗೂಡಿದಶರನ್ಮೇಘಮಂ
ಡಂಗಳಂತೆ ॥ ಪೊಳೆವಕೆಂಪುಂಬೆಳ್ಪುಮೊಡಗೂಡಿನಾಡೆ ಕಂ । ಗೊಳಿಸುವತು
ರಂಗಾವಳಿಯನಿಂದ್ರಚಾಪಮಂ । ಪಳಿವಬಗೆಬಗೆಯಬಣ್ಣದ ಕುದುರೆಗಳನಂ
ತುಮುನಿವರ್ಯನೀಕ್ಷಿಸಿದನು ॥ ೨೩ ॥

ಕತ್ತುರಿಯಚಂದದಿಂದೈದೆಕರ್ಪೇರಿ ಮಿಂ । ಚುತ್ತಿರ್ಪಮೈಸಿರಿಯ
ಕುದುರೆಗಳನಿಕರಮಂ । ಮತ್ತೆಪೊಂದಾವರೆಯಬಣ್ಣಮಂಕಡೆಗಣಿಪಸೈಂಧ
ವಂಗಳತತಿಯನು ॥ ತತ್ತರಾಜಾವರ್ತದೊಡಲವರವಾಜಿಗಳ । ಮೊತ್ತಮಂ.
ನೋಡುತಾತಸಿಲನಂಜವದೆ ಮುಂ । ಚುತ್ತಿರ್ದೊಡಂಬಿಟ್ಟಸಂಪೆರತದೊಂದೆ
ಡೆಗೆತಿರುಗಿದಂ ಕುತುಕವಾಂತು ॥ ೨೪ ॥

ಅಲ್ಲಿಸಾಲ್ಗೊಂಡು ನೆರೆ ನೆರೆದಿರ್ದ ಪೂರ್ವೋಕ್ತ | ಸಲ್ಲಕ್ಷಣದಿನೊಪ್ಪು
ತಿಹ ಚತುರತುರಗಂಗ | ಳಲ್ಲಿದಿಟ್ಟಿಯಬಿತ್ತರಿಸಿ ರಿಸಿ ಕರಂವಿಸ್ಮಯಾವಿಷ್ಟಚಿ
ತ್ತನಾಗಿ || ಉಲ್ಲಾಸಮಂತಳೆದು ನರದೇವದೇವತಾ | ವಲ್ಲಭನವೋಲ್ಮಾಡು
ಮುಖಕತವತವಕದಿಂ | ದಿಲ್ಲಿಶರುಚಿರುಚಿರ ಮುಖವಾಜಿಗಳ್ಪಲವು ದೊರಕುವ್ರ
ವು ನೋಡುನೋಡು | ೨೫ ||

ಈಮಹತ್ತರಸಸ್ತಂತುಗಂ ನಿನೆಸಗಿ | ಭೂಮಿಯೊಳ್ನಿರ್ಮಲಯ
ಶೋಭ್ಯುದಯಮಂಪಡೆದು | ತಾಮರಸಮಿತ್ರನಂತೈದೆ ತೇಜೋವಂತನಾಗಿ
ರಿಪುಮಂಡಲದೊಳು || ಭೀಮವಿಕ್ರಮನಾಗಿ ಸುರಪನಂತಿರೆ ಪೊಲು | ದ್ದಾ
ಮವೈಭವಶಾಲಿಯಾಗಿರೆಂದೊರೆಯೆಬಳಿ | ಕಾಮುನಿಪನೊಡನೆ ಸರಯೂನದೀ
ತೀರಕ್ಕೆ ರಾಮಚಂದ್ರಂಬಂದನು || ೨೬ ||

೫ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೫ ಕ್ಕೆ ಪದ್ಯಗಳು ೨೪೪ ಕ್ಕೆ ಮಂಗಳಮಸ್ತು.

ಆರನೆಯ ಸನ್ಧಿ.

ಸೂಚನೆ || ಕುಲಪುರೋಹಿತವಸಿಷ್ಠರವುತದೆ ಮನುವಂಶ | ತಿಲಕನಧ್ವರದ ಮುಸ್ತೈದುಗಳನುರೆಸಜ್ಜು | ಗೊಳಿಸಿ ಶತ್ರುಘ್ನನಂ ಕಾವಲಿಟ್ಟಶ್ವಮಂವಿಧಿಯೊಳರ್ಚಿಸಿಬಿಟ್ಟನು ||

ಬಳಿಕವಾತ್ಸ್ಯಾಯನನನೇಕೇಳಾನದೀತೀರ | ದೊಳನಿಂದುರಾಮಚಂದಿರನೊಡನೆಕರಸಿನಿಜ | ಕುಲಪುರೋಹಿತವಸಿಷ್ಠರನೊಲ್ದುಪತಿಕರಿಸಿಬಿನ್ನವಿಸೆ ತನ್ನನುವನು || ಎಲೆರಾಮಭದ್ರನಾವನುವೋದಿಸುವೆವಿಂ | ಜಲಜಬಾಂಧವವಂಶಸಂಜಾತನಾಗಿಭೂ | ತಲದೊಳಪ್ರತಿವೀರನಾದ ನಿನಗನುರೂಪವಶ್ವಮೇಧಂಗೈವುದು ||೧||

ಇಂತುನುಡಿದಾಮಹಾಮುನಿ ರಘೂದ್ವಹನೆಳಸಿ | ದಂತೆ ತತ್ಕ್ಷಣವೊಪಲವಾಳ್ಗಳಂಶಿಲ್ಪಿಗಳ | ನಂತು ವರಸೂತ್ರಧರಸಚಿವರಂಬರಿಸಿಶುಭತಿಥಿವಾರನಕ್ಷತ್ರದೆ || ಮುಂತೆಸುಖವಿಳೆಯನೀರೆರಡುಗಾವುದಪರಿ | ಯಂತಮಾಗೆಮವಿಹಿತಮಾರ್ಗದಿಂಸೋಸಿ ಗಗ | ನಾಂತಚುಂಬಿಯ ಸಮಚತುಷ್ಕೋಣಮೈದರಿಯ ಗೈಸಿದಂ ಮಖಶಾಲೆಯ ||೨||

ಅದರೊಳಗೆಸವಹವಿರ್ಗೇಹಪತ್ನೀಶಾಲೆ | ಮೊದಲೆನಿಪನೇಕವಿಧಶಾಲೆಗಳನೊಡನೆರಚಿ | ಸಿದರನುಕ್ರಮದಿಂದನೇಕವೇದಿಗಳಂ ಸಮಂತು ಹೊರಸುತ್ತಿನೊಳಗೆ || ಪದಪಿಂದೆ ರಾಜರಬಿಡಾರಂಗಳಂನಿರ್ಮಿ | ಸಿದರಂತು ಶಿಲ್ಪಾಗಮಾಭಿಜ್ಞರಖಿಲಜನ | ರಿದು ಪೊಸತೆನಿಸ್ಪಬೇರೊಂದು ಪರಮಾಶ್ಚರ್ಯಕರರಾಜಧಾನಿಯೆನಲು ||೩||

ಬಿಗಿದತಿಳಿಗನ್ನಡಿಯಭಿತ್ತಿಗಳ ತಳ್ತಪ್ರೊಗ | ರೊಗುವಪೊಂದಾವರೆಯಸಾಲಮೋಲ್ಕಟ್ಟುಗಳ | ಬಗೆಬಗೆಯಗುಡಿತೋರಣದ ಚಾರಿಯಾಂತೆಸೆವಬೊಂಬೆಗಳಸಾಲ್ಗಂಬದ || ಸೊಗಯಿಸುವಮಣಿಸೂಸಕದ ಮುತ್ತಿನೊತ್ತುಗು | ತ್ತಿಗಳ ನುಣ್ಪೊಳಂಕಿನಿಳೆಗಟ್ಟಿನ ಹಿಮಾಂಬುಧಾ | ರೆಗಳನೊಸರಿಸುವಜಲಯಂತ್ರಗಳಮಖಶಾಲೆ ಕಣ್ಗೊಳಿಸಿತದ್ಭುತವೆನೆ ||೪||

ಬಳಿಕೋಲೆಗಳನಟ್ಟಿ ಸಂಬಂಧುಸಂಬಂಧಿ | ಗಳಕುಲಕುಲಕ್ಕಂತುಸಾ ಮಂತಭೂಮಿಪತಿ | ಗಳವರ್ಗಕಿನತನೂಜಾದಿಸ್ವಜನಂಗಮುಖ್ಯರ್ಗೆ ಮಿತ್ರ ಶ್ರೇಣಿಗೆ ‖ ಪಲಬರ್ಗೆ ವೇದವೇದಾಂಗಪಾರಗರೆನಿಸಿ | ದಿಳೆಯಪಿರಿಯರ್ಗೆ ಮಾರಘುವರಂ ಪನ್ನಣೆಯೊ| ಳೋಲವಿಂದೆ ತರುವಾಯಿನವರವರ್ದಿನದಿನದೊ ಳಲ್ಲಿಗೈತರುತಿರ್ದರು ‖೫‖

ತದನಂತರದೊಳಾವಸಿಷ್ಠಮುನಿ ಯತ್ರಿನಾ | ರದಕಪಿಲಪರ್ವತಾಸಿತ ಜಾತುಕರ್ಣಶುಕ | ಮೊದಲಾದನೇಕಮುನಿವರ್ಯರಂ ನಿಜಶಿಷ್ಯಕಿಂಕರಸಲವ ರೆಲ್ಲರುಂ ‖ ಮುದವೆತ್ತು ಬರೆ ಪರಮಪುರುಷನ ದಿದೃಕ್ಷೆಯಿಂ | ದಿದಿರೆವಂದುಪ ಚರಿಸಿ ರಾಮನರ್ಘ್ಯಾದಿಯಿಂ | ಪದಕೆರಗಿ ವಿಷ್ಟರವನಿತ್ತು ಕುಶಲಪ್ರಶ್ನೆಗ ಳನೊಲ್ದು ಮಾಡುತಿರಲು ‖೬‖

ಆಗಳಾತಾಪಸರಗಸ್ತ್ಯನೊಡನಾಮಹಾ | ಯಾಗಮಂಟಪದಲ್ಲಿ ಕುಳಿ ತು ವಿಶ್ರಮಿಸಿಕೊಂ | ಡಾಗಮಪುರಾಣನಿಗಮಾರ್ಥಪ್ರಸಂಗಮಂ ಗೈಯುತಾ ರಘುವರಂಗೆ ‖ ರಾಗದಿಂ ವರ್ಣಾಶ್ರಮಾಚಾರಧರ್ಮವಂ | ಯೋಗಿಧರ್ಮವನರು ಹುತಿರಲಾವಸಿಷ್ಠರ ನಿ | ಯೋಗದಿಂ ಸಜ್ಜುಗೊಳಿಸಿದರೊಡನೆ ಸಚಿವರಾಮಖ ದಸಾಮಗ್ರಿಗಳನು ‖೭‖

ಇಂತಿರಲ್ಕನಿತರೊಳ್ ತೋರಿತು ವಸಂತಋತು | ಮುಂತೆಪೂತುದುಮಾ ವುತಳಿರಿಡಿದು ಕಮ್ಮಲರ | ನಾಂತುದುಮಲ್ಲಿಗೆ ಕಂಗೊಳಿಸಿತು ಬನಬನದೆ ಪೊಕ್ಕು ಳವಕ್ಕಿ ಕುಕಿಲ್ಕಿಕ್ಕಿತು ‖ ಸಿಂತುನಿಂತಲ್ಲಲ್ಲಿ ಸುಳಿವತ್ತು ಸೌರಭ್ಯ | ದಿಂ ತೀವಿ ಮೊಲ್ಲೆ ಲತೆರ್ಗಂಬಿತ್ತು ತುಂಬಿಗಳ | ತಿಂತಿಣಿಯುರಲ್ದ ತಾವರೆಯ ಬಂಡಂ ಸವಿದು ಝೇಂ ಕರಿಸುತೆಣ್ದೆಸೆಯನು ‖೮‖

ಆಸಮಯದಲ್ಲಿ ಘಟಸಂಭವವಸಿಷ್ಠರಾ | ಕೋಸಲೇಶ್ವರನ ಬಳಿಸಂದ ರಸನೊಡುಮಧು | ಮಾಸಮೈತಂದುದಿನ್ನಧ್ವರಕುಪಕ್ರಮಿಸು ಕುದುರೆಯಂ ತರವೇಳ್ಪುದು ‖ ಭೂಸುರರ್ಗೋಲವಿಂದೆ ಸಂತರ್ಪಣಂಗೈವುದು | ದಾಸೆಹಿಂಗುವ ನಿತ್ತು ದಕ್ಷಿಣೆಯನೀವುದೈ | ಬೇಸರದೆ ದೀನಾಂಧಬಧಿರಾದಿಗಳ್ಗೀವುದನ್ನಪಾ ನಾದಿಗಳನು ‖೯‖

ಈಪರಿಯೊಳಖಿಲವರ್ಣಂಗಳಂತತ್ತದನು । ರೂಪಸತ್ಕಾರದಿಂ ಮನ್ನಿಸುವುದ್ದೈ ಜಾತ । ರೂಪಮಯಪತ್ನಿಯಿಂದೊಡಗೂಡಿ ಸುಬ್ರಹ್ಮಚರ್ಯವ್ರತಸ್ಥನಾಗಿ ॥ ಭೂಪನಿಂ ಭೂಶಾಯಿಯಾಗಿ ಸಂತ್ಯಕ್ತಭೋಗಾಪೇಕ್ಷನಾಗಿ ಮೃಗಶೃಂಗಮಂತಳೆದು ನಿಯಮಾಪನ್ನನಾಗಿ ಮಖದೀಕ್ಷೆಯಂ ಕಯ್ಕೊಳ್ವುದೆಂದನುಜ್ಞೆಯನಿತ್ತರು ॥೧೦॥

ಭೂಮಿಪತಿ ಕೇಳ್ದದಂ ಕುದುರೆಯಂತಹುದೆಂದು । ಸೌಮಿತ್ರಿಯಂ ನೇಮಿಸಲ್ಕವಂ ಪೂರ್ವಜನ । ನೇಮಮಂ ಶಿರದೊಳಗೆ ತಾಂ ತಳೆದು ಕಾಲಜಿತ್ತೆಂದೆಂಬ ಪಡೆವಳಂಗೆ ॥ ರಾಮಚಂದ್ರಮನಾಜ್ಞೆಯಂ ತಿಳುಹಿ ಕೇಳೀಮಹಾಮಖತುರಂಗಮದಕಾವಲ್ಗೆ ರಿಪುಲೋಕ । ಭೀಮವೆನಿಸಿದನಮ್ಮ ಚತುರಂಗಸೈನ್ಯಮಂ ಸನ್ನಾಹಗೊಳಿಸೆಂದನು ॥೧೧॥

ಆಮಾತನಾಲಿಸಿ ವಿಳಂಬಿಸದೆ ಕಾಲಜಿ । ನ್ನಾಮನಾಪಡೆವಳಂ ಭೇರಿಯಂ ಪೊಯಿಸಿದೊಡೆ । ತೋಮರಕರಾಳಕರವಾಳ ಶರಚಾಪಮೊದಲಾದಕೈದುಗಳನಾಂತು ॥ ವ್ಯೋಮಮಗಲವನಳುರುತೆದ್ದಪಳವಿಗೆಗಳಂ । ಭೂಮಿತಲಮೋಕಾಣವಂತೆ ಚತುರಂಗಬಲ । ಮಾನುಹಾಪತ್ತನದಗೋರವಳಯದೊಳ್ಬಂದು ನಿಂದುದಾಕ್ಷಣಮಾತ್ರಕೆ ॥೧೨॥

ಪರಿಯೆ ತದ್ಬಲಮೊಡನೆ ಮುಂತೆಯುಂ ಪಿಂತೆಯುಂ । ಪರಿಜನಂ ಬೆಳ್ಗೊಡೆಯ ಪಿಡಿದೆತ್ತಿ ಚೌರಿಯಂ । ಪರಿಸರದೆ ಬೀಸುತಿರೆ ಸೌಮಿತ್ರಿ ಪೊಂದೇರನೇರಿ ಮುಂದೈದುತ್ತಿರೆ ॥ ಸುರಪತಿಗೆ ಪಟ್ಟಾಭಿಷೇಕಮಾದಂದು ಭಾ । ಸುರವೈಜಯಂತಕ್ಕೆ ನಾಕದೊಳ್ಬರುತಿರ್ದ । ಸುರವಾಹದಂತೆಸೆಯುತಾಕುದುರೆ ನಡೆತಂದುದಾಪುರದ ರಾಜಪಥದೆ ॥೧೩॥

ಈತೆರದೊಳಾತುರಂಗಮನನುಪಮೋತ್ಸವದೊ । ಳೈತರಲ್ಕಲ್ಲಮೆಲ್ಲನೆ ಯಾಗಮಂಟಪ । ಕ್ಕಾತಪೋನಿಧಿವಸಿಷ್ಠಂ ಕರೆದು ರಾಮನಂ ಕರ್ಮಕ್ಕುಪಕ್ರಮಿಸೆನೆ ॥ ಜಾತುಕರ್ಣಾಗಸ್ತ್ಯಮುಖ್ಯರನುಮತದೆ ಕಲ । ಧೌತಮಯಪತ್ನಿಯಿಂದೊಡಗೂಡಿ ಶಾಸ್ತ್ರೋಕ್ತ । ರೀತಿಯಿಂ ತಳೆದವಂ ಮೃಗಶೃಂಗಮಂ ಕರ್ಮಕಾರಂಭಿಸಿದನೆಂತೆನೆ ॥೧೪॥

ಶತಪತ್ರಸಖಕುಲಕೆ ಗುರುವಾದರುಂಧತೀ | ಪತಿಯಾಮಹಾಧ್ವರದೊಳಾಚಾರ್ಯನಾದ ನ | ಕ್ಷತತಪೋನಿಧಿಯಾದ ವಾಲ್ಮೀಕಿಮುನಿಯಾದ ನಧ್ವರ್ಯುಘಟಜಾತನು | ವಿತತಕರ್ಮಂಗಳಂ ಮುನಿಗಳೊಡವೆರೆದೊಡ | ಚರ್ಯತಮಿರ್ದನವನಿಪತಿ ಸುಬ್ರಹ್ಮಚರ್ಯ ಸು | ವ್ರತನಿಷ್ಠನಾಗಿ ಪಿರಿದುತ್ಸಾಹದಿಂದಲ್ಲಿ ಯಜಮಾನನಾಗಿರ್ದನು || ೧೫ ||

ದ್ವಾರವಿಧಿಯಂಗೈದು ಬಳಿಕಾ ವಸಿಷ್ಠಮುನಿ | ವಾರುವವನುಕ್ತಪ್ರಕಾರದಿಂ ಪೂಜಿಸ | ಲ್ಕಾರಂಭಿಸಲ್ಕೆ ಶುಭವಸನಮಣಿಭೂಷಣೆಯರಾದ ಕನ್ನೆಯರೆನಿಸಿದ || ನಾರಿಯರ್ಕುಂಕುಮಾಕ್ಷತ ಹರಿದ್ರಾಕುಸುಮ | ಹಾರಾದಿವಸ್ತುಗಳನೊಲ್ದು ಪೂಜೆಸಿದರೊಡ | ನಾರತಿಯನೆತ್ತಿದರುದಾರಮಂಗಳಗೀತವಾಡಿ ವಾರಾಂಗನೆಯರು || ೧೬ ||

ಯಮಿಕುಲಶಿರೋಮಣಿಯೆನಿಪ ವಸಿಷ್ಠಮುನಿ | ರಮಣಿಯರ ಪೂಜೆಬಳಿದಾಬಳಿಕ ಮಹಿತುರಂ | ಗಮದ ಕುಂಕುಮಚಂದನಾಕ್ಷತಸುಮಂಗಳಿಂದೈದೆ ಶುಭಶೋಭೆವಡೆದ || ವಿಮಳಭಾಳಸ್ಥಳದೆ ಕಟ್ಟಿದಂ ರಘುವೀರ | ನಮಿತಪ್ರತಾಪ ಬಿರುದಾವಳಿಯ ಕೀರ್ತಿಮ | ತ್ತಮಕನಕಪಟ್ಟಮಂ ಕೇಳೈ ಮಹಾಮುನಿಯೆ ತಲ್ಲೇಖನಕ್ರಮವನು || ೧೭ ||

ಶ್ರೀಸೂರ್ಯವಂಶಧ್ವಜಂ ಧನುರ್ಧರಕುಲಾ | ಗ್ರೇಸರಂ ವೈರಿಜನದರ್ಪಾಪಹಂಪೂರ್ವ | ಕೋಸಲಾಧಿಪನಂದಿನೀಗರ್ಭಶುಕ್ತಿಮುಕ್ತಾಮಣಿಮಹೀಶಾಗ್ರಣಿ || ದಾಸೀಕೃತಾನೇಕಸಾಮಂತ ಭೂಕಾಂತ | ಭಾಸುರಕಿರೀಟಮಣಿರುಚಿಕವಚಿತಾಂಘ್ರಿಸಿಂ | ಹಾಸನಾಧೀಶ್ವರಂ ಶ್ರೀರಾಮಚಂದಿರಂ ಹಯಮೇಧಮಂಗೈವನು || ೧೮ ||

ಆಹವದೆ ರಾವಣನ ಕೊಂದಘವನೊರಸೆ ಗೈ | ವಾಹವಕೆ ಬಿಟ್ಟಪರ್ಣಶರದಿಂದುಕಾಂತಿಪ್ರ | ವಾಹವನೆಪಳವಮೈಸಿರಿಯ ಬಹುಮಣಿಮಯಾಲಂಕೃತಿಯ ಜವಶಾಲಿಯ || ವಾಹವನಿದಂ ತಡೆವರಾರೊ ರಣಕರ್ಮನಿ | ರ್ವಾಹವಳವಟ್ಟ ಭಟರೆನಿಸಿದವರಂ ಹನ್ಯ | ವಾಹವನಮಂ ಪಡಿಸುವಂತುರುಪಿ ಬಿಡಿಸಿಕೊಳ್ವಂ ವೀರಶತ್ರುಘ್ನನು || ೧೯ ||

ಎನುತೆ ಬರೆದಿರ್ದ ಕಾಂಚನಪಟ್ಟಮಂ ಮುದಾ | ಮುನಿಹಯದ ಪಣೆಗೆ ಕಟ್ಟಿದ ಬಳಿಕ ಕೋಸಲಾ | ವನಿನಾಯಕಂ ನಿಜನಿದೇಶೈಕನಿಷ್ಠನಂ ಶತ್ರುಘ್ನನಂ ಕರೆಯಿಸಿ || ಅನುಜ ಕೇಳ್ಚತುಷ್ಕ ಚತುರಂಗಮೊನಿಸಾ | ಹಿನಿಯೊಡನೆ ಮುಖ್ಯತುರಂಗಮಂ ಕಾಪಿಟ್ಟು ನೀ | ನನುಸರಿಸಿಕೊಂಡದಂ ಪೋಗುವುದು ನಿಖಿಲಶಸ್ತ್ರಾಸ್ತ್ರಸನ್ನಾಹದಿಂದೆ || ೨೦ ||

ಕುದುರೆಯಂ ತಡೆದಾಂತವರನೆ ಮಾರಾಂತು ಜಯಿ | ಪುದು ಶರಣ್ಬೊಕ್ಕವರನಂತು ನಿಗ್ರಹಿಸುವರಂ | ಕದನಕ್ಕೆ ಕಟ್ಟಳ್ಕದವರನಪಗತರಥನಾಯುಧವಿಹೀನರುಮನು || ಸದೆಯದಿರು ನೀನಿದುತ್ತಮಧರ್ಮಮೆಂಬುದಯ್ | ವಿವರೊರೆವರಿದನರಿಯದವರನುರುಭುಜವೀರ್ಯ | ಮದದಿಂದೆ ಘಾತಿಸಿದ ದುಷ್ಟಪೀ ರಂಗೆ ಘೋರಗತಿಯಪ್ಪುದೈ ತಪ್ಪದೆ || ೨೧ ||

ಪರರೊಡವೆಗಾಸೆವಡಬೇಡ ಪರಸತಿಯರಂ | ಸ್ಮರಿಸಬೇಡೈ ಮನದೊಳುಂ ಕ್ಷತ್ರಧರ್ಮಮಂ | ಮರೆಯಬೇಡೈ ಪೂಜ್ಯಪ್ರಜಾವ್ಯತಿಕ್ರಮವನೆಸಗಬೇಡೈ ಮುನ್ನಮೆ || ಕಿರಿಯರಂ ಕಳುಹಬೇಡಾಹವಕೆ ಸಂಗರಾ | ಜಿರದೆ ಹಿಮ್ಮೆಟ್ಟಬೇಡೈ ಮಹಿತರಹಭೂಸು | ರರನಂತು ತುರುಗಳಂ ಕಂಡೊಡೆ ನಮಸ್ಕರಿಸಿ ಪೋಗು ಜಯಶಾಲಿಯಾಗು || ೨೨ ||

ಪರಕಾಮಿನೀಜನವನೆಳಸಿದೊಡೆ ಪಾತಕಂ | ದೊರಕುವುದು ನಿಜಲಕ್ಷ್ಮಿ ತೊಲಗುವುದು ಕೀರ್ತಿವ | ಲ್ಲರಿಯೊಣಗಿಪೋಪುದಪಕೀರ್ತಿವಧು ನಿಜಕುಲದೊಳಡಿಯಿಡುವಳನುಜ ಕೇಳು || ಪರಗತಿಗೆ ಕೇಡು ಸಂಭವಿಸುವುದು ಗೌರವದ | ಮರಿಯಾದೆ ತಪ್ಪುವುದು ಪರರೊಡವೆಗಳಸಿದೊಡ | ಮರಿವುದೀ ಪರಿಯಹುದು ಮನದೊಳರಿಸಿದನೆಲ್ಲಮಂ ಪೋಗಿಬಾಯೆಂದನು || ೨೩ ||

ಈ ಪರಿ ಬೆಸಸಿ ಲಕ್ಷ್ಮಣಾನುಜನನುಗ್ರಪ್ರ | ತಾಪರಹವೀರರಂ ನೋಡಿ ಮುಖಸೈಂಧವದ | ಕಾಪಿಗಿಂದೈದುವೀ ಲಕ್ಷ್ಮಣಾನುಜನ ಬೆಂಗಾವಲ್ಕೆ ನಿಮ್ಮೊಳಾರು || ಪೋಪುದಕೆ ಸನ್ನದ್ಧರೋ ರಿಪುಗಳಂ ಜಯಿಸ | ಲಾಪರೋ ಕೊಳ್ವುದವರೀ ವೀಳಯವನೆಂದು | ಭೂಪಮಣಿ ಬೆಸಗೊಂಡೊಡಲ್ಲಿರ್ದ ಭರತಸುತ ಪುಷ್ಕಲಂ ತಾನೆದ್ದನು || ೨೪ ||

ತವಕಿಸುತಿರ್ದನೆಬಿನ್ನವಿಸಿದಂ ಕೇಳುವೀಳ | ಯುವನೆನಗೆ ಬೆಂಗಾ
ವಲಾಗಿ ಚಿಕ್ಕಯ್ಯಂಗೆ | ಸನತುರಗದೊಡನೆಪೋಗಲ್ಕೆ ಸನ್ನದ್ಧನಾಗಿರ್ಪೆ
ನೆಲೆಜೀಯ ತಾನು || ಅವನಿಯೊಳ್ರಿಪುಗಳಂಗೆಲ್ವುದು ಭವತ್ಪ್ರತಾ | ಪವೆಪೆಸ
ಗಾರ್ಗಿನಾವ್ಯೈದಿಬರ್ಪೆವಿದಿರಾಂತೊ | ಡವದಿರಾರಾದೊಡಂ ಭವದನುಗ್ರಹದೆಗೆಲ
ಬಲ್ಲೆನರಿಭಟರನೆಂದು || ೨೫ ||

ಆಲಿಸಿ ತನುಕ್ತಿಯಂ ರಾಕ್ಷಸಕುಲಾಂತಕಂ | ಬಾಲಕನ ವಿಕ್ರಮಕೆ
ಮೆಚ್ಚಿ ಪೇರ್ಮೆಯಿಂದೆ | ವೀಳಯವನಿತ್ತುವತ್ಸನೆವೀರನಹುದು ನೀಂ ಭಾಪು
ಭಾಪೆಂದು ಪರಸಿ || ಗಾಳಿಯಣುಗಂಗೆಲ್ಲೆ ಹನುಮನಿನ್ನಿಂದೆ ಸೀ | ತಾಲಾಭ
ವಾದುದಂದೆನಗಿಂದು ಯಾಗಹಯ | ಪಾಲನಾಗೈಮವೀರಶತ್ರುಘ್ನನೊಡನೈದು
ವುದು ನೀನುಮೆಂದುಬೆಸಸಿ ||೨೬||

ಪಾವಮಾನಿಯೆ ಸೈನ್ಯಪಾಲನಾಗಿಹುದು ನೀಂ | ನಾವೆಂದುತೋರುವು
ದೊವತ್ಸ ಶತ್ರುಘ್ನಂಗೆ | ಧೀವಿಪರ್ಯಯವಂದು ನೀನವನನೆಚ್ಚರಿಸವೇಳ್ಕು
ಮೆನಲಾವೀರನು || ದೇವನಾಣತಿಯೆಂಪ ಪದಕೆರಗುವುದುಮಾವ | ಹೀವರಂ
ಬಂದಲ್ಲಿ ನೆರೆದಿರ್ದನೀಲಸು | ಗ್ರೀವವೊದಲಾದ ಕಪಿನಾಥರುಮನಾಹಯದ
ಕಾವಲ್ಗೆ ನೇಮಿಸಿದನು ||೨೭||

ಧರಣಿಪತಿ ಜಾಂಬವಂತನನಿರಿಸಿಕೊಂಡು ನಿಜ | ಪರಿಸರದೆನುತ್ತಮಾರ
ಭಟರಿರ್ದಪರೆಂದು | ನಿರುಕಿಸಿ ಸುಮಂತ್ರನಂ ಬೆಸಗೊಳ್ವುದುಂ ಬಳಿಕಕುಶಲ
ಮತಿಶಾಲಿಯವನು || ಅರಸಕೇಳುಗ್ರಹಯಶಸ್ತ್ರವಿನ್ನೀಲರ | ತ್ನರಿಪುತಾಪ
ಪ್ರತಾಪಾಗ್ರ್ಯಲಕ್ಷ್ಮೀನಿಧಿಗ | ಳರುವರಿವರಭಿನವಮಹಾವೀರರೆಮ್ಮಕಯ್ಮು
ರವಿಗೈತಂದಿರ್ಪರು ||೨೮||

ಮಾನವಾಧೀಶಕೇಳೀಯರುಮಂದಿಯೊ | ಳ್ಜ್ಞಾನಕೀರ್ದೇವಿಯೊಡಹು
ಟ್ಟಿನಿಪಶಾರ್ದೂಲ | ಕ್ಷೀರನಿಧಿಯುಲಕ್ಷ್ಮೀನಿಧಿಯುತಪಕೆ ನಾಲ್ಮೊಗಂನಾಡೆತಾ
ನೊಲಿದವಂಗೆ || ನಾನಾಮಹಾಸ್ತ್ರಸಂತತಿಯ ದಯೆಗೈದಿರ್ಪ | ಸೀನೀಲರತ್ನಾ
ದಿವೀರಾಗ್ರಗಣ್ಯರುಂ | ಮಾನನಿಧಿಗಳ್ಸುರರಂಗದಿಂ ಮರಳಬಹರಲ್ಲ ಜ
ಯುಮಂ ಪಡೆಯದೆ ||೨೯||

ಎಂದು ಬಿನ್ನೈಸಿದನದಂ ಕೇಳ್ದು ರಘುವಂಶ | ನಂದನಂ ಲಕ್ಷ್ಮೀನಿಧಿ
ಪ್ರಮುಖವೀರರಂ | ಮುಂದೆ ಕರೆದೆಲೆ ಮಹಾವೀರರಾ ನಿಮನಿಮಗೆ ತಕ್ಕನಿತ
ನೀಕಿನಿಯನು ॥ ಸಂವಣಿಸಿಕೊಂಡಶ್ವರಕ್ಷಣೆಗೆ ಶತ್ರುಘ್ನ | ನೊಂದಿಗೈದುವು
ದೆಂದು ನೇಮಿಸುವುದುಂ ತವಕ | ದಿಂದೆ ತಂತಮ್ಮ ಕೈದುಗಳಾಂತು ರಥವೇರಿ
ಸನ್ನದ್ಧರಾದರವರು ॥೨೦॥

ಮಣಿಮಯಾಭರಣಂಗಳಿಂ ಪೆಸೆವನೇಕವಾ | ರಣಗವಾಶ್ವಂಗಳಂ ತೇ
ರ್ಗಳಂ ರಾಮನಂ | ತೆಣಿಕೆಯಿಲ್ಲದ ದಕ್ಷಿಣೆಯನಾಗಳತ್ತನಾಚಾರ್ಯಾದಿಋತ್ವಿಜ
ರ್ಗೆ ॥ ತಣಿಯಿಸಿದನವನಿಸುರವರ್ಗವುಂ ಬಹುಳವಿತ | ರಣೆಯ ಬಹುದಕ್ಷಿಣೆ
ಯ ಸಂತರ್ಪಣದೆ ಪಂಗು | ಕುಣಿಕುಬ್ಜಮೂಕಾಂಧಬಧಿರಾದಿಗಳನನ್ನಪಾನ
ವಸನಂಗಳಿಂದೆ ॥೨೧॥

ಆವೀರಶತ್ರುಘ್ನನಲ್ಲಿಂದೆ ನಿಜಜನನಿ | ಯಾಪಾಸಕೈತಂದು ಪೊಡವ
ಟ್ಟು ಚರಣರಾ | ಜೀವಯುಗಳಕ್ಕೆಲೆ ತಾಯೆ ನಾನಗ್ರಜನ ರಾಮಚಂದ್ರನ
ನೇಮದೆ ॥ ಭೂವಲಯಮಂ ಸುತ್ತಿಕೊಂಡುಬಹ ಮಖಹಯದ | ಕಾವಲ್ಗೆ
ಪುಷ್ಕಲನನೊಡಗೊಂಡು ಪೋಗಿಬಹೆ | ನಾವರುಷವೊಂದರೊಳಗೆಂದು ಬಿನ್ನ
ವಿಸಲೊಡನಿಂತೆಂದಳಾಸುಮಿತ್ರೆ ॥೨೨॥

ಪೋಗಿಬಾಕಂದನೇ ನಿನಗಪ್ಪುದೊಳ್ಳೇವ | ಪಾಗಲಿ ಸಹೋದರಾತ್ಮಜ
ನಬಾಲನಸುಗುಣ | ಪ್ರಾಗಪುಷ್ಕಲನಸಪುಷ್ಕಲನನೀನೆಚ್ಚರದೆ ಕಾವುದಲ್ಲಲ್ಲಿ ರ
ಣದೆ ॥ ಕೈಗಣ್ಮಿದೊರಸೆರಸಿಂಪಣವೆ ಪ್ಪೈವರೆಯ | ದೇಗಳುಂ ಜಾಗರೂ
ಕತೆಯೊಳಿರ್ಪುದುಮರಳಿ | ಬೇಗಬಾ ನಿನ್ನ ಪೆಸರಸ್ವರ್ಥವಾಗಲೆಂದಾದರಿಸಿ
ಬೀಳ್ಕೊಟ್ಟಳು ॥೨೩॥

ಕ್ಷಿತಿಯೊಳಗೆ ಸೌಶೀಲ್ಯಗುಣವಿದಿತಕೀರ್ತಿಯಂ | ಶ್ರುತಿಕೀರ್ತಿಯಂ ಕಂ
ಡನಂತರದೊಳಾವೀರ | ನತಿತರಸ್ನೇಹದಿಂದಾಲಿಂಗನಂಗೈದು ರಾಮಾಜ್ಞೆಯಂ
ತಿಳುಹಲು ॥ ಸತಿ ವಿರಹವೇದನಾಭಾವನೆಯು ತಡೆದು ನಿಜ | ಪತಿಗೆ ವಿಜಯಾ
ಶಂಸೆಯಂಗೈದು ವಿಜಯಾಸ್ತ್ರ | ತತಿಯನೊಲ್ದೊಪ್ಪಿಸಿದಳೊಡನವಂ ಸನ್ನದ್ಧ
ನಾದಂ ವಿಜಯಯಾತ್ರೆಗೆ ॥೨೪॥

ಕಾಂತೆಯುಂ ರತಿಯಂತೆ ನವಜಲದನೀಲಾಳ | ಕಾಂತೆಯುಂ ಪತಿದರ್ಶನೋತ್ಸುಕಿತೆಯುಂ ತನ್ನ | ಕಾಂತೆಯುಂ ನಿಖಿಲಸೀಮಂತಿನೀ ಲೋಕಸೀಮಂತರತ್ನಾಯಿತೆಯುಮ ॥ ಸಂತಸಂಮಿಗೆ ಮಂದಹಾಸರುಚಿಧಿಕ್ಕೃತವ | ಸಂತಸಂಫುಲ್ಲಮಲ್ಲೀಲತಾಂತೆಯುಮೆಲ್ಲೆ | ಸಂತಸಂಯುಮಿನಿಪ್ಪುಳಕಯುತನಾಪುಷ್ಕಲಂ ಕಂಡನೊಡನೆ ಬಂದು ॥೩೫॥

ಭಾರತಿಯವಾಕ್ಕೌಶಲವನವಗಣಿಪ ನಿಪುಣೆ | ಭಾರತಿಯ ರುಚಿರಾಂಗಸೌಂದರ್ಯವಿಜಿತರಂ | ಭಾರತಿಯ ಭುವನತ್ರಯಶ್ಲಾಘನೀಯಪಾತಿವ್ರತ್ಯಕಾವಸತಿಯ ॥ ಸಾರಸಮನೋಹಾರಿ ವದನದ್ಯುತಿಯ ಕೃಷ್ಣೆ | ಸಾರಸಮನಯನವಿಸ್ತೃತಿಯ ವಿದ್ಯಾವತಿಯ | ಸಾರಸಮದಾತಿಶಯ ಕಲಹಂಸಮಂದಪದಗತಿಯ ಲಾವಣ್ಯವತಿಯ ॥ ೩೬ ॥

ಹುದುಗಿರಲೊಳಗೆ ವೀಳಯಂನಸುಪ್ರೌಢದರ್ಗಸೆವ | ಕದಪೊಂದುಕೆಂದಾವರೆಯ ನುಣ್ಣೆಸಳನಲೆಯೆ | ಕದಿರಿಡಿದಚೆಂದುಟಿಯಮೇಲೆ ಪೊಳೆಯುತ್ತಿರ್ದಮುಗುತಿಯ ತೋರಮುತ್ತು ॥ ಬದಿಯೊಳಸುತೋರ್ಪ ಸಂಧ್ಯಾರುಣದ ನಟ್ಟಿಡೆಯೊ | ಳುದಯಿಸಿದತಾರಗೆಯಚಂದಮಂ ಮಂದಹಾ | ಸದಸೊಬಗುಬೆಳ್ದಿಂಗಳಂಪಳಿಯೆ ಮೊಗವೆತ್ತಿಕಂಡಳಾರಮಣಿಪತಿಯ ॥ ೩೭ |

ಒಡನೆಬಳುಕಾಡೆ ಬಡನಡುಮಿಸುಪಮಣಿಹಾರ | ಮೆಡೆಯಾಡೆವಲಯಂಗಳುಲಿದಾಡೆ ಮಿಂಚುಗಳ | ಗಡಣಮಂಕೀಳ್ಮಾಡೆ ಕೆತ್ತಬಜ್ಜರದ ಥಳಥಳಿಸುವೋಲೆಗಳಪೊಳಪು ॥ ಬಿಡದೆನಗೆಮೊಗದಸಿರಿತುಳುಕಾಡೆ ಕಣ್ಗಡೆಯ | ದೊಡಲಿಚನಬಾಣಗಳನಬ್ಜಾಕ್ಷ ಲೀಲೆಯಿಂ | ಮಡಪಿಮಣಿಮೇಲುದಂನಾಡೆ ನೇರ್ಪಡಿಸುತ್ತಗದ್ದುಗೆಯನುಳಿದೆದ್ದಳು ॥ ೩೮ ॥

ತನುರ್ಝೋಂಪಿಸಚ್ಛಮರಲಾನಲುರೆಪೊಂಪುಳಿಯ | ದನಿವಿಕೃತಮಾಗೆಮೊಗದೊಳ್ವಿವರ್ಣತೆತೋರ | ಲನುರಾಗರಸಮುಕ್ಕಲ್ಕೈತರಲ್ಮೈಮರವುಬಿಗಿದಪ್ಪಿಕೊಂಡುಸತಿಯ ॥ ವನಜಾಕ್ಷಿಕೇಳೆನ್ನಜೀವಿತಪ್ರಿಯೆ ಪೂರ್ವ | ಜನಬೆಸಂವಡೆದು ಯಾಗಾಶ್ವರಕ್ಷಣೆಗೆವಾ | ಹಿನಿಯೊಡನೆಪೋಪ ಶತ್ರುಹನಬೆಂಗಾವಲ್ಗೆ ಪೋಗಿಬಹೆನೆಂದು ನುಡಿದು ॥ ೩೯ ॥

ಮತ್ತೆ ಕಾಶಿನಿಸುಕೇಳ್ಕಾಲಕಾಲಕ್ಕೆ ನಿ | ಮ್ಮತ್ತೆ ವಿರಪಾದಸೇವೆಯುನೊಲ್ದುಬಿಡದೆ ಮಾ | ಡುತ್ತಿರು ಮಹಾನುಭಾವೆಯರಲೋಪಾಮುದ್ರೆ ಮೊದಲಾದ ಸಾಧ್ವಿಯರನು || ಚಿತ್ತದೊಳಗಾದೊಡಂ ಕಡೆಗಣಿಸದಿರು ನಿನ್ನ | ತೊತ್ತಿರೊಳ್ಕಠಿನೋಕ್ತಿಗಳನಾಡದಿರು ಬೇಗ | ನಿತ್ತಬಳಿಕೆನಾನೆಂದುಬೆಸಸಲಾಪುಷ್ಕಲಂ ಕಾಂತಿಮತಿಯಿಂತೆಂದಳು || ೪೦ ||

ವಿಜಯಮಾಗಲಿನಿಮಗೆ ಸರ್ವತ್ರ ಲಕ್ಷ್ಮಣಾ | ನುಜನಾಣತಿಯುಮೀರದಿರಿ ನಿಮ್ಮ ಚರಣಸರ | ಸಿಜಸೇವಕಿಯುನನ್ನ ಮರೆಯದಿ ತನ್ನ ಬಗೆ ನಿಮ್ಮನುಳಿದಿರಲರಿಯದು || ಭುಜಪರಾಕ್ರಮದಿಂದೆ ಬಂಡಣದೊಳಾಂತರಿ | ಪ್ರಜವನುತ್ಸಾಹದಿಂಗೆಲದಿವಳ ಪತಿಸಮರ | ವಿಜಿರದಿಂ ಮರಳ್ದನೆಂದೆನ್ನ ನಗುವಂತೆ ಸರಿಸತಿಯರೆಸಗದಿರಿನಾಥ || ೪೧ ||

ಇದು ಶತ್ರುಗಳ ಕಣ್ಗಳಂ ಮುಸುಂಕಿಸುವಥಾ | ಳದ ಸಾರವಜ್ರಮಯ ಕವಚವಿದು ವೈರಿಭಟ | ರೆದೆಯುಮಂ ಪರಿಸುವ ಬಿಲ್ಲಿವು ಮಸೆದ ಕಣೆಮರುಗಲಿಂದೆ ತುಂಬಿದಡೊಣೆಗಳು || ಇದು ಮಿಸುನಿಯುಲರಿಡಿದ ಸೀಸಕಮಿವೆರಡುನು | ನುಣ್ಗದಿರವುಕ್ಕುಳಿಸುವ ವೃತ್ತಂಸಗಳ್ ತಳದಿವಂ | ಹೃದಯೇಶ ದೇವಾರಿವಿಜಯಕ್ಕೆ ಬಿವಿರಥಂ ಪೋದಂತೆ ಪೋಗಿಬಹುದು || ೪೨ ||

ಇಂತೆಂದು ಕಾಂತಿಮತಿ ಕಾಂತಿಮತಿಯಿತ್ತವಂ | ಸಂತೋಷಪುಷ್ಕಲನು ಪುಷ್ಕಲನು ಕಯ್ಕೊಳ್ವು | ದುಂತಳೆದು ರಮಣೀಯ ರಮಣೀಯನತ್ತೆರಗಿಳೆಯೆ ಪೋಗಿ ಬಳಿಕೆನೆನಲ್ಕೆ || ಕಾಂತತರ ಭಾರತಿಗೆ ಭಾರತಿಗೆ ನಿರ್ಮಲ | ಸ್ವಾಂತಂಗೆ ಸುಮನವಂ ಸುಮನಸಂತಾಳ್ದ ರಚಕು | ತಂತೊಳ್ಪನಾರತಿಯ ನಾರತಿಯ ರೂಪಿನವಳ್ತಿದ್ದಳ್ಭವಪರಸಿ || ೪೩ ||

ಆತನಾ ಬಳಿಕಿನಿಯಳಂ ಸಂತವಿಟ್ಟು ಪುರು | ಹೂತಸುತನಂತಲಂಕಾರದಿಂ ಮೆರೆಯುತ್ತೆ | ಮಾತೆಯುಂ ತಾತನುಂ ಕಂಡು ಪೊಡಮಟ್ಟು ವರಹರಕೆಯುಂ ತಲೆಯೊಳಾಂತು || ಸೂತನೊಡನಲ್ಲಿಂದೆ ಪೊರಮಟ್ಟು ತೇರನಡ | ರ್ದೈತಂದನ ಪರಿಮಿತಚತುರಂಗಸೇನಾಸ | ಮೇತನಾಗಧ್ವರದ ಹಯದೊಡನೆ ಧಾಳಿಗಳವಟ್ಟು ಶತ್ರುಘ್ನನೆಡೆಗೆ || ೪೪ ||

ಜನನನಾಬಳಿಕ ಶತ್ರುಘ್ನನಂ ಮತ್ತೆ ಕರೆ | ದನುಜಕೇಳೀನುಡಿಯ ಮರೆಯದಿರು ಶಸ್ತ್ರಹೀ | ನನನಂತು ಬಾಲನಂ ಮತ್ತನಂ ಸ್ತ್ರೀಯುಮಂ ಹನನಗೈಯದಿರೆನಲ್ಕೆ || ಜನಕಾತ್ಮಜಂ ಮುಗುಳ್ನಗೆಯತೋರುತ್ತೆ ಭಾ | ಪನೆ ನಿಮ್ಮ ವಂಶಕ್ರಮದೆ ಬಂದ ಪದ್ಧತಿಯ | ನನುಸರಿಸದಂತೆ ಶತ್ರುಘ್ನನಂ ನೀನಿನ್ನ ಮರೆತಿಳಿಯಿಪುದು ತಕ್ಕುದು ||೪೫||

ನಿಮ್ಮಯ್ಯನೊರ್ವಮುನಿಸುತನ ಕೊಂದಂ ನಿನ್ನ | ತಮ್ಮನೀಲಕ್ಷ್ಮಣಂ ಪೆಣ್ಣ ಕಿವಿಮೂಗನುರೆ | ಹಮ್ಮಿನಿಂದರಿದನಿರದಂತು ನೀನಬಲೆಯಂ ವಿಪ್ರರಂ ಸಂಹರಿಸಿದೆ || ಸಮ್ಮತವೆ ಲೋಕಕ್ಕಿದದರಿಂದೆ ಬಿನ್ನವಿಸಿ | ದೆಂ ಮಹಾರಾಜತಾನೆನೆ ಕೇಳ್ದು ರಘುಪುಂಗ | ವಂ ಮಂದಹಾಸವಿಲಸಿತವದನನಾಗಿತ್ತನದಕೆ ಮಾರುತ್ತರವನು ||೪೬||

ಕೊಂದನೆಮ್ಮಯ್ಯನಾಮುನಿಸುತನನಜ್ಞಾನ | ದಿಂದೆ ಬಿಡು ತಾಟಕೆಯನಾಗುರುನಿದೇಶದಿಂ | ಕೊಂದೆನಾಂ ಲೋಕಹಿತಕೋಸುಗಂ ರಾವಣಪ್ರಮುಖರಂ ಘಾತಿಸಿದೆನು || ಎಂದಪೆನದೇನನಾನರಸರ್ಗದಾರಾದೊ | ಡಂ ದುಷ್ಟರಂ ಬಿಡದೆ ನಿಗ್ರಹಿಸುವುದು ಧರ್ಮ | ವೆಂದೆನಿಪುದೆಲೆ ಸಾಲನಿನಗಲ್ಲೆನಲ್ಕೆಲ್ಲರುಂ ಗಹಗಹಿಸಿ ನಕ್ಕರು ||೪೭||

ಬಳಿಕರುಂಧತಿಯ ಮೊಮ್ಮನೆಲೆಕುದುರೆ ಲೀಲೆಯಿಂ | ತಳರು ನೀನಧ್ವರಕೆ ಬಿಟ್ಟಪರ್ವಮಸುಮತೀ | ವಳಯಮಂ ತಿರುಗಿ ಬೇಗನೆ ಮರಳಬಾಯೆಂದು ಮಂತ್ರಮುಚ್ಚರಿಸಿ ಬಿಡಲು || ತಳೆದಬಲ್ಗೈದುಗಳ ಕಟ್ಟಾಳ್ಗಳದನೊಡನೆ | ಬಳಸಿಬರೆ ಮುಂದೆ ತೋರಿತು ವಿವಿಧಸುಶಕುನಂ | ಗಳಪರಂಪರೆ ಕೂಡೆ ಲಕ್ಷ್ಮಣಾನುಜನ ದಕ್ಷಿಣಬಾಹು ಮಿರದದಿರಿತು ||೪೮||

ಅಡಿಯಿಡಲ್ಮುಂದುಮುಂದಾಗಿ ಮಖಸೈಂಧವಂ | ನಡೆದುದದರೊಡನೆ ಕರಿತುರಗರಥಪತ್ತಿಗಳ | ಪಡೆಯೆರಡನೆಯ ಕಡಲಿದೆಂಬಂದದಿಂ ಪಿಂದೆ ರಥವೇರಿ ಶತ್ರುಘ್ನನು || ಕಡುಗಲಿಗಳಹ ಮಹಾರಥಿಕರ್ಕಳೊಡಗೂಡಿ | ನಡೆದನಾತಂಗೆ ಬೆಂಗಾವಲಾಗುಲ್ಲಾಸ | ವಡುತೆ ರಣಧೀರನಾಪುಷ್ಕಲಕುಮಾರಂ ವಿಪಕ್ಷಮಾರಂ ನಡೆದನು ||೪೯||

ಸಾರುಸಾರುತ್ತಮಲ್ಲಲ್ಲಿಸಾರುತ್ತೆ ರಘು । ವೀರಬಿರುದಾವಳಿಯನಲ್ಲಲ್ಲಿ ಕೇಳುತಂ । ಶ್ರೀರಾಮಚಂದ್ರಮನಕೀರ್ತಿಯಂಬಹುಜನರ ಮುಖದಿಂದೆಹಯಮೇಧದ ॥ ಮಾರುಮದದಾರಿಯಂಪಿಡಿದು ಪೆರ್ದೊರೆಗಳಂ । ಪೇರಡವಿಪೆರ್ಬೆಟ್ಟುಗಳನಂತು ನೂರಾರು । ಪೇರೂರ್ಗಳಂದಾಂಟಿ ಪೂರ್ವದಿಙ್ಮುಖನಾಗಿ ನಡೆದನಾಶತ್ರುಘ್ನನು ॥೫೦॥

೬ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೬ ಕ್ಕೆ ಪದ್ಯಗಳು ೨೯೪ ಕ್ಕೆ ಮಂಗಳಮಸ್ತು.

ಏಳನೆಯ ಸನ್ಧಿ.

ಸೂಚನೆ॥ ಉತ್ತರತ್ರದೆಸೆಯೊಳಹಿಚ್ಛತ್ರಜನಪದವಮಂ ರ | ಘೋತ್ತಮಾ
ನುಜನೊಲ್ಮೆಯಿಂ ಪೊಕ್ಕು ಸುಮದನೃಪ | ನಿತ್ತ ಪಲತೆರದ ಕಯ್ಗಾಣ್ಕೆಯಂ ಕ
ಯ್ಕೊಂಡ ಸಂಬೆರಸು ಮುಂಬರಿದನು ||

ಕಿತ್ತಡಿಯೊಳಿಂತು ಭರತಾನುಜಂ ಮೂಡ | ಲತ್ತ ದಕ್ಕಂತ ವೈರಿಪ್ರ
ತಾಪಕ್ಕೆ ಭಯ | ವೆತ್ತು ತತ್ತದ್ದೇಶದರಸುಗಳಿದಿರ್ಗೊಂಡು ಮಣಿದಡಿಗಡಿಗೆ ಪ
ದದೊಳು || ಇತ್ತ ನೆತ್ತೆಗರ್ಗುದುರೆ ಪೊನ್ರನ್ನ ಮೊದಲೆನಿಸಿ | ದುತ್ತಮದ್ರವ್ಯಂ
ಗಳಂ ಕೊಂಡವರ್ಗೆ ರಸಿ | ತತ್ತುರಗವನುಸರಿಸಿ ನಡೆಯಲಾಹಿಚ್ಛತ್ರಪತ್ತನಂ
ಕಣ್ಗೆಸೆವುದು ‖ ೧ ‖

ಎಂದಪೆನದೇನನಾಪತ್ತನದ ಚಿತ್ತರವ | ನೊಂದುದೆಸೆಯಿಂದೆ ಪೆರ
ತೊಂದುದೆಸೆಗೈತರ | ಲೊಂದೆರಡು ಮೂರುಂ ದಿನಂಗಳಾಗುತ್ತಿರ್ದುವಲ್ಲಿರ್ಪ
ಪೌರಜನದಾ || ಸಂದಣಿಯಿನೇನೆಂಬೆನೆಂದು ಮಂಭೋರಾಶಿ | ಯಂದದಿಂ ಮೊ
ರೆಯುತ್ತಲಿರ್ದುದು ಸಮಂತದರ | ಸೌಂದರ್ಯಮಂ ಭಿವರ್ಣಿಸಲ್ಕಸದಳಂ ತ್ರಿ
ಭುವನಾಶ್ಚರ್ಯಮೆನಿಸಿರ್ದುದು ‖ ೨ ‖

ಪಂತಿಗೊಂಡಾ ಮಹಾಪುರದ ಸೌಧಂಗಳದಿ | ರಾಂತು ಸೋರಾಡಿ ನಿಜ
ಸೌಂದರ್ಯದಿಂ ವೈಜ | ಯಂತವೆಂಬಮರಪುರಭವನಾಧಿರಾಜನಂ ಗೆಲ್ದು ತದ್ವಿ
ಷಯಮೆನಿಸಿ || ಅಂತರಿಕ್ಷವನೆಲ್ಲನಾಕ್ರಮಿಸಿ ಜಯವೈಜ | ಯಂತೀಸಹಸ್ರ
ಮಂ ಸೆಗಹಿಟ್ಟುಳ್ಜಸವನಾಂ | ತಂತೆವೋಲ್ ಪೊಸಸೊದೆಯ ಬೆಳ್ಪೊಳಗನಾಂತದೇ
ನಮಮ ಪರಿಶೋಭಿಸಿದುವೋ ‖ ೩ ‖

ಮೆರೆವುದಾ ನಗರಲಕ್ಷ್ಮಿಯ ತೋರಮುತ್ತುಗಳ | ತರವೇರಿ ಮುಡಿದನೂ
ಲಿನಂತೆ ಕೋಟೆಯುಸುತ್ತು | ಪರಿಪರಿಯ ಚಿತ್ತರದ ಸಿರಿವಿಡಿದ ಹರಿನೀಲಮಣಿ
ರುಚಿಯ ಸೀರೆಯಂತೆ || ತರತರದ ತೆರೆಗಳುಬ್ಬಿಳಿಯ ಕಲಹಂಸ ಪು | ಷ್ಕ
ರಿತಾಸಂಕುಲೋದ್ಯೋತಿಜಲಪರಿಪೂರ್ಣ | ಪರಿಖೆಯುರಮನೆಯ ಮಣಿಕಲಶ
ಭಾಸುರಕನಕಶೃಂಗಮದು ಮುಕುಟದಂತೆ ‖ ೪ ‖

ಮುನಿಪಕೇಳಾಮಹಾನಗರದುತ್ತುಂಗಕೇ | ತನದಕೊವೆರ್ಗನೆಬಟ್ಟೆ
ವಿಡಿಪು ಬರುತಿರ್ದಿಂದು | ವಿನಮಂಡಲವನೊಂದಿನಂತಾಗಿಪರಿದಿಕ್ಕಾಲಾವಿವರ
ಮಂನೋಡುತೆ || ಅನುವಿಸಿಕೆಲರ್ಹರಿಣವೆಂದು ಕೆಲರಂಕವೆಂ | ದೆನುತಮಿಂ
ಕೆಲಬರಾಲದಮರನೆನುತ್ತೆ ಮೇಂ | ದಿನಿಯನೆಳಲೆಂದು ಕೆಲಬಕ್ಕೆಲರ್ಬೆಟ್ಟುಗ
ಳೆನುತ್ತಾಡಿಕೊಳುತಿರ್ಪರು || ೫ ||

ಹರಿನೀಲಮಣಿಗಳಿಂ ವಿರಚಿಸಿರ್ಪಾಪುರದ | ಕರುಮಾಡಗಳಸಮು
ತ್ತುಂಗಶಿಖರಂಗಳೊ | ಳ್ಚರಿಪಲಲಿತಾಂಗಿಯರ ನವರತ್ನಭಾಸುರಾಭರಣಗಳ
ಕಾಂತಿಲಹರಿ || ಪುರುಹೂತಚಾಪಲತೆಯಂದದಿಂ ಕಂಗೊಳಿಸು | ತಿರಲವರ
ತನುವಲ್ಲಿ ಬಳ್ಳಿಮಿಂಚಿನತೆರದೆ | ಮೆರೆಯುತಿರಲಭ್ರಗಗೇಹಗಳುಮಂಬುದ
ಭ್ರಾಂತಿಯಂ ಕೊಡುತಿರ್ದುವು || ೬ ||

ಪಗಲೊಳಂತತ್ಪುರದ ತುಂಗತರಚಂದ್ರಶಾ | ಲೆಗಳಲ್ಲಿ ವಿಹರಿಸುವ
ಲಲಿತಾಂಗಿಯರ ಪಲವು | ಮೊಗಸಸಿಗಳತಿಶಯಿತನಿರ್ಮಲದ್ಯುತಿಯಾಂತು
ನಿಷ್ಕಳಂಕಂಗಳಾಗಿ || ಸೊಗಯಿಸುತೆಕಳಕಳಿಸುವೆಳನಗೆಯ ಬೆಳ್ದಿಂಗ |
ಳುಗುಳುತಿರೆನೋಡೆ ನಲಿದಾಡಿಪುವುಗೃಹಚಕೋ | ರಗಳರಳಿದುವು ಸಮು
ಲ್ಲಾಸದಿಂ ಲೀಲಾಸರಃಕುಮುದಕೋರಕಗಳು || ೭ ||

ಆನಗರದುತ್ತುಂಗಸೌಧಗಳಮರಪುರವಿ | ಮಾನಗಳಿಭೂಸ್ಪರ್ಶಮಾ
ತ್ರವೇಭೇದಕಂ | ಮಾನಿನಿಯರಚ್ಚರಸಿಯರೆನೋಡೆ ಸನಿಮೇಷಭಾವದಿಂ
ಭೇದವಿಹುದು || ಪೀನತರವಿಭವದಿಂದೊಪ್ಪುತಿರ್ಪಾರಾಜ | ಧಾನಿ ತಾನಮರಾ
ವತೀನಗರಮೆನಿಸುವುನು | ಮಾನವಿಲ್ಲಿನಿತೊಂದೆಭೇದವದನೇಕಜಿಷ್ಣುಗಳಿಂ
ದೆಕೂಡಿರ್ಪುದು || ೮ ||

ಭೋಗವತಿಯಂತೆಕುಂಭೀನಸಹಿತಂ ಸುಧಾ | ಸಾಗರಂಬೊಲ್ಸಿರಿಗೆತವ
ರೂರುಲಂಕೆಯಂ | ತೆಗಂವಿಭೀಷಣಚರಿತ್ರಸಂಮೋದವತ್ಪುಣ್ಯಜನಕೋಟಿ
ವಸತಿ || ನಾಗನಗರಿಯುಮೊಲ್ಬಲಾಯುಧೋತ್ಕರ್ಷಸಮು | ಪಾಗತಮಯೋ
ಧ್ಯೆಯಂತಳಕೆಯಂತೆಲೆ ಮಹಾ | ಭಾಗಕೇಳಮಸದಾ ರಾಜರಾಜೋಪಭು
ಕ್ತಂತಾನೆನಿಸಿಮೆರೆದುದು || ೯ ||

ಕೆಲದೊಳಾಪುರದ ಭೂಸುರಸಾಲಸುರಸಾಲ | ತಿಲಕದಾಡಿಮಚಾರು
ಕೃತಮಾಲಕೃತಮಾಲ | ವಿಲಸಿತಾಶೋಕಚಂಪಕ ಕದಂಬಕಕದಂಬಕ ಮು
ಖ್ಯತರುಗಳಿಂದೆ || ಲಲಿತಪಂಚಮನಾದ ಕಲಕಂಠಕಲಕಂಠ | ಕುಲದೆಹರಿದಂ
ಗಕಾಂಶುಕಗಳಿಂ ಶುಕಗಳಿಂ | ಚಲುವಾಂತದೊಂದು ವನವಾನಂದನವನಂದ
ನವನಂಬೊಲೇನೆಸಗಿತೋ || ೧೦ ||

ಫಲಭಾರದಿಂಬಾಗಿದಿಮ್ಮಾವಿನಿಂ ಸುತ್ತು | ಮೊಳನೀರ್ಗಳುರೆಜಗಿವ
ಪೇರ್ಗೊನೆಗಳಿಂದೆ ಕಂ | ಗೊಳಪತೆಂಗಿಂದೆಬೇರ್ವಿಡಿದು ಕೊನೆಮುಟ್ಟೆಪೂ
ವಂಕಾಯುನುರೆಪಣ್ಣನು || ತಳೆದಪಲಸಿಂದೆಪಣ್ತೆಸೆವ ದಾಳಿಂಬದಿಂ | ದೆಲೆ
ಗೊಂಪುಪಣ್ಗೊನೆಯನಾಂತಿರ್ಪಮುದ್ದಿಗೆಯಿ | ನೀಳ್ವರಂಜೋಲ್ದತನಿವಣ್ಗೊ
ನೆಯನಾಂತಬಾಳೆಯಿನಾವನಂ ಮೆರೆದುದು || ೧೧ ||

ಬಂದೆಡೆಯೊಳಲ್ಲಿ ರತ್ನಾಸ್ತರಣಮಂಪಾಸಿ | ದಂದದಿಂಪೆರತೊಂದೆಡೆ
ಯೊಳೆಸೆವಪರಿವೇಷ | ದಂದದಿಂದಿನ್ನವೊಂದೆಡೆಯಲ್ಲಿಹಾಸಂಗಿಯುಂಪಾಸಿದಂ
ದದಿಂದೆ || ಬಂದೆಡೆಯೊಳಲರ್ದ ನೂರೆಲೆಯಂದದಿಂದೆ ಮ | ತ್ತೊಂದೆಡೆಯೊಳೆ
ಣ್ಮಲೆಗೊಳದಂದದಿಂದೆ ಬೇ | ರೊಂದೆಡೆಯೊಳೆತ್ತಿರುವ ಸತ್ತಿಗೆಯಚಂದ
ದಿಂದೊಪ್ಪಿದುವು ಪೂಗಿಡುಗಳು || ೧೨ ||

ಪರಿಪೂರ್ಣಮಧುರನಿರ್ಮಳಸಲಿಲದಿಂ ನೆಳಲ | ನೊಳಕೊಳ್ವನುಣ್ಗ
ಲ್ಗಳಿಂಗೈದನಾಲ್ದೆಸೆಯ | ಥಳಥಳಿಪಸೋಪಾನಸರಣಿಯಿಂದೋಲಾಡುವರಸಂ
ಚೆವಿಂಡಿನಿಂದೆ || ನಳಿನಕಲ್ಹಾರ ಕುಮುದೋತ್ಪಲಗಳಿಂ ಭ್ರಮರ | ಕುಳದ
ಝುಂಕಾರದಿಂ ರಮಣೀಯಮಾದೊಂದು | ಕೊಳನದೇನೊಪ್ಪಿದುದೊಬಹುಳ
ವಿಸ್ತೀರ್ಣಮಾಗಾವನದ ನಟ್ಟಡೆಯೊಳು || ೧೩ ||

ಅಂತಪ್ಪನಗರೋಪವನದಸೊಬಗಂ ನೋಡಿ | ದಂತರಿಂಮೋಣಾಲ್ವಿಹ
ರಿಸುವಬಹುವಿಧಶ | ಕುಂತಗಳ ಕಲಮಧುರಗಾನಮಂಕೇಳ್ದಂತರಿಂದೆಮೋಣಾ
ತ್ತಣಿಂದೆ || ಆಂತುಪ್ರಾಗಂಪನ್ನೈತಹಮೆಲ್ಲೆಲರ್ಸೋಂಕಿ | ದಂತರಿಂಮನುಜರಾ
ಧ್ಯಾತ್ಮಿಕಕ್ಲೇಶಂಗ | ಳಂತೊರೆದು ಸುಖಿತರಹರೆನೆ ನುಡಿಯಲ್ಲರಿ[illegible]ತ್ತೋ
ಪವನದಮಹಿಮೆ || ೧೪ ||

ಅರೆವಿರಿದಕೇದಗೆಯನರುಗಂಪಿನಿಂ ತೀವಿ । ಮೊರೆವತಾವರೆಗೊಳದೆನಲಿ ನಲಿಯುತ್ತೋಲಾಡು । ವರಸಂಚೆಗಳಪಕ್ಷದಿಂ ಕೆದರ್ದತಂದಲ್ಗಳಂಪೊತ್ತು ಕೊಂಡೊಯ್ವನೆ ॥ ಪರಿತಂದುಮಂದಮಾರುತನಲ್ಲಿ ಕೋಸಲೇ । ಶ್ವರನ ಸೈನಿಕರ ಮಾರ್ಗಾಯಾಸಭಾರಮಂ । ಪರಿಹರಿಸಿಪಂತಕ್ಕುದಿಂತಿದಾ ರಾಮಪರಿಚರಣನಿಷ್ಠೆಗರ್ಗಳೆಯೊಳು ॥ ೧೫ ॥

ಎಡೆವಿಡದೆಬೆಳೆದಿರ್ದ ತಣ್ಣೆಳಲಹೊಂಗೆಗಳ । ಗಡಣದಿಂತುಂಬಿವೆತ್ತಾ ಮಹಾವನವನ । ಟ್ಟಡೆಯುಪ್ರಗಲ್ಭಮುಖತುರಂಗಮಂ ಶತ್ರುಘ್ನನೊಡನೆ ಬೆಂಬತ್ತಿ ಕೊಂಡು ॥ ಕಡುಗಲಿಗಳ್ನಿಸಿರ್ದ ವೀರಭಟರೊಡಗೂಡಿ । ನಡೆತಂದೊಡಲ್ಲೊಂದು ಭೂತಲಕ್ಕೆಳತಂದ । ನಡೆನಾಡವೆಂಬಂತೆ ಚೆಲ್ವಾಂತದೇವತಾಮಂದಿರಂ ಕಣ್ಗೆಸೆದುದು ॥ ೧೬ ॥

ಥಳಥಳಿಸಿತೊಳಪ ಪ್ರೇಂಗಂಬಂಗಳೋಳಿಯಿಂ । ಜಳದಮಂಡಲವನೆಟ್ಟಿಪತುಂಗಶೃಂಗದಿಂ । ಕಳೆವೆತ್ತುಸಾಲೆಗೊಂಡು ಸುತ್ತಲುಂಕಂಗೊಳಿಸುತಿರ್ಪ ಪೊಂದೆನೆಗಳಿಂದೆ ॥ ಪಳುಕಿಂದೆ ಗೈದು ಜೀವದಕಳೆಯುಪ್ಪೋಯ್ದುಪ್ಪ । ತ್ಥಳಗಳಿಂ ಪಚ್ಚೆಗಲ್ವಾಸಿದಿಳೆಗಟ್ಟನಿಂ । ಪ್ರೊಳೆಪ್ರೊಳೆವಮಣಿಮಯದಬಾಗಿಲ್ಗಳಿಂದ ಮಾದೇಗುಲಂರಂಜಿಸಿದುದು ॥ ೧೭ ॥

ನಳನಾಪ್ತಹಿಮಕರಪ್ರಮುಖ ಸಪ್ತಗ್ರಹಂ । ಗಳನತಿಕ್ರಮಿಸಿದೌನ್ನತ್ಯದಿಂ ಸಪ್ತಮಣಿ । ಕಳಶಂಗಳಂತಳೆದ ಗೋಪುರದಶಿಖರದಿಂದೊಪ್ಪುತಾ ವನಲಕ್ಷ್ಮಿಯಾ ॥ ನೆಲೆವಾಡದಂತೆಕಂಗೊಳಿಸುವಾದೇವತಾ । ನಿಲಯಮಂಕಂಡು ಕೌತುಕದೆ ಸೌಮಿತ್ರಿ ಬೆಸ । ಗೊಳಸುಮತಿಯಂ ತನ್ನಿದಾನವನವಂಪೇಳ್ದನಿಂತುಕೇಳಾಯುತಮೊನೆ ॥ ೧೮ ॥

ಈಕಾಣುತಿಹುದಹಿಚ್ಛತ್ರಪತ್ತನಮಿದಂ । ಭೂಕಾಂತಶೇಖರಂಸುಮದನೃಪನಾಳ್ವನಿದು । ಲೋಕಮಾತೆಯ ಮಹಾದೇವಿಯಾಕಾಮಾಕ್ಷಿಯಾವಾಸದಿವ್ಯಭವನ ॥ ಈಕೆಯಡಿದಾವರೆಗೆ ಭಕ್ತಿಯಿಂದೆರಗಿದ । ರ್ಗಾಕಾಂಕ್ಷಿತಾರ್ಥಸಂಸಿದ್ಧಿಯಾದಪುದು ನೀ । ನೇಕಮಾನಸನಾಗಿ ಕೇಳ್ವುದಿಲ್ಲಿಯಪುರಾವೃತ್ತಮಂ ಸೌಮಿತ್ರಿಯೆ ॥ ೧೯ ॥

ಕೊಳಗುಳದೆಮುಂಪಗೆಯುವರ್ತನ್ನ ತಂದೆಯಂ | ಬಲುಹಿಂತದೀಯ
ಬಲನೆಲ್ಲಮಂಸದೆದು ಕ | ಯ್ಕೊಳಲವನರಾಜ್ಯಮಂ ಸುಮುಖನಸಹಾಯನಾ
ಗರಿನ್ನೃಪರ ವಶನಾಗದೆ ॥ ತಳರ್ದುವರಹೇಮಕೂಟಾಚಲಕ್ಕಲ್ಲಿ ನಿ | ಶ್ಚಲಚಿತ್ತ
ನಾಗಿ ಕಾಮಾಕ್ಷಿಯಂ ಮನದೊಳಗೆ | ನೆಲೆಗೊಳಿಸಿಪನ್ನೆರಡುವರುಷಮತ್ಯು
ಗ್ರತಪಮಂಬಿಡದೆ ಚರಿಸುತ್ತಿರಲು ॥ ೨೦ ॥

ಆತನುಗ್ರಜ್ವಾಲೆಯಿಂದತಿಭೀತನಾದ ಪುರು | ಹೂತನಾತಪಕೆವಿಘ್ನಮ
ನಾಚರಿಸಿ ವಿಮಾನ | ಕೇತುವಂ ಕಂಡುಚೈತ್ರಕಂದರ್ಪಖಂಡಿತಾಶೇಷಜಿತಕಾಮಿದರ್ಪ ॥
ಪತತ್ಕ್ಷಣಮೆನೀನನರ್ತ್ಯಗಣಿಕಾಜನಸ | ಮೇತನಾಗಾ ಹೇಮಕೂಟಗಿರಿಯಂ
ಸಾರ್ದು | ಘಾತಿಪುದು ಸುಮುಖನೃಪನಾಚರಿಪ ಘೋರತಪಮಂ ನಿನ್ನಧಟನೆಂ
ದನು ॥ ೨೧ ॥

ಆವನಾತನಾಲಿಸಿದ ಜಗದೇಕವೀರನಹ | ಕಾಮನೆಲೆಸುತ್ರಾಮನು ಹರಿಹ
ರಬ್ರಹ್ಮರು | ದ್ಧಾಮತಪಕೆಡರನಾಗಿಸಿದೆನಗೆಸುಮದನತಪೋಭಂಗವೇನದ
ರಿದೆ ॥ ಭೂಮಿಯೊಳಗೆನ್ನಸ್ತ್ರೀಕೊಳಗಾಗದವರೊಳರೆ | ಸಾಮಾನ್ಯವೆನಗಿದೆಂ
ದಿಂದ್ರನಂಬೀಳ್ಕೊಂಡು | ಹೇಮಕೂಟಾದ್ರಿಯಂಸಾರ್ದನಚ್ಚರಸಿಯರಪಡೆಸ
ಹಿತ ಚೈತ್ರನೊಡನೆ ॥ ೨೨ ॥

ಬಹಳತಾವರೆಗಂಪಿಗೆಣೆಯಾದನುಣ್ಗಂಪು | ಮುಡಿಗೆಸೂಡಿರ್ದಲರನರು
ಗಂಪುಪೊಳೆವಕೊರ | ಳಡೆಗೆಪೂಸಿರ್ದಕತ್ತೂರಿಯುಣ್ಪನೊಳ್ಗಂಪುಮೆಣ್ದೆಸೆಯು
ಘುಮುಘುಮಿಸಲು ॥ ಸಡಗರದೆನಡೆತಂದರಾದೇವಸುಂದರಿಯ | ರಡಿಗಡಿಗೆ
ನೂಪುರಂಗಳ ಝುಣಝುಣತ್ಕಾರ | ನೋಡಲಿಚನಬಿಲ್ಲಪೊಂಗಿರುಗಂಟೆಗಳರಣಿ
ತಮೆಂಬಶಂಕೆಯನೀಯಲು ॥ ೨೩ ॥

ಝಗಝಗಿಸನವರತ್ನಭೂಷಣಂಗಳಕಾಂತಿ | ಮುಗಿಲ್ವಟ್ಟೆಯೊಳುಮ
ಕಾಲದೊಳುಮಿರದಿಂದ್ರಚಾಪ | ಪಗಳತತಿಯಂಸೃಜಿಸಿದುವು ನೋಡಲಾರಮಣಿ
ಯರ ದೇಹಶೋಭಾಝರಿ ॥ ಗಗನಸರಿದಂತರದೊಳೊಗೆದೆಸೆವ ಪೊಂದಾವ |
ರೆಗಳನರ್ಗಳರುಚಿಯಶಂಕೆಯಂ ಪುಟ್ಟಿಸಿತು | ನಗೆಮೊಗದಪೊಳಪು ಸಾಸಿರ
ಸಸಿಗಳೊಮ್ಮೆತಲೆದೋರ್ದತೆಂಬವೊಲಿರ್ದುದು ॥ ೨೪ ॥

ಪರಮರ್ಷಿಗಳ ತಪೋಭಂಗಕಿಂದ್ರಂ ಪಡೆದ | ನಿರುಪಮಮಾನೇಕದಿವ್ಯಾಸ್ತ್ರಗಳೊಮೇಳ್ಪುಸುಮ | ಶರನವಿಜಯಧ್ವಜಂಗಳೊಮೇಳ್ಮನೋಹರಾಕಾರಗಳೊ ಶೃಂಗಾರದ || ಸರಸಿಜಭವಂ ಭುವನಮಂ ಮೋಹಿಸಲ್ಕೆ ಮೇ | ಣ್ವಿರಚಿಸಿದಪಲವು ಮಾಯಾಶಕ್ತಿಗಳೊಪೇಳ | ಲರಿದೆಂಬಪೆಂಪ್ರಮತ್ತಾದಿವಿಜಯುವತಿಯರ್ನಡೆತಂದರಾಗಸದೊಳು || ೨೫ ||

ಪರಿಪರಿಯ ಬಂಣದಿಂ ಮಿರುಮಿರುಗುವುಡಿಗೆಯುಂ | ಧರಿಸಿಕುಡಿವುರ್ಬುಗಳೆಸಿಪ್ಪ ಬಿಣ್ಪೊಳ್ಳಂ | ಮೆರೆಯುತಾಕೇಕರಾಪಾಂಗಕಿತಗಳೆಂಬ ಕೂರ್ಗಣೆಗಳಂ ಸಜ್ಜುಗೊಳಿಸಿ || ಅರೆನಿಮಿಸದೊಳಗೆಯು ವೈರಾಗ್ಯರಾಜ್ಯಮಂ | ಪರಿದೊತ್ತಿ ಬಿಡದೆ ಕಯ್ಸೆರೆವಿಡಿವೆಪನನನೆಂ | ಮರುವೀರವಾದಮಂ ಕೈಯುತಾಕುಸುಮಸಾಯಕನಪಡೆನಡೆತಂದುದು || ೨೬ ||

ಅರಗಿಳಗಳೆಂಬವಾರುವಗಳಂ ಪೂಡಿರ್ಪ | ಮೆರೆವಮಿಾಂಬಳಯಿಗೆಯ ತೆಂಗಾಳಿಯುಂದೆಂಬ | ವರವರೂಥವನಡರ್ದು ಫುಲ್ಲಸುರಭಿಳಕುಸುಮಬಾಣಂಗಳಂ ತುಂಬಿದ || ಎರಡುಡೊಣೆಗಳ್ತ್ಯೋಭಿಪಡೆಯಬಂಸದ್ವಯದೆ | ಕರತಲದೊಳೊಪ್ಪೆಪ್ರಂಡೆಕ್ಷುಕೋದಂಡಮಾ | ಸ್ಮರವೀರನೊಡಗೂಡಿ ಚೈತ್ರನಿಂಧಾಳಟ್ಟನಾಸುಮದನೃಪನಮೇಲೆ || ೨೭ ||

ಸಚ್ಚರಿತಕೇಳ್ವಲವುಬಳ್ಳಿಮಿಂಚುಗಳ ವನಿ | ಗಚ್ಚರಿಯೆನಲ್ಕೆಳದು ಬರ್ದಂತೆ ಬರುತಮಿ | ರ್ಪಚ್ಚರಸಿಯರಗಡಣದಿಂದಂ ವಸಂತನಿಂದಂಕೂಡಿಕಂದರ್ಪನು || ಉಚ್ಚಮೆನಿಪಾಹೇಮಕೂಟಶೈಲಕೆಬಂದು | ನಿಚ್ಚಳದಯೋಗಾಸನದೆಕುಳಿತು ಕಣ್ಣುನರೆ | ಮುಚ್ಚಿಹನನುನ್ಮಿಷನನಂತಮರ್ಜುನನಾಸುಮದಭೂಪನಂಕಂಡನು || ೨೮ ||

ಬರೆಚೈತ್ರನಾಗಿರಿಯೊಳೊಮೆರ್ದಲ್ಪರ್ವತ್ರ | ಮರಗಳುಂ ಗಿಡುಗಳುಂ ತಳಿರಿಡಿದುಮುಲರಾಂತು | ಮೆರೆವವಲರ್ದಲರಬಂಡಂಸವಿದುಪರಮೆಗಳ್ಮಧುರಝುಂಕೃತಿಗೈದುವು || ಪರಪುಟ್ಟಗಳ್ಪದುರ್ಕಿಮಾಂದಳಿರನುರೆಸೊಕ್ಕಿ | ಸರಸಪಂಚಮನಾದಗಾನಕಾರಂಭಿಸಿದು | ವರವಿಂದಸೌರಭೀ ಬಂಧುರಂ ಮಂದಾನಿಲಂ ತೀಡಿತೆಲ್ಲೆಲ್ಲಿಯುಂ || ೨೯ ||

ಅಲ್ಲಿ ಘೂಳಿಟ್ಟು ಬಂದತನುವೀರಂಗೆ ನವ | ಪಲ್ಲವತಲಂಗಳಂ ಕುಸುಮಬಾಣಂಗಳಂ | ಮಲ್ಲಿಗೆಯ ಬಳ್ಳಿಗಳ್ ಕಾಸ್ತ್ರೆಯೊಪ್ಪಿಸಿದುವು ಪ್ರೌಢನಂಭೋರುಹಾಕರಗಳುಂ ‖ ಫುಲ್ಲಪಂಕಜಪದ್ಮರಾಗ ಕನಕಾಲುಕೆಗ | ಳಲ್ಲಿ ಮಧುವೀರಪಾಣವನೊಪ್ಪಿಸಿದುವಾದ | ಮುಲ್ಲಾಸದಿಂದೆ ಕಲಕಂಠಂಗಳ್ ಸಗಿದುವು ಕಾಹಳೀಕಲಕಲವನು ‖ ೨೦ ‖

ಗಿರಿಶಿಲಾತಲದಕೆಡೆದಿರ್ದ್ದ ನಿರ್ಝರದ ಶೀ | ಕರತತಿಯು ಚೌರಿಯುನೆ ಬಿತ್ತರದೆ ಬೆಳ್ದರ | ಲ್ದರಲಗೊಂಚಲ್ಗಳಂ ದಿಡಿದಿರ್ಪ ಗೋರಂಟಿ ಮೊರೆಯು ಪ್ರೌಂಗೊಡೆಯುಂದದ ‖ ಪರಮೆಗಳಸೆಣಿಹರಿನೀಲಮಣಿ ತೋರಣದ | ಸಿರಿಜಡೆಯು ರನ್ನದಾರತಿಯಾಗಲಿರ್ದತಾ | ಪರೆಗೊಳಂ ರಾಜೋಪಚಾರವಂ ಗೈದಳಾವನಲಕ್ಷ್ಮಿ ಮದನನೃಪಗ ‖ ೨೧ ‖

ಕೂಡಿದೆಳನಗೆಗಳಂ ಶೃಂಗಾರದಗಗಳಂ | ಗಾಡಿಮಿಗೆನಸುಕೆಂಕಿದೆವೆಗಳಂ ಕಣ್ಗಳಂ | ನೋಡಿದರ್ಬಳಕಪಂಚಾಗ್ನಿಗಳನಡುವೆ ತಪಮಿರ್ಪ ತನ್ನ ರೂಪಮುನಿಯುನು ‖ ಪಾಡಿದರ್ಮಧುರಸಂಗೀತಮಂ ಬಿಡದೆ ಸುಳಿ | ದಾಡಿದರ್ಸ್ಸರಿಸದೆ ಮನೋಜ್ಞನಹನೃತ್ತಮಂ | ಮಾಡಿದರ್ಘರ್ಘಲ್ಲುಘಲ್ಲನೆ ಮಂಜುಮಂಜೀರಮಾದಿವ್ಯಸುಂದರಿಯರು ‖ ೨೨ ‖

ಆಶಕ್ರಪುರಗಣಿಕೆಯರ ಗಾನವೃತ್ತಿರಿಯು | ನಾಶುದ್ಧಶಾಂತಸಾತ್ವಿಕಮೂರ್ತಿ ಸುಮುದಾಪ | ನೀಶನಾಲಿಸಿಮುನಂಚಲಿಸೆ ಹೊರಮೊಗನಾಗಿ ಕಂದೆರೆದು ಸುತ್ತು ನೋಡಿ ‖ ಸಾಶಂಕನಾಗಿದೆಂತೋರಿದುದು ಮಧುಮಾಸ | ವೀಶಶಿಮುಖಿಯರಾರೆನುತ್ತ ವಿಸ್ಮಿತನಾದ | ನಾಶಂಬರಾರಿಯಿದೆ ಸಮಯಮೆಂದಿದಿರಾಂತ ನಾಮಹಾನೀಕದೊಡನೆ ‖ ೨೩ ‖

ಆಗಳವರೆಲ್ಲರಂ ನೋಡಿ ರಾಜರ್ಷಿಯುಂ | ನಾಗವೇಣಿಯರಿರಾ ನೀವಾರದೇತಕಾ | ಗೀಗಹನಶೈಲದೊಳ್ಚರಿಸುವಿರಿ ಕೋಮಲಾಂಗಿಯರಲಾ ನೀವೆನಲ್ಕೆ ‖ ರಾಗದಿಂದಾಮಧುರವಾಣಿಯರ್ಕೇಳ್ಮಹಾ | ಭಾಗನಿನ್ನಯತಪಕ್ಕಾವೊಲ್ದುಬಂದಿಹೆವು | ಭಾಗೀಗಪ್ರದುಸಿ ನೆಮ್ಮ ನಚ್ಚರಸಿಯರನೆಂದು ಬಳಸಂದುನುಡಿದರಂದು ‖ ೨೪ ‖

ಅವನಿಪನಪ್ಪುರೆಯಲ್ಲಿ ಬೆಡಗುಮಿಗೆಬಂದುಕುಳಿ | ತವರೊಳೊರ್ವಳ್ ಚಬ್
ರಸಿಬೀಸೆಯುಂಬಾಜಿಸಿದ | ಳವನಡಿಯನೊತ್ತೆ ಸಡಗರಿಸಿದಳ್ಳಿರನೋಕಿಪತಳ
ದೆಮುತ್ತ್ವೊರ್ವಳು ‖ ನವಮಾಲಿಕಾಲತೆಯ ಬಿರಿಮೊಗ್ಗುಗಳಸಿನ್ನೊರ್ವ | ಯು
ವತಿಮೇಲುದುಜಾರೆ ಪ್ರಂಗೇರ್ದೆಯುಪೂಪ | ನವಗಣಿಸನಳತೆಗಳನೆತ್ತಿ ಮು
ಟ್ಟುಂಗಾಲೊಳವನಿದಿರೆತಿಪ್ಪಳಾಗ ‖ ೩೫ ‖

ಭಾವಗತಭಾವವುಂಸೂಚಿಸುವ ವಿವಿಧಾನು | ಭಾವಂಗಳ್ಸೆವಿನಂನಾ
ತ್ರಿಕಾಂಗಿಕಭೇದ | ಭಾವಿತಾಭಿನಯಂಗಳಂಪ್ಪೆ ಹಿಪ್ಪ್ರೋಳಗಾರ್ತಿಯುರಲಯ
ಬದ್ಧಮಾದ ‖ ದೈವತಾತೋದ್ಯಕಲಕಲಮುಸ್ತ್ರೀರಾಗರಸ | ಭಾವಯುತನಿಜ
ಕಂಠಸಂಗೀತಮುಮವರ್ಣನಭಿ | ಭಾವಿಸೆಝೇಂಝೇಣಿಸೆ ಮಂಜುನುಂಜೀರರ
ವಮವರೊಳೊರ್ವಳ್ ಕುಣಿದಳು ‖ ೩೬ ‖

ಬೀಸಿವಳ್ಕಂಕಣಂ ಝಣಝಣಿಸಲಾಮುಚದ | ಬೀಸಣಿಗೆಯಿಂದೊರ್ವ
ಳತಿಸುಹಿತಮೆನಲೊರ್ವ | ಯಾಸಾರವಿಂದಮುಖಿಯೊಳ್ ಸುಮುದಪಿಡುತಪ
ಶ್ರಮವನೆನ್ನೊಡನೆನೀನು ‖ ಬಾಸುಮೇರುಗೆಪ್ರೇಪಿವಿ ವಿಮಾನವನೇರು |
ಲೇಸುಮಿಗೆಸವಿದಮೃತಸಾರವುಂ ನಂದನಾ | ವಾಸದೊಳ್ದಿವ್ಯಭೋಗವನನು
ಭವಿಪೆವೆಂದು ಸವಿವಾತಿನಿಂದೆರೆದಳು ‖ ೩೭ ‖

ಆಮಾತನಾಲಿಸಿರನೃಪತಿಕೇಳ್ದಲಗೇವ | ಕಾಮಿನಿಮಣಿಯರಿರಕೇಳಿ
ರೌಸೊಗಯಿಪ್ಪುವು | ಕಾಮುಕರಬಗೆಗೆನಿಮ್ಮಾತರದರೂಪ ಮಧುರಾಲಾಪವಿ
ಭ್ರಮಗಳು ‖ ಏಮಾಳ್ಕೆಯಿಂದೆಯುಂಪ್ರಟ್ಟಿಸಲ್ಕಾರವವು | ಕಾಮವನನಂತ
ಪಸ್ಸಿದ್ಧರೆಂದೆನಿಸಿದವು | ಹಾಮುನೀಂದ್ರರಮನದೊಳಿನಿಸಾನುಮೀಭ್ರಾಂತಿ
ಯೇತಕ್ಕೆನಿಮಗೆಂದನು ‖ ೩೮ ‖

ದಿವಿಜಪುರವಾರಾಂಗನೆಯರುಮಂಕೇಳ್ದುಪೊ | ರ್ಥಿವಕುಮಾರೋತ್ತಂಸ
ಕೇಳ್ಬಹುಕಾಲತಪದಿಂದೆ | ವಿವಿಧಸುಖಭೋಗಸಾಧನಮಪ್ಪ ನೃಪಜನ್ಮವಂ
ಪಡೆವರಲೆಮನುಜರು ‖ ಅವನಿಯೊಳ್ಪ್ರಖ್ಯಾತಿಶಯಮಪ್ಪಂಗೆ ನೀನಪಂ | ಸವನಿಸಿ
ದೊಡಮಿಂತುಗಾವಿಲನತೆರದೊಳಾ | ಡುವರ ತೆಗೆ ನೃಪನೆನಿಸಿಕೊಂಡೊಡೆ
ವೆಮ್ಮೊಡನನುಭವಿಸುಟವ್ಯಸುಖವನೆನಲು ‖ ೩೯ ‖

ಧರಣೀಂದ್ರನಾನುಡಿಗೆ ನಸುನಗುತ್ತಲಿದೇವ । ತರುಣಿಯರಿರಾ ಕೇಳಿ ರೀಜಗದೊಳೆಂತು ಭೂ । ವರರೆನಿಸರಲ್ಪತನುಸುಖವಮಾತ್ರಲಂಪಟರದಂತಿರ್ಕೆ ನಿಮಗೆನ್ನೊಳು ॥ ಕರುಣೆಯಿದ್ದೊಡೆ ತಪೋನಿಷ್ಠನಾಗಿರ್ಪೆನ್ನ । ಪರಿಸರ ದೊಳಿರದೆಲ್ಲಿಯಮಾದೊಡಂ ಪೋಗಿರೆನೆ । ಸುರವಾರನಾರಿಯರ್ಕೇಳ್ದದಂ ಮೆಲ್ಲಗೆ ಯೊಳೊಳ್ನುಡಿಯೊಳಿಂತೆಂದರು ॥೪೦॥

ಏನೆಂಬೆವಾಂ ನಿನ್ನಗಾಂಪತನಕೆಲೆನೃಪತಿ । ನಾನಾತಪೋದಾನಯಜ್ಞಂ ಗಳಂ ಗೈದು । ಮಾನವರ್ಸಗ್ಗಮಂಸಾರ್ದಮಗೆ ದಾಸಾನುದಾಸರೆಂದೆನಿಸುತಿ ರಲು ॥ ನೀನೆಳಸದೆಯೆ ನಿನ್ನರೂಪಕಂತಪಕವೊ । ಲ್ದೀನಗಕೆಬಂದೆವೆಮ್ಮನತಿ ಗಳೆವುದಿಂತುಚಿತ । ವೇನಿನಗೆ ಸಶರೀರನಾಗಿ ಸಗ್ಗದಸೊಗವನುಪಭೋಗಿಸೇ ಳೆಂದರು ॥೪೧॥

ಆವಚನವಂಕೇಳ್ದಲಾ ಮಂಗಳಾಂಗಿಯರೆ । ನೀವೆನ್ನ ಜಾನದೊಳಗಿ ರ್ಪ ಕಾಮೇಶ್ವರೀ । ದೇವಿಗೆಣೆಯಾದವರ್ನಿಮಿಷಮಾತ್ರದೊಳಳಿವುದಾ ಸ್ವರ್ಗ ಸುಖವೆಂಬುದು ॥ ಆವಿಶ್ವಮಾತೆ ಕರುಣಿಪಪದವೆನಿತ್ಯವಲೆ । ಭಾವಿಪ್ಪೊಡೆ ನೀವೆ ನ್ನತಪಕೆಡರನಾಗಿಸ । ಲ್ದೇವೇಂದ್ರನಾಜ್ಞೆಯಿಂಬಂದಿಹಿರಿ ನಿಮ್ಮಬಲೆಗೊಳ ಗಾಗೆ ನಾನೆಂದನು ॥೪೨॥

ಪಡೆಯಲೀತೆರದೊಳವಮತಿಯನಚ್ಚರಸಿಯರ । ಪಡೆಕರ್ವುವಿಲ್ಲನುರ ವಣಿಸುತ್ತಗಿಳಿದೇರ । ನಡಮರ್ವರಿದುಂಬಿ ತಿಂಥಿಣಿನಾರಿಯುಂಟಂಕರಿಸುವುದುಂ ಮುಳಿದು ಬಳಿಕ ॥ ಒಡನೆಯೆ ವಿಯೋಗಿಯೆನಿಸಿದನವಮ ಯೋಗಿನಡ । ನ ಡುಗುತಂತುಟುಯೋಗಿಯಾವಂ ವಿಯೋಗಿಯಾ । ಪೊಡವಿಪತಿಯೆರ್ವನಾಣಂ ಚಲಿಸದಿರ್ದಂಶಮಾದಿಬಲಸಹಿತನಾಗಿ ॥೪೩॥

ಒಡನೈಸರಳ್ಗಳಂಪೂಡಿ ಕೋದಂಡದೊ । ಳ್ಕಡುವಿಲ್ಲನುರವಣಿಸಿ ಕಿವಿ ವರಂಬರೆದೆಗೆದು । ಬಿಡಲೆದೆಗೆಗುರಿಯಿಟ್ಟವೇನೆಂಬೆನಾಸುಮುದಭೋವರಂ ಬರ ಮದೇಕೆ ॥ ತಡೆಯೆಪಟ್ಟಾಶಮದವಾದಿಪರಿವಾರದಿಂ । ಪಡೆದುಮುಖಭಂಗವಂ ನಧೋಗತಿಯನಡಸಿಸುವು । ನುಡಿಯಲೇ ನಾರಾಜಯೋಗೀಂದ್ರನಿಂದ್ರಿಯವಿ ನಿಗ್ರಹದಗರುವಿಕೆಯನು ॥೪೪॥

ಬಳಿಕ ಯೋಗಾಸನದೊಳಾಧೀರರಾಜರ್ಷಿ | ಕುಳಿತು ಕಣ್ಮುಚ್ಚಿನಿಶ್ವಾಸಮಂಬಿಡದೆ ಮನ | ದೊಳಗೆ ನತಮಂದಾರಲತೆಯು ಪರದೇವತೆಯ ಜಾನದೆಮನಂಬುಗಿಸಲು || ನಳಿನಾಸ್ತ್ರನೇಗೈದೊಡಂ ತನ್ನ ಸಾಹಸಂ | ಫಲಿಸದಿರಲವಮಾನದಿಂದಾವನಾಣಿಂದೆ | ತಲೆವಾಗಿದಿಚ್ಛ್ರರವಿಯುರಗಡಂದೊಡಗೂಡಿಸುರಲೋಕಮಂಸಾರ್ದನು ||೪೫||

ಸೌಮಿತ್ರಿಯೇಳನಂತರದೊಳಾಸುಮದ | ಭೂಮಿಪಾಲನತಪಕೆ ಮೆಚ್ಚಿ ತಾಂ ಕೃಪೆಯೊಳಾ | ಕಾಮಾಕ್ಷಿತೋರಿದಳ್ರಮಣೀಯಮಪಾದನಿಜದಿವ್ಯರೂಪವನವಂಗ || ಆಮಹಾರಾಜರ್ಷಿ ಕಂದೆರೆದು ತಚ್ಚರಣ | ತಾಮರಸಯುಗಳಕ್ಕೆ ಸಾಸಿರ್ಮ್ಮೆಕುಂಬಿಟ್ಟು | ಕೈಮುಗಿದು ಬೆಕ್ಕಸಂಬಡುತಿಂತುಭಕ್ತಿಪರವಶನಾಗಿ ನುತಿಗೈದನು ||೪೬||

ಜಯಜಯ ಜಗನ್ಮಾತೆ ಜಯಜಯ ಶ್ರುತಿಗೀತೆ | ಜಯಧೃತಾಂಕುಶಪಾಶೆ ಜಯಧೂತಭವಪಾಶೆ | ಜಯಜಪಾಸುಮಭಾಸೆ ಜಯಮುನಿಮನೋವಾಸೆ ಜಯಪರಿತ್ರಾತದಾಸ || ಜಯಜಯ ಮಹಾಮಾಯೆ ಜಯಮಹೇಶ್ವರಜಾಯೆ | ಜಯಶೈಲಪತಿಬಾಲೆ ಜಯಜಯಕೃಪಾಪಾಳ | ಜಯಮಂತ್ರಮೂರ್ತಿಯೇ ಜಯಯಂತ್ರಮೂರ್ತಿಯೇ ದೇವಿ ತುಭ್ಯಂನಮೋಸ್ತು ||೪೭||

ಇಂದೆನ್ನ ಜನ್ಮಸಾರ್ಥಕವಾದುದೆನೆಂಬೆ | ನಿಂದೆನ್ನ ಪಾತಕದ್ರುಮಮುರಿದು ಬೀದಿಯಾ | ಯಿಂದೆನ್ನ ಬಹುಕಾಲದಿಂಬಳೆದ ಘನತಪೋಲತೆ ತೋರಿಮದು ಫಲವನು || ಇಂದೆನ್ನ ವಂಶಪಾವನವಾದುದಹಹ ನಾ | ನಿಂದು ನಿನ್ನಂಘ್ರಿಯಂಕಂಡು ಧನ್ಯನುಮಾದೆ | ನಿಂದುಕಲಿಕೋತ್ತಂಸೆ ಕಾಮಾಕ್ಷಿ ಪಾಲಿಸೆಂದಡಿಗಡಿಗೆ ಪೊಡಮಟ್ಟನು || ೪೮ ||

ಅರಿದೆನಾನೆಲೆಸುಮದ ನಿನ್ನ ಮನದರಿಕೆಯಂ | ಪರಿಹರಿಸಿ ನಿನ್ನ ಭುಜಬಲದಿಂದೆ ವೈರಿಯಂ | ಮರಳಿನೀಂ ರಾಜ್ಯಮಂ ಪಡೆವೆ ಮುಂದಲ್ಲಿ ರಾಘವನಶ್ವಮೇಧವಾಜಿ || ಬರುವುದೊಡವರ್ಪ ರಾಮಾನುಜಂಗೊಲ್ದು ನಿಜ | ಸಿರಿಯಿತ್ತು ಸತ್ಕರಿಸು ಪಡೆವೆ ಬಳಿಕಾಪರಾ | ತ್ಪರನಾದ ರಾಮನಡಿಯಂಕಂಡು ಕೈವಲ್ಯ ಸುಖವನೆನೆ ನಾರಾಯಣಿ || ೪೯ ||

ನೆಲದೊಡೆಯನೆಲೆತಾಯೆ ಕಾಮಾಕ್ಷಿ ಭವದಂಘ್ರಿ । ನಳಿನಕೃಪೆಯಿಂ ದಿಹಪರೋಭಯಸುಖಂ ಪಾಣಿ । ತಲಗತಂತಾನೆನಿಸಿತೆನಗೆ ಪಿರಿದಾವುದಿನ್ನಿದ ರತ್ತಣಿಂದಾದೊಡೆ ॥ ಲಲಿತಾಂಬೆ ಬೇಡುವೆನಿದೊಂದನೀರೂಪದಿಂ । ನೆಲಸಿರ್ದು ನೀನಿಲ್ಲಿ ಭಕ್ತಲೋಕವನೊಲ್ದು । ಸಲಹುತಿರವೇಳ್ಕುಮೆಂದರ್ಥಿಸಿದೊಡೆಲೆವತ್ಸ ಸಲಿಪೆನೀವರವನೆಂದು ॥ ೫೦ ॥

ನುಡಿದಾಮಹಾದೇವಿ ಬಟ್ಟಬಯಲಾದಳಾ। ಪೊಡವಿಪತಿಯಲ್ಲಿಂದೆ ಮರಳಿ ಭುಜವಿಕ್ರಮದೆ । ಪಡೆದು ನಿಜರಾಜ್ಯಮಂ ಸಲಹುತಿಹನಂದಿನಿಂ ಧರ್ಮದಿಂದಿಳೆಯನಿಲ್ಲಿ ॥ ಕಡುಕೃಪೆಯೊಳನುಪಮೋತ್ಸವಗಳಿಂ ಮೆರೆಯುತೀ । ಯೆಡೆಯೊಳಾದೇವಿ ಸನ್ನಿಹಿತೆಯಾಗಿರ್ಪಳೆನ । ಲೊಡನಲ್ಲಿಗೈದಿ ಶತ್ರುಘ್ನನಾದೇವಿಯಡಿದಾವರೆಗೆ ಕುಂಬಿಟ್ಟನು ॥ ೫೧ ॥

ಮುನಿಪಕೇಳ್ಬಳಿಕಾಮುಖೀವರಂ ತನ್ನ ಪ । ತ್ತನದಗಡಿಗಾಮಹಾಮಖತುರಗಮುಂ ಶೂರ । ಜನಮೌಳಿಯಾದ ಶತ್ರುಘ್ನನುಂಬಂದುದಂ ಚರರ ಮುಖದಿಂದೆಕೇಳ್ದು ॥ ನೆನೆದುಕೊಂಡಾಮಹಾದೇವಿಯಾವಚನಮಂ । ತನುವನೊಡನಳುರೆಜುಮ್ಮೆನೆ ಸಾಂದ್ರಪುಳಕಾಳಿ । ಮನದೊಳುರೆಮುದವೆತ್ತುಮಂತ್ರಿಪುರವೃದ್ಧರೊಡನಿಂತೆಂದನೋಲಗದೊಳು ॥ ೫೨ ॥

ಎಲೆಸಭಾಸದರಿರಾ ಕೇಳಿರೈ ತಿಳಿದಿರ್ಪು । ದಲೆನಿಮಗೆ ಕಾಮಾಕ್ಷಿಯೆನಗಿತ್ತವರದಪರಿ । ಫಲಿತಶಿರನಾದೆನಾನುಂ ಬಂದುದಾಮಹಾಮಖತುರಂಗಮುಮಿಲ್ಲಿಗೆ ॥ ನೆಲದೊಳಗೆ ಮಾನುಷಾಕೃತಿಯೊಳವತರಿಸಿರ್ಪ । ನಳಿನಾಕ್ಷನಡಿಯೊಳೆನ್ನಯಸರ್ವಸಂಪತ್ತು । ನೊಲಿದರ್ಪಿತಂಗೈದು ನೀಡುಂ ಕೃತಾರ್ಥನಾಗಲ್ಕೆ ತಾನೆಳಸಿದಪೆನು ॥ ೫೩ ॥

ಸೊಡರಿರ್ದ ತಾಣದೊಳ್ಭಾಸ್ಕರಂ ಪೊಯ್ಮ್ಮಾರಿ । ನೆಡೆಯಲ್ಲಿತನಿಯುಮಳೆ ಬೀಸಣಿಗೆಯೆಳಗಾಳಿ । ಯೆಡೆಯಲ್ಲಿತಂಗಾಳಿ ತಾಳೆವರದೆಡೆಯಲ್ಲಿ ಕಲ್ಪತರು ದೊರೆದಂತಿರೆ ॥ ನುಡಿಯಲೇಂ ಜಗದೀಶರಾಮನೇ ದೊರೆದನೆ । ನ್ನೆಡೆಯಲ್ಲಿ ನೀವುಮಿನ್ನೇಂಧನ್ಯರಾದಿರೆನೆ । ಕಡುಸಂತಸಂಗೊಂಡು ಸರ್ವರುಂ ನೃಪನವಾಂಛಿತವನನುಮೋದಿಸಿದರು ॥ ೫೪ ॥

ಅರಸನೊಡನತಿಮುದದೆ ಸಚಿವರ್ಗೆ ಪುರದಸಿಂ । ಗರವನಾಣಿಸಿದೊಡೆ ಬೀದಿಬೀದಿಗಳಲ್ಲಿ । ಮೆಱೆಮೆಱೆದುವೇಸಂಬನೊಡನೆ ಗುಡಿತೋರಣಂಸಿಂಧ ಸೀಗುರಿಪತಾಕೆ ॥ ಮೆಱೆದುವಲ್ಲಲ್ಲಿ ಪೊಂಗಳಸಗನ್ನಡಿಯ ಪರಿ । ಪರಿಯಸಿಂಗರದ ಮೇಲ್ಕಟ್ಟುಗಳ ಶೀತೋಪ । ಚರಣೋಪಕರಣಗಳಕಾವಣಗಳಂತು ದೀಪಾವಳಿಸ್ತಂಭಂಗಳು ॥ ೫೫ ।

ಕೇರಿಕೇರಿಗಳಲ್ಲಿ ಪನ್ನೀರಸಿಂಪಿಸಿದ । ರೋರಣಿಸಿತೋರಲರ್ದಂಡೆಗಳ ರಚನೆಗಳ । ನಾರಚಿಸಿದರ್ಸರ್ವರ್ಘನಸಾರಚೂರ್ಣದಿಂ ರಂಗವಲ್ಲಿಯನಿಟ್ಟರು ॥ ಪೌರಜನರೊಡನೊಡನೆ ಮನೆಮನೆಯ ಬಾಗಿಲೊ । ಳ್ಳುರುರಂಭಾಸ್ತಂಭಯುಗಳಮಂ ಕಟ್ಟಿದರು । ದಾರಕುಂಕುಮದೆ ಕಾರಣೆದೆಗೆದರಾಗಳಾಪುರಲಕ್ಷ್ಮಿಮೆಱೆದಳಂತೋ ॥ ೫೬ ॥

ಧರಣೀಂದ್ರನಾಬಳಿಕ ವರಮಂತ್ರಿಜನರಿಂದೆ । ಪುರವೃದ್ಧಜನರಿಂದೆ ಚತುರಂಗಬಲದಿಂದೆ । ಪರಿವಾರಜನದಿಂದೆಯುಂಕೂಡಿ ನಡೆತಂದು ಕಂಡುರಾಮಾನುಜನನು ॥ ಚರಣಾಂಬುಜಕ್ಕೆಱಗಿ ವಿನಯದಿಂದೆಲೆರಾಯ । ನೆರೆಧನ್ಯನಾದೆನಾಂ ಭವದಂಘ್ರಿದರ್ಶನದೆ । ಚಿರಕಾಲಕೆನ್ನಯಮನೋರಥಂಸಫಲವಾಯ್ತೆಂಬುದುಂ ಶತ್ರುಘ್ನನು ॥ ೫೭ ॥

ಕ್ಷೇಮವೇನಿನಗೆ ನಿನ್ನಯರಾಷ್ಟ್ರದೊಡನೆಲ್ಲ । ಭೂಮಿಪತಿನೀನೆನಗೆ ಮಿತ್ರನಾದುದರಿಂ ನಿ । ಕಾಮವೆನೆ ಸಂತಸವನಾಂತೆನೆನೆ ಸುಕ್ಷೇಮವೆನಗೆ ರಾಮನಕೃಪೆಯೊಳು ॥ ಕಾಮಾಕ್ಷಿ ನುಡಿದಿರ್ಪಳೆನ್ನ ತಪಕೊಲ್ದುನೀಂ । ರಾಮನಂ ಭಜಿಸಿದೊಡೆ ಕೃತಕೃತ್ಯನಹೆಯೆಂದು । ಸೌಮಿತ್ರಿ ಕಾದಿರ್ಪೆನದಕೆ ನೀಂಬಿಜಯಂಗೈಯಲ್ವೇಳ್ಕುಮೆನ್ನ ಪುರಕೆ ॥ ೫೮ ॥

ಎನುತೆಗುರು ವಿನಯದಿಂಬೇಡಿಕೊಂಡಾಸುಮುದ । ಜನಪನಾಮಖತುರಗದೊಡನೆಯುಂ ಮಾಂಡವೀ । ತನಯ ಮುಖರಹವೀರರೊಡನೆಯುಂಸೌಮಿತ್ರಿಯುಂ ಮಹಾವಿಭವದಿಂದೆ ॥ ಘನವಾದ್ಯಕಲಕಲಂಮೊಳಗೆ ದೆಸೆದೆಸೆಗಳೊ । ಳ್ವಿನುತರಾಜೋಪಚಾರಂ ಮೆಱೆಯೆ ಪಟ್ಟವ । ರ್ಧನದಮೇಲುತ್ಸವದೆ ಕುಳ್ಳಿರಿಸಿಕೊಂಡು ನಿಜನಗರಕ್ಕೆ ಕರತಂದನು ॥ ೫೯ ॥

ತುಂಗಸೌಧಂಗಳಾವಳಿಯಿಕ್ಕೆಲದೊಳೀಟ್ಟ | ಳಂಗೊಂಡುಕಂಗೊಳಿಸು ವಾಮಹಾಪತ್ತನದ | ಮಂಗಳದ ಸಿಂಗರದ ವೈಖರಿಯ ಪುರಜನದ ಸಂದಣಿಯ ರಾಜಪಥದೆ ‖ ಮುಂಗಡೆಯೊಳಂಗವಿಸಿದಿನಕುಲೇಂದ್ರನ ಜಸದ | ಪೊಂಗಿನತು ರಂಗಮದು ನಡೆಯೆ ನಿಜವಾಹಿನಿ ತ | ರಂಗಿಣಿಯಭಂಗಿಯಿಂ ಪಿಂದೆಬರೆಮೆಲ್ಲ ಮೆಲ್ಲನೆ ಬಂದನಾವೀರನು ‖೬೦‖

ತನುವನತಿಸಂಭ್ರಮದೆ ಸಿಂಗರಿಸಿಕೊಂಡು ಪುರ | ವನಿತೆಯರ್ಝುಣ ಝುಣಿಸೆ ನೂಪುರಂವಾದಿತ್ರ | ನಿನದಮಂ ಕೇಳ್ದೊಡನೆಬಂದು ಸಡಗರಿಸುತು ಪ್ಪರಿಗೆಗಳನೇರಿನಿಂದು ‖ ವಿನುತಮತ್ತತುರಗದೊಡನುತ್ಸವದೆಬಹರಾಮ | ನನುಜನಂನೋಡುತೊಲ್ದರಳಲರ್ಗಳೆರಚುತಿರೆ | ಜನರಕಣ್ಗವು ತೋರ್ದುವ ವರದಿಟ್ಟಿಗಳೊಡನೆ ಬೆರೆದುಕೊಂಡಿಮ್ಮಡಿಯೆನೆ ‖೬೧‖

ಪೊಂಗೆಲಸದೆಸೆವತೊಟ್ಟಲನಿಟ್ಟಬೆಂಗಡೆಯು | ತುಂಗಮಾತಂಗಗಳನೇ ರಿ ಮುಗಿಲಡರ್ದಖಚ | ರಾಂಗನೆಯರಂದದಿಂ ಕಂಗೊಳಿಪಪುರವಾರನಾರಿಯ ರಿದಿರ್ಚಿನಿಂದು ‖ ಶೃಂಗಾಟಕಂಗಳೊಳ್ಕಣಿಯೆ ಚಂದದೆಕನ್ನೆ | ಮಂಗಳಡಿ ಗಡಿಗಾರತಿಯನೆತ್ತೆ ಮಾಗಧ ಜ | ನಂಗಳಲ್ಲಲ್ಲಿಕಯ್ಯೆತ್ತಿಕೈವಾರಿಸೆ ಮಹಾವಿಭ ವದಿಂ ಬಂದನು ‖೬೨‖

ಇಂತತಿಮಹೋತ್ಸವದೊಳರಮನೆಗೆ ಸೌಮಿತ್ರಿ | ಯಂತಕ್ಕಮಾನದಿಂ ಕರತಂದು ಸುಮದಭೂ | ಕಾಂತನತಿವಿತರಣೆಯಸತ್ಕಾರಮಂಮಾಡಿ ಪರಿವಾರ ದೊಡನವಂಗೆ ‖ ಕಾಂತಮಣಿಮಕುಟಮೊದಲಾದ ಭೂಷಣಗಳಂ | ದಂತಿ ಹಯ ಮೊದಲಾದನೇಕವಾಹನಗಳಂ | ಸಂತಸದಿನೆಣಿಕೆಯಿಲ್ಲದ ಪೊನ್ಗಳಂರಾ ಜ್ಯಮುದ್ರೆಯೊಡನೊಪ್ಪಿಸಿದನು ‖೬೩‖

ಆ ಕಾಣ್ಕೆಯಂ ರಾಜ್ಯಮುದ್ರೆಹೊರತೆಲ್ಲಮಂ | ಕೈಕೊಂಡುಸೌಮಿ ತ್ರಿ ಮೂರಿರುಳನೊಲ್ದಲ್ಲಿ | ನೂಕಿನಿಜಶಾಸನದೊಳೊಡನೆ ಸೌಮದಿಗೆ ರಾಜ್ಯಾ ಭಿಷೇಕವನಾಗಿಸಿ ‖ ಲೋಕಾಧಿಪತಿರಾಮಚಂದ್ರಚರಣಾಂಬುಜಾ | ಲೋಕ ನಕೆ ತವಕಿಸುವಸುಮದನನೊಡಂಗೊಂಡ | ನೀಕದೊಡನಾರಾಜಧಾನಿಯಿಂ ಪೊರಮಟ್ಟನಗ್ಗಳಿಸಿದಾನಂದದೆ ‖೬೪‖

೭ ನೆಯ ಸಂಧಿ ಸಂಪೂರ್ಣಂ.

ಇಂತು ಸಂಧಿ ೭ ಕ್ಕೆ ಪದ್ಯಗಳು ೩೫೮ ಕ್ಕೆ ಮಂಗಳಮಸ್ತು.

ಎಣ್ಟನೆಯ ಸನ್ಧಿ.

ಸೂಚನೆ ॥ ಚ್ಯವನಮುನಿಯಾಶ್ರಮಂ ಪೊಕ್ಕು ನೀಲಾಖ್ಯಶೈ । ಲವ ದಾಂಟಿ ಚಕ್ರಪುರದತ್ತಲೈದುವಮಖಾ । ಶ್ವವನಿರದೆ ತಡೆದು ಭುಜಮದದಿಂದೆ ರಣಕೆಸನ್ನದ್ಧನಾದಂದಮನನು ॥

ಆಲಿಸೈಮುನಿಶಿರೋಮಣಿ ಬಳಿಕ ಸುಮದಭೂ । ಪಾಲಕನನೊಡಗೊಂಡು ದೆಸೆದೆಸೆಯೊಳುರೆಮೊಳಗೆ । ಕಾಳೆಗಳನಿಸ್ಸಾಳಗಳ ಕಲಕಲಂ ಮುಂದೆ ಕುದುರೆಯಂಬಿಟ್ಟುಕೊಂಡು ॥ ಆಲಕ್ಷ್ಮಣಾನುಜಂ ಪಲಗಾವುದಂ ನಡೆಯೆ । ಮಾಲೂರಕಿಂಶುಕಾಶ್ವತ್ಥಪನಸಾದಿತರು । ಜಾಲದಿಂರಾಜಿಸುವದೊಂದುಋಷ್ಯಾಶ್ರಮಂ ಕಣ್ಗೊಳಿಸಿತಾಪಥದೊಳು ॥೧॥

ನೀರೆರೆವುದಾನೆಸಿಂಗದಬಾಯ್ಗೆ ಸೊಂಡಿಲಿಂ । ಪೇರೊಲವುವೆತ್ತು ಗುಗೋರ್ನೆಗಳಂತೂರಿಪ್ಪುದು । ಸಾರಗದಬೆನ್ನಂಸಿವಂಗಿ ಸುಖನಿದ್ರೆಬರ್ಪಿನಗಮೆಲರುಣಿವರಿಗಳು ॥ ಮೋರಗಳಗರಿಪ್ಪೊದರೊಳಡಗಿಪರಿದಾಡುವುವು । ಪಾರಿವಗಳಂ ಗಿಡುಗಗಳುಮೊಡನೆಗೂಡುಗಳ । ನಾರಚಿಸಿಕೊಂಡಿಹುವು ಪಗೆತನವನುಳಿದಲ್ಲಿಯುಮಿಜನರಮ್ಯಮೆಯೆನಿತೋ ॥೨॥

ಅರಗಿಳಿಗಳಾಮಹಾಶ್ರಮದ ಬಟ್ಟೆಯೊಳಿರ್ಪ । ಮರಗಳೊಳ್ಕುಳಿತು ಬರ್ಪಧ್ವಗರನೀಕ್ಷಿಸು । ತ್ತೆರಕದಿಂಸ್ವಾಗತಪ್ರಶ್ನೆಯಂಗೈಯುತಿರ್ಪುವು ಮತ್ತಮಾಯೆಡೆಯೊಳು ॥ ಪರಮರ್ಷಿಜನಗಳೊಳ್ನೆರೆನಮ್ರಭಾವದಿಂ । ದಿರುವಂತೆ ಬಹುಳತರಫಲಭಾರದಿಂತರುಗ । ಳೆರಗಿರ್ಪುವಲ್ಲಿರ್ಪಮುನಿಗಳಂ ಕೋಡಗಗಳೊಲ್ದುಸೇವಿಸುತಿರ್ಪುವು ॥೩॥

ಬರಲೊರಲುತಾಮ್ನಾಯಪಾಠಮಂ ಪಾಠಮಂ । ದಿರದಮುಂಗಡೆವಟುಗಳುಪವೀತಮಂನೂಲು। ತಿರೆ ತಾಪಸಿಯರೆಡೆದಮೊಲ್ನಾರ್ಗಳಂಕೂಡಿಸುತೆ ನಾರಸೀರೆಗಳನು ॥ ವಿರಚಿಸುತ್ತಿರೆ ಗಳಗೆವಲಗೆನೆಳಲಂನೋಡಿ । ವರಮುನಿಜನಂಕಾಲಮಂ ನಿರ್ಣಯಿಸುತಮಿರೆ । ಮರಗಳೊಳ್ಗುಂಡಿಗೆಯಸೋರೆಗಳ್ಪಿರಲುಮಾಶ್ರಮವದೇನೊಪ್ಪಿತೋ ॥೪॥

ಅನಲಮುಖದೊಳ್ಬೇಳ್ದ ಮಂತ್ರಪರಿಪೂತಹವಿ । ಘನವೃಷ್ಟಿಯಂ
ಕರೆವುದೆಂಬುಕ್ತಿಯಂ ನಿದ । ರ್ಶನಗೊಳಿಸೆ ವರಮುನಿಗಳಾಮಹಾಶ್ರಮದೆ
ಬೇಳ್ದಗ್ನಿಕುಂಡಂಗಳಿಂದೆ ॥ ಜನಿಯಿಸಿದಸಾಕ್ಷಾತ್ಪಯೋವಾಹನಿಕುರುಂಬ ।
ವೆನೆ ಕರಂ ಗಗನಾವಕಾಶದೊಳ್ಪರ್ಬಿದಪಾ । ವನಹೋಮಧೂಮಸಂತತಿಯು
ದೇಂ ಕಣ್ಗೆಸಂದುದೊಬಹುಳನೀಲವಾಗಿ ॥೫॥

ಪರಿಪೂತಮಂಗೈಯುತಾವನವಿಭಾಗಮಂ । ಪೂರಲಾರದೊಲೆದಾಡುತಿ
ರ್ಪಪೇರ್ಗಬ್ಬುಲಂ । ಚರಿಸುತಿಹಹೋಮಧೂಮಂಗಳಿಂದೆ ಹುತಹವ್ಯಗಂಧವಹ
ಗಂಧವಹದೆ ॥ ಅರೆಮೆಲ್ದದರ್ಭೆಯಂ ಮಲಕಿಕ್ಕುತಲ್ಲಲ್ಲಿ । ಮೊರೆವನುಣ್ಬಸಲೆ
ಯೊಳಯಮುಳಿದು ಮಲಗಿರ್ಪ । ಹರಿಣಂಗಳಿಂದೆ ಸಾತ್ವಿಕರೆನಿಪ ಮುನಿಗ
ಳಿಂದಾಶ್ರಮವದೇನೊಪ್ಪಿತೋ ॥೬॥

ಸುಮತಿಯಂ ಬಳಿಕ ಸೌಮಿತ್ರಿ ಪೇಳೀಮಹಾ । ಶ್ರಮವಾರದೆಂದು ಬೆ
ಸಗೊಂಡೊಡವನೆಲೆ ರಘೂ । ತ್ತಮ ದೇವಭಿಷಜರ್ಗೆ ಸುರಪಜ್ಞೆಯೊಳ್ಮಖಹ
ವಿಭಾಗಮಂ ಕೊಡಿಸಿದ ॥ ಯಮಿಪುಂಗವಚ್ಯವನನಾಶ್ರಮವಿದೆನಲೀತ ।
ನಮರಭಿಷಜರ್ಗೆಂತುಕೊಡಿಸಿದಂ ಸುರತತಿಯೊ । ಳಮಮಖಹವಿಭಾಗಮಂ
ವಿವರಿಸೆಂಬುದುಂ ಸೌಮಿತ್ರಿಗಿಂತೆಂದನು ॥೭॥

ಸರಸಿಜಾಸನವಂಶಸಂಭವಂ ಭೃಗುವೆಂಬ । ಪರಮರ್ಷಿಯೊಂದು ದಿ
ನವೊಡಗೂಡಿ ಶಿಷ್ಯರಿಂ । ತರಲರಣಿಕುಶಸಮಿಧೆಗಳನಡವಿಗೈದೆ ದುರ್ಮನನೆಂ
ಬ ರಜನಿಚರನು ॥ ದುರುಳತನದಿಂ ಪ್ರವೇಶಿಸಿ ತದಾಶ್ರಮವನ । ಧ್ವರದಸಂ
ಭಾರವಂ ಪರಿಹರಿಸುತಿರುವಂ । ನಿರುಕಿಸದದೆಲ್ಲಿಯುಮಾಮುನಿಬಂಧು ತಾನೆಲ್ಲಿ
ತದ್ರಮಣಿಯೆಂದಾರ್ದನು ॥೮॥

ಕಡುಸುಗಿದು ಘೋರರಾಕ್ಷಸನಾರ್ಭಟಕ್ಕಮರ । ರಡಬಳಂತೋರೆಗ
ರ್ಭಿಣಿಯಾದ ತನ್ಮನಿಯು । ಮಡದಿಯಂ ಕಂಡೆತ್ತಿಕೊಂಡೊಯ್ದನಾಕೆಯಂ
ಬಲುಹಿಂದೆದುರುಳನವನು ॥ ನಡನಡುಗುತಬಲೆ ಹಾಪತಿಯೆ ಪೊರೆಯೆನ್ನ ।
ನೆಂದಡಿಗಡಿಗೆ ಮೊರೆಯಿಡುತ್ತಿರೆ ತನ್ಮಹಾಭಯದೆ । ಕೆಡೆದುದುಜ್ಜ್ವಲದಗ್ನಿ
ರೂಪದಿಂ ಗರ್ಭಮಾಸತಿಯುಬಸುರಿಂದಿಳೆಯೊಳು ॥೯॥

ಒಡನೆ ವಿಧಿಯೋಗದಿಂ ಪ್ರಂಶಿಸುವದೆಲವೆಲವೊ | ಫಡಫಡಾನಿಲ್ಲಿಲಾ ಸೋಂಕಿಮುನಿಸಾಧ್ವಿಯುಂ | ಪಡೆಯೆನೀಂ ಲೇಸನೀಕ್ಷಣಮುರಿದುಬೂದಿಯಾಗೆಂದು ಕಡುಕೋಪದಿಂದೆ || ನುಡಿವುದುಂ ಭಸ್ಮಾವಶೇಷನೆನಿಸಿದನವಂ | ಕಡುಮೋಹದಿಂದೆತ್ತಿಕೊಂಡಬಲೆ ಪಸುಳೆಯುಂ | ನಡೆತಂದಳಾಬಳಿಕಮೆಲ್ಲತ್ತಿಲ್ಲನಾಶ್ರಮಕೆ ನೀಡುಂಬಳಲ್ಕೆಯಾಂತು ||೧೦||

ವನದಿಂದೆ ಬಂದಾಮುನೀಂದ್ರನಾಬಳಿಕನಡೆ | ದನುವನಾಮೂಲಾಗ್ರದಿಂದರಿದು ತನ್ನಮಾ | ನಿನಿಯುನಾಖೂಳಂಗೆ ತೋರ್ದಗ್ನಿಪುರುಷಂಗೆ ಸರ್ವಾಶನಾಗೆನುತ್ತೆ || ಮುನಿಮುಶಾಪವನಿತ್ತನೊಡನೆಹುತವಾಹನತಿ | ವಿನಯದಿಂ ಬೇಡಿಕೊಳೆ ಶಾಂತಾತ್ಮನಾಗಿ ಮಾ | ವನನೆನಿಸಿಕೊಂಡು ನೀಂಸರ್ವಭಕ್ಷಕನಾಗಿರೆಂದನುಗ್ರಹಗೈದನು ||೧೧||

ತವಸಿಯಾ ಬಳಿಕ ಗರ್ಭಚ್ಯುತಿನಿಮಿತ್ತದಿಂ | ಚ್ಯವನನೆಂದೆನುತೆ ಸತಿಯೊಡಗೂಡಿನಾಮಕರ | ಣವನೊಲ್ದುಮಾಡಲಾತನುಜಂಗೆ ದಿನದಿನಕೆ ಸಿತಪಕ್ಷಚಂದ್ರನಂತೆ || ಚ್ಯವನನಭಿವೃದ್ಧಿಯುಂಪಡೆದು ಸುಜ್ಞಾನಮೈ | ಭವದಿಂದೆ ತಂದೆಗೆ ಸಮಾನನೆಂದಿನಿಸಿ ಯೋ | ಗವನುಪಕ್ರಮಿಸಿ ದುಶ್ಚರತಪಕೆ ಸಾರ್ದಂಪಯೋಷ್ಣೀನದೀತಟವನು ||೧೨||

ಚಲಿಸದೇಕಾಗ್ರಭಾವದೊಳಲ್ಲಿ ನಿಯಮದಿಂ | ಕುಳಿತು ಯೋಗಾಸನದೆ ತಡೆದುಸಿರನಮಲಕೇ | ವಲಸಚ್ಚಿದಭಿಯೋಗವುಂ ಪಡೆದು ಬಹುಕಾಲಮಾಚರಿಸುತಿರೆ ತಪವನು || ಬಳೆದುದಾತನಮೇಲೆ ಪುತ್ತದರ ಮೇಲೊಂದು | ಬೆಳೆದುದ್ದೈಮುತ್ತಮುಂದಂದು ಪುಲ್ಲೆಗಳದರೊ | ಳೆಳಸಿಮೈಯುದ್ದಿಕೊಂಡೈದುತಿರ್ದುವುಯೋಗಿವರನದೊಂದುಮನರಿಯನು ||೧೩||

ಇಂತಿರಲ್ಕಕುಟುಂಬನಾಗಿಶರ್ಯಾತಿಭೂ | ಕಾಂತನಲ್ಲಿಗೆಬಂದು ತೀರ್ಥಯಾತಾರ್ಥದಿಂ | ದಾಂತಗುರುಭಕ್ತಿನಿಯಮಂಗಳಂದಾವಿಮಲವಾಹಿನಿಯೊಳವಗಾಹಿಸಿ || ಸಂತಸಂಮಿಗೆ ದೇವದೇವಾರ್ಚನಂಗೈದು | ಸಂತರ್ಪಿಸಿದನಸಂಖ್ಯಾತಭೂಸುರರನ | ತ್ಯಂತವಿತರಣೆಯುಸತ್ಕಾರದಾನಂಗಳಂದವನದೇಂಸುಕೃತಾತ್ಮನೋ ||೧೪||

ಮುನಿಪಕೇಳಾಗಳಾ ಧರಣೀಂದ್ರಶೇಖರನ | ತನುಭವೆ ಸುಕನ್ಯೆ ಪರಿಪೂರ್ಣಲಾವಣ್ಯೆಯಾ | ವನದೊಳ್ವಿಲಾಸದಿಂತೊಡಗೂಡಿ ಸಖಿಯರಿಂದತ್ತಿತ್ತ ಸಂಚರಿಸುತೆ || ನನೆಯೇರಿದಾಮುತ್ತದೊಡನಿರ್ಪವಲ್ಮೀಕ | ವನೆ ನೋಡುತದರೊಳಗೆ ಕಂಡೊಂದು ತೇಜಮಂ | ಮಿನುಪವಸ್ತುವಿದಾವುದೆಂದಿರದೆ ಕೆದಕಿದಳದಂ ಸಲಾಕೆಯುಮೊನೆಯೊಳು ||೧೫||

ಸುರಿವುದೊಡನಲ್ಲಿ ಬಹುಲೋಹಿತಮದೇನೆಂಬೆ | ನರಗುವರಿಕಂಡದಂ ಕಡುಸುಗಿದಿದೇನಿದೇ | ನರಿಯದೇಗೈದೆನೋ ಕಾಣೆನಕಟೆಂದು ಬಿಸುಟಾಸಲಾಕೆಯನಲ್ಲಿಯೆ || ಗುರುಗಮ್ಮನಲ್ಲಿಂದೆ ಪಿಂದಿರುಗಿ ಬಂದಾರ್ಗ | ಮರುಹದದನುಸಿಕನಿರೆ ಭೂಕಂಪವಾಯ್ತು ಹಹ| ತರಣಿಮಂಡಲಕೆ ಕಟ್ಟಿದುದು ಪರಿವೇಷಮೊಗೆದುದು ನಭದೆ ಧೂಮಕೇತು ||೧೬||

ಧರಣಿಪಾಲನ ಮಹಾಗಜಗಳುಂ ಹಯಗಳುಂ | ಹರಣಮಂತೊರೆದುರುಳ್ದುವು ಬಹುಳವಾದಧನ | ಮರೆನಿಮಿಸದೊಳೆನಷ್ಟಮಾದುದದನಾನೃಪತಿ ಕಂಡಿದೇನೆಮಗೆಕೇಡು || ಅರರೆ ಮುನಿಜನಕೆಮ್ಮೊಳಾರಾದೊಡಂಕೇಡ | ನಿರದೊಡರ್ಚಿದರೆಹಾವಮಾಜಲಾಗದುಬೇಗ | ನರುಹಿರಕಟೇನಿದೇನೆಂದುಸುಗಿದೆಡೆಯೊಳಿರ್ಪೆಲ್ಲರಂ ಬೆಸಗೊಂಡನು ||೧೭||

ತಿಳಿದುದು ಪರಂಪರಾನುಕ್ರಮದೊಳಾಪುತ್ರಿ | ನೊಳಗೆ ನಿಜಸುತೆನಡಸಿದಾಚೇಷ್ಟೆಮೊದಲಿಂದೆ | ಬಳಿಕ ಕಡುದುಮ್ಮಾನಮಾಂತು ಶರ್ಯಾತಿನಿಜತನುಜೆಯೊಡನಾಪುತ್ರನ || ಬಳಿಗೆಬಂದಾಯೋಗಿಯುಂ ವಿನಯದಿಂಬೇಡಿ | ಕೊಳಲೊಡನವಂಬಹಿರ್ಮುಖನಾಗಿಕೋಪದಿಂ | ದೆಲರಾಯ ನಿನ್ನಮಗಳೆಸಗಿದಪರಾಧದಿಂ ನಿನಗಿಂತುಕೇಡಾಯ್ತೆನೆ ||೧೮||

ಆಲಿಸಿ ತಮುಕ್ತಿಯಂ ಶರ್ಯಾತಿ ಯೆಲೆಮುನಿಪ | ಬಾಲಚಾಪಲದಿನಿವಳೆಸಗಿದೀತಪ್ಪಂದ | ಯಾಳು ನೀನೀಷದಪಿಮನದಾರದೆನಗೆಕೇಡಾಗದಂತಿರೆಮನ್ನಿಸಿ || ಪಾಲಿಸುವುದಂಘ್ರಿದಾಸನನೆನ್ನನೆಂದು ನಿಜ | ಮೌಳಿಯಂ ಚಾಚಿತತ್ಪದದೊಳಡಿಗಡಿಗೆ ನಿಜ | ಬಾಲೆಯುಮನಂತುಪೊಡಮಡಿಸಿ ಗುರುವಿನಯದಿಂಕಯ್ಮುಗಿದು ಬೇಡಿಕೊಳಲು ||೧೯||

ಮುನಿನಾಥನೆಲೆಮಹಾರಾಜಕೇಳೈ ನಿನ್ನ | ತನುಜಾತೆಬಾಲಚೇಷ್ಟೆಯೊಳಿಂತುಟೆನ್ನನಂ | ಧನನಾಗಿಸಿದಳೆನ್ನು ಮೇಸರುತಿಹುದರುಣಾಂಬುಕಣ್ಗಳಿಂ ದರಿದುಮಿದನು || ನಿನಗರುಹದಿರ್ದಳೆವಳೆನ್ನಾವಳೆನ್ನನಂ | ಧನನೊಲ್ಪುವರಿಪಳುದ್ವಾಹಮಂಬಳಿಯಿಸಿದೊ | ಡೆನಗವಳನಿತ್ತು ನಿನಗಪ್ಪುದುಶುಭೋದಯಂ ತೊಲಗುವುದು ಕೇಡೆಂದನು ||೨೦||

ನಲವಾಂತವರ್ಕೆ ಪಡಿನಯಮಿಲ್ಲದೆಭೂಪ | ನೆಲೆಮುನಿಪ ನೀಂಪಿರಿಯನಂಧನಾದೊಡಮಿವಳ | ನೊಲಿದು ನಿನಗೀವೆನೆಂದಾಸುಗುಣಸಂಪನ್ನೆಯಂ ಸುಕನ್ಯೆಯನಸಂಗ || ನಳನನಾಭಪ್ರೀತಿಯಾಗಲೆಂದೊರೆದಿತ್ತು | ತಳರ್ದನೂರಿಗವಿಧಿಯು ಲಿಖಿತವದುತಪ್ಪುವುದೆ | ಬಳಿಕಳಿಯು ತನಗಸಂಭವಿಸಿರ್ದಪುಣ್ಯಗಳಾನೃಪತಿ ಸುಖಮಿರ್ದನು ||೨೧||

ಇತ್ತಲಾ ಯೋಗಿಪತ್ನೀಸಹಿತನಾಗಿ ಮುದ | ವೆತ್ತು ಬರಲಾಶ್ರಮಕೆ ಪತಿಯೆಪರದೇವತೆಯು | ನುತ್ತರಿದು ರಾಜಭೋಗವನೆಳಸದಾಶ್ರಮೋಚಿತ ಧರ್ಮಪದ್ಧತಿಯೊಳು || ತತ್ತಪೋವನಕಂದಮೂಲಂಗಳಂಭುಂಜಿ | ಸುತ್ತಂತು ನಾರಸೀರೆಯನುಟ್ಟು ಭಕ್ತಿಯುತ | ಚಿತ್ತೆಯಾಗುಪಚರಿಸುತಿರ್ದಳಾಮುನಿಪನಂ ಸುಕುಮಾರಿಯಾಕುಮಾರಿ ||೨೨||

ಜನಪಸುತೆತಾನೆಂದು ಮದವಹಂಕಾರವೊಂ | ದಿನಿಸಿಲ್ಲದೊನ್ಮೆಪತಿಗಜರಿದೊಡಮಿದಿರಾಂತು | ಮುನಿದು ತಾಂ ವಾದಿಸದೆ ಪರ್ಣಶಾಲೆಯುತನಗೆರಾಜಗೃಹವೆಂದು ತಿಳಿದು || ಮನದೊಳಳ್ಕನಿತಾದೊಡಂ ತನ್ನ ಪತಿಯಂಧ | ನೆನುತೆ ಕಡೆಗಣಿಸದರೆಗಳಿಗೆಯುಂ ಪತಿಯಡಿಯ | ಸನಿಹಮಂಬಿಡದೊಲ್ದುಪತಿಸೇವೆಗೈಯುತಾಮಾನಿನೀಮಣಿಯಿರ್ದಳು ||೨೩||

ಪತಿಯಾಜ್ಞೆಯಂಮೀರಿಚಲಿಸದತ್ತಿತ್ತಲಾ | ಸತಿಬಹುಶ್ರದ್ಧೆಯಿಂಮನೆಗೆಲಸಗಳನೊಡ | ರ್ಚುಗತೆಕುಟೀರವನೊಲ್ದು ಶುಚಿನಾಡಿಕೊಂಡಂತುಶುಚಿಯಾಗಿ ತಾನುಮಿರುತೆ || ಅತಿಥಿಗಳನಭ್ಯಾಗತರ್ಕಳಂ ಗುರುಗಳಂ | ವ್ರತಿಗಳಂ ಸತ್ಕರಿಸುತುರುತರದ ಭಕ್ತಿಯಿಂ | ಪತಿಮನವನನುಸರಿಸಿಕೊಂಡು ಬಾಧಿಳುತ್ತಿರ್ದಳಾಸಾಧ್ವಿಪತಿಗೃಹದೊಳು ||೨೪||

ತಾನೊಗೆದವಂಶಮಂ ತಾಂ ಸೇರ್ದವಂಶಮಂ । ತಾನಿರ್ದದೇಶಮಂ ನಿಜಬಂಧುವರ್ಗಮಂ । ಮಾನಿನೀಕುಲ ಮಾನ್ಯೆಯೆನಿಸಿದ ಸುಕನ್ಯೆ ಪರಿಶುದ್ಧಂಗಳೆಂದೆನಿಸುತೆ ॥ ದಾನವಾರಿಯಸಬ್ಧಿಕನ್ಯೆಯನುವರ್ತಿಪವೊ । ಲಾನಾಕಪತಿಯನಿಂದ್ರಾಣಿಯನುವರ್ತಿಪವೊ । ಲೇನೆಂಬೆನನುವರ್ತಿಸಿರ್ದಳುರುಭಕ್ತಿಯಿಂ ದಾಯೋಗಿಪುಂಗವನನು ॥೨೫॥

ಪತಿಸೇವೆಯೆಂಬಸದ್ವ್ರತಮನಾಚರಿಸುತಮಿ । ರತಮುಮವನಾಚರಿಪ ಸಕಲವ್ರತಂಗಳಂ । ಪ್ರಿತವಿನಯಭಕ್ತಿನಿಯಮಂಗಳಿಂದಾತನೊಡಗೂಡಿತಾಂ ನಡೆಯಿಸುತ್ತೆ ॥ ಪತಿಯೆಳಸದಿರ್ದಕಾರ್ಯಕೆ ತಾಂ ಪ್ರವರ್ತಿಸದೆ । ಪತಿಯಾಣ ವಿಸಿದಂತೆ ನಡೆಯುತ್ತೆ ಪತಿಗೈದೆ । ಹಿತೆಯಾಗಿ ಸಖಿಯಾಗಿ ಸಹಧರ್ಮಚರಿಯಾಗಿ ಬಂಧುವಾಗಿಯುಮಿರ್ದಳು ॥೨೬॥

ಈತೆರದೊಳಾಪತಿವ್ರತೆ ನೃಪತಿಸುತೆಸರ್ವ । ಭೂತಹಿತಮತಿಯಾಗಿ ಕಲ್ಯಾಣಗುಣೆಯಾಗಿ । ನೀತಿಜ್ಞೆಯೆನಿಸಿ ಧೀನಯನನೆಂದೆನಿಸಿದಾಯೋಗಿಯಂ ಸೇವಿಸುತಿರೆ ॥ ಐತಂದರೊಂದುದಿನವಶ್ವಿನೀಸುತರವರ । ನಾತಪಸ್ವಿನಿ ನೋಡಿದೊಡನೆ ಬೆಸಗೊಂಡು ಸಂ । ಪ್ರೀತಿಯಿಂ ಸ್ವಾಗತವನರ್ಘ್ಯಪಾದ್ಯಾದಿಗಳನಿತ್ತು ಸತ್ಕೃತಿಗೈದಳು ॥೨೭॥

ಇಂತು ಸಾಧ್ವೀಕುಲಶಿರೋಮಣಿ ಸುಕನ್ಯೆಯ । ತ್ಯಂತಸಂಪ್ರೀತಿಯಿಂ ದೆಸಗಿದಾಸತ್ಕಾರ । ದಿಂತುಷ್ಟರಾದಮರಪುರಭಿಷಜರೆಲೆಪತಿವ್ರತೆನಿನ್ನ ಸತ್ಕೃತಿಯೊಳು ॥ ಸಂತುಷ್ಟರಾದೆವಾಂಬೇಡುನೀಂ ವರವನೆನೆ । ಸಂತಸದೊಳಾಚದುರೆ ನೀವೊಲ್ದೊಡೆಲೆಮಹಿಮ । ವಂತರಿರಪರಿಹರಿಸಿರೆನ್ನ ಭರ್ತಾರನಂಧತೆಯನೆಂದರ್ಥಿಸಿದಳು ॥೨೮॥

ಆಮಹಾಸಾಧ್ವಿಯಾವಚನಮಂಕೇಳ್ದವರೆ । ಲೌಮಂಗಳಾಂಗಿ ಕೇಳ್ನಿನ್ನಪತಿಯಮಗೆ ಸು । ತ್ರಾಮಮುಪದಿ ವಿಷದರ್ಗೀವಂತೆಮಖಹವಿರ್ಭಾಗಮಂ ಕರುಣಿಸುವೊಡೆ ॥ ತಾವೊಲ್ದುಸಲಿಪೆವೀವರವನೆನಲಾಮುನಿಪ । ನೋವೆಂಬುದುಂ ಪಿರಿದುಸಂತಸಂಗೊಂಡವದಿ । ರಾಮುನಿಯನೊಡಗೊಂಡುತನ್ಮಹಾನದಿಯೊಳಪೊರ್ದುಮಡುವಿನೊಳದ್ದರು ॥೨೯॥

ಮೂವರವರಾ ಸಿದ್ಧ ಸೇವಿತಹೃದದಿಂದೆ । ಲಾವಣ್ಯಾಮಯರಾಗಿ ಯುವರಾಗಿ ಫುಲ್ಲರಾ । ಜೀವಲೋಚನರಾಗಿ ದಿವ್ಯಮಣಿಭೂಷಣವಿಭೂಷಿತಶರೀರರಾಗಿ ‖ ಭಾವಜಮನೋಜ್ಞರಾಗನ್ಯೋನ್ಯಸಮರೂಪ । ಭಾವರಾಗೆದ್ದು ಬರೆ ನೋಡಿ ವಿಸ್ಮಯಪಡು । ತ್ತಾ ವಧೂಮಣಿಯೆನ್ನ ಪತಿಯೆಲ್ಲಿ ಪೇಳಿರೆನಗೆಂದು ಸಂಪ್ರಾರ್ಥಿಸಿದಳು ‖ ೩೦ ‖

ಆ ಸತೀಮಣಿಯ ಪಾತಿವ್ರತ್ಯಕುರೆ ಮೆಚ್ಚಿ । ನಾಸತ್ಯರೊಡನಿರ್ದ ಭಾರ್ಗವಚ್ಯವನನಂ । ನೇಸರಂತಿರೆ ಭಾಸಮಾನನಂ ವಿಗಳಿತಜರಾವಸ್ಥನಂ ತೋರಲು ‖ ಆ ಸುದತಿ ನೋಡಿ ಪಿರಿದಾನಂದಮಂ ತಳೆಯೆ । ಲಾಸುಪರ್ವಾಗದಂಕಾರರೊಡನಮರಾಧಿ । ವಾಸಕ್ಕೆದಿದರೇರಿ ಪಾರುವಂ ಬೀಳ್ಕೊಂಡು ಭಾರ್ಗವನ ನತಿಮುದದೊಳು ‖೩೧‖

ಪರಮಯೋಗೀಂದ್ರ ಕೇಳಾಬಳಿಕ ಭಾರ್ಗವಂ । ನಿರುಕಿಸಿ ನಿರಂತರ ನಿಜಾಂಘ್ರಿಪರಿಚರಣೈಕ । ನಿರತೆಯಾಗ್ಯೆದೆ ತೇದೊಡಲಿಂ ಕಳಾಶೇಷಚಂದ್ರನಂತಿರ್ಪಸಿಯನು ‖ ಕರುಣಾಳು ಮನದೊಳುರೆ ಮರುಗುತೀ ಸತಿ ನಿನ್ನ । ಪರಿಚರಣಸುಚರಿತಾಚಾರವ್ರತಂಗಳಿಂ । ಪರಿತುಷ್ಟನಾದೆ ನಾನಿದರಿಂದೆಸಿದ್ಧಿನೀನಾದೆಯೆಲೆ ಮುಗುದೆ ಕೇಳು ‖೩೨‖

ಈವಿಧದೆ ನಿನ್ನ ಕೋಮಲತನುವನೆನಗಾಗಿ । ತೇವುದಿನ್ನುಚಿತವಲ್ಲ ಷ್ಟಾಂಗಯೋಗ ಪ್ರ । ಭಾವದಿಂದೆನಗಖಿಲಯಮಸಿದ್ಧಿಯಾಗಿರ್ಪುದೆಲೆ ಮಹಾರಾಜಪುತ್ರಿ ‖ ಆವಭೋಗವನೆಳಪೆಯೆನ್ನಿಂದೆ ಪೇಳದನ । ತೀವಸಂಪ್ರೀತಿಯಿಂ ನಿನಗೆ ದೊರೆಯಿಸುವೆನೆನ । ಲಾವಧೂಮಣಿ ಮುದಂಗೊಂಡು ತಲೆವಾಗಿ ನಾಣ್ಮಿಗೆ ಮೆಲ್ಲನಿಂತೆಂದಳು ‖೩೩‖

ನಿಮಗನುಗ್ರಾಹ್ಯೆನಾನೆನಿಸಿದೊಡೆ ದಿವ್ಯ ಸೌ । ಖ್ಯಮನಿಲ್ಲಿ ನಿಮ್ಮೊಡನೆ ಭೋಗಿಸಲ್ಕೆಳಪೆ ನೆನೆ । ಯಮಿವರ್ಯನೆಲೆ ಸಾಧ್ವಿಯಂತಕ್ಕುಮೆಂದು ನುಡಿದೊಚ್ಚಣಂ ಜಾನಿಸಲ್ಕೆ ‖ ಅಮಮ ವಿವಿಧೋಪಭೋಗ್ಯಾರ್ಥಂಗಳಿಂ ಕೂಡಿ । ನಿಮಿಷದೊಳಗೇನೆಂಬೆನದ್ಭುತವನಾಮಹಾ । ಶ್ರಮವತಿವಿಶಾಲಸುಂದರದಿವ್ಯಭವನಮಾದುದುತಪೋಮಹಿಮೆ ಪಿರಿದು ‖೩೪‖

ರಾಜತಮಹಾರಜತಮಯ ಭಾಸುರಸ್ತಂಭ | ರಾಜಿಯಿಂ ಮಣಿಮಯ ದ್ವಾರಸ್ಥಲಂಗಳಿಂ | ರಾಜಹಂಸಾವಳಿಲತಾಚಿತ್ರತಾಸ್ತರಣ ಲಸದಧೋಭಾಗ ದಿಂದೆ || ರಾಜದಮ್ಲಾನ ಸುಮಮಾಲಿಕಾರಚನಾವಿ | ರಾಜಿತವಿತಾನಕಲಿತೋರ್ಧ್ವಭಾಗದಿನಮರ | ರಾಜಭವನಂಬೊಲಾಭವನಮೇನೊಪ್ಪಿದುದೊ ಬಹು ಸಂಪದಾಢ್ಯಮಾಗಿ ||೨೫||

ಅರಸಂಚೆಮರಿಗಳೋಲಾಡುತಿಹ ತಿಳಿನೀರ | ಸರಗಳಿಂ ಕಾಯ್ವಣ್ಗಳಿಡಿದ ಮರಗಿಡುಗಳಿಂ | ದರಲಾಂತು ಕಂಗೊಳಿಪಬಳ್ಳಿ ಮಂಟಪಗಳಿಂ ನೆಗಳ್ದ ಲೀಲಾದ್ರಿಯಿಂದೆ || ಬರೆಪೀರಿಪ್ಪೂಬಂಡನುರೆ ಸೊಕ್ಕಿ ಝೇಂಕರಿಪ | ಮರಿದುಂಬಿಗಡಣದಿಂ ನುಣ್ಚಸಲೆಯಿಂದಂತು | ಸುರಭಿಶೀತಳಮಂದಪವನನಿಂದೊಪ್ಪುವೊಂದುದ್ಯಾನಮಲ್ಲಿರ್ದುದು || ೨೬ ||

ಸೊಗಯಿಸುವರನ್ನಗನ್ನಡಿಗಳಿಂ ಕನಕಪೀ | ಠಗಳಿಂ ವಿಚಿತ್ರತರ ನವಹಂಸತೂಲ ತ | ಲ್ಪಗಳಿಂದನೇಕ ಮಣಿಮಂಚಂಗಳಿಂ ವಿವಿಧ ಚಿತ್ರಾಸನಂಗಳಿಂದೆ || ಬಗೆಬಗೆಯ ಹೈಮರಾಜತಭಾಜನಂಗಳಿಂ | ದಗಣಿತಮಹಾಧನಾಂಶುಕಭೂಷಣಂಗಳಿಂ | ಸೊಗದಕಣಿಯೆನಿಸಿತಿನ್ನುಂ ಪಲವು ಭೋಗ್ಯವಸ್ತುಗಳನದು ಯುಕ್ತಮಾಗಿ ||೨೭||

ಧರಣಿತಲಕಿಳಿತಂದ ಬೇರೊಂದು ಸಗ್ಗದಂ | ತಿರೆವೊಲತಿರಮಣೀಯಮೆನಿಸಿದಾ ಭವನಮಂ | ನಿರುಕಿಸುತ್ತಾ ತಪೋಮಹಿಮೆಗಚ್ಚರಿವಟ್ಟುನಿಜಕಾಮಿನಿಯನೀಕ್ಷಿಸಿ || ಅರಸಿನೋಡೆಮ್ಮಸುಖಭೋಗಕ್ಕೆ ಸಂಕಲ್ಪ | ಪರಿಕಲ್ಪಿತಂ ದಿವ್ಯಭವನಮಿದು ಸಕಲೇಷ್ಟ | ಕರಮಾದುದೀಸರದೆ ಮಿಂದುಬಾ ತಿಳಿವುದಾ ಬಳಿಕ ನಿನಗಿದರಮಹಿಮೆ ||೨೮||

ಮಂದಸ್ಮಿತಸ್ಮೇರವದನಾಬ್ಜೆಯಾಗಿ ನಾ | ಣಿಂದೆತಲೆವಾಗಿ ಕಲಹಂಸಿಕಾಗಮನೆ ನಡೆ | ತಂದೊಡನೆಮೆಲ್ಲಮೆಲ್ಲನಮಲಸೋಪಾನಪದ್ಧತಿಯೊಳಿಳಿದಾ ಸರದೊಳು || ಮಿಂದೊಮ್ಮೆ ಮೇಲುದಂನೇರ್ಪಡಿಸಿಕೊಂಡು ಕಚ | ಬೃಂದಮಂ ನಳತೋಳ್ಗಳೆತ್ತಿಗಂಟಿಕ್ಕುತ್ತೆ | ಕಂದೆರೆದು ಕಂಡಳಾಸರದತೀರದೊಳನೇಕಾಪ್ಸರಃಕನ್ಯೆಯರನು ||೨೯||

ಎಂದರೊಡನವರೆಲೆ ಮಹಾಭಾಗೆಯಿಲ್ಲಿಗೈ | ತಂದಿರ್ಪೆವಾಂ ನಿನ್ನ ಸೇವೆಗೆಂದತಿವಿನಯ | ದಿಂದಪಂಕೇಳ್ದು ಶರದಿಂದುಮುಖಿ ವಿಸ್ಮಯಂಗೊಳಲವರೊಳೂರ್ವಸುದತಿ || ತಂದಿತ್ತಳೊಡನೊಲ್ದು ಗಾತ್ರಾನುಲೇಪನ ಸು | ಗಂಧಮಂಗಳವಸ್ತುಗಳನವಂಕೊಂಡು ಸತಿ | ಮಿಂದುಬರೆ ಮೇಲೆ ಮತ್ತೊರ್ವವಿಮಲಾಂಗಿನವಪಟ್ಯಾಂಶುಕಮನಿತ್ತಳು ||೪೦||

ಆರಿಸಿ ಬಳಿಕ್ಕವದಿರಳಿಕುಂತಳೆಯಚಿಕುರ | ಭಾರವಂ ಧೂಪಸಂಸ್ಕಾರದಿಂ ನಿಡುಜಡೆಯ | ನಾಚರಿಸಿ ಪೂಮುಡಿಸಿ ಚಂದ್ರವದನೆಯ ಪಣೆಗೆ ಕತ್ತುರಿಯ ಬೊಟ್ಟನಿಟ್ಟು || ಸಾರತರಸೌಂದರ್ಯಭೂಷಿತೆಯನಿರದೆ ಮಣಿ | ಹಾರಕುಂಡಲವಲಯಮುಖ್ಯ ಭೂಷಣಗಳಿಂ | ಪೇರಳ್ತಯಾಂತು ಸಿಂಗರಿಸಲವಳಂಗಜನಮಸೆದಸಿಯಪೋಲೆಸೆದಳು ||೪೧||

ಇಂತಲಂಕೃತೆಯಾದ ರಮಣಿಯಂ ಮುನಿಪನ | ತ್ಯಂತಸಂಪ್ರೀತಿಯಿಂ ನೋಡಿ ಸುರಕನ್ಯಾಜ | ನಂತಳೆದ ವಿನಯದಿಂದುಪಚರಿಸುತಿತ್ತ ದಿವ್ಯಾಂಬರಾಭರಣಗಳನು || ಆಂತಮೃತಸಾರತರ ಭಕ್ಷ್ಯಭೋಜ್ಯಂಗಳಂ | ಸಂತಸದೊಳನಿಯಳೊಡನಾಹರಿಸಿ ರಾಜೇಂದ್ರ | ನಂತೆಸೆದನವರಿರ್ವರತಿಶಯಿತಸುಖಭೋಗವೈಖರಿಯನೇನೆಂಬೆನು ||೪೨||

ಕಾದಲರ್ಗಳವರಿಂತು ವೈಭವದೆ ಸುಖಿಸುತಿರೆ | ಕಾದರದೊಳೋಲಗಿಸುತಿರಲಪ್ಸರಃಕನ್ಯ | ಕಾಶತಶತಂಕುಳಿರ್ತೆಳಸಿದಂತೆಡೆಸಂದಕಾಮಗವಿಮಾನದೊಳಗೆ || ಮಾದನುಜರಿಪುಗಳಂತೆಸೆಯುತ್ತೆ ರಮಣೀಯ | ಮಾದಮಾನಸಪುಷ್ಪಭದ್ರನಂದನಗಂಧ | ಮಾದನದ್ರೋಣಿ ಚೈತ್ರರಥಾದಿ ದಿವ್ಯಸ್ಥಲಂಗಳೊಳ್ವಿಹರಿಸಿದರು ||೪೩||

ಚರಿಸುತಂಬರದೊಳಾ ಯೋಗೀಂದ್ರನಿನಿಯಳ್ಗೆ | ಧರಣಿಚಕ್ರವನೊಲ್ದುತೋರಿಸುತೆ ನೋಡು ನೋ | ಡರಸಿಮೇಲಿರ್ಪವಮ್ಮದಿಟ್ಟಗಾ ತುಹಿನಾದ್ರಿಮೊದಲಾದ ಪರ್ವತಗಳು || ಸರಿಸರಿಸಮಿರ್ಪ ಕಿರಿಕಿರಿದುಮಣ್ಣುಪ್ಪೆಗಳ ತೆರದಿಂದೆ ಕಾಣುತಿಹುವಾಗಂಗೆಮೊದಲಾದ | ತೊರೆಗಳಂ ಕೊಂಕಿದೊಂದೊಂದು ಕುರುಗೆರೆಗಳಂತಿರೆ ತೋರ್ಪುವೇನೆಂಬೆನು ||೪೪||

ಅಡವಿಗಳ್ ಸಲೆಗಳ ಚಂದದಿಂ ತೋರುವುವು । ಕಡಲಿನನ ಕಿರಣಂಗಳಿಂ
ದೆಥಳಥಳಿಸಿ ಕ । ನ್ನಡಿಯಂತೆಪೊಳೆದಪುದು ಮತ್ತೆ ನೋಡ ಊರ್ಗಳುಂ ನಾಳ್ಗ
ಳುಂ ಕಾಣದಿಹುವು ॥ ಪೊಡವಿಗೋಳಾಕೃತಿಯೊಳಿರ್ದಪುದು ಮತ್ತೆ ನೋ । ಡು
ಡುಗಳೆತ್ತೆತ್ತಲುಂ ಮುತ್ತಿಹುವು ನೋಡಿತ್ತ । ಮಡದಿಮಣಿ ಶಶಿಮಂಡಲವನ
ತ್ತ ರವಿಮಂಡಲವನೆಂದು ನಿರವಿಸಿದನು ॥೪೫॥

ಸುರಪಥದೆ ಪೌಲೋಮಿಯೊಡಗೂಡಿದಿಂದ್ರನಂ । ತಿರೆವೊಲಾಚ್ಯವನ
ನರಗುವರಿಯೊಡನಾಕಾಮ । ಚರವಿಮಾನದೊಳಂತು ನಡುನಡುವೆ ಗಂಧರ್ವ
ಕುಲಗಾನಮಂ ಕೇಳುತೆ ॥ ಚರಿಸುತಲ್ಲಲ್ಲಿ ಸುರಲೋಕನುತನಿಜತಪೋ । ಗರಿ
ಮನಾಗಾಯಾಸ್ಥಲಂಗಳೊಳ್ವಿಹರಿಸು । ತ್ತರೆಗಳಿಗಯಂತೆ ಶತಸಂವತ್ಸರಂಗ
ಳಂ ನೂಕಿದನದೇಂ ಸುಕೃತಿಯೋ ॥೪೬॥

ಬಳಿಕ ತಿಳಿದೆಚ್ಚತ್ತು ಬಹುಕಾಲ ಕೃತತಪಃ । ಫಳಮಿಂತುಕಟಕಟಾ
ವಿಷಯಾನುಭವದಿಂದೆ । ಕಳೆದುದೆಂದಾಮಹಾಮುನಿ ಪಿರಿದುಚಿಂತಿಸುತೆಮರಳಿ
ಬಂದಾಶ್ರಮಕ್ಕೆ ॥ ತಳರೆ ಸುರಲೋಕಕಾಮಾರು ಮರೆಗೊಳ್ ನಿಮಿಷ । ದೊಳ್
ದಿವ್ಯಭವನಮದು ಸತಿಯೊಡನೆ ಮೊದಲಂತೆ । ತಳೆದು ಸೇಮವನಾಪಯೋ
ಷ್ಣೀನದೀತಟದೆ ಚರಿಸುತಿರ್ದಂ ತಪವನು ॥೪೭॥

ಇರಲಿಂತುಪಕ್ರಮಿಸಿ ಯಾಗಕ್ಕೆ ಶರ್ಯಾತಿ । ಧರಣಿಪತಿ ಮಗಳಳಿಯ
ರಂಕರೆಯಲಟ್ಟಿದಂ । ಚರರನಾಪುಣ್ಯಾಶ್ರಮಕ್ಕವರ ನುಡಿಯನಾಲಿಸಿ ಮುನಿ
ಪ್ರವರನೊಡನೆ ॥ ಪಿರಿದುಕೌತುಕದಿಂದಮೊಡಗೊಂಡು ಸಹಧರ್ಮ । ಚರಿ
ಯಂ ಸುಕನ್ಯೆಯಂ ಶಿಷ್ಯಪರಿವೃತನಾಗಿ । ಪರಿತಂದುಮತದಾಜಧಾನಿಗಾಧರ
ಣೀಂದ್ರ ಮೌಳಿಮಣಿಯಂ ಕಂಡನು ॥ ೪೮ ॥

ಮುನಿಮಾತ್ರನೆಂದು ತನ್ನಂ ನಿಪನಂಸತ್ಕರಿಸಿ । ಜನಪನಾಬಳಿಕ ತನಗೆ
ಭಿವಂದನಂಗೈದ । ತನುಜೆಯಂಸರಸಿನಾತಿಪ್ರೀತಮನದಿಸಂಭವತ್ಸೆ ಪೇಳೆಂಥ
ನಾದ ॥ ಮುನಿಪುಂಗವಂಚ್ಯವನನೆಲ್ಲಿ ಸುಂದರರೂಪ । ನೆನಿಸಿದಿಪನಾರದೇಕಿವ
ನೊಡನೆ ಬಂದನೀ । ನನಘಸಾಧ್ವೀವ್ರತಮನುಳಿದೆಯೋನೆಂದು ಸಂಶಯಿಸುತ್ತೆ
ಮುನಿದೆಂದನು ॥ ೪೯ ॥

ಆಸತೀಮಣಿ ತಂದೆನುಡಿದುದಂ ಕೇಳ್ದುದರ | ಹಾಸವಿಲಸಿತಚಾರುವದ
ನೇಂದುವಾಗಿನಡೆ | ದಾಸಕಲವೃತ್ತಾಂತವಂ ವಿನಯಭಾರದಿಂತಲೆವಾಗಿಬಿನ್ನೈ
ವಿಸಲು || ಓಸರಿಸೆಮುನಿದಸಂಶಯಮಾನರೇಂದ್ರನು | ಲ್ಲಾಸವಿಸ್ಮಯವಿಲಕ್ಷ
ಣಮನೋವೃತ್ತಿಯಾ | ಗಾಸುತಾಜಾಮಾತೃಗಳನಾದರಿಸಿದ ನತಿಮಾನಸತ್ಕಾ
ರದಿಂದೆ || ೫೦ ||

ತರುವಾಯೊಳಾಧರಣಿಪತಿ ಯಥಾವಿಧಿಯೊಳ | ಧ್ವರವನಾರಂಭಿಸೆ ವಿ
ಮರ್ಶಿಸಿಸದಸ್ಸಿನೊ | ಳ್ವರಮರ್ಷಿ ಭೃಗುಜಾತನಾಮುಖದೊಳಮರಭಿಷಜರ್ಗೆ
ಘಂಟಾಘೋಷದೆ || ಸುರಪಙ್ಕ್ತಿಯೊಳ್ಹವಿರ್ಭಾಗವುಮಂನೀಡಿಸಿದ | ನುರೆಮುಳಿದು
ವಜ್ರಿಯೊಡನಾತನಂನಿಗ್ರಹಿಸ | ಲುರುವಜ್ರಮಾಂತುಬಂದಲ್ಲಿಗಾಮುನಿಯನು
ರವಣಿಸಿ ನೋಡುತ್ತಿರ್ದನು || ೫೧ ||

ಏನಿದೇನನ್ಯಾಯಮೆಲೆ ತಾಪಸಬ್ರುವನೆ | ನೀನೆಂತಪಙ್ಕ್ತಿಪಾವನರನಾ
ಗಿಸಿದೆ ಪೇ | ಳೀನಾಕಭಿಷಜರಂ ಪಙ್ಕ್ತಿಪಾವನರನತಿಗರ್ವಿಷ್ಠನಹನಿನ್ನನು ||
ತಾನಿದಕೊ ಶಿಕ್ಷಿಸುವೆನೆಂದತಿಕ್ರೋಧದಿಂ | ದಾನಿಶಿತವಜ್ರಾಯುಧವನೆತ್ತಲಾ
ಕ್ಷಣಮೆ | ಮೌನಿಪುಂಗವನವನಬಾಹುವಂ ಸ್ತಂಭಿಸಿದನೊಂದೆಹುಂಕಾರ
ದಿಂದೆ || ೫೨ ||

ಬಳಿಕಗಿದುತತ್ಪೋಬಲಕಿಂದ್ರನಾತನಂ | ತಿಳುಪಿ ವಿವಿಧಸ್ತುತಿಗಳಿಂ
ದಶ್ವಿಗಳ್ಗೊಪ್ಪಿ | ಕೊಳೆ ಹವಿರ್ಭಾಗವಂಬಿಡಿಸಿದಂ ತದ್ಭುಜಸ್ತಂಭವುಂಮು
ನಿಪನೊಲ್ದು || ಬಳೆಯಿಸಿಮಹಾವಿಭವದಿಂ ಮಖನನಾಭೂಪ | ತಿಳಕನತಿವಿ
ತರಣೆಯು ದಕ್ಷಿಣಾಸತ್ಕಾರ | ಗಳನಖಿಲವರ್ಣವಂತಣಿಯಿಸಿ ಮಹೋತ್ಸವ
ದೊಳಾಗಿಸಿದನವಭೃಥವನು || ೫೩ ||

ಈರೀತಿಯಿಂಪ್ರಾಪ್ತಮಾಯಶ್ವಿಗಳ್ಗಬ್ಬಂ | ದಾರಕರಪಙ್ಕ್ತಿಯೊಳ್ಮ
ಖ ಹವಿರ್ಭಾಗವಮಾ | ಧೀರಮುನಿಯಿಂದೆ ಕೇಳೀ ಸುಕನ್ಯಾಚರಿತೆಪ್ರಖ್ಯಾತವು
ವಾದುದೆನಲು || ಆರಘುಜನತಿಹರ್ಷದಿಂದಾಶ್ರಮಕೆ ಬಾಧೆ | ಬಾರದವೊಲುಳಿ
ದು ಬಲಮೆಲ್ಲನುಂ ಪ್ರಮಿತಪರಿ | ವಾರದೊಡಗೂಡಿಪ್ರಾಕ್ಕಾನುಶಾಶ್ರಮವ
ನಾಮುನಿನಾಥನಂಕಂಡನು || ೫೪ ||

ಸಾಷ್ಟಾಂಗವಾಗೊಡನೆ ವಿನಯದಿಂದೆರಗುವುದು | ಮಷ್ಟಾಂಗಯೋಗಪರಿನಿಷ್ಠನಾ ಮೌನಿಸಂ | ತುಷ್ಟಾಂತರಂಗನಾಗಾದರಿಸಿ ಪರಸಿ ಪಾವನಕುಶಾಸ್ತರಣವಿತ್ತು ‖ ಇಷ್ಟಾನುಸಾರದಿಂದಾತಿಥ್ಯಮಂಗೈದು | ದುಷ್ಟಾಟಶರರ್ಕಳಂನಿಗ್ರಹಿಸಿ ರಾಘವಂ | ಶಿಷ್ಟಾಭಿರಕ್ಷಣಂಗೈಯುತಿರ್ಪನೆ ಸುಖದೊಳಿಂದೊಲ್ದುಬೆಸಗೊಳಲ್ಕೆ ‖೫೫‖

ಭವದನುಗ್ರಹಪಾತ್ರನಗ್ರಜಂಕ್ಷೇಮದಿಂ | ದವನಿಯಂಪಾಲಿಸುತ್ತಿಳಸಿರ್ಪನಶ್ವಮೇ | ಧವನಖಿಲದುರಿತಾಪಹರವನೆಸಗಲ್ಕೆ ಸರಯೂತಟದೊಳಲ್ಲಿಗೊಲ್ದು ‖ ದಿವಿಜೇಂದ್ರವಂದ್ಯನೀಂಬರವೇಳ್ಕುಮೆಂದುರಾ | ಘವನೊಡನೆಬೇಡಿಕೊಳಲಾತವಸಿ ಯುಕ್ತಮಿದು | ರವಿವಂಶವರಸರ್ಗನುತ್ತಮುದವೆತ್ತು ಕೊಂಡಾಡಿ ಮಗುಳಿಂತೆಂದನು ‖೫೬‖

ರಾಮನಾಮಸ್ಮರಣೆಯಿಂದುರಿತಕೋಟಿ ನಿ | ರ್ನಾಮವಾಗುವುದೆನಲ್ಸಚ್ಚಿದಾನಂದಮಯ | ನಾಮಮಹಾತ್ಮ್ಯಸಪಾಪಪರಿಹಾರಕೋಸುಗಂ ತುರಗಮೇಧಂಗೈವುದು ‖ ಧಾಮನಿಧಿ ಕತ್ತ್ರಯನಳಸಲ್ಕೆ ದೀಪವಂ | ಕಾಮಿಸುವತೆರನಲಾ ಲೋಕರಂಜನೆಗಾತ್ರಿ | ಧಾಮನೆಸಗುವಮಹಾಧ್ವರಕೆಬರಲುತ್ಸುಕಿತರಾಗಿರ್ಪೆವಾವೆಂದನು ‖೫೭‖

ಆವಚನಮಂಕೇಳ್ದು ಮುದಮಾಂತು ಮುನಿಪನಡಿ | ದಾವರೆಗೆಮಗುಳೆರಗಿ ಹರಕೆಯಂನೆರೆನಮ್ರ | ಭಾವದಿಂ ಕಯ್ಕೊಂಡಯೋಧ್ಯಾಪುರಿಗೆಶಿಷ್ಯರೊಡನಾತನೈದಿದೊಡನೆ ‖ ಪಾವನಪಯೋಷ್ಣೀನದೀತೀರದೊಳ್ಭೂಮಿ | ದೇವರ್ಗನಲಿದಿತ್ತು ಧನಕನಕವಸ್ತ್ರಗಳ | ನಾವೀರನಲ್ಲಿಂದೆಪೊರಮಟ್ಟನಾಕುದುರೆಮುಂಬರಿಯೆ ಸೇನೆಸಹಿತ ‖೫೮‖

ಕೇಳೈಮುನಿಕುಲಶಿರೋಮಣಿಯೆ ಮುಂದೆನಾ | ಲ್ದ್ವೀಳನೆನಿಪಾವಿಷ್ಣುತಾನೊಲ್ದು ನೆಲೆಸಿರ್ಪ | ನೀಲಾಖ್ಯಭೂಮೀಧರಂವೈಷ್ಣವಪ್ರಕರಬಂಧುರಂ ಕಣ್ಗೆಸೆದುದು ‖ ಕಾಲಾಂಬುವಾಹನಿಕುರುಂಬಸಚ್ಛಾಯರುಚಿ | ಜಾಲದಿಂದಭಿಜಾತಮಣಿಕಲಾಪದೆಸಮು | ನ್ಮೀಲಿತೋದಗ್ರಸುಮಪರಿಮಳದಿನಿಳೆವೆಣ್ಣ ತುರುಬೆಂಬವೋಲೊಪ್ಪುತೆ ‖೫೯‖

ಸುರಸರಿದಭಂಗುರತರಂಗಶೀಕರನಿಕರ | ಪರಿಪಾತದಿಂತಣ್ಪುವೆತ್ತಾ ಮಹಾಮಹೀ | ಧರಸಮುತ್ತುಂಗತರಶಿಖರದೊಳ್ವಾಸಿಪ ಜನರ್ತಟಪ್ರಾಂತ ದೊಳಗೆ || ನಿರುಕಿಸುತ್ತಂದಂದು ನೀಲಮೇಘಂಗಳಾ | ವರಣಮುಂ ಪೊಳೆ ಪೊಳೆವ ಮಿಂಚುಗಳಘಾಳಮುಂ | ಸುರಪಕೋದಂಡಪ್ರಸಾರಮುಮನಲ್ಲಿ ಮಳೆ ಬಂದುದೆಂದನುವಿಸುವರು ||೬೦||

ಅಲ್ಲಲ್ಲಿ ಮೆರೆವತಾವರೆಗಳಂ ಕೆರೆಗಳಂ | ದಲ್ಲಲ್ಲಿತಳ್ತಫಲಭರಗಳಿಂಮ ರಗಳಂ | ದಲ್ಲಲ್ಲಿರಂಜಿಸುವ ಮಣಿಗಳಂ ಗಣಿಗಳಂ ಪಲವುಮೆಲೆವನೆಗಳಂದೆ || ಅಲ್ಲಲ್ಲಿ ನಲಿಯುತಿಹ ಮೃಗಗಳಂ ಖಗಗಳಂ | ದಲ್ಲಲ್ಲಿ ಪರಿವನಿರ್ಝರಿಗ ಳಂದರಿಗಳಂ | ದಲ್ಲಲ್ಲಸಂಶ್ರಿತಬ್ರುಸಿಗಳಂ ರಿಸಿಗಳಂ ತಾನದೇಂ ಶೋಭಿಸಿ ದುದೋ ||೬೧||

ಘನನೀಲಕಾಂತಿ ವನಮಾಲಿಕಾಲಂಕೃತಂ | ಕನಕವಾಸೋಜ್ವಲನ್ಮೂ ರ್ತಿ ಪಾದಾಂತಸಂ | ಜನಿತಾನಿಮಿಷಕಾಂತ ನಿರ್ಝರಿಣೀಶುಭಾಸ್ವದುಪಲಸ ಜ್ಜ್ಯೋತಿರ್ಯುತಂ || ವಿನುತಕಮಲಾಕರಾಂಚಿತಪದೋದ್ಭಾಸಿಮುನಿ | ಜನಸಂಪ್ರೀತಂ ಧೃತಮಹಾನರಸಿಂಹಮುಖ | ತನುಧಾರಿನಿರುಪಮಪ್ರಹ್ಲಾ ದಪೋಷಕಂ ಪೋಲ್ದುದಾಗಿರಿಹರಿಯನು ||೬೨||

ಆಮಹಾಶೈಲದ ತಟಂಗಳೊಳ್ನಯನಾಭಿ | ರಾಮಘನವನಗಳಾವನಗ ಳೊಳ್ಪರಿವಡೆದ | ಭೂಮಿರುಹಂಗಳಾಭೂಮಿರುಹಂಗಳೊಳ್ನೆರೆಪಬ್ಬಿಪಲ್ಲ ವಿಸಿದ || ಕೋಮಲಗಳಹ ಲತೆಗಳಾಲತೆಗಳೊಳ್ಕಂಜು | ಳಾಮೋದಭರದಿಂದೆ ತುಂಬಿರ್ಪಬಿರಿಮುಗುಳ್ಗ | ಳಾಮುಗುಳ್ಗಳೊಳ್ಮದಾಳಿಗಳಾಮದಾಳಿಗಳೊಳೊ ಪ್ಪಿದುವುಝುಂಕೃತಿಗಳು ||೬೩||

ವಾರಾಶಿಯಂತೆ ರತ್ನಾಕರಂ ಬಹುಸಿಂಧು | ರಾರಾಜಿತಂ ವ್ಯಾಕರಣಶಾ ಸ್ತ್ರದಂತೆ ನಾ | ನಾರೂಪಧಾತುಗಣವೃತ್ತಿಪರಿಶೋಭಿತಂ ವ್ಯುತ್ಪನ್ನಶಬ್ದಬ ಹುಳಂ || ಸಾರತರ್ಕದವೊಲುರೆಬಹುಲೋಹಸಂಭವಂ | ಮೇರುವಂತಮಲಾ ಪ್ಸರಃಪದಮನೋಹರಂ | ಗೌರೀಶನಂತಿರೆ ಗಿರೀಶಂಗುಹಾನ್ವಿತಂ ತಾನೆನಿಸಿಮೆ ರೆದುದಮಮಾ ||೬೪||

ಮೇರುಸಚ್ಛಾಯಾತಿಶಯಯುತಮೆನಿಸಿಯುಂನ | ಮೇರುಸಚ್ಛಾಯಾತಿಶಯಸಂಯುತಂಸನ್ಮ | ನೋರಮಮೃಣಾಳಜಾತಾಕರಮೆನಿಸಿಯುಮಮೃಣಾಳಜಾತಾಕರಮದು || ಧಾರಿಣೀಧರಮದಗಕುಲಕಾಂತಮೆನೆಯುಂವಿ | ಚಾರಿಸೆ ನಾಗಕುಲಕಾಂತಂ ಪ್ರಪಾತಲಸಿ | ತೋರುತರಶಿಲಮೆನಿಸಿದೊಡಮಪ್ರಪಾತಲಸಿತೋರುಶಿಲಮಾಗಿರ್ದುದು ||೬೫||

ಮುನಿಪಕೇಳ್ತತ್ತಲುಂ ಚತುರ್ಭುಜಜನಪದ | ವನರುಹದದರ್ಶನಕ್ಕೈತಹ ತದೀಯಮಪಾ | ವನನಾಮಸಂಕೀರ್ತನಂಗೈವ ತತ್ಪುಣ್ಯಚರಿತಮಂ ಕೊಂಡಾಡುವ || ಮನದೊಳಗೆ ತಚ್ಚರಣರಾಜೀವಯುಗಳಮಂ | ನೆನೆವ ಚಿದ್ಯೋಗದಿಂಕೊನೆಗೆ ತತ್ಸಾರೂಪ್ಯ | ವನೆಪಡೆವ ಮಹನೀಯರಿಂದೆಸೆವುದೆಣಿಸೆ ವೈಕುಂಠಮೆನೆ ಸಂದೇಹಮೇ ||೬೬||

ಆಗಿರಿಯೊಳಲ್ಲಲ್ಲಿ ಬಂಧನಕ್ಲೇಶಮಂ | ನೀಗಿದುಷ್ಟಾರಿಷಡ್ವರ್ಗಮಂ ಕಡೆಗಣ್ಚಿ | ವೇಗಶಾಲಿಯಚಿತ್ತವೃತ್ತಿಯನಿರೋಧಿಸಿ ಸಮಾಧಿಪಥನಿಷ್ಠರಾಗಿ|| ಯೋಗಪರಿಣತಿಯೊಳಾತ್ಮಾನ್ಯಥಾಮತಿಪರಿ | ತ್ಯಾಗದಿಂದೀಶ್ವರಾನುಗ್ರಹದೆ ಸಚ್ಚಿದಭಿ | ಯೋಗದಿಂದಾನಂದಮಯರಪ್ಪಪಲಬರ್ಮಹಾ ಯೋಗಿಜನರೆಸೆದರು ||೬೭||

ಆಲಿಸೆಲೆಮುನಿಕುಲಶಿರೋಮಣಿಯೆ ತನ್ಮಹಾ | ಶೈಲದೊಳ್ಕೆಲಸಿಹಚತುರ್ಭುಜಶ್ರೀಹರಿಯ | ಲೀಲಾವಿಭೂತಿಯಂ ಸುಮತಿಮುಖದಿಂದೆ ಕೇಳುತೆ ಶತ್ರುಹಂತಾರನು || ಮೇಲೆನಿಪತನ್ಮನೋಹರತೆಯಂಕುತುಕದಿಂ | ದಾಲೋಕಿಸುತ್ತೆಬರುತಿರಲದರತಪ್ಪಲವಿ | ಶಾಲವನವಾಲೆಯೊಳ್ನಡೆತಂದುದಾಮಹಾಧ್ವರವಾಜಿ ಮುಂದೆಮುಂದೆ ||೬೮||

ಅನುಸರಿಸಿಕೊಂಡದಂ ಲಕ್ಷ್ಮಣಾನುಜಭರತ | ತನುಜಾತ ಲಕ್ಷ್ಮೀನಿಧಿ ಪ್ರತಾಪಾಗ್ರಮುಖ | ರೆನಿಪರಥಿಕಾಗ್ರೇಸರರ್ಧನುರ್ಧರರಾಗಿ ಬರುತಿರಲ್ಕಾಕುದುರೆಯು || ಅನುಪಮಿತವಿಭವದಿಂದುರೆಮೆರೆವಚಕ್ರವ | ರ್ತ್ತನದಮಾರ್ಗಕೆತಿರುಗಿತಲ್ಲಿಯ ಸುಬಾಹುರಾ | ಯನಸೂನು ದಮನನಾಪುರಬಹಿರ್ವನಲ್ಲಿಬೇಂಟೆಯಂಮುಗಿಸಿಕೊಂಡು ||೬೯||

ಬರುತಿಕಂಡದನೊಡನೆ ಮಿಸುನಿವಟ್ಟದಪಣೆಯು | ಮಿರುಗುತಿಹಚಾಮರದನುಳ್ದಲೆಯು ಝಣಝಣ | ತ್ಕರಿಪಪ್ಪೊಂಗಡಗಗಗ್ಗರದಮುಂಗಾಲ್ಗಳಬೆಡಂಗುವಡೆದೊಳ್ಪಡಗೆಯು || ಮೆರೆವಪೊಂಬಲ್ಲಣದ ನಿಜಸುಲಕ್ಷಣದಿಂದೆ | ಸುರವಾಹದಂತೆಸೆವ ಧವಳಾಂಗದೀಮನೋ | ಹರತುರಂಗಮಮಾರದೋತಿಳಿವುದೆಂದು ಶಾಸನವಿತ್ತನನುಚರಂಗೆ ||೨೦||

ಬಡನವಂತಡೆದದಂಕೊರಳಬಂಬಲ್ಪವಿರ | ಪಿಡಿದುತಂದಿದಿರಾಗೆನಿಲಿಸಿದೊಡೆಪಣೆಯೊಳಳ | ವಡಿಸಿರ್ಪಮಿಸುನಿವಟ್ಟಯುಲಿಖನಮನೋದಿ ಘಡಘಡಾರಘುರಾಮನು || ಪೊಡವಿಯೊಳಾತನೊರ್ವನೇ ಶೂರನುಳಿದವ | ರ್ಬಡಗಾಂಪರೇನೋಳ್ಪೆನವನನಬಡಿವಾರವಂ | ಕಡುಗಲಿಗಳೆನಿಸಿಕೊಂಡಿರ್ಪಶತ್ರುಘ್ನಾದಿಭಟರೆನ್ನಮುಂದೆಬರಲಿ ||೨೧||

ಬವರದೊಳಗೆನ್ನುಗ್ರಕೋದಂಡದಿಂಬಿಟ್ಟ | ಕವಲಂಬುಗಳ್ಪೊತಮುತ್ತಗದಮುರದವೋ | ಲವರೊಡಲನೆಸಗದೆಬಿಡುವುದೇಮತ್ತೇಭಕುಂಭಸ್ಥಲಂಗಳಂದೆ || ತವೆಹರಿಸದಿಹುದೆಕೆನ್ನೀರ್ಗ್ವಾನಲನಶ್ವಸೈ | ನ್ಯವನೋಡಿಸದೆದಿಕ್ಕುದಿಕ್ಕಿಗುಳಿವುದೆಪತ್ತಿ | ನಿವಹಮಂಸಂಗರಾಜಿರದೊಳುರುಳಾಡಿಸದೆಮಾಣ್ಬುದೇನೋಡೆಂದನು ||೨೨||

ಧುರದೊಳ್ಪ್ರಚಂಡತರದೋರ್ದಂಡಧೃತಭಯಂ | ಕರಸಮುದ್ದಂಡಕೋದಂಡನಾಗಿದಿರಾಂತ | ಪರಿಪಂಥಿಮಂಡಲವನಂಡಲೆದು ಕರೆಯುತುರುಬಾಣಗಳಬಿರುಮಳೆಯನು || ನೆರೆಖಂಡಿಸುತೆ ತುಂಡುತುಂಡಾಗಿ ಪಲತೆರದ | ಪಿರಿತಿನಿಗಳಂ ರಕ್ತಮಾಂಸಖಂಡಂಗಳಂ | ಪರಿತೋಷಿಪೆನ್ಮಯ್ಯನಿದಿರೊಳಾರೀಧರಾಮಂಡಲದೆಬಿಲ್ಗಾರರು || ೨೩ ||

ಪಿಡಿಪಿಡಿಯಿದಂಭವ್ರಬಿಡಬೇಡ ಬಿಗಿಪುಕೊರ | ಳೆಡೆಗೆನೇಣಂಕೊಂಡುಪೋನಮ್ಮಕುದುರೆ ಚಾ | ವಡಿಯುಲ್ಲಿ ಕಟ್ಟುವುದು ನೆಲದೊಳಗೆ ಗಂಡೆನಿಸಿ ಮಿಾಸೆಯಂಪೊತ್ತವನು || ಬಿಡಿಸಿಕೊಳ್ಬರ್ಪನೋ ನೋಳ್ಪೆನಾನೆಂದೆನುತೆ | ನುಡಿಗೊಡಾವಂಕದವನಂತದಂಬಿಡದೊಡನೆ | ಪಿಡಿದೊಯ್ವೋ ನಗರಕ್ಕೆ ತಂದೆಯಂಬಂದುಕಂಡಂದಮುನನೋಲಗದೊಳು || ೨೪ ||

ಅಡಿಗೆರಗಿ ಬಳಿಕ ತಾನಧ್ವರದ ಕುದುರೆಯುಂ । ಪಿಡಿದುತಂದಿರ್ಪ್ಪುದಂ ವಿನಯದಿಂ ಬಿನ್ನವಿಸ । ಲೊಡನಾಸುಬಾಹು ಭೂಮೀಪತಿಯುದಂ ನೋಡಿಕೊಂಡಾಡಿ ಮಗನನಧಟನು ॥ ಪಡೆವಳರ್ಗಿತ್ತನಲ್ಲಲ್ಲಿ ಬಿಟ್ಟಿರ್ಪ್ಪೆಮ್ಮ । ಪಡೆಗಳಂಬರಿಸುವುದು ಯುದ್ಧೋಪಕರಣಂಗ । ಳೊಡನೆಂದು ಶಾಸನವನೊಡನವದಿರೊಡೆಯನಾಣತಿಯೆಂದು ಕಯ್ಮುಗಿದರು ॥೨೫॥

ಬಳಿಕಾಮಹೀವರಂ ವೀರಭಟರಂ ನೋಡಿ । ತಳರಲಾರ್ಸನ್ನದ್ಧರಾಗಿರ್ಪರೆಮ್ಮೊಳೀ । ಗಳೆ ಶತ್ರುಸೈನ್ಯಮಂ ಮುಂದಾಗಿಪೋಗಿ ತಡೆಯಲ್ಕೆಂದುಬೆಸಗೊಂಡೊಡೆ ॥ ಕಲಿದಮನನೆದ್ದು ತಾಂ ಕಯ್ಮುಗಿದು ಜೀಯರಿಪು । ಬಲಮನಾಂ ಮುಂದೈದಿ ತಡೆದು ಕಾದಲ್ಕತೂ । ಹಲಿಪೆನೆನೆಮುರ್ಝುಭಾಪುಭಾಪೆಂದವಂಗಿತ್ತನಾನೃಪತಿ ವೀಳಯವನು ॥೨೬॥

ಅಕ್ಷೀಣಭುಜಸಾರಶೌರ್ಯನಿಕ್ಷೇಪನಾ । ದಾಕ್ಷಿತಿಪಸೂನು ಯುವರಾಜನುತ್ಸಾಹದಿಂ । ದಾಕ್ಷಣದೊಳಾಯುಧಾಗಾರಮಂ ಪೊಕ್ಕು ಬಲಿಗೊಟ್ಟುಕುರಿಗೋಣಗಳನು ॥ ಕೌಕ್ಷೇಯಕಾನೇಕಶರಚಾಪಮುದ್ಗರನಿರ್ । ರೀಕ್ಷ್ಣಶಸ್ತ್ರಂಗಳಂ ಕೊಂಡು ತೊಟ್ಟಂಗಿಯುಂ । ಶಿಕ್ಷಿಸಿದ ಚತುರಂಗಬಲದೊಡನೆ ರಥವೇರಿ ಪೊರಮಟ್ಟು ಬರುತಿರ್ದನು ॥೨೭॥

ಅನಿತರೊಳಗತ್ತಲಾ ವೀರಪ್ರತಾಪಾಗ್ರ । ನನುಸರಿಸಿ ಕುದುರೆಯುಂ ಮುಂದಾಗಿ ನಿಜವರೂ । ಥಿನಿಯೊಡನೆನಡೆತರುತೆ ಮುಂದೆಪೋದಾಕುದುರೆಯುಂ ಕಾಣದಾಪಥದೊಳು ॥ ಘನವಾದ್ಯರಭಸದಿಂದೊಡೆಯುತೆಣ್ದೆಸೆಯನೆರ । ಡನೆಯಕಡಲಂತಿದಿರೆವರ್ಪ ಚತುರಂಗಮಂ । ಹಿನಿಯನೀಕ್ಷಿಸಿ ಚರಾಗಿಂತೆಂದನಲ್ಲಿಯೇ ಪಾಳಯಂಗೈದು ನಿಂದು ॥೨೮॥

ಚಾರರ್ಪೋಪೋಗಿದಿರೆವರ್ಪ ಚತುರಂಗಬಲ । ವಾರದೊ ವಿಚಾರಿಸೆಮ್ಮಶ್ವಮೇಧಾಶ್ವಮಿೂ । ದಾರಿಯೊಳ್ಬಂದುದೇನೆಂದು ಬೆಸಗೊಂಡರಿದು ಬಾರೆಂದು ನುಡಿಯೆ ಕೇಳ್ದು ॥ ವಾರುವವನವನೇರಿದೂತವಿಧಿಯಿಂತಳರ್ದು । ವೈರಿಬಲಮಂ ಪೊಕ್ಕುದಮನಂಗೆ ತಾಂ ಬಂದ । ಕಾರಿಯವನರುಹಿದೊಡನಾದರದೊಳಾಧೀರಯುವರಾಜನಿಂತೆಂದನು ॥ ೨೯ ॥

ಎಲವೊ ಚಾರನೆ ನಿಮ್ಮ ಕುದುರೆಯಂ ತಡೆದೆನ್ನ | ಪೊಳಲೊಳಗೆ ನಾನೆ
ಕಟ್ಟಿಸಿಹೆನದನಾವವಂ | ನೆಲದೊಳಗೆ ಗಂಡೆನಿಸಿಕೊಂಡಿಹನೊ ತಾನವಂಗೆಲ್ದೆ
ನ್ನ ಬಿಡಿಸಿಕೊಳಲಿ || ತಿಳುಹು ನಿಮ್ಮೊಡೆಯಂಗಿದಂ ಪೋಗು ನೀನೆಂದು | ಬಳಿ
ಯೊಳಿಹ ಚರರನೀಕ್ಷಿಸುತಿವನನಿಲ್ಲಿಂದೆ | ಕಳುಹಿರಶ್ವದಮೇಲೆ ಕುಳ್ಳಿರಿಸಿ ಪಿಂ
ದುಮುಂದಾಗೆಂದು ನೇಮಿಸಿದನು ||೮೦||

ಬಳಿಕ ಪಿಡಿದವರವನ ಮೊಗಕೆ ಮಸಿಯಂ ಪೂಸಿ | ತಿಳಿಸುಣ್ಣದೂರ್ಧ್ವ
ಪುಂಡ್ರಮನಿಟ್ಟು ಪಣೆಗೆ ತೋ | ಳ್ಗಳೊಳಂ ತುತಲೆಯೊಳಂ ಕಟ್ಟಿ ಸೊಪ್ಪಂ
ಪಿಂದುಮುಂದಾಗೆ ಹಯದ ಮೇಲೆ || ಭಳಿರೆ ಭಳಿರೆಂದು ಕುಳ್ಳಿರಿಸಿ ಕಾಲ್ತೋಳ್ಗ
ಳಂ ಕಳಲದಂತಿರೆ ನೇಣ್ಗಳಿಂ ಬಿಗಿದು ಗಹಗಹಿಸಿ | ಕಿಳಿಕಿಳನೆ ಹೊಯ್ದಟ್ಟಿ ಬೆ
ಗಡುಗೊಂಡಾ ಕುದುರೆ ಶಿಬಿರದತ್ತೋಡಿದತ್ತು ||೮೧||

ಓಡಿಬರುತಿರಲೆಲ್ಲಿಯುಂ ನಿಲ್ಲದಾ ಕುದುರೆ | ನೋಡಿದಾರಿಗರಿದೇಂ ಮಾ
ರಿಯೋ ಮಸಣಿಯೋ | ಪೇಡಿಯೊ ಪಿಶಾಚಿಯೋ ಹಾಹಾ ಎನುತ್ತೋಡಿದೆ
ಸೆದೆಸೆಗೆ ಕೆಲಕೆಲಬರು || ಓಡಿದರ್ ಕೆಲಕೆಲಬರಾವನಿವನಪರಾಧಿ | ನೀಡು ನಮ್ಮವಮಾ
ನನಂ ಪಡೆದರಸನಿಂದಮಿಾ | ಪಾಡಾಗಿ ಬರುತಿರ್ದನೆಂದು ಕಯ್ಪೊರೆಗುಟ್ಟಿ ಗಹಗ
ಹಿಸಿ ನಗುತಿರ್ದರು ||೮೨||

ಪಿರಿದು ಬೇಗನೆ ಪಾಳಯಕ್ಕಿಂತು ಕುದುರೆಯುಮ | ಬರಲಿದಿರೆ ನೋಡು
ತಿರ್ದಾ ಬಲಾಧ್ಯಕ್ಷನಾ | ಚರನ ಹಿಂಗಟ್ಟುಮುಂಗಟ್ಟುಗಳನೊಡನೆ ಬಿಚ್ಚಿಸಿ
ಸಂತವಿಸಿ ಬೆಸಗೊಳೆ || ಅರುಹಿದಂ ಕಯ್ಮುಗಿದವಂ ಕೇಳೊಡೆಯ ಚಕ್ರ | ಪು
ರಪತಿ ಸುಬಾಹುಸುತ ಯುವರಾಜದಮನನ | ಧ್ವರವಾಜಿಯಂ ತಡೆದು ಯುದ್ಧ
ಕಿದೊ ಬಂದನವಮಾನಿಸಿದನೆನ್ನನೆಂದು ||೮೩||

ಬಳಿಕ ಕೇಳ್ದದನೆಲ್ಲಮಂ ಪ್ರತಾಪಾಗ್ರನು | ಜ್ವಳತರಕ್ರೋಧಾಗ್ನಿ
ಯಾಗಿ ನಿಜಸೈನ್ಯಸಂ | ಕುಳಕೆ ರಣಸನ್ನಾಹಮಂ ಬೆಸಸಿ ತೇರಡರ್ದು ಬಿಲ್ವಿ
ಡಿದು ಬತೂಣಿಯಲ್ಲಿ || ಚಳಸದತ್ಯುಗ್ರಸಮರಾಗ್ರಹಂ ಮಿಗೆನಿಂದು | ಮೊಳಗೆ
ದೆಸೆದೆಸೆಗಳೊಳ್ ಕಾಹಳೆ ಭೇರಿಗಳ | ಕಳಕಳಮಿದಿರ್ಚೆ ಪರಸೇನೆಯಂ ಕಾಳ
ಗಕೆ ಸನ್ನದ್ಧನಾಗಿರ್ದನು ||೮೪||

ಉದ್ಧತಪರಾಕ್ರಮಂ ಯುವರಾಜದಮನನುಂ । ಕ್ರುದ್ಧನಾಗಿದಿರೆನಿಸಿ ರಾಮಚಂದ್ರನಬಲಕೆ । ಬುದ್ಧಿಕೌಶಲ್ಯದಿಂ ತನ್ನ ಚತುರಂಗಮಂಬಿತ್ತರಿಂಗೊಳಿಸಿ ನಿಲಿಸಿ ॥ ಯುದ್ಧದಾರಂಭಮಂಸೂಚಿಸಲ್ಕೊಡನೆ ಸ । ನ್ನದ್ಧರಾದರ್ನಿಖಿಲ ಸೈನಿಕರ್ಗಗನದೊ । ಳ್ಸಿದ್ಧಚಾರಣಗಣಂರಣನಿರೀಕ್ಷಣಾಕುತುಕದಿಂಬಂದುನಿಲುತಿರ್ದುದು ॥ ೭೩ ॥

೭ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೭ ಕ್ಕೆ ಪದ್ಯ ೪೪೩ ಕ್ಕೆ ಮಂಗಳಮಸ್ತು.

ಒಂಬತ್ತನೆಯ ಸನ್ಧಿ.

ಸೂಚನೆ || ದಮನನತಿಭೀಕರರಣಾಂಗಣದೊಳರಿಗರ್ವ | ದಮನನಾವೀರಪ್ರತಾಪಾಗ್ರನಂಗೆದ್ದು | ಸಮನಿಸಿದನಂದಿನಜಯಶ್ರೀಯನೆಲ್ಲರುಂ ಭಾಪು ಭಾಪೆಂದು ಪೊಗಳೆ ||

ಕೇಳೆಲೈ ತಾಪಸಕುಲೋತ್ತಂಸ ಬಳಿಕರಡು | ಪಾಳಯದೊಳುಂಮೊಳಗೆಪಲವುನಿಸ್ಸಾಳಗಳ | ಕಾಳೆಗಳರಣಸಮಾರಂಭಮಂಸೂಚಿಪಹಳಾಹಳರ ವಾರ್ಭಟಗಳು || ಮೇಳವಿಸಿತುಭಯಬಲವಂಬುಧಿಯನಂಬುನಿಧಿ | ಮೇಳವಿಸಿದಂತೆ ತುಳಿಲಾಳ್ಗಳೊಮೊರ್ದಲೆಲಯ | ಕಾಲದಘನಂಗಳಂತಾರ್ಭಟಿಸಿ ಕೈಮಾಡಿದರ್ಮಿಂಚುವಂದದಿಂದೆ || ೧ ||

ರಾವುತರರಾವುತರ್ತೇರಿಗರತೇರಿಗ | ಮಾವುತರಮಾವುತರ್ಪದಗರಂ ಪದಗರುಂ | ನಾವುತಾವೆಂದುಮುಂಗಟ್ಟಿಕೊಂಡೊತ್ತಿ ಹೊಯ್ದಾಡಿದರ್ಹಿಮ್ಮೆಟ್ಟದೆ || ಆವುಭಯಪಕ್ಷದೊಳ್ಕುದುರೆಗಳ ಕಿಚಿಕಿಲುಮಿ | ಭಾವಳಿಯಘೀಂಕೃತಿಯುಮಂಕವರೆಯಬ್ಬರಮು । ಮಾವೀರಜನರಥಟನಾರ್ಪುಮುರೆ ಕಿವುಡಾಗಿಸಿದುವು ದಿಗ್ದಂತಿಗಳನು || ೨ ||

ಮೊತ್ತಗೊಂಡಿದಿರಾಂತರನ್ಯೋನ್ಯಮಾಗಿ ಮುಸೆ | ಮೆತ್ತಕೂರ್ಗತ್ತಿಯಿಂ ಕತ್ತರಿಸಿದರ್ಭಟರ | ಕತ್ತನುರೆ ಮೊನೆಗೊಂಡಭಲ್ಲೆಯದಿನಿರಿದಿಕ್ಕಿದ ಮುರ್ಗಂಗೊರಲ್ಗಳಿಯನು || ಮತ್ತೆಮೇಲ್ವಾಯ್ದುಗದೆಯಿಂದೆ ತಲೆಯಂಬಡಿದ | ರುತ್ತರಿಸಿದರ್ಚಂದ್ರಹಾಸದಿಂ ತೋಳ್ಗಳಂ | ಬಿತ್ತಿದರ್ಕಂಪಲಂಬುಗಳನೆದೆಯೊಳಿಪ್ಪ ಸರದುದ್ಭಟರೆನಿಪ್ಪಭಟರು || ೩ ||

ಆರವುಕುಳಿಯ ಯುದ್ಧರಂಗದೊಳಗತ್ತಿತ್ತ | ಭೂರಿಜವದಿಂಚರಿಪ ಕುದುರೆಗಳ ತುಳಿತದಿಂ | ಧಾರಿಣೀತಲದಿನಿರದೆದ್ದಕೆಂದೂಳ್ಮುಸುಂಕಿದೊಡೆನೇಸರ್ಬಟ್ಟನು || ವೈರಿಗಳನಂತು ತಮ್ಮವರನಾಗಾಢಾಂಧ | ಕಾರದೊಳ್ಸೈನಿಕರ್ಕ್ಷಣಕಾಲಮರಿಯದಿರ | ಲಾರಿಸಿದುವೊಡನೊಡನೆ ರಕ್ತಪ್ರವಾಹಂಗಳಾದೂಳನೆತ್ತತ್ತಲೂ || ೪ ||

ನೆತ್ತರಿಂದುರೆನಾಂದು ಕುದುರೆಗಳತುಳತದಿಂ | ದುತ್ತವೋಲಿಲ್ದ್ಲೊಳ್ವಡೆದ
ಯುದ್ಧರಂಗಸ್ಥಲದೊ | ಳೊತ್ತೊತ್ತಿ ಮೇಲ್ವಾಯ್ವವೀರಯೋಧರ ವಿವಿಧಶಸ್ತ್ರ
ಪ್ರಹಾರದಿಂದೆ || ಕಿತ್ತುಕಿತ್ತತ್ತಿತ್ತ ಕೆಡೆವಹಾರಂಗಳೊ | ಳ್ಮುತ್ತುಗಳ್ಕಾರಿ
ನೊಳ್ಪೊಲದೊಳಗೆ ಬಿತ್ತಿದೊ | ತ್ತೊತ್ತಾದ ಜೋಳಬಟ್ಟಣಿಗಳಬೀಜಂಗ
ಳೆಂಬಂತೆ ಕಾಣಿಸಿದುವು ||೫||

ಉರುಳಾಡಿದುವು ಕತ್ತರಿಸಿದ ಯೋಧರತಲೆಯು | ಬುರುಡೆಗಳ್ಕಡೆದಿ
ದರ್ದವೇಣಿಕೆಯಿಲ್ಲದೆ ಮತ್ತೆ | ತರಿದಕಯ್ಗಾಲ್ಗಳುಂ ತೋಳ್ಗಳುಂ ತಲೆಗಳಚಿ
ದಟ್ಟೆಗಳುಂ ಮೊಗ್ಗೆಡೆಯೊಳು || ಮುರಿದುಪಡಲಿಟ್ಟರ್ದವಲ್ಲಲ್ಲಿ ಸಿಂಧಸೀ | ಗುರಿ
ಗಳುಂ ತಳೆಗಳುಂ ತೇರ್ಗಳುಂ ಪಲತೆರದ | ಕುರುಪಾಂತಪಳವಿಗೆಗಳುಂ
ಕೈದುಗಳುಮಾಭಯಂಕರರಣಾಂಗಣದೊಳು ||೬||

ಬಂದೆಡೆಯೊಳಿರ್ದಶ್ವಸೈನ್ಯವಾಕ್ಷಣಮೆಪೆರ | ತೊಂದುತಾಣದೆಬಂದು
ನಿಲುತಿತ್ತುಸಾಲ್ಗೊಂಡು | ನಿಂದಿರ್ದರಥನಿವಹವಾಕ್ಷಣಮೆ ಬೇರೆಬೇರೊಂ
ದೊಂದು ಬಿತ್ತರಿಸಿತು || ಪಿಂದಿರ್ದಪಾಯ್ದಳಂನಿಮಿಷಮಾತ್ರದೆನೋಡೆ | ಮುಂ
ದಿರ್ದದಲ್ಲಲ್ಲಿ ನಿಲಿಸಿರ್ದಗಜಸೈನ್ಯ | ವೊಂದೆಡೆಯೊಳೊಂದಮುಂಚಿತು ತತ್ಕ್ಷ
ಣಮೆ ಸೈನ್ಯಶಿಕ್ಷೆಯೇನತಿಚಿತ್ರವೋ ||೭||

ಬಳಸಿಪರಚತುರಂಗಮಂ ಮೆಲ್ಲಮೆಲ್ಲನಾ | ಕಲಿದವುನನೆಣಿಕೆಯಿಲ್ಲದ
ಬಲಂಮೇಲ್ವಾಯ್ದು | ತಳೆದಬಲ್ಗೈದುಗಳನೊಕ್ಕಲಿಕ್ಕುತ್ತೆ ಬರೆ ವೀರಪ್ರತಾ
ಪಾಗ್ರನು || ಮುಳಿದು ನೀವೆಲ್ಲರೊರ್ಮ್ಮದಲೆಹಾಯ್ದಿಕ್ಕಿರರಿ | ಬಲವನೆಂದಾಣ
ವಿಸಲೊಡನೆ ನಿಜಸೇನೆಗದು | ವಳದುಳನೆಮುಂಚಿ ಮೇಲ್ವಾಯ್ದುಜಡಿದಿಕ್ಕಿ
ಚದಚದರಿಸಿದುದಾಬಲವನು ||೮||

ಕೂಡೆಯುವರಾಜನಾಪರಿಯಪರಿಮರ್ದನಮಂ | ನೋಡಿಬತಿಗೊಂಡು
ಸರಸರನೆಬಂದಿದಿರಾಂತು | ನೀಡಿತನ್ನಯಪಾಡಿಗಭಯಮಂ ಜೀವಡೆದು ಬಲ್ವಿ
ಲ್ಲನಂಬುಗಳನು || ಮಾಟಿಗೆಯಿನೊಡನೊಡನೆ ತೆಗೆತೆಗೆದು ತಿರುವಿನೊ | ಳ್ಪೂ
ಡುಪೂಡುತ್ತೆ ಸೆಳಸೆದಿಸುತಿಸುತ್ತೆಬರೆ | ಬೀಡಳಿದು ಕೆಲಕೆಲಬರೋಡಿದರ್ಕ್ಕಂ
ಡಕಡೆಗುಳಿದರಳಿಬಳಿಗುರುಳ್ದರು ||೯||

ಈಪರಿಯೊಳತಿಭಯಂಕರಮಾದಸಂಗರದೊ | ಳಾಪರಾಕ್ರಮಿವೀರ ಜನಶಿಖಾಭರಣಂ ಪ್ರ | ತಾಪಾಗ್ರಸರಗುಮರನಿಂತನ್ನಗಳವಳಿಯುತಿರ್ಪುದಂ ಕಂಡೊಡನೆಯೆ || ಕೋಪೋಜ್ಜ್ವಲಿತಚಿತ್ತನಾಗಿ ಲಯಕಾಲದವಿ | ರೂಪಾಕ್ಷನಂತೆಪೋಲುರವಣಿಸಿ ರಥಜವಾ | ಟೋಪದಿಂದಿದಿರಾಂತುಯುವರಾಜದಮನನ ನವಜ್ಞೆಯಿಂದಿಂತೆಂದನು ||೧೦||

ಎಲೆಹಸುಳೆದಮನನೀನಲೆ ನಮ್ಮ ಕುದುರೆಯಂ | ಪೊಳಲೊಳಗೆ ಕಟ್ಟಿಸಿಹನಾವನಪರಾಕ್ರಮದ | ಬಲುಹನಾರಾಕ್ಷಸಾಧೀಶನುಂ ಸಹಿಸಲಿಲ್ಲವೊ ಆ ರಘುಪ್ರವರನ || ನೆಲದೊಳಪ್ರತಿವೀರನಶ್ವಮಂ ಬಾಲಚಾ | ಪಲದೆನೀಂತಡೆವರೇ ನೀನಾರಸೂನುಜಾ | ವಳನಾಗಿತೋರುವೆಯಲಾಬಿಡುಬಿಡಶ್ವಮಂ ಮಕ್ಕಳಾಟವೆ ನಿನಗಿದು ||೧೧||

ಎನಲದಂಕೇಳ್ದು ನಸುನಗುತೆ ಧೀರಾಗ್ರಸರ | ನೆನಿಸಿದಾದಮನನವನಂ ತೃಣಕ್ಕೆಣಿಸುತೆಲೆ | ಘನವೀರ ಕೇಳ್ಚಕ್ರಜನಪದಾಧೀಶನ ಸುಬಾಹುಭೂಮೀನಾಥನ || ತನುಜಾತನಾದಯುವರಾಜನಾನೆಮ್ಮ ಪ | ತ್ತನದೊಳಗೆನಿಮ್ಮಶ್ವಮಂ ನಾನೆಕಟ್ಟಿಸಿಹೆ | ನನುಮರದೆ ನೋಡೆನ್ನ ಬಾಲಕೇಳಿಯನೆಂದು ಟಂಕರಿಸಿದಂ ಬಿಲ್ಲನು ||೧೨||

ಎಲವೊ ಬಾಲಕ ನಿನ್ನನೋಳ್ಪೊಡೆನ್ನಯಮನದೆ | ತಲೆದೋರುತಿದೆ ಮರುಕಮುರೆ ನುಡಿಯಕೇಳ್ಪೊಡೆ | ಜ್ವಲಿಸುತಿದೆಕೋಪಾಗ್ನಿಯೇಗೈವೆನೆನಲಾಪ್ರತಾಪನಿಧಿ ಯುವರಾಜನು || ಫಲವದೇಂ ಬರಿಮಾತಿನಿಂದೆಲವೊ ತೋರು ಭುಜ | ಬಲಮಕಲಿಯಾದೊಡೆಂದವನೆದೆಗೆಗುರಿಗಟ್ಟಿ | ಪಲವುಕೂರ್ಗಣೆಗಳಂ ತೆಗೆದುಬಿಟ್ಟೊಡಿದಂ ಶಂಖಮಂ ಭಂಭಮೆನಲು ||೧೩||

ಪೊಸಮಸೆಯಕಣೆಗಳಿಂದಾಕಣೆಗಳಂ ಕತ್ತ | ರಿಸಿದಂಪ್ರತಾಪನಿಧಿ ದಮನಂ ಮಗುಳ್ದುಮಾ | ನಸದೆಕಿಸುಗಣ್ಬಿಕಯ್ಗಣ್ಮಿಲೆಡೆವಿಡದ ಕೋಲ್ಪಳೆಯೊಳಾವೀರನೊಡನೆ || ಮುಸುಕಿದೊಡೆಮಾರ್ಪಡೆಯನಾನೆಗಳ್ಘೀಳಿಟ್ಟು | ವಸವಸದೆ ಕುದುರೆಗಳ್ಮುಸುಡಪಿಂಗಡೆಗೆ ತಿರು | ಗಿಸಿದುವುಪದಾತಿಗಳ್ಕೆಡೆದರವನಿಯೊಳಿರದೆ ರಥಿಕರುರೆಕಣ್ಗೆಟ್ಟರು ||೧೪||

ಅಕ್ಷೋಭೆಯಂ ಪ್ರತಾಪಾಗ್ರನಭಿವೀಕ್ಷಿಸು । ತಾತ್ಕ್ಷಣವೆ ಸಂಧುಕ್ಷಿತಾಧಿಕಕ್ರೋಧಾಶು । ಶುಕ್ಷಣಿಯುಕಿಡಿಗಳನುಗುಳ್ವಂತೆ ಕೆಂಪಡಸಿದತಿಭೀಷಣಾಕ್ಷನಾಗಿ ॥ ರೂಕ್ಷದಶಬಾಣಂಗಳಂಪೂಡಿ ಕಾರ್ಮುಕದೊ । ಳಾಕ್ಷಿತಿಪಸು ತನಪಣೆಗೆಚ್ಚನವು ತಾಗಿದೊಡ । ಮುಕ್ಷುಭಿತನಾದನವನನುನು ಮಶಕಾಳಿಸಂವಷ್ಟಕರಿಕಲಭದಂತೆ ॥೧೫॥

ರಣಧೀರನೆನಿಸಿದಾನೃಪಕುಮಾರಂಬಳಿಕ । ಪಣೆಯುರುಣವಾರಿಯಂ ಮುಕ್ಕುಳಿಸುತಿರ್ದೊಡಂ । ಗಣನೆಗವನಿನಿಸುತಾರದೆವೀರರೆಲ್ಲರುಂ ಮಝುಭಾಪುಭಾಪೆನುತಿರೆ ॥ ಸೆಣಸುಮಿಗೆತೆಗೆತೆಗೆದು ಡೊಣೆಯಿಂದೆಮುಸೆವೆತ್ತ । ಕಣೆಗಳಂ ಮುನ್ನೂರ್ವರೆಗವೆಚ್ಚನಾರಣಾಂ । ಗಣದೆ ಸಾರಥಿರಥವನತಿಚಿತ್ರಗತಿಯಿಂದೆನಡಸೆ ತೆರಪಿಲ್ಲದಂತೆ ॥೧೬॥

ಪಡೆದವಾಅಂಬುಗಳಧೋಗತಿಯುನಾವೀರ । ನೊಡಲಂಪಳಂಚಿ ಜಗದೊಡೆಯುನೆನಿಸಿದರಾಮು । ನಡಿದಾವರೆಯೊಳಣಂಭಕ್ತಿಲವಮಿಲ್ಲದಿಹಮಾನವರಪಾಂಗಿನಿಂದೆ ॥ ಕಡುಮುಳಿದುವೀರಪ್ರತಾಪಾಗ್ರನುರವಣಿಸು । ತೊಡನೆಣಿಕೆಯಿಲ್ಲದಿಹಗರಿಗಟ್ಟಿದಂಬುಗಳ । ನಡೆವಿಡದಸಂಖ್ಯಾಕಮಾಗಿತೆಗೆತೆಗೆದೆಚ್ಚು ಕಣ್ಗೆಡಿಸುತಿದಿರಾಳನು ॥೧೭॥

ಇಕ್ಕಿದಂನಾಲ್ಕಂಬಿನಿಂನಾಲ್ಕುಕುದುರೆಗಳ । ನಿಕ್ಕಣೆಗಳಿಂದೆ ಚಕ್ರಾಂಕಿತದಪಳವಿಗೆಯು । ಮುಕ್ಕಡಿಯುನಾಗಿಸಿದನೊಂದರಿಂ ಯುಮಪುರಕೆಕಳುಹಿದಂ ಸಾರಥಿಯುನು ॥ ಚಕ್ಕನೊಂದಂಬಿನಿಂಕತ್ತರಿಸಿದಂ ಬಿಲ್ಲ । ನೆಕ್ಕತುಳದಿಂದಂತು ಮತ್ತೆನಾಲ್ಕಂಬಿನಿಂ । ದಿಕ್ಕಿಯುವರಾಜನಂ ವಿರಥನಂಮಾಡಿದಂ ನಿಜಸೇನೆ ಗಹಗಹಿಸಲು ॥೧೮॥

ನೊಂದನಾಘಾತದಿಂದಾಬಾಲನಕಟಕಟ । ಕುಂದಿತೇವೀರರಸ ತಗ್ಗಿತೇಂ ದಿಟ್ಟತನ । ನಂದಿತೇಭುವನತ್ರಯುಖ್ಯಾತಸುಕ್ಷಾತ್ರತೇಜ ಮಝುಭಾಪುಭಾಪು ॥ ನೊಂದಮರಿಪಾವಿನಂದದೆ ಸಮಧಿಕಕ್ರೋಧ । ದಿಂದೆನಿಡುಸುಯ್ದಿಡುತೆ ಬೇರೊಂದು ರಥವೇರಿ । ಬಂದನಾಕ್ಷಣಮೆಪೆರತೊಂದುಬಿಲ್ವಿಡಿದು ಸರ್ವಾಸ್ತ್ರಸನ್ನಾಹದಿಂದೆ ॥೧೯॥

ಇದಿರಾಂತು ಶತ್ರುವಂ ನೋಡಿ ಮರ್ಝುಭೂಪ ಮೆ | ಚ್ಚಿದೆನೆಲವೊ ನಿನ್ನ
ವಿಕ್ರಮಕೆ ನೀನಧಟನಹು | ದಿದಕೆ ನೋಡೆನ್ನ ಧಟನೆಂದು ಮುಂಬರಿದು ಕಣ್ಮು
ಚ್ಚಿ ಬಿಡುವನಿತರೊಳಗೆ ‖ ಸದೆದನೀರೆರಡು ಕೂರಂಬಿನಿಂದೀರೆರ | ಳ್ಗದುರೆಗಳ
ನಂತೆ ರಥಮಂ ನಾಲ್ಕರಿಂ ಚೂರ್ಣಿ | ಸಿದನೊಂದರಿಂದಿಕ್ಕಿದಂ ಸಾರಥಿಯನೊಂದ
ನರಿವೀರನೆದೆಗೆಚ್ಚನು ‖೨೦‖

ಕೂಡೆ ಶಂಖವನೂದಿ ಗರ್ಜಿಸಿದನಾ ಶರದೆ | ಪೀಡಿಸಿದ ವೀರರಸಜಲಧಿ ಪ್ರ
ತಾಪನಿಧಿ | ನಾಡೆ ರೋಷಾವೇಶದಿಂದೊಡನೆ ಬೇರೊಂದು ರಥವೇರಿ ನಿಂದಿದಿರ್ಚಿ ‖
ನೋಡಿ ಯುವರಾಜನಂ ಭೂಪುಭೂಪೆಂದು ಕೊಂ | ಡಾಡಿ ನೀನಹುದೆಲಾ ಗಂಡೆ
ನ್ನ ವಿಕ್ರಮದ | ಜಾಡನಿದನೋಡೆಂದು ಮುಸುಕಿನಂ ಕಣೆವಳೆಯೊಳವನನಾ
ಸೇನೆಸಹಿತ ‖೨೧‖

ಎತ್ತೆತ್ತಲುಂ ನೋಡಲಾ ಕಣೆಗಳೇ ಪಸರಿ | ಸಿತ್ತಲಾ ಪರಬಲದೊಳೇನೆಂ
ಬೆನಾನೆಗಳ | ಮೊತ್ತದೊಳ್ಕುದುರೆಗಳ ಥಟ್ಟಿನೊಳ್ತೇರ್ಗಳೊಗ್ಗಿನೊಳಂತು ಪಾ
ಯ್ದಳದೊಳು ‖ ಮತ್ತಮಾ ನೃಪಸುತನ ಮೈಯೆಲ್ಲಮಂ ಮುಸುಂ | ಕಿತ್ತದ
ಕ್ಕಳುಕದವನಧಿಕಕೋಪಪ್ರೋಜ್ವಲಿತ | ಚಿತ್ತನಾಗಿಸಲುಪಕ್ರಮಿಸಿದಂ ಪರಬಲ
ದಮೇಲೆ ಮಂತ್ರಾಸ್ತ್ರಗಳನು ‖೨೨‖

ಗರುಡಾಸ್ತ್ರದಿಂದೆ ಸರ್ಪಾಸ್ತ್ರಮಂ ದಹನಾಸ್ತ್ರ | ದುರುಬೆಯಂ ವರು
ಣಾಸ್ತ್ರದಿಂ ಜಲಧರಾಸ್ತ್ರಮಂ | ಮರುದಸ್ತ್ರದಿಂಪಂತುಟಂಧಕಾರಾಸ್ತ್ರಮಂ
ಪ್ರದ್ಯೋತನಾಸ್ತ್ರದಿಂದೆ ‖ ಧರಣೀಧರಾಸ್ತ್ರಮಂ ವರಮಹೇಂದ್ರಾಸ್ತ್ರದಿಂ |
ಪರಿಹರಿಸಲುಗ್ರಪ್ರತಾಪಂ ಪ್ರತಾಪನಿಧಿ | ತೆಗೆದು ಮೂಡಿಗೆಯಿಂದದೊಂದು
ದಾರುಣಶರವನರಗುವರನಿಂತೆಂದನು ‖೨೩‖

ಶೂರನೆನಿಸಿದೊಡೆಲವೊ ನರಪಶುವೆ ಸೈರಿಸೀ | ದಾರುಣಮೆನಿಪ್ಪಿದೊಂ
ದಂಬಿನುರುಬೆಯನಹಂ | ಕಾರವಲ್ಲುಗ್ರಪ್ರತಿಜ್ಞೆಯಂ ಮಾಳ್ಪೆನಾಂ ಕೇಳೀಶ
ರಂ ನಿನ್ನನು ‖ ತೇರಿಂದೆ ಕೆಡಹದಿರ್ದೊಡೆ ನೆಲಕೆ ವೇದಮುನ | ದಾರೀಜಗತ್ತಿ
ನೊಳ್ನಿಂದಿಪರೊ ಅಖಿಲರ | ಘೋರದುರಿತಂ ಪೊರ್ದಲೆನ್ನನೆಂದುರವಣಿಸುತಾ
ಡೊತ್ತಿ ಬಿಲ್ಗೇರಿಸಿ ‖೨೪‖

ಕಾಲಾನಲಾಕಾರದಿಂದುಗ್ರವೆನಿಸಿದಾ । ಕೋಲನುರೆಕಿವಿವರಂ ಸೆಳೆದೆಚ್ಚನಾವೀರ । ಮೌಳಿಮಣಿ ಖಂಡಿಸಲ್ಕದನೊಡನೆ ತೆಗೆದೆಚ್ಚುದುರುಶರಪರಂಪರೆಯನು ॥ ಪೇಳಲೇನತಿವೇಗದಿಂ ಕೊಚ್ಚಿಕೊಂಡಾಶ । ರಾಳಿಯಂಮೃತ್ಯುಸ್ವರೂಪದಿಂದವನಸುವಿ । ಶಾಲವಕ್ಷಸ್ಥಲದೊಳುರೆನಟ್ಟು ರಥದಿಂದುರುಳ್ಚಿದುದುನೆಲಕವನನು ॥ ೨೫ ॥

ಜಿತನಾಮಹಾವೀರನೀಕಲಹವಂತೊರೆದು । ನಡೆವಾಡವಡರ್ದಪ್ಸರಃಪ್ರಣಯಕಲಹಕ್ಕೆ । ನಡೆಯಲವನಂಗವಂ ಸಾರಥಿರಥಾಂತರದೊಳೆತ್ತಿರಿಸಿಕೊಂಡು ಮರಳೆ ॥ ಕಡುಶೋಕದುಬ್ಬರದ ಹಾಹಾವಿರಾವಮೀ । ಪಡೆಯೊಳಗೆ ಪರ್ಬಿದುದು ಶತ್ರುಘ್ನರಾಯನಿ । ರ್ದೆಡೆಗೆ ವಾದ್ಯವರಭಸಮಿಲ್ಲದಳಿದುಳಿದಪಡೆ ತಿರುಗಿದುದು ಕಳಕಳಲ್ದು ॥ ೨೬ ॥

ಮೊಳಗಿದುವು ಪಲವುಜಯಶಂಖಕಾಹಳಭೇರಿ । ಗಳ ಹಳಾಹಳರಭಸವೆಣ್ದೆಸೆಯೊಳತ್ತಮಂ । ಗಳವಿಜಯಲಕ್ಷ್ಮೀಸ್ವಯಂವರ ಮಹೋತ್ಸವದೊಳಾವೀರಯುವರಾಜನ ॥ ಬಳಿಕವಿವಿಧೋಪಚಾರದೆ ರಣಾಯಾಸಮಂ । ಕಳೆ ದುದಮನಂಮಗುಳೆ ಚತುರಂಗಮಂಸಜ್ಜು । ಗೊಳಿಸಿ ಕಳನೋಳ್ರಾಮಚಂದ್ರಾನುಜನಬರವನಿದಿರೆ ನೋಡುತ್ತಿರ್ದನು ॥ ೨೭ ॥

೯ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೯ ಕ್ಕೆ ಪದ್ಯಗಳು ೪೭೦ ಕ್ಕೆ ಮಂಗಳಮಸ್ತು.

ಹತ್ತನೆಯ ಸನ್ಧಿ.

ಸೂಚನೆ ‖ ಸರಸಿರುಹಬಾಂಧವಕುಲೋಪವನಚಂದನಂ । ಭರತನೃಪನಂದನಂರಣಕ್ಕೈದಿಲಕ್ಷ್ಮಣಾ । ವರಜನಬೆಸಂಬಡೆದು ದಮನನಂಗೆಲ್ದುಜಯಲಕ್ಷ್ಮಿಯಂ ಕಯ್ಕೊಂಡನು ‖

ವ್ರತಿಯೆಕೇಳ್ಬಳಿಕ ಪಿಂದಿರ್ದ ಶತ್ರುಘ್ನಭೂ । ಪತಿನೋಡಿ ಕಳಕಳಲಿ ಮರಳಬರುತಿರ್ದ ನಿಜ । ಪೃತನೆಯಂ ನಾಯಕನನೀಕ್ಷಿಸದೆ ಪೇಳರ್ಕೈಯೋಧರಿರ ತಡವೇತಕೆ ‖ ಕ್ರತುತುರಂಗವನಿರದೆ ತಡೆದಿರ್ದನಾವವಂ । ಜಿತನಾದನಾವನಿಂ ವೀರಪ್ರತಾಪನಿಧಿ । ಧೃತಿವಿಕ್ರಮೈಕನಿಧಿ ರಣರಂಗವಾವುದೆಂದಡಿಗಡಿಗೆ ಬೆಸಗೊಂಡನು ‖ ೧ ‖

ಸೈನಿಕರದಂಕೇಳ್ದು ರಾಯಕೇಳ್ಚಕ್ರಾಭಿ । ಧಾನದಿಂಮೆರೆವ ಪುರಮಿತ್ತಲಿಹುದೀರಾಜ । ಧಾನಿಗರಸೆನಿಸಿಪ್ಪಸುಬಾಹುವಿನಸೂನು ದಮನಾಖ್ಯನೆಮ್ಮಾಹಯವನು ‖ ಏನೆಂಬೆವತಿಮಾನಗರ್ವದಿಂತಡೆದಮಿತ । ಸೇನೆಯೊಡನಿದಿಗಾಂತುಕಾಳಗಕೆತೊಡಗಿ ಜಂ । ಝಾನಿಲಮುರುಳ್ಚುವಂತಿರೆ ಪೆರ್ಮರನನುರುಳ್ಚಿದನೆಮ್ಮ ದಳಪತಿಯನು ‖ ೨ ‖

ಅಳಿದುದೆಮ್ಮಯಸೇನೆಯಾಮುಹಾರಣದೆ ಹೇ । ರಳವಡಾಗೆನುತ್ತೆಬಿನ್ನವಿಸಿದೊಡೆ ಸೌಮಿತ್ರಿ । ಮುಳಿಸೇರಿಕಣ್ಗಳೆರಡುಂಕರಂಕೆಂಪಡಸಿ ರಕ್ತದುಂಡೆಗಳಂತಿರೆ ‖ ಪೊಳೆಯಲಾಡೊತ್ತಿಸನ್ನದ್ಧರಾಗೆಲ್ಲರುಂ । ಕೊಳಗುಳಕೆ ತಳರ್ವಂತೆ ಪೊಯಿಸಿರಣಭೇರಿಯಂ । ಪ್ರಳಯಾಂತಕಂಬೊಲಲ್ಲಿಂದೆ ಪೊರಮಟ್ಟನಾಕಳಕಖಿಳಸೇನೆಸಹಿತ ‖೩‖

ಪಳವಿಗೆಗಳಂತಡೆಯುತಾಗಸದೆಪಕ್ಷಿಸಂ । ಕುಳಗತಿಯನೆಣಿಕೆಯಿಲ್ಲದೆ ನಡೆವಕುದುರೆಗಳ । ತುಳಿತದಿಂದಾಬಟ್ಟೆಯಂಪಳ್ಳವಾಗಿಸುತೆ ವೀರರಹರಥಿಕರ್ಕಳ ‖ ಥಳಥಳಿಪಮಕುಟರತ್ನಪ್ರಭಾಪಟಲದಿಂ । ಬೆಳಗುತೆಣ್ದೆಸೆಯನೋರಣಗೊಂಡುಬಹರಥಂ । ಗಳವೇಗರಭಸದಿಂ ಭೂಮಿಯಂನಡುಗಿಸುತ್ತಾಸೇನೆ ನಡೆತಂದುದು ‖೪‖

ಏಕಕಾಲದೊಳಾಗ ಬಾಜಿಸಿದ ಪಟುವೃಭೇ | ರೀಕಾಹಳೀಶಂಖಝುಲ್ಲರಿಗಳಬ್ಬರಮು | ನೇಕಪಘಟಾಪಟುಧ್ವಾನದುಬ್ಬರಮಶ್ವಖುರಪುಟೀರಾವಾರ್ಭಟಿ || ಭೀಕರ ಮಹಾಭಟರವೀರವಾದಾಟೋಪ | ಮೇಕೀಭವಿಸಲಿದೇನಕಟ ಕಲ್ಪಾಂತವಾ | ರಾಕರಾಗಾಧನಿಧ್ವಾನವೆಂದಳ್ಕಿದುದು ಮೂಜಗಂ ಭ್ರಾಂತಿಗೊಂಡು ||೫||

ಬಂದೊಂದುಕಾರಣದಿನೊಂದೊಂದುವಸ್ತುವಿಂ | ಗೊಂದೊಂದುಪೆಸರಾಮದೀಧರಾಮಂಡಲದೊ | ಳೊಂದೆಂಬುದನುಭವಪ್ರತ್ಯಕ್ಷಮದ್ಭುತವನೇನೆಂಬೆನಾವಾಹಿನಿ || ಸಂದಣಿಸಿ ನಡೆವಂದು ಕುದುರೆಗಳ ಖುರಪುಟಗ | ಳಿಂದೆಮೇಲೆಬ್ಬಿಸಿದ ಕೆಂಪೂಳ್ಮಸುಂಕಲರ | ವಿಂದ ಬಂಧುಗಮನನಸಾರಥಿಗಮರುಣಾಭಿಧಾನಮಾದುದು ಧಿಟವಿದು ||೬||

ಆರಣಕ್ಷೇತ್ರಮಂ ಬಳಿಕ ರಾಮಾನುಜಂ | ಸೇರಿ ನಿಜಬಲದೊಡನೆ ಮುಡಿದಿತ್ತ ಕಡೆದಿರ್ಪ | ವೀರಪ್ರತಾಪಾಗ್ರನಂ ನೋಡಿ ಮತ್ತೆತಾಂಬರ್ಪುದನೆ ನೋಡುತತ್ತ || ತೀರದುಂ ಬಲಮುಯದೆ ನಿಂದಿರ್ಪದಮನನಂ | ದೂರದೊಳೆ ನೋಡಿ ಖತಿಗೂಡಿ ನಿಮ್ಮೊಳದಾವ | ನೀರಾಯುಗುವರನಂಗೆಬಲ್ಲನೆಂದಧಟರಂ ನೋಡಿ ಬೆಸಗೊಂಡನು ||೭||

ಥಟ್ಟನಿದಿರ್ವಂದರಿದಮಾನಲಂ ಪುಷ್ಕಲಂ | ದಿಟ್ಟತನದಿಂದೆನಗೆ ಜೀಯ ಕರುಣಿಸುವುದೀ | ಕಟ್ಟಳೆಯನೀ ನೃಪಕುಮಾರನೆನ್ನುದ್ಧತಪರಾಕ್ರಮಕ್ಕೆ ನಿತರವನು || ಥಟ್ಟದೆನಿತರದು ರಣಕ್ಕೈದಲಾನಶ್ವಮಂ | ಬಿಟ್ಟುಬಿಡದಾವವಂ ಕಟ್ಟಿಕೊಂಡಿರ್ಪನೋ | ದಿಟ್ಟಸುವೆನವನಹಂಕಾರಮಂ ವೀರಪ್ರತಿಜ್ಞೆಯಿದಂ ಕೇಳ್ವುದು ||೮||

ದಿಕ್ಕುದಿಕ್ಕಿಗೆಪರುಂಕಿಸದೆ ಪರಬಲವನುರೆ | ಸೊಕ್ಕಿನಿಂಮೆರೆಯುತಿಹ ದಮನನಂ ರಥದಿಂ ನೆ | ಲಕ್ಕುರುಳ್ಚದೆ ಪಿಂದಿರುಂಗಿದೊಡೆ ರಾಮನಂ ಪರಮಾತ್ಮನೆನದವರನು || ನೆಕ್ಕುವಮಹಾಪಾತಕಂ ಮಾತೃಚರಣಮಂ | ಮಿಕ್ಕುದೆನಿಸಿವತೀರ್ಥಮೊಂದು ಸೇವಿಸದೆ ಮದ | ದುಕ್ಕಿನಿಂಮೆರೆವಮಕ್ಕಳಪಾತಕಮುಮೆನ್ನನಂಟುವುದು ನಿಕ್ಕುವವಿದು ||೯||

ಎಂದುಬಿನ್ನವಿಸಿದೊಡೆಕೇಳ್ದುಸೌಮಿತ್ರಿ ಮುದ | ದಿಂದೆಲೆಲೆಭೂಪ ಪುಷ್ಕಲ ಭೂಪ ತಕ್ಕುದರ | ವಿಂದಸಖಿಕುಲಕುಮಾರರಿಗಿಂತು ಮುಂಚುವುದು ಪೂರ್ಣಪ್ರತಿಜ್ಞನಾಗು || ಎಂದು ಜೇಂಕರಿಸಿ ಬೀಳ್ಕೊಡೆ ಚಾತುರಂಗ ಬಲ | ದಿಂದವಂಕೂಡಿ ಜಯರಥವೇರಿಮುನ್ನಮಾ | ನಂದನಂ ಸುರಸೈನ್ಯದೊಡನೆ ಸುರವಿಜಯಕ್ಕೆ ತಳರ್ದಂದದಿಂ ತಳರ್ದನು ||೧೦||

ಆಯುದ್ಧರಂಗದೊಳನಂತರಂ ತರತರದೊ | ಳಾಯುತಮೆನಲ್ಕನೆಕ ದುರೆತೇರಾಳ್ಗಳಂ | ದಾಯವರಿವಲ್ಲಲ್ಲಿ ಬಹುಳದೂಗಂಬರಂನಿಲಿಸಿ ತಾಂಚೂಣಿಯಲ್ಲಿ || ಕೋಯಂಡವಂಪಿಡಿದು ಲಯಕಾಲ ಚಂಡಿಕಾ | ನಾಯಕನವೋಲ್ಕಿಂದುಗರ್ಜಿಸುತೆ ಪೊಡೆಯಿಸಿದ | ನಾಯೋಧನಕ್ಕೆ ಮೊದಲೆಂದು ರಣಭೇರಿಯಂ ನಿಪುಣಮತಿಯಾಭಾರತಿ ||೧೧||

ತರತರದೊಳುರವಣಿಸಿ ಚರಿಸುತಿಹ ತುರಗಂಗ | ಳುರುತರ ತರಂಗಗಳ ಬೆಡಗಾನೆ ಸಾಲ್ಗೊಂಡು | ನೆರೆದಾನೆಗಳ್ಕುಂದೆ ಪೇರರೆಗಳಟ್ಟಳದವಡವಾಗಬೆಳ್ಗೊಡೆಗಳು || ನೊರೆಯಾಗೆ ಕೈದುಗಳ್ಪ್ರಚಲಚರಗಳಂ | ತಿರೆ ಭಟರ ಬೊಬ್ಬೆಯಬ್ಬರವಾಗೆ ಹಡಗುಗಳ | ಪರಿಜುವಡೆದಿರೆಪತಾಕಾನ್ವಿತರಥಂಗಳಾ ಪಡೆನೋಡೆ ಕಡಲೆನಿಸಿತು ||೧೨||

ತದನುಪದದೊಳೆಮಹಾವೀರನಾದಮನನುಂ | ಮೊದಲೆಸನ್ನದ್ಧಮಾಗಿರ್ದನಿಜಸೈನ್ಯದೊಡ | ನಿದಿರಾಂತುಭಾರತಿಯುನಾಹವಾರಂಭಕ್ಕೆ ಭೇರಿಯಂ ಪೊಡೆಯಿಸಲ್ಕೆ || ಸಮುದಾರವೀರಪಾಣವನೊಡನೆ ಬರೆಪಿರಿ | ಮುದವೇರಿದಾವುಭಯಸೇನೆಯುಂ ಪ್ರಳಯಕಾ | ಲದಮೇಘಸಂಘಾತಮೆರಡೊಂದುವಂದದಿಂ ಮೇಳೈಸಿಕೈಮಾಡಿತು ||೧೩||

ತಡೆಯಿರ್ರೈಕುದುರೆಥಟ್ಟಿಂರಾವುತರ್ಕಳಂ | ಕಡಿಯಿರ್ರೈಕತ್ತಿಯಿಂದಾನೆಗಳಮಂಡೆಯಂ | ಬಡಿಯಿರ್ರೈ ಬೀಸುಗದೆಯಿಂಗರಿಯಿರ್ರೈ ಬಟ್ಟೆಸಿಂಮಾವುತರ ಕೊರಳನು || ಬಿಡಿರ್ರೈಸರಳ್ಗಳಂ ತೆಗೆತೆಗೆದು ರಥಿಕರ್ಗೆ | ಬಿಡದೆಕಾಲ್ಬಂಟರಂ ಸಬಳದಿಂ ತಿವಿಯಿರ್ರೈ | ನಡೆಯಿರ್ರೈ ಹೊಡೆಯಿರ್ರೈ ಎಂಬಕೋಳಾಹಳಮೆತ್ತೀವಿದರ್ದಾಕಳನೊಳು ||೧೪

ಎಲ್ಲಿಯುಂ ನೋಡಲಾರವುಕುಳಿಯರಣರಂಗ | ದಲ್ಲಿ ರಾವುತರಿಲ್ಲದಶ್ವಂಗಳಶ್ವಂಗ | ಳಿಲ್ಲದಿಹ ರಾವುತಜೋದರಿಲ್ಲದ ಗಜಗಳಭಗಳಿಲ್ಲದಜೋದರು ‖ ಬಿಲ್ಲಾಳ್ಗಳಿಲ್ಲದಿಹ ರಥಗಳಾಪರಿರಥಗ | ಳಿಲ್ಲದಿಹವೀರರಥಿಕರ್ಕಳಿಂತಾಯುಧಗ | ಳಿಲ್ಲದಿಹ ಕಟ್ಟಾಳ್ಗಳಾಳ್ಗಳಿಲ್ಲದಕೈದುಗಳ್ತೋರ್ಕೆವಡೆದುವಹಹಾ ‖ ೧೫ ‖

ಘೋರತರಮೆನಿಸಿದಾಯುದ್ಧದೊಳ್ನಿಜಸೇನೆ | ವೈರಿಯೋಧರಹಾವಳಿಗೆಸ್ಸೈಸದತ್ತಿತ್ತ | ತಾರುಥಟ್ಟಾಗಿಕೆಡೆವುತ್ತಿರ್ಪುದಂನೋಡಿ ಸಮಧಿಕಕ್ರೋಧದಿಂದೆ ‖ ಧೀರನಾಪುಷ್ಕಲಂ ಪರಬಲಾಧಿಪರೊಡನೆ | ಪೋರಾಡಲಾಣತಿಯನಿತ್ತು ರಿಪುತಾಪಮುಖ | ವೀರರ್ಗೆ ಮುಂದೆತೇರಂನೂಕಿ ದಮನನನಿದಿರ್ಚಿತಾನಿಂತೆಂದನು ‖ ೧೬ ‖

ಫಡಫಡೆಲೆರಾಜಪುತ್ರಕ ನಮ್ಮಕುದುರೆಯಂ | ತಡೆದಿರ್ಪ ದಮನನೆಂದೆಂಬವಂ ನೀನೆಯೋ | ನುಡಿಯೆನಲ್ಕೊಡನೆತಾನವನೇವೊ ರಥಿಕನಾನೇನಿಮ್ಮ ಮುಖಹಯವನು ‖ ತಡೆದಿರ್ಪವಂಶತ್ರುದಮನನಾದುದರಿಂದೆ | ನುಡಿವರೆನ್ನಂ ದಮನನೆಂದು ನೀನಾರಲಾ | ನುಡಿಯೆಂದು ಗರ್ವದಿಂದುತ್ತರವನಿತ್ತೊಡಾಭರತಸುತನಿಂತೆಂದನು ‖ ೧೭ ‖

ಎಲೆಬಣಗುಕೇಳೆನ್ನನೆಂಬರತಿಶೌರ್ಯ ಪು | ಷ್ಕಲನೆನಿಸಿದುದರಿಂದೆ ಪುಷ್ಕಲನೆನುತ್ತೆ ನೀಂ | ಕಲಿಯುಪ್ಪೊಡೆನ್ನೊಡನೆ ಪೊಣರೆಂದುಜೇವಡೆದು ಸಿಂಹನಾದಂಗೈಯುತೆ ‖ ಪಲವುಕೂರಂಬುಗಳ ನೆಡೆವಿಡದಿಸುತ್ತಬರೆ | ಕಲಿದಮನನರಿಯುತ್ತವಂ ಮುಂಚಲೊಡನೆ ಪು | ಷ್ಕಲನಪನರಥವನಗಣಿತಘನಶರಂಗಳಿಂ ಪಿಂದಟ್ಟೈದಂಘಟ್ಟಿಸಿ ‖ ೧೮ ‖

ಆನಿತರೊಳ್ಪ್ರತಾಪಮುಖವೀರರಧ್ಯಕ್ಷ | ರೆನಿಪವೀರರನಿಕ್ಕಿ ಪೊಕ್ಕುಪರಸೇನೆಯಂ | ಕನಕನಲ್ದುರವಣಿಸುತುಗ್ರತರಬಾಣಂಗಳಿಂದೆ ಸದೆಬಡಿಯುತಿರಲು ‖ ತನುಘಾಯವಡೆದರುಣವಾರಿಯಂಕಾರುತಿ | ರ್ಪಿನಮಾನೆಗಳ್ಘೀಳಿಡುತ್ತುರುಳ್ದುವು ಮತ್ತೆ | ಕೆನೆಯುತ್ತೆ ಕುದುರೆಗಳ್ಸೈರಿಸದೆ ಕಣೆಯುಪೊಯ್ಲಿಂಮುಗ್ಗುರಿಸಿಬಿದ್ದುವು ‖ ೧೯ ‖

ಛಿನ್ನಭಿನ್ನಂಗಳಾದುವು ತೇರ್ಗಳಾಪದಾ | ಪನ್ನರಾದರ್ಪದಗರಾವ ಹಾವಿಕ್ಷೋಭ | ಯಂನೋಡಿ ದಮನನಭಿಮಂತ್ರಿಸಿ ಯಥಾವಿಧಿಯೊಳಾಗ್ನೇಯಶರವನಿಸಲು || ತನ್ನಿಶಿತಬಾಣದಿಂದೊಗೆದ ಯಮದೇವತೆಯ | ಕೆನ್ನಾಲಗೆಯವೊಲತಿಭೀಷಣಾಕಾರದುರಿ | ಕೆನ್ನಮೆತ್ತೆತ್ತಲುಂ ರಘುಕುಮಾರನ ಸೇನೆಯಂಹಾಯ್ದು ಬಳಸಿತಹಹಾ ||೨೦||

ಪೊರ್ದುಮಾದಳ್ಕುರಿಯೊಳುರಿಯುತ್ತೆ ಚಂದ್ರಮಂ | ಡಳರುಚಿಯ ಕೊಡೆಗಳುದಯಾರ್ಕಮಂಡಲದಂತೆ | ಪಳವಿಗೆಗಳುರಿದುವು ಸಿಡಿಲ್ತಾಗಲುರಿವ ನಿಡುದಾಳವರಗಳತೆರದೊಳು || ಗಳಪ್ರಚ್ಛವಾಲಂಗಳೊಳ್ಪೊತ್ತೆ ಶಿಖಿತನ್ನ | ಕೆಳೆಯನಂ ಬವದಿಂದೆ ಭಂಗಿಸಿದ ವೈರಮಂ | ತಳೆದುತಗುಳ್ದುರುಪಿದಪನೆಂಬವೋಲೋಡಿದುವು ಹಯಗಳಾಚಾಪರದೊಳು ||೨೧||

ಪೊತ್ತಿಕೊಂಡುರಿದುವು ಧಗದ್ಧಗನೆ ಕಾಳ್ಗಿಚ್ಚು | ಹೊತ್ತಿಕೊಂಡುರಿವಂತೆ ಬಿದಿರಮೆಳೆ ತೇರ್ಗಳಾ | ಹೊತ್ತಿನೊಳ್ಪತ್ತಿಗಳ್ಗಾವರಿಸುತುರಿದುರಿದುಬೂದಿಯಾಗುತ್ತಿರ್ದರು || ಅತ್ತಿತ್ತ ಸೊಂಡಿಲಿಂತುಂತುರ್ಗಳಂಪ್ಯೈಗೆ | ಮತ್ತೇಭಗಳ್ತಳಿಯುತೋಡನೆ ಸೀತ್ಕರಿಪ್ರೋದು | ವೆತ್ತೆತ್ತಲುಂ ಕತ್ತಲಿಸಿದುದಾಕಳನಾಶರಾಗ್ನಿಧೂಮಸ್ತೋಮದೆ ||೨೨||

ಅಂದುಕೇಳ್ಬಂದುದಾಬಲದೆ ಹಾಹಾಕಾರ | ಮೊಂದೆಯಾಬೆಬ್ಬಳವನೀಕ್ಷಿಸಿ ರಘುಪ್ರವರ | ನಂದನಂ ಶಾತಿಗೊಂಡಾಕ್ಷಣಮೆ ವಾರುಣಮಹಾಸ್ತ್ರಮಂ ಮಂತ್ರಿಸಿಸಲು || ಸಂದಣಿಸಿ ಮುಗಿಲ್ಗಳೆತ್ತೆತ್ತಲುಂ ಕವಿಕವಿದು | ಬಂದಬಿರುಮಳೆಯಿಂದೆ ತನ್ಮಹಾಬಾಣದುರಿ | ನಂದಿತರೆನಿಮಿಸದೊಳ್ದಮನಬಲಮುದಕಪ್ರವಾಹದೊಳ್ತಂಕಾಡಿತು ||೨೩||

ನೋಡಿಸೈರಿಸದಂ ಕಲಿದಮನನೋಡನಹಹ | ಮಡಿಗೆಯೊಳೊಂದು ಭೀಷಣಬಾಣಮಂ ತೆಗೆದು | ಹೂಡಿಬಾಣಾಸನದೆ ಮಾರುತಮಹಾಮಂತ್ರದಿಂದದಂಮಂತ್ರಿಸಿಸಲು || ಕೂಡೆಗಗನಾಂತರದೊಳಾರ್ಭಟಿಸುತಿರ್ದಕಾ | ರ್ಮೋಡಂಗಳೆತ್ತಲೋಡಿದುವೊ ರಿಪುಸೇನೆ ಪಾ | ರಾಡಿದುದು ತರಗೆಲೆಗಳಂದದಿಂದಂತರಿಕ್ಷಾಂತರದೆಮತ್ತೆ ಕೇಳು ||೨೪||

ಕೆಡೆದುದು ಪಳಂಚುತೊಂದೊಂದನೊಂದೊಂದಾನೆ । ಕಡಿವಾಣವಿಡಿದೆಳೆದು ಬಲ್ಪಿಂದೆಸಾದಿಗ । ಳ್ತುಡಿದೊಡಂನಿಲಲಾರ ದಶ್ವಾಳಿಪಡಲಿಟ್ಟು ದಿರದೆತೂರ್ದ್ದಪರ್ದಗರು ॥ ಕಡುವೇಗದಿಂದೆವಾಜಿಗಳೊಡನೆ ರಥಗಳಡಿ । ಗಡಿಗೆಪಿಂದುಂಮುಂದುವೋಡಿದುವು ಪಟಪಟನೆ । ಕಡಿವಡೆದುಬಿದ್ದುವು ಪತಾಕೆಗಳ್ತೀರಿದುವುಚಕ್ರವಾ ತಧ್ವಜಗಳು ॥೩೫॥

ದ್ಯುಮಣಿಕುಲನಂದನನದಂನೋಡಿ ಪರ್ವತಾ । ಸ್ತ್ರಮನೊಡನೆಮಂತ್ರಿಸಿಸಲುಭಯಸೇನಾಂತರದೊ । ಳಮಮಗಿರಿಗಳ್ತೀರ್ಕ್ಕವಡೆದು ತಡೆದುವು ಮಹಾಮರುದಸ್ತ್ರದಾರ್ಭಟವನು ॥ ಕ್ರಮವರಿದದಮನನುರೆಮುಳಿದುರವಣಿಸುತಾಕ್ಷ । ಣಮೆತ್ತಿವಜ್ರಾಸ್ತ್ರಮಂಬಿಟ್ಟೊಡದರಿಂದೆ । ನಿಮಿಷದೊಳ್ನಿರ್ನಾಮಮಾದುವಾಪರ್ವತಗಳೇನೆಂಬೆನದ್ಭುತವನು ॥೩೬॥

ಒಡನೆ ರಘುಜಾತನಾಸುರಮಹಾಶಕ್ತಿಯಂ । ಬಿಡಲದಡಗಿಸಿವಜ್ರಶರದುರುಬನೆದೆವೊಕ್ಕು । ಕೆಡಹಿದುದು ದಮನನಂಮುಚ್ಛೆವಡೆಯಿಸಿರಥಾಂತರದೆ ಬಳಿಕಾರಥವನು ॥ ತಡೆಯದಲ್ಲಿಂದೆಸಾರಥಿಪಿಡಂಮೊಟ್ಟೈಸ । ಲ್ಕಡಸಂಡಲುತ್ತಿದುನೋಡಲತ್ತಹಾಹಾರವದ । ಕಡುವೊಯ್ಲುಥಟ್ಟನೇನೆಂಬೆನಾಕ್ಷಣಮಹಾಹವಾಡಂಬರಂನಿಂದುದು ॥೩೭॥

ಶ್ರೀರಾಮನಾಜ್ಞೆಯುಂಮರೆಯುದಾರಘುಕುಲ ಕು । ಮಾರನಧಿನಾಥನಿಲ್ಲದಭಟರನಂಡಲೆಯ । ದಾರಣವನಲ್ಲಿಗೇನಿಲಿಸೆ ಜಯಕಾಹಳೆಶಂಖದುಂದುಭಿಗಳಿತ್ತು ॥ ಘೋರೆಂದುಮೊಳಗಿದುವು ಪಳವಿಗೆಗಳೆತ್ತಿದುವು । ವೀರಜನಸಂಕುಲಂ ವಿಜಯಕೋಲಾಹಳವ । ನಾರಚಿಸಿದುವು ವಿಜಯಿಯಾಗಿಬಂದರಗಿದಂಪುಷ್ಪಲಂ ಸೌಮಿತ್ರಿಗೆ ॥೩೮॥

ಧೀರಬಾರೈವಿದಿತ ರಘುಕುಲಾಲಂಕಾರ । ಬಾರೈ ಮಹಾಶೂರಬಾರೈಮದಗ್ರಜಕು । ಮಾರಬಾರೈ ನಿನ್ನ ವೀರಪ್ರತಿಜ್ಞೆಯುಂ ಸಲಿಸಿದೈ ಭಾಪುಭಾಪು ॥ ಧಾರಿಣೀತಲದೆ ನಿನ್ನಂದದಕುಮಾರರೆ ಕು । ಮಾರರುಳಿದವದಿರೆಕುಭಾರರೆಂದಪ್ಪಿಕೊಂ । ಡಾರಾಮಚಂದ್ರನರಜನವನನೊಲ್ದುಕೊಂಡಾಡಿದಂಸುಭಟರಿದಿರೆ ॥೩೯॥

೧೦ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೧೦ ಕ್ಕೆ ಪದ್ಯ ೪೯ ಕ್ಕೆ ಮಂಗಳಮಸ್ತು.

ಹನ್ನೊಂದನೆಯ ಸನ್ಧಿ.

॥ ಸೂಚನೆ ॥ ಸಮಯುದ್ಧವಾಗೆ ಲಕ್ಷ್ಮೀನಿಧಿಸುಕೇತುಗ । ಳ್ಗಮಿತಬಲನಾಭರತಸೂನು ಚಿತ್ರಾಂಗನಂ । ಸಮರದೊಳ್ಖ್ಯಾತಿಸಿ ಭಯಂಕರ ಕ್ರೌಂಚಕವ್ಯೂಹಮಂ ಭೇದಿಸಿದನು ॥

ಶಮಧನಶಿರೋಮಣಿಯೆಕೇಳ್ಬಳಿಕ ಸುತನವಿಜ । ಯಮನಾಲಿಸಾಲಿಸಿ ಚರರ್ಕಳಿಂದನುಪಮ । ಪ್ರಮುದಾತಿರೇಕದಿಂದುಬ್ಬಿ ಚಕ್ರಾಧಿಪತಿಯುನಿತರೊಳಗೊದಗಿಬಂದ ॥ ಅಮಿತನಹಚತುರಂಗಸೈನ್ಯದಿಂದೊಡಗೂಡಿ । ಸಮರರಂಗಕೆ ತಳರಲುತ್ಸುಕಂಬಡುತಮಿರೆ । ದಮನನಪಜಯಮನರುಪಿದರಾಗಳಾಹವಾಂಕಣದಿಂದೆ ಬಂದಚರರು ॥೧॥

ನಿಮಿಷಮಾತ್ರದೆ ಬತ್ತಿಪೋದುದಾಹರ್ಷರಸ । ಮಮಮಕಡುಶೋಕದಿಂ ಕ್ರೋಧದಿಂ ಕುದಿಯುತ್ತೆ । ಯಮದೇವತಾಕಾರಮಂ ತಳೆದು ಪಲ್ಗಳಂ ಕಟಕಟಿಸುತೌಡೊತ್ತುತೆ ॥ ಸಮಗೊಳಿಸಿಕೊಂಡು ಯುದ್ಧೋಪಕರಣಂಗಳಂ । ಸಮರರಂಗದೊಳಾಂತುಬಂದೊಡಂ ತ್ರಿಣಯನನೆ । ದಮನನಂಕೆಡಹಿದವನಂತೀಕ್ಷ್ಣಶರಗಳಂ ದೊಕ್ಕಲಿಕ್ಕದೆಮಾಣೆನು ॥೨॥

ಎನುತೊಡಂಗೊಂಡು ತದ್ಬಲವನುರವಣಿಸುತ್ತೆ । ಘನವೀರನೆನಿಸಿದಸುಕೇತುವೆಂದೆಂಬತ । ನ್ನನುಜಾತನಿಂದಂ ವಿಚಿತ್ರಚಿತ್ರಾಂಗರೆಂದೆಂಬ ಬಹುಶೂರರಾದ ॥ ತನಯರಿಂದಂಕೂಡಿ ವೀರಯೋಧರಸಿಂಹ । ನಿನದಂಗಳಂವಿವಿಧ ರಣವಾದ್ಯಕಲಕಲ । ಧ್ವನಿಗಳಿಂದೊಡೆವನೆಂಬಂತೆವೊಲಜಾಂಡಮಂ ಬಂದನಾರಣರಂಗಕೆ ॥೩॥

ಆಧರಣಿನಡುಗುವಂತೈತಹಸುಬಾಹುಭೂ। ಮೀಧವನಸೇನೆಯಂನೋಡಿ ಶತ್ರುಘ್ನನಾ । ಯೋಧನಕೆ ನಿಜಸೇನೆಯಂಸಜ್ಜುಗೊಳಿಸಲ್ಸುಕೇತುನೃಪಮುಖ್ಯರಾದ ॥ ಯೋಧಾಗ್ರಗಣ್ಯರೊಡನಾತ್ಮೀಯಬಲಮಂವಿ । ರೋಧಿಬಲಕಿದಿರಾಗೆ ಕಾಳಗಕೆಮುನ್ನಿಲಿಸಿ । ಮೇಧಾವಿಸುಭುಜನತಿಗಾಢಮೂರ್ಛೆಯನಾಂತಯುವರಾಜನಂಸಾರ್ದನು ॥೪॥

ಕಂಡವಂಘಾಯುವಡೆದೊಡಲಿಂದೆ ಕೆದಕೆದರ್ದ | ಮಂಡೆಯಿಂನೆತ್ತರೊ
ಳೆನಾಂದು ಕೆಂದಾವರೆಯ | ನಂಡಲೆವನುಱೆಗ್ಗಗದಸಿರಿಯಿಂದೆ ವೀರಲಕ್ಷಣದಿಂ
ದೆಯುಂವೆರೆಯುತೆ || ದಿಂಡುಗೆಡೆದ್ದೈದೆಮೂರ್ಛಿತನಾದ ದಮನನನ | ಖಂಡ
ಶೌರ್ಯನನಂಕಪೀಠದೊಳ್ಪಟ್ಟಿರಿಸಿ | ಕೊಂಡು ಮಿಡಿಮಿಡಿಯುತ್ತೆ ಕಣ್ಣನೀರ್ವನಿ
ಗಳಂ ಶೋಕಿಸುತ್ತಿಂತೆಂದನು ||೫||

ಏಳೆನ್ನ ಕಂದನೀನೇಳೆನ್ನ ಮಾನಸಮ | ರಾಳ ನೀನೇಳೆನ್ನ ವಂಶಮು
ಕ್ತಾಮಣಿಯೆ | ಪೇಳದೇನೆನ್ನೊಡನೆಮಾತಾಡದಿಹುದಿಂತು ಯುವರಾಜನೋ
ಡೆನ್ನನು || ತಾಳದಾಯುಧವನೇರದೆ ವಿಜಯರಥವನರಿ | ಜಾಳವಂಪರಿಭವಿ
ಸದಿಂತು ನಿದ್ರಿಪರೆನೀ | ನೇಳಿಂನು ಸಂತವಿಸುತುಪಚರಿಸೆತರದಿಂದವಂಮೂ
ರ್ಛೆತಿಳದೇಳುತೆ ||೬||

ಎಲ್ಲಿತಾನೆಮ್ಮ ಬಲಮೆಲ್ಲಿನ್ನ ಕೋದಂಡ | ಮೆಲ್ಲಿ ಪುಷ್ಕಲನೆನುತ್ತೆದ್ದು
ಕಂದೆರೆದು ನೋ | ಳ್ಪಲ್ಲಿಮುಂದಿಹತಂದೆಯಂ ಕಂಡು ಪದಕೆರಗಲವನಂ ಸು
ಬಾಹುನೃಪತಿ || ಪಲ್ಲವಿಸಿದಾನಂದದಿಂದಪ್ಪಿಮಗುಳ್ ರಥ | ದಲ್ಲಿ ಕುಳ್ಳಿರಿಸಿಸಂತ
ವಿಸಿ ನಿಜವಾಹಿನೀ | ವಲ್ಲಭಂಗೊಡನೆ ನೀಂ ಕ್ರೌಂಚಕವ್ಯೂಹವಂ ರಚಿಸೆಂ
ಮ ಬೆಸನಿತ್ತನು ||೭||

ಒಡನೆ ಚತುರಂಗಸೈನ್ಯವನನುಕ್ರಮದೆವಿಂ | ಗಡಿಸಿನಿರ್ಮಿಸಿದನಾಸೇ
ನಾಧಿಪಂ ಕ್ರೌಂಚ | ದೊಡಲಂದದಿಂ ಶತ್ರುಜನದುಷ್ಪ್ರವೇಶಮಂವ್ಯೂಹಮಂ
ಜಾಣ್ಮೆಯಿಂದೆ || ಕಡುಗಲಿ ಸುಕೇತುಮುಖಭಾಗದೊಳಗದರಕೊರ | ಳೆಡೆ
ಯಲ್ಲಿ ಚಿತ್ರಾಂಗನುರುಬಲನೆರಂಕೆಗಳ್ | ರಡರೆಡೆವಿಚಿತ್ರನುಂ ದಮನನುಂ
ಪುಚ್ಛದೆಡೆರಾಯನುಂನಿಂದೆಸೆದರು ||೮||

ವ್ಯೂಹಗೊಂಡುಲ್ಲೋಲಕಲ್ಲೋಲಕುಲಜಟಿಲ | ವಾಹಿನೀನಾಥನಂ
ತಿರೆವ್ರೊಲಾರ್ಭಟಿಸುವಾ | ಮೋಹರವನೋಡಿ ಶತ್ರುಘ್ನನೀದಳವೆತ್ತಣಿಂಬಂ
ದುದಿದರಪವಣೆ || ಊಹಿಸಲ್ಬರಿದೆಂದು ಬೆಸಗೊಂಡೊಡಾಸುಮತಿ | ಬೇಹಿನವ
ರಿಂಕೇಳ್ದು ಸುತನ ಪರಿಭವಮಂಸು | ಬಾಹು ನೃಪನಿಂತು ಬಹು ಸೈನ್ಯಸ
ನ್ನಾಹದಿಂ ಬಂದಿರ್ಪನೇವೇಳ್ವೆನು ||೯||

ಈನೃಪತಿ ಧರ್ಮಪರನೈದೆಸತ್ಯವ್ರತಂ । ಶ್ರೀನಾಥಪದಕಮಲಹಂಸಾಯಮಾನನಿಜ । ಮಾನಸಂ ನಿಜಸತೀಮಾತ್ರಪರನೊಡಹುಟ್ಟಿ ಪರಕಾಮಿನೀಲೋಕದ ॥ ಮಾನನಿಧಿಕೇಳೀ ಧರಾಮಂಡಲದೊಳವನ । ಸೇನೆಯುಂ ತಾರಸೇನೆಯುಮಿಲ್ಲ ಮಿವನ ಸಂ । ತಾನಮತಿಶೂರರೆಣಿಕೆಗೆ ಸಂದುದೀತನಂಗೆಲ್ವುದಸದಳವೆಂದನು ॥೧೦॥

ಶೌರ್ಯದಿಂದೀಬಲವನೊಕ್ಕಲಿಕ್ಕದೊಡೆ ನಾ । ನಾರ್ಯರಾಘವನತಮ್ಮನೆ ಕೇಳಿರೈ ವೀರ । ವರ್ಯರಿರ ಜಾನಕಿಪ್ರಮುಖರಿರ ನಿಮ್ಮೊಳೀವ್ಯೂಹಗೊಂಡಿಹಬಲವನು ॥ ಧೈರ್ಯದಿಂದೆಡೆದುಕೊಂಡೊಳಪೊಕ್ಕು ಮರಳಬಹ । ಕಾರ್ಯದೊಳಗದಟರ್ಪರ್ ಶೂರರೆನ್ನಯಕರದೆ । ಮರ್ಯಾದೆಗೀವೀಳಯಮಕೊಳಲೆನುತ್ತೊಡನೆ ಸೌಮಿತ್ರಿ ಬೆಸಗೊಳಲ್ಕೆ ॥೧೧॥

ಆನುಡಿಯಕೇಳ್ದು ನಿರ್ವ್ಯಾಲಭುಜವೀರ್ಯ ಲ । ಕ್ಷ್ಮೀನಿಧಿಯೆ ನಿಪ್ಪಲಕ್ಷ್ಮೀನಿಧಿರ್ಝಳಕ್ಕನೆ । ದ್ದಾನೆಪುಗುವಂತೆ ಬಾಳೆಯತೋಂಟಮಂಪುಗುವೆನೀಕ್ರೌಂಚಕವ್ಯೂಹವ ॥ ಮಾನವಕುಲಾಭರಣ ಕೇಳ್ವುದಲ್ಲಿರ್ಪ ಸುಭ । ಟಾನೀಕಮಂ ಬಿಡದೆ ಶರವೃಷ್ಟಿಯಿಂದಿಕ್ಕಿ । ನಾನಿತ್ತ ಮರಳಿಬರಬಲ್ಲೆನೆನಗೀವೀಳಯಮನೀಯಮೇಳ್ಕುಮೆನಲು ॥೧೨॥

ಭಾಪುಮಝಭಾಪುಲಕ್ಷ್ಮೀನಿಧಿಯೆ ವೈದೇಹ । ಭೂಪಾಲಕುಲದೀಪನೀನೈಸೆವೀರಂ ಪ್ರ । ತಾಪಸಾಗರನೆಂದು ಕೊಂಡಾಡಿ ವೀಳಯಮನಿತ್ತವನಸಂಗಡಾರು ॥ ಪೋಪರೆನಲೊಡನೆ ಭರತಾತ್ಮಜಂ ತಾನೆದ್ದು । ಪೋಪೆನಾನಿವಗೆ ಕಯ್ನೆರವಾಗೆನುತ್ತೆ ವಿ । ಜ್ಞಾಪಿಸಿದೊಡಾಸುಮಿತ್ರಾಸೂನುಮಂತಕ್ಕೆಮೆಂದು ಶಾಸನವಿತ್ತನು ॥೧೩॥

ಒಡನೆ ಸನ್ನದ್ಧರಾಗಾವೀರರಿರ್ವರುಂ । ಪಿಡಿದುಕೋದಂಡಮಂ ತಂತಮ್ಮ ಜಯರಥವ । ನಡರಿಪೆರ್ಬಡೆಯನೊಡಗೊಂಡಗ್ನಿ ಪವಮಾನರಡವಿಯನಿದಿರ್ಚುವಂತೆ ॥ ಪಡಿಮೋಹರವನಿದಿರ್ಚುತೆನಡೆಯೆ ಶತ್ರುಹಂ । ಕಡುಗಲಿಗಳೆನಿಪರಿಪುತಾಪಾದಿವೀರಭಟ । ರೊಡನೆ ಸಕಲಾಸ್ತ್ರಸನ್ನಾಹದಿಂದೊತ್ತಾಸೆಯಾಗವರ್ಗೆಪಿಂದಿರ್ದನು ॥೧೪॥

ಪ್ರಳಯಮಂ ಪೂರ್ದಿಸಲ್ಕು ಭುವನಮಂ ತೊಡಗಿವೆ । ಗ್ಗಳಿಸುವಂಬುಧಿಗಳಂತಿರೆವೊಲಾರ್ಭಟಿಸುತಾ । ದಳವೆರಡು ಮಿದಿರಾನಲಿತ್ತಂಡದೊಳ್ಪಲವುಕಾಹಳೀದುಂದುಭಿಗಳ ॥ ಮೊಳಗುಗಳು ಮಾನೆಗಳ ಘೀಂಕೃತಿಗಳುಂ ಕುದುರೆ । ಗಳ ಹೇಷಿತಂಗಳುಂ ತೇರ್ಗಳುಲಿವುಗಳುಮಾ । ಳ್ಗಳ ಸಿಂಹರವಗಳುಂ ಕೂಡಿ ಶಬ್ದಬ್ರಹ್ಮಮಯಮೆನಿಸಿದುದು ಜಗವನು ॥೧೫॥

ಪರಮಮಾನೀಂದ್ರ ಕೇಳಾ ರಣಾಂಗಣದಲ್ಲಿ । ವರರಥಿಕಲೋಕದ ಕಿರೀಟಪರಿಖಚಿತಮಣಿ । ಕಿರಣಧೋರಣಿಸುರಪಚಾಪದಂತಿರೆಮೆರೆಯೆ ವೀರಸುಭಟಾನೀಕದ ॥ ಉರುಸಿಂಹನಾದದಬ್ಬರಮೆ ಗರ್ಜಿತಮಾಗೆ । ಪರಿಪರಿಪರಂ ಪರಾವ್ರತರ್ಕಳ ಕರಾಳತರ । ಕರವಾಳಗಳ ಪೊಗರೆ ಮಿಂಚಾಗಲೆಡೆವಿಡದೆ ಕಣೆಯ ಬಿರುವಳೆ ಕರೆದುದು ॥೧೬॥

ಬಳಿಕ ಜಾನಕಿ ಸುಕೇತುವ ನಿದಿರ್ಚಿಲವೊ ಪೆಂ । ಕುಳಿಯೆ ಪಡಿಯುರನ ವ್ರೋಲೇಕಿಲ್ಲಿ ನಿಂದಿರ್ಪೆ । ಬಲದಕಯ್ಯುರವನುಳಿದಿತ್ತ ಬಾನೀನಾಗೆ ಶೂರನೆನ್ನೊಡನೆ ಕಾದು ॥ ತಿಳಿವುದಾ ಬಳಿಕ ನಿನ್ನಳವಿಯುಥವಾವ್ಯೂಹ । ಗೊಳಿಸಿದೀ ಚತುರಂಗಬಲದೊಡನೆ ನಿನ್ನನರೆ । ಗಳಗೆಯೊಳ್ಯುಮಪ್ರರಾತಿಥಿಯನಾಗಿಸದೆ ಬಿಡೆನಾನೆಂದು ಜೇವಡೆದನು ॥೧೭॥

ಆನುಡಿಯ ಕೇಳ್ದೊಡನೆ ಕಡುಕೋಪದಿಂದೆ ಸುಭಟಂ । ಜಾನುಜಂತಿರುವೇರಿಸಿ ನಚಾಪವಮಂ ಮಿಡಿದು । ಜಾನಕಿಯ ಮೇಲೆಚ್ಚನೆಲೆಗಾಂಪ ಬರಿದೆಗಳ ಹದಿರೆನುತ್ತಂಬುಗಳನು ॥ ತಾನವಂ ನಿಜಶರಗಳಿಂದೆಕತ್ತರಿಸಿ ಲ । ಕ್ಷ್ಮೀನಿಧಿ ಸುಕೇತುವಂ ಕಣೆಗಳಾರಿಂದಿಕ್ಕ । ಲಾನಿಶಿತಬಾಣಂಗಳವನೆದೆಗೆ ತಾಗಿದೊಡವೊಳವುಗದೆ ಬಿದ್ದುವಿಳೆಗೆ ॥೧೮॥

ಕರದೊಳಹವಲ್ಲಕಿಗೆ ಮೌನವ್ರತವನಿತ್ತು । ಸುರಮುನಿಪನಾಗಸದೊಳತಿಮಾತ್ರ ಕುತುಕದಿಂ । ನಿರುಕಿಸುತ್ತಿರೆ ಭಟಾವಳಿವಿಸ್ಮಯಂಗೊಂಡು ಭಾಪುಭಾಪೆಂದು ಪೊಗಳೆ ॥ ವಿರಮಿಸದೆ ಖಣಿಲುಖಣಿಲೆಂದಲಗುಗಳಪರ । ಸ್ಪರಘಟ್ಟನದೊಳೊಗೆದದನಿಕೇಳ್ಗೋಚರಿಸ । ದಿರೆ ಕಣೆಯ ತೆಗೆವ ಪೂಡುವ ಬಿಡುವ ಮಾಳ್ಕೆಯೆಚ್ಚಾಡಿದರ್ಬಳಿಕಿರ್ವರೂ ॥೧೯॥

ರಕುತದಿಂನಾಂದವಜ್ರಪ್ರಕರಕಲಿತ ಕಂ । ಚುಕವುವೊಳ್ಮುತ್ತುಗಳಹಾರವುಂ ನೋಡೆ ಮಾ । ಣಿಕವುಯುಗಳಂಬಂತೆಮಿನುಮಿನುಗೆ ಮೊಗವರುಣವಾರಿಯಂ ಸುಳಿಸುತೆ ॥ ಪ್ರಕಟಮೆನಲುದಯಾಸ್ತಕಾಲಿಕನದಿವಸನಾ । ಯಕನಮಂಡಲದಂತೆ ಪರಿಶೋಭೆವಡೆಯೆ ಸಮ । ಧಿಕವೀರರಸದುಜ್ವಲನ್ಮೂರ್ತಿಗಳೊ ಎಂಬವೋಲವರದೇನೆಸೆದರೋ ॥೨೦॥

ಘಟ್ಟನಾಸಮಯದೊಳ್ವಸುಸಂಖ್ಯಶರಗಳಂ । ದಿಟ್ಟಲಕ್ಷ್ಮೀನಿಧಿನಿಷಂಗವುಖದಿಂತೆಗೆದು । ಘಟ್ಟಿಸಿದನಾಸುಕೇತುವರಥಾಶ್ವಂಗಳಂನಾಲ್ಕರಿಂ ಸಾರಥಿಯನು ॥ ಅಟ್ಟಿದಂಯುಮಪುರಕೊಂದರಿಂದಂತುಗುರಿ । ಗಟ್ಟಿಕೇತುವನೊಂದರಿಂಕಡಿದನೊಂದರಿಂ । ನಟ್ಟನಡುಕತ್ತರಿಸಿದಂಧನುವನೊಂದರಿಂತಾಟಿಸಿದನವನೆದೆಯನು ॥೨೧॥

ಒಡನತಿವ್ಯಥಿತನಾಗದರಿಂಸುಕೇತುಗದೆ । ವಿಡಿದುರಥದಿಂದಿಳಿದಿದಿರ್ಚಿಲಕ್ಷ್ಮೀನಿಧಿಯ । ನಡಿಯಕಡುಮೆಟ್ಟುಗಳನವನಿಯಂ ನಡುಗಿಸುತೆಕಣ್ಗಳಂ ಕೋಪಾಗ್ನಿಯು ॥ ಕಿಡಿಗಳಂಕೆದರುತುರವಣಿಸಿ ಬರೆವೈದೇಹಿ । ಚಡವುಡನೆರಥವುಳಿದುತಾನು ಮುರುಗದೆಗೊಂಡು । ಫಡಫಡಾನಿಲ್ಲೆಂದಾಂತುರಭಸದೆಘಟ್ಟಿಸಿದನದರೊಳವನೆದೆಯನು ॥೨೨॥

ಆದರಿಂದೆಸುಭುಜಾನುಜಂಪಸುಳೆಯಿರದೆಲೋ । ಷ್ಠದಿನಿಕ್ಕಿದಾನೆಯಂ ತೆವೋಲಣಂನೋಯಮುರು । ಮುದದಿಂದೆಕೇಳೆಲವೊಬಣಗುನೀಂ ಕಲಿಯಾಗೆ ಸ್ಥೈರಿಸೀಪೆಟ್ಟನೆನುತೆ ॥ ಗದೆಯಿಂದೆಲಕ್ಷ್ಮೀನಿಧಿಯಪಣೆಯನಿಕ್ಕಲಾ । ತದೆಯಿಂದವಂನೊಂದು ತನ್ನಗದೆಯಿಂದಮುವ । ನೆದೆಯನತಿರಭಸದಿಂಪೊಯ್ದುನೆಲೆಹಂದೆನೀಂಸ್ಥೈರಿಸೀಪೆಟ್ಟನೆಂದು ॥೨೩॥

ಎದೆಯೊಳಂಪೆಗಲೊಳಂ ಪಣೆಯೊಳಂ ಶಿರದೊಳಂ । ತದೆತದೆಯುತವರಿಂತುಕಾದುತಿರಲಾಗದಾ । ಗದಿಯನೀಕ್ಷಿಸಿಭಟಾವಳಿ ಭಲರೆಭಲರೆಂದು ತಕ್ರದೂಗಿತಾಸಮಯದೆ ॥ ಮದವೇರಿದಾನೆಯಂತುರವಣಿಸಿ ಜನಕಜಂ । ಗದೆಯಂ ಶಿರಕ್ಕೆಗುರಿನೋಡಿಬೀಸಿಟ್ಟೊಡವ । ನವಕಾನದೋಸರಿಸಿವಿಧಿಯೋಗದಿಂ ಬದುಂಕಿದನದೇನಾಶ್ಚರ್ಯವೋ ॥೨೪॥

ಬಳಿಕವಂಗಹಗಹಿಸಿ ಬೊಬ್ಬಿರಿಯೆ ಜನಕಜಂ | ಮುಳಿದುರೆನಿಯುದ್ಧ
ಕ್ಕೆಸನ್ನದ್ಧನಾದನೀಂ | ಕಲಿಯೊತಾನವರೊಡನೆಬಿಡದೆ ಬಾಹೂಬಾಹವಿಯ
ಕಚಾಕಚಿಯುಮತ್ತ || ತಳತಮುಷ್ಟೀಮುಷ್ಟಿಯುರುವವೋಡಾವೋಡಿ |
ಯಳಿಯದಂತಪ್ಪಮೈಲುಳಯಖಾಡಾಖಾಡಿ | ಯೊಳ್ಪೊಣಪೊಣರ್ದೊಂದು
ದಿನಮಿರ್ವರುಂಬಳಬಳಲ್ದು ಕಟಬಸವಳಿದರು ||೨೫||

ಪೂತುರೇಲಕ್ಷ್ಮೀನಿಧಿಯೆ ಭಾಪುಭಾಪ್ಪುರೆ ಸು | ಕೇತುಮೇ ಮಝುಭಾ
ಪುನೀವಿರ್ವರಹುದೆ ವಿ | ಖ್ಯಾತಭುಜಸತ್ವಸಾಹಸರಾಹ ನಿಮ್ಮಜನ್ಮವೆಸಫಲ
ವಾದುದೆಂದು || ಮಾತೆತುಂಬಿತ್ತು ವೀರರಬಾಯೊಳಾರಣದೆ | ಖ್ಯಾತಿಗೊಂಡಾ
ಬಳಿಕ ಚತುರಂಗಸೇನಾ ಸ | ಮೇತನಾಗಾವ್ಯೂಹಕಂಠದೆಡೆಯಿರ್ದ ಚಿತ್ರಾಂಗ
ನಾಹವಕೆ ತೊಡಗಿ ||೨೬||

ಬಂದುಪಜ್ಜೆಯನಾದೊಡಂರಾಘವನಸೇನೆ | ಮುಂದಡಿಯ ನಿಡದಂತೆ
ಕಣೆಮಳೆಯಕರೆಯುತ್ತೆ | ಪಿಂಪಟ್ಟುತಿರಲದಂ ಕಂಡವನನೊಡನೆ ಖತಿಗೊಂಡು
ಪುಷ್ಕಲನಿದಿರ್ಚಿ || ನಿಂದುಜೇವಡೆದು ಕಾಂಚನಕಿಂಕಿಣಿಶ್ರೇಣಿ | ಯಿಂದೆಸೆವ
ಚಾಪವನಸಂಖ್ಯಾತಶರಗಳಂ | ಕಂದೆರೆದು ಬಿಡುವನಿತರೊಳ್ಮುಸುಂಕಿದನರಿಯ
ತೇರನಾ ಮೋಹರವನು ||೨೭||

ಸೆಣಸುಮಿಗಲಾವೀರನಿಷುಗಳಂ ಕತ್ತರಿಸಿ | ದೆಣಿಕೆಯಿಲ್ಲದ ಸೈನಿಕರ
ತಲೆಗಳಾರಣಾಂ | ಗಣದೊಳುರುಳಿಡಿದುವು ತಳೆದ ಸೀಸಕದೊಡನೆತೆರಪಿಲ್ಲ
ದಂತೆಲ್ಲಿಯುಂ || ಕ್ಷಣಕಾಲವೊಡನೊಡನೆ ತಲೆಯುರಿದಮುಂಡಗ | ಳ್ಕಣಿಕುಣಿ
ದುಮಾನೆಗಳ ಕುದುರೆಗಳ ತಿಂಥಿತಿಂ | ಥಿಣಿನುಡಿದುರುಳ್ದುದಿಳೆಗಂದಳಿಯದವ
ರಿಲ್ಲಮವನಿದಿರೆಬಂದಭಟರು ||೨೮||

ಚಂಡವಿಕ್ರಮರಾದ ಚಿತ್ರಾಂಗಪುಷ್ಕಲರ | ಕುಂಡಲಿತಚಾಪಗಳೆತೋ
ರ್ದುವೀಕ್ಷಿಪೊಡೆ ಕೋ | ದಂಡದೊಳ್ಕಣೆಗಳಂ ಪೂಡಿದುದುಮೆಚ್ಚಿದುಂತೋ
ರ್ದುದಿಲ್ಲಿಪ್ಪಸರದೆ || ಖಂಡಿಸಿದ ಪಲವು ಕೋಟೀರಪತ್ರಿಗಳ ಮಕುಟ | ಮಂ
ಡಿತಶಿರಂಗಳೇಕಂಡುವು ರಣಕ್ಕೆ ಮಾ | ರ್ಕೊಂಡುದುಂಬಾಣಹತಿಗೊಂಡುದುಂ
ಕಂಡುದಿಲ್ಲಾ ಘೋರಸಂಗರದೊಳು ||೨೯||

ಆಸುಬಾಹುಪಭರತತನುಜಾತರಾ ತಾರ | ಕಾಸುರಮಯೂರವಾಹನರಂತೆ ಕಾದುತಿರ | ಲಾ ಸಮರದೊಳ್ತುಂಬಿತುಳುಕಾಡಿತದ್ಭುತಭಯಾನಕರಸಂಗಳಮಮಾ || ಕೋಸಲೇಶ್ವರಬಾಲನಾಬಳಿಕ ತೆಗೆತೆಗೆದು | ಸೂಸಿದೊಡೆ ಚಿತ್ರಾಂಗನೆದೆಗೆನೂರ್ಕಣೆಯುಮಂ ವಿ| ಳಾಸದಿಂ ಮೂರ್ಕಣೆಗಳಿಂದವಂಕಡಿದಿಕ್ಕಿಬೊಬ್ಬಿರಿದನಾವೀರನು ||೩೦||

ಬಳಿಕ ತೆಗೆದೆಚ್ಚೊಡಖಿಲಾಸ್ತ್ರವಿದನಾದಪು | ಷ್ಕಲಕುಮಾರಂಭ್ರಾಮಕಾಸ್ತ್ರಮಂಕೂಡೆ ಬಾಂ | ದಳದೊಳಾಸೌಬಾಹವನರಥಂ ತಿರುತಿರುಗಿಬುಗುರಿಯಂತಿರೆ ಗಿರ್ರನೆ || ಇಳೆಗೆಬಿದ್ದುದು ತುಮುರುತುಮುರಾಗಿಹಯಸೂತ | ರಳಿಯೆ ಚಿತ್ರಾಂಗನುಂ ಕೆಡೆದು ತಲೆಸುತ್ತಿನೆಲೆ | ಗೊಳದೆ ತಿರುತಿರುಗಿಬಲ್ಯತನದಿಂ ನಿಂದೊಡನೆ ಪುಷ್ಕಲಂಗಿಂತೆಂದನು ||೩೧||

ಭಾರತಿ ಮಹಾಶೂರನಹುದೊ ನೀಂನೋಡೆನ್ನ | ಪೌರುಷವನೆಂದು ಬೇರೊಂದು ರಥವೇರಿ ತಾ | ನಾರೀತಿಯಿಂಭ್ರಾಮಕಾಸ್ತ್ರಮನೆ ತೆಗೆದಿಸಲ್ಪುಷ್ಕಲರಥಂ ಗಗನದೆ || ಪಾರಿವದಪರಿಯಿಂದೆಸುತ್ತಾಡಿ ಸುತ್ತಾಡಿ | ಧಾರಿಣಿಗೆ ಶಿಥಿಲಮಾಗುರುಳೆ ಪುಷ್ಕಲನುಸುರ | ನಾರಯ್ವನಿತರೊಳಗೆ ಮತ್ತೊಂದು ಶರದಿಂದೆ ಮತ್ತದಂ ತಿರುಗಿಸಿದನು ||೩೨||

ಬಳಿಕ ಬಲ್ಯತನದಿಂ ಪುಷ್ಕಲಂ ನೆಲೆಗೊಂಡು | ಫಳಿಲನಿನ್ನೊಂದುರಥವೇರಿ ಪಲಗಣೆಗಳಿಂ | ಸೆಳೆದುಬಿಟ್ಟರಿಯರಥವಂ ಛಿನ್ನಭಿನ್ನವಾಗಿಸೆ ಮತ್ತಮೊಂದು ರಥದೆ || ಕುಳಿತವಂಬರಲದುಮನಾತೆರನಗೈದು ಪು | ಷ್ಕಳನಿಂತು ದಶರಥವನರಿಯೆಸೌಬಾಹವಂ | ಮುಳಿದಾದಮುರವಣಿಸುತೊಡನೊಡನೆ ಪುಷ್ಕಲನಮೇಲೆಚ್ಚನೈದಂಬನು ||೩೩||

ಆಪೆಟ್ಟನಿಂದೈದೆನೊಂದ ಪುಷ್ಕಲನಧಿಕ | ಕೋಪದಿಂದುಜ್ವಲಿಸುತತ್ಯುಗ್ರಮಾದೊಂದು | ರೋಪಮಂತೆಗೆದು ಮೌಡಿಗೆಯಿಂದೆ ಚಿತ್ರಾಂಗನಂ ನೋಡುತೆಲವೊ ಹಂದೆ || ಈಪ್ರಾಣುಂಬರಿಯದಿರ್ದೊಡೆ ನಿನ್ನ ಶಿರಮಂ ಮ | ಹಾಪುಣ್ಯತಮತೀರ್ಥಯಾತ್ರೆಗೆಡರಂಗೈದ | ಕಾಪುರುಷನಘಮೆನ್ನನಂಟುವುದೆನುತ್ತೆ ಸೂರುಳ್ದಂ ಬಿಲ್ಗೇರಿಸಿ ||೩೪||

ಸೇವಿಸಿದೊರ್ಡೆ ರಾಮನಡಿಯುಮನಾಂ ನಿಷ್ಕಪಟ | ಭಾವದಿಂ ನಿಜಮಹಿಳೆಯುಂ ಬಿಟ್ಟು ಬಗೆಯೊಳುಂ | ಭಾವಿಸದೆ ಪರಸತಿಯುಮನಾನಿರ್ದೊಡೆನ್ನ ವಚನಂ ಸತ್ಯವಾಗಲೆಂದು ‖ ಆವುಗ್ರಬಾಣಮಂ ತೆಗೆದೆಚ್ಚನೊಕ್ಕಣೆಯೊ | ಳಾವೀರ ಚಿತ್ರಾಂಗನರಿಯೆ ಪೂರ್ವಾರ್ಧಮುದು | ಬೂವಿಯೊಳ್ಕೆಡೆದುದು ಸುಬಾಹುಜನಶಿರವನಪರಾರ್ಧಮುದು ಖಂಡಿಸಿದುದು ‖೩೫‖

ಎಲೆಮುನಿಪ ಶತ್ರುಘ್ನಬಲಮೆಲ್ಲಿ ಚಕ್ರಪತಿ | ಬಲಮೆಲ್ಲಿದಾವಾಗ್ನಿಯೆಲ್ಲಿ ಕಾನನಮೆಲ್ಲಿ | ಕಲಹವೇ ಭರತಸುತನೊಡನೆ ಚಿತ್ರಾಂಗಂಗೆ ಹರಿಣಕ್ಕೆ ಹೋರಾಟವೆ ‖ ಪುಲಿಯೊಡನೆ ಕಾಳಗವೆ ಗರುಡನೊಡನುರಗಕ್ಕೆ | ನೆಲದೊಳ್ನೆಗಳ್ದ ರಘುಕುಲದರಸರೊಡನೆನಿತು | ಬಲವಂತರೆನಿಸಿರ್ದೊಡಂ ಪ್ರಾಣರಲಧಟರ್ಪ್ರಾರೀ ಜಗತ್ರಯದೊಳು ‖೩೬‖

ಕೆಡೆದಂತೆ ಸುಭುಜನೃಪನುತ್ಸಾಹಮಾರಣದೆ | ಕಡೆವುದುಂ ಚಿತ್ರಾಂಗ ನಾಬಳಿಕ ತನ್ನಪೆ | ರ್ಪಡೆಯೊಡನೆ ದಳದುಳನೆ ಪೊಕ್ಕು ಮಹಾವ್ಯೂಹದಂತರವನುರವಣಿಸುತೆ ‖ ಬಡನೊಡನೆ ಪೊಪರೆದ್ದ ಮಧ್ಯಗತಸೇನೆಯುಂ | ಜಡಿದಿಕ್ಕಿ ಜಯಮಾಂತು ನಿಃಕಟಕಮಂ ಸಾರ್ದ | ನೊಡಗೂಡಿ ಮೂರ್ಛೆ ತಿಳಿದೆದ್ದ ಜಾನಕಿಯಿಂದೆ ರಾಮಚಂದ್ರಾನುಜನು ‖೩೭‖

೧೧ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೧೧ಕ್ಕೆ ಪದ್ಯ ೫೩೬ಕ್ಕೆ ಮಂಗಳಮಸ್ತು.

ಹನ್ನೆರಡನೆಯ ಸಂಧಿ.

ಸೂಚನೆ॥ ವೀರಚೂಡಾಮಣಿ ಸುಬಾಹು ನೃಪನಾಹವದೆ। ಮಾರುತಿಪದಸ್ಪರ್ಶಮಹಿಮೆಯಿಂಸ್ಮರಣಕ್ಕೆ । ತೋರಿಬರೆಪೂರ್ವಶಾಪಂಕುದುರೆಯೊಡನೆ ಶತ್ರುಘ್ನಂಗೆವಶನಾದನು ॥

ಪರಮಮಾನಿನ್ನರ್ಕೇಳೈಬಳಿಕವಿಜಯದಿಂ । ಮೆರೆವಕಲಿಪುಷ್ಕಲಂ ಲಕ್ಷ್ಮಣಾನುಜನಪದ। ಕೆರಗೆ ವಾದ್ಯಂಗಳಬ್ಬರದೊಡನೆ ವಿಜಯಕೋಲಾಹಲವ ನಿತ್ತಲ್ಲರು ॥ ವಿರಚಿಸಿದರತ್ತದೂರದೊಳಿರ್ದ ಚಕ್ರಪತಿ । ಚರರರಮುಖದಿಂ ದೆಚಿತ್ರಾಂಗನಳಿವಂಕೇಳ್ದು । ನಿರವಧಿಕಶೋಕರೋಷಂಗಳಂ ದುರಣಿಸುತೊಡನಲ್ಲಿಗೈತಂದನು ॥೧॥

ಧರೆಗುರುಳ್ದನಬಿಂಬದಂದದಿಂ ನಾಳದಿಂ । ತಿರಿದ ಕೆಂದಾವರೆಯಚಂದದಿಂದೆಸೆಯುತ್ತೆ । ಭರತಸುತನಂಬಿನಿಂ ಖಂಡಿಸಿದಸುತನಾಸ್ಯಮಂ ನೋಡಿ ಕಣ್ಣೀರನು ॥ ಸುರಿಯಿಸುತೆ ಪಣೆಯನಿರ್ಕೆಯ್ಗಳಿಂ ಬಡಿದುಕೊಳು । ತರದೆ ಹಾಮಗನೆನಿಮ್ಮಯ್ಯನಾಂ ಬಂದಿಹೆಂ । ನಿರುಕಿಸೇತಕೆಮುಸುಕಿಕೊಂಡಿರ್ಪೆ ಕಣ್ಮಲರನೆಂದಮಂರೋದಿಸಿದನು ॥೨॥

ಏತಕೆನ್ನಂನೋಡೆ ತಲೆವಾಗಿವಿನಯದಿಂ । ಪ್ರೀತಿಮಿಗಲಮೃತರಸಧಾರೆಗಳನೆರೆವಸವಿ । ಮಾತುಗಳನೇತಕೆನ್ನಂ ಸಂತಸಂಗೊಳಿಸದಿರ್ಪೆಪೇಳೆನ್ನರಸನೆ ॥ ನೀತಿಯೇನಿನಗೆ ನಿಖಿಲಾಗಮಾಭಿಜ್ಞಪೇ । ಈತೆರದೊಳಿಹುದೆನ್ನೊಳೇಕಿಂತುಮುನಿಸಾಂತೆ । ಹಾ ತಂದೆಯೆನ್ನ ಕಣ್ಮುಂದೆ ನೀನಿಂತಾಗುವರೆಯೆಂದು ಗೋಳಿಟ್ಟನು ॥೩॥

ನಿನಗಂಜದೆಂತು ಜವರಾಯನಿನ್ನಂತನ್ನ । ಮನೆಗೊಯ್ದನಹಹಾಮಹಾವೀರ ರಣಧೀರ । ಕೊನೆಮುಟ್ಟಿಸದೆ ಕುದುರೆಯಂ ತಡೆದಕಾರ್ಯಮಂನೀನಿಂ ತಂನಿದ್ರಿಸ[illegible]ರೆ [illegible]ನಿಂದ[illegible]ರ ಗಳದೆ[illegible]ನಿ ನವರ । ಹನನ[illegible]ನು ಗೊಳದೆಮ್ಮೈಮರೆದಿಹರೆ ಎಮ್ಮಭಟ । ಜನರಳ್ಕಿ ನಿನ್ನಮರೆಗಿತ್ತುಬಹರವರ ಸಂತೈಸೇಳುಧನುವತಾಳು ॥೪॥

ನಿನ್ನಳಿದು ನಾನೆಂತು ಜೀವಿಸಲಿ ಹಾ ಪುತ್ರ | ಸನ್ನುತ ಚರಿತ್ರ ಚಿತ್ರಾಂಗ ಸುಪವಿತ್ರಾಂಗ | ನಿನ್ನ ಪೆತ್ತೊಡಲೀಯೊಳಲನೆಂತು ಸೈರಿಪುದು ನಿನ್ನಿರವನಿಂತು ನೋಳ್ಪ || ಎನ್ನ ಕಣ್ಣೇಕೆ ಒಡೆಯದಿರ್ದುವಕಟಾ ಇದೇ | ನಿನ್ನುಮೆನ್ನ ದಬಿಲಿಯ ದೆಂದು ಹಂಬಲಿಸುತಿ | ರ್ಪನ್ನಂ ವಿಚಿತ್ರ ದಮನರ್ಬಂದು ತವೆ ತಡೆದು ತನ್ನಾಳಲನಿಂತೆಂದರು ||೫||

ತಂದೆ ಸೈರಿಸು ಸೈರಿಸಳಲಿಂ ಫಲವೇ ನಿನ್ನು | ಮುಂದೆ ನೀಂ ಮಗ್ನಾಳ್ವದಂ ಯೋಚಿಪುದು ತಕ್ಕುದೀ | ಯಂದದಿಂ ನೀನೆಯೆ ಪಲುಂಬುತಿರಲೇಗೈವೆವಾಂ ಪ್ರವೀರರ್ಗೆ ರಣದೆ || ಸಂದಿಪುದು ಮೃತ್ಯು ಪೊಂ ವೀರಭೂಮಿಯೊ | ಳ್ಸಂದುಮುಲಿರ್ಪ ಚಿತ್ರಾಂಗನೇಂ ಧನ್ಯನೋ | ದಂದುಗವಿದೇತಕ್ಕೆ ನಿನಗೆ ನಾವಿನ್ನುಂ ಬದುಂಕಿರಲ್ಕೇಳೆಂದರು ||೬||

ಎಮಗೆಯುದ್ಧಕ್ಕೆ ನೇಮವನೀವುದೆಂದಡಿಗೆ | ನಮಿನಮಿಸಿ ಬೇಡಿಕೊಳಲವರಂ ಸುಬಾಹು ಭೂ | ರಮಣನೊಡನೆದ್ದು ಥಟ್ಟನೆ ನೋಡಿ ಮಕ್ಕಳಿರ ನೀವೀಗಳೆಂದವಾತು || ಸಮಯಕ್ಕೆ ತಕ್ಕುದೈದುವುದು ನೀವಿರ್ವರುಂ | ಸಮರಕ್ಕೆ ನಲ್ಕೆ ಚಿತ್ರಾಂಗಹಂತಾರನಂ | ಯಮಪುರಕ್ಕಿಂದಟ್ಟಬಹುದೆಂದು ಬೊಬ್ಬಿರಿದು ರಥವೇರಿನಡೆದರವರು ||೭||

ಬಡನಾಮ ಹಾ ವೀರಸುಭುಜ ಭೂಮೀಶನುಂ | ಕಡುಮುಳಿದು ರತ್ನ ಚಿತ್ರತನಯಾ ಪ್ರೊಂದೇರ | ನಡರಿ ಕೋದಂಡಮಂ ಪಿಡಿದು ಸೇನೆಯ ಸಜ್ಜುಗೊಳಿಸಿ ಪರಬಲಕ್ಕಿದಿರ್ಚೆ || ನಡೆತಂದು ಶತ್ರುಘ್ನನೊಡನೆ ಕಾದಲ್ಕೆನಿಲೆ | ಸಡಗರದೊಳಾ ನೀಲ ರತ್ನರಿಪುತಾಪರ್ಕ | ಳೊಡನೆ ಕಡುಗಲಿಗಳೆಂದೆನಿಸಿದ ವಿಚಿತ್ರ ದಮನರ್ಗಾ ದಲನುವಾದರು ||೮||

ಕೋಲಮುಳಿಯಂ ಕರೆಯುತಂದಾ ವಿಚಿತ್ರನುಂ | ನೀಲರತ್ನನುಮುಗ್ರ ದಮನರಿಪುತಾಪರುಂ | ಕಾಲಾಂಬುದಂಗಳಂತಿರೆ ಚಿತ್ರಚಾಪಂಗಳಂದೆಸೆಯೊಳುತಾರ್ಬ್ಬಟಿಸುತೆ || ಕಾಳಗಂಗೈದರಪ್ಪೊಂ ನೃಪ ಚತುರಂಗಮುಂ | ಪೇಳಲೇನೊಡನೊಡನೆ ಪ್ರೊಯ್ದು ವರಮೋದದಿಂ | ನೂಳದೆತ್ತೆತ್ತ ಬಂತೀವಿರ್ದ ಮೇದಿನಿಯು ಪೆಸರನ್ನಪ್ಪಿಸಿದರು ||೯||

ಚಲ್ಲಬಡಿಯುತ್ತೆ ಕೂರ್ಗಣೆಗಳಂ ಸುಭುಜಭೂ | ವಲ್ಲಭಂ ರಿಪುಬಲವನುರವಣಿಸಿ ಶತ್ರುಘ್ನ | ನಲ್ಲಿಗೆತ್ತೆತ್ತಿ ಬರುತಿರೆ ಕಂಡು ನಟ್ಟಡೆಯೊಳಿರ್ದ್ದಕ್ಷಹನ್ತಾರನು || ನಿಲ್ಲುನಿಲ್ಲೆಲವೆಲವೊ ಖುಲ್ಲನೀನೆನ್ನ ಗೆಲ | ದೆಲ್ಲಿಪೋದಪೆಯೆನುತ್ತೆಡ್ಡೈಸಿನಿಲಲಿನಂ | ಭುಲ್ಲವಿಸುತೂರಸೂರಸುಮಿಗಲೆಚ್ಚನೊಡನವನವೋಲೆಪತ್ತಂಬುಗಳನು ||೧೦||

ಪಿಡಿದುಬಿಡದಿದಿರೆಬಹಕಣೆಗಳಂ ಕಯ್ಯಿಂದೆ | ಪುಡಿಪುಡಿಯಮಾಡುತ್ತೆ ಕೋಪಾತಿರೇಕದಿಂ | ಕಡುಗೆಂಪನಾಂತನಯನಂಗಳಂ ಕಿಡಿಗಳಂಕೆದರುತ್ತೆ ಗರ್ಜಿಸುತೆ ತರ್ಜಿಸುತ್ತೆ || ನಿಡುವಾಲದಿಂಸುತ್ತಿ ಸುಭುಜನಶತಾಂಗಮಂ | ಪಿಡಿದೆಳೆಯಲಾ ಮಹಾಬಲ ಮಹಾಬಲಸುತಂ | ತಡೆಯದಾಬಾಲಮಂಸುಭುಜಬಲನೆನಿಪಸುಭುಜಂ ಕಣೆಗಳಂ ಪೊಡೆದನು ||೧೧||

ಲಾಂಗೂಲಮಂತೆಗೆದು ಮುಮುಡಿಕೊಂಡೊಡನೆ ಕಪಿ | ಪುಂಗವಂವಿವಿಧ ಮಣಿಖಚಿತಮಾದರಸನಶ | ತಾಂಗಮಂದಾಡೆವರದೊಳ್ಪಡಿದು ತೆಗೆದಪ್ಫಳಿಸಲಶ್ವಸೂತರಳಿಯೆ || ಭಂಗವೆತ್ತಿಳೆಯೊಳಮಬಿದ್ದುದಾ ಪಾರ್ಥಿವಂ | ಸಂಗಡವೆ ಪೆರತೊಂದು ರಥವೇರಿ ತೀಕ್ಷ್ಣಬಾ | ಣಂಗಳಂಬಾಲದೊಳಮುರದೊಳಂ ಫಾಲದೊಳಮಿಕ್ಕಿದಂ ಬಿಡದವನನು ||೧೨||

ನೆತ್ತರೊಸರೊಸರುತಿಹಘಾಯುವಡೆದೊಡಲಿಂದೆ | ತತ್ತನವಸಿಂದೂರವರ್ಣಕದರಂಜನೆಯ | ಮತ್ತೇಭದಂತೆಯುಂ ಸಂಜೆಗೆಂಪಡಸಿದಂಭೋದದಂತೆಯುಮೆಸೆಯುತೆ || ಎತ್ತಿಮುಷ್ಟಿಯೊಳೊಂದುಘಾತಮಂ ಸುಭುಜನೆದೆ | ಗಿತ್ತು ಬಲವಂತನಾಹನುಮಂತನುರವಣಿಸಿ | ಮತ್ತೆ ಕಾಲಿಂದೊದೆದುರುಳ್ಚಿದೊಡೆ ಪೊಡವಿಯೊಳ್ಕೆಡೆದವಂ ಬಸವಳಿದನು ||೧೩||

ಇದಿರಾಂತ ರಿಪುಚಾತುರಂಗಬಲಮಂ ಬಳಿಕ | ಸದೆಬಡಿದು ತಳ್ದೊಂದು ಪೆರ್ಮರದೊಳತ್ತಿತ್ತ | ಚವರಿಸುತ್ತಿರೆ ವೀರಪವಮಾನಸುತನಾರಣಾಂಗಣದೆ ಮೂರ್ಛೆಯಾಂತು || ಕೆದಕೆದರ್ದಮಂಡೆಯಿಂದರುಣಾಂಬುಮಯಶರೀರದಿ ನೊತ್ತಿದಾಡಿಂದ ಮೊಪ್ಪೃತ್ತೆ ಕೆಡೆದಿರ್ದ | ಸದುದಾರತೇಜಂಸುಕೇತುರಾಜಂಪಡೆದು ಚೇತನೆಯನೆದ್ದನಾಗ ||೧೪||

ಒಡನಾಸುಕೇತುವುಂ ದಮನನುಂ ಹನುಮನಾ | ಹೊಡೆತದಿಂ ಶರಣಿಲ್ಲದೋಡುತಿಹಸೇನೆಯುಂ | ತಡೆವಂದದಿಂ ಕಡಲನಿದ್ದಡಂ ತಡೆದು ಯುದ್ಧಕ್ಕೆ ಸನ್ನದ್ಧರಾಗಿ || ಕಡುಮೂರ್ಛೆವಡೆದು ದಂಡದವೊಲಾಕಳನೊಳಗೆ | ಕೆಡೆದಿರ್ದಭೂಪನಂ ಕಂಡು ಖತಿಗೊಂಡು ಮಾ | ರ್ಪಡೆಯನುರುಶರಗಳಿಂದಿಕ್ಕಿಹಿಮ್ಮೆಟ್ಟಿಸಿ ಮರುತ್ಸುತಂಗಿದಿರಾದರು ||೧೫||

ಬಳಿಕಾಸುಬಾಹು ಮೂರ್ಛಾಂತನಿದ್ರಾವಸ್ಥೆ | ಯೊಳಗಯೋಧ್ಯಾಪುರೋಪಾಂತಸರಯೂತಟದೆ | ತಳಿದು ಮೃಗಶೃಂಗವಂ ಮುನಿವರ್ಯರೊಡವೆರೆದು ಹಯಮೇಧದೀಕ್ಷೆಗೊಂಡು || ವಿಳಸತ್ಸುವರ್ಣಮಯಸೀತೆಯಿಂದೊಡಗೂಡಿ | ಲಲಿತನೂತನಪೀತವಸನಪರಿಕಲಿತಮಂ | ಗಳಮೂರ್ತಿಯಾಗೆಸೆವ ರಾಮನಂ ಭರತಲಕ್ಷ್ಮಣಸಹಿತನಂ ಕಂಡನು ||೧೬||

ಶಿರದೊಳಂಜಲಿಯಸಂಪುಟಮನಾಂತಜಪುರಂ | ದರಮುಖ್ಯದೇವಗಣಮಂಬರದೊಳೋಲೈಸು | ತಿರೆ ನಾರದಾದಿಸುರಮುನಿಜನಂ ನಿಜನಾಮಕೀರ್ತನಂಗೈಯುತ್ತಿರೆ || ಪರಿವಡೆವನಾಟ್ಯಮಂ ಮಾಡುತಿರಲಪ್ಸರರ | ನೆರವಿ ನಿಜಮಹಿಮೆಯಂ ನಿಗಮಂಗಳೊರೆಯುತಿರೆ | ನರಲೀಲೆಯಿಂದೆಮುಖಿಯೆನಿಸಿರ್ದ ಪರಮಾತ್ಮನಂ ಕಂಡನೇಂ ಸುಕೃತಿಯೋ ||೧೭||

ವಾತಾತ್ಮಸಂಭವನ ಚರಣಸಂಸ್ಪರ್ಶಮಹಿ | ಮಾತಿಶಯದಿಂದಿಂತು ಕನಸನವಲೋಕಿಸಿ ಮ | ಹೀತಲಾಧಿಪನನಂ ಚೇತರಿಸಿಕೊಂಡೆದ್ದು ನೆರೆ ವಿಸ್ಮಯಂಬಡುತ್ತೆ || ಜ್ಞಾತಾಸಿತಾಂಗಮುನಿಶಾಪನಾಗಾಸಮಾ | ಘಾತಮಂ ನಿಲಿಪಂತೆ ಬೆಸಸಲನುಜಾತತನು | ಜಾತರ್ಗೆ ನಿಂತುದವರಾಜ್ಞೆಯಿಂದಾರಣಂ ಹುಯ್ವಮಳೆ ನಿಂದಂತಿರೆ ||೧೮||

ಏನಿದೇನಿದು ಪಿತನೆ ಯುದ್ಧಮಂ ನಿಲಿಸಲ್ಕೆ | ದೇನಿಹುದು ಕಾರಣಮೆನುತ್ತೆ ಬೆಸಗೊಂಡೊಡವ | ರಾನರೇಂದ್ರಂ ಬಳಿಕ ಕೇಳಿರೈ ಪೂರ್ವದೊಳ್ತತ್ವಜಿಜ್ಞಾಸೆಯಿಂದೆ || ನಾನಿರದೆ ತೀರ್ಥಯಾತ್ರೆಗೆ ತಳರ್ದಲ್ಲಲ್ಲಿ | ಮೌನೀಂದ್ರರೊಳ್ವಿಚಾರಂಗೈಯುತಮಿತತೇ | ಜೋನಿಧಿಯನಸಿತಾಂಗಮೌನಿಯಂ ಕಂಡು ತತ್ವಾರ್ಥಮಂ ಬೆಸಗೊಂಡೆನು ||೧೯||

ಆಮುನಿವರನದಕೆ ಸಂತಸಂಗೊಂಡು ಕೇ । ಳ್ಭೂಮೀಂದ್ರನರನಾಗಿ
ನೆಲದೊಳವತರಿಸಿರ್ದ । ರಾಮಚಂದ್ರನೆಸತ್ಯನವ್ಯಯಂತೇಜೋಮಯಂ ಪ
ರಂಪರಮಾತ್ಮನು ॥ ಆಮೈಥಿಲೇಂದ್ರಸುತೆ ಚಿದ್ರೂಪೆಯೆಂದು ತಿಳಿ । ನೇ
ಮದಿಂದಾತನಡಿಯಂಬಿಡದೆ ಭಜಿಸುವವು । ಹಾಮುನಿಗಳುತ್ತರಿಸಿ ಸಂಸಾರ
ಸಾಗರವನಾನಂದಮಯುರಪ್ಪರು ॥೨೦॥

ರಾಮ ಎಂಬಕ್ಷರದ್ವಂದ್ವಸ್ವರೂಪಮಹ । ನಾಮಮಂನೆನೆದಮಾತ್ರಕೆ
ಪಾಪರಾಶಿನಿ । ರ್ನಾಮಮಪಹುದೇಸಂಬೆನೀತತ್ವಮಂಮರೆಯದಿರು ರಾಯನೀ
ನೆಂದೆನೆ ॥ ಆಮಾತನಾಂಕೇಳ್ದು ಗಹಗಹಿಸಿ ವಿಪ್ರನುಡಿ । ರಾಮನೆಂದೆಂಬವಂ
ದಾಶರಥಿ ಮನುಜನಲೆ । ಭೂಮಿಸುತೆಯೆನಿಪಳುಂ ಹರ್ಷಶೋಕಾಕ್ರಾಂತೆರಾ
ಣಿಯಲೆ ತಾನವಂಗೆ ॥೨೧॥

ಎಂತುಜನ್ಮಂಬಂದುದೈ ಜನ್ಮವಿಲ್ಲದಂ । ಗೆಂತುತಾಂಕರ್ತನಾದಂಕರ್ತನ
ಲ್ಲದವ । ನಂತದಿರಲಾಜರಾಜನ್ಮದುಃಖಾತೀತತತ್ವಮಂ ಪೇಳ್ವುದೆನಲು ॥ ಆಂ
ತತಿಕ್ರೋಧಮಂಮುನಿವರ್ಯನೆಲೆಧರಾ । ಕಾಂತನೀನೆಮ್ಮನುಡಿಯಂ ಕುಯುಕ
ವಮಾಡಿದುದ । ರಿಂ ತತ್ವಸಂಮೂಢನಾಗೆಡಲಹೊರೆವನಾಗೆಂದು ಶಾಪವನಿತ್ತ
ನು ॥೨೨॥

ಕೂಡೆ ನಾನಧಿಕಚಿಂತಾವಿಷಾದಂಗಳಿಂ । ಕೂಡಿ ತನ್ಮುನಿನಾಥನಡಿಗೆರ
ಗಿ ವಿನಯದಿಂ । ಬೇಡಿಕೊಳಲಾದಯಾವನಧಿ ಯೆಲೆರಾಯಮುಂದಾರಾಮಚಂ
ದ್ರಮನೊಳು ॥ ನಾಡೆನೀನರಿವಿಲ್ಲದವಿನಯವನಾಚರಿಸೆ । ತಾಡಿಸುವನನಿಲಜಂ
ನಿನ್ನನಂಘ್ರಿಯೊಳಂದು । ಮಾಡೆಸುಜ್ಞಾನಮಾಪರಮಾತ್ಮನಂಕಂಡು ಸದ್ಗತಿ
ಯುಪಡೆವೆಯೆಂದು ॥೨೩॥

ಶಾಪಾವಸಾನಮಂನುಡಿದಿರ್ದನಿಂದಂಜ । ನಾಪುತ್ರಪದಘಾತದಿಂದೆನ್ನ
ನೆನಪಿಗದು । ರೂಪಿಸಿ ಪರಂಜ್ಯೋತಿಯೆನಿಪದಶರಥರಾಮನಂಕನಸಿನೊಳ್ಕಂಡೆ
ನು ॥ ಆಪುಣ್ಯಚರಿತನಶ್ವಮನಪರಿಮಿತಮಣಿಕ । ಲಾಪವಸುವಾಹನಗಳೊಡ
ನೆ ಶತ್ರುಘ್ನಂಗೆ । ಸೋಪಚಾರದೊಳಿತ್ತು ರಾಮಸಂದರ್ಶನಕೆಪೋಪೆನಾನಿವ
ನೊಡನೆನೆ ॥೨೪॥

ಆನುಡಿಗೆತಲೆವಾಗಿ ದಮನಾದಿಗಳ್ವೆತನೆ । ನೀನೆಳಸಿದಂತಾಗಲೆಂತು ನಿನ್ನಾಜ್ಞೆಯಹುದು । ದೋಃ ನಡೆವುಕೆಳ್ವೆವಾವಂತೆಂದು ಬಿನ್ನವಿಸಲೊಡನಾ ಮಹೀಕಾಂತನು ॥ ಮಾನವವಿಲಾಸದಿಂಮೆರೆಯುತಿರ್ಪ ರವಮಾ । ಜಾನಿಯ ಮಖಾಶ್ವಮಂ ನಿರುಪಮೋತ್ಸವದಿಂದೆ । ಹೀನವೈಭವದೊಡನೆತಹುದಿಲ್ಲಿಗೆಂದು ನಿಜತನುಜರಂ ನೇಮಿಸಿದನು ॥ ೨೪ ॥

ಬಳಿಕವರ್ಶಿರದೊಳಾಶಾಸನವನಾಂತು ಪ್ರೆಳ । ಲೆೊಳಪ್ರೊಕ್ಕು ಚಾರಿಸತ್ತಿಗೆಮೊದಲೆನಿಪ ಬಿರುದು । ಗಳನೊಡನೆತೆಗಸಿಕೊಂಡೊಂಟೆಗಳ ಬಂಡಿಗಳಮೇಲೆ ಪೊನ್ರನ್ನಂಗಳ ॥ ಪಲವುಕುಣಿಕಿಲುಗಳಂಕೂಡೆವೇರಿಸಿಕೊಂಡು । ಹೊಳೆಹೊಳೆವ ರನ್ನದೇರ್ಬೆಳ್ಗುದುರೆ ಪೇರಾನೆ । ಗಳನೊಡಂಗೊಂಡು ಮಖತುರಗವಂ ನಡಸಿಕೊಂಡುತ್ಸವದೊಳೈತಂದರು ॥ ೨೫ ॥

ತರುವಾಯೊಳಾನೃಪತಿ ನಿಜತನುಜರೊಡಗೂಡಿ । ಪರತರಾನಂದದಿಂದಾತುರಂಗಮದೊಡನೆ । ಪರಿಜನದಕಯ್ಯಿಂದೆ ಕಾಣ್ಕೆಯಂತೆಗಸಿಕೊಂಡನಿಲಸಂಭವನನಮುಖದೆ ॥ ಭರತಾತ್ಮಜಪ್ರಮುಖರೊಡಗೂಡಿ ಶಿಬಿರದಂ । ತರದೊಳರ್ದಿನಕುಲೇಂದ್ರನ ತಮ್ಮನಂಕಂಡು । ಚರಣಾಂಬುಜಕ್ಕೆರಗಿ ವಿನಯದಿಂ ಮಖತುರಗವಂ ಕಾಣ್ಕೆಯೊಡನರ್ಪಿಸಿ ॥ ೨೬ ॥

ಅಲಿಸೆನ್ನಯ ಬಿನ್ನಪವನೆಲೆ ರಘೂದ್ವಹನೆ । ಬಾಲನೀದಮನನೀಹಯವನರಿಯದೆ ತಡೆದು । ಕಾಳಗಕೆತೊಡಗಿದಂನಾನು ಮಸಿತಾಂಗಮುನಿಶಾಪದಿಂ ಮೂಢನಾಗಿ ॥ ಮೂಲೋಕದೊಡೆಯನೆಂದರಿಯದಾ ರಾಮನಂ । ತೋಳಮದದಿಂದಾಂತು ಯುದ್ಧಕ್ಕೆಬಂದೆನೀ । ಬಾಲಿಶನತಪ್ಪಂ ಕ್ಷಮಿಪ್ರುದೆಂದು ಕೈಮುಗಿದುಬಿನ್ನವಿಸಿ ವಿನಯದಿಂದೆ ॥ ೨೭ ॥

ಆವನಪದಾಂಬುಜಂ ಸೋಂಕಿದೊಡೆ ಶಿಲೆವಧೂ । ಭಾವಮಂಪಡೆದುದೋ ಮತ್ತಮಾಗೃಧ್ರನು ಮ । ದಾವನಕರಸ್ಪರ್ಶ ಸುಕೃತಾತಿಶಯದಿಂದೆ ಪರಮಪದಮಂಸಾರ್ದನೋ ॥ ಆವವನ ನಾಮಸಂಸ್ಮರಣೆಯೊರಸುವುದೊಪಾ । ಪಾವಳಿಯನಂತರಂಗದೊಳರಸುವರೊ ಮುನಿಗ । ಳಾವನಂ ಏಕೆ ತಮಾವವನ ಚರಣಸಂಗದೆಧನ್ಯನೆನಿಸಿರ್ಪುದೋ ॥ ೨೮ ॥

ಆಮಹಿತಚಾರಿತ್ರನೆನಿಪ ಪರಮಾತ್ಮನಹ | ರಾಮನಡಿಯಂತೋರ್ಪು
ದೆನಗೆ ಕೃಪೆಯಿಂದೆ ನೀಂ | ಸೌಮಿತ್ರಿಯೆನ್ನಸರ್ವಸ್ವಮಂನಿನ್ನದಾನಂತ
ಮಾಧೀನನೆಂದು ‖ ಕೈಮುಗಿದುಬೇಡಿಕೊಳೆ ನಿಪುಣಮತಿರಘುಜನೆಲೆ | ಭೂ
ಮಿಪತಿವೃದ್ಧನಾಪುದರಿಂದೆ ನೀನೆನಗೆ | ರಾಮಚಂದ್ರಮನಂತೆ ಪೂಜ್ಯನೆಂದೆನಿ
ಸಿರ್ಪೆ ಬಾಲಕಂ ತಾನೆಂದನು ‖ ೩೦ ‖

ಕೇಳೆಲೆಸುಬಾಹು ಪ್ರೌಢೆದಾಡುವುದು ರಣದೆ ಭೂ | ಪಾಲಕರ ಮೊ
ದಲನೆಯಧರ್ಮವಾದುದರಿಂದೆ | ಕಾಳಗವನಾತ್ಮೀಯಧರ್ಮದಿಂ ಮಾಡಿದಿರಿ
ತಪ್ಪಿದರೊಳೇನಿರ್ಪುದು ‖ ಆಳಲೀವಮನನೀರಾಜ್ಯಮಂ ನೀನೆಮ್ಮ | ಪಾಳಗ
ಧಿನಾಥನಾಗೆಮ್ಮೊಡನೆಬಹುದೆಂದು | ಪೇಳೆ ಮುಖಹಯದೊಡನೆ ಮೇಲೆನಿಸಿ
ದಾಕಾಣ್ಕೆಯೆಲ್ಲಮಂ ಕಯ್ಕೊಂಡನು ‖ ೩೧ ‖

ಬಡನಾನೃಪಂಕುಮಾರಂಗೆಬಳೆಯಿಸಿ ತನ್ನ | ಪೊಡವಿಯೊಳ್ವಿಭವದಿಂ
ರಾಜ್ಯಾಭಿಷೇಕಮಂ | ಕಡುಮುದದೊಳೆಸಗಿದವುತಣದಿಂದೆತುಷ್ಟನಾಗಾಹವ
ದೊಳನಿತುಸೇನೆ ‖ ಮಡಿದುರ್ದದೊ ಪುರ್ತಿಯಾಗದಕ್ಕನಿತನಳ | ಮಡಿಸಿ
ಕೊಂಡೊಡಗೊಂಡು ತನ್ನೃಪನನಲ್ಲಿಂದೆ | ನಡೆದನುತ್ಸಾಹದಿಂ ರಾಮಚಂದ್ರಾ
ನುಜಂ ಮುಖಮಂಜೆನುಂದಡಿಯಿಡೆ ‖ ೩೨ ‖

೧೨ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೧೨ಕ್ಕೆ ಪದ್ಯ ೫೬೪ಕ್ಕೆ ಮಂಗಳಮಸ್ತು.

ಹದಿಮೂರನೆಯ ಸನ್ಧಿ.

ಸೂಚನೆ|| ಆಲಿಸಿಋತಂಭರೋಪಾಖ್ಯಾನಮಂ ಸುಮತಿ | ಪೇಳೆ ಸೌಮಿತ್ರಿ ತೇಜಃಪುರಂಬೊಕ್ಕು ಭೂ | ಪಾಲಪುಂಗವಸತ್ಯವಂತನಿಂ ಕಪ್ಪಮಂ ಕಯ್ಕೊಂಡನತಿಮುದದೊಳು ||

ಪಾರಕಾಂಕ್ಷಿಪ್ರವರಕೇಳನಂತರದೊಳಾ | ವಾರುವವನನುಸರಿಸಿ ಸೌಮಿತ್ರಿ ಪಲವುಕಾಂ | ತಾರಜನಪದನದೀಗಿರಿಗಳಂದಾಂಟಿ ಚತುರಂಗಬಲಸಹಿತನಾಗಿ || ಭೂರಮಣರಲ್ಲಲ್ಲಿ ಮಣಿಯುತಡಿಗಡಿಗಿತ್ತ | ಸಾರಮಣಿಕನಕವಸನಾಭರಣ ರಥತುರಗ | ವಾರಣಂಗಳನೊಲ್ದು ಕಯ್ಕೊಳುತೆ ನಡೆಯೆ ತೇಜಃಪುರಂ ಕಣ್ಗೆಸೆದುದು || ೧ ||

ನಿರುಕಿಸುತ್ತದನೊಲ್ದು ದೂರದೊಳ್ ಲಕ್ಷ್ಮಣಾ | ವರಜನಡಿಯಿಡದೆ ಮುಂದಕ್ಕೆ ನಿಂದಲ್ಲಿಯುಂ | ಮಿರುಮಿರುಗಿಪೊಳೆವ ಚಾಮೀಕರಮಯಾನೇಕಕಲಶಂಗಳಂತಾಳ್ದ || ಸುರುಚಿರಪ್ರಾಸಾದಶಿಖರಂಗಳಂ ಪ್ರಾಂಶು | ತರಕೇತನಂಗಳಂದೊಪ್ಪಿವೀಪ್ರೊಳಲಾವು | ದರಸಿಲ್ಲಿಗಾರೆಂದುಸುಮತಿಯಂಬೆಸಗೊಂಡೊಡಿಂತವಂವಿವರಿಸಿದನು || ೨ ||

ಸಾರತರಮತಿಶಾಲಿಶತ್ರುಹಂತಾರಕೇಳ್ | ಈರಾಜಧಾನಿ ತೇಜಃಪುರಾಭಿಖ್ಯೆಯಿಂ | ಧಾರಿಣಿಯೊಳೈದೆವಿಖ್ಯಾತಿಯಂಪಡೆದಿಹುದಿದಂ ಸತ್ಯವಂತನೆಂಬ || ಭೂರಮಣಕುಲಮೌಳಿ ಮಣಿವೇದವೇದಾಂಗ | ಪಾರಂಗತಂ ಧೀರನತಿವೀರನಂತತ್ಯು | ದಾರಮತಿಯನ್ವರ್ಥನಾಮನಾಳುತ್ತಿರ್ಪನಹಹನೋಡೀಪುರದೊಳು || ೩ ||

ಕಂಗೊಳಿಸುವಭ್ರಂಲಿಹಾನೇಕಸೌಧಶಿಖ | ರಂಗಳೊಳ್ಪಾಲ್ಗೊಂಡುಥಳಥಳಿಸಿತೊಳತೊಳಪ | ಗಾಂಗೇಯಕಲಶಂಗಳಭ್ರಗಂಗೆಯೊಳದರ್ ಸೈಸದೆ ಕುಳಿಕೆರ್ಡಿಗೆ || ಪಂಗಡಂಗೊಂಡುಸೇವಿಸಲೆಳಸಿಬಿಸಿಲನು | ತ್ತುಂಗಮಾದೀತಾಣದೊಳ್ಬಂದುಕುಳ್ಳಿರ್ಪ | ಪೊಂಗರಿಯದಿವ್ಯಹಂಸಂಗಳೆಂಬಂತೆಪೊಲವುಮುದೇಂ ಶೋಭಿಸುವುವೋ || ೪ ||

ಎತ್ತಲುಂ ರಘುಜ ಕೇಳಗ್ರಹಾರಂಗಳೇ | ಪತ್ತನದೊಳಾ ಅಗ್ರಹಾರಂಗಳೊಳ್ನೋಡ | ಲುತ್ತಮಾಚಾರಸಂಪನ್ನರುಂ ಶ್ರೋತ್ರಿಯರುಮೆನಿಸಿರ್ಪ ಭೂದೇವರು || ಮತ್ತಮಾಭೂಸುರರೊಳಗ್ನಿಹೋತ್ರಂಗಳೆ | ಪ್ಪತ್ತಿರ್ಪುವಾ ಅಗ್ನಿಹೋತ್ರಂಗಳೊಳ್ಮಂತ್ರ | ವತ್ತಾದ ವೇಳ್ವೆಗಳುಮಾ ವೇಳ್ವೆಗಳೊಳಘಾಪಹಂ ಧೂಮಾವಳಿಗಳುಂ || ೫ ||

ಕೇಳಮಿತಸಂಪತ್ತಿಯುಕ್ತಮಾದೀಪುರವ | ನಾಳುತಿರ್ದಂ ಸಿಂದೆ ನಿಖಿಲವಿಶ್ವಂಭರಾ | ಪಾಲನತಾಗ್ರಣಿ ಋತಂಭರಾಭಿಖ್ಯಭೂಮೀಶ್ವರಂ ಧರ್ಮದಿಂದೆ || ಪೇಳಲೇನವನಖಿಲಸದ್ಗುಣಾಭರಣಂ ವ | ಯಾಳು ವಿದ್ಯಾವಿನಯಶಾಲಿ ಧರ್ಮಜ್ಞಂ ವಿ | ಶಾಲಮತಿ ದಾನಶೌಂಡಂ ನೀತಿವಿದನಮಲವೈಷ್ಣವಕುಲೋತ್ತಂಸನು || ೬ ||

ಪಲವರಸಿಯರನವಂ ಮದುವೆಯಾಗಿರ್ದೊಡಂ | ಕುಲದಿರವಿಗವರೊಳಗೆ ಸಂತಾನಮಂ ಪಡೆಯ | ದಳಲಾಂತು ಚಿಂತಿಸುತ್ತಿರಲಲ್ಲಿಗೊಂದಿನಂ ಜಾಬಾಲಿಮುನಿ ಬಂದನು || ಇಳೆಯಾಣ್ಮನವನೊಡನಿದಿರ್ವಂದು ತತ್ಪಾದ | ನಳಿನಯುಗಳಕ್ಕೆರಗಿ ಪಾದ್ಯಾರ್ಘ್ಯವಿಷ್ಟರಂ | ಗಳನಿತ್ತು ಸತ್ಕರಿಸಿ ವಿನಯದಿಂ ಬಾಗಿ ಕಯ್ಮುಗಿದು ಕೊಂಡಿಂತೆಂದನು || ೭ ||

ಇಂದೆನ್ನ ಜನ್ಮವೆಲೆ ಮುನಿಪ ಸಾರ್ಥಕಮಾದು | ದಿಂದೆನ್ನ ಮನದ ಕೋರಿಕೆ ಸಿದ್ಧಿಸಿದುದೆನ್ನ | ಮಂದಿರಕ್ಕೊಲ್ದು ನೀವಿಂದು ಬಿಜಯಂಗೈದ ಯೋಗದಿಂದೆನಲಾತನು || ಕಂದು ಕುಂದೇನುಮಿಲ್ಲದೆ ನಿನ್ನನಾಡು ಸುಖ | ದಿಂದಿಹುದೆ ನಿನಗನಾಮಯವೆ ಹರಿಚರಣಾರ | ವಿಂದಪರಿಚರಣಾತಿಶಯಸುಖಂ ನಿತ್ಯಾನುಭವದೊಳಿರ್ಪುದೆ ಎಂದನು || ೮ ||

ಎನಲಾ ಋತಂಭರನೃಪಂ ನಿಮ್ಮನುಗ್ರಹದೊ | ಳೆನಗನಾಮಯಮೆನ್ನನಾಡಿಹುದು ಕುಶಲದಿಂ | ವನರುಹಾಕ್ಷನ ಚರಣಸರಸೀರುಹದ್ವಂದ್ವಮಂ ಭಕ್ತಿಯುಕ್ತನಾಗಿ || ಮನವೊಲ್ದು ಭಜಿಸುತಿಹೆನವಿರತಮುಮಾದೊಡಂ | ತನಯಸಂತಾನಮಂ ಪಡೆದು ನೆರೆ ಸಂತಸವ | ನನುಭವಿಪ ಪುಣ್ಯಮೆನಗಿಲ್ಲದುದರಿಂದೆ ಚಿಂತಾರ್ಣವದೆ ಮುಳುಗಿರ್ಪೆನು || ೯ ||

ಜೇಯುನಾಪುತ್ರಸ್ಯಗತಿಯೆಂದು ನುಡಿವುದಾ | ವಮ್ನಾಯಮದರಿಂದೆನಗೆ ಸಂತಾನಮಪ್ಪಂತು | ಪಾಯಮೇನಿಹುದೊಕರುಣಿಸುವುದದನೆಂದು ಬಿನ್ನವಿಸಿ ದೊಡೆ ಯೋಗೀಂದ್ರನು || ರಾಯಕೇಳ್ಸ್ಮರುಪಾಯಂಗಳುಂಟದಕೆ ನಾ | ರಾಯಣಾನುಗ್ರಹದೆ ಶಿವತುಷ್ಟಿಯಿಂ ಜಗಕೆ | ತಾಯೆನಿಪಧೇನುವಿನ ಸೇವೆ ಯಿಂದಹುದು ಸಂತಾನವಿದು ನಿಜವೆಂದನು || ೧೦ ||

ಗೋವುಗಳವದನಮುಖ್ಯಾಖಿಲಾಂಗಂಗಳೊ | ಳ್ದೇವತೆಗಳಾವಾಸಿಸು ತ್ತಿರ್ಪರದರಿಂದೆ | ಗೋವನಾರಾಧಿಸೈನೀನೊಲ್ದು ನಿತ್ಯಮುಂಭಕ್ತಿಯಿಂದಾವ ನದನು || ಸೇವಿಪನೊತಾನವಂ ಮನದಿಷ್ಟಮುಂಪಡೆವ | ನಾವನದನಿರದೆಬಾಧಿ ಸುವನೋ ಮನೆಯೊಳ | ನ್ನಾವನುಪವಾಸಿಪನೊ ಮೂಢಾತ್ಮರೆನಿಸಿದವರಿಳಿ ವರೈ ನರಕದೊಳಗೆ || ೧೧ ||

ಧೇನುವಂಭಕ್ತಿಯಿಂಸೇವಿಸಿದೊಡಹುದು ಸಂ | ತಾನವೆಂಬುದರೊಳಾ ಲಿಸುಪೇಳ್ವೆನೊಂದುಮಾ | ಖ್ಯಾನವಂಪಿಂದೆ ಸೂರ್ಯಾನ್ವಯಸಮುದ್ಭವಂ ನಿಗಮಾಗಮಾರ್ಥವಿದನು || ಭೂನಾಥಗಣಮೌಳಿರತ್ನಂ ದಿಲೀಪಾಭಿ | ಧಾನಂ ಧರಾವಲ್ಲಭಂ ಸುದಕ್ಷಿಣೆಯೆಂಬ | ಮಾನಿನಿಯುಕೈವಿಡಿದು ಧರ್ಮದಿಂ ಧರಣಿ ಯಂಪರಿಪಾಲಿಸುತ್ತಿರ್ದನು || ೧೨ ||

ವಾರಾಶಿಗಾಂಭೀರ್ಯದೊಳ್ಸಮುನ್ನತಿಯೊಳ್ಸು | ಮೇರುತೇಜಸ್ವಿನೊ ಳ್ಭಾಸ್ಕರಂ ಶೌರ್ಯದೊ | ಳ್ತಾರಕಧ್ವಂಸಿಸೌಂದರ್ಯದೊಳ್ಮನ್ಮಥಂ ವಾಕ್ಕಿನೊ ಳ್ವಾಸವಗುರು || ಧೀರತೆಯೊಳಚಲೇಂದ್ರನುತ್ತಮಜ್ಞಾನದೊ | ಳ್ಭಾರತೀ ರಮಣನೈಸಿರಿಯೊಳಾಖಂಡಲನು | ದಾರತೆಯೊಳಮರತರುಸ್ಥೈರಣೆಯೊಳವನಿ ಯೆಂದೆನಿಸಿರ್ದನಾರಾಯನು ||೧೩||

ಅಲರ್ದವೊಲ್ಲೆಯ ಬನದಸಿರಿಯನಾವನಸುನಿ | ರ್ಮಲಕೀರ್ತಿಪಡೆದು ದೆಸೆದೆಸೆಯೊಳುಂ ಮೆರೆದುದೋ | ನೆಲಸಿತ್ತೊ ಚಕ್ರದೊಳ್ ಮತ್ತದಾವನನೆಲ ದೊಳರಿಯೆಂಬ ಪೆಸರಾವನ || ವಿಲಸದಾನನಕಮಲವಂ ನೋಡಿದರ್ಥಿಗಳ | ನಿಲಯಾಂಗಣಸ್ಥಲದೊಳಾಕ್ಷಣಮೆಕಟ್ಟಿದುವೊ | ಕಲಭಂಗಳಾರವಿಕುಲಪ್ರ ದೀಪನ ದಿಲೀಪನಸರಿಯಭೂಪನುಂಟೇ ||೧೪||

ಆನೃಪಂ ಬಹುಕಾಲಮಿಂತು ಕಳೆಯಲ್ಕೆ ಸಂ | ತಾನಮಿಲ್ಲದೆ ಚಿಂತಿಸು
ತೆ ಪತ್ನಿಯೊಡಗೂಡಿ | ಕಾನನಕೆ ನಡೆತಂದು ಕುಲಗುರುಗಳೆನಿಸಿದ ವಸಿಷ್ಠರ
ನಿಯೋಗದಿಂದೆ || ಮಾನಸದೊಳುರುಭಕ್ತಿಯಂತಳೆದು ನಂದಿನೀ | ಧೇನುವಂ
ಸೇವಿಸಿ ಜಗತ್ರಯಪ್ರಖ್ಯಾತ | ಮಾನಿತಚರಿತ್ರನಂ ರಘುವೆಂಬಪುತ್ರನಂ ತದ
ನುಗ್ರಹದೆ ಪಡೆದನು ||೧೫||

ಕ್ಷಿತಿಪ ಗೋಬಾಧೆಯಿಂದೇನಪ್ಪುದೆಂಬುದರೊ | ಳಿತಿಹಾಸವೊಂದುಂ
ಟು ಕೇಳ್ಜನಕನೆಂಬ ಭೂ | ಪತಿ ಯೋಗಬಲದಿಂದೆ ಪಾರ್ಥಿವಾಂಗಮನುಳಿ
ದು ತೇಜೋಮಯಾಂಗನೆನಿಸಿ || ಪ್ರತವರವಿಮಾನವಾಗಮರಲೋಕಕ್ಕೆ ಸಾ |
ರುತೆ ಪಾಪಲೇಶದಿಂ ಮಾರ್ಗವಶದಿಂದೆ ದು | ರ್ಗತಿಲೋಕದೊಳ್ವಿವಿಧಯಾತ
ನೆಯನನುಭವಿಪಜೀವರಂ ಲೋಕಿಸಿದನು ||೧೬||

ಆಸುಕೃತಿಯೊಡಲಗಾಳಿಯಸೋಂಕಿನಿಂ ನರಕ | ವಾಸದೊಳ್ವಿವಿಧಯಾ
ತನೆಯನನುಭವಿಸುತ್ತೆ | ಬೇಸತ್ತಜೀವರ್ಗೆತೋರಿದುದುಸುಖಲೇಶಮೇನೆಂ
ಬೆನದ್ಭುತವನು || ಓಸರಿಸಲಾನೃಪತಿಯಲ್ಲಿಂದೆ ಹಾಯೆನು | ತ್ತಾ ಸಕಲಜೀ
ವರುರೆಘೋಳಿಟ್ಟುದಂ ಕೇಳ್ದು | ದೇಸುಕರುಣಾಶಾಲಿಯೋ ಮರಳಬಂದನಾ
ತಾಣಕ್ಕೆ ಮತ್ತಮವನು ||೧೭||

ಆಗಳವನಂಕಂಡು ಯಮಧರ್ಮನೆಲೆ ಮಹಾ | ಭಾಗನೀನೇಕೆಮರಳಿದೆ
ಪುಣ್ಯಲೋಕಕ್ಕೆ | ಪೋಗೆನಲ್ಕಾನೃಪತಿಪದಕೆರಗಿಕಯ್ಮುಗಿದು ಕೊಂಡೆಲೈ
ಯಮಧರ್ಮನೆ || ಈಗಳೀಯೆಡೆವಿವಿಧಹಿಂಸೆಯಂ ಸೈರಿಸದೆ | ಕೂಗಿಡುವ ಜೀ
ವರಾವೊರೆಯು ಕೇಳ್ದನ್ನಿಂದ | ಮಾಗುವೊಡೆ ಸುಖಮಿವರ್ಗೆನಗಿದೇಸಗ್ಗಮೆ
ನುತೊಲ್ದಿಲ್ಲಿಗೈತಂದೆನು ||೧೮||

ರವಿನಂದನನೆ ಕೃಪಾರ್ಣವನೆ ನೀನೊಲ್ದೆನ್ನೊ | ಳಿವರನೀಹಿಂಸೆಯಿಂ
ಬಿಡಿಸಿದೊಡೆಮುಂದೆ ಪೋ | ಗುವೆನಿಲ್ಲದಿರ್ದೊಡಿಲ್ಲಿಯೆ ತಾನುಮಿಹೆನೆಂದು
ಬಿನ್ನವಿಸಲಾ ಕಾಲನು || ಅವನಿಪಾಲರ್ಷಿ ಕೇಳಧಿಕಪಾತಕಿಗಳಾ | ದಿವರಿಂತು
ಘೋರತರ ನರಕಯಾತನೆಯನನು | ಭವಿಸುತಿಹರೆನ್ನನೇಮದೊಳಿವರನಾ
ನೆಂತು ಬಿಡಲಿಯಮನೆನಿಕೊಂಡು ||೧೯||

ಇವನೊರೆಯುಲೇಂ ಮಿತ್ರತಲ್ಪವುಂಪೊರ್ದಿದವ | ನಿವನನೀಲೋಹ ಶಂಕುಸ್ಥಾನದೊಳ್ಪೇಡಿ | ಸುವರೆನ್ನ ಭಟರನ್ಯರೊಡವೆಯುಂ ನುಂಗಿದಿವಗೂಡುವರ್ತ್ತಶ್ಮಲವನು || ದಿವಸಾಂತದೊಳ್ಪಸಿದುಬಂದರ್ಥಿಯುಂಕಂಡು | ಸವಿವಾತಿನೊಳುವಮಾಪರಿಸದಿಜನನೀತವೊ | ಭವನದೊಳ್ಬೇಳಸುವರಪಸಾಕ್ಷಿಯಾದಿವನನಾಲಗೆಯುನಿದೊಸೀಳ್ವರು ||೨೦||

ಮಾತಾಪಿತೃದ್ರೋಹವುಂ ಗುರುದ್ರೋಹವುಂ | ಭ್ರಾತೃವಿದ್ರೋಹವುಂ ಸ್ವಾಮಿವಿದ್ರೋಹವುಂ | ಭೀತಿಯಿಲ್ಲದೆ ಮಾಡಿದಿವರನೀರೌರವದೆಚಿತ್ರಮೆನೆಹಿಂಸಿಸುವರು || ಪ್ರೀತಿಸದೆನಿಜಪತಿಯುನನ್ಯನೊಳ್ವರ್ತ್ತಿಪಳ | ನೀತಪನಶಾಲೆಯೊಳ್ಪಲತೆರದೆ ತಪಿಸುವ | ಘಾತಿಸುವರೀಲಂಚಗುಳಿಯುನೀಸಂಘಾತನಿಲಯುದೊಳ್ನೋಡುನೋಡು ||೨೧||

ಅರಸನೊಡನನ್ನ ಕಂಟಕನಾದಿವನನುಗ್ರ | ತರಶೂಲಕೇರಿಸುವರಧಿಕಾರದಲ್ಲಿನಿಜ | ಪರಭೇದದಿಂ ಪಕ್ಷಪಾತಿಯಾದಿವನನೀಯಸಿಪತ್ರದೆಡೆಯುರುಳ್ಚಿ || ಪರಿಪೀಡಿಸುತ್ತಿಹರ್ಪರಶುವೃತ್ತಿಯಾದಿವನ | ನಿರದಡುವರಿಂತು ಕುಂಭೀಪಾಕನಿರಯುದೊ | ಳ್ನಿರುಕಿಸೀವಿಶ್ವಾಸಘಾತಿಯುಂ ಕಾಲಸೂತ್ರಕ್ಕೆ ಸೇರಿಸಿ ತವಿಪರು ||೨೨||

ಈತೆರದೊಳನ್ನು ಮೀತಾಣದೊಳನೇಕವಿಧ | ಪಾತಕಂಗಳನೆಸಗಿದವರಾಯಾಘೋರ | ಯಾತನೆಯುನನುಭವಿಸುತಿರ್ಪರಿವರಂ ಬಿಡಿಸಲೆಳಸಿದೊಡೆನೀಂ ದಯಾಳು || ಸಾತತ್ಯಭಕ್ತಿಯಿಂ ರಾಮಚಂದ್ರಾಂಘ್ರಿಪನ | ಜಾತವುಂ ಜಾನಿಸುತೆ ಘಳಿಸಿರ್ಪಪುಣ್ಯವುಂ | ಪ್ರೀತಿಭರದಿಂದಿವರ್ಗಿತ್ತೊಡಿವರೆಲ್ಲರಂಬಿಡಲಾಪೆನಾನೆಂದನು ||೨೩||

ಎನಲೊಡನಪಾರಪುಣ್ಯಾದರಾಶಿಯೆನಿಸಿದಾ | ಜನಕನಂತಾಗಲೆಂದೆನುತವಗಾರ್ಪುಣ್ಯ | ವನೆ ಧಾರೆಯೆರೆದೀಯುಲವರೆಲ್ಲರುಂ ನರಕವಾಸದಿಂ ಬಿಡಿಸಿಕೊಂಡು || ವಿನುತದಿವ್ಯಾಂಗವುಂ ಪಡೆದೆಲೆ ಕೃಪಾಳು | ಜನಪಾಲನಿನ್ನತ್ತಣಿಂದೆ ಮಗೆ ಸುಖವಾದು | ದೆನುತೆ ದಿವ್ಯಸ್ಥಾನಕ್ಕೈದಲಾನೃಪತಿ ಯುಮಧರ್ಮನೊಡನಿಂತೆಂದನು ||೨೪||

ಭಾನುನಂದನನೆ ಪೇಳೆನಗಾವಪಾಪದಿಂ । ದೀನರಕದರ್ಶನಂಘಟಿಸಿತೆ ನೆ ಕಾಲನೆಲೆ । ಮಾನವಾಧೀಶ ನಿನ್ನಂದದ ಮಹಾಸುಕೃತಿ ಭೂಮಿಯೊಳಗಿಲ್ಲೋರ್ವನೂ ॥ ನೀನೊಂದಿನಂ ನಗರಪಥದೆ ನಡೆಯುತಿರ್ದೊಂದು । ಧೇನುವಂ ದಂಡದಿಂಬಡಿದೆ ನಿರ್ನೆರವಾದು । ದಾ ನಿಮಿತ್ತದೆ ನಿನಗೆ ನರಕದರ್ಶನಮೀಗಳಾಪಾತಕಂ ಕಳೆದುದು ॥೨೫॥

ಶರಣಾಗತಾರ್ತಿಭಂಜನ ಧುರಂಧರಧರಾ । ವರನಿಕರ ಮೌಳಿಮಣಿಸಜ್ಜನಾಗ್ರಣಿಯಿನ್ನು । ತೆರಳುನೀಂ ಪುಣ್ಯಲೋಕಾವಾಸಕೆಂದು ಬೀಳ್ಕೊಡಲಾ ಮಹಾರಾಜನು ॥ ತರಣಿಜನಪದಕೆರಗಿ ದಿವ್ಯರಮಣೀಮಣೀ । ಕರಕಲಿತಚಾಮರವ್ಯಜನೋಪಚಾರದಿಂ । ಮೆರೆವ ರಮಣಿಯ ಮಣಿಮಯ ವಿಮಾನವನೇರಿ ಪುಣ್ಯಲೋಕಕೆ ನಡೆದನು ॥ ೨೬ ॥

ಅದರಿಂದೆಪೂಜಿಸಲ್ತಕ್ಕುದೈಧೇನು ಕೇ । ಳದನಿರದೆನೋಯಿಸಿದಮತಿವಿಹೀನಂಗೆ ತ । ಪ್ಪದು ಘೋರನರಕಗತಿ ನೀನದಂ ನಿತ್ಯಮುಂ ದೃಢಭಕ್ತಿಭಾವದಿಂದೆ ॥ ಮುದವೆತ್ತು ಸೇವಿಸಲ್ಕಿನಗಹುದು ಸಂತಾನ । ಮಿದುನಿಜಂ ರಾಜೇಂದ್ರನೀನದಂ ಸೇವಿಸುವ । ಹದನನರುಹುವೆ ನಾಲಿಸವಧಾನದಿಂದೆಂದು ಜಾಬಾಲಿಯಿಂತೆಂದನು ॥ ೨೭ ॥

ದಿನದಿನದೊಳರ್ಚಿಸಿ ವಿಧಿಪ್ರೋಕ್ತಮಾರ್ಗದಿಂ । ತಿನಲಿಕ್ಕಿಜವೆಯ ಗೋವಂನಡಸಿಕೊಂಡೊಡನೆ । ವನಕೈದಿಮೇಯಿಸುವುದೆಳವುಲ್ಲನಮಪೀರ್ದೊಡಂಬುವಂನೀಂಪೀರ್ವುದು ॥ ಜನಪಕೊಂಡೊಡೆಮೇವನದು ಭುಂಜಿಸುವುದು ನೀ । ನನುಸರಿಸಿಕೊಂಡು ಪರಿರಕ್ಷಿಸುವುದದನೆದರ । ತನುಗೆಮುತ್ತುವನೊಳನನಟ್ಟುವುದು ಮಲಗಲದು ಮಲಗುವುದು ಕಟ್ಟಳೆಯಿದು ॥ ೨೮ ॥

ಇಂತೀವ್ರತವನೊಂದುಮಂಡಲವೊಡರ್ಚುನೀಂ । ಸಂತಾನಮಹುದು ಸಂದೇಹಮಿಲ್ಲೆನೆ ಧರಾ । ಕಾಂತಂಹಸಾದವೆಂದಂತು ತನ್ಮಹಿಷಿಯುಗೋವ್ರತವನಾಚರಿಸುತೆ ॥ ಕಾಂತಾರಕೊಂದುದಿನವೈದಿ ಗೋವಂಬಿಟ್ಟು । ಕಾಂತವಹಬನಸಿರಿಯನೋಡುತತ್ತಿತ್ತಲ । ವಾಂತುಸುಳಿದಾಡುತಿರಲೊಂದುಸಿಂಹಂ ಬಂದು ಬಲ್ಪಿಂದದಂಪಿಡಿದುದು ॥ ೨೯ ।

ಬಳಿಕಾಋತಂಭರಂಬಂದು ಕೇಸರಿಯಿಂದೆ | ಕೊಲೆವಡೆದ ನಿಜಮಾತೃವೆನಿಪ ಗೋವಂನೋಡಿ | ತಳೆದುಕಡುಚಿಂತೆಯಂಮನದೆ ಮುಂದೆನಗೆಗತಿಯೇನೆಂದು ಪಲತೆರದೊಳು || ಅಳಲುತಾಮುನಿಯಬಳಿಸಂದೆರಗಿ ನಡೆವುದಂ | ತಿಳುಹಿಮುನಿನಾಥಪೇಳೀಪಾಪವೇತರಿಂ | ಕಳೆವುದೀವ್ರತಪೂರ್ತಿಯೆಂತಪ್ಪುದೆಂದು ಬೆಸಗೊಳೆ ಮುನಿಪನಿಂತೆಂದನು ||೩೦||

ಈಮಹಾಪಾಪವಳಿದಭ್ಯುದಯಮಾಗುವೊಡೆ | ರಾಮಚಂದ್ರನಭಕ್ತನೆನಿಸಿರ್ಪ ಋತುಪರ್ಣ | ಭೂಮಿಪನಬಳಿಗೆ ಪೋ ನಿನಗವಂ ಸಮುಪದೇಶಂಗೈವನೆಂದು ಬೆಸಸೆ || ಆಮಹಿಪನರಿಭಾವಮಿದೆರ್ಡಂ ಬಿಟ್ಟದಂ | ಸಾಮನಸ್ಯದೆತಳರ್ದನಲ್ಲಿಗರಿಮಿತ್ರರಂ | ಸಾಮಾನ್ಯಮಾಗೆಣಿಸಋತುಪರ್ಣನಾತನಂ ಬಹುಮಾನದಿಂ ಕಂಡನು ||೩೧||

ಹರುಷಗೊಂಡೊಡನೆ ತನ್ನಯ ಹದನನಾಋತಂ | ಭರನರುಹೆಋತುಪರ್ಣರಾಯನೆಲೆ ರಾಜೇಂದ್ರ | ಪರಮರ್ಷಿಜಾಬಾಲಿಯೆಲ್ಲಿ ಬಾಲಿಶನಾದನಾನೆಲ್ಲಿ ಕೇಳಾದೊಡಂ || ಗುರುವಚನದಿಂಗೆಬಂದಿರ್ಪೆನೀನವರಿನಾ | ನರಿದಿರ್ಪುದಂ ನಿನಗೆ ತಿಳುಹುವೆಂದುರಿತಮಿ | ತ್ತೆರನಾದುದೈಜ್ಞಾನಕೃತಮೆಂದುಮಜ್ಞಾನಕೃತಮೆಂದು ಮೀಜಗದೊಳು ||೩೨||

ಒಂದನೆಯದಕ್ಕೆ ಕೇಳ್ಪರಿಹಾರಮಿಲ್ಲ ಪೆರ | ತೊಂದಕ್ಕೆ ಕೃಚ್ಛ್ರಚಾಂದ್ರಾಯಣಾದಿವ್ರತಗ | ಳಂದುಂಟುಪರಿಹಾರಮೇಕಾಗ್ರಭಾವದಿಂರಾಮನಡಿದಾವರೆಯನು || ಒಂದುದಿನಮುಂಬಿಡದೆ ಭಜಿಸುತ್ತೆಗೋವ್ರತಮ | ನಂದಿನಂ ತಾಚರಿಸಿ ಸದ್ವಿಜಂಗುಕ್ತಧನ | ದಿಂದೆಸಹಿತಾಗೋವನಿತ್ತೊಡಾ ಪಾಪವಳಿದಹುದು ಸಂತತಿಯೆಂದನು ||೩೩||

ಆನುಡಿಯನಾಲಿಸಿ ಋತಂಭರಂ ಸಂತುಷ್ಟ | ಮಾನಸದೊಳೈತಂದು ನಿಜನಗರಿಗಂತು ಮ | ತ್ತಾನುಮಾವ್ರತವನಾಚರಿಸಿ ರಾಮಧ್ಯಾನದಿಂದೆ ಪೂತಾತ್ಮನಾಗಿ || ಧೇನುಪೂಜಾಮಹಿಮೆಯಿಂ ಪಡೆದು ಪುತ್ರಸಂ | ತಾನವಂ ತಾಂಸತ್ಯಪರನಾದಕಾರಣದೆ | ಸೂನುವಿಗೆ ಪತ್ನಿಯಿಂದೊಡಗೂಡಿ ಪೆಸರಿಟ್ಟನೈಸತ್ಯವಂತನೆಂದು ||೩೪||

ಕೃತಕೃತ್ಯನಾಗಿ ಬಳಿಕಾಖುತಂಭರ ಭೂಮಿ । ಪತಿರಾಜ್ಯಕೊಳ್ಸುತಂಗಭಿಷೇಕಮಂಗೈದು । ಸತಿಯೊಡನೆ ವೈರಾಗ್ಯಶಾಲಿಯಾಗೈದಿದಂಪಾವನ ತಪೋವನಕ್ಕೆ ॥ ನುತಶೀಲನಹಸತ್ಯವಂತನೀರಾಜ್ಯಮಂ । ಕ್ಷಿತಿಪ್ರೀಗಳ್ ಧರ್ಮದಿಂಪಾಲಿಸುತ್ತಿರ್ದಪಂ । ಸತತಮುಂಬಿಡದೆರಾಮನಪದಾಂಭೋಜಮಂ ಭಕ್ತಿಯಿಂಸೇವಿಸುತ್ತೆ ॥೩೫॥

ಎನುತೆಶತ್ರುಘ್ನಂಗೆಸುಮತಿ ಬಿನ್ನವಿಸುತಿ । ರ್ಪನಿತರೊಳಗಾಕುದುರೆ ರಾಮನಾಮಾಂಕನದ । ಕನಕಪಟ್ಟದನಾಂತು ನಿಜರಾಜಧಾನಿಗಭಿಮುಖಮಾಗಿ ಬರುತಿಹುದನು ॥ ಅನುಚರರ್ಬಂದುಬಿನ್ನವಿಸೆ ಕರ್ಣದೆವಿನೂ । ತನಸುಧಾವರ್ಷಮಾದಂತೆವೋಲ್ರಾಮಚಂ । ದ್ರನಪೆಸರನಾಲಿಸುವುದುಂಸತ್ಯವಂತನಾನಂದಪರವಶನಾದನು ॥೩೬॥

ಬಳಿಕಾಮಹೀವರಂ ಮೈಯೆಲ್ಲಮಂಜುಮ್ಮ । ನಳುರೆ ಪುಳಕೋತ್ಕರಂ ಕಣ್ಣೊಳಾನಂದಮಯ । ಜಳಮೊಸರೆ ಸಕಲಸೇನಾಪರೀವಾರ ಪುರವೃದ್ಧಜನ ಸಹಿತನಾಗಿ ॥ ಚಳಕದಿಂಪ್ರೊರಮಟ್ಟುದಿಗೊಂಡು ಬಹಕುತೂ । ಹಳದೆ ಸೌಮಿತ್ರಿಯಂತತ್ಪದಕ್ಕೆರಗಿ ಪು । ಷ್ಕಳಮುಖರನಪ್ಪಿಪಿರಿದುತ್ಸವದೊಳೆಲ್ಲರುಮನರಮನೆಗೆ ಕರತಂದನು ॥೩೭॥

ಸತ್ಯಧರ್ಮವ್ರತಾಚರಣಪರನೆನಿಸಿದಾ । ಸತ್ಯವಂತಂಬಳಿಕನೆರೆ ನಮ್ರಭಾವದಿಂ । ದತ್ಯಧಿಕಹರ್ಷದಿಂ ಸೈನ್ಯಪರಿಜನಸಹಿತನಾದ ರಾಮಾನುಜಂಗೆ ॥ ಅತ್ಯಂತವಿತರಣೆಯ ಸತ್ಕೃತಿಯನೆಸಗಿ ಪರಿ । ಮಿತ್ಯತಿಕ್ರಾಂತಧನಮಣಿವಾಹನಾದಿಗಳ । ನತ್ಯುದಾರತೆಯಿಂದೆ ಕಯ್ಗಾಣ್ಕೆಯಾಗಿತ್ತು ಪದಕೆರಗಿ ನುಡಿದನಿಂತು ॥೩೮॥

ಸ್ವಾಮಿಕೇಳೆನ್ನರಾಜ್ಯಂ ನಿನ್ನದಾಗಿಹುದು । ರಾಮಚಂದ್ರಂಗೆನಾಂ ದಾಸನಾಗಿರ್ದಪ್ಪೆ । ನಾಮಹಾತ್ಮನಚರಣಮಂಕಂಡು ನೆರೆಧನ್ಯನಾನಾಗಲೆಳಸುವೆನೆನೆ ॥ ರಾಮಾನುಜಂಕೇಳ್ದು ಸತ್ಯವಂತನೆನಿನ್ನ । ನಾಮವನ್ವರ್ಥಮಾದುದು ನಿನ್ನಸತ್ಕೃತಿನಿ । ಕಾಮವೆನಲೆಮ್ಮೆಲ್ಲರಂತುಷ್ಟಿ ಪಡಿಸಿದುದು ನೀನೆಳಸಿದಂತಾಗಲಿ ॥೩೯॥

ಈರಾಜ್ಯದೊಳ್ಬಳಿಸಪಟ್ಟಾಭಿಷೇಕಮುಂ । ವೀರಯುವರಾಜರುಕ್ಮಾಂಗ ನೀನೆನ್ನೊಡನೆ । ಬಾರೆಂದುನುಡಿಯಲಾ ನೃಪತಿತನಯಂಗೆ ರಾಜ್ಯಾಭಿಷೇಕವನೊಡರ್ಚಿ ॥ ಶ್ರೀರಾಮಚಂದ್ರಪದದರ್ಶನೌತ್ಸುಕ್ಯದಿಂ । ದಾರಘುಜನೊಡನೈದಲುದ್ಯುಕ್ತನಾದನಾ । ವಾರುವಂಮುಂಬರಿಯೆ ಶತ್ರುಘ್ನನೆಲ್ಲರೊಡನಲ್ಲಿಂದೆ ಪೊರಮಟ್ಟನು ॥೪೦॥

೧೩ ನೆಯ ಸನ್ಧಿ ಸಂಪೂರ್ಣಂ.

ಇಂತು ಸನ್ಧಿ ೧೩ ಕ್ಕೆ ಪದ್ಯ ೬೦೮ ಕ್ಕೆ ಮಂಗಳಮಸ್ತು.

ಹದಿನಾಲ್ಕನೆಯ ಸನ್ಧಿ.

ಸೂಚನೆ॥ ಉನ್ಮಾರ್ಗರೆನಿಸಿ ಮಾಯಾಕುಶಲರಾದ ವಿ | ದ್ಯುನ್ಮಾಲಿಮುಖರಾಕ್ಷಸರ್ವಿಪಿನಮಾರ್ಗದೊ | ಳ್ತನ್ಮಖತುರಂಗಮುವನಪಹರಿಸಿ ಸೌಮಿತ್ರಿಯಿಂದೆಸಂಹೃತರಾದರು ||

ತವಸಿ ಕೇಳ್ಬಳಿಕ ಸೌಮಿತ್ರಿತತ್ತ್ವದ್ವೇಶ | ದವನೀಶರಿತ್ತ ಪಲತೆರದ ಕಾಣ್ಕೆಯುಮಸ್ತು | ನಿವಹವನಯೋಧ್ಯಾಪ್ರುರಿಗೆ ಕಳುಹುತಲ್ಲಲ್ಲಿ ಸೈನ್ಯಮಂ ಮೇಳವಿಸುತೆ || ವಿವಿಧನಾವ್ಯಂಗಳೆಣ್ದೆಸೆಯೊಳುಂ ಮೊಳಗುತಿರೆ | ಸವತುರಂಗಮುವನನುಸರಿಸಿಕೊಂಡೊಲವಿಂದೆ | ಪವಮಾನತನಯ ಪುಷ್ಕಲಮುಖ್ಯರ್ವೆರೊಡನೈದುತಿರೆ ಪಶ್ಚಿಮದೊಳು ||೧||

ಪರಿಚಲದಭಂಗುರಧರಾಧರಾಕಾರ ಭೀ | ಕರತರತರಂಗಾವಕೃಷ್ಟನಿಸ್ಸಂಖ್ಯಪಾಂ | ಡರವರಾಟಕ ಶಂಖ ಶಂಬೂಕನಿಕರಪರಿಪಿಹಿತಶಾಖಾವಶಿಷ್ಟಸ್ಫುರದನೇಕಾನೋಕಹಾಸಿಂಧುಸಿಂಡತತಟ | ಪರಿಸರಾನೂಪಾಪರುದ್ಧ ಬಹುವಿಧ ಮಹಾ | ತರಣಿಧ್ವಜಸ್ತಂಭಧೋರಣೀಬಂಧುರಂ ಸಿಂಧುರಂಜೆಸಿತು ಮುಂದೆ ||೨||

ಮೊದಲಿತ್ತ ಕಪಿಸೈನ್ಯದೊಡಗೂಡಿಬಂದು ಕ | ಟ್ಟಿದನೆನ್ನ ನಾರಾಮನೀಗಳವನನುಜನೆನಿ | ಸಿದ ಶತ್ರುಹಂತಾರನಿವನಿಂತು ಚತುರಂಗಸೇನಾಸಮೇತನಾಗಿ || ಇದಕೊ ಬಂದೇನೊಡಚರ್ವನೊ ತಾನೆಂದುಬಗೆ | ದಿದಿರಾಂತು ಕಡುಮುಳಿದು ರಭಸದಿಂಗರ್ಜಿಸು | ತೆತ್ತಗಿ ಮೇಲ್ವಾಯ್ದುಬರ್ಪವೊಲಿರ್ದುದಾ ಸಿಂಧುವುದ್ಧತತರಂಗೌಘದೆ ||೩||

ನೆಲದೊಳಾನೊರ್ವನೇ ವಾಹಿನೀನಾಥನೆಂ | ದಲಘುತರಗರ್ವದಿಂದಿರದೆ ಮೆರೆಯುತ್ತಿರ್ದ | ಜಲರಾಶಿ ತನ್ನಿದಿರೆ ಬರುತಿರ್ಪ ರಘುವೀರನಾಮುಹಾನೀಕದೊಳಗೆ || ಪಲಬರಂ ವಾಹಿನೀನಾಥರಂ ನೋಳ್ಪುದುಂ | ತಳೆದುಲಜ್ಜಾಭಾರಮಂ ಕಂದಿಕಳೆಗುಂದಿ | ಮಲಿನತೆಯನಾಂತನೆಂಬಂತದೇನೀಕ್ಷಿಪ್ಪೊಡೆ ಕಣ್ಗೆವಂದನೊಕರಂಗಿ ||೪||

ತರತರದೆ ಮೇಲೆಮೇಲೈತರುತ್ತಿರ್ಪ ಪೆ | ರ್ದೆರೆಗಳೊಂದೊಂದರು
ಬ್ಬುಟೆಯ ಪೊಯ್ಲಿಂದೆ ಬಿ | ತ್ತರಗೊಂಡು ಸಿಡಿದೆದ್ದ ಗಣನೆಯಿಲ್ಲದ ಬಹುಳ
ನಿರ್ಮಲಾಂಭಃಕಣಗಳು || ನಿರತಿಶಯಭಕ್ತಿಯಿಂದವಿರತಮುಮುದ್ವೀಚಿ |
ಕರಗಳಿಂ ಸಿಂಧುಪತಿ ವಿಷ್ಣುಪದಕರ್ಚಿಸುವ | ಸುರುಚಿರ ನವೀನಮುಕ್ತಾಸು
ಮಗಳೆಂಬಂತೆ ಪೇವಡೆದದೇನೆಸೆದುವೋ ||೫||

ಅಳಿಯನೆನಿಸಿರ್ಪನಾವಂಗೆ ಲಕ್ಷ್ಮೀಕಾಂತ | ನಳವಿಲ್ಲದವರಾದರಮೃತಾ
ಶರಾವನಿಂ | ತಳೆದುದಾವವನಿನಚ್ಚರಸಿಯರನೆಲೆವೀಡು ಭೋಗಾಸ್ಪದಪ್ರಥೆ
ಯನು || ವಿಳಸದುತ್ತಂಸಮಂ ಪಡೆವನಾವನಿನಿಂದು | ಕಳಕೋತ್ತಮಾಂಗ
ನಿನ್ನಾವನಿಂದಿಂದ್ರನ | ಗ್ಗಳಿಕೆವೆತ್ತೈಸಿರಿಯ ಪಡೆದನಾ ರತ್ನಾಕರನಮಹಿಮೆ
ಪೊಗಳಲಳವೆ ||೬||

ಆವಂಗೆ ಪುಂಡರೀಕಾಂಬಕನುಮಿಂದ್ರನುಂ | ದೇವದೇವನುಮಖಿಲ
ಸುರರುಮರ್ಥಿಗಳೊಮು | ತ್ತಾವನಾಶ್ರಯಬಲದೆ ಧರೆಗೆ ಜೀವನದಂಗಳೆನಿಸಿ
ಹುವೋ ಮೇಘಂಗಳು || ಆವವನತೀರಸಿಕತಾಯಿತಮೊ ವಿಮಲಮು | ಕ್ತಾ
ವಿಸರಮಂತು ವಿದ್ರುಮಮಯದ್ವೀಪಂಗ | ಳಾವನೊಳಸಂಖ್ಯಾತಮಾಗಿಹು
ವೋ ಪೇಳಲರಿದಾ ಸಮುದ್ರನಸಿರಿಯನು ||೭||

ಕತಿಪಯಾತ್ಯಲ್ಪರತ್ನಂಗಳಂ ಪಡೆದು ಬ | ಲ್ಲ್ಯತನದಿಂ ಕಾದುಕೊಂಡೆ
ಡೆಯೊಳತಿಜಾಗರೂ | ಕತೆಯಿಂದೆ ತಾವು ಮೈಸಿರಿವಂತರೆಂದು ನೆಗಪಿದಕೊರ
ಳನೆರಗಿಸದೆಯೆ || ಅತಿಮಾತ್ರಗರ್ವದಿಂ ಮೆರೆವಮೂಢರನೀಕ್ಷಿ | ಸುತೆಗಹಗಹಿ
ಪವೊಲಾಮಹಿತರತ್ನಾಕರಂ | ಸಿತಫೇನಕೂಟಪರಿಕಲಿತಮುಖಭಾಗನೇನೊ
ಪ್ಪಿದನೊ ಭೋರ್ಗರೆಯುತೆ ||೮||

ತೋರಿದುವು ತನ್ಮಹಾವಾರಿಧಿಯೊಳಲ್ಲಲ್ಲಿ | ದೂರದೊಳ್ಮೇಲೆಮೇಲಂ
ತರೀಪಾಂತರಕೆ | ಸಾರುತ್ತಮಿರ್ಪಪೆರ್ವಡಗುಗಳ ಪಸರಿಸಿದಸಿತಕೇತನಾಂ
ಬರಗಳು || ವಾರಿನಿಧಿಮಧ್ಯಶಯನಾದಚ್ಯುತನನಾಭಿ | ಸಾರಸದೊಳಿರ್ಪಂಚೆ
ದೇರನಾ ವಾಹನಮ | ಹಾರಾಜಹಂಸನಂ ಸೇವಿಸಲ್ಬರುತಿರ್ಪಹಂಸಂಗಳೆಂ
ಬಂತಿರೆ ||೯||

ಪಲತೆರದಮೀಂಗಳಿಂ ನಭದಂತೆಮೆರೆಯುತ್ತೆ | ಮಲಯಾದ್ರಿಯಂತೆ ಭದ್ರಶ್ರೀಸಮುದ್ಭವ | ಸ್ಥಲಮೆನಿಸಿ ಸುಕೃತಿಕುಲದಂತಿರೆ ನದೀನತೆಯನಾಂ ತಂಬುಜಾಕ್ಷನಂತೆ || ಸಲೆಚಕ್ರಶೋಭಿಯಾಗದ್ವೈತನುತದಂತೆ | ಜಲಜೀವ ಸಂಕುಲಾಭಿನ್ನಾತ್ಮಮಹಿಮಾಪರಿ | ಕಲಿತಮಾಗಡವಿಪ್ರೋಲ್ಲಸಂಗತಶತದ್ರುವಾ ಗಾಸಿಂಧುವೇನೆಸೆದುದೋ ||೧೦||

ನಿರುಕಿಸಿಸಮುದ್ರಮಂ ನಿಂದುಲಕ್ಷ್ಮಣಸಹೋ | ದರನಲ್ಲಿ ತತ್ತೀರ ಜನಪದವನಾಳ್ವಧೀ | ಪರನೃಪಂ ಮಣಿದಿತ್ತು ಪೊಸದೋರಮುತ್ತುಚೆಂಬವಳ ಗಳ ರಾಶಿಗಳನು || ಹರಿಸದಿಂ ಕಾಣ್ಕೆಗೊಂಡೊಲ್ದವಂಗೈದ ಸ | ತ್ಕರಣೆಯಿಂ ತುಷ್ಟನಾಗೊಂದುದಿನಮಲ್ಲಿದ್ದು | ತಿರುಗಿಬರುತಿರಲತ್ತಣಿಂ ಪೌವನಾಪಥದೆ ಗಾಢತಮಮಾವರಿಸಿತು ||೧೧||

ಒಡನೆ ಲಯವಹ್ನಿಧೂಮಸ್ತೋಮವೆನೆ ಮುಗಿಲ | ಗಡಣಮಂಬರವ ನಳುರ್ದುದು ಜಗವನಿರದುರುಹಿ | ಬಿಡಲೆಂಮುಮುಸುಕಿರ್ದಪಣೆಯಕಣ್ಣಿಂ ಹರಂತೆರೆತೆರೆದು ಬಿಟ್ಟಪನೆನೆ|| ಅಡಿಗಡಿಗೆಮಿಂಚುಗಳ್ಪೊಳ್ಪೊಳೆದುವೇನೆಂಬೆ | ನೊಡೆವಪ್ಪೊ ಪಲವಜಾಂಡಂಗಳೆನೆ ಧಡಧಡನೆ | ಸಿಡಿಲ್ಗಳಾರ್ಭಟಿಸಿದುವುಬಿ ರುಗಾಳಿಕಾಲಸರ್ಪನಸುಯ್ಲನಲ್ಬೀಸಿತು ||೧೨||

ಮುಸುಕಿದುದು ಧೂಳೀವಿತಾನಮೆತ್ತಲುಮಾಗ | ಳೊಸರಿತೊಡನೊಡ ನೆ ಕೆನ್ನೀರಮಳೆ ಬಹುಳಸಾ | ಧ್ವಸಮಾಂತುನಿಂದುದಲ್ಲಿಯೆ ನಡೆಯುತಿರ್ದರಾ ಘವನ ಚತುರಂಗಸೇನೆ || ಆಸವಸಂಬೆತ್ತು ಕಂಗೆಟ್ಟು ದಿಗ್ಭ್ರಮೆಗೊಂಡು | ದೆಸೆದೆಸೆಗವೋಡಿದುದು ಬಳಿಕ ನಿಲಲರಿಯದೀ | ಕ್ಷಿಸುತೆ ತದ್ಘೋರಲಕ್ಷಣ ಮನೋಕೋ ಇದೇನೆನುತವ್ಯವಸ್ಥೆಯಿಂದೆ ||೧೩||

ಸಮನಿಸಿತೊ ಲಯಕಾಲಮಲ್ಲದೊಡೆ ರಾಮಚಂ | ದ್ರಮನ ಮಖಕಾ ವರಿಸಿತೋ ವಿಘ್ನಮೀತೆರದೊ | ಳಮಮ ಮೋಣಿಪ ರಾಕ್ಷಸರಮಾಯೆಯೋ ಕಾಣೆವೆಂದೆನುತ್ತುರೆಶಂಕಿಸಿ || ಸುಮತಿಲಕ್ಷ್ಮೀನಿಧಿಸುಬಾಹು ಪವಮಾನಸುತ| ಸುಮವಪ್ರಮುಖರೊಡನೆ ಶತ್ರುಹಂತತ್ಕಾಲ | ಸಮುಚಿತಾಲೋಚನಂಗೈ ದು ವಾಯುವ್ಯಾದಿ ದಿವ್ಯಾಸ್ತ್ರಗಳನೆಚ್ಚನು ||೧೪||

ಒಡನೆ ಭಗ್ನನಬೆಳಗುತಲೆದೋರಲಾವುಮುಗಿಲ | ಗಡಣವೆತ್ತೋಡಿದು ದೊ ನೋಡಲಾಧೂಳಿಯು | ತ್ತಡಗಿವುದೊ ಮಿಂಚುಗಳಹಬೆಯೆತ್ತನಂದಿದು ದೊ ಮಳೆಯೆತ್ತವಾಯುವಾಯ್ತೊ || ಸಿಡಿಲ್ಗಳಾರ್ಭಟವೆತ್ತಮುಗಿದುದೋ ತಾನೆತ್ತ | ನಡೆವುದೋ ಬಿರುಗಾಳಿಮುಬ್ಬೆತ್ತ ಮರೆಯಾಯ್ತೊ | ನುಡಿವುದೇ ನಿಂದ್ರಜಾಲದತೆರೆಕರೆಯಾದುದು ಮಹೋತ್ಪಾತ ಲಕ್ಷಣವದು ||೧೫||

ನೋಡಿಶತ್ರುಘ್ನನಾ ಘೋರತರಮಾಯೆಯುಂ | ನೋಡಿಕಾಣದೆಮುಂದೆ ಪೋಗುತಿರ್ದಶ್ವಮಂ | ನೋಡಿ ಕಿರುಗೆಂಟನೊಳ್ ಬಳಿಕಿದಿರೊಳದ್ರಿಶಿಖರದೊಳ್ಸೆವ ಪೊಳಲೊಂದನು || ನೋಡಿ ಭೂಪರಿಧಿಯುಂ ನರೆತಿಳಿದಸುಮತಿಯುಂ | ನೋಡಿದಾವುದು ಮುಂದೆ ಗಿರಿಯುಮೇಲಣನಗರಿ | ನೋಡಿದೊಡೆಭೀಕರಮೆನಿಪ್ಪಿದಾವಡವಿ ಪೇಳೆಂದೊಡವನಿಂತೆಂದನು ||೧೬||

ಅರಸಕೇಳಿದು ವಿಂಧ್ಯವನಸೀಮೆಯಿದು ಮಹಾ | ಗಿರಿಯೊಳಾದಶಕಂಠನೊಡನಾಡಿದುಷ್ಟಮತಿ | ನಿರವಧಿಕಮಾಯಾವಿಶಾರದಂ ಘಾತುಕಕುಲಾಗ್ರಸರನಘಸಮುಷ್ಟ || ಉರುಶೌರ್ಯಶಾಲಿ ವಿದ್ಯುನ್ಮಾಲಿಯೆಂಬನಿಪಿ | ಚರನಸಂಖ್ಯಾತರಾಕ್ಷಸರೊಡನೆ ವಿದ್ಯುನ್ನ | ಗರಮೆಂಬ ಪೆಸರೊಳೀಪೊಳಲನಾರಚಿಸಿಕೊಂಡಾಳುತಿಹನೀವನವನು ||೧೭||

ಈವಿಗಡರಕ್ಕಸನ ದುರುಳನೇವೇಳ್ವೆನಾ | ನೀವನಪ್ರಾಂತಾಶ್ರಮಂಗಳೊಳ್ಮ್ಮನಿಜನರ | ಪಾವನತಪಕ್ಕೆಡರನೊಡರಿಸುವನವರಗ್ನಿಹೋತ್ರಸಾಧನಗಳನಿಪ || ಆವುಗಳನಿರದೆಸಂಹರಿಸುವಂ ಪುಣ್ಯತೀ | ರ್ಥಾವಸತಿಗಳನಶುಚಿಗೈವನಂತಿಲ್ಲಿಹತ | ಪೋವನದೆ ನಡೆವ ಯಜ್ಞಂಗಳಂ ಕೆಡಿಪನೊಡಗೊಂಡುಘಾತುಕಚರರನು ||೧೮||

ಕೇಳೆಲೈಸೌಮಿತ್ರಿಯೀವನಪ್ರಾಂತರದೆ | ಕಾಲಿಟ್ಟ ನರರುಳಿವರೆಂದೆಂಬ ಮಾತಿಲ್ಲ | ಪಾಳಾದುವಾಶ್ರಮಂಗಳ್ಪಲವು ರಕ್ಕಸರಹಾವಳಿಯುನೀಯೆಡೆಯೊಳು || ಪೇಳಲರಿದೆಂದು ಕೇಳರ್ದನಾಂ ರಾಮನೊ | ಳ್ತಾಳರ್ದವೈರದಿಂದೀಖೂಳನಾಸುರ ಕ | ರಾಳಮಾಯೆಯೊಳೆಮ್ಮನಿಂತು ಕಂಗೆಡಿಸಿ ಪಿಡಿದೊಯ್ದನಕ್ಕಟಾ ಹಯಮನು ||೧೯||

ಮತ್ತಮೆಲೆ ಲವಣಾಸುರಾರಿಕೇಳೀ ಮದೋ | ನ್ಮತ್ತನೊಳ್ಕೌಬೇರ ಪುಷ್ಪಕಸಮಾನಮು | ತ್ಯುತ್ತಮಂ ಕಾಮಗವಿಮಾನಮೊಂದಿರ್ಪುದೆಂದುಂ ಸ ಮರಶೂರರೆನಿಪ || ನೆತ್ತರುಣಿ ಗರಭಟರಪತ್ತುಸಾಸಿರವನದು | ಪೊತ್ತುಕೊಂ ಡೆತ್ತೆತ್ತಲುಂ ಗಗನಮಾರ್ಗದೊಳ್ | ನಿತ್ತುದೂರಕ್ಕಾದೊಡಂ ಜವದೊಳೈದು ವುದೆನುತ್ತುಮಾಂ ಕೇಳ್ದೆನು ||೨೦||

ಎನೆ ಕೇಳ್ದು ರಘುಜನತ್ತಿತ್ತಚದರಿರ್ದನಿಂ | ಕಿನಿಯುನಾಕ್ಷಣಮೆ ಮೇ ಳವಿಸಿಕೊಂಡೊಡನೆ ಶಾ | ಸನಮೀಯೆ ರಾಕ್ಷಸರವಿಜಯಕ್ಕೆ ದಳದುಳನೆವೀರ ರಹಭಟರೆಲ್ಲರೂ || ಘನಸಿಂಹನಾದಂಗಳಾರ್ಭಟಂ ಭೇರಿಗಳ | ಧನಧನತ್ಕಾರ ಮುಂ ದೇವಖಾತಪ್ರತಿ | ಧ್ವನಿಗಳಂ ದ್ವಿಗುಣಿತಮದಾಗಲಾರೋಹಿಸಿದರಾ ಮಹಾಪರ್ವತವನು ||೨೧||

ಪ್ರಳಯಕಾಲದೆಮೀರಿ ದಡದಮೇಲುಕ್ಕಿಬಹ | ಜಲಧಿಯಂತಾಗಿರಿಯ ನಡರ್ವುದುಂ ರಘುವರನ | ಬಲಮುದಂಕಂಡು ತಾವಲ್ಲಲ್ಲಿ ಗುಲ್ಮಂಗಳೊಳ್ಕಾವ ಲಿರ್ದಸುರರು || ಕೆಲಬರಾರ್ಭಟಿಸುತ್ತೆ ತಡೆಯಲಿದಿರಾಂತು ಪು | ಷ್ಕಲಮುಖ ಮಹಾವೀರರಿಂ ನಿಹತರಾದರಿಂ | ಕೆಲಬರಿರದೋಡಿ ವಿದ್ಯುನ್ಮಾಲಿಗೀಸುದ್ದಿಯಂ ಬಿನ್ನಪಂಗೈದರು ||೨೨||

ಕಡುಗಲಿಯುದಂಕೇಳ್ದು ಯಾತುಧಾನಾಧಿಪತಿ | ಘುಡುಘುಡಿಸುತಾ ರ್ಭಟಿಸಿ ಘೋರತರಮಾಯೆಯಿಂ .| ಪಿಡಿದು ತಾನೊಯ್ತಂದಕುದುರೆಯಂ ಬಿ ಡಿಸಿಕೊಳಲಾವನೆನ್ನಿದಿರೆಬಹನು || ಫಡಫಡಾಗವಿಯೊಳಗೆಪಟ್ಟಿರ್ದಸಿಂಗನಂ | ಪೊಡೆದೆಚ್ಚರಿಪನಾವನನುಜನಾಪಿಸುಣಿಂದೆ | ಮಡಿದೊಡಾರಾವಣಂ ತಾನಂಜು ವನೆ ನರರ್ಗೆಂದು ಭೇರಿಯಪೊಯಿಸಲು ||೨೩||

ಯುದ್ಧಪ್ರಸಕ್ತಿಯಿಲ್ಲದೆ ಸೊಕ್ಕಿಮೈಮರೆದು | ಬದ್ಧರಾಗಬಲೆಯರ ಭುಜಯುಗಳಪಾಶದಿಂ | ಸಿದ್ಧಸಕಲೈಶ್ವರ್ಯರಾಗಿ ಪೊಳಲೊಳಗಿರ್ದ ನಿಖಿಲ ರಾಕ್ಷಸಯೋಧರು || ಉದ್ಧತಮಹಾದುಂದುಭಿಧ್ವನಿಯಕೇಳುತು | ಪ್ರಬುದ್ಧ ರಾಗಿಳದು ಮಣಿಮಂಚಂಗಳಿಂದತಿ | ಕ್ರುದ್ಧರಾಗಾಯುಧಂಗಳನಾಂತುಸನ್ನ ದ್ಧರಾಗಿ ಪೊರಮಟ್ಟರೊಡನೆ ||೨೪||

ಮೀರಿ ವೈರೇಯಮಂ ಪೀರಿ ಬಹುಮಾತ್ರಮದ | ವೇರಿ ಕೋದಂಡ ತರವಾರಿಮುಖ ಶಸ್ತ್ರಾಸ್ತ್ರ | ಧಾರಿಗಳನೇಕರವರಾರಿರುವರೆಮ್ಮೊಡನೆ ಹೋರಿ ಬದುಕುವರಿಪುಗಳು || ಬೀರಿ ಕೂರ್ಗಣೆಗಳಂ ವೈರಿಗಳಮುಖದಿಂದೆ | ಕಾರಿಪೆವು ನೆತ್ತರಂ ಭೂರಿತನ್ಮಾಂಸಮಂ | ಹಾರಿಸುವೆವೆಂದೊಗ್ಗು ಸೇರಿ ಬೊಬ್ಬಿರಿಯುತ್ತೆ ಸಾರಿದರ್ಕೊಳಗುಳಕ್ಕೆ ||೨೫||

ಬರಲೊರಲ್ದುವು ಬಳ್ಳಿಗಳ್ಕೂಡೆ ಪರ್ದುಗ | ಳ್ಕರದ ಮೇಲಂಬರವನಾವರಿಸಿ ಸುತ್ತಿದುವು | ನೆರವಿಗೊಂಡೊಡನೊಡನೆ ಕಾಗೆಗಳ್ಕೂಗಿದುವು ಕಣ್ಗೆ ದೂಳಂ ಕವಿಸುವ || ಬಿರುಗಾಳಿ ಸುಳಿದುದೆದ್ದುವು ಧೂಮಕೇತುಗ | ಳ್ನಿರುಕಿಸಿಯುಮೀ ಮಹೋತ್ಪಾತಮಂ ಲೆಕ್ಕಿಸದೆ | ದುರುಳರಾರಾತ್ರಿಂಚರರ್ಮೃತ್ಯುಪಾಶಬದ್ಧರ್ನಡೆದರಾಹವಕ್ಕೆ ||೨೬||

ಮುನಿಪತಿಯೆ ಬಳಿಕ ನಡೆದುದನಾಲಿಸೈ ಸಂಯ | ಮಿನಿಯಿಂದೆ ಪೊರಮಡುವ ಯಮದೂತರಂತೆ ಪ | ತ್ತನದೆ ಪೊರಮಟ್ಟು ತನುಕಾಂತಿಬಹುಳಶ್ಯಾಮಳತಗಗನರಸುರಭಟರು || ಇನಕುಲೇಂದ್ರನ ಬಲವನಿದಿರಾಂತು ಬೊಬ್ಬಿರಿದು | ಕನಕನಲ್ದೊರೆಮ್ಮದಲ್ಮೇಲ್ವಾಯ್ದು ಕರವಾಳ | ಘನಗದಾಮುಖ್ಯಾಯುಧಂಗಳಿಂ ದಿಕ್ಕುತ್ತೆ ಪೊಣರಲಾರಂಭಿಸಿದರು ||೨೭||

ಭರತಜನಕಾತ್ಮಜ ಸುಬಾಹು ಸುಮದಪ್ರಮುಖ | ರುರುಪರಾಕ್ರಮರೆನಿಪ ವೀರಾಗ್ರಗಣ್ಯರು | ವುದ್ಧರರಾಗಿ ಕಾರ್ಮುಕವನೊಡನೊಡನೆ ಜೇವಡೆದು ಘೋರರಾಕ್ಷಸಭಟರನು || ಉರವಣಿಸಿ ಕೂರಲಗಿನಂಬುಗಳ ಬಿರುಮಳೆಯ | ಕರೆಯುತ್ತೆ ತುಂಡುತುಂಡಾಗಿ ಕತ್ತರಿಸಿ ತ | ದ್ಗಿರಿಯ ಸಾನುಪ್ರದೇಶಂಗಳೊಳ್ನೆತ್ತರ ಪೊನಲ್ಗಳಂ ಪರಿಯಿಸಿದರು ||೨೮||

ಶತ್ರುಘ್ನನಾಜ್ಞೆಯಿಂದೊಡನೆ ರವಿಪವಮಾನ | ಪುತ್ರಪ್ರಮುಖವಲೀಮುಖಭಟರು ಮಂತಹಿ | ಚ್ಛತ್ರಾಧಿಪತಿ ಚಕ್ರಪತಿಜನಕತನಯಪುಷ್ಕಳ ಮುಖಮಹಾವೀರರೂ || ರಾತ್ರಿಚರ ದುರ್ಗಪುರಮಂ ಮುತ್ತಿ ತನ್ನಿಮಿಷ | ಮಾತ್ರದೊಳ್ ತಮ್ತಮ್ಮ ಸೇನೆಯಿಂದೊಡಗೂಡಿ | ಯಾತ್ರೆಮಾಡಿಸಿ ಕಾವಲಾಳ್ಗಳಂ ಯಮಪತ್ತನಕ್ಕೆ ಕೋಂಟೆಯನೊಡೆದರು ||೨೯||

ಅದನಾಮುನೀಂದ್ರನಾಲಿಸಿ ವಿಸ್ಮಯಾವಿಷ್ಟ | ಹೃದಯನಾಗೆಲೆಶೇಷ
ರಿಪುಪುರವನಾಕ್ರಮಿಸು | ವುದೆಕಷ್ಟಮುತ್ತುಂಗಗಿರಿಯಮೇಲಣದುರ್ಗಪ
ತ್ತನವನಾಕ್ರಮಿಪ್ಪುದು || ಅದರೊಳುಂ ಕಷ್ಟತರಮದರೊಳುಂ ಕ್ರೂರರೆ
ನಿ | ಸಿದರಾಕ್ಷಸರಪುರವನೊತ್ತುವುದು ಕಷ್ಟತಮ | ಮದರಿಂದೆಪಿರಿದುಶತ್ರು
ಘ್ನ ಸೈನಿಕರಳವಿಯೆನೆ ಶೇಷನಿಂತೆಂದನು || ೩೦ ||

ಆವನಂಲೀಲೆಯಿಂದುಲ್ಲಂಘಿಸಿದನೊನೂ | ರ್ಗಾವುದಂಬರಮಂಬುರಾಶಿ
ಯುಂಲಂಕೆಯುಂ | ರಾವಣಪ್ರಮುಖವೀರಾದಿವೀರರ್ನೋಡುತಿರ್ಪಿನಂದಾಹಿಸಿ
ದನೊ || ಆವನಂತಕ್ಷನಾಮವನೊರ್ಸಿದನೊರಣದೊ | ಳಾವಾಯುಸುತನಿರೆ
ಸಹಾಯನಾಗಸುರನಗ | ರಾವರೋಧನಮಿದೊಂದರಿದೆ ರಾಘವಬಲಕೆ ತೆಗೆ
ಮುನಿಪಮುಂದೆ ಕೇಳು ||೩೧||

ಮಾರುತಿಪ್ರಮುಖರೀರೀತಿಯಿಂ ನಿಜಪುರವ | ನಾರೋಧಿಸಿರ್ಪುದಂ
ಮೇಲೆಮೇಲೊದಗಿಬಹ | ವೀರರಾಮಾನುಜನಸೇನೆಯುಂನೋಡಿ ವಿದ್ಯುನ್ಮಾ
ಲಿಯಾಕ್ಷಣದೊಳು || ಶೂರರಹಘೋರರಾತ್ರಿಂಚರರನೇಕರೊಡ | ನೇರಿಕಾ
ಮಗವಿಮಾನವನಂತರಿಕ್ಷಸಂ | ಚಾರಿಯಾಗಾಹವಕೆತೊಡಗಿದಂ ಸಕಲಶಸ್ತ್ರಾ
ಸ್ತ್ರಸನ್ನಾಹದಿಂದೆ ||೩೨||

ಬಳಿಕದಂಕಂಡು ಶತ್ರುಘ್ನನಾಜ್ಞಾಪಿಸ | ಲ್ಬಳಕದಿಂ ತಮ್ತಮ್ಮ
ಪಡೆಯನೊಡಗೊಂಡುಪು | ಷ್ಕಳಭಾನುತನಯಲಕ್ಷ್ಮೀನಿಧಿಸುಬಾಹುಸು
ಮದಪ್ರಮುಖರಧಿವೀರರು || ಇಳಿದು ತದ್ಗಿರಿಶೃಂಗದಿಂದಖಿಳಸೈನ್ಯಮಂ |
ಪಲವಸುಗೆಗೈದುನಿಲದೊಂದೆಡೆಯೊಳತ್ತಿತ್ತ | ಚಲಿಸುತ್ತೆ ಗಗನಚರರಾದಸು
ರರೊಡನೆ ಕಾದಲ್ಕೆ ಸನ್ನಾಹಿಸಿದರು ||೩೩||

ಒಡನೆಯೆವಿಮಾನಸ್ಥರಸುರಭಟರೆಲ್ಲರುಂ | ಮಿಡಿದುತಮ್ತಮ್ಮ ಬಲ್ವಿ
ಲ್ಲನುರೆಗರ್ಜಿಸುತೆ | ಕಡುಮುಳಿದುತೆಗೆದೆಚ್ಚಶರಸಮೂಹಂಲಕ್ಷ್ಮಣಾನುಜನ
ಮೋಹರದೊಳು || ಮಿಡಿತೆಗಳಪಡೆಯಂತರಿಕ್ಷಾಂತರಾಳದಿಂ | ದೆಡೆವಿಡದೆ
ಪೊಲ್ಲದೆ[illegible]ಳೆರಗುವತ್ತೆರದೊಳೆರಗಿಕಂ | ಗೆಡಿಸಲ್ಕೆನುಡಿಯಲೇಂಪಡಲಿಟ್ಟರೊಡ
ನೊಡನೆಮಡಿಮಡಿದನೇಕಭಟರು ||೩೪||

ಧೀರರುಂ ವೀರರುಂ ಶತ್ರುಘ್ನಮೈಥಿಲಕುಮಾರಭಾರತಿಮುಖ್ಯಧನ್ವಿಪ್ರಧಾನರಾ | ಪಾರುವಂಗುರಿಗೆಟ್ಟೆಸೂಸಿದಪ್ರಣುಂಬುಗಳಾತ್ರಮಂಗೆ ಕಪಿಗಳಂತೆ ॥ ಪೇರೊಲವನಾಂತುನೆರೆಸಾಹಾಯ್ಯಮಂತಾವು | ಮಾರಚಿಸಲೆದ್ದುಪಾತಾಳದಿಂಪೊಣರಲಾ | ಘೋರರಾಕ್ಷಸರೊಡನೆ ಗಗನಕ್ಕೆನೆಗೆವಹಿಗಳೆಂಬಂತೆ ತೋರ್ದುದನುಪಮಮಾ ॥೩೫॥

ಆಶರಪರಂಪರೆಯಘಾತದಿಂ ಗಾಯಂಬಡೆ | ದಾಪ್ಪರರಮೈಯಿಂದೆಸೋರ್ದಸೃಗ್ವರ್ಷದಿಂ | ದಾಶರಥಿಸೈನಿಕರ ವಿಚ್ಛಿನ್ನಗಾತ್ರದಿಂ ಸುರಿದರುಣವಾರಿಯುಕೆರೆ ॥ ನಾಶರಹಿತಂತಾನೆನಲ್ತುಂಬಿತುಳುಂಕಾಡೆ | ದಾಶರಮೊಲಿರೆಯೋಧರಲ್ಲಲ್ಲಿ ವಿಲಯಸಂ | ಕಾಶರಣವದುನೋಡಲಹಹಾಮಹಾಭಯಂಕರಮೆನಿಸಿತೇನೆಂಬೆನು ॥೩೬॥

ನಿರುಕಿಸಲ್ಕಾಪಾರುವಂತರಿಕ್ಷಾಂತರದೆ | ತಿರುಗುತ್ತೆ ಮೇಲೆಮೇಲಡರುತ್ತೆ ಮತ್ತೆ ಕೆಳ | ಗೆರಗುತ್ತೆ ಮಿರ್ಪದಾರಕ್ಕಸರಪಡೆಯೊಮ್ಮೆ ಬಾನೊಳಂ ತಿಳೆಯೊಳೊಮ್ಮೆ ॥ ಚರಿಸುತ್ತೆ ಮಾರ್ವಡೆಯೊಳಿಭಗಳಂಗದೆಗಳಂ | ಮುರೆಬಡಿದುಮಶ್ವಗಳನಸಿಗಳಿಂದರಿದುದುರು | ಶರಗಳಿಂದಿಕ್ಕಿದುದು ರಥಿಕರಂ ಕಾಲ್ಗಳಂ ಕಾಲಾಳ್ಗಳಂ ತುಳಿದುದು ॥೩೭॥

ಪಾವನಿ ಮಹಾನುಭಾವಂನೋಡಿರಾಕ್ಷಸರ | ಹಾವಳಿಯನುರೆಕಾಹುರಂಗೊಂಡುರಾಮನಡಿ | ದಾವರೆಗಳಂನೆನೆದು ಜಲಧಿಯಂದಾಂಟುವಂದಾಂತಿರ್ದರೂಹನಾಂತು ॥ ತ್ರೈವಿಕ್ರಮಕ್ರಮದೊಳಾಕ್ರಮಿಸಿಭೂಮಿಗಗ | ನಾವಕಾಶಮನ್ನೈದೆನಡುಗಲಖಿಲೋಡುಗ್ರ | ಹಾವಳಿಗಳಬ್ಬರಿಸುತಾಪಾರುವಂಪಿಡಿದುಕೊಡಕೊಡಹಿಮುರಿದಿಟ್ಟನು ॥೩೮॥

ಪ್ರೌಢವಿಮೊಳ್ಪಡಲಿಟ್ಟರಾಪಾರುವಿಂಕೆಲಬ | ರೊಡನೊಡನೆಬಿರುಗಾಳಿಯಿಂದೆಮಾಮರದಿಂದೆ | ಕೆಡೆವಂತೆಕಾಯ್ಗಳಾಶರಭಟರ್ಪಲಬರತಿಬಲರಂ ಬರಸ್ಥಲಕ್ಕೆ ॥ ಚಡಮುಡನೆಮಾಯೆಯಿಂಪಾರ್ದತಿರುತಿರುಗುತ್ತೆ | ಬಡಿಯುಲಾಹನುಮನಂ ವಿವಿಧಾಯುಧಂಗಳಿಂ | ಮಿಡುಕಿದುದುನವಿರೊಂದುಮಿಲ್ಲಾಮಹಾನುಭಾವನಮೈಯೊಳೇನೆಂಬೆನು ॥೩೯॥

ಆಗಿರಿಯ ತಪ್ಪಲೊಳಗಾಪಾರುಶತಖಂಡ | ಮಾಗಿ ಧೊಪ್ಪನೆ ಕೆಡೆದುದೊಡನೆ ಮುಪ್ಪೊಳಲೊಂದು | ಭಾಗವೆಂಬಂತನಿತರೊಳ್ಬಿನುಬಳೆದನಿಳಭವನೊಡಲನಾಲೋಕಿಸಿ || ನಾಗಗೋಚರಚರಿತನಿವನಿರದೆ ಚಿಕ್ಕೆಂದು | ವೇಗದಿಂ ಬಂದನೆನ್ನಂ ನುಂಗಲೀಗಳೆ | ನ್ನೇಗೈವನೋ ಎಂದು ಸುಗಿದಿದಿರೊಳಿರದೆ ಮರೆಯಾದನಸ್ತಾಚಲದೊಳು ||೪೦||

ವಾರುಣದಿಗಂತರದೊಳೆಸೆದುದಾಬಳಿಕ ಸಂ | ಧ್ಯಾರಾಗಮಸುರರ ವಿನಾಶಮಂ ಸೂಚಿಸುವ | ಘೋರದಿಗ್ದಾಹಮೆನೆ ತಿಮಿರಮಾವರಿಸಿತಾಹವನಿಹತಪತಿಗಳಾವ || ನೈರೃತಸ್ತ್ರೀಯರುರುಶೋಕಾಗ್ನಿಧೂಮಪ್ರ | ಸಾರವೆಂಬಂತೆ ತೋರ್ದುವು ನಭದೆ ತಾರೆಗ | ಳ್ಮಾರುತಿಯ ಮಹಿಮೆಗುರೆ ಮೆಚ್ಚಿ ಸುರತತಿ ಸೂಸಿದಲರ್ದಲರ್ಗಳೆಂಬಂತಿರೆ ||೪೧||

ತೆಗೆದಾಮಹಾರೂಪಮಂ ಬಳಿಕ ಪಡೆಯಲಾ | ಶುಗನಂದನಂ ಪೂರ್ವರೂಪಮನೆ ಸೌಮಿತ್ರಿ | ವಿಗಡರಕ್ಕಸರೊಡನಿರುಳ್ಕಾಳಗಕೆ ಸನ್ನಣಂಗೊಳಿಸೆ ನಿಜಬಲವನು || ಗಗನದಿಂದಿಳಿದಿಳೆಗೆ ನಿಜಸೇನೆಯೊಡನೆ ಮು | ಬ್ಬಿಗರಾಣ್ಮಸೇರ್ತೆನಿರಂ ಬಂದು ಮೇಲ್ವಾಯೆ | ಮೊಗದೋರಿದುದು ರಣಂ ದಾರುಣಂ ಮತ್ತಮಿತ್ತಳ ತಂತ್ರವೊಂದಾಗುತೆ ||೪೨||

ಮುಬ್ಬಿಗರ ಮನುಜಯೋಧರ ವೀರವಾದಂಗ | ಳಬ್ಬರಮುಮಂತುರಥಚಕ್ರಚೀತ್ಕಾರಂಗ | ಳುಬ್ಬರಮುಮಶ್ವಹೇಷಾರ್ಭಟಮುಮಿಭಘಟಾಘೀಂಕೃತಿಯುಮೇಕಮಾಗಿ || ಉಬ್ಬೆದ್ದು ಹಬ್ಬುತ್ತೆ ಹದಿನಾಲ್ಕುಲೋಕದೊ | ಳ್ದೊಬ್ಬೆಟ್ಟುಗಳಗುಹೆಗಳೊಳಗೆ ಮೊಳಗಿ ಮುವೃತ | ಮ್ಮುಕ್ರಬ್ಬುಟೆಗೆ ಸುಗಿದ ದಿಗ್ಗಜಗಳಬ್ಬರಣೆಯೊಡನಿಮ್ಮಡಿಸುತಾಗಳಮವಾ ||೪೩||

ವಿಕಸನ್ಮಹಾವೀರಮಕುಟಮಣಿದೀಧಿತಿ | ಪ್ರಕರದಿಂ ಶರಪುಂಖಹೇಮಪಕ್ಷಪ್ರಭಾ | ನಿಕುರುಂಬದಿಂ ಪರಸ್ಪರಶಸ್ತ್ರಸಂಘಟ್ಟಜಸ್ಫುಲಿಂಗಪ್ರತತಿಯು || ಪ್ರಕಟದೀಪ್ತಿವ್ಯಾಪ್ತಿಯಿಂ ರಘೂದ್ವಹನಸೈ | ನಿಕರಸುರರಂ ಮುಬ್ಬಿನೊಳ್ನೋಡಿನೋಡಿಸಮ | ಧಿಕರೋಷದಿಂ ಸಂಹರಿಸಿ ಸಂಹರಿಸಿ ಕೆಡಹಿದರ್ನಿಬಿಡಮಾಗಿಳೆಯೊಳು ||೪೪||

ನಿರವಧಿಕಹರ್ಷದಿಂದತಿವೃದ್ಧಾಮರ್ಷದಿಂ | ದುರುಶರಾಸಾರದಿಂ ಖಡ್ಗಪ್ರಹಾರದಿಂ | ತರುನಿಕರಘಾತದಿಂ ಘನಶಿಲಾಪಾತದಿಂಯಾಮಿನೀಚರಯೋಧರು || ಪರಿಹರಿಸಿಪಗೆಗಳಂಶೋಣಿತಾಪಗೆಗಳಂ | ಪರಿಯಿಸಿದರುರವಣಿಸಿರಿಪುಗಳಂತೃಣಕೆಣಿಸಿ | ಬಿರಿಯಲೆಣ್ದೆಸೆಕರಂಬೊಬ್ಬಿರಿದರಾಕರಂಭೀತಿಗಾದುದುರಣವದು ||೪೫||

ಸಾಹಸಿಕನಾಪುಷ್ಕಲಂಬಳಿಕನೋಡಿನಿಜ | ವಾಹಿನಿಯಸಂಕ್ಷಯವನಾಕ್ಷಣದೊಳದಿರಾಂತೆ | ಲಾಹಂದೆರಾಕ್ಷಸಾಂತಕರೊಡನೆ ನಿನಗೆಕಲಹವೆಯೆಂದುಜೇವಡೆದೊಡೆ || ಆಹೀನಬುದ್ಧಿವಿದ್ಯುನ್ಮಾಲಿಯೆಲವೆಲವೊ | ಹೂಹೆನರಭುಜರೊಡನೆ ನಿನಗೆಹೋರಾಟವೇ | ಹೋಹೋಗುನಿಲದೆನ್ನಮುಂದೆನೀನೆಂದೆನುತೆಟಂಕರಿಸಿದಂ ಬಿಲ್ಲನು ||೪೬||

ಮಿಗೆಸುಮುಳಸುಪುಷ್ಕಳಂಹೂಹೆಯೋಹಾಹೆಯೋ | ಮುಗುದನೋಡೆನ್ನಧಟನೆಂದು ಕೂರ್ಗಣೆಗಳಂ | ತೆಗೆದೆಚ್ಚೊಡವುವಿವಿಧಶಸ್ತ್ರಘಾತವ್ರಣಕಿಣಾಂಕಮಾಸುರನೆದೆಯ || ಪುಗದೆಪರಮಾತ್ಮನಹರಾಮಚಂದ್ರಮನವಮಲ | ಸುಗುಣಂಗಳತಿದುಷ್ಕೃತಾತ್ಮಕರಹೃದಯಮಂ | ಪುಗದಂತೆಸುಖಭಂಗಮಂಪಡೆದು ಬಿದ್ದುವಿಳೆಗೇನೆಂಬೆನದ್ಭುತವನು ||೪೭||

ದುರುಳವಿದ್ಯುನ್ಮಾಲಿತಾನೆಚ್ಚಶರಪರಂ | ಪರೆಯನೊಡನೊಡನರಿಯುತಿರೆಪುಷ್ಕಲಂಕ್ರೂರ | ತರಮೆನಿಸಿದೊಂದುಶಕ್ತಿಯನಿಟ್ಟನದುಮನಾಭಾರತಿಶರದ್ವಯದೊಳು || ಅರಿದುಮುಕ್ಕಡಿಗೈದನೊಡನಸುರನೊಂದುಮು | ದ್ಗರವನಿಡಲೆದೆಯನದುಪಳಚಿಬಸವಳಿಯಿಸಿತು | ಭರತಸುತನಂಕಂಡದಂಪ್ರೊಣರಲ ಸುರಪತಿಯೊಡನೆ ಜಾನಕಿನಿಂದನು ||೪೮||

ಕಾದಲ್ಕೆಜನಕಸುತನೊಡನೆ ವಿದ್ಯುನ್ಮಾಲಿ | ಸೋದರಂಮಾಯಾವಿದಂ ನಿಖಿಲಶಸ್ತ್ರಾಸ್ತ್ರ | ವೇದಿತಾನುಗ್ರದಂಷ್ಟ್ರಾಭಿಧಾನಂ ಯಾತುಧಾನಂತೊಡಗಲಿರ್ವರು || ಮೇದಿನಿನೆನೆಯೆರಕ್ತದಿಂದೆಸುರಪತಿಮೇಘ | ನಾದರಂತಿರೆಕಾದುತಿರೆಪೂರ್ಣತಿಳದೊಡನೆ | ಕೋದಂಡಮಂಪಿಡಿದಿದಿರ್ಚಿವಿದ್ಯುನ್ಮಾಲಿಯಂಪುಷ್ಕಲಂನುಡಿದನು ||೪೯||

ಪೂತುರೇಮಝ್ಝುಭಾಪುಭಾಪುನೀನಹುದೊವಿ । ಖ್ಯಾತಬಲಪೌರುಷಂ
ಕೇಳೆನ್ನ ಶಪಥವಂ । ಪಾತಿಸದೆಬಿಡೆನೀಂ ಶತಾಂಗದಿಂ ನಿನ್ನನೆಂದೊರೆದೊರೆದು
ಕಾವರ್ಗದೊಳು ॥ ಶಾತಿಮಿಗೆತೊಟ್ಟೊಂದುಕೂರಂಬನೆಚ್ಚೊಡದು । ಯಾ
ತುಪತಿಪಡಿಸರಳನಿಸುವನಿತರೊಳಗೆವೇಂ । ಗಾತಿಶಯದಿಂದೆದೆಗೆನಟ್ಟವನನಿಳೆ
ಗುರುಳ್ಚಿದುದುಪ್ರೌರ್ದಿಸಿಮೂರ್ಛೆಯ ॥೫೦॥

ಅಂತುಗ್ರದಂಷ್ಟ್ರನುರುಶಕ್ತಿಯಿಂಜನಕಸುತ । ನಾಂತುಮೂರ್ಛೆಯ
ನುರುಳಲಾಖಳನಿದಿರ್ಚಿರಘು ।ಕಾಂತನಂದನನ ನೆಲೆನರಬಾಲಗೆದ್ದೆ ನಾನೆಂದೆ
ನುತೆ ಬೀಗಬೇಡ ॥ ಎಂತುಜಯಶಾಲಿ ನೀನೆನ್ನ ಗೆಲದೆಂದೆನೆಕೃ । ತಾಂತನವ
ತಾರವೆಂಬಂತೆ ತೋರ್ಪವನನಿದಿ । ರಾಂತುಪುಷ್ಕಲನಧಿಕಕೋಪದಿಂಜ್ವಾಲಿ
ಸುತ್ತೆ ಪಲವಂಬುಗಳನೆಚ್ಚನು ॥೫೧॥

ದೊರೆಕೊಂಡುದಾಸಕಲಮಾರ್ಗಣೌಘಂಕ್ಷುದ್ರ । ತರಸಾಶನಂಕಠಿನ
ಹೃದಯನಂಪೊರ್ದಿದೊಡ । ಮಿರದೆಮುಖಭಂಗಮಂಬಳಿಕಭೀಕರನಾನಿಶಾ
ಚರಂಕೆರಕರಳ್ದು ॥ ಪಿರಿದುಬೇಗನೆಮಹತ್ತರಮಾದಗದೆಯನಾಂ । ತುರವ
ಣಿಸುತಿದಿರಾನುತಿರೆಕಂಡುಪುಷ್ಕಲಂ । ಸರಸರನೆಡೊಣೆಯಿಂದೆಹಿರಿದುಬಜ್ಜರ
ದಲಗಿನಂಬುಗಳನೆಳೆದೆಚ್ಚನು ॥೫೨॥

ಬಡನುಗ್ರದಂಷ್ಟ್ರನಾಕೂರ್ಗಣೆಗಳಿಂಗಾಯ । ಪಡೆದಲ್ಲಿನಿಲದೆಪೆಡ
ಮೆಟ್ಟೈವಿದ್ಯುನ್ಮಾಲಿ । ಪಡೆದುಸಂಜ್ಞೆಯನುರುತರಾಮರ್ಷದಿಂದೈದೆಕೆಂಪಿಡಿದ
ಕಣ್ಗಳಿಂದೆ ॥ ಅಡವಿಗಿಚ್ಚುಗಳುರಿವಶಿಖರದಂಜನಗಿರಿಗೆ । ಪಡಿಯೆನಿಸಿಬರಲ
ವನನಿದಿರಾಂತುಸೌಮಿತ್ರಿ । ಘಡಘಡಾಖೂಳನಿನ್ನಾಯುವಿಂದಿಗೆತೀರ್ದುದೆಂದಾ
ರ್ದುಜೇಂವಡೆದನು ॥೫೩॥

ಅವರಿರ್ವರುಂಬಳಿಕರಾಮರಾವಣರಂತೆ । ದಿವಿಜನಾಯಕಬಲಾಸುರ
ರಂತೆಸುತ್ತೆಮಾ । ಧವಘೋರಕೈಟಭಾಸುರರಂತೆಪಾರ್ವತೀರಮಣಾಂಧಕರ್ಕ
ಳಂತೆ ॥ ದಿವಿಚರಾವಳಿಬಹುಳಕೌತುಕದಿಂದಂಬರದೊ । ಳವಲೋಕಿಸುತ್ತ
ಮಿರೆರಥಿಕರಚ್ಚರಿವಡೆಯೆ । ವಿವಿಧಶಸ್ತ್ರಾಸ್ತ್ರಪ್ರಯೋಗಚಾತುರಿಮೆರೆಯೆ
ಕಾದಿದರ್ಹಿಮ್ಮೆಟ್ಟದೆ ॥೫೪॥

ತಿರುಹುತಿರ್ಕೆಯ್ಗಳಂಪಿಡಿದೆರಡುಗದೆಗಳಂ | ಭರದೊಳಾರಣದೆಮೋಲ್ವಾಯುಲುರವಣಿಸಿದಾ | ದುರುಳನಿತ್ತೋಳ ನರೆವೆರೆಯಂದದಿರ್ಕಣೆಗಂದಾಳಿಶರಧಿಖಂಡಿಸೆ || ತರಿದಪೇರ್ಮರನ ನಿಡುಗೋಡುಗಳತೆರದಿಂದೆ | ಧರೆಯೊಳವು ಕೆಡೆದುವೊಡನವಲೂನಪಕ್ಷತಿಯ | ಗಿರಿಯಂತೆತೋರ್ದನವನಂ ಸದ್ವಯುಸ್ರವದ್ರುಧಿರಸಿಕ್ತಾಂಗನಾಗಿ ||೫೫||

ಅಡಿಗಡಿಗೆಸುಯ್ವಿಡುತೆಪಲ್ಮೊರಿವಪಾವಿನಂ | ತಡಿಯೊಳಾಕೋಣಪಂ ಬಳಿಕಕಾದಲ್ಕೆಬಂ | ದೊಡೆದಶಗ್ರೀವಾಂತಕಾನುಜಂ ನಿಶಿತವಾದೊಂದು ನಾರಾಚದಿಂದೆ || ಕಡಿದಿಕ್ಕಿದಂಕೂಡೆ ಮಸ್ತಕವನವನಪೇ | ರೊಡಲೊಂದು ಬೆಟ್ಟಡ್ಡವಿಸಿದಂತೆ ಪ್ರೊಡವಿಯೊ | ಳ್ಕೆಡೆದುದೊಡನುಗ್ರದಂಷ್ಟ್ರಂ ಮುಳದಿದಿರ್ಚಿದಂರಾಘವನನಾರ್ಭಟಿಸುತೆ ||೫೬||

ಆಕ್ಷಣದೊಳೊಂದುಗ್ರಶರದೆಶತ್ರುಘ್ನನಾ | ರಾಕ್ಷಸನತಲೆಯನರಿದಿಕ್ಕಲಗ್ರಜನೊಡಲ | ಪಕ್ಷದೊಳೆತಾನುಮೊಂದುಪಪರ್ವತಂಬೊಲವನಡ್ಡೈಸಿಬಿದ್ದನೊಡನೆ || ಯಕ್ಷಗಂಧರ್ವವಿದ್ಯಾಧರಾದಿಗಳನಕು | ಲಕ್ಷೋಣಿಪನ ಮೇಲೆ ಪೂವಳೆಗರೆದರಂತ | ರಿಕ್ಷಮಂಘುಮ್ಮಡಿಸಿದುದು ದೇವದುಂದುಭಿನಿನಾದಮಾಶ್ಚರ್ಯಮೆನಲು ||೫೭||

ಬಳಿಕತಿಕ್ರೋಧದಿಂದಾನಿಶಾವಸರದೊ | ಳ್ಖಳಯಾತುಧಾನರಾರುಂ ತಿಳಿಯದಂತೆಜಂ | ಗುಳಿಗೊಂಡುಕಳ್ಳರಂತತ್ತಿತ್ತಬಂದು ಬಂದೊಡನೊಡನೆಸೈನಿಕರನು || ಬಲುಹಿಂದೆಕೊಂದು ಕೊಂದೋಡುತಿರೆತಿಳಿದುಪು | ಷ್ಕಳಮುಖ್ಯವೀರಭಟರವರೆಲ್ಲರಂ ಬಿಡದೆ | ಬೆಳಗಾಗುವನಿತರೊಳ್ಸಂಹರಿಸಲಾಕಳನೊಳುಳಿದಸುರನಿಲ್ಲೊರ್ವನೂ ||೫೮||

ಆಸಮಯದೋಳ್ಸುಖಸ್ಪರ್ಶವಹತಂಗಾಳಿ | ಬೀಸಿದುದು ಜಗದೊಳಗೆ ತಿಳಿದುಕಂಗೊಳಿಸಿದುವು | ಕಾಸಾರಗಳ್ಸುಪ್ರಸನ್ನಂಗಳಾದು ವೆಂಟುಂದೆಸೆಗಳೆಲ್ಲಲ್ಲಿಯೂ || ಗೋಸಮೂಹಂಗಳಭಯದೆ ಸಂಚರಿಸಿದುವೆ | ಲ್ಲಾಸತಿಯರುಂಬಳಿಕ ನಿಶ್ಚಿಂತರಾದರು | ಲ್ಲಾಸದಿಂದೆಸಗಿದರ್ಸತ್ಕ್ರಿಯೆಗಳಂ ಮುನಿಗಳಾಖಿಲಪಲಾಶರಳಿಯೆ ||೫೯||

ಆರಣಾಂಕಣದೊಳೆತ್ತಲು ಮಳಿದುಕೆಡೆದಿರ್ದ ಘೋರರಾಕ್ಷಸರನಾ ನಾಪ್ರಕಾರದದುರಾ | ಚಾರಗಳನಾಚರಿಸುತಿರ್ದ ಪಾತಕದನೆಲೆವನೆಗಳಾದಂಗ ಗಳನು || ಭೂರಿಕೌತುಕದೆನಾಯ್ನರಿಕಾಗೆಪದ್ದುಗ | ಳ್ನೇರಿ ಗಡಣಿಸಿಕಿತ್ತು ತಿಂಬುದಂನೋಡಿರಘು | ವೀರನಂ ಕೊಂಡಾಡಿದರ್ಪರಸುತಾವನಾಂತದೊಳಿ ರ್ದ ಮುನಿಗಳೊಡನೆ ||೬೦||

ಬಳಿಕ ವಿದ್ಯುತ್ಪ್ರರದೊಳುಳಿದಿರ್ದ ರಾಕ್ಷಸಿಯು | ರಳುಕಿವಿದ್ಯುನ್ಮಾ ಲಿಯುಖಿಲ ಸಂಪದದೊಡನೆ | ತಳುವದೆಮುಶಾಶ್ವಮಂ ತಂದಿತ್ತು ಶರಣಾರ್ಥಿ ನಿಯುರಾಗೆಶತ್ರುಘ್ನನು || ಉಳಿದುನಿಜಧರ್ಮದಿಂ ಮುಳಿಯದವರಂಮೂರ್ಛೆ | ತಿಳದೆದ್ದಜಾನಕಿಯು ನತಿಮುದದೊಳೊಡಗೊಂಡು | ಕೊಳಗುಳದೊಳಳಿದು ಳಿದ ಸೈನ್ಯಮಂಮೇಳವಿಸಿ ಮುಂದ್ಯೆದಲನುವಾಡನು ||೬೧||

ಆನುಖತುರಂಗಮುಂಬಳಿಕ ಮುಂಬರಿಯಲಾ | ಸೌಮಿತ್ರಿ ಪುಷ್ಕಲಸು ಬಾಹುಲಕ್ಷ್ಮೀನಿಧಿಹ | ನೂಮಂತ ಮೊದಲೆನಿಪ ವೀರಾಗ್ರಗಣ್ಯರಿಂದೊಡ ಗೂಡಿಸೇನಾಸಹಿತ || ಭೂಮಿಧರಕಂದರಾಂತರಗಳೊಳ್ಮೊಳಗಲು | ದ್ದಾಮ ಜಯಕಾಹಳೀದುಂದುಭಿಗಳಬ್ಬರಂ | ರಾಮಚಂದ್ರಮನಪದಕಮಲಮಂ ಜಾನಿಸುತ್ತಲ್ಲಿಂದೆ ಪೊರಮಟ್ಟನು ||೬೨||

೧೪ ನೇಯ ಸನ್ಧಿ ಮುಗಿದುದು

ಇಂತು ಸನ್ಧಿ ೧೪ ಕ್ಕೆ ಪದ್ಯ ೬೩೦ ಕ್ಕೆ ಮಂಗಳಮಸ್ತು.

ಹದಿನಯ್ದನೆಯ ಸನ್ಧಿ.

ಸೂಚನೆ ॥ ಆರಣ್ಯಕರ್ಷಿಯಂ ಕಂಡು ರೇವಾತಟದೆ। ಭಾರತಿಮಹಾಬಲಜ
ರೊಡಗೂಡಿ ದಶರಥಕು। ಮಾರಂವಿಪಸ್ಥಿಯಂ ಕಂಡುಪಾತಾಳದಿಂ
ಬಿಡಿಸಿತಂದಂಹಯವನು ॥

ಶಾಂತಾತ್ಮಕೇಳು ವಾತ್ಸ್ಯಾಯನನೆ ಶತ್ರುಘ್ನ। ನಂತು ಚತುರಂಗ
ಬಲದೊಡನೆ ನಡೆಯುತ್ತಿರ। ಲ್ಕಂತೆ ಕಣ್ಗೆಸೆದತ್ತು ನವ ನೀಲರತ್ನಮಯ
ಮಾದ ಭೂಮೀಕಾಂತೆಯ ॥ ಕಾಂತರಶನಾದಾಮವೆನೆನರ್ಮದಾತಟಿನಿ। ಸಂತಸಂ
ಮಿಗಲವಂ ಲೋಕಿಸುತ್ತದನೀಸ್ರ। ವಂತಿಯಪೂರ್ವಮಂ ಪೇಳೆನುತೆಸುಮತಿಯಂ
ಬೆಸಂಗೊಂಡೊಡವನಿಂತೆಂದನು ॥ ೧ ॥

ಸೌಮಿತ್ರಿಯಾಲಿಸ್ಕೆ ಲಿಂಗಸ್ವರೂಪನಾ। ದಾಮಹಾದೇವಂಗೆ ಜನ
ಯಿತ್ರಿಯೆಂದೆನುತೆ। ಭೂಮಿಯೊಳಸಾಧಾರಣಪ್ರಥೆಯನಾಂತಿರ್ಪ ನರ್ಮದಾ
ನದಿತಾನಿದು ॥ ಕಾಮಾದಿಗಳನುಳಿದು ಶುದ್ಧಾತ್ಮರೆನಿಸಿದವ। ರಾಮುನಿಜ
ನಂಗಳದರಿತ್ತಡಿಯೊಳಾವಗಂ। ಹೋಮಧೂಮಾನುಮೇಯಂಗಳಹ ಪುಣ್ಯಾ
ಶ್ರಮಂಗಳೊಳ್ತಪಮಿರ್ಪರು ॥ ೨ ॥

ಅರಸನೋಡೀನದಿಯ ತೀರದೊಳ್ನಂದುಪೆ। ರ್ಮರಗಳೊಳಗಿರ್ಪ ಶಿವ
ಲಿಂಗಮಂಪೂಜಿಸಂ। ತಿರೆತಮ್ಮನಿಡುಗೋಡುಗಯ್ಗಳಿಂ ಸೂಸಿದೊಳ್ಗಂಪನಾ
ಳ್ದಲರ್ದಲರನು ॥ ಪರಿಹರಿಸದೊಡನೊಡನೆ ಕಯ್ಕೊಂಡುಸುಳಗಳದೊ। ಭರ
ದೊಳೊಳಮುಟ್ಟಿಸುತ್ತಿರ್ದಪುವುಚಿತ್ರಮಿದು। ಪರತರದಸತ್ಕ್ರಿಯೆಗಚೇ
ತನಮುಮಿಂತು ಕಯ್ನೆರವಪ್ಪದೀಜಗದೊಳು ॥ ೩ ॥

ಕಂಗೊಳಿಪವನಗಳೀನದಿಯತೀರದೊಳಾವ। ನಂಗಳೊಳ್ನೋಂಪಿಡಿದ
ಪಾದಪಗಳಾಪಾದ। ಪಂಗಳೊಳ್ಮಂಜುಳಪರೀಮಳಂ ಕಲಿತಂಗಳಹ ಬಹು
ಳಸುಮಫಲಗಳು ॥ ಮಂಗಳಕರಂಗಳೆನಿಪಾ ಸುಮಫಲಂಗಳೊ। ಳ್ಭೃಂಗ
ವಿಹಗಂಗಳಾ ಭೃಂಗವಿಹಗಂಗಳೊಳ! ಭಂಗುರಶ್ರವಣ ಸುಖದಾಯಿಮಧು
ರಸ್ವನಂ ಸೂರೆಗೊಳ್ವುದುಮನವನು। ೪ ॥

ಶರಧಿಯಂತಿರೆ ಸೋಮಸಂಭವಮಂವನಮಾಲಿ | ಯುರದಂತೆಕಮಲಾಭಿರಾಮಮಾದಿತ್ಯನಂ | ತಿರೆವೊಲ್ಮಹಾಪ್ರಭಾವ ಸ್ಥಿತಿಮಕರ ಕರ್ಕಟಕವಾಸಮತಿಪಾವನಂ || ವರಕಾವ್ಯದಂತೆಯುಂ ಗಗನತಲದಂತೆಯುಂ | ನಿರುಕಿಪೊಡೆ ಕವಿರಾಜಹಂಸೋಪ ಶೋಭಿಬಂ | ಧುರಶಬ್ದಗುಣಸಮುಪಲಕ್ಷಿತಮೆನಿಕ್ಕುಂ ಪ್ರವಾಹಮೀಪುಣ್ಯನದಿಯಾ || ೫ ||

ಮತ್ತಮವಲೋಕಿಸೆಲೆ ಧರಣೀಂದ್ರಮೌಳಿಮಣಿ | ಯತ್ತಿತ್ತಣಿಂ ಬಂದು ವಿವಿಧಪಕ್ಷಿಗಳೀಸ | ರಿತ್ತೀರ್ಥದೊಳ್ಮುಳುಮುಳುಗಿ ನೊರೆಗಳೊಬ್ಬುಳಿಗಳೆಂಬವೊಲಿತ್ತಡಿಯನು || ಬತ್ತಿಕೊಂಡಿರ್ಪ ವ್ರತಶಿಲೆಗಳಂಸಂಗಡೇ | ರುತ್ತೀಮಹಾನದಿಯೊಳವಗಾಹಿಸಿದಮಾನ | ವೊತ್ತಮಂಕೈಲಾಸಗಿರಿಯನೇರುವನಿಂತೆನುತೆ ಸೂಚಿಸಂತಿರ್ಪವು || ೬ ||

ತಡಿಯಬೆಳ್ಮಳಲೆ ಪಾಸಿದಮಾಸದಿರ್ಪನಡೆ | ಮಡಿಯೆನಿಸೆ ನೀರೊತ್ತಿನೊಳ್ಬೆಳೆದ ನೀರಂಜಿ | ಗಿಡುಗಳಬೆಳರ್ತಪ್ಪದೊಡಬೆಗಳ್ ಚಾಮರಿಗಳಪಾಂಗಿನಿಂ ಶೋಭಿಸುತಿರೆ || ಪಡಿಯೆನಿಸೆ ಜಯಶಬ್ದಕಲಕಲಕೆ ಪಕ್ಕಿಗಳ | ಜಡಿಪಮೆ ತಟಾಂತವನರಾಜಿ ಸುಮಫಲಗಳಂ | ಪಿಡಿದಿರ್ಪಪರಿಜನಾವಳಿಯೆನಿಸೆ ನಿನ್ನನುಪಚರಿಪಂತಿದೇನೆಸೆವುದೋ ||೭||

ಅತ್ತನೋಡರಸಮಕ್ಕಳ ಪೊಲಡಿಗಡಿಗೆತ್ತೊಡ | ರುತ್ತೆ ಮರಿವುಲ್ಲೆಗಳ್ಸೂಡಿಬರೆ ನೆತ್ತಿಯೊ | ಳ್ಪೊತ್ತುಕೊಂಡೀನದೀಸಲಿಲಘಟಮುಂಮೆಲ್ಲನೈತರ್ಪ ಮುನಿಸತಿಯರುಂ || ಮತ್ತೆ ಭುಜಶಿರವಲ್ಲಿ ಫಲಪುಟಿಕೆಯಂಕುಶಸ | ಮಿತ್ತುಗಳ ಕಟ್ಟನದೊಕಯ್ವಲ್ಲಿ ತಳೆದೈತ | ರುತ್ತಿರ್ಪತಾಪಸರುಮಡವಿಯಿಂ ನಡೆತರ್ಪತುರುಗಳುಂ ತೋರುತಿಹುವು ||೮||

ಅದೆ ವಿಷ್ಣುಭಾಗವತನೆನಿಸಿದಾರಣ್ಯಕನ | ಸದಮಳಾಶ್ರಮಪದಂಮಹನೀಯಮಾದತ | ತ್ಪದಸರೋರುಹಕೆರಗಿ ಬಹುದುತಕ್ಕುದುನಿನಗೆನಲ್ಕೆರಘುಕುಲದರಸನು || ಮುದವೆತ್ತು ನಿಜಬಲವನಾಶ್ರಮಕೆಬಾಧೆಯಾ | ಗದವೊಲಾನರ್ಮದಾತೀರಘನವಿಪಿನಾಂತ | ರದೆಪಾಳಯಂಗೊಳಿಸಿ ಮಿತಪರಿಜನರ್ಕಳೊಡನಾಶ್ರಮಕೆ ನಡೆದನು ||೯||

ಆತಟನಿಯುಕಲ್ಲೋಲಕಲ್ಲೋಲಕುಲವತಟ | ಘೌತದಿಂಕೆದರ್ದತಂದ
ಲ್ಗಳಂ ಕೊಂಡೊಯ್ಯು | ನೈತಂದಸಲ್ಲಲಿತ ವನತರುಲತಾಕುಸುಮಸೌರಭ್ಯ
ದಿಂತೀವಿದ || ವಾತಪ್ರೋತನಸುಖಸ್ಪರ್ಶದಿಂಮಾರ್ಗಶ್ರ | ಮಾತಿರೇಕವನುಳಿ
ದುರಾಘವನಬಲಸ್ಥಾನ | ದೀತಟದೊಳೊಲ್ದಿನಿಯುಳೆಡೆಗೆಬಂದಿಹನದೀಪತಿಯೆಂ
ಬವ್ರೋಲೆಸೆವುದು ||೧೦||

ಬಳಿಕಾಸುಮಿತ್ರಾತನೂಭವಂ ರಥದಿಂದ | ಮಿಳಿದಲ್ಲಿಗುಚಿತವಹರೀತಿ
ಯಿಂ ಪೊಕ್ಕು ಕೇ | ವಳಸಾತ್ವಿಕದ ಮುನಿಜನಪ್ರವರ್ತನೆಗಳಿಂದೊಪ್ಪುವಾಶ್ರ
ಮವನು || ಪಳಿವಾತಿನರ್ಥಮಂನೆರೆವಿಮರ್ಶಿಸಿ ತಿಳಿದು | ಕೊಳುತಿರ್ಪನೇಕ
ತಾಪಸಶಿಷ್ಯವರ್ಗದಿಂ | ಬಳಸಿರ್ಪಮುನಿನಾಥನಂ ಕಂಡು ಸುಮತಿಪ್ರಮು
ಖರೊಡನೆ ಪದಕೆರಗಲು ||೧೧||

ನಿರವಧಿಕಸಂಪ್ರೀತಿಯಿಂದೆ ಮುನಿಪುಂಗವಂ | ಬಿರುಸೋನೆನಿಂದಂತೆನಿ
ಜಶಿಷ್ಯಕಲಕಲಂ | ಪರಸಿನಿಗಮೋಕ್ತಿಯಿಂ ವಿಷ್ಟರವನಿತ್ತೆಲ್ಲರಂಕುಳ್ಳಿರಿಸಿ
ಬಳಿಕ್ಕ || ಶರದಿಂದುಕಿರಣಂಗಳಂಪಳಿಯೆ ಪಲ್ಲೊಳಗು | ದರಹಸಿತಲಸಿತ
ಮುಖನಾಗಿ ಶತ್ರುಘ್ನನಂ | ನಿರುಕಿಸುತೆಸುಪ್ರಸನ್ನಾಕ್ಷಿಯುಗದಿಂವಮಾದರ
ದಿಂದಮಿಂತೆಂದನು ||೧೨||

ನೀವಾವನೃಪಕುಲೋತ್ತಂಸರ್ಧರೆಗಿಳಿದ | ದೇವತೆಗಳಂತೆಸೆವಿರಲೆಸು
ಖಾಗಮವೆನಿಮ | ಗೀವಿಪುಲಘೋರಕಾನನದೆ ಸುಕುಮಾರರತಿವಿಭವಶಾಲಿಗಳೆ
ನಿಸಿದ || ನೀವೇಕೆಚರಿಪಿರಾರಣ್ಯಕರತೆರದೆನಿಸು | ಗಾವುದೆಮ್ಮಿಂದಾಗವೇಳ್ಕು
ಮುಸಿರೆನೆರಘುವ | ರಾವರಜನೊಡನೆಗಾಂಭೀರ್ಯವಿನಯಂಗಳಿಂದೊಪ್ಪುತ್ತಮಿಂ
ತೆಂದನು ||೧೩||

ಪಾವನಚರಿತ್ರಕೇಳ್ಳೈ ಮಹಾಮುನಿಪರಾ | ಜೀವಸಖವಂಶಭವರಾವೆ
ಮ್ಮಗ್ರನೃಪತಿಭೂ | ದೇವವಧಪಾಪಪರಿಹಾರಕೋಸುಗಮಶ್ವಮೇಧಕ್ಕೆ ದೀಕ್ಷೆ
ಗೊಂಡು || ಭೂವಲಯಮಂಚರಿಸಲಶ್ವಮಂ ಬಿಟ್ಟಿರ್ಪ | ನಾವದರಕಾವಲ್ಗೆ
ಬಂದಿರ್ಪರ್ರೈಬಲಪ | ರೀವಾರದೊಡನೆಬಂದೆವುಮಾರ್ಗವಶದೆ ನಿಮ್ಮಡಿಯದ
ರ್ಶನಕೆಂದನು ||೧೪||

ಆನುಡಿಗ ನಗುತಾಮುನೀಂದ್ರನೇನೆಂಬೆನ । ಜ್ಞಾನಮಂಕಳೆಯಲಘ
ಮಂ ತುರಗಮೇಧವಿ । ಧಾನಮೇಂಕುಗುರಿಂದೆಪೋಪ್ಪುದೆಕೊಡಲಿಯಂಕೊಂ
ಡಲೆಂಬಂತಿಳೆಯೊಳು ॥ ಮಾನವವಿಲಾಸದಿಂದುಷ್ಕರಂದಮಿಸಲ್ಕೆ ! ಭಾನುಮ
ತ್ಕುಲದೊಳವತರಿಸಿರ್ದನಿರ್ಮಲಚಿ । ದಾನಂದರೂಪನಹರಾಮನಪದಧ್ಯಾನ
ಮೊಂದುಪಾಪವನೊರಸದೆ ॥೧೫॥

ತಿಳಿಯಲಾಂಸುಗಮಮಾರ್ಗದೆತತ್ವಮಂಪಿಂದೆ । ತಿಳಿದರೊಳನೇಕರೊ
ಳ್ವಮರಿಸೆಯನೆಸಗುತಿರೆ । ಬಳಿಕೊಂದಿನಂಕಂಡು ತೀರ್ಥಯಾತ್ರೆಗೆಬಂದಲೋ
ಮಶಮಹಾಮುನಿಯನು ॥ ತಳೆದುಗುರುಭಕ್ತಿಯಂತತ್ಪದಕ್ಕೆರಗಿಮುನಿ । ತಿಲ
ಕದುರ್ಲಭಮನುಜಜನ್ಮಮೆತ್ತೆನಗೆಭವ । ಜಲಧಿತಾರಕಮಾವುದೆಂದು ಬೆಸ
ಗೊಂಡೊಡಾಯೋಗೀಂದ್ರನಿಂತೆಂದನು ॥೧೬॥

ಕ್ಷಿತಿಯೊಳಮರಾವಾಸಸುಖಕೆ ನಾನಾವಿಧ । ಕ್ರತುಗಳಂಪುಣ್ಯತಮ
ತೀರ್ಥಗಳುಮಂತುಸ। ದ್ವ್ರತಗಳಂಯಮನಿಯಮತಪಗಳಂದಾನಂಗಳಂ
ಮೊದಲೆನಿಪ್ಪಪಲವು ॥ ಶ್ರುತಿಸಿದ್ಧಸದ್ಧರ್ಮಪದ್ಧತಿಗಳಿಹುವುಸಂ । ಸೃತಿಮಹಾ
ಸಾಗರಸಮುತ್ತರಣಕೊಂದೆಸ । ನ್ನುತಗೂಢತತ್ವಮಿರ್ದಪುದಂನಿನಗೊರೆವೆ
ನಾನೊಲ್ದುಕೇಳೆಂದನು ॥೧೭॥

ಅರುಪಲಾಗದುನಾಸ್ತಿಕಂಗಮಶ್ರದ್ಧಂಗ । ಮರುಪಲಾಗದುಕಣಾಸದ್ಭ
ಕ್ತಿಹೀನಂಗ । ಮರುಪಲಾಗದುನಿಂದಕಂಗಂಶಠಾತ್ಮಂಗಮಜಿತೇಂದ್ರಿಯಂಗ
ಮದನು ॥ ಅರುಪುವುದುಗುರುವಚನದೊಳ್ಶ್ರದ್ಧೆಯುಳ್ಳಂಗ । ಮರುಪುವು
ದುವೈರಿಷಡ್ವರ್ಗಮಂಗೆಲ್ದಂಗ । ಮರುಪುವುದುಶಾಂತಾತ್ಮಕಂಗಮಿದುಸರ್ವದುಃ
ಖಾಪಹರತತ್ವಾರ್ಥವ ॥೧೮॥

ಪೆರನೊರ್ವದೇವನಿಲ್ಲಾರಾಮಚಂದ್ರನಿಂ । ಪೆರತೊಂದುನೋಂಪಿಯಿ
ಲ್ಲಾರಾಮಭಜನೆಯಿಂ । ಪೆರತೊಂದುಯೋಗಮಿಲ್ಲಾರಾಮಚಂದ್ರಚರಣಾಂ
ಬುಜಧ್ಯಾನದಿಂದೆ ॥ ಪೆರತೊಂದುಮಖಮಿಲ್ಲರಾಮಪದಪೂಜೆಯಿಂ । ದುರಿತ
ಕೋಟಿಯನೊರಸಿ ರಾಮಪದಭಕ್ತಿಯಿಹ । ಪರಸುಖವನನುಗೊಳಿಪುದಖಿಲ
ನಿಗಮಾಗಮರಹಸ್ಯಮಿದುಕೇಳೆಂದನು ॥೧೯॥

ಅದರಿಂದೆಸರ್ವಪ್ರಕಾರದಿಂವಾಕ್ಕಾಯ | ಹೃದಯದೊಳುಮಾಸಕಲ ಲೋಕಪತಿಯಂಸೇವಿ | ಸಿದೊಡಹುದುಸಂಸಾರ ಸಾಗರಸಮುತ್ತರಣಮೆಂದು ಲೋಮಶನುಸಿರಲು || ಸಮುದಾರಮತಿಯೆ ಕರುಣಿಪುದೆನಗೆತದ್ಧ್ಯಾನ | ಪದವಿಯುಂ ತಚ್ಚರಣಕಮಲಮಂ ಪೂಜಿಸುವ | ಹದನುಮನೆನುತ್ತಾನಾಂ ಬೇಡಿಕೊಂಡೊಡೆ ಬಳಿಕ್ಕಾಮುನಿಪನಿಂತೆಂದನು || ೨೦ ||

ಕೇಳ್ದ್ವಿಜೇಂದ್ರನೀನೇ ಕಮನದಿಂದೆಸಾಂ | ಪೇಳುವುದನೆಸೆವಯೋಧ್ಯಾಪುರದೆಕಲ್ಪತರು | ಮೂಲದೆ ಮನೋಹರಾಲಂಕಾರ ಪರಿಶೋಭಿಚಿತ್ರಮಂಟಪಮಧ್ಯದೆ || ಲೀಲೆಯಿಂವಜ್ರ ವೈಡೂರ್ಯಾದಿನವರತ್ನ | ಜಾಲದಿಂಪರಿಖಚಿತಮಾದ ಕನಕಾಸನದ | ಮೇಲೆಮಂಡಿಸಿದನಂ ಚಾಮರಂಚತ್ರಾದಿಸದುಪಚಾರಂ ಮೆರೆಯಲು || ೨೧ ||

ಸಕಲಲೋಕಾನುರಾಗವನಾಂತಸಂಬಂತೆ | ಚಕಚಕಕದುಚಿಪಟಲ ಜಟಿಲಮಾಣಿಕ್ಯಮಯ | ಮುಕುಟಮಂ ಧರಿಸಿರ್ಪನಂ ತಳೆದುತೋರಮುತ್ತಿನ ಕುಂಡಲದ್ವಯುವನು || ಪ್ರಕಟಮೆನಲಿಕ್ಕೆಲದೊಳುದಿಸಿ ದೀರರಿಪಾ | ರ್ವಕ ಚಂದ್ರನಂ ಧಿಕ್ಕರಿಸುವನಗೆಮೊಗನನರೆ | ವಿಕಸಿಸಿಬಂದುಗೆಯುಚಂದಮಂ ಪಳಿವಚೆಂದುಟಿ ಯುಂದಮುಳ್ಳವನನು || ೨೨ ||

ಪರಿಪಡೆದು ಶಿಖರದಿಂಕಡೆದೆರಡೆನಿಸಿದನಿ | ರ್ಘರದಿಂದೆ ಶೋಭೆವಡೆದಿಂದ್ರನೀಲಾದ್ರಿಯುಂ | ತಿರೆತೋರಮುತ್ತುಗಳ ಹಾರದಿಂದೊಪ್ಪುವ ವಿಶಾಲವಕ್ಷಸ್ಥಲನನು || ವರಮಣಿಮಯಮಾಂಗದದ್ಯುತಿಶಾಲಿಯಾಗಿಫಣಿ | ಧರಶೃಂಗವಾಕಾರಮೆನಿಸಿದಾಜಾನುಸುಂ | ದರಬಾಹುಯುಗಳನಂ ವೃಷಭೇಂದ್ರನಂತೆಪೀನೋತ್ತುಂಗಭುಜಶಿರನನು || ೨೩ ||

ಪೊಂಬಿಸಿಲ್ಕವಿದಿಂದ್ರನೀಲಗಿರಿಯಂತೆಪೀ | ತಾಂಬರಾಲಂಕೃತ ಶುಭಾಂಗನಂಸೋಂಕಿದೊಡ | ನೆಂಬುದೇನುರುಶಿಲೆಯು ನಂಗನೆಯುನೆಸಗಿದಂತಪ್ಪ ಗುರುತರಮಹಿಮೆಗೆ || ಇಂಬೆನಿಸಿವಿಧಿಪುರಂದರ ಮುಖ್ಯದೇವನಿಕು | ರುಂಬದಿಂದನವರತ ಮಭಿವಂದ್ಯಮಾನಮೆನಿ | ಪಂಬುಜೋಪಮ ಚರಣನಂಕೃಪಾಸಾಂದ್ರಮನನಂ ರಾಮಚಂದ್ರಮನನು || ೨೪ ||

ಮನದೊಳಗೆನಿಷ್ಕಾಮಬುದ್ಧಿಯಿಂಜಾನಿಸಿದ | ಮನುಜಂಭವಾಂಬುಧಿಯನುತ್ತರಿಸಿಪಡೆವನ್ಯೆ | ವಿನುತಕೈವಲ್ಯವನಿದಕ್ಕೆ ಸಂಶಯಮಿಲ್ಲ ಬಿಡದೆ ನೀನೀವ್ರತವನು || ಅನುದಿನಂಚರಿಸುತಾವಿಭುಗೈವಲೋಕರಂ | ಜನದಹಯಮೇಧದಶ್ವಂಬಂದೊಡೀತಪ್ಪೋ | ವನಕೊಡನಯೋಧ್ಯೆಯಂ ಸಾರ್ದಾಮಹಾತ್ಮನಂಕಂಡೊಡೆ ಕೃತಾರ್ಥನಪ್ಪೆ || ೨೫ ||

ಎಂದೆನಲನುಗ್ರಹವೆನುತ್ತೆ ತಚ್ಚರಣಸಾರ ! ವಿಂದಕಾನೆರಗುವುದುಮಾಯೋಗಿಮುಂಬರಿದ | ನಂದಿನಿಂಬಿಡದೆ ರಾಮೋಪಾಸನಾವ್ರತವನಾಚರಿಸುತಿರ್ದನಾನು || ಇಂದೀತಪ್ಪೋವನಕೆ ಸೇನೆಯಿಂದೊಡಗೂಡಿ | ಬಂದಿರ್ದಕುದುರೆಯಾರದುಪೇಳರೆನೆಮಹಾ | ನಂದದಿಂದಾನುಡಿಗಳಂ ಕೇಳ್ದುಸೌಮಿತ್ರಿ ವಿನಯದಿಂದಿಂತೆಂದನು || ೨೬ ||

ಯೋಗಿಮಂಡಲಶಿಖಾಮಣಿಯೆಕೇಳ್ಪುಷ್ಕರಸ | ನಾಗಿರ್ದ ರಘುವಂಶತಿಲಕನಾಗಾಮನೇ | ನೀಗಾಡೆವಿಪ್ರವಧಪಾಪವಂ ಲೋಕಮರ್ಯಾದೆಗನುಸಾರವಾಗಿ || ಯಾಗಮಂಗೈವನಾಮುಖತುರಂಗಮಪಾಲ | ರಾಗಿನಾವಿತ್ತ ನಡೆತಂದಿರ್ದೆವೆನ್ನನಾ | ವಾಗಗೋಚರನನುಜನೆಂದರಿವುದೀತನನೀಜನಕ್ಷರಿಪುಹನುಮನು || ೨೭ ||

ಎಂದೊಡಾಮುನಿಪಣ್ತುದಿಂದೆನ್ನಪುಣ್ಯಲತೆ | ಯಿಂದೆನ್ನ ಕುಲದೈವತಂ ಸುಪ್ರಸನ್ನಮಾ | ಯಿತ್ತಿಂದುಲೋಕದೆ ಯೋಗಸಿದ್ಧರೆಂಬವರೊಳೆನಗಂಗಣನೆ ತಾಂದೊರೆದುದು || ಇಂದು ಪರಿಣತಮಾದುದೆನ್ನ ಬಹುಕಾಲತಪ | ಮಿಂದಗ್ನಿಗೋತ್ರಮಿಷ್ಟಾರ್ಥಮಿತ್ತುದುರಾಮ | ಚಂದಿರನದರ್ಶನದೆ ಧನ್ಯನಾನಹಸಮಯಮೊದಗಿದುದರಿಂದೆಂದನು ||೨೮||

ರೋಮಾಂಚಭರಕಂಚುಕಿತಕಾಯನಾಗಿ ಬಳ | ಕಾಮಹಾಯೋಗಿಗದ್ಗದಕಂಠನಾಗಿನಿ | ಸ್ಸೀಮ ನಿರುಪಮಹರ್ಷಪೀಯೂಷ ಜಲಧಿಪೊಳ್ಮುಳುಮುಳುಗಿ ತೇಂಕಾಡುತೆ || ಸೌಮಿತ್ರಿಯೊಡನುಚಿತಕುಶಲೋಕ್ತಿಗಳನಾಡಿ | ರಾಮಚಂದ್ರನಮುಖ್ಯಭಕ್ತನಂ ಹನುಮನಂ | ಪ್ರೇಮದಿಂದಪ್ಪಿಬೇಡಿದನಂದಿನಾತಿಥ್ಯಕೆಲ್ಲರಂ ವಿನಯದಿಂದೆ ||೨೯||

ಅವರೆಲ್ಲರತಿಮುದದೆ ಕಯ್ಗೊಂಡು ತನ್ಮುನಿ | ಪ್ರವರನ ತಪೋವನೋ
ಚಿತಮಾದಶುಚಿಯಾದ | ವಿವಿಧಫಲಶಾಕದಧಿಘೃತಸಹಿತಮೃಷ್ಟಾನ್ನದಾತಿಥ್ಯ
ಸತ್ಕೃತಿಯನು || ತವೆತಣಿದು ನಿರ್ಮಲಾಂತಃಕರಣರಾಗಲ್ಲಿ | ತವಸಿಗಳ್ಗಂದಿನಿ
ರುಳಾದಿಯಿಂ ರಾಮಾಯ | ಣವನೊಲ್ದು ಕಥಿಸುತ್ತೆ ಪವಡಿಸಿದರುಪ್ಪವಡಿಸಿದರು
ಷಃಕಾಲಮಾಗೆ ||೩೦||

ಪುರುಹೂತದಿಗ್ವಧೂಟೀಲಲಾಟಸ್ಥಲಕೆ | ಮೆರೆವ ಕುಂಕುಮಪಂಕ
ಲೇಪನವೊ ಬಳಕ ಜಲ | ಧರಸಿಂಧುರಂಗಳ್ಗೆ ರುಚಿರಸಿಂಧೂರ ಧೂಳೀರಚನೆ
ಯೋ ಬಳಿಕಿದು || ನೆರೆತಿಮಿರವಾರಿಯಿಂತೀವಿದಾಕಾಶಸಾ | ಗರಕೆ ಬಡಬಾನ
ಲಪ್ರಸರಣಮೊ ಎಂಬಂತೆ | ನಿರುಕಿಸಲ್ತರದಿಂದದೇಂ ಕಣ್ಗೆವಂದುದೋ ಸಾಂ
ಧ್ಯರಾಗಂ ಮೂಡಲು ||೩೧||

ಇರುಳರದೆ ಪಲಬರನಗಲ್ದರಂ ಘಾತಿಸಿದ | ದುರಿತಮಂ ಕರೆಯುಕ್ಕೈತವ
ದಿಂದೆ ತಳೆದದಂ | ಪರಿಹರಿಸಿಕೊಳಲೆಳಸಿದಂತೆ ತೇಜೋರಹಿತನಾಗಿ ನಿಜ
ಮಿರುಳಾಣ್ಮನು || ಚರಮಾಂಬುರಾಶಿಯೊಳ್ಮುಳುಗುತಿರ್ದಂನೋಡೆ | ಪರಿಪರಿ
ಯನುಣ್ದನಿಗಳಿಂದುದಯಮುಖನಾದ | ಪರಮಾತ್ಮರೂಪನಂ ದಿನಪನಂನುತಿ
ಪಂತೆ ಪಕ್ಷಿಗಳದೇನುಲಿದುವೋ ||೩೨||

ವಾಸರಾಧೀಶನಾಗಮನಮಂ ಬೋಧಿಸ | ಲ್ಕೋಸುಗಂಬಂದ ಮುಂದಾ
ಳೆನಲ್ಕವನಿಯೊ | ಳ್ಬೀಸಿದುದುತಂಗಾಳವನವನದೊಳುಂ ನಿಜಪ್ರಿಯತಮನ
ಗಲ್ದಳಲನು || ಸೈಸದಿಳೆಯೊಳ್ಕೆಡೆದತಾರಕೆಗಳೆಂಬಂತೆ | ಭಾಸಿಸಿದುವಲರ್ದ
ಲರ್ಗಳಂಧಕಾರಾವರಣ | ಮೋಸರಿಸೆ ತೆರೆದೆಗೆದರಂಗತಲದಂತೆತಾಂ ಲೋಕಂ
ಪ್ರಕಾಶಿಸಿದುದು ||೩೩||

ಆನರ್ಮದೆಯೊಳಖಿಲಮುನಿಗಳವಗಾಹನ | ಸ್ನಾನಮಂಗೈದು ಪರಿಪೂ
ತಾತ್ಮರಾಗಿನಿಯು | ಮಾನುಸಾರದೆ ನಾರುಮಡಿಗಳಂತಳೆದಮಲ ಭೂತಿಲಿ
ಪ್ತಾಂಗರಾಗಿ || ಸೀನಭಕ್ತಿಯೊಳತ್ತುವಿಮಲಾರ್ಘ್ಯಮಂ ಶಿರ | ಸ್ಥಾನದೊ
ಳ್ಜೋಡಿಸಿ ಕರದ್ವಯವನಭ್ಯುದಿತ | ಭಾನುಮಂಡಲವನೀಕ್ಷಿಸುತಾಗಳಂತು
ನುತಿಗೈಯಲಾರಂಭಿಸಿದರು ||೩೪

ಸಪ್ತಾಶ್ವಪರಿಕಲಿತರಥಸಮಾರೂಢ ನಿಜ । ದೀಪ್ತಿಪ್ರಕಾಶೀಕೃತಾಶೇಷ ದಿಗ್ವಲಯ । ದೃಪ್ತನಿಶಿಚರವರ್ಗಭೀಕರಕರ ಪ್ರಸರ ಕೋಕಾಳಿಶೋಕಾಪಹ ॥ ತಪ್ತಚಾಮೀಕರದ್ಯುತಿಪೂರ್ಣಬಿಂಬ ಪರಿ । ಕ್ಲೃಪ್ತಕಾಷ್ಠಾದಿಕಾಲಾತ್ಮ ನಿಜಚಲನಪ । ವ್ಯಾಪ್ತನಿರುಪಮಿತಪ್ರಭಾವವಾಸರವಿಭೋ ದೇವಭೋತೇನ ಮೋಸ್ತು ॥೩೫॥

ತಾಮರಸಮಿತ್ರಾಯ ಮಿತ್ರಾಯ ದಶಶತೋ । ದ್ದಾಮನಿಜಭಾನವೇ ಭಾನವೇ ಕೃತತಮ । ಸ್ತೋಮವಿಧ್ವಂಸಾಯ ಹಂಸಾಯ ಸುರಕುಲೋತ್ತಂಸಾಯ ಪರಮಾತ್ಮನೇ ॥ ವ್ಯೋಮವಿಹಾರಿಣೇ ಹಾರಿಣೇ ನತಜನ । ಕ್ಷೇಮಂಕರಾಯ ಸೂರಾಯ ಸೂರ್ಯಾಯ ಸಕ । ಲಾಮಯ ವಿಘಾತಾಯ ಪೂತಾಯ ನಿಗಮಶತಗೀತಾಯ ತೇ ನಮೋಸ್ತು ॥೩೬॥

ಉದಯದೊಳ್ಬ್ರಹ್ಮಸ್ವರೂಪಂಗೆ ನಡುವಗ । ಲ್ಮದನಹರರೂಪಂಗೆ ಮತ್ತಸ್ತಮಾನಕಾ । ಲದೆ ವಿಷ್ಣುರೂಪಂಗೆ ಭುವನಸೃಷ್ಟಿಸ್ಥಿತಿಪ್ರಳಯೈಕಕಾರಣಂಗೆ ॥ ಸಮಮುಳ ತ್ರಿಗುಣಾತ್ಮಕಂಗೆ ವೇದಾತ್ಮನೆನಿ । ಪ್ಪವಂಗೆ ಕಾಲರೂಪಂಗೆ ಭೂತಾತ್ಮಕಂ । ಗದಿತಿತನುಜಂಗೆ ಸಕಲಕ್ಲೇಶಹರಣಂಗೆ ನಿನಗೆ ಸೂರ್ಯನೆ ನಮಿಪೆನು ॥೩೭॥

ಆವಕಿರಣಂಗಳಂ ತಪಿಸುವೆಯೊ ಲೋಕಮಂ । ದೇವ ನೀನವರಿಂದಮೇ ಕರೆಯುತಿಹೆಯೈ ಮ । ಹಾವೃಷ್ಟಿಯಂ ನಿನ್ನ ರುಚಿಯ ಪರಿಪೋಷದಿಂದಮೆ ವಹ್ನಿಚಂದ್ರಾರ್ಕಗಳು ॥ ಈವಸುಧೆಯಂ ಬೆಳಗುತಿಹರಲೆ ದಿನೇಶ ನಿ । ನ್ನೀ ವಿಶ್ವತೋಮುಖಪ್ರಭೆಯೊಳೇ ಜೀವಿಪುವು । ಜೀವಕೋಟಿಗಳಿಂತು ಮಹನೀಯನೆಂದೆನಿಪ ನಿನಗೆ ನಾಂ ಕುಂಬಿಡುವೆನು ॥೩೮॥

ದೇವದೇವನೆ ಹಸ್ತಪಾದಂಗಳಿಂದೆಯುಂ । ಭಾವದಿಂದೆಯುಮಿರದೆ ಮಾಡಿದೆನ್ನಖಿಲ ಪಾ । ಪಾವಳಿಯನೊಲ್ದು ನೀಂ ಪರಿಹರಿಸಿ ಪಾಲಿಸುವುದೆನ್ನನೆಲೆ ಕರುಣಾಬ್ಧಿಯೆ ॥ ಶ್ರೀವಿಷ್ಣುವುಂ ಮಹಾದೇವನುಂ ಬ್ರಹ್ಮನುಂ । ವೈವಸ್ವತೇಂದ್ರಾದಿ ಸಕಲಸುರರುಂ ನೀನೆ । ಕಾವರಾರ್ನೀನಲ್ಲದೀ ಜಗವನೆಂದು ಪರಿಪರಿ ನುತಿಸಿ ಪೊಡಮಟ್ಟರು ॥೩೯॥

ಉದಯಾದ್ರಿಮಸ್ತಕಕೆ ಮಾಣಿಕ್ಯಮಕುಟಂಬೊ | ಲುದಯಿಸಿದ ಕ
ಮಲಿನೀವಲ್ಲಭನ ಬೆಳ್ಪೆಳಗು | ಮೊದಮೊದಲ್ಮರಗೊನೆಗಳಲ್ಲಿ ಥಳಥಳಿಸಿ.
ಹೊಳೆಹೊಳೆದು ತರದಿಂದೆ ಬಳಿಕ || ಪುದಿದುದೀಜಗವನೊಡನಂಧಕಾರಂ ಸ
ಚ್ಚಿ | ದುದಯದಿಂದಜ್ಞಾನಮಳಿವಂದದಿಂದೆ ತಾಂ | ಚದರಿಪೋದುದು ಕೋ
ಕಮಿಥುನಮೊಂದಾದುದಾತ್ಮದ್ವಂದ್ವಮೊಂದಹವೊಲು ||೩೯||

ಜಲಜಿನಿಯಿನಂ ಪ್ರವಾಸದೊಳಿರ್ಪನೆಂದೆನುತೆ | ಮಲಿನಭಾವಮನಂ
ತು ತನುತೆಯಂಪಡೆದುತಾಂ | ಕಳೆದುದು ನಿಶೀಥಿನಿಯನಂತಿಂತು ಸುಮನಸ್ಸ
ಮುಲ್ಲಾಸಮಣಮಿಲ್ಲದೆ || ಬಳಿಕವಂ ಪದುಳದಿಂದಧಿಕತರರಾಗಮಂ | ತಳೆದು
ಬರೆ ಕಮಲಮುಖಿವಿಕಸವದಿನ್ನೈದೆಶಂ | ಗೊಳಿಸುತ್ತೆ ಸಾಳಯಾಗಾಮೋದ
ಮಾಂತುದು ಪತಿವ್ರತಾಧರ್ಮದಿಂದೆ ||೪೦||

ಪಡೆದನಸ್ತಮನಿಂದು ಸೂರ್ಯನಭ್ಯುದಯಮಂ | ಪಡೆದಂ ಪರಿಮ್ಲಾನ
ಮಾಗುತ್ಪಲಂ ಮುಗಿದು | ದೊಡನೆಕೈಯೇರಿ ಪಂಕಜಮಲರ್ದಾಂತುದತಿ
ಖೇದಮಂ ಘೂಕವಿತತಿ || ಪಡೆದುದತಿತೋಷಮಂ ಕೋಕಾಳಿಯಿರುಳಸಿರಿ |
ನಡೆದಳಗಿದಂತರೀಪಾಂತರಕೆ ಪಗಲಸಿರಿ | ಪಡೆದೇಳ್ಗೆಯಂ ಮೆರೆದಳೀಜಗದೊ
ಳತಿವಿಚಿತ್ರಂ ವಿಧಿವಿಲಾಸಮಹಹಾ ||೪೧||

ಬಡನೆ ರಘುಪುಂಗವಂ ಪುಷ್ಕಲಪ್ರಮುಖರಿಂ | ದೊಡಗೂಡಿ ನರ್ಮದಾ
ತಟನಿಯಂಸಾರ್ದು ಪೊ | ಳ್ತಡದ ನಿಯಮಂಗಳಂತೀರ್ಚಿ ಸಂಪ್ರೀತಿಯಿಂ
ಮುನಿಪನಂದಂಡಿಗೆಯನು|| ಅಡರಿಸಿ ತದಿಷ್ಟಾನುಸಾರದಿಂ ಶಿಷ್ಯಜನ | ರೊಡ
ನಯೋಧ್ಯಾಪತ್ತನಕ್ಕೆ ಬಿಜಯಂಗೆಯಿಸಿ | ನಡೆತಂದು ಪಾಳಯಕೆ ಪಡೆಯೊ
ಡನೆ ಮಖಹಯಮನನುಸರಿಸಿ ಮುಂಬರಿದನು ||೪೨||

ಬಳಿಕ ಕೇಳ್ಮುನಿಯೆ ರೇವಾತಟಪ್ರಾಂತಪಥ | ದೊಳೆ ಪೋಗುತಿರ್ದಾ
ಮಖಾಶ್ವಮಾನದಿಯನಿ | ಗಳಿಸಿ ನೀರೊಳಗಡಿಯಿಡಲ್ಕಲ್ಲಿಗಂಭೀರಮಾದೊಂ
ದು ಮಡುವಿನೊಳಗೆ || ಮುಳುಗಿತೊಡನಾಳ್ಗಳೋಹೋ ಪ್ರಮಾದಂಕುದು
ರೆ | ಮುಳುಗಿದುದುಮಡುವಿನೊಳಗೆಂದಾರೆ ಸೌಮಿತ್ರಿ | ತಿಳಿದದಂ ಮಡುವ
ನಾರ್ಪುಗಬಲ್ಲರೆಂದೆಲ್ಲರಂ ನೋಡಿ ಬೆಸಗೊಂಡನು |೪೩|

ಆಮಾತನಾಲಿಸುವುದುಂ ಕುಶಲಮತಿಸುಮತಿ । ಸೌಮಿತ್ರಿ ಕೇಳ್ಜಲಸ್ತಂಭಮಂ ನೀನುಂ ಹ । ನೂಮನುಂ ಮತ್ತಮೀ ಪುಷ್ಕಲನುಮರಿದಿರ್ಪಿರಲೆ ಮರೆದುದೇಕೆನಲ್ಕೆ ॥ ಸೌಮಿತ್ರಿಯುದ್ಬುದ್ಧಮತಿಯಾಗಿ ಪುಷ್ಕಲ ಹ । ನೂಮರೊಡನೆಯೆ ಜಲಸ್ತಂಭಮಪುನಶ್ಚರಿಸಿ । ರಾಮನಂ ನೆನೆದು ಪುಗಲಾಮಡುವನಲ್ಲೊಂದು ದಿವ್ಯಸ್ಥಲಂ ಕಂಡುದು ॥೪೪॥

ಮೊದಳಂಕಿತ್ತೀಳೆಪಲಸುದಾಡಮಿಸೋದೆಯು । ಮಾದರಿಯುಸವಿಯುತಸಿವಣ್ಗೊನೆಗಳಂ ನಿಬಿಡ । ಮಾದಭಿನವದ್ರಾಕ್ಷೆ ಬಾಳೆ ಯಿಮಾಮ್ರವು ಮೊದಲಾದ ಮರಗಿಡುಗಳಿಂದೆ ॥ ಮಾದಗೊಂಡುಲಿವ ಖಗಕುಲದೆ ಮಧುವಂಪ್ರಕಾ । ಮಾವರದೆಪೀರ್ದುಝೇಂಕರಿಸ ತುಂಬಿಗಳಿಂದ । ಮಾದಮಲರಾಂತಬಳ್ಳಿಗಳಿಂದಮೆಸೆವೊಂದುವನಮಲ್ಲಿ ಕಣ್ಗೊಳಿಸಿತು ॥೪೫॥

ತೊಳತೊಳಪ ಹರಿನೀಲಶಿಲೆಯುಹಂತಂಗಳಿಂ । ಪಳುಕಿನೊಪ್ಪುದಭಿತ್ತಿಯಿಂ ಪಚ್ಚೆಗಲ್ಲ್ವಸಿ । ಡಿಳೆಯಿಂದೆ ಬಗೆಬಗೆಯುಚಿತ್ರದ ತರವಿಡಿವಪೊಂಗಂಬಸಾಲ್ಗಳಿಂದೆ ॥ ಪೊಳೆಪೊಳೆವ ಮಣಿಮಯದಪಲವು ಬಾಗಿಲ್ಗಳಿಂ । ಥಳಥಳಪ ರನ್ನಗನ್ನಡಿಯು ಮೇಲ್ವೊದಿಕೆಯಿಂ । ಕಳೆವೆತ್ತದೊಂದು ತೇಜೋಮಯಂ ದಿವ್ಯಾಲಯಂ ಕಣ್ಗೆವಂದುದಲ್ಲಿ ॥೪೬॥

ಮೂವರವರಲ್ಲೊಂದು ಪೊಂಗಂಬದೊಳ್ಕಟ್ಟಿ । ದಾವಾಜಿಯಂಕಂಡು ಮುದಗೊಂಡು ಬಳಿಸಾರ । ಲಾ ವಿಚಿತ್ರಾಲಯದನಡುವಣಹಜಾರದೊಳ್ನವರತ್ನಪರ್ಯಂಕದೆ ॥ ಸೇವಿಸುತ್ತಿರೆ ಸೆಜ್ಜೆವಳ್ತಿಯರ್ಕೆಲಬಲದೊ । ಳಾವನದಲಕ್ಷ್ಮಿಯೋ ಎಂಬಂತೆ ಪವಡಿಸಿಹ । ದೇವಕುಲಸಂಭವೆಯು ಯೋಗಿನಿಯನೊರ್ವಳಂ ಕಂಡು ವಿಸ್ಮಿತರಾದರು ॥೪೭॥

ಅವದಿರಂ ಮೂವರಂ ಕಂಡಾಳಗಿತ್ತಿಯರೊಡ । ನವಲೋಕಿಸೊಡತಿ ನರರಿರ್ವರೊರ್ವಂ ಮಹಾ । ಪ್ಲವಗನಿಂತಿದೊ ಮೂವರಾರೊ ಭೂತಳದಿಂದೆ ಬಂದಿರ್ಪರಾ ವೀರರು ॥ ಅವನೀಂದ್ರರಂದದಿಂದೆಸೆಯುತಿರ್ಪರಿರ್ವ । ರವರೊಳೊರ್ವಂ ಭಯಂಕರರೂಪನೆಂದು ಬಿ । ನ್ನವಿಸಲಾಸಿದ್ಧವಧುಮಂಚದಿಂದೆದ್ದುಮಣಿಪೀಠದೊಳ್ಮಂಡಿಸಿದಳು ॥೪೮॥

ಆಗಳತಿವಿನಯದಿಂ ಶತ್ರುಘ್ನಮುಖ್ಯರಾ | ಯೋಗಿನಿಯಪದಯುಗ
ಕೆ ಕೋಟೀರರತ್ನಪ್ರ | ಭಾಗುಂಭವೊಳ್ದಡೆಮಣಿದೊಡಾ ಸಿದ್ಧವಧುಕಲಿ
ಗಳಿರನೀಂಗಳಾರು ‖ ಯೋಗಸಿದ್ಧರಪದವಿದಿದನಿರದೆ ಪ್ರಾಕ್ಕರ್ಗೆ | ಸಾಗದುವ
ರಳ್ವುದದು ತಾನಿರಲಿಪೇಳಿರೀ | ಯಾಗಹಯವಾರದೆಂದಾರೆದಿಟ್ಟತನದೆ ಬೆಸ
ಗೊಳೆ ಹನುಮನಿಂತೆಂದನು ‖೪೯‖

ಎಲೆ ಮಹಾಮಹಿಮೆ ನಾವಬ್ಜಬಾಂಧವವಂಶ | ತಿಲಕನಹರಾಮಚಂ
ದ್ರಮನಸೇವಕರಾತ | ನಿಳೆಯಮರನಂ ಘಾತಿಸಿದದುರಿತಮಂ ಕಳೆಯಲಶ್ವ
ಮೇಧಂಗೈವನು ‖ ನೆಲನೆಲ್ಲಮಂ ಪರಿಕ್ರಮಿಸಿ ಬರಲಪರಿಮಿತ | ಬಲದೊಡನೆ
ಬಿಟ್ಟಿರ್ಪನೀಹಯವನಿವರ ಕಾ | ವಲೊಳಾಂ ನಿಯುಕ್ತರಾಗಿಹೆವೆಂದು ವಿನಯ
ದಿಂದರುಪಲಾ ಸ್ತ್ರೀಯೆಂದಳು ‖೫೦‖

ಈಗಳಾಪರಮಪೂರುಷನೆನಿಪರಾಘವಂ | ಯಾಗವಂಗೈದಪನೆನೆನೆದೊ
ಡಖಿಲಾಘವಂ | ನೀಗಾಡುವಂಗವಂಗೆತ್ತಣದಾಪಾಪವೆಂಬುದುಮಖವನಿಂತು
ತಾನು ‖ ಆಗಿಸಿದೊಡೆಲ್ಲರುಂಭೂಪತಿಗಳಘಭೀತ | ರಾಗುವರೆನುತ್ತೆ ಬಗೆದಿಂ
ತಶ್ವಮೇಧಕು | ದ್ಯೋಗಿಸಿಹನಿಂದುತತ್ಪುಣ್ಯನಾಮಶ್ರವಣದಿಂಧನ್ಯೆಯಾದೆ
ನಾನು ‖೫೧‖

ಆನುಮಾತನಚರಣಸೇವಿಕೆವಿವಸ್ವಾಭಿ | ಧಾನೆಯಣಿಮಾದಿಸಂಸಿದ್ಧಿ
ಯಿಂದಿಂತುನಿ | ರ್ವಾಣನುಷಸ್ಥಾನಂಗಳೊಳ್ಬಯಸಿದಂತೆವಿಹರಿಪಸಿದ್ಧಕುಲ
ಯೋಗಿನಿ ‖ ಆ ನಿಗಮಗೋಚರನಚರಣೈಕ್ಯಕಾಂತಿರ್ಪೆ | ನಾನೆಜಲಮಾರ್ಗ
ದಿಂದೀಗುಹಾಮುಖಕೆಬಂ | ದೀನಿಮ್ಮದಾರಲಕ್ಷಣದಹಯಮಂಬಿಡದೆ ತಡೆ
ದಿಲ್ಲಿಕಟ್ಟಿಸಿಹೆನು ‖೫೨‖

ಇಲ್ಲಿಬಂದೆನ್ನಕಯ್ಯಿಂದಿದಂ ಚಾಪಧರ | ಮಲ್ಲರೆನಿಸಿದೊರ್ಡಂ ರಾಮ
ಚಂದ್ರನಭಕ್ತ | ರಲ್ಲದಾರುಂ ಬಿಡಿಸಿಕೊಳಲಾರರ್ಕೈ ನಿಮಗೆತಡೆಯಿಲ್ಲವೊಂದು
ನುಡಿದು ‖ ಉಲ್ಲಾಸದಿಂ ದಿವ್ಯಫಲಮಧುರಸಂಗಳಿ | ತ್ತೆಲ್ಲರ್ಗಮುಚಿತಸತ್ಕಾ
ರಮಂಗೈದೆಲ್ಲೈ | ಬಲ್ಲಿವರಿರಾವರವನೇನಾದೊಡಂ ಬೇಡಿರೊಲ್ದೀವೆ ನಾನೆಂ
ದಳು ‖೫೩‖

ಮರುದಾತ್ಮಭವನದಂ ಕೇಳ್ದಲಾಮಹನೀಯ | ಪರಮಾತ್ಮನಹ ರಾಮಚಂದಿರನನುಗ್ರಹದೆ | ಪರಿಪೂರ್ಣಮಾಗಿರ್ಪ್ಪುದೆಮಗೆ ವಾಂಛಿತಮೆಲ್ಲಮಿನ್ನೊಂದು ಬೇಳ್ಪುದಿಲ್ಲ || ವರವನೊಂದಂಬೇಳ್ಪಾದೊಡಂ ಭವಭವಾಂ | ತರದೊಳಂ ಸ್ವಾಮಿಯಾಗಿರ್ಪಂತೆ ರಾಮಚಂ | ದಿರನೆಮಗೆನಾವು ಮಾತಂಗೆ ಕಿಂಕರರೆನಿಸಿಕೊಂಡಿರ್ಪವೋಲುಮಿಂತು ||೫೪||

ಎಂದೊಡಾಮಾತನಾಲಿಸಿ ಸಿದ್ಧವಧು ಪವನ | ನಂದನನಭಿನ್ನವಾಗದು ನಿಮ್ಮ ಕೋರಿಕೆಯಿ | ದೆಂದನುಗ್ರಹಿಸಿ ತಾಂ ಕ್ಷಣಮಾತ್ರವೊಡನೆಜಾನಿಸಿ ಯೋಗದೃಷ್ಟಿಯಲ್ಲಿ || ಪಿಂಪುಮುಂದುಗಳರಿದು ಕೇಳರೈವೀರಮಣಿ | ಯಂದೆಂಬನೃಪತಿ ತಡೆದಿ ನಿಮ್ಮ ಕುದುರೆಯಂ | ಮುಂದೆಸಂಧಿಸುವನಾಹವಕೆ ಗೆಲಲವನನೊಂದಸ್ತ್ರಮಂ ನಿಮಗೀವೆನು ||೫೫||

ರಾಮಾನುಜನೆನೀನಿದಂ ಪರಿಗ್ರಹಿಸು ಕೇ | ಳಾಮಹಾವೀರಮಣಿವೀರಮಣಿಯುಂದು ಸಂ | ಗ್ರಾಮದೊಳ್ನಿನಗೆ ದುರ್ಜಯನಾಗಿತೋರ್ಪನೋತ್ತಾನೆಂದು ನೀಂ ತಳ್ವದೆ || ಈಮಹಾಸ್ತ್ರವನೆಚ್ಚೊಡಾನಿಮಿಷಮಾತ್ರದೊಳೆ | ರಾಮನಡಿಯಂ ಕಂಡು ತನ್ಮಹಿಮೆಯಂ ತಿಳಿದು | ಸೌಮನಸ್ಯದೆಕುದುರೆಯಂ ಬಿಟ್ಟುನಿಜರಾಜ್ಯದೊಡನಹಂ ನಿಮಗೆವಶನು ||೫೬||

ಇಂತೆಂದೊಡಾಕೆ ತದ್ದಿವ್ಯಾಸ್ತ್ರಮಂ ಶತ್ರು | ಹಂತಾರನಾಚಮನಮಂಗೈದು ಶುಚಿಯಾಗಿ | ಶಾಂತಮನದಿಂದುದಙ್ಮುಖನಾಗಿ ಕಯ್ಕೊಂಡುತಚ್ಚರಣಯುಗಳಕೆರಗಿ || ಸಂತಸಂಮಿಗಲಾಕೆ ಬಿಟ್ಟುಕೊಟ್ಟಾಸಸ್ತ | ತಂತುಸಪ್ತಿಯನೊಡಂಗೊಂಡು ಪುಷ್ಕಲ ಹನೂ | ಮಂತರೊಡನೇಳ್ತಂದನಲ್ಲಿಂದೆ ಸಲಿಲಸಂಸ್ತಂಭವಿದ್ಯಾಬಲದೊಳು ||೫೭||

ಕ್ಷೇಮದಿಂ ಮುಖತುರಂಗಮದೊಡನೆ ಮಡುವಿನಿಂ | ದಾಮೂವರುಂ ಬಂದುದಂನೋಡಿ ಮೊಳಗಲು | ದ್ದಾಮಶುಭವಾದ್ಯಂಗಳೊರ್ಮ್ಮೆದಲ್ವಾಳಯದೆಸುಗ್ರೀವ ಮುಖವೀರರು || ಸಾಮೋದರಾಗಲಾಗವಿಯ ವೃತ್ತಾಂತಮಂ ಸೌಮಿತ್ರಿಕಥಿಸುತೆಲ್ಲರ್ಗ್ಗಮತಿಮುದದಿಂದೆ | ರಾಮಚಂದ್ರನ ಚರಣಮಂನೆನೆದು ಸರ್ವ್ವರೊಡನಲ್ಲಿಂದೆ ಪೊರಮಟ್ಟನು ||೫೮||

೧೫ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೧೫ಕ್ಕೆ ಪದ್ಯ ೭೦೮ಕ್ಕೆ ಮಂಗಳಮಸ್ತು.

ಹದಿನಾರನೆಯ ಸನ್ಧಿ.

ಸೂಚನೆ ‖ ಅಂಗನೆಯರೊಡಗೂಡಿ ಲೀಲೆಯಿಂ ವನವಿಹಾ | ರಂಗೈಯುತಿರ್ದ
ರುಕ್ಮಾಂಗದಂ ತನ್ಮುಖ ತು | ರಂಗಮಂ ಭುಜಮದಾಟೋಪದಿಂತಡೆ
ದಶ್ವಶಾಲೆಯೊಳ್ಕಟ್ಟಿಸಿದನು ‖

ತಾಪಸಪ್ರವರಮುನ್ನುಡಿದುದಂ ಕೇಳ್ಸುಮಿ | ತ್ರಾ ಪುತ್ರನೊಡಗೂ
ಡಿ ಸೇನೆಯಿಂ ನರ್ಮದಾ | ದ್ವೀಪವತಿಯುಂದಾಂಟಿ ಮುಂಬರಿಯಲಾ ಕುದುರೆ
ದೇವಪುರಮಂ ಪೊಕ್ಕುದು ‖ ವಿಪ್ರೊಗಳ್ದಪೆನಮನು ಶತ್ರುಲೋಕಕ್ಕೆಸುದು
ರಾಪಮಾದತಿಶಯಿತನಿರವಧಿಕ ಸಕಲವಿಭ | ವೋಪೇತಮಾದ ವಿಸ್ತೀರ್ಣಮಾ
ದಾಮಹಾಪಟ್ಟಣದ ವೈಖರಿಯನು ‖೧‖

ಸುರಭಿಸುಮನೋನಂದನಾರಾಮಯುಕ್ತಮಾ | ಗಿರದಿರ್ದೊಡದಮಾ
ನವರಮಣೀಸ್ಥಾನಮಾ | ಗಿರದೊಡಮನಂತಯಾನೋಪೇತಮುಂ ಸುಧರ್ಮಾ
ನ್ವಿತಮುಮೆನಿಸಿಕೊಂಡು ‖ ಇರದಿರ್ದೊಡಂ ಸುಕೃತಿಜನಭೋಗ್ಯವಿಭವ
ಮಾ | ಗಿರದೊಡಂ ವೀರಮಣಿರಾಜೇಂದ್ರನಾಳುತ್ತ | ಮಿರದಿರ್ದೊಡಂ ತಿಳಿದ
ರಾರಾಜಧಾನಿಯುಂ ದೇವಪುರಮೆಂದೆಂಬರೇ ‖೨‖

ಪದ್ಮಿನೀಜಾತಿಯರೊ ಸಕಲಯುವತಿಯರೆಲ್ಲಿ | ಪದ್ಮಸಂಖ್ಯಾತೀತ
ಧನರೋವಣಿಜರೆಲ್ಲಿ | ಪದ್ಮರಾಗಾದಿ ಮಣಿಭೂಷಣಪ್ರಚುರರೋ ಸಕಲರುಂ
ಪ್ರಜೆಗಳೆಲ್ಲಿ ‖ ಪದ್ಮಕಲ್ಹಾರಾದಿಕುಸುಮಂಗಳಿಂದೆಲ್ಲಿ | ಪದ್ಮಾಕರಂಗಳನವ
ರತಮುಂ ಶೋಭಿಪುವೊ | ಪದ್ಮೆತಾನೊಲ್ದಿಲ್ಲಿನೆಲಸಿಹಳೊ ಪೊಗಳಲರಿದಾಪು
ರದ ಸಿರಿಯನಹಹಾ ‖೩‖

ನೀಲೋಪಲಂಗಳಿಂ ವಿರಚಿಸಿರ್ಪುತ್ತುಂಗ | ಲೀಲಾದ್ರಿಶೃಂಗಂಗಳಂ
ನೋಡಿ ತತ್ಪುರದ | ಕೇಳೀವನಂಗಳೊಳ್ಕೇಗಿನಲಿದಾಡುವುವು ನವಿಲ್ಗಳ್ಶರತ್ಕಾ
ಲದೆ ‖ ಪ್ರಾಲೇಯಕರಕಾಂತಮಯಸಮುನ್ನತ ಚಂದ್ರ | ಶಾಲೆಗಳ್ಪ್ರಮು
ದಾಸ್ಯ ಶಶಿಪರಿಚಯದಿನುಗುಳ್ವ | ಕೀಲಾಲಧಾರೆಯಂ ಮಳೆಗೆತ್ತು ಚಾದಗೆ
ಗಳೆಂದುಮೊಲ್ದೀಂಟುತಿಹುವು ‖೪‖

ತಾವರೆಯಪೆಣ್ಣಬಣ್ಣಕ್ಕೆ ಸರಿವರ್ಣಂಗ | ಲಾವಣ್ಯರಸಝರಿಯಕರೆ ಗೆರೆದರಾಕಾನಿ | ಶಾವಲ್ಲಭನಕಳೆಯನಲೆಗಳೆವಮೊಗದ ಚೆಂಬವಳದೋರಗೆಯ ತುಟಿಯ ॥ ಕೋಮಳಂತಃಯುತಶ್ಯಾಮಲೋಚನದರಾ | ಜೀವಸೋದರಪದದ ತಳಿರೆಣೆಯ ಕರತಳದ | ದೇವಪುರಸುಮತಿಯರ ಯುವತಿಯರ ಸುಮತಿಯರ ಚೆಲ್ವನಾನೇಂ ಪೊಗಳ್ವೆನು ॥೫॥

ಬಿಗಿದುವೋ ಬಲ್ಪಿಂದೆಗೆಲ್ದು ಕಾಂತಾಜನದ | ಪೊಗರೊಗುವ ಚೆಂದುಟಿಯಿನೆಂಬಂತೆವೋಲಲ್ಲಿ | ಸೊಗಯಿಪ್ಪವುಕರುಮಾಡಗಳ ಮಿಸುನಿಗಂಬಂಗಳೊಳ್ಪದ್ಮರಾಗಂಗಳು ॥ ಬಗೆಯೆ ಮೊಲ್ಲಗೆಯಿಂದೆ ಪೊನ್ನಮಂಚಯಿಸಿ ಪದ | ಯುಗದೆ ಪೆಣ್ಮಣಿಗಳಾಕ್ರಮಿಸಿತುಳಿವಪರೆಂಬ | ಬಗೆಗೆ ಸಕ್ಕಾಗಿಸೌಧಂಗಳೊಳ್ಪಳುಕಿನಿಳೆಗಟ್ಟುಗಳದೇನಸೆಸುವೋ ॥೬॥

ಕುಲಿಶಮಾಣಿಕ್ಯವೈಡೂರ್ಯಗೋಮೇಧಿಕೋ | ಜ್ವಲ ಪುಷ್ಯರಾಗಪ್ರವಾಳಮರಕತನೀಲ | ಲಲಿತಮುಕ್ತಾಫಲಗಳೆಂಬಮಣಿಗಳ ರಾಶಿಗಳ್ರನ್ನವಸರದೊಳಗೆ ॥ ಪಲತೆರದಧಾನ್ಯಗಳರಾಶಿಗಳತೆರದೆ ಕ | ಣ್ಗೊಳಸುತಿರೆತತ್ಕಾಂತಿಯಿಂ ಸುಧಾಲೇಪನಿ | ರ್ಮಲಭಿತ್ತಿ ಪಲವರ್ಣದಿಂ ಚಿತ್ರಿಸಿದವೊಲೇನೆಸೆವುದೋ ತತ್ಪುರದೊಳು ॥೭॥

ನಿಯತಪ್ರಕಾಶಮೆಮಗೇಕಮಲಿನಾಂಬರಾ | ಶ್ರಯದೊಳಿಲ್ಲೆಂದನೇಕಾತಿವಿಮಲಾಂಬರಾ | ಶ್ರಯದೊಳಿರ್ದಾವಗಮತಿಪ್ರಕಾಶಮನಾಂತಮಿಂಚುಗಳವೆಂಬಂತಿರೆ ॥ ಕ್ಷಯರಹಿತಮಾಗೆಸೆಯುತಿರ್ಪವಾರಾಜಧಾ | ನಿಯೊಳವಿರತಂಕೊಂಬವರ್ಗೆ ತೆರಿಪಬಲ್ಲ್ವ | ಲೆಯಪಟ್ಟೆಪೊಂಜರಿಗೆ ಸೀರೆಗಳಪೊಳಪುಗಳ್ದೊಸಿಗರಪಸರದೊಳಗೆ ॥೮॥

ಪರಶಿವಾಯತನಂಗಳೆಲ್ಲೆಲ್ಲಿಯುಂನೋಡೆ | ಪರಶಿವಪುರಾಣಪ್ರಸಂಗಮೆಲ್ಲೆಲ್ಲಿಯುಂ | ಪರಶಿವಾರಾಧನೆಗಳೆಲ್ಲೆಲ್ಲಿಯುಂ ಪರಶಿವಧ್ಯಾನಮೆಲ್ಲೆಲ್ಲಿಯುಂ ॥ ಪರಶಿವೋತ್ಸವವಿಜೃಂಭಣೆಗಳೆಲ್ಲೆಲ್ಲಿಯುಂ | ಪರಮಶೈವಾಚಾರಮೆಲ್ಲೆಲ್ಲಿಯುಂ ಮಹೇ | ಶ್ವರಭಕ್ತಮಣಿ ವೀರಮಣಿಯಾಳ್ವತತ್ಪುರದೊಳನವರತಮುಂ ಮೆರೆವುವು ॥೯॥

ರುದ್ರಾಕ್ಷಮಾಲಿಕೆಗಳಗೊಳ್ಪವಪದಾರ್ಪಿತಾ । ಚ್ಛಿದ್ರನವಬಿಲ್ವಪತ್ರಂ ಶಿಖೆಯೊಳಳಿಲದುರಿ । ತದ್ರುಮಕುಂತಾರಾಯಮಾಣಪಂಚಾಕ್ಷರೀಮಂತ್ರಜಪ ಮಾನನದೊಳು ॥ ಅದ್ರಿಜಾರಮಣಚರಣಸ್ಮರಣೆಚಿತ್ತದೊ । ಳ್ಭದ್ರಭಸಿತ ತ್ರಿಪುಂಡ್ರಂ ಪಣೆಯೊಳೊಪ್ಪುವ । ಕ್ಷುದ್ರವೃತ್ತಿಗಳೆನಿಪಮಲಬರ್ಮಹಾತ್ಮರಾ ನಗರದೊಳ್ನೆಲಸಿರ್ಪರು ॥೧೦॥

ಆರಾಜಧಾನಿಯಂ ಪಾಲಿಸುತ್ತಿರ್ದಂ ಕು । ಮಾರಗಜಮುಖರತ್ತಣಿಂದೆ ಯುಂ ಪಿರಿದೆನಿಪ । ಗೌರೀಮನೋವಲ್ಲಭನ ನಿರ್ಭರಪ್ರೇಮೈಕಭಾಜನನೆ ನಿಸಿದ ॥ ಪಾರಮೇಶ್ವರಕುಲೋತ್ತಂಸನೆನಿಸಿದ ಚಾಪ । ಧಾರಿಗಳಗಣನೆಯೊ ಳ್ಪ್ರಥಮನಾದುದರಿಂದೆ । ವೀರಮಣಿಯೆಂದು ತಾನನ್ವರ್ಥನಾಮಮಂಪಡೆದಿರ್ದ ರಾಜೇಂದ್ರನು ॥೧೧॥

ಆರಾಯನಾತ್ಮಜಂ ರುಕ್ಮಾಂಗದಂ ವನವಿ । ಹಾರಕೌತುಕದಿಂದೆ ಪದ್ಮಿನೀಜಾತಿಯರ । ಚಾರುಲಾವಣ್ಯಸರಸಿಯರ ತನ್ನರಸಿಯರನೊಡಗೊಂಡು ಲೀಲೆಯಿಂದೆ ॥ ಆರಾಜಧಾನಿಯ ಸಮೀಪದೊಳಗಿರ್ದಂ । ದಾರಾಮಕಚ್ಚರಿಸಿ ಯರನೊಡಂಗೊಂಡು ಬ್ಬಂ । ದಾರಕಾಧಿಪಸುತಂ ನಂದನಕೆ ಬಂದಂತೆ ಬಂದನೇನೆಂಬೆನದನು ॥೧೨॥

ಅಲರಂಬನಾಯುಧಾಗಾರಮೋ ಪರಮೆದುರು । ಗಲಭೋಜನದಶಾಲೆಯೋ ಮೋಹ್ಕಯೂರಸಂ । ಕುಲದಮಂಜುಳನಾಟ್ಯರಂಗಮೋ ಚೈತ್ರಭೂಪಾಲನಸಭಾಸ್ಥಾನಮೋ ॥ ಎಲರಣುಗನಾಡುಂಬೊಲನೊ ಕೋಕಿಲವ್ರಜದ । ಕಲಮಧುರಸಂಗೀತಶಾಲೆಯೋ ವಿರಹಿಗಳ । ಕೊಲೆನೆಲೆಯೊ ತಾನೆಂಬಪೆಂಪಿಂದೆನೋಡಲಾವನಮದೇಂ ಶೋಭಿಸಿದುದೋ ॥೧೩॥

ಗಿಳಿವಿಂಡುವಂದಿಸಂದೋಹಮೆನೆತಳಿತು ಕಂ । ಗೊಳಿಸುವೆಳಮಾವುಗಳ್ವಿಧಾಯುಧಂಗಳಂ । ತಳೆದುನಿಂದಾಳ್ಗಳೆನೆಕಲರವಂಗೈವಪಲವಕ್ಕಿಗಳ್ಗಾಯಕರೆನೆ ॥ ಮಲಯಾನಿಲಂದೂತನೆನೆ ಮಂದಪವಮಾನ । ವಲಮಾನಮೃದುಲತೆಗಳಂತುನರ್ತಕಿಯರೆನೆ । ಲಲರ್ವಿಲ್ಲರಾಯನೋಲಗಶಾಲೆಯಂತೆ ಕೇಳೀವನ ಮದೇನೆಸೆದುದೋ ॥೧೪॥

ಆಮಂಜುಳಾರಾಮದೊಳ್ಪದ್ಮವದನಾಭಿ | ರಾಮಂ ಸುರೂಪಕಾಧಾರ ಭೂತಂನಿರ್ಝರ | ರಾಮೋದಪರಿಕಲಿತಮುಲ್ಲಲದ್ಧ್ರುಮರಕಾವಳಿ ಬಹುಳಪತ್ರ ರೇಖಂ || ಶ್ಯಾಮಗಾತ್ರತಾಶಾಲಿನಾಳಮಧ್ಯಸ್ಥಲಂ | ಕೋಮಲಾಕೃತಿರಾಜಹಂಸೋಪಶೋಭಿವನ | ಭೂಮಿಕೃತಪದಮೈದೆ ಪದ್ಮಿನೀನಿಕುರುಂಬಮೆಸೆದುದೇನೆಂದಚ್ಚರಿ ||೧೫||

ಒರೊರ್ವಳೊಡನೆ ಸುವಿಲಾಸದಿಂಸಂಚರಿಸು | ತೋರೊರ್ವಳೊಡನೆಸರಸೋಕ್ತಿಗಳನಾಡುತ್ತ | ಮೋರೊರ್ವಳೊಡನೆಮಂದಸ್ಮೇರಮುಖನಾಗಿಪರಿಹಾಸಮಂಗೈಯುತೆ || ಒರೊರ್ವಳಂಪ್ರಣಯಭರದಿಂದೆನಿಟ್ಟಿಸು | ತ್ತೋರೊರ್ವಳಂಬಿಡದೆರಾಗದಿಂ ಬಿಗಿದಪ್ಪು | ತೋರೊರ್ವಳಂಪದೆದುಚುಂಬಿಸುತೆನೃಪಸುತಂ ವಿರಹಿಸಿದನಾವನದೊಳು ||೧೬||

ಬರೆಪೀರಿಮುಕರಂದರಸವನಲ್ಲಲ್ಲಿ ಮದ | ಭರದಿಂದೆಮೆಲ್ಲುವೆತ್ತಿಂಪುವೆತ್ತುರೆಸೊಂಪು | ಗರೆವಝುಂಕಾರದಿಂ ಕಾದಲರ್ಗುಬ್ಬೆಗಮನೊಡರಿಸುತ್ತಾರಡಿಗಳು | ಮರುದರ್ಭಕಾಂದೋಳಿತಂಗಳಹಪಲವು ಕ | ಮ್ರರಲಾಂತಬಳ್ಳಿಗಳೊಳುಯ್ಯಾಲಾಡುತ್ತಿಹುದ | ನೆರಕದಿಂ ರುಕ್ಮಾಂಗದಂ ನೋಡುತರಸಿಯರ ಕೂಡೆ ಸುಳಿದಾಡುತಿರಲು ||೧೭||

ಅರಸನೋಡಿತ್ತ ತಳತೆಳಮಾವಿನೆಲೆಗಳಂ | ತರದಲ್ಲಿ ಮೈಗರೆದಪೆಣ್ಕೋಕಿಲೆಯಂಕಾಣ | ದಿರಲಿರದೆಕುಗ್ಗಿರ್ಪ ದನಿಯಿಂದೆಕುಕಿಲಿಕ್ಕುತತ್ತಿತ್ತಮಿಕ್ಕೋಗಿಲೆ || ಅರಸುತ್ತೆ ಕಾಣದದನೆಲ್ಲಿಯುಂ ಮತ್ತಮೀ | ಮರದೆಡೆಗೆಬಂದು ಬಂದೀಕ್ಷಿಸುತೆದೆಸೆದೆಸೆಯು | ಮರುಗುತಿರ್ಪುದುಕರಂ ಪ್ರಿಯಜನವಿಯೋಗವಾರ್ಗಾದೊಡಂದುಸ್ಸಹವಲೆ ||೧೮||

ಎಂದೊಡೊರ್ವರಸಿ ಯುವರಾಜನವಳಂನೋಡಿ | ಸುಂದರೀನೋಡಿತ್ತನೀನೀಮಯೂರಿಗಳ | ಬೃಂದವಗಾತ್ರಪ್ರಿಯಮಯೂರನಂ ಸುತ್ತುವರಿದೊಲ್ದುಕುಣಿದಾಡುತಿಹುದು || ಚಂಪದಿಂದೆತ್ತತ್ತ ಪೋದೊಡಂಸೊಕ್ಕಿರ್ಪ | ದೊಂದುವಿಡದತ್ತತ್ತಲದನಿದನುಸರಿಪ್ಪುದಾ | ನಂದದಿಂ ಸ್ತ್ರೀಯರಗಲಿರಲಾರರಿನನನೆಂದಿದಿರುತ್ತರವನಿತ್ತನು ||೧೯||

ಲೋಕಿಸಿತ್ತನ್ನರಸ ಬಹುಕಂಟಕಂಗಳಿಂ । ದಾಕೀರ್ಣವಾದೊಡಂ ಪಥಿಕಜನಲೋಚನಾಂ । ಧೀಕರಣಚಣ ಧೂಳಿಯುತವಾದೊಡಂ ಮಧುರಸಂ ಸುದುರ್ಲಭವಾದೊಡಂ ॥ ಸ್ವೀಕರಿಸದಿದಿರ್ದೊಡಂ ಪರಮೇಶ್ವರಂ ನೋಡ । ಲೀಕೇತಕಿಯೊಳೆಂಬುದೇನಿಷ್ಟತನುವೆನಿಪ । ಲೋಕೋತ್ತರಂ ಪರಿಮಳಾತಿಶಯವೊಂದಿದೇಂ ಸೂರೆಗೊಂಬುದೊ ಮನವನು ॥೨೦॥

ಎಂದು ನುಡಿದಿನ್ನೊರ್ವಳಂನೋಡಿ ಪೆರತೊರ್ವ । ಳಂದುಮುಖಿ ಕೇತಕಿಯುದಿರಲಿ ನೋಡಿತ್ತಲಖಿ । ನಂದನೀಯಾನೇಕಸುಗುಣಂಗಳಿಂ ಪೂರ್ಣವಾಗಿರ್ಪವಾನುರನಿದು ॥ ಚಂದದಿಂ ಚಿಗುರಿಡಿವ ನನೆಯೇರಿಕಂಗೊಳಿಪ । ಕುಂದಮಲ್ಲೀಜಾತಿಮುಖ್ಯಸುಂದರಲತೆಗ । ಳಂದುಪಾಶ್ರಿತವಾಗದೇಂ ಮನಂಗೊಳಿಸುತಿರ್ದಪುದೊ ತಾನೆಂದುಸಿರ್ದಳು ॥೨೧॥

ಇಂತು ಸುವಿಲಾಸದಿಂದಾಕೇಳಿವನದೊಳಾ । ಕಾಂತೆಯರ್ವಿಹರಿಸುತೆ ಮೂಲೋಪವೇಶಪದ । ಸಂತಾಡನಾವಲೋಕನಹಸನಪರಿರಂಭಗಾನಾದಿದೋಹಳವನು ॥ ಸಂತಸಂಮಿಗಲೆಸಗೆ ಪಲವುಮರಗಿಡುಗಳೊಡ । ನಾಂತು ಚೆಂದಳಿರ್ಗಳಿಂ ಪೂಗಳಿಂ ಮೆರೆದುವು ವ । ಸಂತಸಮಯದೆಮೆರೆವ ಚಂದದೊಳಕಾಲದೊಳು ಮೇನೆಂಬೆನದ್ಭುತವನು ॥೨೨॥

ಬಳಿಕೆಲ್ಲರಲ್ಲೊಂದುಬಳ್ಳಿಮಂಟಪದಲ್ಲಿ । ನಲಿಯುತ್ತ ಕುಳ್ಳಿರಲ್ಕೊರ್ವ ತಾರುಣ್ಯವತಿ । ಲಲಿತಲಾವಣ್ಯವತಿ ಗಾನವಿದ್ಯಾನಿಪುಣೆ ಶಾರದೆಯಚಂದದಿಂದೆ ॥ ವಿಲಸನ್ಮಣಿ ಪ್ರಕರಪರಿಖಚಿತವೀಣೆಯಂ । ಸಳನಳಿಪಬೆರಳ್ಗಳಿಂ ಬಾಜಿಸಿದಳೊರ್ವ ಕೋ । ಕಿಲಕಂಠಿ ಲಯಬದ್ಧವಾಗಿ ಮೃದುಮಧುರಮೆನೆ ಪಾಡಿದಳ್ಪಾಡುಗಳನು ॥೨೩॥

ತರುಣಿಯು ಕೊರಳ್ದನಿಗೆ ತಂತಿಗಳನುಣ್ದನಿಗೆ । ನಿರುಕಿಸದೆ ಭೇದವಂ ಮಧ್ಯಮಶ್ರುತಿಮನೋ । ಹರವಾದ ತದ್ಗಾನದೊಳ್ತಾಳಲಯಬಂಧವಂ ಗತಿವಿಶೇಷಗಳನು ॥ ವರರಾಗಭಾವಮಂ ಕಾಲಪರಿಪಾಟಿಯಂ । ಸರಿಗಮಪದನಿವರ್ಗಮೂರ್ಛನಾಲಹರಿಯಂ । ಪರಿಪರಿಯ ಗಮಕವಂ ಕೇಳುತಾನಂದಪರವಶನಾದನರಗುವರನು ॥೨೪॥

ತರುವಾಯೆಲ್ಲರುಂ ಪುಷ್ಪಾಪಚಯಕೆಳಸಿ | ತಿರಿದತಾವರೆಯಸುಗೆ ಮೊದಲಾದರಲ್ಗಳಂ | ವರಲಾಟದೊಳ್ಪರಸ್ಪರವಾಗಿ ಪೊಡೆದಾಡುತಿರಲಾನರೇಂದ್ರಸೂನು || ಅರಲಂಬನಿಷುಗಳೆಂದೆನಿಪನರುಗಂಪನಾ | ಳ್ದರಲಬಿರುವ್ರೊಯ್ಲನಂತಿಂತು ಸೈರಿಸಿದೊಡಂ | ತರುಣಿಯರ ಸಸ್ಮಿತಕಟಾಕ್ಷಪ್ರಸೂನಾಸ್ತ್ರಹತಿಗೆ ಸೈಸದೆ ಸೋತನು ||೨೫||

ಅರಗುವರನಾಬಳಿಕನುಕ್ರಮದೊಳೋರೊರ್ವ | ತರುಣಿಯೊಡನೆಸೆವ ಕುರುವಕ ತರುವಿನಡಿಯಲ್ಲಿ | ಹರಿಸದಿಂ ಮಯ್ಯಲಾಡುತ್ತಿರಲ್ಲಬಲಿತಂಗಳಾದಲರ್ಗಳತ್ತಣಿಂದೆ || ಸರಸಿಜಭ್ರಾಂತಿಯಿಂದವರ ಮುಖಮೃಗಕಳಿಗ | ಳೆರಗುತ್ತಿ ಕಂಡೊಡನೆ ನೆರೆಮರೆವನಾಸಿಕವ | ನರರೆ ಸಂಪಗೆಯಲರಿದೆಂದು ಶಂಕಿಸಿ ಸುಗಿದು ಪೊರಸಾರ್ದುವೇನೆಂಬೆನು ||೨೬||

ಪಲತೆರದ ಬಿನದದಿಂದಿಂತು ರುಕ್ಮಾಂಗದಂ | ಜಲಜಲೋಚನೆಯರೊಡನಲ್ಲಲ್ಲಿ ವಿರಹಿಸು | ತೊಲ್ಲವುಮಿಗೆ ಮಧುಪಾನಕೆಳಸಿದೊಡೆ ಸೇವಕಜನಂ ಸಜ್ಜುಗೈದುವಲ್ಲಿ || ಫಲಕುಸುಮಕಲಿತನಾನಾವಿಧಾಸವಪೂರ್ಣ | ಕಲಧೌತಕಲಶಂಗಳಂ ರತ್ನಮಯ ಸಮು | ಜ್ಜ್ವಲಪಾನಪಾತ್ರಂಗಳಂ ಬಹುವಿಧೋಪದಂಶಂಗಳಂ ತತ್ಕ್ಷಣದೊಳು ||೨೭||

ಸೆಳೆಯುತಾನಾಯಿಕಾನಾಯಕರ್ಗಳ ಮನವ | ನಳಗಳಂ ಬರಿಸುತು ಪವನತರುಲತಾಸುಮಂ | ಗಳ ಪರಿಮಳಾತಿಶಯಮಂ ಧಿಕ್ಕರಿಸುತಾವನಾಂತಮಂ ಘುಮುಘುಮಿಸುತೆ || ನಳಿನಾಕ್ಷಿಯರ ಕೇಳಿಕೋಪಮಂಬಿಡಿಸುತ | ಗ್ಗಳಿಸಿ ಮನ್ಮಥಮತ್ತಗಜಮದಾಮೋದಮೆನೆ | ಸುಳಿದುದಾವ್ರೊಡನೆ ಬಹುವಿಧದ ಮಧುರಸದ ಪರಿಮಳಪೂರ ಮೆಲ್ಲಡೆಯೊಳು ||೨೮||

ಬಳಿಕ ರಮಣೀಯಮಾದಾಮದಸ್ಥಾನದೊ | ಳ್ನಳಿನಲೋಚನೆಯರೊಡವೆರೆದು ರುಕ್ಮಾಂಗದಂ | ಕುಳಿತು ಸುವಿಲಾಸದಿಂ ಸರಸಸಲ್ಲಾಪಂಗಳಂಗೈಯುತತಿಮುದದೊಳು || ತಳೆದು ನವರತ್ನಮಯಚಷಕಮಂ ಸುರಭಿಶೀ | ತಳಮಧುರಮಾದ ಮಧುರಸವನಿಂಟಿದನೊಡನೆ | ಗಿಳಿದೇರನಿರದೆತಾನುಂ ಸಮುತ್ಸಾಹದಿಂ ವೀರಪಾಣಂಗೈದನು ||೨೯||

ಮುಗುದೆಯೋರ್ವಳ್ಪೊಳೆವಕನಕಮಧುಭಾಜನಕೆ | ಮೊಗವಿಟ್ಟೊಡ
ಲ್ಲಿ ಬಿಂಬಿಸಿದನಿಜದೃಷ್ಟಿಯುಂ | ಬಗೆದು ತಾನಳಿಯೆಂದುಬಿಸುಟಳರದುರೆಸಂ
ಭ್ರಮಂಗೊಂಡು ಭೋಂಕನದನು ‖ ಮುಗುಳದೋರ್ವಳ್ಕಯ್ಯೊಳಾಂತರನ್ನದ
ಸೊನ್ನ | ರಿಗೆಯೊಳಳಿತತಿಯುಕೆತ್ತಿದನೀಲಮಣಿಗೆತ್ತು | ಸೊಗಸುಮಿಗೆ ಮ
ಧುರಸವನೀಂಟಿದಳ್ನೃಪಸುತಂ ನೋಡುತವರಂನಕ್ಕನು ‖೩೦‖

ಮರೆದರ್ವೈಲಜ್ಜೆಯಂ ಬಗೆಬಗೆಯುಬಿನದದಿಂ | ದರಸನೊಡನಾಡಿದರ್ತ್ತ
ಮಗೆತಾವೆಸಲ್ದು ನಿ | ರ್ನೆರವ್ಯೈದೆನಕ್ಕರಾಶಶಿಮುಖಿಯರರ್ಥಸಂಗತಿವಿಮ
ರ್ಶನವಿಲ್ಲದೆ ‖ ಬರೆಸುರಾಶಯದೊಳಿರ್ದುದನೆಲ್ಲಮಂ ಮನೋ | ಹರಗೀತಮಂ
ಪಾಡಿದರ್ನಿರುಪಮಾನಂದ | ಪರವಶತೆಯಂ ಪಡೆದರಾಗಳೇನೆಂಬೆನಾಸವಮ
ದೋದ್ರೇಕದಿಂದೆ ‖೩೧‖

ಚೆಂದುಟಿಬೆಳರುತ್ತಿರ್ದೇನೆಂಬೆನಾಸವಪಾನ | ದಿಂದೆಸುಳಿವಮಾರಿಯರತ
ನ್ನೃಪಕುಮಾರಿಯರ | ಸುಂದರಸುನಿರ್ಮಲಕಪೋಲತಲಮೊಳಗೆಂಪನಾಳ್ದು
ತ್ತುಕಣ್ಮಲರ್ಗಳು ‖ ಪೊಂದಿಕಡುಗೆಂಪನಲಸುತ್ತೆ ತಿರುತಿರುಗಿದುವು | ಬಂದು
ದುಮನಕ್ಕೆಮರೆವೊಡನೆ ತಾಂ ಮಧುಪಾನ | ದಿಂದೆ ನಾನಾವಿಕಾರಮನೀ
ಧರಾವಲಯದೊಳ್ಪಡೆಯದವರಿರ್ಪರೇ ‖೩೨‖

ಇನಿತೊಂದುವಿಭವದಿಂ ಶೃಂಗಾರರಸದಕಡ | ಲೆನಿಸಿದಾರುಕ್ಮಾಂಗದಂ
ಪ್ರಿಯೆಯರೊಡಗೂಡಿ | ಮನವಾರೆಬಗೆಬಗೆಯುಮಧುರಸವನೀಂಟಿ ಪೊಸಮ
ಲ್ಲಿಗೆಯಮಂಟಪದೊಳು ‖ ಅನುಪಮಾನಂದದಿಂ ನಲ್ನುಡಿಗಳಾಡುತಿರ | ಲಿನ
ಕುಲೇಂದ್ರನ ಮಖತುರಂಗಮಂ ಪೊಕ್ಕುದಾ | ವನವನದನೀಕ್ಷಿಸಿ ನೃಪಾಂಗ
ನೆಯರರುಹಿದರವಂಗೆ ಬಹುಸಂಭ್ರಮದೊಳು ‖೩೩‖

ಆರಮಣಿಯರನುಡಿಯನಾಲಿಸುತ್ತಾನೃಪಕು | ಮಾರಂ ಪ್ರವೀರಂ
ಕರಂತವಕಿಸುತ್ತುತ್ಯ | ದಾರಲಕ್ಷಣಗಳಿಂದೊಪ್ಪುವಾಕುದುರೆಯಂ ತಡೆದದರ
ಪಣೆಯಮೇಲೆ ‖ ತೋರುತಿಹ ಕನಕಪಟ್ಟಮನೋದಿಗಹಗಹಿಸಿ | ಧಾರಿಣಿ
ಯೊಳಿದಿರೆನಿಪರಿಲ್ಲದೆಮ್ಮಯ್ಯನಿರ | ಲಾರವಂತುರಗಮೇಧಕೆದೀಕ್ಷೆಗೊಂಡಿರ್ಪ
ರಾಮಚಂದಿರನೆಂಬನು ‖೩೪‖

ಸಾರ್ವಭೌಮಾಧಿಪತ್ಯವನಾಪನಾಳ್ದಹಂ । ಸರ್ವಾತಿರಿಕ್ತತೇಜೋಬಲ
ಪರಾಕ್ರಮಂ । ಸರ್ವಂಸಹಾಚಕ್ರದೊಳಗೇಕಶೂರಂ ವಿಪಕ್ಷವನದಾವಾನಲಂ॥
ಸರ್ವಜ್ಞನಾಹವದೆ ಶಿವಸಹಾಯಂ ಮತ್ತೆ । ಅಶ್ವಸಂಪದ್ಯುತಂತುರಗಮೇಧ
ಕ್ರತುವ । ನೆರ್ವನಾ ಎಮ್ಮಯ್ಯನಾಚರಿಸಲರ್ಹನೆನಲುಳಿದವರದೇನರ್ಹ
ರೇ ॥೩೫॥

ರಾಮನೋ ಗೀಮನೋ ಆವನಾದೊಡಮಿರಲಿ । ಭೂಮಿಯೊಳಗಧಟ
ರ್ಪವಂ ಬಂದುಬಿಡಿಸಿಕೊಳ್ಳ । ಲೀಮಖತುರಂಗಮನವನೆಮ್ಮ ಪತ್ತನಕಪಿಡಿ
ದೊಯ್ಯಿರೆಂದನುಚರರನು ॥ ನೇಮಿಸಿದನೊಡನವರ್ಬಂದದಂಪಿಡಿದೊಯ್ದ ।
ಡಾಮಹಿಳೆಯರ್ಭ್ರಪ್ರಭೂಪರಸಮುಳಿಯೆನೀ । ನೀಮಹೀತಲದೊಳಾವುದುನಿನ
ಗಸಾಧ್ಯವೆಂದೆಲ್ಲರುಂ ಶ್ಲಾಘಿಸಿದರು ॥೩೬॥

ಸಂಗಡ್ಯೈತರಲಡರಿಪೊಳೆಪೊಳೆವಪೊನ್ನಂದ । ಣಂಗಳಂ ರಾಣಿವಾಸವಜ
ನಂ ಬಳಿಕ ರು । ಕ್ಮಾಂಗವಂ ಪೊಂದೇರನಡರಿತಾನರಮನೆಗೆನಡೆತಂದು ಸಂತ
ಸದೊಳು ॥ ಪಿಂಗದುರುಭುಜಮದಾಟೋಪದಿಂದಿಕ್ಷ್ವಾಕು । ಪುಂಗವಶ್ರೀರಾ
ಮಚಂದ್ರಮನ ತನ್ಮಖತು । ರಂಗಮಂಕಾವಲಿಟ್ಟಾಳ್ಗಳಂ ನಿಜವಾಜಿಶಾಲೆ
ಯೊಳ್ಕಟ್ಟಿಸಿದನು ॥೩೭॥

೧೬ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೧೬ಕ್ಕೆ ಪದ್ಯ ೭೬೫ ಕ್ಕೆ ಮಂಗಳಮಸ್ತು.

ಹದಿನೇಳನೆಯ ಸನ್ಧಿ.

ಸೂಚನೆ ‖ ಘೋರತರಸಂಗರದೊಳುರುಪರಾಕ್ರಮರೆನಿಪ | ವೀರಮಣಿರಾಜ
ರುಕ್ಮಾಂಗದರನುರುಶೌರ್ಯ | ಸಾರವನಿಸಿದಭರತಸೂನುಸೋಲಿಸಿ ವಿಜ
ಯಲಕ್ಷ್ಮಿಯಂ ಕಯ್ಕೊಂಡನು ‖

ಕೇಳೆಲೆಮುನಿ ಪ್ರವರರುಕ್ಮಾಂಗದಂ ಬಳಿ | ಕ್ಕೋಲಗದೊಳಿರ್ದ
ಯ್ಯನೆಡೆಗೈದಿ ಪದಕೆರಗಿ | ಲಾಲಿಸುವುದೆಲೆಜೀಯ ರಾಮನೆಂಬರಸು ಹಯಮೇ
ಧಮಂಗೈವುದಕ್ಕೆ ‖ ಫಾಲದೊಳ್ಪಟ್ಟಮಂ ಬಿಗಿದೊಂದುಹಯಮೆಮ್ಮ | ಲೀಲಾ
ವನಕ್ಕೆ ಬರಲಾನದಂಪಿಡಿದಶ್ವ | ಶಾಲೆಯೊಳ್ಕಟ್ಟಿಸಿಹೆನೆಂದು ಬಿನ್ನವಿಸಲಾವೀರ
ಮಣಿಯಿಂತೆಂದನು ‖೧‖

ಆಹಹ ಹಯಮೇಧಮಂಗೈವನೇ ರಾಮನೀ | ಮಹಿಯಲ್ಲಿಕಾರಣಮಿ
ದಕ್ಕೆ ದಶಕಂಠನಂ | ಬಹುಬಲಸಹಾಯನಾಗಳಿಯಿಸಿದ ಗರ್ವಮೋಕೂಪಕೂ
ರ್ಮನ್ಯಾಯಮೋ ‖ ಸಹವಾಸದಿಂಬಂದ ಕಪಿಭಾವಮೋ ಕಾಣೆ | ನಹುದವಂ
ವೀರನೆನ್ನಂಗೆದ್ದುಗೈದೊಡೀ | ಮಹಿತಯಾಗವನೆಂದು ಸಚಿವಮಂತ್ರಿಗಳದಿರೆ
ಗಹಗಹಿಸುತಿಂತೆಂದನು ‖೨‖

ವೀರಯುವರಾಜ ಸರಿನಿಂಗೈದುದೆಂದಸಾ | ಧಾರಣಪ್ರತಿಪತ್ತಿಯಿಂ
ಪ್ರಶಂಸಿಸಿ ನಿಜಕು | ಮಾರನಂ ಬಳಿಕ ಪರಮೇಶನಂ ಭಕ್ತಿಪರವಶನಾಗಿಜಾ
ನಿಸಿದನು ‖ ಭೂರಿಕರುಣಾಶಾಲಿ ಶಶಿಮೌಳಿಯೊಡನೆ ಮೈ | ದೋರಿವತ್ಸನೆನೆ
ದೆಯೇಕೆನ್ನನನೆ ನಮ | ಸ್ಕಾರಮಂಗೈದು ನೃಪನರುಹಿದಂ ರಾಮನಮಖಾಶ್ವ
ಮಂ ತಡೆದಿಹುದನು ‖೩‖

ಆ ಮಾತನಾಲಿಸಿ ಮಹೇಶನೆಲೆ ವತ್ಸಕೇ | ಳ್ತಾಮರಸಲೋಚನಂರ
ಕ್ಷಸರನಿಗ್ರಹಕೆ | ರಾಮನೆಂಬಭಿಧಾನಮಂ ತಳೆದು ಭೂತಲದೊಳವತಾರ
ಗೈದಿರ್ಪನು ‖ ಆ ಮಹಾವಿಭುವಿಂತು ಲೋಕಮರ್ಯಾದೆಗು | ದ್ದಾಮಹಯ
ಮೇಧಮಂ ರಚಿಸಲುಜ್ಜುಗಿಸಿರ್ಪ | ನಾಮಖತುರಂಗವನಯುಕ್ತವೈನಿಂತ
ಡೆದುದೆನಲರಸನಿಂತೆಂದನು ‖೪‖

ಅರಸರ್ಗೆ ಮಖತುರಗಮಂ ತಡೆವುದುಂ ತಮ್ಮ | ಗರುವಿಕೆಯುರಕ್ಷಿಸಿ ಕೊಳಲ್ಕೆ ಪಗೆಯವರೊಡನೆ | ಧುರದೊಳ್ಪ್ರಾಣರ್ಪ್ಪುದುಂ ಧರ್ಮಮಾದುದರಿಂದೆ ದೋಷಕೇಳ್ಪನ್ನಪವನು || ಹರಿಯಾದೊಡಂ ಮತ್ತಮಾರಾದೊಡಂ ತಡೆದ | ತುರಗಮಂ ನಾನಲ್ಲಿ ಬಿಟ್ಟುಕೊಡುವವನಲ್ಲ | ಕರುಣಿಸುವುದೆನಗೆ ನಿನ್ನೊತ್ತಾಸೆಯಂ ರಣದೊಳಿಂದೆರಗಿಬೇಡಿಕೊಳಲು ||೫||

ಕಂತುಹರನಂತಕ್ಕೆ ನಿಜಧರ್ಮಮಂ ಧರಾ | ಕಾಂತರಕ್ಷಿಸಿಕೊಂಬುದೈ ರಣಾಂಕಣದೊಳದಿ | ರಾಂತೊಡಂ ಮೂಜಗವೆ ನಿನಗೆ ಜಯಮಾಗುವಂತಿರೆ ನಾಂ ಸಹಾಯನಹೆನು || ಚಿಂತಿಸದಿರಾರಾಮನೇ ನಿನಗೆ ನಿಜರೂಪ | ಮಂ ತೋರಿದೊಡೆ ನಿಲಿಸಿ ಯುದ್ಧಮಂ ನೀನಾಚೆ | ರಂತನನವಶನಾಗಿ ಧನ್ಯನಾಗುವುದೆಂದು ನುಡಿದಗೋಚರನಾದನು ||೬||

ಅತ್ತಮುಂದೈದಿದಾ ಕುದುರೆಯಂ ಕಾಣದೆ ರ | ಘೋತ್ತಮಂ ಗರುವಲನುಚರರವನದಂತಳ್ವ | ಡತ್ತಿತ್ತಲರಸರಸಿ ಗೋಚರಿಸದಿರೆ ಸುಮತಿಯಂ ನೋಡಿ ಸಚಿವೇಂದ್ರನೆ || ಎತ್ತಪೋಂದುದೊ ನಮ್ಮ ಕುದುರೆ ಕಾಣೆವು ಮುಂದೆ | ಪತ್ತನಮದಾವುದಿರ್ಪುದಲ್ಲಿಗರಸಾರೆ | ನುತ್ತೆ ಬೆಸಗೊಂಡೊಡಾ ಸಚಿವ ಮಂಡಲ ಶಿರೋಮಣಿಯಿಂತು ತಾಂ ಪೇಳ್ದನು ||೭||

ದೇವ ಕೇಳಿಲ್ಲಿಂದೆ ಮುಂದೆ ತಾನಿರ್ಪುದು | ದೇವನಿರ್ಮಿತಮಾದಲೋಕಪ್ರಸಿದ್ಧಮಹ | ದೇವಪುರಮೆಂದೆನುತ್ತನ್ವರ್ಥನಾಮಮಂ ತಳೆದಿರ್ಪನಗರಮೊಂದು || ಶಾವವಗೆಯನಭಕ್ತನಹವೀರಮಣಿನೃಪಂ | ಕಾವನದನವನೆ ತಾ ನಿರ್ದ್ಯೆತಡೆದಿರ್ಕರ್ಗಮಧಿ | ಕಾವಲೇಪದೊಳೆಮ್ಮ ಹಯಮನೆಮಗವನೊಡನೆ ಕಾಳಗಂ ತೊಡರಬಹುದು ||೮||

ಮುನಿಪ ಕೇಳನಿತರೊಳ್ವೇಷಾಂತರಾವಲಂ | ಬನಗಾಢನಿಸ್ಸಗೂಢಚಾರಚಾವಿಪುಲವ | ತ್ತನವನೊಳಪೊಕ್ಕಲ್ಲಿ ಯುವರಾಜ ರುಕ್ಮಾಂಗದಂ ತಮ್ಮ ಮಖಹಯವನು || ಘನಗರ್ವದಿಂ ತಡೆದ ವಾರ್ತೆಯನದಕ್ಕೆ ತ | ಜ್ಜನಕನನು ಮೋದಿಸಿ ರಣಕ್ಕೆ ಚತುರಂಗಮಾ | ಹಿನಿಯ ಸನ್ನಾಹಗೊಳಿಸಿಹ ವಾರ್ತೆಯಂ ತಿಳಿದುಬಂದು ವಿಜ್ಞಾಪಿಸಿದರು ||೯||

ಕೋಪಾತಿರೇಕದಿಂದಾಮಾತನಾಲಿಸಿದಿ | ಳೀಪಕುಲತಿಲಕನನುಜಾತನವ
ಲೋಕಿಸಿ ಜ | ಮೂಪರಂ ನೀವೀಗಳೀನಗರಿಯಂ ನಿರೋಧಿಸಿ ನಿಖಿಲಸೇನೆ
ಯೊಡನೆ || ಚಾಪರೋಪಂಗಳಾಂ ತಾಹವಕೆ ನಿಲ್ವುದೆನ | ಲಾಪರಾಕ್ರಮಿಗ
ಳಾಗಳಸಜ್ಜುಗೊಳಿಸಿ ಯು | ದ್ಧೋಪಕರಣಂಗಳಂ ಪ್ರೊಯಿಸಿದರ್ಭೇರಿಯಂ
ವಿಧ್ವ್ಯಂಡವೊಡೆವಂತಿರೆ || ೧೦ ||

ಅನಿಮಿಷದೊಳ್ಬೇರೆಬೇರೆವಿಂಗಡಿಸಿರ್ದ|ಸೇನೆಕೆಲವೆಡೆಯೊಳಿರ್ದಂಬುದ
ಪ್ರತತಿಜಂ | ಝೂನಿಲದಿನೊಂದಹವೊಲೊಂದಾಗಿ ದೇವಪುರಸೀಮೆಗೈ ತಂದೊ
ಡನೆಯೆ || ತಾನದಂ ಚರರಮುಖದಿಂ ತಿಳಿದುವೀರಮಣಿ | ಭೂನಾಥನಖಿಲಬಲ
ಸನ್ನಾಹದಿಂಶತ್ರು | ಸೇನೆಯುನಿದಿರ್ಚಿ ಕಾದುವುದೆಂದುನಿಜ ಬಲಾಧ್ಯಕ್ಷರ್ಗೆ
ಬೆಸನಿತ್ತನು ||೧೧||

ವೀರಚೂಡಾಮಣಿಗಳೆನಿಸಿದಾದಳಪತಿಗ | ಳಾರಾಜಶಾಸನವನುತ್ತ
ಮಾಂಗದೊಳಾಂತು | ಭೋರನಲ್ಲಿಂದೆ ಪೊರಮಟ್ಟು ನಿಜನಿಜರಥವನೇರಿ ರಣ
ಮಂಸೂಚಿಪ || ಭೇರಿಯಂ ಪೊಯಿಸಲ್ಕೆ ಸನ್ನದ್ಧರಾಗಿರಣ | ಧೀರರರಹಯೋ
ಧರಾಯುಧವಾಂತುನಿಜನಿಜಾ | ಗಾರದಿಂಪೊರಮಟ್ಟು ಪಲವುಪಡೆಯಾಗೊಡ
ನಿದಿರ್ಚಿದರ್ಪರಬಲವನು || ೧೨ ||

ಮುನಿಪಕೇಳ್ಬಳಿಕ ವೀರಮಣಿನೃಪನುಮಾ | ತನಸೋದರಂ ವೀರ
ಸಿಂಹನುಂದಾಯಾದ | ನೆನಿಪಬಲಮಿತ್ರನುಂ ಜಗದೇಕವೀರನಹ ರುಕ್ಮಾಂಗ
ದನುಮಾತನ || ಅನುಜಾತನೆನಿಸಿದ ಶುಭಾಂಗದನುಮೊಡನೊಡನೆ | ಕನಕಭಾ
ಸುರರಥಂಗಳನೇರಿಬಹುವಾದ್ಯ | ನಿನದಮೆಸೆದೆ ದೀವೆ ರಣರಂಗಕ್ಕೈತಂದರಪರಿ
ಮಿತಸೈನ್ಯದೊಡನೆ || ೧೩ ||

ಬಳಿಕದಂಕಂಡುಶತ್ರುಘ್ನನಾ ಪುರದೆಲ್ಲೆ | ಯೊಳ್ತನ್ನ ಚತುರಂಗ
ಸೇನೆಯುಂಪಾಳಯಂ | ಗೊಳಿಸಿನಿಜಧರ್ಮದಿಂ ಸಂಧಿಗಟ್ಟಲ್ದೂತನಂ ವೀರಮಣಿ
ರಾಯನು || ಅಳುಕಿನಿನಗಾನಶ್ವಮಂ ಬಿಡುವನಲ್ಲನೀಂ | ಕಲಿಯಾಗೆ ರಣದೊ
ಳೆನ್ನಂಗೆಲ್ದದಂಬಿಡಿಸಿ | ಕೊಳಬಹುದೆನುತ್ತವಂ ಗಟ್ಟಿದಂತದೂತಮುಖ
ದೊಳಿದಿರುತ್ತರವನು|| ೧೪ ||

ಬಳಿಕಿಪ್ಪಸರದೊಳಾಹವಕೆ ಮೊದಲಾಗೆಪು | ಷ್ಕಲಸುಮದಮುಖ
ವೀರಪುಂಗವರ್ಕ್ಕತುರಂಗ | ಬಲದೊಡನೆ ಪರಬಲವನೊಂದೆಸೊಳ್ಳೊಳಪೊಕ್ಕು
ಮೇಲ್ವಾಯ್ದುಹಿಮ್ಮೆಟ್ಟದೆ ॥ ದಳದುಳನೆಮುಂ ಬರಿಯುತತ್ತಿತ್ತಮುತ್ತಿಸಾ |
ಲ್ಲಿಯುದಂತಧಿಕರೋಷಾವೇಶದಿಂದೆ ಕಣೆ | ಮಳೆಗರೆದರುರುಸಿಂಹನಾದಂಗಳಿಂ
ದೊಡೆಯುತಷ್ಟದಿಗ್ಭಿತ್ತಿಗಳನು ॥ ೧೫ ॥

ಆಹಾವಳಿಯನೋಡಿ ಸ್ಯೈರಿಸಗೆ ತತ್ಕ್ಷಣದೊ | ಳಾಹವಕಲಾವಿದಂ ರು
ಕ್ಮಾಂಗದಂತನ್ನ | ಮೋಹರವನೊಡಗೊಂಡುಮುಂಬರಿದುಮೇಲ್ವಾಯ್ದು
ಬಹುತರಕ್ರೋಧವಾಂತು ॥ ಬಾಹುಬಲದರ್ಪದಿಂದುರವಣಿಸಿಪಗಪಕ್ಷ | ಮಾಹಿ
ನಿಯನೆಡೆವಿಡದತಿಕ್ರೂರಮಾರ್ಗಣಸ | ಮೂಹದಿಂಮುಸುಕಲಾಸಂಗ್ರಾಮವಂ
ನೋಡಿನಾರದಂ ನೆರೆದಣಿದನು ॥ ೧೬ ॥

ಇತ್ತಂಡದಭಟರೀತೆರದೊಳಚ್ಚಿಚ್ಚುಮುಸೆ | ಮೆತ್ತಕೂರ್ಗಣೆಗಳಿಂದೊಡ
ನೊಡನೆಭೇದಿಸಿದ | ಮತ್ತವಾರಣತುರಂಗಮಪತ್ತಿರಥಿಕರ್ಕಳಂಗಂಗಳಿಂದೆ
ಸುರಿದ ॥ ನೆತ್ತರಪೂನಲ್ಗಳಾಕಳದಲ್ಲಿಪರಿದುವೆ | ತ್ತಿತ್ತಲುಂಮಡಿದ ಯೋಧರ
ನೆಣಿಸಲರಿದು ಸುರ | ಪತ್ತನಂ ಪಲಬರಿಂ ವೀರಭಟರಿಂದಿಟ್ಟಳಂಗೊಂಡುದೇ
ನೆಂಬೆನು ॥೧೭॥

ಶೋಣಿತದಪಾನಶಾಲೆಯೊ ಪಿಶಾಚವ್ರಜದ | ಮೇಣಿದು ಶಿವಾಶುನಕ
ಕಂಕವಾಯಸಮುಖ | ಪ್ರಾಣಿಕೂಟದ ಭೋಜನದಶಾಲೆಯೋಮೇಣನೇಕ
ತನುಭೃದ್ವರ್ಗದ ॥ ಪ್ರಾಣಗಳನೊಟ್ಟೈಸಿಸಂಯಮಿನಿಗೊಯ್ವಬೀ | ಳ್ವಾಣ
ವೋಂ ಮೇಣಿದು ವಿಭಾವಿಸುವೊಡಪ್ಸರ | ಸ್ತ್ರೈಣವೀರಸ್ವಯಂವರ ಮಂಟ
ಪಮೊ ಎನಿಸಿತಾಗಳಾ ಯುದ್ಧಭೂಮಿ ॥ ೧೮ ॥

ಕಡುವೇಗದಿಂದೆಸಾರಥಿ ನಿಜವರೂಥಮಂ | ನಡೆಯಿಸಲ್ಕಾಡೊತ್ತಿಸಮ
ಧಿಕಕ್ರೋಧದಿಂ | ದೊಡನೆ ರುಕ್ಮಾಂಗದನ ನಿದಿರಾಂತು ಪುಷ್ಕಲಂ ನಿಷ್ಕಲಂ
ಕಾತ್ಮಬಲನು ॥ ಪಿಡಿದಕಾರ್ಮುಕವನಿದಿರ್ನಡೆದೆಚ್ಚುವಂತೆ ಜೇ | ವಡೆಯೆ
ರುಕ್ಮಾಂಗದಂ ನೋಡಿಬಲ್ಗರುವದಿಂ | ಫಡಫಡಾನಿಲ್ನಿಲಾನೀನೆಯೋ ಪುಷ್ಕಲ
ನೆನುತ್ತೆ ಜೇವಡೆದೆಂದನು ॥ ೧೯ ॥

ಭಾರತಿಯೊಳೀಳ್ಮಹಾರಥಿಕನೆಂದೆನಿಸಿ ನೀ | ನೀ ರೀತಿ ಸಾಮಾನ್ಯ ಸೈನಿಕರಕೋಟಿಯುಂ | ಧಾರಿಣಿಗೆ ಕೆಡಹಿದನಿತರ್ಕದೇನಭಿನಂದ್ಯವಿಕ್ರಮನೆ ಬಿಡುಬಿಡವನು || ವೈರಿವನದವದಹನನೆನಿಸಿದೆನ್ನಯಮುಂದೆ | ತೋರು ನೀಂ ಗಂಡೆನಿಸಿದೊಡೆ ನಿನ್ನಭುಜಶೌರ್ಯ | ಸಾರವನೆನಲ್ಕೆ ನಸುನಕ್ಕುರಣಧೀರನಾ ಭರತಸುತನಿಂತೆಂದನು ||೨೦||

ಇನಿತು ಪೊಳ್ತಲ್ಲಡಗಿಕೊಂಡಿರ್ದ ರುಕ್ಮಾಂಗ | ದನೆ ನಿನ್ನಸಂಗಡಮೆ ಪ್ರಾಣರಕ್ಷೆಬಂದೆಸಾ | ನಿನಕುಲದ ನೃಪರಾನದವರೊಡನೆ ಕಾದರೀಗಳೆಲೋಕಿಸೆನ್ನಧಟನು || ಎನಲೊಡನಿಸಲ್ಕವದಿರಿರ್ವ್ವರುಂ ತೊಡಗೆ ಮೇ | ದಿನಿ ಕಂಪಿಸಿತು ಸುಭಟರನಿಮಿಷತೆಯುಂ ಪಡೆದ | ರನಿಮಿಷರಸಭೆನಭದೆನೆರೆದುದಚ್ಚರಸಿಯರೊಳುದ್ಭವಿಸಿತಹಮಹಮಿಕೆ ||೨೧||

ಧುರಧೀರರೆನಿಸಿದಾ ವೀರಮಣಿಭರತಸುತ | ರುರವಣಿಸುತಾಹವೋನ್ಮತ್ತರಾಗುತೆ ಪರ | ಸ್ಪರ ಜಯಾಕಾಂಕ್ಷೆಯಿಂದುರೆಮುಳಿದು ತಾರಕಾಸುರಕುಮಾರರ್ಕಳಂತೆ || ಕರಲಾಘವಂಮೆರೆಯಲಿಸುತಿಸುತೆ ಹೋರಾಡು | ತಿರಲೆಂಟುಕಣೆಗಳಂ ರುಕ್ಮಾಂಗದನಕೇತು | ತುರಗರಥಮಾಲಸಾರಥಿಗಳಂ ಪುಷ್ಕಳಂ ನಾಮಶೇಷಂಗೈದನು ||೨೨||

ಕಣೆಯೊಂದರಿಂ ಕಡಿದನೊಡನೆ ಕಾರ್ಮ್ಮುಕವನಾ | ಕ್ಷಣಮೆ ರುಕ್ಮಾಂಗದಂ ಬಳಿಸಾರ್ದ ಬೇರೊಂದು | ಮಣಿರಥವನೇರಿ ಪೆರತೊಂದು ಚಾಪವನಾಂತಿದಿರ್ಚಿ ಭರತಾತ್ಮಜನನು || ಗುಣಪಕ್ಷಪಾತದಿಂ ಸೀನಹುದೊ ವೀರನೆಂ | ದಣಿಯುರಂಕೊಂಡಾಡಿ ನೋಡೀಗಳೆನ್ನದಾ | ರುಣವಿಕ್ರಮದಪರಿಯನೆಂದುರುತರ ಭ್ರಾಮಕಾಸ್ತ್ರಮಂ ತೆಗೆದೆಚ್ಚನು ||೨೩||

ಆಮಹಾಸ್ತ್ರದರಭಸದಿಂ ಭರತಪುತ್ರನು | ದ್ದಾಮರಥಮೊಂದುಗಳೆಯುದ್ದಮೊದ್ದವನಿಯಿಂ | ವ್ಯೋಮತಲದಲ್ಲಿ ಬಹುವೇಗದಿಂ ಗರಗರನೆ ತಿರುತಿರುಗಿ ಬುಗುರಿಯಂತೆ || ಭೂಮಿಯೊಳ್ಕೆಡೆವನಿತರೊಳೆ ಕೆಲಕವಂ ತನ್ನ | ಸಾಮರ್ಥ್ಯದಿಂದೆ ಧುಮ್ಮಿಕ್ಕಿ ಬೇರೊಂದು ನವ | ಹೇಮಮಣಿಮಯರಥವನೇರಿ ರುಕ್ಮಾಂಗದನನೀಕ್ಷಿಸುತ್ತಿಂತೆಂದನು ||೨೪||

ವೀರಮಣಿನಿಮ್ಮಯ್ಯನಾರ್ಯನೇ ತಾನಲ್ಲ | ವೀರಮಣಿಯುಹುದೊ ರುಕ್ಮಾಂಗದನೆ ನೀನು ಮಿಗೆ | ಸಾರಿ ನುಡುವುದೆನ್ನ ಚಂಡಭುಜಬಲಪರಾಕ್ರಮವನೆನ್ನಂದದಿಂದೆ ‖ ಪೌರುಷಂನಿನಗುಳ್ಳೊಡೆಚ್ಚರದೆ ನಿನ್ನಯ್ಯನ | ವೀರನಂ ಸಲಹಿಕೊಂಬುದು ಪೆರ್ಚ್ಚಿನಿಂದೊಸಾರಿ | ಎಂದಾತನಾಕ್ಷಣಂ ನುಡಿವತಿ ರಭಸದಿಂ ಭ್ರಾಮಕಾಸ್ತ್ರಮನೆ ತಾನೆಚ್ಚನು ‖೨೫‖

ಒಡನಾ ಮಹಾಸ್ತ್ರದಾಘಾತದಿಂದಂಬರವ | ನಡರಿ ಕಾಣದೆ ಕಣ್ಗೆ ರುಕ್ಮಾಂಗದನರಥಂ | ಕಡುವೇಗದಿಂ ಮುಹುರ್ಮುಹುರಂ ತಿರುಗಿ ಕಡಿಕಡಿವಾಗಿ ಬಿದ್ದುದಿಳೆಗೆ ‖ ಮಡಿದುವಶ್ವಂಗಳಾ ತೇರಪೊರೆಯೊಳ್ ಸೂತ | ನೊಡನೆ ಬಸವಳಿದುರುಳ್ದನಾ ವೀರನತ್ತಲಾ | ಪಡೆ ಮುಗುಡಮಂ ಪಡೆದುದಿತ್ತಲೆಲ್ಲರುಂ ವಿಜಯಕೋಲಾಹಲಂಗೈದರು ‖೨೬‖

ಮುಂದೆನಡೆದುದನಾಲಿಸೆಲೆ ಮುನಿಪ್ರವರ ನಿಜ | ನಂದನಂ ಬಸವಳಿದುದಂ ಕಂಡು ವೀರಮಣಿ | ನೆಂದಪಾವಿನತೆರದೆ ಸಮಧಿಕಕ್ರೋಧದಿಂದೊಡನೊಡನೆ ಬಿಸುಸುಯ್ಯುತೆ ‖ ಬಂದಿರ್ದೈತರೆ ವೀರಸಿಂಹನುಂ ಬಲಮಿತ್ರ | ನಂದಕ್ಷನಹ ಶುಭಾಂಗದನುಂ ಮಹತ್ತರ | ಸ್ಯಂದನವನೇರಿ ಶತ್ರುಘ್ನನೊಡನೆ ಕಾಳಗಕ್ಕುರವಣಿಸುತೈತಂದನು ‖೨೭‖

ಅನಿಲನಂದನನನಂಗಿದಿರಾಗೆ ಭರತಸಂ | ದನನದಂ ಕಂಡೆಯ್ದೆ ಮಾರುತಿಯು ಕೇಳೆನ್ನೊ | ಡನೆ ಪೋರಲಾಂತಿಸಂಗಪ್ಪೆನಾಂ ಪ್ರತಿಯೊ ಧನುಳಿದವೀರರ್ಕಳೊಡನೆ ‖ ಅನುವಾಗುವುದು ಕಾಳಗಕ್ಕೆ ನೀನೆಂಬುದುಂ | ಹನುಮನೆಲೆ ಪುಷ್ಕಲನೆ ರಘುಕುಲಕುಮಾರಕ | ಗನುಗುಣಮಿದೆಚ್ಚರಿಂದಿನೊಡನೆ ಕಾದುವುದು ನೀನೆಂದು ಪೋರಮಟ್ಟನು ‖೨೮‖

ಬಲಶಾಲಿಯಾವಹಿಚ್ಛತ್ರಾಧಿರಾಜನಾ ! ಬಲಮಿತ್ರನೊಡನೆ ಮಿಥಿಲಾಧಿಪತಿಸೂನು ಕೆಲ | ಬಲದೊಳತಿರಥಶತಸಹಾಯನ ಶುಭಾಂಗದನ ಕೂಡೆ ಪೋರ್ಣರ್ಕೆನಿಲಲು ‖ ಬಲವ್ರಸನ್ನಾನಭುಜಶೌರ್ಯಸಂ ಚತುರಂಗ | ಬಲಸಹಿತನಂ ವೀರಸಿಂಹನಂ ಕಲಿ ಸುಬಾಹು | ಬಲಭರದಿ ಸಿವಿರ್ಚಿನಡೆದುದು ಪರಸ್ಪರವಾಗಿದಾರುಣಂ ಪ್ರವಿದಾರಣಂ ‖೨೯‖

ಈತನೇಗೆಲ್ವನೆಂದಾತನೇಗೆಲ್ವನೆಂ । ದೂತನೇಗೆಲ್ವನೆಂದುಂ ಪರಸ್ಪರ ವಾಗಿ । ಕೌತುಕದೆ ಶಪಥಮಂ ಕಟ್ಟಿಕೊಂಡಂಬರದೊಳಮರತತಿನೋಡು ತ್ತಿರೆ ॥ ಈತೆರದ ಸಮಬಲರ ಕಾಳಗಮನಿನ್ನೆಗಂ । ಭೂತಲದೆ ಕಾಣೆವೆಂದಾಶ್ಚ ರ್ಯಗೊಳೆ ಭಟ । ವ್ರಾತಮಂ ಮರುಗಣಿಸಿ ಪ್ರೀಣರುತ್ತಿರೆ ವೀರಮಣಿ ಪುಷ್ಕಲಂ ಗಿಂತೆಂದನು ॥೩೦॥

ಎಲೆ ಬಾಲಕ ಸಾಹಸಂಬಡ ಮಸಿದಿರ್ಪ । ಪ್ರಲಿಪೋಡನೆ ಕಲಹವೇ ಮರಿವುಲ್ಲಿಗೆನ್ನೊಡನೆ । ನಿಲಬೇಡ ಕಾಳಗಕ್ಕೆನ್ನ ಜ್ವಲಕೋಪಾಧಿಕ್ಷಿಗೆ ಹವಿ ಯಾಗಬೇಡ ॥ ಕಳದೊಳಿದಿರಾಂತಣುಗರೊಡನಿಂತು ಪಿರಿಯರ್ಗ । ಕಲಹವೆ ನ್ನಾತ್ಮಜರೆಜಯಿಸುವರ್ನಿನ್ನನರೆ । ಗಳಗೆಯೊಳಕ್ಕಾಡಲೆನ್ನೊಡನೆ ಪಿರಿ ಯರಂ ಪೋಗು ಬರಹೇಳೆಂದನು ॥೩೧॥

ಅಲಿಸಿತ್ತುಕ್ತಿಯಂ ಭರತಸ ತನೆಭಿನುಹೀ । ಪಾಲಕೇಳ್ನೀನಹುದು ಪಿರಿಯನುಂ ನಾನಹುದು । ಬಾಲನುಂ ಕ್ಷತ್ರಿಯರಮಂಡಲದೊಳಧಿಕಬಲರೆ ನಿಪರೆ ಪಿರಿಯರೆಂದು ॥ ಪೇಳ್ದಮಬುಧರದಂತಿರದೆನ್ನ ಶಪಥವಂ । ಕೇಳೆ ಶತಾಂಗದಿಂ ಬರಿಸಿ ಮೂರ್ಛೆಯನಿಳೆಗೆ । ಬೀಳಿಸದೆ ನಿನ್ನುಮಂ ವಾಣೆನೆಂದೀರ ಯುದ್ಧಕಣೆಗಳಂ ತೆಗೆದೆಚ್ಚನು ॥೩೨॥

ತಳುವದವನೊಡನಾಸರಳ್ಗಳಂ ಪಡಿಸರ । ಳ್ಗಳನರಿದು ಮಣೆಗೆಗುರಿ ಯಿಟ್ಟು ತಾನಯ್ದಂಬು । ಗಳನೆಚ್ಚೊಡತಿಜವದೊಳವು ಬಂದು ಪುಷ್ಕಲನ ಮಕುಟಮಂ ಭೇದಿಸಿದುವು ॥ ಕಲಿಬಾಲನವನದಂ ಲೆಕ್ಕಿಸದೆ ಪಲವಂಬು । ಗ ಳನೆಚ್ಚು ತನ್ನೃಪನಚಾಪವಂ ತೇಗುರ್ದುರೆ । ಗಳನಂತು ಸೂತನಂ ರಥರ ಥಾಂಗಂಗಳಂತುಮುರುತುಮುರಾಗಿಸಿದನು ॥೩೩॥

ಕಡುಕೋಪದಿಂದೇರಿ ಬೇರೊಂದು ರಥವನಾ । ಪೊಡವಿಪತಿ ಬೇರೊಂ ದು ಧನುವನಾಂತುರವಣಿಸು । ತೆಡೆವಿಡದೆ ಕಣೆವಳೆಯ ಕರೆದು ಕಯ್ವಾಲಾಡ ದಂತೆಸಗಿ ಪುಷ್ಕಲನನು ॥ ಬಿಡನೆ ಹೊದರೆದ್ದು ಬಂದತಿರಥರನೇಕರಂ । ತಡೆದು ಕಾದಲ್ಕೆನಿಲೆ ನೆರೆದುದಿತ್ತಂಡಮುಂ । ತೊಡಗಿತು ಕರಂ ಭೀಕರಂ ಸಂಗರಂ ಮ ತ್ತಮೇನೆಂಬೆನದ್ಭುತವನು ॥೩೪॥

ಆರವ್ರಿಕುಳಯುರಣದೊಳೆತ್ತತ್ತಲುಂ ಪರಿದ । ಭೂರಿತರರಕ್ತವಾಹಿನಿಯೊಡನೆ ತನ್ನೊಳಗೆ । ಸೇರಿದತಿರಥಮಹಾರಥವೀರರನ್ಯೋನ್ಯಶಸ್ತ್ರಪ್ರಹಾರದಿಂದೆ ॥ ಧಾರಿಣಿಯೊಳೆಣಿಕೆಯಿಲ್ಲದೆ ಬಿದ್ದನೇಕವಿಧ । ಹಾರಕೇಯೂರಕೋಟೀರವಲಯಾದ್ಯಲಂ । ಕಾರಗಳ ಮಣಿಗಳಂವಾರಿಧಿಗೆರತ್ನಾಕರಾಭಿಧಾನಂಬಂದುದು ॥೩೫॥

ಭರತಸುತನಾಮಹಾಸಮ್ಮರ್ದವಂ ಕಂಡೊ । ಡುರವಣಿಸಿಸಮಧಿಕಕ್ರೋಧದಿಂದರಿಬಲವ । ನುರುತರಶರಾಸಾರದಿಂಮುಸುಕಲೇನೆಂಬೆನಾಸೇನೆಯೊಳ್ಸ್ಕ್ರಾಗವನು ॥ ತಿರುಹದವರಿಲ್ಲ ಪಿಂದೆಸೆಗೋಡದವರಿಲ್ಲ । ನಿರುಕಿಪೊಡೆ ಬಾಯುಲ್ಲಿಪುಲ್ಲಗಚ್ಚದವರಿಲ್ಲ । ತೊರೆದಾಯುಧಂಗಳಂ ಶಿರದಲ್ಲಿಕಯ್ಗಳಂಜೋಡಿಸದಯೋಧರಿಲ್ಲ ॥೩೬॥

ಕಾಲರುದ್ರನ ಘೋರತರಫಾಲಲೋಚನ । ಜ್ವಾಲಗಳಪರ್ಯಾಯಮೀಬಾಲಕನ ಬಾಣ । ಜಾಲವೆಂದಂಬರಚರಪ್ರಕರವೈದೆತಲೆದೂಗುತಂ ಶ್ಲಾಘಿಸಿದುದು ॥ ಕಾಳಗದನೆಲನದರುಣಾಂಬುಮಯಕಾಯದಿಂ । ಚತುರಂಗಸೈನ್ಯದಿಂ ಕೂಡಿ ತ । ತ್ಕಾಲದೊಳ್ಸಂಧ್ಯಾರುಣಾಭ್ರಂಗಳಂ ಕೂಡಿದಂಬರದವೋಲ್ಕಂಡುದು ॥೩೭॥

ವೀರಮಣಿನಿಜಬಲಪರೀಭಾವವಂ ನೋಡಿ । ಸೈರಿಸದೆ ಸಮಧಿಕಕ್ರೋಧಜ್ವಲಜ್ಜ್ವಲನ । ಘೋರಸ್ಫುಲಿಂಗಸಂಘಾತಮಂಕಣ್ಗಳೆರಡುಂ ಕಾರುವಂದದಿಂದೆ ॥ ತೋರಲುರವಣಿಸುತಿದಿರ್ಗಾಂತೆಲವೊ ಪುಷ್ಕಲಕು । ಮಾರಸಾಮರ್ಥ್ಯಮಿರ್ದೊಡೆನಿನಗೆ ನಿನ್ನಯ ಶ । ರೀರಮಂಕಾದುಕೊಳ್ಳೆನೆಂದುಕೆಂಗರಿಯಪಲವಂಬುಗಳನೆಚ್ಚನು ॥ ೩೮॥

ಒಡಲೇರನಾಂತು ಮುಕ್ಕುಳಸಲರುಣಾಂಬುವಂ । ಕಡುನೊಂದುತತ್ತೀಕ್ಷ್ಣಶರಗಳಂ ಭರತಸುತ । ನೆಡೆವಿಡದೆ ತೆಗೆತೆಗೆದುಪಲವಂಬುಗಳನಿಸುತ್ತಿರೆ ವೀರಮಣಿರಾಯನು ॥ ಒಡನೊಡನೆ ಬಿಡದವಂ ಕತ್ತರಿಸಿ ವಿಸ್ಮಯಂ । ಬಡುತೀವಗನಣ್ಕಿಗಿಷುಪಂಜರದೆ ಮಿಡುಕದಂ । ತಡಗಿಸಲ್ಬಗೆದವನಮೇಲವಿಚ್ಛಿನ್ನಮಾಗಿಷುವರ್ಷಮಂ ಕರೆದನು ॥೩೯॥

ಇನಕುಲಕುಮಾರನನಿತೊಂದು ಶರವರ್ಷಮಂ | ಮನದಲ್ಲಿನೆನೆಯುತ್ತ ರಾಮನಂ ಪ್ರತಿಬಾಣ | ಘನವರ್ಷದಿಂ ಬಿಡದೆ ಕಡಿಕಡಿಯುತೆಲೆಮುತ್ತಗೆಲಲಾರೆನಿನ್ನೆನ್ನನು || ನಿನಗೆ ಮನಮುಕ್ಕಿನಿತ್ತೀಕೆ ರಥದಿಂದೆ ಮೇ | ದಿನಿಗೆ ಮುಕ್ಕಣೆಯಲ್ಲಿ ಕೆಡಹದಿರ್ದೊಡೆ ನಿನ್ನ | ನೆನಗೆ ಪಾವನಗಂಗೆಯಂಸಾರ್ದು ಮೀಯುದನಘಂಸಂಘಟಿಸಲೆಂದನು ||೪೦||

ಕನಕನಲ್ದನುಡಿಗೆ ವೀರಮಣಿಭೂಪಾಲ | ನಿನಕುಲಕುಮಾರನವಿಶಾಲವಕ್ಷಸ್ಥಲವ | ನನವಧಿಕಶರಪರಂಪರೆಯಿಂದೆ ಭೇದಿಸಲುಪಕ್ರಮಿಸಲಾಬಾಲನು || ಸುನಿಶಿತಾನೇಕಬಾಣಂಗಳಿಂದರಿದಮಂ | ಮುನಿದೊಂದುವಜ್ರಮುಖಶರವನಿಸಲರಿದೊಡಾ | ಜನಪನದನೊಕ್ಕಣೆಯೊಳದುಸೂರ್ಯನಂತುಭಯರಥಮಧ್ಯದೊಳ್ಜ್ವಲಿಸಿತು ||೪೧||

ಭರತಸುತನಂತಪ್ಪ ಪೆರತೊಂದು ಮಾರ್ಗಣವ | ನುರವಣಿಸಿ ತೆಗೆದಿಚ್ಚೊಡದುಮನಾದೇವಪುರ | ದರಸನಿಕ್ಕಡಿಗೈಯಲಂತರ್ಧಚಂದ್ರಮುಖವಿಶಿಖದಿಂದಾಬಾಲನು || ಸ್ಮರಿಸುತ್ತ ರಾಮನಡಿಯಂಮನದೆ ತೆಗೆದಿಸ | ಲ್ವರತೊಂದು ಶತಧಾರಶರವನದುವೇಗದಿಂ | ದುರದೆಘಟ್ಟಿಸಿ ಮೂರ್ಛೆಯಂಬರಿಸಿ ರಥದಿಂದುರುಳ್ದುದು ತನ್ನೃಪನನು ||೪೨||

ಊಪಿದಂ ರಾಮಚಂದ್ರಾನುಜತನೂಜಂ ಪ್ರ | ಮೋದದಿಂ ಜಯಶಂಖಮಂ ಮೊಳಗಿತೆಣ್ದೆಸೆಯೊ | ಳಾದನಿನಿಜಾನೀಕಭಟರಕಯ್ವಾರೆಯನಿನದಂಗಳೊಡವೆರೆದು ಬಳಿಕ || ಖೇದವಡುತೇನಿವಜ್ಜ್ರರಿಪರಮಶಿವಭಕ್ತ | ನಾದೆಮ್ಮರಾಯಂಗಮೀಬಾಲನೊರ್ವನಿಂ | ದಾಮವಪಜಯಮೆಂದು ಪರಪಕ್ಷದಲ್ಲಿಹಾಹಾ ಶಬ್ದಮುರೆಪರ್ಬಿತು ||೪೩||

೧೩ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೧೩ಕ್ಕೆ ಪದ್ಯ ೭೦೭ಕ್ಕೆ ಮಂಗಳಮಸ್ತು.

ಹದಿನೆಣ್ಟನೆಯ ಸನ್ಧಿ.

ಸೂಚನೆ ॥ ಪೊಡೆದಾಡಿವೀರೇಶಮುಖ್ಯಪ್ರಮಥರೊಡನೆ | ಮಡಿದುರುಳ್ದ ಸೌಮಿತ್ರಿವೆರಸಿ ಬಲಹರನನಿಲಜಂ | ಕಡುವೇಗದಿಂ ದ್ರೋಣಗಿರಿಗೈದಿ ತಂದು ದಿವ್ಯೌಷಧಿಯು ಬದುಕಿಸಿದನು ॥

ಪಾರಕಾಂಕ್ಷಿಪ್ರವರ ಕೇಳ್ಬಳಿಕ ಬಹುಕಾಲ | ಹೋರಾಡಿ ವೀರಲಕ್ಷ್ಮೀನಿಧಿ ಶುಭಾಂಗದ ಕು | ಮಾರನಂ ಸಂಹರಿಸೆ ನಿರವಧಿಕ ಭುಜಶೌರ್ಯಸಾರನಾದ ನಿಲಸುತನು ॥ ವೀರಸಿಂಹಂ ಪ್ರಯೋಗಿಸಿದುರುತರಾನೇಕ | ನಾರಾಚಧಾರೆಗಳ ಕಡುಪೊಯ್ಲನವುಮತಾಂ | ಸೈರಿಸದೆ ಬಳಿಸಾರ್ದು ವಮುಷ್ಟಿಯಿಂ ಘಟ್ಟಿಸಿದನವನ ವಕ್ಷಸ್ಥಲವನು ॥೧॥

ಸಿಡಿಲಂದದಾಮುಷ್ಟಿಘಾತಮಂ ಸೈರಿಸದೆ | ನಡುನಡುಗಿ ತಲೆದಿರುಗಿ ವೀರಸಿಂಹಂ ಕೂಡೆ | ಕೆಡೆದೊಡಸುದೇರನಿತರೊಳ್ ಮೂರ್ಛೆ ತಿಳಿದೆದ್ದುದಂ ಕಂಡು ರುಕ್ಮಾಂಗದಂ ॥ ಕಡುರಭಸದಿಂದೆ ಬಂದಿದಿರಾಂತು ಕಣ್ಣೆರಡು | ಕಿಡಿಗಳಂ ಕಾರುತಿರಲಾಗ ಪ್ರಹಸ್ತಾಗ್ರನಾ | ಗೊಡನೊಡನೆ ಪವಮಾನನಂದನನ ಮೇಲೆ ಕೂರ್ಗಣೆಗಳಂ ತೆಗೆದೆಚ್ಚನು ॥೨॥

ಬರೆಯಲೇನಾಗಳಾರುಕ್ಮಾಂಗದನ ಪರಂ | ಪರಿತವಾದುರುಶರಪ್ರಸರಮನಿಲಾತ್ಮಭವ | ಗಿರಿಗೆ ಮೇಘಾವರಣಮೆಂದೆನಿಸೆ ಪರುಷತದ್ರೋಷಜ್ವಾಲದೃಷ್ಟಿಗೆ ॥ ನಿರುಕಿಸುವೊಡಾಜ್ಯಧಾರಾವರ್ಷಮೆಂದೆನಿಸಿ | ನೆರೆಹೊತ್ತುವಾತ್ಮಪ್ರತಾಪವಹ್ನಿಯುವಿಸ್ಮ | ತ್ವರದಹನಸಂಘಾತಮೆಂದೆನಿಸಿ ಗಗನಾಂತರಾಳಮಂ ಮುಸುಕಿರ್ದುದು ॥೩॥

ಅತ್ತಿತ್ತನೊಳಗಳಂಸೋವಂತೆ ಕವಿಕವಿವ | ನಿತ್ತ ಕೂರಲಗುಗಳನೊಡನೊಡನೆ ಭೈರವ ಮ | ರುತ್ತನೂಸಂಭವಂ ಕಯ್ಗಳಂ ಸೋವುತ್ತಮೊಂದೆನಿಡುವಾಲದಿಂದೆ ॥ ಸುತ್ತಿ ರುಕ್ಮಾಂಗದನರಥವನಾಕಾಶತಲ | ಕೆತ್ತಿ ಭೂಮಿಯೊಳಪ್ಪಳಿಸಿದೊಡನ ತೇಜಗ | ತ್ಸತ್ತುರುಳೆ ಸೂತನೊಡನಾರಥಂನುಗ್ಗಾಗೆ ಮಡಿದುರುಳ್ದನಾರಥಿಕನು ॥೪॥

ವೈರಿಕಾನನಪವನಮಿತ್ರನಾ ಬಲಮಿತ್ರ | ನಾರಣದೆ ಬಹುಕಾಲಹೋ ರಾಡಿಸುವುದಭವ | ವೀರನುಣಾನಂ ಸಂವರ್ಥೆಗೊಳಿಸೆತಾಂ ಪ್ರಷ್ಕಲನದಂ ಕಂಡಿದಿರ್ಚಿನಿಂದು || ಕ್ರೂರಂಗಳಹವಿನತಪರ್ವಂಗಳಹನಿತಿ | ಧಾರಂಗಳಹ ತೀವ್ರಸಾರಂಗಳಹಯುವಾ | ಚಾರಂಗಳಹ ಶರಗಳಿಂದೆಸಗಿದಂ ಮೃತ್ಯುಮಿತ್ರನಂ ಬಲಮಿತ್ರನಂ ||೫||

ವಿಜಯಮುಂಪಡೆದಂತು ರಘುಪುಂಗವನಸೇನೆ | ವಿಜಯಕೋಲಾಹಲಂಗೈಯುತ್ತೆ ನೆಗಹುತ್ತೆ | ವಿಜಯಧ್ವಜಂಗಳಂ ಜಯಭೇರಿಮೊದಲಾದ ವಾದ್ಯಂಗಳಂ ಬಾಜಿಸೆ || ತ್ರಿಜಗದಭಯಪ್ರದಾಯಕನುಮಾನಾಯಕಂ | ನಿಜಭಕ್ತಜನಪರಿಭವಕ್ಕೆ ಸೈರಿಸದೆ ತಾಂ | ವೃಜನವೃಷಭಾಂಕರಥವೇರಿಗಣಪರಿವಾರದೊಡನಲ್ಲಿಗೈತಂದನು ||೬||

ಪಿಂಗಳಜಟಾಜೂಟವಂತರದೆತುಳುಕಾಡೆ | ಗಂಗೆಮೇಲಿಂದುಕಲೆ ಥಳಥಳಿಸೆ ಭೂಷಣಭು | ಜಂಗಮುಗಳೊಡನೊಡನೆ ಪೆಡೆಯೆತ್ತಿ ಪೂತ್ಕರಿಸುತೂಲೆದಾಡೆ ಫಲಿದೊಪಬುಡೆ || ಕಂಗೊಳಿಸಲಂಗರುಚಿಕಾರದಶಶಾಂಕಕಿರ | ಣಂಗಳಂ ಕಡೆಗಣ್ಚಿ ಕಯ್ಯೆತ್ತಿಮುಂದೆ ಬಿರು | ದಂಗಳಂಪ್ರಮಥರುರೆ ಪೊಗಳುತಿರೆ ಭಕ್ತವಶನಾಮಹೇಶಂ ಬಂದನು ||೭||

ಬಹನೆ ಮೃತ್ಯುಂಜಯನುಂ ರಣರಂಗದೊಳ್ಕಂಡು | ಗಡೆದಿರ್ಪಭಕ್ತರಂ ಲೋಕಿಸಿ ಕೃಪಾರಸದ | ಕಡಲೆನಿಪದೃಷ್ಟಿಯಿಂದುಲಗಿದವರೆದ್ದಂತೆ ವೀರಮಣಿ ಮುಖವೀರರು || ಸಡಗರಿಸುತೆದ್ದು ತನ್ನಂಕಂಡು ಸಾಸಿರ್ಕೆ | ಪೊಡಮಟ್ಟೊಡಭಯುವನಪರ್ಗಿತ್ತು ರಘುವರನ | ಪಡೆಯೊಡನೆಕಾದಲ್ಕೆವೀರೇಶಮುಖ್ಯರ್ಗೆ ಬೆಸನಿತ್ತು ಮೈಗರೆದನು ||೮||

ಆಕ್ಷಣವೆ ವೀರಭದ್ರಂ ಪ್ರಮಥಗಣದೊಡನೆ | ದಕ್ಷಾಧ್ವರಧ್ವಂಸಕಾಲೀನರೂಪವಾಂ | ತಕ್ಷಯುಗಳಂಕೆಂಪಿರೆ ರೂಕ್ಷತರರೋಷಾನಲಸ್ಫುಲಿಂಗೋತ್ಕರವನು || ಈಕ್ಷಿಸಿರಘೂದ್ವಹನಚತುರಂಗಬಲವನುಂ ಸ | ನಕ್ಷತ್ರತಾರಾಗ್ರಹಂ ಭುವನಮುಂಡಲಂ | ವಿಕ್ಷೋಭೆಯುಂಪಡೆಯಲೊಂದಟ್ಟಹಾಸವಂ ಗೈದನದನೇನೆಂಬೆನು ||೯||

ಘೀಳಿಟ್ಟು ದಾನಮುಗ್ಘಟರವಾಭ್ರಘಟಕೆ ಶುಂ | ಡಾಲತತಿಯಾದಸಾಂ
ಪತಿಗಳುಲ್ಲೋಲ ಕ | ಲ್ಲೋಲಂಗಳಾನುಮೇಳುಂ ಕುಲಾದ್ರಿಗಳೊಡೆದುವೆ
ಣ್ದೆಸೆಕರಂ ಮೊಳಗಿತು || ಆಲಿಸಿತದುದ್ದಾಮಶಬ್ದಮಂ ಸೌಮಿತ್ರಿ | ನಾಳೀ
ಕಜಾಂಡವೊಡೆದಂತೆಬೆಮೆಗೊಂಡೊಡನೆ | ಕಾಲಾರಿವೀರಪ್ರಣಿಗೊತ್ತಾಸೆಯಾ
ವುದಂ ತಿಳಿದಿಂತು ಚಿಂತಿಸಿದನು ||೧೦||

ಏನಿದೇನಾಶ್ಚರ್ಯಮೀ ಭುವನಚಕ್ರಮಂ | ತಾನೇಕಪುರುಷನೆನಿಸಿ
ದೆರ್ಡಂ ತ್ರೈಗುಣ್ಯ | ಭಾನದಿಂದಾವನಭಿನಿರ್ಮಿಪನೊ ರಕ್ಷಿಪನೊ ವಿಲ
ಯಮಂ ಪೊರ್ದಿಸುವನೊ || ಆನಿತ್ಯಮೂರ್ತಿ ಪರಶಿವನ ನಿಜಭಕ್ತನಾ | ದೀನೃ
ಪಂಗೊಲ್ದು ಯುದ್ಧಕ್ಕೈಕಯ್ದುರವಾಗ | ಲಾನೆಂತು ಹೋರಾಡಲಿವನೊಡನೆ
ಮೇಣೆಂತುಗೆಲದಿರಲ್ ಪರನೃಪನನು ||೧೧||

ಬಿಡದೆ ನಿಜಧರ್ಮವಂಪೊರ್ಣರ್ಪನೀ ವೀರೇಶ | ನೊಡನೆ ನಾನುಳಿದಖಿಲ
ವೀರರೀ ಪ್ರಮಥಗಣ | ದೊಡನೆಕಾದಲಿ ರಾಮಚಂದ್ರನ ಮನದೊಳಿದ್ದಂ
ತಾಗಲೆಂದು ಬಗೆದು || ತೊಡಗಲಂತಖಿಲಸನ್ನಾಹದಿಂ ಕಾಳಗ | ಕ್ಕೊಡನೊ
ಡನೆ ನಾನಾವಿಧಾಯುಧಂಗಳನಾಂತು | ಘುಡುಘುಡಿಸುತಿದಿರಾಳ್ಗಳೊಡನೆಮೇ
ಲ್ವಾಯ್ದು ಹೊಯ್ದಾಡಿದರ್ಗಣವೀರರು ||೧೨||

ಚಂಡಪ್ರಚಂಡಶಾರ್ದೂಲಮುಖ ಭೃಂಗಿರಿಟಿ | ತಂಡುಹರಿತುಂಡಾದಿ
ಗಣವೀರಯೋಧರು | ದ್ದಂಡಕೋದಂಡಶರ ಭಿಂಡಿವಾಳಾಸಿಮುಸಲಾದ್ಯಾ
ಯುಧಂಗಳಿಂದೆ || ಅಂಡಲೆದು ತುಂಡುತುಂಡಾಗಿ ರಿಪುಯೋಧರಂ | ಖಂಡಿಸ
ಲ್ಬಂಡಣಮ ನೇಲನದೇನೆಂಬೆನಾಂ | ದಿಂಡುರುಳ್ದ ರುಂಡಮುಂಡಂಗಳಿಂ ನಿಬಿಡ
ಮಾಗತಿಭಯಂಕರಮಾದುದು ||೧೩||

ಆದಂಸುಬಾಹುಖಂಡಿತಬಾಹುಕಲಿಸುಮದ | ನಾದನಪಗತಮದಂಪು
ಷ್ಕಲನಸುತ್ಯಾಗ | ಖೇದಪುಷ್ಕಲನಾದನಂತು ಲಕ್ಷ್ಮೀನಿಧಿ ಭಯೋತ್ಕಂಪನಿ
ಧಿಯಾದನು || ಆದನುಗ್ರಾಶ್ವನುಂ ವ್ಯಗ್ರಾಶ್ವನರಿತಾಪ | ನಾದನತಿತಾಪನಾ
ಕದನದೊಳ್ಸುಗ್ರೀವ | ನಾದಂಗತಗ್ರೀವನುಳಿದಸೈನಿಕರವಸ್ಥೆಯನಾನದೇ
ನೆಂಬೆನು ||೧೪||

ಆರಣದೊಳಳದಭರತಾತ್ಮಜ ಸುಬಾಹುವನುಱೆ | ವೀರರಂಬರ್ದುಕಿಸಲ್ಕೋಸುಗಂಸೌಮಿತ್ರಿ | ಮಾರುತಪ್ರಭವನಂ ದ್ರೋಣಗಿರಿಗಟ್ಟಿದಿವ್ಯೌಷಧಿಗಳಂತರಲ್ಕೆ || ದಾರುಣಶವಾಶಕೇತನಗಳಂದವದಿರ ಶ | ರೀರವಂರಕ್ಷಿಸಲ್ಕೋಸುಗಂ ಹತಶೇಷ | ವೀರರಂ ನೇಮಿಸಿ ಕಳುಂಬರಂಪ್ರಮಥರನಿದಿರ್ಚಿಕೋಲ್ಸರಿಗರೆದನು || ೧೫ ||

ಉರಿಯುನುರೆಕಾರುತ್ತೆ ವೇಗಾತಿಶಯದಿಂದೆ | ಧರಣಿಗಗನಾವಕಾಶವನುನಾವರಿಸಿ ಪರಂ | ಪರೆಯಾಗಿ ಬರುತಿರ್ಪಗರಿಗಟ್ಟಿದಂಬುಗಳ ಬಿರುವುಳಿಗೆನಿಲಲಾರದೆ || ಭರದೊಳಾ ಪ್ರಮಥಗಣವೀರರತ್ತಿತ್ತ ಪೋಗ | ದಿರುಹಲತಿರೌದ್ರನಾ ವೀರಭದ್ರನೋಡಿ | ಧರಿಸಿ ಕರತಲದೊಳ್ತ್ರಿಶೂಲವನಿದಿರ್ಚಿದೊಡೆ ಶತ್ರುಘ್ನನಿಂತೆಂದನು || ೧೬ ||

ಘಡಘಡಾ ದುರುಳವೀರೇಶಕೇಳೈ ಪಿಂದೆ | ಬಡಪಾರ್ವರೊಗ್ಗಿನೆರೆದಿರ್ದ ಯಾಚಕರ | ಗಡಣದೆಡೆಯಾಟದ ಧವಿತ್ರಾದಿಸಾಧನದ ದಕ್ಷನಾಹವವಿದಲ್ಲ || ಕಡುಗಲಿಗಳಿಂ ಮಹಾಯುಧಸಾಧನಂಗಳಿಂ | ದೊಡಗೂಡಿ ಘೋರವಾದಾಹವವಿಂದೆಂಬುದುಂ | ಮೃಡಭವನದಂಕೇಳ್ದು ಮೊಳಗಲೆಣ್ದೆಸೆಯುಮುರೆ ಗಹಗಹಿಸುತಿಂತೆಂದನು || ೧೭ ||

ಎಲವೆಲವೊ ಸೌಮಿತ್ರಿಪೇಳ್ನಿನ್ನನೇತಕ್ಕೆ | ಕೊಲದೆ ಬಿಟ್ಟಪರ್ಪ್ರಮಥರಾಶ್ಚರ್ಯವಲೆ ನಿನಗೆ | ಬಲವಿದ್ದೊಡೆನ್ನೊಡನೆ ಕಾದಲ್ಕೆನಿಲ್ಲೆಂದುನಸುನಗುತೆ ನುಡಿಯಲೊಡನೆ || ಮುಳಿಸುಕಯ್ಗಣ್ಮೆ ಶತ್ರುಘ್ನನಿರದಾಕಾಶ | ತಲದೊಳೀಕ್ಷಿಸೆ ಕುತುಕದಿಂ ಸಿದ್ಧಗಂಧರ್ವ | ಕುಲವುವಿಚ್ಛಿನ್ನವಾಗಾಪಾರಮೇಶ್ವರನಮೇಲೆ ಕಣೆವಳೆಗರೆದನು || ೧೮ ||

ನುಂಗುತಿರಲೊಡನೊಡನಸಂಖ್ಯಾತತನ್ಮಾರ್ಗ | ಣಂಗಳಂ ಕರದಶೂಲವೆನೋಡಿ ಸೌಮಿತ್ರಿ | ಸಂಗಡಮೆವಿವಿಧಮಂತ್ರಾಸ್ತ್ರಗಳಂಪ್ರಯೋಗಿಸಲಂತದೆಲ್ಲಮನವನು || ನುಂಗೆತಾಂ ಬ್ರಹ್ಮಾಸ್ತ್ರಮಿಸಲದಂವೀರಪತಿ | ಭಂಗುರಂಗೈದು ನಿಜ ಶಿವಶಕ್ತಿಯಿಂದೆ ರಘು | ಪುಂಗವಾನುಜನನಾ ಶೂಲದಿಂದಿರಿಯಲ್ಕವಂಮೂರ್ಛೆಯಾಂತುರುಳ್ದನು || ೧೯ ||

ವೀರಾಗ್ರಗಣ್ಯರೆಂದೆನಿಸಿದವರೆಲ್ಲರುಂ । ಧಾರಿಣಿಯೊಳುರುಳಲುಳಿದಾಳ್ಗಳಗಿದೋಡೆಹಾ । ಹಾರವಂಗೈಯುತ್ತೆ ಕಾದುವಿದಿರಾಳ್ಗಳಿಲ್ಲದೆವಿಜಯಶಾಲಿಯಾಗಿ ॥ ವೀರೇಶನೊಲ್ದಿತ್ತ ಭಕ್ತಕುಲಮಣಿಯಾದ । ವೀರಮಣಿಗಾತ್ಮೀಯಶಕ್ತಿಯಿಂ ಪ್ರಮಥಪರಿ । ವಾರದಿಂದೊಡಗೂಡಿ ಶೈಲಜಾವಲ್ಲಭನಸಾನ್ನಿಧ್ಯಮಂಸಾರ್ದನು ॥ ೨೦ ॥

ಅತ್ತ ದಿವ್ಯೌಷಧೀಪರ್ವತಕ್ಕೈದಿದ ಮ । ರುತ್ತನೂಭವನದಂ ಬಹುಕಾಲದಿಂ ರಕ್ಷಿ । ಸುತ್ತಿರ್ದಯಕ್ಷರಂ ಪೊಯ್ದುಪೊಯ್ದುಬ್ಬಟ್ಟಲದನರ್ದುಸುರಪಾಲನು ॥ ತತ್ತರಿಸುತಲ್ಲಿಗೈತಂದು ನಿಜಚರಣಕೆರ । ಗುತ್ತೆ ನೆರೆಸಂಪ್ರೀತಿಯಿಂದೆ ಮನ್ನಿಸಿಯೊಳ । ತುತ್ತಮ ಮಹೌಷಧೀಲತೆಗಳಂಕೊಂಡಿತ್ತಲುರುವೇಗದಿಂ ಬಂದನು ॥ ೨೧ ॥

ಆವೊಡನೆ ಪುಷ್ಪಕಂ ಕೆಡೆದಲ್ಲಿಗೈತಂದು । ಭಾವದೊಳ್ಭಕ್ತಿಯಿಂಜಾನಿಸುತೆ ರಾಮನಡಿ । ದಾವರೆಯುಮಂಗಕ್ಕೆ ಬಳಿವುದುಂ ಕ್ರಮದೊಳಾದಿವ್ಯೌಷಧೀರಸವನು ॥ ಆವೀರನೊಯ್ಯನೊಯ್ಯನೆ ತೆರೆದು ಕಣ್ಗಳಂ । ಪಾವಮಾನಿಯನೋಡಿ ತನ್ನ ಧನುವೆಲ್ಲಿಮ । ತ್ತಾ ವೀರಮಣಿಯೆಲ್ಲೆನುತ್ತೆ ಚೇತರಿಸಿಕೊಂಡೆದ್ದನುಘೆಯೆನಲೆಲ್ಲರೂ ॥ ೨೨ ॥

ಅನುಪಮಿತಭುಜವಿಕ್ರಮಂ ಸ್ವಾಮಿಕಾರ್ಯಸಾ । ಧನತತ್ಪರಂ ಸಕಲಧರ್ಮಾವಬೋಧಿಪಾ । ವನತರಾಚಾರಂ ಪರಾಪರವಿದಂ ಬ್ರಹ್ಮಚಾರಿ ಕುಲಚೂಡಾಮಣಿ ॥ ವಿನುತಮತಿಶಾಲಿ ಸತ್ಯವ್ರತಪರಾಯಣಂ । ಹನುಮನಂತಪ್ಪಧಟನೊಳರೆ ಭೂತಲದೊಳೀ । ತನಸಾಸಕಾಶ್ಚರ್ಯಮಲ್ಲ ಭಾರತಿಬರ್ಮಾಂಕಿದುದೆಂದರಭ್ರಚರರು ॥ ೨೩ ॥

ಬಳಿಕಂತು ರಾಮಚಂದ್ರಾನುಜನ ಮೂರ್ಛೆಯುಂ । ತಿಳುಪಿಮಿಕ್ಕಲಿಟರುಮನಾತೆರದೆ ಚೇತನಂ । ಗೊಳಿಸಲವರೆಲ್ಲರುಂ ಮಲಗಿದವರೆದ್ದಂತೆವೋಲೆದ್ದು ಕೈದುಗಳನು ॥ ತಳೆದೇರಿ ತಮತಮ್ಮವಾಹನಂಗಳನನಿತ । ರೊಳೆರಣೋದ್ವೃತರಾದವೀರಮಣಿಮೊದಲಾದ । ಕಲಿಗಳೊಡನಾಹವಕೆ ಸನ್ನದ್ಧರಾದರುರೆಮೊಳಗೆ ರಣವಾದ್ಯಂಗಳು ॥ ೨೪ ॥

ಹದಿನೆಂಟನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೧೮ಕ್ಕೆ ಪದ್ಯ ೮೩೨ಕ್ಕೆ ಮಂಗಳಮಸ್ತು.

ಷತ್ರಿಂಬತ್ತನೆಯ ಸನ್ಧಿ.

ಸೂಚನೆ ॥ ಯೋಗಿನಿಯ ಮಂತ್ರಾಸ್ತ್ರಮಂ ಲವಣರಿಪುತಾಂ ಪ್ರ । ಯೋಗಿ
ಸಲ್ಪ್ರತ್ಯಕ್ಷನಾದರಘುನಾಥನಂ । ನಾಗಭೂಷಣನುಕ್ತಿಯಿಂಕೇಳ್ದು
ವೀರಮಣಿರಾಯಂ ಶರಣ್ಬೊಕ್ಕನು ॥

ಬಳಿಕ ಕೇಳ್ಮುನಿನಾಥಮತ್ತಮಿತ್ತಂಡಮುಂ । ಕೊಳುಗುಳಕೆನೆರೆಯ
ಲಾ ಸೌಮಿತ್ರಿ ಚಾಪಮಂ । ತಳೆದು ಮಣಿರಥವೇರಿ ಹೊಳೆಹೊಳೆವ ಪೊಂಗ
ರಿಯ ಪೊಸಮಸೆಯ ಕೂರ್ಗಣೆಗಳ ॥ ಮಳೆಯನೆಡೆವಿಡದೆ ಕರೆದೊಡೆ ವೀರ
ಮಣಿನೃಪಂ । ಚಳಕದಿಂಬಿಡದಾಸರಳ್ಗಳಂ ಪಡಿಸರ । ಳ್ಗಳನರಿದು ಪಲವು
ಕೂರ್ಗಣೆಗಳಂ ತೆಗೆದೆಚ್ಚು ಸೌಮಿತ್ರಿಗಿಂತೆಂದನು ॥ ೧ ॥

ಫಡಫಡಾ ಬಣಗುಸೌಮಿತ್ರಿ ಸಾಕೀನಿನ್ನ । ಬಡಿವಾರಮೆನ್ನೊಡನೆನಿ
ನಗೆ ಹೋರಾಟವೇ । ಪಡೆಮೆಟ್ಟುನಿಲದೆ ನೀನಿಲ್ಲದಿರೆ ನಿನ್ನಾಯುಕೊನೆಗಾಂ
ಬುದಿಂದಿಗೆಂದು ॥ ನುಡಿಯೆ ಶತ್ರುಘ್ನನೆಲೆಕಾಲುರಿಚ ಬೆರೆಯದಿರು । ಮೃಡನ
ಬಲದಿಂದೆಂದು ತನಿಮೊಗರ ಕಣೆಗಳಂ । ಬಿಡಲವಂನೃಪನಸಂ ಕಡಿದುನಿಡುಸರ
ಳ್ಗಳಂ ಕೆತ್ತಿದಂ ಸೌಮಿತ್ರಿಯು ॥ ೨ ॥

ಸೈರಿಸದದಂಮುಳಿದು ಮಂತ್ರಾಸ್ತ್ರತತಿಯನಿಸ । ಲಾರಂಭಿಸಲ್ಕೆ ರಾ
ಮಾನುಜಂ ವೀರಮಣಿ । ಭೂರಮಣನುರವಣಿಸುತೊಡನೊಡನೆ ಬಿಡದವಂ
[illegible]ಸ್ತ್ರವರ್ಗದಿಂದೆ ॥ ವಾರಿಸುತ್ತಣಿಕೆಯಿಲ್ಲದೆ ತೆಗೆದುತೆಗೆದು ತೂ । ಣೀರ
ಮುಖದಿಂದೈದೆ ಮಸೆವೆತ್ತ ಕೂರ್ಮೊಗದ । ನಾರಸಂಗಳನೆಚ್ಚು ಮೈಜೋಡನ
ರಿದುಸೌಮಿತ್ರಿಯಂ ನೋಯಿಸಿದನು ॥ ೩ ॥

ತರಹರಿಸಲಾರದಾತೀಕ್ಷ್ಣತರಬಾಣಂಗ । ಳುರುತರಾಘಾತಕ್ಕೆ ಕಂಗೆ
ಟ್ಟು ಸೌಮಿತ್ರಿ । ಪರಿಕಂಪಿಸುತ್ತನಿಲಸಂಭವಂ ಮಾಡಿದುಪದೇಶಮಂದಾ ಸಮ
ಯದೆ ॥ ಸ್ಮರಿಸಿ ರಘುವೀರನಡಿದಾವರೆಯ ಯೋಗಿನಿಯ । ಪರಮಾಸ್ತ್ರಮಂ
ಪ್ರಯೋಗಿಸುವುದುಂ ವೀರಮಣಿ । ಧರಣಿಪತಿಬಲದೊಡನೆ ಚಿತ್ರಿಸಿದವಂದದಿಂ
ನಿಶ್ಚೇಷ್ಟನಾದನಸುಮಾ ॥ ೪ ॥

ಬೆಳಗೆಮ್ಮೈಬೆಳಗು ದೂರ್ವಾದಳಚ್ಛಾಯೆಯಿಂ । ಬೆಳದಿಂಗಳಂತೆ ಮೊಗಸಸಿಯು ಮುಗುಳ್ನಗೆಯೊಸೆಯೆ । ತೊಳತೊಳಪನವರತ್ನಮಕುಟರುಚಿಸಂತಾನಮೆತ್ತೆತ್ತಲುಂ ಪಸರಿಸೆ ॥ ಅಲರಿಡಿದಪಚ್ಚೆಲೆಯ ಪೊಸಮಾವಿನಂತೆಕಂ । ಗೊಳಿಸೆ ಪೀತಾಂಬರವನಾಂತತನು ಕಟಿಯೊಳಗೆ । ತಳೆದು ಮೃಗಶೃಂಗಮಂ ಪ್ರತ್ಯಕ್ಷನಾದನಸ್ತ್ರಪ್ರಭಾವದೆ ರಾಮನು ॥ ೫ ॥

ಸುರಭಿಳೋದಾರಮಂದಾರಸುಮವೃಷ್ಟಿಯುಂ । ಕರೆದರೊಲ್ದಾಕಾಶದಿಂದಖಿಲಯಕ್ಷಕಿ । ನ್ನರಸಿದ್ಧಗಂಧರ್ವವಿದ್ಯಾಧರಾಪ್ಸರರ್ದೇವತಾದುಂದುಭಿಗಳು ॥ ಹರಿದಂತರಾಳಂಗಳಲ್ಲಿನೆರೆಮೊಳಗಿದುವು । ಶಿರದಲ್ಲಿತಳೆದು ಕರಯುಗಳಸಂಪುಟವನರೆ । ದೆರೆದಕಣ್ಣಿಂದೆಜಾನಿಸುತಮರಮುನಿಗಳಂತಾಮಹಿತನಂಪೊಗಳ್ದರು ॥ ೬ ॥

ಸರಸಿಜಾಕ್ಷನೆ ರಾಮಚಂದ್ರಮನೆ ನರಹರಿಯೆ । ಹರಿಯೆ ಘೋರಗ್ರಾಹಭೀತ ಗಜಪತಿವರದ । ವರದರ ಸುದರ್ಶನಗದಾಶಾರ್ಙ್ಗಚಾಪಧರಯೋಗಿಜನಹೃದಯ ಶರಣಾ ॥ ಶರಣಾಗತತ್ರಾಣ ಕೃತರಾಕ್ಷಸೋಪರಮ । ಪರಮಪೂರುಷ ಮನುಜಲೋಕ ಧರ್ಮಾಚರಣ । ಚರಣನತ ಸಕಲಗೀರ್ವಾಣ ದೇವಾದಿದೇವನೆ ಸಲಹುಸಲಹೆಂದರು ॥ ೭ ॥

ಸೌಮಿತ್ರಿಯುಂ ಪವನಸುತನುಮಾಬಳಿಕಪದ । ತಾಮರಸಕಭಿನಮಿಸು ತುರುಭಕ್ತಿಭಾವದಿಂ । ರೋಮಾಂಚಿತಾಂಗ ರಾಗಾನಂದ ವಿಸ್ಮಯವಿಲಕ್ಷಣಾಮನಸ್ಕರಾಗಿ ॥ ಕೈಮುಗಿದುಕೊಂಡು ವಿನಯಾನಮ್ರರಾಗಹೋ । ಸ್ವಾಮಿ ಪಿರಿದುಂ ಧನ್ಯರಾದೆವಾಂ ಕಂಡೀಮ । ಹಾಮಹಿಮ ಪಾದಾಂಬುರುಹವನಮಗಿನ್ನೆನಿತರದು ಶತ್ರುಜಯವೆಂದರು ॥ ೮ ॥

ಶೈಲಜಾಪತಿಯು ಮಾಸಮಯದೊಳ್ಮೈದೋರಿ । ಲೀಲಾಮನುಷ್ಯನೆನಿಪಾ ಪರಮಪೂರುಷನ । ನಾಲಿಂಗನಂಗೈದು ದೇವನೆ ನಿರಂಜನಂ ನಿರ್ವಿಕಲ್ಪಂ ನಿತ್ಯನೂ ॥ ಕಾಲಾದಿಯಿಂದಮಪರಿಚ್ಛಿನ್ನನುಂ ವಿಗತ । ಕಾಲುಷ್ಯನುಂ ನಿರ್ಗುಣನು ಮದ್ವಿತೀಯನುಂ । ಸ್ಥೂಲನುಂ ಸೂಕ್ಷ್ಮನುಂ ಸಚ್ಚಿದಾನಂದ ಸ್ವರೂಪನುಂ ನೀನೆನಿಸುವೈ ॥ ೯ ॥

ಕಾರಣತ್ವಮನಾಂತು ಸೃಷ್ಟಿಸುವೆ ವಿವಿಧಪ್ರ | ಕಾರದಿಂವಿಧ್ವ್ಯಂಡ
ಕೋಟಿಯುಂ ನೀನೆ ಪಾ | ಥೋರುಹೋದ್ಭವನಾಗಿ ನಿಜರೂಪದಿಂದಮಂ ಪಾ
ಲಿಸುವೆ ಮದ್ರೂಪದೆ || ತೋರದಂತಿರೆ ಮಾಳ್ಪ ನೀನೆ ಶರ್ವನಾದೊಡಂ | ಮೂ
ರೂಪಿನಿಂದಿರ್ಪ ನೀನಿಂತು ವಿಪ್ರ ಸಂ | ಹಾರಪಾಪವ ನೋರಸಲಧ್ವರವ ನೆಸ
ಗುವುದು ಕೇವಲ ವಿಡಂಬನವಲ್ಲೇ || ೧೦ ||

ನೀನಿರ್ಪ ಯೆನ್ನೊಳಗೆ ನಾನಿರ್ಪ ನಿನ್ನೊಳಗೆ | ನೀನುಮಾನುಂ ಬೇ
ರೆಬೇರೆಯೆಂದುರೆದುರಭಿ | ಮಾನದಿಂ ಭೇದಮಂ ಕಲ್ಪಿಸುವರುರುಳ್ವಜಡ
ರತಿಘೋರ ನರಕದೊಳಗೆ || ಜ್ಞಾನಬಲದಿಂದೆ ತಾಮೀತತ್ತ್ವಮಂ ತಿಳಿದು | ನಾ
ನಾಮನಃಕ್ಲೇಶಮಂ ತೊರೆದು ಕೇವಲಾ | ತ್ಮಾನುಸಂಧಾನಪರರೆನಿಪ ವರ
ಯೋಗಿಗಳ್ ಮೋಕ್ಷ ಭಾಜನರಹರಲ್ಲೇ || ೧೧ ||

ಬರೆವೆನಿನ್ನಾಂಸ ಗುಣವೃತ್ತಮಂ ಕೇಳ್ಮಹೀ | ಶ್ವರನಿವಂ ಬಹುವ
ತ್ಸರಂ ಮಹಾಕಾಲ ಮಂ | ದಿರದೆ ಸಿದ್ರಾಹಾರಮಂ ತೊರೆದು ತಪವನಾಚರಿ
ಸುತಿರ್ದಂನಿಯಮದೆ || ಪಿಂದೊಲವಿನಿಂದಂದು ಮೈದೋರಲಾಂ ನಿರಂ | ತರ
ಮೆನ್ನಸನ್ನಿಧಿಯು ನೀರಾಜಧಾನಿಯೊ | ಳ್ಪರಮಭಕ್ತಿಯೊಳಿವಂ ಪದಕೆರಗಿ
ಬೇಡುವುದು ಮೊಲ್ದುನಾನಿಂತೆಂದೆನು || ೧೨ ||

ನಿನ್ನರಕ್ಷಣೆಗೆ ರಾಮನ ಯಜ್ಞವಾಜಿ ಬ | ರ್ಪನ್ನೆವರಮೊಲ್ದು ನಿನ್ನ
ಯರಾಜಧಾನಿಯೊ | ಳ್ಸನ್ನಿಹಿತನಾಗಿರ್ಪೆ ನಾನೆಂದುವರವನಿತ್ತೀರಾಜಧಾನಿ
ಯೊಳಗೆ || ಇನ್ನೆವರಮಿರ್ದು ಕಾಯಲ್ಕೆ ನಿಜಭಕ್ತನಂ | ನಿನ್ನ ಚತುರಂಗ
ಮಂ ತಾರುಥಟ್ಟುಗಿಸಿದೆ | ನಿನ್ನನ್ನಧೀನನಂ ಮಾಡಿರ್ಪನೀತನಂ ಪ್ರಕೃತ
ಸಂದರ್ಭದೊಳ್ನೆ || ೧೩ ||

ದೇವದೇವನಹಸ್ತಮಂ ಪಿಡಿದೆಲ್ಲೈ ಮಹಾ | ದೇವ ಕೇಳ್ಬಿಡದೆ ನಿಜ
ಭಕ್ತರಂ ಪಾಲಿಪ್ಪುದು | ದೇವರ್ಗೆಮೊದಲನೆಯ ಧರ್ಮಮಾದುದರಿಂದೆ ನೀನಾಹ
ವಾಂಗಣದೊಳು || ದೇವಪುರದೊಡೆಯನಾದೀ ವೀರಮಣಿ ಮಹೀ | ದೇವನಂ
ಕಯ್ಬಿಡದೆ ಸತ್ಯವಂಪಾಲಿಸಿದು | ದೇವರಂ ನಿನ್ನಭಕ್ತರು ಮೆನ್ನಭಕ್ತರುಂ
ಬೇರೆಬೇರೆಯೆಬಗೆಯುಲು || ೧೪ !

ಭೇದವೇನೆಮಗೆ ನೀನೆಳಸಿದಂತಾಗಲೆಂ । ದಾದಾಶರಥಿರೂಪನೆಚ್ಯುತಂ
ನುಡಿವುದುಂ । ಮಹಾದೇವನಾತನಂ ನಿರ್ಭರತರಾನಂದದಿಂದೆ ಬಿಗಿದಪ್ಪಿಕೊಂ
ಡು ॥ ಆದಿತೇಯಪ್ರಕರಮಂಬರದೆನಿಂದು ಸಂ । ಮೋದದಿಂ ಭೇದಮಿಲ್ಲೀಹರಿ
ಹರರ್ಗೆಂದು । ವೇದವೇದಾಂತವಚನಂಗಳಂನುತಿಸುತಿರೆ ವೀರಮಣಿಗಿಂತೆಂ
ದನು ॥ ೧೫ ॥

ಅರಸಕೇಳ್ವೈವೀರಮಣಿರಾಮಚಂದ್ರನಂ । ನರಮಾತ್ರನೆಂದರಿಯಬೇ
ಡವೈತಾನಿವಂ । ಪರಮಾತ್ಮನಚ್ಯುತಂ ನಿರ್ವಿಕಾರಂ ನಿರ್ವಿಕಲ್ಪನಾನಂದಮಯ
ನು ॥ ನಿರುಪಾಧಿಕಂ ನಿನ್ನನಿತ್ತಿರ್ಪನೀಪರಾ । ತ್ಪರನಕಯೋಗ್ಯತನಂನೀನೆನ್ನ
ಸೇವಿಸಿದ । ತೆರದಿಂದೆ ಸೇವಿಸಿಕೃತಾರ್ಥನಾಗೆಂದೊರೆದು ವೈಗರೆದನಾಕ್ಷಣ
ದೊಳು ॥ ೧೬ ॥

ಕಡುಮುದದೊಳಾಬಳಿಕ ವೀರಮಣಿ ಧರಣೀಂದ್ರ । ನೊಡಗೊಂಡಿ
ರುಕ್ಮಾಂಗದಾದಿ ನಿಜತನಯರಿಂ । ಪೊಡಮಟ್ಟುಸಾಸಿರ್ಕೆ ಕಮಲಾಕ್ಷನಾದಿ
ಸಕುಳೇಂದ್ರ ನಡಿದಾವರೆಯೊಳು ॥ ಬಡೆಯನಾನಿಂದು ನಿನ್ನಡಿದಾವರೆಯ
ಕಂಡು । ಪಡೆದೆನತಿಧನ್ಯತೆಯ ಪರಿಪೂತಮಾದುದೆ । ನ್ನೊಡಲಪಲ್ಯೆಗೆತಂದೆ
ಯಾದ ನಿನ್ನಡಿದಾವರೆಯ ರಜಸ್ಸಂಗದಿಂದೆ ॥ ೧೭ ॥

ಅರಿದಿದೆನಾಂ ಕೇಳ್ದು ನಿನ್ನ ಮಾನುಷವಾದ । ಚರಿತೆಗಳನೀಗಳಾಪ
ರಶಿವನನುಡಿಯಿಂದೆ । ಪರಿಹರಿಸಿಕೊಂಡು ಸಂದಿಗ್ಧಮತಿಯಂ ತಿಳಿದೆನೆಲ್ಲವಂ
ಸತ್ಯಮೆಂದು ॥ ಪರಮಪೂರುಷನೆನಾಂ ಕ್ಷಾತ್ರಪದ್ಧತಿಯನನು । ಸರಿಸಿನೀಂ
ಜನಮೆಚ್ಚಿಗೋಸುಗವೆನಾಡುವ । ಧ್ವರದಶ್ವಮಂತಡೆದೆನರಿಯದೆನ್ನಪರಾಧ
ಮಿದನೊಲ್ದುನೀಂ ಕ್ಷಮಿಪುದು ॥ ೧೮ ॥

ಒಂದೆನಿಸಿದೆರಡನೆಯದಿಲ್ಲದಿಹಸಚ್ಚಿದಾ । ನಂದಮಯಮಾದಬಾಧ್ಯತ್ವ
ದಿಂದಜಡತ್ವ । ದಿಂದಮಪರಿಚ್ಛೇದ್ಯಭಾವದಿಂದಂಕೂಡಿತಾಂ ಸ್ವಭಾವದೆಬೆಳ
ಗುವ ॥ ಕಂದುಕುಂದೇನುಮಿಲ್ಲದಸಕಲ ವೇದಂಗ । ಳಂದೆಯುಂ ಪ್ರತಿಪಾದ್ಯ
ಮಾಗಿರ್ಪಮುನಿಜನಗ । ಳಂದಾವಗಂಧ್ಯೇಯಮಾಗಿಹಪರಬ್ರಹ್ಮವೇ ನೀನ
ಲಾದೇವನೇ ॥ ೧೯ ॥

ರಾಮಕೇಳೈ ಬಹುಸ್ಯಾಮೆಂಬನಿನ್ನೊಂದು | ಕಾಮಮಾತ್ರದೆಜಗ
ತ್ಸೃಷ್ಟಿಯಾವುದು ಕುತುಕಿ | ಯಾಮನೋರಥಪರಂಪರೆಯಂತೆ ನೀನದ
ಕುಪಾದಾನಕಾರಣವಲೇ || ಸ್ವಾಮಿನೀನಜ್ಞಾನಿಗಳಕಣ್ಗೆ ಕಾಣಿಸುವೆ | ಯಿಾ
ಮಹತ್ತರಜಗದ್ರೂಪದಿಂನೀನಾದೊ | ಧೀಮಾಳ್ಕೆಯಿಂದೆಯುಂ ಜಗವಲ್ಲ
ವಿಂತೆಲ್ಲವುಂ ಶ್ರುತಿಪ್ರೋಕ್ತಮಲ್ತೆ || ೨೦ ||

ರಾಮನೀಂ ಪ್ರಕೃತಿಮುಖ್ಯಪ್ರಪಂಚತ್ವದೆನಿ | ಕಾಮವೆನೆಭಾವ್ಯನಾ
ಗದರೊಳಾಡುತ್ತಿರ್ಪೆ | ಧೀಮಂತರಹಮುನಿಗಳದರಿಂದೆ ನಿನ್ನನಾತ್ಮಾರಾಮ
ಎಂದುಕೊಂಡಾಡುತಿಹರು || ಶ್ರೀಮಹಾದೇವನುಂ ನೀನು ಮೊಲ್ದುದರಿಂದೆ |
ನೀಮಿರ್ವರೇಕರೂಪದೆತೋರುತಿರ್ಪಿರೆ | ಸ್ತ್ರೀಮತಿಗೆ ಮೂಥಪ್ರಲಾಪವದು
ಭೇದವಂ ನಿನಗೆ ಕಲ್ಪಿಪ್ಪುದೆಂದನು || ೨೧ ||

ನುಡಿದಿಂತುಮತ್ತೆ ಚರಣಾಂಬುರುಹಯುಗಳಕ್ಕೆ | ಪೊಡಮಟ್ಟುತರಿ
ಸಿ ಮುಖಹಯಮನುತ್ಸವದಿಂದೆ | ಮೃಡನಾಜ್ಞೆಯಾದಂತೆ ಬಹುಕೋಟಿಧನ
ಭೂಷಣಸ್ವರಾಜ್ಯಂಗಳೊಡನೆ || ದೃಢಭಕ್ತಿಯಿಂ ಸಮರ್ಪಿಸಲವಂ ರಾಘವಂ |
ಕಡುಮುದಂಗೊಂಡು ರಾಜ್ಯವನುಳಿದು ಕಯ್ಕೊಳೆ | ಲ್ಪೊಡನೆಲ್ಲರುಂಹರ್ಷ
ಕೋಲಾಹಲಂಗೈದರಬ್ಬರಿಸೆ ವಾದ್ಯಂಗಳು || ೨೨ ||

ಬಳಿಕರಾಮಂ ನಿನ್ನಭಕ್ತಿಗೊಲ್ದಿಹೆನೆಂದು | ನಲವಿಂದೆವೀರಮಣಿ ರಾ
ಯನನನುಗ್ರಹಿಸಿ | ಕೆಲಬಲದೆ ತಲೆವಾಗಿನಿಂದಿರೆ ಸುಮಿತ್ರಾ ತನೂಜಪುಷ್ಕ
ಲಮುಖ್ಯರು || ಕುಳಿತುಪೊಂದೇರೊಳಗೆ ಕಾಣಿಸುತ್ತಿರ್ದಂತೆ | ಹೊಳೆದು ಮ
ರೆಯಾದವೊಲ್ಮಿಂಚು ಮೃಗರೆಯಲಾ | ಕಳದೊಳಿರ್ದೆಲ್ಲರುಂ ಕಂಡದಂಸರೆ
ಬೆಕ್ಕಸಂಬಟ್ಟುಬೆರಗಾದರು || ೨೩ ||

ವೀರಮಣಿ ಭೂಪಾಲನಾಬಳಿಕ ಶತ್ರುಘ್ನ | ಭಾರತಿಪ್ರಮುಖರಂ ಚ
ತುರಂಗಸೈನ್ಯ ಸರಿ | ವಾರದೊಡನಲ್ಲಿಂದೆ ಪೇರುಕ್ಕೆವದೊಳರಮನೆಗೆ ಕರೆದು
ಕೊಂಡುಬಂದು || ಭೂರಿವೈಭವದಿಂದೆ ಬಹುಳವಿತರಣೆಯು ಸ | ತ್ಕಾರವಂ
ಗೈದೊಲ್ದುರಚಿಸಿ ರುಕ್ಮಾಂಗದ ಕು | ಮಾರಂಗೆ ರಾಜ್ಯಾಭಿಷೇಕವಂ ಶತ್ರು
ಘ್ನನೊಡನೈದಲನುವಾದನು || ೨೪ ||

ಅಂದಿನಿರುಳಂ ದೇವಪುರದೊಳಗೆ ನೂಕಿ ರಘು । ನಂದನಂ ವೀರಮಣಿ ವಿರಚಿಸಿದಸತ್ಕಾರ । ದಿಂದೆ ಸಂತುಷ್ಟನಾಗಲ್ಲಿ ಚತುರಂಗವಾಹಿನಿಯು ಮೇಳವಿಸಿಕೊಂಡು ॥ ಮುಂದೆನಡೆಯಲ್ಕೆ ಮಖವಾಜಿತಾಂ ಶ್ರೀರಾಮ । ಚಂದಿರನ ಸಾನ್ನಿಧ್ಯಕೆಳಸುವಾನ್ನೃಪನೊಡನ । ಮಂದವೈಭವದೊಳೆಸ್ದೆಸೆದೀವೆ ವಾದ್ಯರವಮಲ್ಲಿಂದೆಪ್ರೂರಮುಟ್ಟಸು ॥ ೨೫ ॥

೧೯ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೧೯ಕ್ಕೆ ಪದ್ಯ ೮೫೬ಕ್ಕೆ ಮಂಗಳಮಸ್ತು.

ಇಪ್ಪತ್ತನೆಯ ಸನ್ಧಿ.

ಸೂಚನೆ ॥ ಶೌನಕಮಹಾಮುನಿಯವಾಕ್ಯಮಂಕೇಳ್ದ ರಾ । ಮಾನುಜಂ
ಶಾಪಹತಸಾತ್ವಿಕಂ ಗಂಜನಾ । ಸೂನುಮುಖದಿಂ ರಾಮಕಥೆಯಪೇಳೆ
ಸಲ್ತ್ವಸಂಸ್ತಂಭನಂ ಕಳೆದುದು ॥

ಪರಮಯೋಗೀಂದ್ರ ಕೇಳ್ಬಳಿಕಾಮಖಾಶ್ವಮು । ತ್ತರದಿಶಾವಲಯ
ಕಭಿಮುಖವಾಗಿ ನಡೆತರು । ತ್ತಿರೆ ನೋಡಿದೊಡನೆ ತತ್ತದ್ರಾಜಧಾನಿಯೊಳ
ಗಿರ್ಪ ಭೂಮೀಪಾಲರು ॥ ನೆರೆಸುಗಿದು ರಾಮಪ್ರತಾಪಕ್ಕೆ ತಡೆಯದದ ।
ನುರುತರಸ್ನೇಹದಿಂ ಶತ್ರುಘ್ನರಾಯನಡಿ । ಗೆರಗಿ ಬಹುಕೋಟಿಧನಮಣಿ
ವಿಭೂಷಣ ವಾಹನಾದಿಗಳನೊಲ್ದಿತ್ತರು ॥ ೧ ॥

ಚರಿಸುತಿಂತೆರದೆ ಹಿಮಗಿರಿತಟದೊಳಾ ಕುದುರೆ । ಭರತಖಂಡಾಂತದೊ
ಳಗಿಹ ಹೇಮಕೂಟ ಭೂ । ಧರಮಾರ್ಗಮಂಪಿಡಿದು ನಡೆಯಲದನನುಸರಿಸಿ
ಲಕ್ಷ್ಮಣಾನುಜನಸೇನೆ ॥ ಪರಿದು ಮುಂಕಂಡುದು ಮಹಾವನಂ ಪಲತೆರದ ।
ಮರಗಳಿಂ ಗಿಡುಗಳಿಂ ಮೃಗಗಳಿಂ ಖಗಗಳಿಂ । ತೊರೆಗಳಿಂ ಕೆರೆಗಳಿಂ ಬೆಟ್ಟ
ದಿಂ ಗುಡ್ಡದಿಂ ಕೂಡಿ ಕಡುಘೋರಮೆನಿಸಿ ॥೨॥

ನೊರೆಯನುಗಿವಲೆಗಳೆಂಬಂತೆ ಕಣ್ಗೊಳಿಸಲಲ । ರ್ದರಲಾಂತುಗಾಳಿ
ಯಿಂ ದೊಲೆದಾಡುತಿರ್ಪಪೆ । ರ್ಮರಗೊನೆಗಳೆತ್ತಲುಂ ಭೋರ್ಗರೆವಮೃಗಗಳ
ಬ್ಬರವಾಗಲುದ್ಘೋಷಣಂ ॥ ಬರುತಮೈದುತಮಿರ್ಪ ಪಕ್ಕಿಗಳ ಗುಂಪುಗಳ್ ।
ಚರಿಪನಾವೆಗಳಾಗಲಂತರೀಪಂಗಳಂ । ತಿರೆಗಿರಿಗಳಾಲೋಕಿಪೊಡೆ ವಾರಿನಿಧಿ
ಯೆಂಬವೋಲ್ವನಮದೇನೆಸೆದುದೋ ॥ ೩ ॥

ಅಲ್ಲಲ್ಲಿ ಭೋರ್ಗರೆವ ಹರಿಗಳಿಂ ಕರಿಗಳಿಂ । ದಲ್ಲಲ್ಲಿ ಪರಿವ ನಿರ್ಝರಿ
ಗಳಿಂ ಗಿರಿಗಳಿಂ । ದಲ್ಲಲ್ಲಿ ಚರಿಪಜಂಬುಕಗಳಿಂ ವೃಕಗಳಿಂದಂತು ಭಲ್ಲುಕಗ
ಳಿಂದೆ ॥ ಅಲ್ಲಲ್ಲಿ ನೆರೆಬೆಳೆದ ಬಿದಿರ್ಗಳಿಂ ಪೊದರ್ಗಳಿಂ । ದಲ್ಲಲ್ಲಿ ನಲಿವ ಕೋ
ಡಗಗಳಿಂ ಮಿಗಗಳಿಂ । ದಲ್ಲಲ್ಲಿ ಪೂಗಳೊಳ್ಗಂಪಿನಿಂ ಸೊಂಪಿನಿಂದಾವನಮ
ದೇನೊಪ್ಪಿತೋ ॥೪॥

ಪರಸೇವೆಯುಂಮಾಡದನ್ಯರಂ ಯಾಚಿಸದೆ । ತೀರೆಯುದಿನಿಸಾದೊಡಂ ಮಾನಮಂ ಧನಚಿಂತೆ । ಯಿರದೆ ಶಂಕಿಸದೆ ಪರಿಪರಿಯುದಾರಿದ್ರ್ಯಮಂ ಪಾಪಿ ಋಣಭಯಮಿಲ್ಲದೆ ॥ ಪರಿತೋಷದಿಂ ಕಂದಮೂಲ ತೃಣಫಲ ಮುಖ್ಯ । ನಿರು ಪಾಧಿವೃತ್ತಿಯಿಂ ಜೀವಿಸುತ್ತಿಹ ವನೇ । ಚರಕುಲಮೆ ದುಃಖಶತಜೀವಿಜನರಿಂ ಮೇಲೆನಲ್ವನಮುದೇಂ ಮೆರೆದುದೋ ॥೫॥

ಎಲೆಗಳಂ ಮಘಮಘಪೂರ್ಣಸುರಭಿಳಸುಮಂಗಳಂ । ನೆಳಲಿಂದೆ ನಾರಿಂದೆ ಕೊನರಿಂದೆ ಸುಸ್ವಾದ । ಫಲಗಳಂ ಬಹುವಿಧಪ್ರಾಣಿಗಳ್ಗುಪಕರಿಸುತಿರ್ಪ ಮಹೌನ್ನತ್ಯಮೆತ್ತು ॥ ನೆಲದೊಳಗೆ ಜನ್ಮವೆತ್ತಿದುದು ಸಾರ್ಥಕಮೊಂದು । ಪಲ ತೆರದೊಳೆಲ್ಲರುಂ ಶ್ಲಾಘಿಸುವಪೆರ್ಮೆಯುಂ । ತಳೆದನೇಕಕ್ಷಿತಿರುಹಂಗಳಿಂದಿಟ್ಟಣಿಸಿ ವನಮುದೇನೊಪ್ಪಿರ್ದುದೋ ॥೬॥

ತೆರಪಿಲ್ಲದಂತೆರಡು ದಡದೊಳಂ ಬೆಳೆದಿರ್ದ । ಮರಗಳಿಂದುದಿರ್ದಲರ್ಗಳಂಪಿಡಿದು ಸುಳಿಗಳೊ । ಳ್ತಿರುಗುತ್ತೆ ಬಿಡದೆ ಕೊಂಡೊಯ್ಯುತ್ತೆ ಕಮಲ ಕಲ್ಹಾರಾದಿಕುಸುಮಂಗಳ ॥ ನರುಗಂಪನಾಳ್ದು ನೀರ್ವಕ್ಕಿಗಳ ಕಲಮಧುರ । ವಿರುತಿಯಿಂ ಮಧುರಶೀತಳಸಲಿಲದಿಂ ಕೂಡಿ । ನೆರೆತಣಿಯಿಸಿದುವುದಾರಿಗರಪಂಚೇಂದ್ರಿಯಮನಾವನದ ಪೆರ್ದೊರೆಗಳು ॥೭॥

ಓಡಿಸುವುವುಪಂದಿಗಳ್ಬಿಡು ಜಾಯಿಲಂಗಳಂ । ಕೇಡಾಳಹೆಬ್ಬುಲಿಯುಡೆಂಗಿ ಹುದು ಪೊದರೊಳಗೆ । ಪೊಶಂಬುಮಂಬಿಲ್ಗೊಳೊಡ್ಡು ಬಲೆಯುಂ ಕೊಣಸುಗಳ್ಕೆಣಕುತಿತ್ತು ಬಹುವು ॥ ನೋಡದೊಸಿಂಗಮೊಂದಾನೆಯುಂ ಕೆಡಹಿ ತ । ಳ್ಳಾಡುವೆವು ಬಿಡದೆನಾವದನತ್ತ ನಡೆಯೆಂಬ । ಬೇಡಪಡೆಯುಬ್ಬರಂ ಕೇಳ್ವುದತಿಘೋರಮಾಗಿರ್ದದಾ ಕಾನನದೊಳು ॥೮॥

ಸುರಭಿಳೋತ್ಪಲಕರ್ಣಪೂರಮುಂ ಶಿವಿಗಳೊ । ಳ್ಕರಿಕುಂಭಮುಕ್ತಾವಳೀಕಲಿತಹಾರಮುಂ । ಕೊರಳೊಳಿಭದಂತವಲಯಂಗಳಂ ಕಯ್ಗಳೊಳದಳ ರುಚೆಯ ನಡುವೆಡೆಯೊಳು ॥ ಹೊಂಣಮುದತಿಲಕಮುಂ ಪಣೆಯೊಳಭಿನವಕುಸುಮ । ಸರಮುಂತುರುಂಬಿನೊಳ್ಪುದವಿಲ್ಲನಂ ಸದೊ । ಳ್ಧರಿಸಿ ಚೆಲ್ವಿಂದರಸಿಯುರ ನಲೆನಚೇಡಿತಿಯರಲ್ಲಿ ಚರಿಸುತ್ತಿರ್ದರು ॥೯॥

ಉರುಪ್ರತಿರ್ದುದು ಬಿದಿರವೆಳೆಯೊಳೊಗೆದಗ್ನಿಕಣ | ಮಿರದೆಸುವ ಶಾಕುಲೋತ್ಪನ್ನದುಷ್ಪುತ್ರನಂ | ತಿರೆವೊಲಾವಂಶಪನೆ ಚಂದನಾಗರುಸಾಲಸಪ್ತದಳಮುಖತರುಗಳ ‖ ಪರಿಮಳಂ ಪೊರಪಡುತ್ತಿರ್ದುದು ಮಹಾನುಭಾ | ವರಗುಣಂ ಸ್ವಯಮೇವಪೊರಪಡುವತೆರದಿಂದೆ | ಕೆರೆಗಳುತ್ತಮರಮನದಂತೆ ಗಂಭೀರವಿಮಲಂಗಳಾಗಿರ್ದುವಲ್ಲಿ ‖೧೦‖

ಶಾರದಾಸಿತಪಕ್ಷನಿಶೆಯಂತೆ ಬಹುಲತಾ | ರಾರಾಜಿವಿಬುಧಸಭೆಯಂತೆ ಸಾನಾಗಸುವಿ | ಚಾರಪರಿಶೋಭಿಲಂಕಾನಗರದಂತಿರೆ ಪಲಾಶವಂಶ್ಯೈಕವಸತಿ ‖ ವಾರಾಶಿಯಂತೆವೊಲನೇಕವಿಷವನಚರಾ | ಧಾರಮಸುರಾವತಿಯವೊಲ್ಸುರಭಿಮರುದತ್ಯ | ದಾರಪ್ರಚಾರಮೆಂದೆನಿಸಿ ತಾನಾಮಹಾರಣ್ಯಮೆಸೆಯುತ್ತಿರ್ದುದು ‖೧೧‖

ಮುಂದೆ ನಡೆದುದನಾಲಿಸ್ಯೆ ಮುನಿಸಮಾರ್ಗವಶ | ದಿಂದಾವನಾಂತರವನಾ ಕುಮರರ್ ಪುಗಲವರ | ಹಿಂದೆ ತರತರದಿಂದೆ ಚತುರಂಗಸೈನ್ಯವೈದುತ್ತಿರಲ್ಕದನೀಕ್ಷಿಸಿ ‖ ಬಂದರಾರಿಜರೆಂದುಭಯಮೆತ್ತು ನಿಂದಿಸುತೆ | ಮಂದಗಮನವನೊಡರಿಪಂಗನಾಲೋಕದೆಡೆ | ಲಂದಮಂ ಸೃಜಿಸಿದಬ್ಜೋದ್ಭವನನಿರದೆ ತಾವೋಡಿವರ್ಬೇಡಿತಿಯರು ‖೧೨‖

ಕೂಡಿಬಲದಿಂದೆನಡೆತರ್ಪ ಮುಖತುರಗಮಂ | ನೋಡಿನೆರೆಭಯಗೊಂಡು ವಿನಯದಿಂ ಕುಂಬಿಡುತೆ | ಬೇಡರಾವಿಪಿನದೊಳ್ಕಡುನಿಗ್ಗಮಂಗಳಂ ಮೃಗನಾಭಿಕೋಶಗಳನು ‖ ನೀಡೆ ಹೇರಳಮಾಗಿ ಕಯ್ಕೊಂಡು ಸೌಮಿತ್ರಿ | ಸಾಡೆಸಂಪ್ರೀತಿಯಿಂ ಬಿಡವವರನೊಡಗೊಂಡು | ಕಾತಿಂದೆಕಾಡಿಗೈದುತ್ತಿರಲ್ಕಾಂದದೊಂದುಪವನಂ ಕಂಗೊಳಿಸಿತು ‖೧೩‖

ಪೊಳೆವಗರಿದುರುಗಲಿಂದೊಪ್ಪುತ್ತೆ ಕಡಹದೊ | ಳ್ಕಳಕೀರ್ಪನವಿಲ್ಗಳಂ ಕಣ್ಗೆ ತಂಪೀವ ಶಾ | ದ್ವಲದೆ ಚರಿಸುತ್ತಿರ್ಪಹರಿಣಂಗಳಂ ಮರಮರಂಗಳೊಳ್ಸಣ್ಣನುಲಿವ ‖ ಪಲತೆರದಖಗಗಳಂ ಲೀಲಾಸರಂಗಳೊ | ಳ್ಬಳೆದಿರ್ಪಕಮಲಕಲ್ಹಾರೋತ್ಪಲಂಗಳಂ | ತಳೆದು ಪುಷ್ಪಾಮೋದಮಂ ತೀಡುವೆಳಗಾಳಿಯಿಂದದೇಂ ಬಗೆಗೊಂಡುದೋ ‖೧೪‖

ಲಿಕುಚಜಂಬೂ ಪನಸ ಖರ್ಜೂರಮಾತುಲುಂ । ಗಕ ಮೃದ್ವೀಕಾರಾಜ ಬದರಿಕಾದಾಡಿಮೀ । ವಕುಳ ಪಾಟಲ ಚಂಪಕಾಶೋಕ ಮಲ್ಲಿಕಾಯೂಥಿಕಾ ಮುಖ್ಯಮಾದ ॥ ಸಕಲರ್ತು ಸುಮಫಲಗಳಂತಳೆದ ತರುಲತಾ । ನಿಕರದಿಂದಲ್ಲಲ್ಲಿ ಪರಿವನಿರ್ಝರಿಗಳಿಂ । ಶುಕಭರದ್ವಾಜಾದಿ ವಿವಿಧವಿಹಗಂಗಳಿಂದುಪವನವು ದೇನೆಸೆದುದೊ ॥೧೫॥

ಆವುಪವನವನಿರದೆ ಮುಖಮಾಚಿಪ್ರಗತರ । ಲ್ಕಾವಾರ್ತೆಯಂ ಕೇಳ್ದು ಚರರ ಮುಖದಿಂ ಲಕ್ಷ್ಮ । ಣಾವರಜನಲ್ಲಿರ್ದ ಬೇಡರಂ ನೋಡಿ ರಮಣೀಯಮಾದುಪವನಮಿದು ॥ ಆವಭೂಪನದೆಂದು ಬೆಸಗೊಂಡೊಡವರೆಲ್ಲ । ಭೂವರನೆ ಕೇಳ್ವುದಿದು ಹೇಮಕೂಟಾಚಲದೊ । ಳಾವಸಿಪ ಯಕ್ಷರವಿಹಾರವನಮಿಲ್ಲಿನರರೆಡೆಯಾಟಮಿಲ್ಲೆಂದರು ॥೧೬॥

ಆವಚನಮಂ ಕೇಳ್ದು ಸೌಮಿತ್ರಿ ರಾಮನನು । ಭಾವದಿಂ ಪ್ರಗಲಾರ್ಪೆ ವೀಯಕ್ಷರುಪವನವ । ನಾವೆಂದು ಪವನಸುತ ಪುಷ್ಕಲ ಸುಬಾಹುಸುಮದಾದಿಪ್ರವೀರರೊಡನೆ ॥ ಭಾವಿಸದೆ ಪೊಕ್ಕಲ್ಲಿ ನಿಂದಣಂ ಚಲಿಸದಿ । ರ್ಪಾವರತುರಂಗಮಂ ಕಂಡೇನೊಡರ್ಚಿದೊಡ । ಮೇವೇಳ್ವನೊಂದಡಿಯುಮಂ ಮುಂದಕಿಡದಿರಲ್ಸುಮತಿಯೊಡನಿಂತೆಂದನು ॥೧೭॥

ಏನಿದೇನಿಮುಚಕೋದ್ಯಮೀ ಹಯಗತಿಸ್ತಂಭ । ಕೇನಿಹುದೊ ಕಾರಣಂ ಬೇಡರಿದು ದೇವತಾ । ಸ್ಥಾನಮೆಂದೊರೆದರಾವೇಗ್ಯೆವೆವೀಗಳೆನೆ ಸುಮತಿಯೆಲೆ ಶತ್ರುಘ್ನನೆ ॥ ಏನೊಂದುಮಂ ನಿಮಿತ್ತವನರಿಯೆನಾನಿದ । ಕ್ಕೀನಗಪ್ರಾಂತದೊಳ್ ಶೌನಕಾಶ್ರಮವೊಂದು । ನಾನಾಲಿಸಿರ್ದೆನೆನಲೆಲ್ಲರಲ್ಲಿಯೆ ಬಿಟ್ಟುಬಲವನೈದಿದರತ್ತಲು ॥೧೮॥

ಬಡಗೂಡಿಮಾರ್ಗದರ್ಶಿಗಳಾದಬೇಡರಿಂ । ಕಡುವಿಷಮಮಾದವನಗಿರಿದುರ್ಗಮಾರ್ಗಮಂ । ನಡೆದು ಪುಷ್ಕಲಮುಖ್ಯವೀರರೊಡವೆರೆದು ರಾಮಾನ್ವಜಂ ಮರಮರದೊಳು ॥ ಮಡಲಿಸಿದಸೋರೆಗಳಜೋಲ್ದ ತನಿಗಾಯ್ಗಳಂ । ಕಡುಸೊಂಪನಾಂತಪಸಲೆಯೊಳ್ ಭಯದಿಂದೆಮೆ । ಲ್ಕಿಡುತೆ ಮಲಗಿಹ ಮೃಗಂಗಳನೊಲ್ದುನೋಡುತ್ತ ಪೊಕ್ಕನಾ ಆಶ್ರಮವನು ॥೧೯॥

ನಿಜನಿಜವರೂಥದಿಂದವತರಿಸಿ ಲಕ್ಷ್ಮಣಾ | ನುಜಭರತಸುತಸುಮುದಮುಖವೀರವರರಖಿಲ | ವೃಜಿನಾಪಹರ ಹೋಮಪೂತಗಂಧಮಾಘ್ರಾಣಿಸುತ್ತಾ ಮಹಾಶ್ರಮದೊಳು || ಅಜಿನಮಂಧರಿಸಿ ಮಂಡಿಸಿ ದರ್ಭವಿಷ್ಟರದೆ | ಭಜಿಸುತಿರೆ ಶಿಷ್ಯಜನಮಗ್ನಿಯೊಳ್ಪೇಳುತಿ | ದ್ವಿಜಸದೃಶಮಾಹಾತ್ಮ್ಯನಿಧಿಯ ಶೌನಕಮುನಿಯ ಕಂಡಡಿಗೆ ಪೊಡಮಟ್ಟರು ||೧||

ಅಗ್ಗಳಿಕೆವೆತ್ತವರನಾಶೀರ್ವಚಿಸಿ ಮುನಿಪ | ನಗ್ಗಣಿಯನಿತ್ತು ಕುಶವಿಷ್ಟರದೆ ಕುಳ್ಳಿರಿಸಿ | ವೆಗ್ಗಳಿಸಿದೊಲವಿಂದೆ ಸತ್ಕಾರಮಂಗೈದು ತಿಳಿಗಣ್ಣೊಳೀಕ್ಷಿಸುತ್ತ || ಉಗ್ಗಡದವೀರರಹನೀವಿತ್ತ ಬಂದಿರೇ | ಕೊಗ್ಗಿಗೋಡೆಮ್ಮಿಂದದೇನಕ್ಕುಮೆನೆ ತಳೆಯ | ತಗ್ಗಿಸಿ ಸುಮಿತ್ರಾತನೂಭವಂಸನ್ನುತವಚೋವಿಭವನಿಂತೆಂದನು ||೨||

ಧರಣಿಸುರದಶಕಂಠಸಂಹಾರದುರಿತಮಂ | ಪರಿಹರಿಸಿ ಕೊಳಲಯೋಧ್ಯಾಧಿಪತಿ ರಾಮಚಂ | ದಿರನಶ್ವಮೇಧಕ್ಕೆ ದೀಕ್ಷೆಗೊಂಡಿರ್ದನಾ ಕುದುರೆ ಭೂಮಂಡಲವನು || ಚರಿಸಲ್ಕೆ ಬಿಟ್ಟಿರ್ದುದವರಕಾವಲ್ಗೆ ಬಲ | ಪರಿವಾರದೊಡನೆ ಬಂದಿರ್ದೆವಾವೀ ಗಿರಿಯ | ಪರಿಸರದೊಳಿರ್ದ ದಿವ್ಯೋಪವನದೊಳಗಾದುದದಕೆ ಗಾತ್ರಸ್ತಂಭನಂ ||೩||

ಅರಿಯದಣಮಾನದಕೆ ಕಾರಣಮನೀ ಮಹಿತ | ಚರಣಸನ್ನಿಧಿಗೆ ಬಂದಿರ್ದೆವೆಂದು ಬಿನ್ನವಿಸೆ | ವರತಪೋಧನನೊಡನೆ ಕಣ್ಮುಚ್ಚಿ ನಿಜಯೋಗದೃಷ್ಟಿಯಿಂದವಲೋಕಿಸಿ || ಪರಮನಂತಪರಮಂ ತಿಳಿದೆಲೈ ವೀರರಿರ | ನರಲೀಲೆಯಿಂ ರಾಮನಿರದಶ್ವಮೇಧಮಂ | ವಿರಚಿಸುವನಲ್ಲದಿನ್ನೊಂದಿಲ್ಲ ಕೇಳಿರಶ್ವಸ್ತಂಭಕಾರಣವನು ||೪||

ಜಲವನೊಂದಿನಮೆಲರನೊಂದಿನಂ ಭಕ್ಷಿಸು | ತ್ತಿಳೆಯುತಿನ್ನೊಂದು ದಿನಮಾಹಾರಮಂ ಕ್ರಮದೆ | ಪಲವುಸಂವತ್ಸರಂ ಸಹ್ಯಜಾತೀರದೊಳ್ ಸಾತ್ವಿಕನೆನಿಪ್ಪದೊರ್ವ || ಇಳೆಯುಮುರನುಗ್ರತಪಮಂಚರಿಸುತಿರಲನಿತ | ರೊಳಮಿತ್ತವಂಗಡಸಲಾ ಪುಣ್ಯವಿಗ್ರಹಂ | ಬಳಿಕಡರ್ದು ದಿವ್ಯಲೋಕದವಿಮಾನಮನಮರಲೋಕಮಂ ತಾಂ ಸಾರ್ದನು ||೫||

ಓಲಗಿಸುತೊಡನಪ್ಸರಸ್ತ್ರೀಯರಿರೆಮುರು | ಶೈಲತಟಪರಿಸರದೊಳತಿಮಾತ್ರಕುತುಕದಿಂ | ಖೇಲಿಸುತ್ತೊಲ್ದಿಂದಿನಂಜಾಂಬವತಿವೆಳ್ಜಲಕ್ರೀಡೆಯಂಮಾಡುತೆ || ಲೀಲೆಮಿಗೆ ಕಲಕಲಂಗೈಯುತಿರಲಾದೇವ | ತಾಲತಾಂಗಿಯರಂಗಲಿಪ್ತ ಮೃಗನಾಭಿಹಿಮ | ವಾಲುಕಾಘುಸೃಣಾದಿಸುರಭಿಪಂಕಿಲಮಾದುದಾ ನದಿಯ ವಿಮಲವಾರಿ ||೨೫||

ಆನದಿಯತಟದೊಳ್ತಪೋನಿಷ್ಠರಾಗಿರ್ಪ | ಮೌನಿಗಳನೇಕರಿಳಿದದರೊಳವಗಾಹನ | ಸ್ನಾನಕ್ಕೆ ಮೇಲಣಿಂಪರಿತಂದ ಸುರಭಿಕಲುಷಿತ ಜಲವನವಲೋಕಿಸಿ || ಏನಿದೇನಾವನಂ ಮೇಲೆ ತರುಣಿಯರೊಡನೆ | ತಾನುಪಕ್ರಮಿಸಿಹಾಂ ನೀರಾಟಕಾನುತಿವಿ | ಹೀನನಂ ಕುಳಿಹಿರಿಲ್ಲಿಂದೆನುತುಂದಕ್ಕೆಂದು ಶಿಷ್ಯರ್ಗ್ಗೆ ನೇಮಿಸಿದರು ||೨೬||

ಅವರೊಡನೆ ತಳರ್ದಲ್ಲಿಗಿನಿಸುದೂರದೆನಿಂದು | ದಿವಿಜಯುವತಿಯರೊಡನೆನಿರತಿಶಯ ದಿವ್ಯವೈ | ಭವದಿಂದೆ ನೀರಾಟದೊಳಗಿರ್ದಪ್ರಣ್ಯಾವಿಗ್ರಹನಾದ ಸಾತ್ವಿಕನನು || ಅವಲೋಕಿಸುತ್ತೆ ಕೈಯೆತ್ತಿಗುರ್ವಾಜ್ಞೆಯಂ | ವಿವರಿಸಿದೊಡಾವಚನಮಂಕೇಳ್ದುಮೇನೆಂಬೆ | ನವಲೇಪಭಾರದಿಂ ನಗುತವಂಸಡ್ಡೆಗೈಯದೆಮೆನಲಿಯುತ್ತಿರ್ದನು ||೨೭||

ನಿರುಕಿಸಿ ತದೀಯದುರಹಂಕಾರಮಂ ಬಳಿಕ | ಪರತರಬ್ರಹ್ಮಚರ್ಯರ್ತಪೋಮಹಿಮೆಯೊ | ಳ್ಗುರುಸದೃಶರೆಂದೆನಿಸಿದಾಸಿದ್ಧಮುನಿಶಿಷ್ಯರತಿಮಾತ್ರಕೋಪದಿಂದೆ || ದುರುಳನೀನಾಗುರಾಕ್ಷಸನೆಂದು ಶಪಿಸಿದೊಡ | ನರೆನಿಮಿಷದೊಳ್ ಸಕಲಸುರಲೋಕಸಂಪದಂ | ಮರೆಯಾಗೆ ಸಾತ್ವಿಕಂ ವಿನಯದಿಂದೆರಗಿಶಾಪಾವಸಾನಮಂಸರೆವನು ||೨೮||

ರಾಮನಧ್ವರಹಯಮನಧ್ವದೊಳ್ನಿಲಿಸಿನಿಂ | ರಾಮಕಥೆಯಂ ಕೇಳ್ದೊಡೀಶಾಪಮುಳವುದೆಂ | ದಾಮಹಾತಾಪಸರ್ಶಾಪಾವಸಾನಮಂ ಕೃಪೆಯಿಂದೆತಾಂಪೇಳ್ದರು || ರಾಮನಚರಿತ್ರೆಯಂ ಕೇಳ್ವವಾಂಛಿತದಿಂದೆ | ಯಾಮಿನೀಚರನವನವೃಕ್ಷ್ಯನಾಗಾಹಯಮನ | ನೀಮಹಾರಣ್ಯದೊಳ್ನಿಲಿಸಿರ್ಪನೆಂದಾಮಹಾತಪೋನಿಧಿನುಡಿದನು ||೨೯||

ಅವನೆಲ್ಲರುಂ ಕೇಳ್ದು ಬೆಕ್ಕಸಂಬಟ್ಟರಾ । ಸದುದಾರಮತಿದಾಶರಥಿಮುತ್ತಮಾಮುನಿಯ । ವದನದಿಂ ಸುಕೃತದುಷ್ಕೃತಕರ್ಮಫಲಗತಿಯನತಿಭಕ್ತಿಯಿಂದೆ ಕೇಳ್ದು ॥ ತದನುಜ್ಞೆಯಂ ಪಡೆದು ವಿನಯದಿಂದೆರಗಿ ತ । ತ್ಪದಯುಗಳಕಲ್ಲಿಂದೆಮರಳೆ ತೇರಡರಿತು ರ । ಗದಬಳಗೆಬಂದು ರಾಮೋದಂತಮಂ ಪೇಳೆನುತ್ತನಿಲಜಂಗೆಂದನು. ॥೩೦॥

ಒಡನಾತುರಂಗಮಂ ಕೆಲದೆನಿಂದನಿಲಜಂ । ಬಿಡದೆನಡೆದೊಂದುಮಂ ಶ್ರೀರಾಮಚರಿತೆಯಂ । ನುಡಿದುಪಟ್ಟಾಭಿಷೇಕಾಂತಮಾಗೆಲೆ ರಾಕ್ಷಸಾತ್ಮನಹ ಭೂದೇವನೆ ॥ ಅಡಿಗಡಿಗೆ ನಡೆಮಾಡಮಂ ನೀನಪ್ಸರಸ್ತ್ರೀಯ । ರೊಡಗೂಡಿರಾಮಚರಿತಶ್ರವಣಪುಣ್ಯದಿಂ । ನಡೆಪುಣ್ಯಲೋಕಕ್ಕೆ ಶಾಪಪರಿಹಾರಮಾಯ್ತೆಂದಾರೆಕಯ್ಯನೆತ್ತಿ ॥೩೧॥

ಸುರನಾರನಾರಿಯರ ವಿವಿಧೋಪಚಾರದಿಂ । ನಿರುಪಮಶೃಂಗಿರುಗಂಟೆಗಳರಣಿತದಿಂ ಮನೋ । ಹರಭೋಗಸಾಧನಗಳಿಂದೊಪ್ಪುತಿಹವಿಮಾನವನೇರಿಸುರಪಥದೊಳು ॥ ಮೆರೆಯುತುರುತೇಜದಿಂ ಸಾತ್ವಿಕನೆಲೈಹನುಮ । ವಿರಚಿಸಿದೆನೀನೆನಗೆಹಿತಮನಾಲಿಸಿ ರಾಮ । ಚರಿತೆಯಂಪಡೆದೆನಾಂಧನ್ಯತೆಯನೆಂದುಮುದದಿಂದೆ ಸಗ್ಗಕೆತಳರ್ದನು ॥೩೨॥

ಪರಿಹರಿಸಿತಾಹಯಸ್ತಂಭಮಂ ಡನಾಕುಮರೆ । ಚರಿಸಿತಾವ್ರುಪವನದೊಳೆಲ್ಲರುಮುದಂನೋಡಿ । ಪರತರಾದ್ಭುತಹರ್ಷರಸವಿಲಕ್ಷಣಭಾವರಾದರಾಶತುಘ್ನನು ॥ ಇರುಳೊಂದನಾವನಾಂತದೆಬೇಡರುಚಿತಸ । ತ್ಕರಣೆಯಿಂಕಳೆದುಸಂಪ್ರೀತಿಯಿಂದಲ್ಲಿಂದೆ । ಪೊರಮಟ್ಟನೊಡಗೂಡಿ ಸೇನೆಯಿಂ ನೆನೆಯುತ್ತರಾಮಚಂದ್ರಮನಡಿಯನು ॥೩೩॥

೨೦ ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೦ ಕ್ಕೆ ಪದ್ಯ ೭೯೦ ಕ್ಕೆ ಮಂಗಳಮಸ್ತು.

ಇಪ್ಪತ್ತೊಂದನೆಯ ಸನ್ಧಿ.

ಸೂಚನೆ ॥ ಸುರಥಂ ಮಖಾಶ್ವಮಂ ತಡೆದು ಕಟ್ಟಿಸಿ ತನ್ನ । ಪುರದೆ ಮುನಿ
ವೇಷದಿಂ ಬಂದ ಯಮನಿಂ ಪಡೆದು । ವರವನನುವಾದನೊಳಗಾಗೆದಂ
ಗದನಸಂಧಿಗೆ ಸೈನ್ಯದೊಡನೆರಣಕೆ ॥

ಬಳಿಕ ಕೇಳ್ ಮಹಾಮುನಿಕುಲಶಿರೋಮಣಿಯೆ । ಹಳುಹನುಮಂಕಳೆ
ದು ತನ್ಮಖತುರಗವುದಿತಿಕಂ । ಡಲಪಾತದಿಂ ಕುಂಡಲಾಖ್ಯೆಯಂತಳೆದಿರ್ದ
ರಾಜಧಾನಿಗೆಬರಲ್ಕೆ ॥ ಪೊಳಲಕಾವಲೊಳಿರ್ದ ಚರರದಂಕಂಡು ನೆರೆ । ಪೊಳೆ
ವದರಪಣೆಯೊಳಹ ಪೊಂಬಟ್ಟದಕ್ಷರಾ । ವಳಿಯುವಾಚಿಸಿ ಸುರಥಭೂಪಾಲನೆ
ಡೆಗೆ ಬಂದಿಂತು ವಿಜ್ಞಾಪಿಸಿದರು ॥೧॥

ಅರಸಕೇಳ್ ಶ್ರೀರಾಮನೆಂಬಯೋಧ್ಯಾಧಿಪತಿ । ತುರಗಮೇಧಂಗೈವನೆಂ
ದು ಬರೆದಿರ್ದಭಾ । ಸುರ ಕನಕಪಟ್ಟಮಂತಳೆದಿರ್ದ ಕುದುರೆ ಪೊಕ್ಕಿರ್ದುದೀ
ಪೊಳಲನೆನಲು ॥ಧರಣಿಪನದಂಕೇಳ್ದು ಹರ್ಷಾತಿಶಯದೊಳಂ । ಕುರಿಸಿದ
ವಿರಳಪುಳಕಭರದೆಕವಚಿತಕಳೇ । ವರನಾಗುದಶ್ರುಧಾರೋನ್ಮೀಲಿತಾಕ್ಷನಾ
ಗಿಂತು ಬಗೆದಂ ಮನದೊಳು ॥ ೨ ॥

ಇಂದೆನ್ನ ಪುಣ್ಯಲತೆ ಫಲಿಸಿದುದು ಬಹುಕಾಲ । ದಿಂದೆನ್ನ ಜಾನದೊ
ಳಗಿರುತಿರ್ದ ಪರಮಾತ್ಮ । ನೆಂದೆನಿಪ ರಾಮನಡಿದಾವರೆಯ ಕಾಂಬೆನೀಹಯ
ನಿರೋಧೋಪಾಯದೆ ॥ ಎಂದಾಜಗನ್ನಾಥನೆನಗೆ ಮೈದೋರುವನೊ । ಅಂದು
ನಾಂಬಿಡುವೆ ನೀಹಯವನೆಂದೆಣಿಸಿ ಚರ । ರಂದಿಟ್ಟಸುತೆ ನೀವದಂ ತಡೆದು
ಕಟ್ಟಿರೆಮ್ಮಶ್ವ ಶಾಲೆಯೊಳೆಂದನು ॥ ೩ ॥

ಒಡೆಯನಾಣತಿಯನಾ ಚರರಾಂತು ಶಿರದೊಳಗೆ । ನಡೆಯಲರಸಂ ಕು
ದುರೆ ಗಾವಲ್ಗೆ ಬಂದಿರ್ದ । ಕಡುಗಲಿಗಳೆನಿಪ್ಪರಂ ಕ್ಷಾತ್ರಧರ್ಮದಿಂ ಗೆಲ್ದು
ಕೈಯ್ಸೆರೆವಿಡಿವೆನು ॥ ಬಿಡೆನಾ ರಘೂದ್ವಹನೆ ಬಂದೆನಗೆ ದರ್ಶನಂ । ಗುಡುವ
ನ್ನಮೆಂದು ನಿಜಮಾನಸದೆ ಬಗೆದೊಡನೆ । ಪಡೆವಳರನಾಸ್ಥಾನಮಂಟಪಕೆ
ಬರಿಸಿ ತಾನಿಂತು ಶಾಸನವಿತ್ತನು ॥ ೪ ॥

ಸಮನಿಸಿಹುದೆಲೆಮಹಾವೀರರಿರ ಕೇಳಿರೈ| ಸಮರಕ್ಕೆ ಸಮಯಮಧ್ವರಹಯನಿರೋಧದಿಂ | ಸಮಗೊಳಿಸಿ ನಿಖಿಲರಣಸನ್ನಾಹದಿಂದೆಮ್ಮ ಚತುರಂಗ ವಾಹಿನಿಯನು || ಕ್ರಮದೆಪಾಳಯಗೊಳಿಸುವುದು ಪೊಳಲಪೊರಗೆ ವಿ | ಕ್ರಮವಂತರಾಗಿ ನೀವೆನ್ನ ಪುಟಭೇದನಾ |ಕ್ರಮಣಕ್ಕೆತರ್ಪ ಪರಸೇನೆಯಂಗೆಂಟಿನೊಳ್ತಡೆದು ಕಾದುವುದೆಂದನು ||೫||

ದಳಪತಿಗಳಾಶಾಸನವನಾಂತು ಶಿರದೆಶತ | ದಳಜಾಂಡವೊಡೆವಂತೆರಣಭೇರಿಯಂ ಪೊಯಿಸೆ | ದಳದುಳನೆ ಭೂಮಿಧರಗುಹೆಗಳಂ ಪೊರಮಡುವ ಕಂಠೀರವಂಗಳಂತೆ || ಕಳಹಸನ್ನದ್ಧರಾಗಾಪೊಳಲಪೊರಗಿರ್ಪ | ಕಳದೊಳೆಲ್ಲಾಭಟರ್ನೆರೆದರುದ್ಯದ್ವಾದ್ಯ | ಕಳಕಳದಿನೆಣ್ದೆಸೆಯುಮುರೆಮೊಳಗೆ ಪೊರಮಟ್ಟು ತಮ್ತಮ್ಮ ಮನೆಗಳಿಂದೆ ||೬||

ವರಮುನಿಯೆಕೇಳಾಗಳವನಿತಲಮೆಲ್ಲಮಂ | ಚರಿಸಿ ನಿಜದೂತರ್ಕೈತಂದುಹರಿಭಕ್ತನಹ | ಸುರಥಭೂಪತಿಯರಾಷ್ಟ್ರದೊಳೆಲ್ಲರುಂ ವಿಷ್ಣುಭಾಗವತರೆನಿಸಿರ್ಪರು || ಆರುಮಲೇಂ ಬಹಿರಿಲ್ಲದಾರುಮವರೊಳಗೆಮ್ಮ | ಪುರಕೆಂದು ಬಿನ್ನವಿಸೆಕೇಳ್ದದಂ ಯಮನಹಹ | ಪರಿಕಿಸುವೆನಿದನೆಂದು ಮುನಿವೇಷಂದಿ ಬಂದನಾ ಕುಂಡಲಾಖ್ಯಪುರಿಗೆ ||೭||

ಆಮಹಾನಗರದೊಳ್ಧೃತಧೌತವಸನರಂ | ತಾಮರಸನಯನನಾಮಸ್ಮರಣನಿರತರಂ | ನೇಮದಿಂ ಸ್ವಸ್ವಧರ್ಮಾಚರಣನಿಪುಣರಂ ಸತ್ಯಮಂಬಿಡದವರನು || ಕಾಮಾದಿವೈರಿಷಡ್ವರ್ಗಮಂಗೆಲ್ದರಂ | ವೈಮುಖ್ಯಮುಳ್ಳರಂಪಾಪದೊಳದಾವಗಂ | ಸಾಮುಖ್ಯಮುಳ್ಳರಂ ಸುಕೃತದೊಳ್ಹರಿಭಕ್ತರಾದಖಿಲಪುರಜನರನು ||೮||

ಎಲ್ಲಿಯುಂ ಶ್ರೀವಿಷ್ಣುಪಾರಮ್ಯಸಂಕಥೆಯು | ನೆಲ್ಲಿಯುಂ ಗೋವಿಂದನಾಮಸಂಕೀರ್ತನೆಯು | ನೆಲ್ಲಿಯುಂ ನಳನಲೋಚನನ ಪುಣ್ಯಚರಿತಪ್ರಬಂಧಪಾರಾಯಣವನು || ಎಲ್ಲಿಯುಂ ಶ್ರೀಕಾಂತನುತ್ಸವವಿಜೃಂಭಣೆಯು | ನೆಲ್ಲಿಯುಂ ಶ್ರೀಜಗನ್ನಾಥನಾರಾಧನೆಯು | ನೆಲ್ಲಿಯುಂ ನಾರಾಯಣಧ್ಯಾನಮಂ ನೋಡಿ ಕಾಲನಚ್ಚರಿವಟ್ಟನು ||೯||

ಬರುತಿರ್ದ ಪರಮಯೋಗೀಂದ್ರನಂ ಸಭೆಯೊಳ । ರ್ದರಸನೀಕ್ಷಿಸಿದೊಡನೆ ಗದ್ದುಗೆಯನುಳಿದೆದ್ದು । ಗುರುಭಕ್ತಿಯುಕ್ತನಾಗಿದಿರ್ವಂದುವಂದನಂಗೈದರ್ಘ್ಯಪಾದ್ಯವಿತ್ತು ॥ ಅರಮನೆಗೆ ಕರೆತಂದು ಮಣಿಪೀಠದಲ್ಲಿ ಕು । ಳ್ಳಿರಿಸಿಮುನಿನಾಥನಿಮ್ಮಡಿಯನಾನರಿಯೆನೊ । ಲ್ದರುಪಮೇಳ್ಕಂ ನಿಮಗದಾವುದೆನ್ನಿಂದಪ್ಪುದೆಂದೆರಗಿ ಬೆಸಗೊಂಡನು ॥೧೦॥

ತರಣಿಜನದಂಕೇಳ್ದು ಭೂಪಾಲಕೇಳೆನ್ನ । ನೊರೆವರೈ ಧರ್ಮಮುನಿಯೆಂಪುಪರತರಧರ್ಮ । ಪರನೆಂದುಕೇಳ್ದು ನಿನ್ನಂನೋಡಿ ನಾಡೆಕೊಂಡಾಡಲಾಂ ಬಂದೆನೆನಲು ॥ ಅರಸನೆಲೆಮುನಿಪಮಾಮಕಪ್ರಾಕೃತಪುಣ್ಯ । ಪರಿಪಾಕದಿಂದೆ ನಿಮ್ಮಡಿದಾವರೆಯಕಂಡು । ನೆರೆಧನ್ಯನಾದೆನಾಂ ನಿಮ್ಮಪದಧೂಳಿಯಿಂ ಪೂತಮಾದುದೆನ್ನರಮನೆ ॥೧೧॥

ಪರಮತತ್ತ್ವಾರ್ಥೋಪದೇಶದಿಂ ಯೋಗಿಶೇ । ಖರನೀವನುಗ್ರಹಿಸಲೆನ್ನನೈತಂದಿರೆ । ನ್ನರಮನೆಗೆನುತ್ತೆ ನಾನೆಣಿಸಿದಪೆನುತ್ತುಂಗಮೋಕ್ಷಸೌಧವನಡರಲು ॥ ಹರಿಭಕ್ತಿ ಮುಖ್ಯಸೋಪಾನವೆಂದೆನುತನೇ । ಕರಮುಪದೇಶಕೇಳ್ದಿಹೆನದಂ ದೃಢೀಕರಿಸಲಾ । ಹರಿಮಹಿಮೆಯುಂ ಕೇಳಲೆಳಸಿದಪೆನೊಲ್ದೊರೆವುದೆನಗೆಂದು ಬೆಸಗೊಂಡನು ॥೧೨॥

ಸೂರಸುತನಾನುಡಿಯಕೇಳ್ದು ನಸುನಗುತೆಲೈ । ಭೂರಮಣ ಕೇಳ್ಮೋಕ್ಷಮೆಂದೊಡೇಂ ತಾನದಕೆ । ಕಾರಣಂ ಹರಿಭಕ್ತಿಯೆಂದೊಡೇಂ ಹರಿಮುಖ್ಯರೆಲ್ಲರುಂ ಕರ್ಮವಶರು ॥ ನಾರಾಯಣಂ ಬಳಲುತಿರ್ದಪಂನಾನಾವ । ತಾರಗಹನದೊಳಂಬುಜೋದ್ಭವಂ ಸೃಷ್ಟಿಕ । ರ್ತಾರನಾಗಿಹನಿಂದ್ರನಮರಪತಿಯೆನಿಸಿಹಂ ತಮ್ತಮ್ಮ ಕರ್ಮದಿಂದೆ ॥೧೩॥

ಕರ್ಮಮೇಕಾರಣಂ ಸಕಲಕ್ಕಮದರಿಂದೆ । ಧರ್ಮಮೈ ನಿನಗೆ ಯಜ್ಞಾದಿಕರ್ಮಂಗಳಂ । ನಿರ್ಮಲಾಂತಃಕರಣದಿಂದೊಡರ್ಚುವುದು ಬೆಳ್ವಸವನದರಿಂದಿಹದೊಳು ॥ ನಿರ್ಮುಕ್ತನಾನಾವಿಧಕ್ಲೇಶನಾಗಿನೀಂ । ನರ್ಮಪರನಾಗಿಸುರವಾರಸುಂದರಿಯರೊ । ಳ್ಕರ್ಮಮಂ ಪರದೊಳನುಭವಿಸುವೈ ಬಿಡುಬಿಡೀಮೂಢಭಕ್ತಿಯನೆಂದನು ॥೧೪॥

ಆನುಡಿಯಂಕೇಳ್ದು ಭೂವರನಿದೇಂಸೋಜಿಗಂ | ಮಾನಿಯೆನಿಸಿರ್ಪ
ವಂ ಮಹನೀಯನಂ ಸಚ್ಚಿ | ದಾನಂದರೂಪನಂ ನಿತ್ಯನಂದೇವಾದಿದೇವನಂ
ಶ್ರೀಹರಿಯನು || ತಾನಿಂತು ಸಾಮಾನ್ಯಸುರರಂತೆ ಕರ್ಮಕ್ಕ | ಧೀನನಾಗಿಹನೆಂ
ದು ಬೋಧಿಸುತ್ತಿಹನೆಂದು | ಮಾನಸದೊಳಸಹಿಷ್ಣುಭಾವಮಂ ತಳೆದಾತನಂ
ನೋಡುತಿಂತೆಂದನು ||೧೫||

ಅಳಸೋಗವನೊಡರಿಸುವ ಕರ್ಮಮಾರ್ಗವನೆನಗೆ | ತಿಳುಪುವರೆ ತಿಳಿದ
ರೆಂದೆನಿಸಿರ್ಪನೀವಿಂತು | ಟಳವುವಲ್ಲದೆ ಕರ್ಮಫಲಮಾದನಾಕಾದಿಲೋಕಗತಿ
ತಾಂ ನಿಲ್ವುದೆ || ಕಳಲದಿಹುದೊಂದೆ ಹರಿಭಕ್ತಿಫಲಮಾದ ಕೇ | ವಳಚಿದಾ
ನಂದಾತ್ಮಗತಿಬುಧರ ಮತವಿದೀ | ಪ್ರೊಳಲೊಳರಲಾಗದಲೆ ಹರಿಭಾಗವತರಲ್ಲ
ದವರೆಂದು ಮೊಗದಿರುಹಲು ||೧೬||

ಎಡೆಯೊಳರ್ದರಸಾಳ್ಗಳಾನಿಮಿಷದೊಳ್ಬಂದು | ಫಡಫಡಾ ಮುನಿಯೆ
ನೀಂ ದ್ವಿಜನಪ್ಪೆ ಮುಟ್ಟೆಸಾಂ | ನಡೆರಾಜಧಾನಿಯಂಬಿಟ್ಟೆಂದು ಗಜರಿದೊಡೆ
ಪಹಿಲದೊಳ್ಜವರಾಯನು || ಪಿಡಿದಪಾಶಾಯುಧದ ಕರದಕಾರ್ಮುಗಿಲಂದ |
ದೊಡಲನವರತ್ನಮಕುಟವನಾಂತ ಶಿರದಕೇ | ಸುಡೆಯ ನಿಜರೂಪಮಂತೋ
ರಲೊಡನೆಲ್ಲರುಂ ಬೆರಗಾಗಿ ಭಯಗೊಂಡರು ||೧೭||

ಸುರಥನಂತಹವಿವ್ಯತೇಜೋವಿಶೇಷದಿಂ | ಮೆರೆವ ಯಮಧರ್ಮನಂಕಂ
ಡು ಕಯ್ಮುಗಿದೆಲೈ | ಸುರವರನೆ ಪರಮಾದ್ಭುತಂ ನಿನ್ನ ಚರಿತಮೆಂದಡಿಗೆರ
ಗಲಾ ಕಾಲನು || ಅರಸ ನಿನ್ನಯ ಮನೋನಿಶ್ಚಯವನರಿಯಲ್ಕೆ | ಧರಿಸಿಮು
ನಿವೇಷಮಂ ಬಂದೆನಾಂ ಶ್ರೀಹರಿಯ | ಚರಣದೊಳ್ನಿನಗಿರ್ಪ ಭಕ್ತಿಗಾಂಮೆ
ಚ್ಚಿ ವರಮೀವೆನೊಲ್ದಿರೆಯೆಂದನು ||೧೮||

ಭೂಮಿಪನದಂಕೇಳ್ದು ನಿನಗಿರ್ಪೊಡಿಂತು ಸು | ಪ್ರೇಮವೆನ್ನೊಳಗೆ
ಕಮಲಾಕ್ಷಸ್ವರೂಪನಹ | ರಾಮನೆನಗಾವಂದು ತಾನೆ ಮೈದೋರುವನೊ
ಅನಿರುದ್ಧಕ್ಕೆ ತಾನು || ಕ್ಷೇಮದಿಂದೀಮಹೀತಲದೊಳಿರ್ಪಂತೆಲೆ ಮ | ಹಾ
ಮಹಿಮನೀಡುವುದು ನೀನೆನಗೆ ವರವನೆನೆ | ಧಾಮನಿಧಿತನಯನೊಲ್ದಂತೆಗ
ಲೆಂದು ವರವಿತ್ತೊಡನೆ ಮೈಗರೆದನು ||೧೯||

ಆರಾಜಧಾನಿಯಂ ಕಂಡತ್ತ ಸೌಮಿತ್ರಿ । ದೂರದೊಳ್ ತಡೆದು ನಿಜಚತುರಂಗಮಂ ನಿಂದು । ಧೀರಧೀಶಾಲಿಯಂ ಸುಮತಿಯಂ ಮುಂದೆಕಾಣುತ್ತಿರ್ಪ ರಾಜಧಾನಿ ॥ ಆರದಿದನಾಳ್ವನಾರೆಂದು ಬೆಸಗೊಂಡೊಡವ । ನೀರಾಜಧಾನಿಕುಂಡಲವೆಂಬುದರಸಕೇ । ಳ್ಶ್ರೀರಾಮಭಕ್ತನೆನಿಸಿಹ ಸುರಥನೆಂಬನೃಪಮೌಳಿಮಣಿಯಾಳ್ವನಿದನು ॥೨೦॥

ಧೀರನತಿಶೂರನಾನೃಪತಿಯೆಂದರುಪುತ್ತಿರೆ । ಚಾರರ್ಕೈತಂದನಿತರೊಳ್ಗೊಡೆಯುಮುಂದಿವಳೊ । ತೋರುತಿರ್ಪೀನಗರದೊಳಗಿರ್ಪಸುರಥನೆಂದೆಂಬ ಪೃಥಿವೀಶನೆಮ್ಮ ॥ ವಾರುವವನಿರದೆ ತಾಂ ತಡೆದು ರಘುಜಹಯದಿಂ ರ । ಣಾರಂಭಪರನಾಗಿನಿಸ್ಸಂಖ್ಯರಹ ಮಹಾ । ವೀರರಿಂದೊಡಗೂಡಿಪರಿಮಿತಸೇನೆಯುಂ ಸನ್ನಾಹಗೊಳಿಸಿರ್ಪನು ॥೨೧॥

ಇಂತೆಂದುಬಿನ್ನವಿಸೆ ಸುಮತಿಯಂನೋಡಿ ರಘು । ಕಾಂತಾನುಜಂಸಚಿವವರನೆ ಪೇಳ್ರಾಯ । ನೆಂತುತೋರ್ಪಂ ರಾಮಭಕ್ತನೆನಿಸಿದೊಡೆಮ್ಮಲ್ಲಿ ತಾನವಿನಯಮನು ॥ ಮುಂತೀಗಳೆಮಗೆಕರ್ತವ್ಯಮೇನೆನೆ ಸುಮತಿ । ಚಿಂತೆಯೇನಲ್ಲಿಗಟ್ಟುವುದು ತದಭಿಪ್ರಾಯ । ಮಂ ತಿಳಿಯಲೊರ್ವದೂತನನೆಮಗೆ ಕರ್ತವ್ಯಮೆಂದು ವಿಜ್ಞಾಪಿಸಿದನು ॥೨೨॥

ಬಳಿಕ ರಾಮಾನುಜಂ ವಾಲಿಸುತನಂ ನೋಡಿ । ತಳರ್ವುದಂಗದನೆನಿಂ ಸುರಥಭೂವಲ್ಲಭನ । ಬಳಿಗೆ ರಘುವೀರಪ್ರತಾಪಮಹಿಮಂಗಳನವಂಗೆ ನಯಮಾರ್ಗದಿಂದೆ ॥ ತಿಳುಪಿವಶನಹನೊ ಮೇಣ್ರಣಕೊದಗುವನೊ ಎರಡ । ರೊಳಗೊಂದನರಿದು ಬಾರೆಂದೊಡಾನೇಮಮಂ । ತಳೆದುತ್ತಮಾಂಗದೊಳ್ಕೆಲ್ವರಂ ಯೋಧರನೊಡಂಗೊಂಡವಂ ನಡೆದನು ॥೨೩॥

ತೋರುತ್ತೆ ಬೇಹಿನಂಕಧ್ವಜವನಾಕ್ಷಣಮೆ । ತಾರೇಯನೊಳಪೊಕ್ಕು ಕಟಕಮಂ ಸುರಥಭೂ । ಮೀರಣನೆಡೆಸಾರಲವನೆಲೆಕಪೀ ನೀನದಾರಿಲ್ಲಿಗೇಕೆ ಬಂದೆ ॥ ನೇರನರುಪುವುದಂಜಬೇಡೆಂದೊಡಾಮಹಾ । ವೀರನೆಲೆ ನೃಪವಾಲಿಸುತನಂಗದಾಖ್ಯನಾಂ । ಶ್ರೀರಾಮಸೇವಕಂ ದೂತಕಾರ್ಯಕ್ಕೆನ್ನನಟ್ಟಿದಂಶತ್ರುಘ್ನನು ॥೨೪॥

ಅರಸನಿಂ ರಾಮನಂ ನರನಾಗಿ ಧರೆಯೊಳವ | ತರಿಸಿದಚ್ಯುತನೆಂದು ಮತ್ತೆ ಬಹುಕೋಟಿನಿಶಿ | ಚರರೊಡನೆ ದುರುಳನಾಗಿರ್ದ ದಶಕಂಠನಾಯುವ ನೊರಸಿದಾತನೆಂದು ‖ ಅರಿಯೆಯಾ ನೀನಾತನಧ್ವರತುರಂಗಮವ | ನಿರದೆ ತಡೆವರೆ ಮೌಢ್ಯದಿಂದಹಂಕಾರದಿಂ | ನರಿಗೆ ಮೃಗರಾಜನೊಡನೆಣೆಯಾಟವೇ ಸಾಕು ತೆಗೆ ನಿನ್ನ ದುರ್ಮತಿಯನು ‖೨೫‖

ಬೇಗನೊಪ್ಪಿಸಿ ನಿನ್ನ ಸಾಮ್ರಾಜ್ಯಮುದ್ರೆಯುಂ | ಯಾಗಾಶ್ವದೊಡನೆ ಶತ್ರುಘ್ನರಾಯಂಗೆ ಶರ | ಣಾಗತಂ ನೀನಪ್ಪೆಯೊ ಮೇಣ್ಮಹೀಶಕೇಳಂತಿರ್ಕೆ ಶತ್ರುಘ್ನನು ‖ ವೇಗಾತಿಶಯಶಾಲಿಯಾದ ಪುಷ್ಕಲನ ಶರ | ವ್ರಾಗದಿಂ ಹತನಾಗಿ ರಣರಂಗಮಂ ಚಕದೊ | ಳ್ಕೀಗಾಡಿ ಹರಣಮಂ ಮಲಗುವೆಯೊ ಪೇಳೆಂದು ನಯ ಭಯಂಗಳಂ ತೋರ್ದನು ‖೨೬‖

ಸೆಡೆಯದಾಕಾಸುರಥನೆಲೆ ವನೇಚರನೆನೀಂ | ನುಡಿವುದೆಲ್ಲಾ ದಿಟಂ ತೋಳ್ವಲರಧರ್ಮವಿದು | ಪಿಡಿವುದುಂ ಮಖಹಯವನಾಜಿಯೊಳ್ಪೊಡೆದಾಡುವುದುಮೀ ನಿಮಿತ್ತದಿಂದೆ ‖ ಬಿಡುವನುಂ ಕುದುರೆಯಂ ರಾಮಾನುಜಂಗೆ ಭಯ | ಪಡುವನುಂ ತಾನಲ್ಲ ಪುಷ್ಕಲ ಪ್ರಮುಖರಹ | ಕಡುಗಲಿಗಳೆನಿಪವರನೆಲ್ಲರಂ ಯುದ್ಧದೊಳ್ಗೆಲ್ದಿಡುವೆನಾಂ ಸೆರೆಯೊಳು ‖೨೭‖

ಎನಲಂಗದಂ ಕೇಳ್ದು ಸುರಥನಿನಗೇಂ ಮರು | ಳ್ತನವೊ ಕೋಪದೊಳರ್ಪ ಕೂರ್ಮನಂತಿಹೆಗಾಂಪ | ತನವೊ ಮೇಣ್ಲವಣವಿದ್ಯುನ್ಮಾಲಿಮೊದಲಾದನೇಕಪರಿಪಂಥಿಗಳನು ‖ ಹನನಗೈದಿರ್ಪ ಶತ್ರುಘ್ನನಂ ಸೆರೆವಿಡಿವೆ | ನೆನುತಿರ್ಪ ನಿನ್ನ ಮಾತಂತಿರ್ಕೆ ನುಡಿವೊದ | ಲ್ಮನಿದೊಡೆಯೋರ್ವಂ ಪುಷ್ಕಲಪ್ರಮುಖವೀರರೊಳ್ಕೀನೆಲ್ಲಿಹುದುಗಿಕೊಳ್ವೆ ‖೨೮‖

ಉರುಪಿದನೊ ಲಂಕೆಯಂ ಕ್ಷಣಮಾತ್ರದೊಳಗಾವ | ನೊರಸಿದನೊ ಮತ್ತಾವನಕ್ಷನಾಯುವನಾವ | ನಿರದೋಷಧಿಯ ಮಹಾಗಿರಿಯನಲ್ಲಾಡಿದನೊ ಸುತ್ತಿನಿಡುವಾಲದಿಂದೆ ‖ ಪರಮಪೂರುಷನಾದ ರಾಮಚಂದ್ರನ ಮುಖ್ಯ | ಚರಣಭಕ್ತನೊ ಇನ್ನದಾವನಾ ಹನುಮನಂ | ಧುರದೆಗೆಲಬಲ್ಲನೆಂಬ ಭಟನವನಿಯೊಳುಂಟೆ ನೀನಾವಗುಂಗುರಣಿಕೆ ‖೩೦‖

ವೀರಮಂಡಲಮುಮೆಳ್ವುಣಿಯೆನಿಪ ಪುಷ್ಕಲಕಂ । ಮಾರನಂ ಸಮರ ಜೃಂಭಿತಮದಂ ಸುಮದನುಂ । ಮಾರಹರನೊತ್ತಾಸೆಯಿಂದೆ ದುರ್ಜಯನಪ್ಪ ವೀರಮಣಿಭೂಪಾಲನುಂ ॥ ದಾರುಣಪರಾಕ್ರಮಂ ಚಕ್ರವತಿಮೊದಲಹವು । ಹಾರಥರ್ಕ್ಮಳದರುಣನಯನರಪ್ಪನಿತರೊ । ಳ್ಬೀರೆಗತಿ ನಿನಗುಂಟೆ ಲಕ್ಷ್ಮಣಾನುಜನಡಿಗೆ ಪೊಡಮಡುವುದೊಂದು ಹೊರತು ॥೨೦॥

ಆದರಿಂದೆ ನೀನೆನ್ನ ನುಡಿಯಂ ಕೇಳ್ದಶ್ವಮಂ । ಧದ ಕುದುರೆಯಂ ಬಿಟ್ಟು ರಾಮಚಂದ್ರಾನುಜನ । ಪದದೊಳರ್ಪಿಸಿ ನಿನ್ನ ಸಾಮ್ರಾಜ್ಯಮುದ್ರೆಯಂ ಸಕಲಸಂಪತ್ತಿಯೊಡನೆ ॥ ಪದುಳದಿಂ ರಘುವರನನುಗ್ರಹಕೆ ಪಾತ್ರನ । ಪ್ಪುದು ಯುಕ್ತಮೆನೆ ಸುಗಥನೆಲವೊ ನಿಮ್ಮೆಲ್ಲರಂ । ಕದನದೊಳ್ಗೆಲ್ದು ಸೆರೆಯೊಳಗಿಡುವೆನಲ್ಲದೆ ಮಖಾಶ್ವಮಂ ಬಿಡೆನೆಂದನು ॥೨೧॥

ಸುರಥಸುತರೀನುಮಾನುಡಿಗೆ ಮುಳಿದರಸ ತಾ । ನೆಱಿಯುದನ್ಯರನುಡಿಯುಮಂ ಕೇಳದಿಹ ಮೂರ್ಖ । ಪುರುಷರಂ ತಿಳಿಯಿಪುದಸಾಧ್ಯಮಾಯೋಧನಕ್ಕನುವಾಗಿರೆಂದು ನುಡಿವು ॥ ಉರುವೇಗದಿಂದೆ ನಿಲದಲ್ಲಿಂದೆ ನಿಮಿಷದೊ । ಳ್ತುರುವಿನಿಂ ಬಿಟ್ಟ ಮಾರ್ಗಣದಂತೆ ರಾಮಚಂ । ದಿರನನುಜನೆಡೆಗೆ ಬಂದೆಂಗಿ ನಡೆದುದನೆಲ್ಲಮಂ ಬಿನ್ನಪಂಗೈದನು ॥೨೨॥

ಭೂರಿದೇವಂ ರಿಪುಂಜಯನಂತು ಚಂಪಕಂ । ಶೂರನಹಮೋಹಕಂ ಬಲಮೋದನಂತು ದು । ರ್ವ್ವಾರರ ಪ್ರತಾಪಿ ಹರ್ಯ್ಯಕ್ಷಂ ಸುತಾಪನಂ ಮತ್ತೆ ಸಹದೇವನೆಂಬ ॥ ಈರಯ್ವರಾಸುರಥಭೂಪತಿಯ ತನುಜಾತ । ರೇರಿ ನಿಜ ನಿಜರಥವನುತ್ಸಾಹದಿಂ ತಳೆದು । ಸಾರಾಯುಧಂಗಳಂ ಸನ್ನದ್ಧರಾಗಿ ರಣರಂಗಕ್ಕೆ ಪೊರಮಟ್ಟರು ॥ ೨೩ ॥

ಬಂದುಬಂದೊದಗಿದುವು ಕಳದಲ್ಲಿ ದೆಸೆದೆಸೆಗ । ಳಿಂದೆ ಪಲವಂಗಡದ ಮೋಹರಗಳಾಕಳನ । ಪಿಂದೆಸೆಯೊಳೊಪ್ಪಿದುವು ಸೈನಿಕರಮಾಸಕ್ಕೆ ಪಲವು ಗೂಡಾರಂಗಳು ॥ ಸಂದಣಿಸಿ ಚರಿಸಿದುವು ಬಲದಮುಸ್ತೈದುಗಳ । ನೊಂದಿಗೊಂದಿಗೆ ಪೇರ್ದಪಲವೊಂಟೆಬಂಡಿಗ । ಳ್ಕುಂದಿಲ್ಲದಂತಿಟ್ಟುವಲ್ಲಲ್ಲಿ ಭಕ್ಷ್ಯಪಾನೀಯಂಗಳಂಗಡಿಗಳು ॥೨೪॥

ಓಲಗವನಾ ಬಳಿಕ ಬೀಳ್ಕೊಟ್ಟು ಸುರಥಭೂ | ಪಾಲನಾಹವಸಮುತ್ಸಾಹದಿಂ ನಡೆದಾಯು | ಧಾಲಯಕೆ ಕೈದುಗಳ ನರ್ಚಿಸಿ ಯಥಾವಿಧಿಯೊಳಾಂತು ಬಲ್ಗೈದುಗಳನು ‖ ಮೌಳಿಯೊಳ್ಮಣಿಮಕುಟಮಂತಳೆದು ವಜ್ರಕವ | ಚಾಲಂಕೃತಾಂಗನಾಗೇರಿತ್ತೇರಂ ಮನದೊ | ಳಾಲೋಚಿಸುತೆ ತಾನೆ ರಾಮಚಂದ್ರಂ ಬರ್ಪುಪಾಯಮಂ ಪೊರಮಟ್ಟನು ‖೩೪‖

೨೧ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೧ಕ್ಕೆ ಪದ್ಯ ೯೨೪ಕ್ಕೆ ಮಂಗಳಮಸ್ತು.

ಇಪ್ಪತ್ತೆರಡನೆಯ ಸನ್ಧಿ.

:o:

ಸೂಚನೆ|| ಸೆರೆವಿಡಿದು ಚಂಪಕಂ ರಥದೊಳಗೆ ಬಂಧಿಸ | ಲ್ಭರತಸುತನಂ ಪವನ ಸಂಭೂತನತಿಭಯಮಂ | ಕರರಣದೆ ಚಂಪಕಕುಮಾರನಂಗೆಲ್ದಾತನಂ ಬಿಡಿಸಿ ತಾಂ ತಂದನು ||

ತಾಪಸಕುಲೋತ್ತಂಸ ಬಳಿಕ ಕೇಳ್ಳೈ ಸ್ವಾಮಿ | ತಾಮ್ರಪುತ್ರನಂಗದನ ಮುಖದೆ ಕೇಳ್ದೊಡೆ ಸುರಥ | ಭೂಪನಭಿಸಂಧಿಯಂ ಯುದ್ಧಸನ್ನಾಹಕ್ಕೆ ಪಡೆವಳರ್ಗಾಜ್ಞಾಪಿಸೆ || ಆಪರಾಕ್ರಮಿಗಳರಿಸೈನ್ಯಕಿದಿರೆನಿಸಿ ರಣ | ಭೂಪರಿಧಿಯೊಳ್ತಮ್ಮತಮ್ಮ ಸೈನ್ಯಂಗಳಂ | ಕೋಪದಿಂಗರ್ಜಿಸುತೆನಿಲಿಸಲದು ಬೇರೊಂದುಕಡಲೆಂಬವೋಲ್ತೋರಿತು ||೧||

ಪಡೆವಳರ್ತಮ್ಮತಮ್ಮಧಿಪತಿಗಳಾಜ್ಞೆಯಂ | ಪಡೆದಂಕವರೆಯನಾಯೋಧನಾರಂಭಕ್ಕೆ | ಪೊಡೆಯಿಸಲ್ಕಿತ್ತಂಡದಾಳ್ಗಳಾಂತತ್ತಿತ್ತ ಪಲವಡೆಗಳಾಗಿ ನಿಂದು || ಪಿಡಿದಬಲ್ವಿಲ್ಗಳಂ ಟಂಕಾರಶಬ್ದಮಂ | ನುಡಿಯಿಸುತೆ ಕತ್ತಿಗಳನೊಡನೊಡನೆ ಝಳಪಿಸುತೆ | ಫಡಫಡಾನಾಂಮುಂದೆ ತಾಂ ಮುಂದೆನುತ್ತೆನೆರೆಗರ್ಜಿಸುತೆ ಮುಂಬರಿದರು ||೨||

ಆನೆಗಳ ಘೀಂಕಾರರರಭಸಕ್ಕೆ ಚಟುಲಹಯ | ಸೇನೆಯುದ್ಧತಖುರಪುಟಾರವಾಟೋಪಕೆ ರ | ಥಾನೀಕದುರುಚಕ್ರಚೀತ್ಕೃತಿಗೆ ಪಟುಭಟರಸಿಂಹರವದಾರಭಟಿಗೆ || ಏನೆಂಬೆನಾಗಳೆಣ್ದೆಸೆಮೊಳಗಿತಮುನು ಕುಂ | ಭೀನಸಾಧೀಶ್ವರಂ ಕಣ್ಮುಚ್ಚಿದಂದಿಜ್ಮ | ಹಾನಾಗತತಿ ಬೆಚ್ಚಿತೇನೆಂಬೆನೇಳುಂ ಕುಲಾದ್ರಿಗಳ್ಕಂಪಿಸಿದುವು ||೩||

ನೆರೆಸಂದಾಯುದ್ಧಮಂ ನೋಡಲ್ಕೆ ತವಕದಿಂ | ಸುರಸಿದ್ಧಗಂಧರ್ವಚಾರಣಪ್ರಕರಮಂ | ಬರದೊಳ್ಪ್ರಣರ್ಕಿವದರ್ಕಿಸಮುಹಾಮುನಿಯೊಡನೆಮತ್ತಮಾರಣರಂಗದೆ || ಸರಿಯದೊಂದಡಿಯುಮಂಪಿಂದಕ್ಕೆ ಪೊಣರುತ್ತೆ | ಹರಣಮಂ ತೃಣಕೆಣಿಸಿ ಬಿಡುವಕಡುಕಲಿಗಳಂ | ವರಿಸಲಚ್ಚರಸಿಯರನೆರವಿ ನಡೆದುದು ಪಿಡಿದುಮಂದಾರಮಾಲಿಕೆಯನು ||೪||

ಆಗಳತ್ತಂಡದೊಳು ಮಾರಣಾಂಕಣದೊಳತಿ | ವೇಗದಿಂ ಮುಂದು ಮುಂದಾಗಿ ಮೇಲ್ವಾಯ್ವರಥ | ಪ್ರಾಗದಿಂದಶ್ವಸಂಘಾತದಿಂದಿರದೆ ತಾನೆದ್ದಕೆಂದೂಳ್ತೆರಳ್ಕೆ || ಆಗಸವನಳುರ್ದುರವಿಬಿಂಬಮುಂ ಮುಸುಳಸ | ಲ್ಕೀಗಳಂತೇನಿದುತ್ಪಾತವೋ ಸೂರ್ಯೋಪ | ರಾಗವಸಮಯದೊಳದು ಚೋದ್ಯವೆಂದ ಪರದೇಶದಜನಂ ಭಯಗೊಂಡುದು || ೫ ||

ಬಿತ್ತೊತ್ತಿನುಗ್ಗಿಸಲಿಪೂರ್ವ್ವಡೆಯೊಳಾನೆಗಳ | ಮೊತ್ತಮುಂ ಮಾವುತಪ್ರತಿಸೈನ್ಯಮುಂ ಬಿಡದೆ | ಸುತ್ತಿಕೊಂಡಂಬುಮಳೆಯುಂತೇರಿಗರ್ಕ್ಕರೆಯುಲತಿಮಾತ್ರರಭಸದಿಂದೆ || ಅತ್ತಣಿಂ ಮೇಲ್ವಾಯ್ವಕುದುರೆ ಥಟ್ಟಂತಡೆದು | ಕತ್ತಿಯಿಂ ರಾವುತರ್ಪೊಯ್ಯಲಿಶತಘ್ನಿಯಿಂ | ಪತ್ತಿಗಳ್ಬದರಿಸಲಿ ರಿಪುಬಲವನೆಂಬ ಕಲಕಲವೆ ತುಂಬಿರ್ದುದಲ್ಲಿ || ೬ ||

ಕುಣಿದುವೆತ್ತೆತ್ತಲುಂ ಘೋರಮಾದಾರಣಾಂ | ಕಣದೊಳಗೆ ಕೂರ್ಗತ್ತಿಯಿಂ ತರಿದವೀರಭಟ | ರೆಣಿಕೆಯಿಲ್ಲದ ಮುಂಡಗಳ್ಮತ್ತುಮನ್ಯೋನ್ಯಮಾಗಾಂತರಥಿಕರ್ಕಳು || ಕಣೆಗಳಂ ತೆತ್ತಿಸಿದಭಟರಂಗದಿಂಸೋರ್ದ | ರುಣಸಲಿಲಮೇಕತ್ರದೊಳ್ವ್ಲಿಷ್ಟಯಾಗೆ ತ | ತ್ಕ್ಷಣಮೆ ಜಲಪೂರಮನ್ಯತ್ರದೊಳ್ಪರಿವಂತೆ ಪರಿದುದಾಕಳದ ಪೂರಗೆ || ೭ ||

ದ್ವೈರಥಪ್ರಥನಕ್ಕೆ ಮೊದಲಾದುದಾಬಳಿಕ | ವೀರಚಂಪಕನೊಡನೆ ಭಾರತಿ ಸುಬಾಹು ದು | ರ್ವಾರನೊಡನಂತು ಮೋಹಕನೊಡನೆ ಕುಶಕೇತ್ರಜಾನಕೀಸಹಜಾತನು || ಆ ರಿಪುಂಜಯನೊಡನೆ ವಿಮಲಂ ಪ್ರತಾಪಿಯೊಡ | ನಾರೀತಿಯಿಂ ಧನ್ವಿಮೌಳಿಮಣಿ ವೀರಮಣಿ | ಭೂರಿದೇವನಕೂಡೆ ಸಹದೇವನೊಡನೆ ಕಲಿತೇಜಃಪುರಾಧೀಶನು || ೮ ||

ಬಲಮೋದನೊಡನಂಗದಂ ನೀಲರತ್ನನುರು | ಬಲಶಾಲಿಹರ್ಯ್ಯಕ್ಷನೊಡನೆ ಮತ್ತುಗ್ರಾಶ್ವ | ನಲಘುಭುಜಸತ್ವನಾದಸುಕಾಯನೆಂದೆಂಬ ವೀರಾಗ್ರಗಣ್ಯನೊಡನೆ || ತಲೆದೂಗಲಮರಮುನಿಯಪ್ಸರಸ್ತ್ರೀಗಣಂ | ನಲಿದಾಡಲುಬ್ಬಿಗದೆಬಿಡುಗಣ್ಣಮರ ಕಣ್ಗೆ | ಫಲಮಾಗಲೆಚ್ಚಾಡಿದರ್ಸ್ಸಲಗದೊಡನೆಸಲಗಂ ಪೋರುವಂದದಿಂದೆ || ೯ ||

ಪರಿಕುಪಿತವೀರಪ್ರಯುಕ್ತಪರಿಮಿತಿರಹಿತ | ಶರಕಾಂಡದಿಂ ಪೂರ್ಣ
ಮಾಗಿ ಸಂಖ್ಯಾತೀತ | ಶರಪುಂಖಬದ್ಧಖಗಪಕ್ಷಘೋರಾರವಾರ್ಭಟಿಯಿಂದೆ
ಘೋರವಾಗಿ ‖ ನಿರುಕಿಪೊಡೆವೇಗಾತಿಶಯಶಾಲಿಮಾರ್ಗಣೋ | ತ್ಕರಶಿಖಿ
ಜ್ವಾಲಾಕಲಾಪದಿಂದತಿಭಯಂ | ಕರಮಾಗಿ ಶರಧಿಯೆನಿಸಿತು ಗಗನತಲಮಾಗ
ಳೇನೆಂಬೆನದ್ಭುತವನು ‖ ೧೦ ‖

ವರಮುನಿಯೆ ಕೇಳಿಂತು ಘೋರಯುದ್ಧಂ ನಡೆಯು | ತಿರೆ ಧೀರಪುಷ್ಕ
ಲಂ ನೋಡಿ ಚಂಪಕನನೆಲೆ | ಪರಮಸಾಹಸಿಕ ನೀನಾರಲಾ ಬರಿದೆ ಕಟ್ಟಿದೆಗೆಜ್ಜೆ
ದೇಕೆನ್ನನು ‖ ಧುರದೊಳಾಂಪಳವಿನಿನಗೊಳವೆ ಪೇಳೆನೆ ಕೇಳ್ದು | ಸುರಥ
ಜಂ ನಸುನಗುತ್ತಲವೆಲವೊ ರಥಿಕ ಸಂ | ಗರದೊಳದಿರಾಂತಿರ್ಪನಾನಾವನಾದೊ
ಡೇನಾದೊಡಂ ಕೇಳ್ದರೆವೆನು ‖ ೧೧ ‖

ಸುರಥಭೂರಮಣಚೂಡಾಮಣಿಯ ತನಯನಾಂ | ಪರಿಮಳದೊಳಾ
ವುದಗ್ಗಳಿಕೆವೆತ್ತಿಹುದೊ ಮಧು | ಕರಕುಲಮದಾವುದಂ ಮುಟ್ಟದೆಯೆ ಬಿಟ್ಟಿ
ಹುದೊ ಮತ್ತಾವುದುಪವನದೊಳು ‖ ಮೆರೆದಪುದೊ ಪೊಂಬಣ್ಣಮಂತಳೆದು
ತಿಳಿವುದಾ | ನರುಗಂಪನಾಳ್ದಲರಪೆಸರೆನ್ನ ಪೆಸರೆಂದು | ಬರಿದೆ ಗಳಹದೆ ಕಾದು
ತಿಳಿವೆ ನೀನೆದೆಗೆಚ್ಚಿಗನುಸಾರಮಾದಳವಿಯ ‖ ೧೨ ‖

ಎನಲದಂ ಕೇಳ್ದು ಕೇಕಯನಂದಿನೀಸೂನು | ತನುಭವಂ ರಕ್ತಮಂ
ನೆರೆಕಾರೆ ಕಣ್ಣೆರಡು | ಕನಕನಲ್ದೆಡೆವಿಡದೆ ತೆಗೆತೆಗೆದು ತೀಕ್ಷ್ಣತರಮಾರ್ಗ
ಣೋತ್ಕರವನಿಸಲು ‖ ಘನವೀರನಪ್ಪ ಸುರಥಾತ್ಮಜಂ ಬಿಡದೆ ಭೋಂ | ಕನೆ
ಪಡಿಸರಳ್ಗಳಿಂ ಖಂಡಿಸಿದನವನೊಡನೊ | ಡನೆ ದಕ್ಕದಿಂತಿರ್ವರುಂ ಕಾದಿದರ್ವ್ಯಾ
ಘ್ರಕಂಠೀರವಂಗಳಂತೆ ‖ ೧೩ ‖

ಬಿಡದಿಂತು ಕಾದುತ್ತೆ ಚಂಪಕಂ ಪೊನ್ನಕ | ಯ್ಯೊಡೆಯ ಕೂರಲಗಿನೀ
ರಯ್ದು ಕಣೆಗಳನಿಸ | ಲ್ಕೊಡಲೆಲ್ಲಮುಂಗಾಯಮಡೆದು ಮುಕ್ಕುಳಿಸಲರು
ಣಾಂಬುವಂ ಭರತಸುತನು ‖ ಫಡಫಡಾ ನಿಲ್ಲಿಲಾ ನಿನ್ನಾಯುಮುಗಿದುದೆಂ |
ದಡಸಿದೊರಸೊರಸಿನಿಂ ಕರೆಯೆ ಕಣೆವಳೆಯ ನೆಡೆ | ವಿಡದೆ ಚಂಪಕನದಂ
ತಡೆದು ಪುಷ್ಕಲನ ಕವಚವನು ನಿಕ್ಕಣೆಯೊಳರಿದನು ‖ ೧೪ ‖

ಭರತಸುತನುರವಣಿಸುತತಿರೋಷದಿಂದೆನೊಂ । ದುರಗಶಿಖವೆಂತೆಸುಯ್ಯು
ಡುತೆನೋಡೆಲವೆಲವೊ । ನರಪಶುವೆ ನಿನ್ನನೊಸಲಕ್ಕರಂತೀರಿ ತೆಂದಬ್ಬೋರ್ಧ್ವ
ವಾಸ್ತ್ರವಿಸಲು ॥ ಪರಿಹರಿಸಲದನಾ ಮಹಾಸ್ತ್ರಮನೆ ತಾನುಮಾ । ಸುರಥ
ನಂದನನೆಚ್ಚೊಡೆರಡುಮುಜ್ವಲಿಸುತಂ । ಬರದೆಪೋರಾಡುತಿರಲಿದು ವಿಲಯ
ಕಾಲವೊಂದೆಲ್ಲರುಂ ಶಂಕಿಸಿದರು ॥ ೧೫ ॥

ಕಂಡವರಹೋರಾಟದುರುಬೆಯು ಧನುರ್ವೇದ । ಪಂಡಿತಂ ಚಂಪಕಂ
ಭೋಂಕನುಪಸಂಹರಿಸಿ । ಕೊಂಡಂನಿಜಾಸ್ತ್ರಮಂಕೂಡಿರ್ದ ಪರಿಪಂಥಿಯು
ಸ್ತ್ರದೊಡನದ್ಭುತಮೆನೆ ॥ ಚಂಡಬಾಹಾಬಲಂ ಪುಷ್ಕಲಂಕಂಡದಂ । ಕುಂಡ
ಲಿತಕೋದಂಡನಾಗಿಕೂರಂಬುಗಳ । ತಂಡತಂಡವನಿಸುತ್ತಿರೆ ಸುರಥಸುತನ
ವಂಬಿಡದೆ ತಾಂಖಂಡಿಸಿದನು ॥ ೧೬ ॥

ದಾರುಣತರಾಸುರಾಸ್ತ್ರಮನಧಿಕವೇಗದಿಂ । ಭಾರತಿಯಿಸಲ್ಬಳಿಕದಂ
ಮಹೇಂದ್ರಾಸ್ತ್ರದಿಂ । ಸಾರಥಿವಿಳಂಬಿಸದೆ ಕಡಿದೊಡನೆನಾರಾಯಣಾಸ್ತ್ರ
ಮಂತೆಗೆದೆಚ್ಚನು ॥ ಶ್ರೀರಾಮನಂನೆನೆಯುತಿರ್ದ ಪುಷ್ಕಲನನದು । ಮಾನ
ಸದೆವಿ ನಾರಿಗಾರಾಗಾರಿಗೊಳಿಸಿದುದು । ವೀರಚಂಪಕನವನನಾಕ್ಷಣಮೆ ಸೆರೆವಿ
ಡಿದುವಿಜಯಮಂಕಯ್ಕೊಂಡನು ॥ ೧೭ ॥

ಆವಾರ್ತೆಯಂಕೇಳ್ದು ಸಾವಿತ್ರಿಯೊದೆವಡೆದು । ಪಾವಮಾನಿಯನೋ
ಡುತೆಲೆಪವನತನಯಪ್ರೋ । ಗೈವತ್ಸಪುಷ್ಕಲನನರಿಯಕಯ್ಸೆರೆಯಿಂದೆ ಬಿಡಿಸಂ
ದು ಬೆಸವೇಳ್ದೊಡೆ ॥ ಆವೀರನಡಿಮೆಟ್ಟುಗಿಳಿನಡುಗೆ ಬಹುಳರೋ । ಷಾವೇ
ಶದಿಂದುರವಣಿಸಿ ಗರ್ಜಿಸುತ್ತಿಯುವ । ದೇವನಂತಿರೆಭಯಂಕರನಾಗಿ ನಡೆತಂ
ದಿದಿರ್ಚಿದಂಚಂಪಕನನು ॥ ೧೮ ॥

ಕಂಡವನನಾಕುಂಡಲಾಧಿಪತಿನಂದನಂ । ಕುಂಡಲಿತಕೋದಂಡನಾಗಿ
ಕೂರಂಬುಗಳ । ತಂಡತಂಡವನೆ ತೆಗೆತೆಗೆದೆಚ್ಚೊಡಾವೀರನುರವಣಿಸಿಕಯ್ದು
ಳಿಂದೆ ॥ ಕೊಂಡುಕೊಂಡವನಿರದೆ ಕಡಿಕಡಿಯಗೈದುಭುಜ । ದಂಡದೊಳ್ತರು
ಹಿಬೀಸಿಡಲೊಂದುಪೆರ್ಮರನ । ಖಂಡಿಸಿದನಿಷುಗಳಂಚಂಪಕನದಂ ನಭದೆಬ
ರ್ಪನ್ನಮೇನಧಟನೋ ॥ ೧೯ ॥

ಬಳಿಕದಂನೋಡಿ ಹನುಮಂತನುರುವೇಗದಿಂ | ಮುಳಿದುಪೇರಾನೆಯೊಂದಂ ಪಿಡಿದುನೂಕೆಕೂ | ರಲಗಿನಂಬುಗಳಿಂದೆ ಕಡಕಡಲೆಯುನಿತದಂ ಕಡಿದನಾ ಸುರಥಸುತನು || ಬಲಶಾಲಿಪವನಜಂ ಬಗೆದು ಭುಜಯುದ್ಧಕ್ಕೆ | ಚಳಕದಿಂ ನೆಗೆದು ಮೇಲ್ವಾಯ್ದುಸಾರಥಿಯು ಕರ | ದೊಳಗಿರ್ದ ಕಾರ್ಮುಕವನೀಳ್ದು ಕೊಂಡವನಿದಿರೆಚಟಪಟನೆಮುರಿದಿಟ್ಟನು || ೨೦ ||

ನೆರೆಕೆರಳ್ದದಕೆಬಳಿಕನುಪಮುನಿಯುದ್ಧಚಾ | ತುರಿಯಿಂದೆ ಬಲ್ವೊತ್ತುಸೆಣಸುತ್ತೆ ಸೂಟಿಯುಂ | ದಿರದೆಕಯ್ಯೆರಡರಿಂ ಬಾಲಮಂಪಟ್ಟುವಿಡಿದಟ್ಟಹಾಸಂಗೈಯುತೆ || ಗರಗರನೆತಿರುಗಿಸಲ್ಚಂಪಕಂ ವೀರಮಾ | ನರನಂತುತಾನೆ ಬೇಗನೆಸುತ್ತಿಮೂಸುತ್ತು | ಸುರಪಜನನಾವಾಲದಿಂಸುತ್ತಿಬಿಗಿದೆತ್ತಿಕೆಡಹಿದಂ ಭೂತಲದೊಳು || ೨೧ ||

ಪಡೆಮುಮೂರ್ಛೆಯನೀಳ್ದಕಯ್ಯಾಲ್ಗಳಿಂದಲ್ಲಿ | ಕೆಡೆವುದುಂಚಂಪಕಂ ಕೆದರ್ದಮುಂಡೆಯೊಳತ್ತ | ಮಡಮಡಲೆ ಸೈನಿಕರಹಾಹಾರವಂಬಳಿಕ ಪವನ ಸುತನಬ್ಬರಿಸುತೆ || ಬಡಿದುಸೇವಂತೆವ್ರೋಲ್ಗಳಗಳಂತಳ್ವಾಯ್ದು | ತಡೆಯದುಳಿದಾಳ್ಗಳಂಚವರಿಸುತೆ ಸೆರೆಯಿಂದೆ | ಬಿಡಿಸಿತಂದಂ ರಾಮಚಂದ್ರಾನುಜಾತತನುಜಾತನಂಹೆಚ್ಚಳದೊಳು || ೨೨ ||

೨೨ ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೨ ಕ್ಕೆ ಪದ್ಯ ೯೪೭ ಕ್ಕೆ ಮಂಗಳಮಸ್ತು.

ಇಪ್ಪತ್ತುಮೂರನೆಯ ಸನ್ಧಿ.

ಸೂಚನೆ ॥ ಅನಿಲತನಯಂ ಭರತಸೂನುಸೌಮಿತ್ರಿವೊಡ । ಲೆನಿಪವೀರರ್ಕಳಂಸೆರೆವಿಡಿದಸುರಥಂಗೆ । ಘನಮಹಿಮನೊಲ್ದುಮೈದೋರಿ ರಾಮಂ ಬಿಡಿಸಿಕೊಂಡನವರೆಲ್ಲರುಮನು ॥

ಮೌನೀಂದ್ರಕೇಳ್ಬಳಿಕಸುರಥಭೂಪತಿತನ್ನ । ಸೂನುಮೂರ್ಛಿತನಾದುದಂಕೇಳ್ದು ಚರರಿಂದೆ । ಮಾನಸದೆಕೋಪಾಗ್ನಿಧಗಧಗಿಸೆ ರಥವೇರಿ ತಳೆದುಶಸ್ತ್ರಾಸ್ತ್ರಗಳನು ॥ ಸೇನೆಯೊಡನೈತಂದಿದಿರ್ಚೆ ಹನುಮಂತನಂ । ವಾನರನೆಚಂಪಕಕುಮಾರನಂ ಮೂರ್ಛಿಸಿದೆ । ನಾನೆಂದುಗರ್ವಿಸದಿರಿಂದೊ ನಿನಗೆ ಮೃತ್ಯುಸ್ವರೂಪನಾಂಬಂದಿರ್ಪೆನು ॥ ೧ ॥

ಘಡಘಡಾಹಿಮ್ಮೆಟ್ಟದೆನ್ನೊಡನೆಕಾದುಸೆರೆ । ವಿಡಿದುನಿನ್ನಂ ಬಂಧಿಸುವೆನೆಂದುನುಡಿದು ಜೇಂ । ವಡೆದನೇಕಕ್ರೂರನಾರಾಚಗಳನಿಸಲವಂ ಲೆಕ್ಕಿಸದೆಹನುಮನು ॥ ಕಡುಮುಳಿದದೊಂದೆಲಂಘನೆಯಿಂದೆಮೇಲ್ವಾಯ್ದು । ತುಡುಕಿತಾನವನ ಕಯ್ಯೊಳಗಿರ್ದಚಾಪಮಂ । ಚಡಪುಡನೆಮುರಿದಿಟ್ಟು ಹೊದರೆದ್ದಮಾರ್ಬಲವನುರವಣಿಸುತೊಳಪೊಕ್ಕನು ॥ ೨ ॥

ಕೆಲಬರಂವುರದಿಂದೆ ಕೆಲಬರಂಕರದಿಂದೆ । ಕೆಲಬರಂಬಾಲದಿಂ ಕೆಲಬರಂಶೈಲದಿಂ । ಕೆಲಬರನುಗುರ್ಗಳಿಂ ಕೆಲಬರಂಕಾಲ್ಗಳಿಂದಲ್ಲಿರ್ದ್ದರಿಪುಭಟರನು ॥ ಪಲತೆರದೊಳತಿರೋಷದಿಂದೆಸದೆಬಡಿದಿಳಾ । ತಲದೊಳೊರಗಿಸೆ ಕಂಡದಂಸುರಥನರೆನಿಮಿಷ । ದೊಳೆತಳೆದುಬೇರೊಂದು ಚಾಪಮಂ ಮಾರುತಿಯನಿದಿರಾಂತುಮುಳಿದೆಚ್ಚನು ॥ ೩ ॥

ಅದುಮನಾವೀರಮಾರುತಿಸೆಳೆದು ಮುರಿದವಂ । ಷ್ಟದೊಳೆಂಟಶೀತಿಚಾಪಂಗಳಂಮುರಿದು ನಿಜ । ಪದಘಾತದಿಂದೆ ಚೂರ್ಣೀಕರಿಸೆ ರಥಮಂತುರಂಗಸಾರಥಿಗಳೊಡನೆ ॥ ಚದುರಿಂದೆಕಲಿಸುರಥ ನಿಳೆಗೆಧುಮ್ಮಿಕ್ಕಿತ । ಳ್ವದೆಬೇಗನೇರಿ ಬೇರೊಂದುಪ್ರೊಂದೇರನುರೆ । ಕುದಿಯುತುಜ್ವಲರೋಷವಹ್ನಿಯಿಂದಂತಕಾಂತಕನವೋಲಿದಿರಾಂತನು ॥ ೪ ॥

ಪಿಡಿದೊಂದುಕೋಡುಗಲ್ಲಂಬಳಿಕ ಬಂದವು | ಕ್ಕಡನಂ ಮಹಾರಥಂ ಸುರಥನೀಕ್ಷಿಸಿಮುಳಿದು | ಘಡಘಡಾನಿಲ್ಲೆಂದುರುತರಬ್ರಹ್ಮಾಸ್ತ್ರವಂ ಪ್ರಯೋಗಿಸೆಹನುಮನು || ಕೆಡೆದುಭೂತಲದೊಳದರುರುಬೆಯಿಂ ಶ್ರೀರಾಮ | ನಡಿಗಳಂನೆನೆವುದುಂ ನಿರ್ವೀರ್ಯಮಾದುದದು | ಪೊಡವಿಯೊಳ್ರಾಮನಾಮಸ್ಮರಣೆಯಿಂದೆ ಲೇಸಪ್ಪುದೇನಾಶ್ಚರ್ಯವೇ || ೫ ||

ಭೂಮೀಂದ್ರನೆವನದಂಕಂಡು ದುರ್ಜಯನಿವಂ | ಸಾಮಾನ್ಯಮಾದ ಶಸ್ತ್ರಾಸ್ತ್ರಂಗಳಿಂದೆಂದು | ರಾಮನಾಮೋದ್ದಾಮಮಂತ್ರದಿಂ ದೊಂದುಮಾರ್ಗಣವನಭಿಮಂತ್ರಿಸಿಸಲು || ರಾಮಪದಭಕ್ತನಾದುದರಿಂದೆ ಪವನಸುತ | ನಾಮಹಾಶರದೆ ಮೂರ್ಛಿತನಾದನುಳಿವರೇ | ನೀಮಹಿಯೊಳುಳಿದರಾಬಳಿಕ್ಕೂದಿದಂ ವಿಜಯಶಂಖವನಂಕಲಿಸುರಥನು || ೬ ||

ಬಳಿಕದಂನೋಡಿ ಸೈರಿಸದೆಪುಷ್ಕಲನರಿಯು | ಬಳಸಾರ್ದೊಡವರಿರ್ವರುಂ ಪರಸ್ಪರವಿಜಯ | ಕೆಳಸುತುರವಣಿಸಿ ಕೂರ್ಗಣೆಗಳತಿವೃಷ್ಟಿಯುಂ ಕರೆಯುತಿರಲಾಕಣೆಗಳು || ಅಳುರ್ದುವು ನಭೋಂತರವನಲ್ಲಿರ್ದದಿವಿಜರಾವಳಿಕಂಡದಂ ನಾಡೆಭಯಗೊಂಡುನಡನಡುಗಿ | ತಿಳಿಯೊಳಹಮಾನವರ ಭಯಸಂಭ್ರಮವನದೇನೆಂಬೆನಾನಾರಣದೊಳು || ೭ ||

ಬದಗಿದುರುರೋಷದಿಂ ಕುಟಿಲಭ್ರುಕುಟಿಭೀಷ್ಮ | ವದನನಾಗಾನಡುವೆಸುರಥಂಮಹಾರಥಂ | ಕದಿರಿಡಿದ ತೀಕ್ಷ್ಣತರಮಾದೊಂದು ವಜ್ರಮಯವಿಶಿಖಮಂತೆಗೆದಿಸಲ್ಕೆ || ಅದುಮಹಾರಭಸದಿಂ ಬಂದುಭರತಾತ್ಮಜನ | ನೆದೆಯೊಳಗೆ ನಾಂಟಕೊಂಡರೆನಿಮಿಸದೊಳಗೆ ಕಡ | ಹಿದುದುಮೂರ್ಛೆಯಬರಿಸಿ ಬಳಿಕ್ಕೂದಿದಂ ವಿಜಯಶಂಖಮಂಕಲಿಸುರಥನು || ೮ ||

ನಿರುಕಿಸಿರಘೂದ್ವಹಾನುಜನದಂಕಯ್ಗಣ್ಮಿ | ದೊರಸೊರಸಿನಿಂ ತೇರನೇರಿಬೇಗನೆಬಂದು | ಸುರಥನನಿದಿರ್ಚಿನಿಂ ದೆಲೆರಾಯಪುಷ್ಕಲಕುಮಾರ ಪವಮಾನಸುತರು || ಧುರದೊಳ್ಸ್ರಮಾದದಿಂಕೆಡೆ ದಂತರಿಂದಹಂ | ಕರಿಸಬೇಡೀರಣಾಂಕಣಭೂಮಿಯೊಳ್ನಿನ್ನ | ನರೆಗಳಗೆಯೊಳ್ಕೆಡಹದುಳಿಯೆನಿದೊನೋಡೆಂದುನುಡಿಯುತ್ತೆ ಜೇವಡೆದನು || ೯ ||

ಸೈರಿಸದೆಸುರಥನಾ ನುಡಿಯಕೇಳ್ದಲವೆಲವೊ | ವೀರಮಾನಿಯೆಸುಮ್ಮನೇತಕ್ಕೆ ಗಳಹುತಿಹೆ | ಸಾರತ್ತಲಿಲ್ಲದಿರೆ ನೀನುಮನಿಲಾತ್ಮಭವ ಪುಷ್ಕಲಕುಮಾರರಂತೆ || ಧಾರಿಣಿಯೊಳುರುಳದಿರೆ ನಿಮಿಷಮಾತ್ರದೊಳೆಂದು | ಕೂರಂಬುಗಳಮಳೆಯನೆಡೆವಿಡದೆಕರೆಯೆರಣ | ಧೀರರಾಮಾನುಜಂ ಬಿಡದದಂ ಪ್ರತಿಮಾರ್ಗಣಾಸಾರದಿಂತಡೆದನು || ೧೦ ||

ಅಬ್ಬಬ್ಬ ಅಚ್ಚರಿಯಿದೆಂದು ಸುರಸಭೆಪ್ರೊಗಳೆ | ಲುಬ್ಬೇಳಲಧಟರಂಗದೆರೋಮಹರ್ಷಣಂ | ತಬ್ಬೆಜಗತಿಯಭಯಾನಕರಸಂ ವೀರವರಣಕ್ಕಪ್ಸರಸ್ತ್ರೀಯರು || ಉಬ್ಬೆಗಂಬಡೆಪರಸ್ಪರಜಯಕ್ಕೆಳಸುತ್ತ | ಕೊಬ್ಬಿದಣ್ಮಿಂದಿರ್ವರುಂ ಕಾದುತಿರ್ಪಿನಂ | ತಿಬ್ಬಮೆನೆ ಕಾಯ್ಪೇರಿಸೌಮಿತ್ರಿ ಸನ್ಮೋಹನಾಸ್ತ್ರಮಂತೆಗೆದೆಚ್ಚನು || ೧೧ ||

ಕಂಡದಂವೀರ ಮಂಡಲಶಿಖಾಮಣಿಯೆನಿಪ | ಕುಂಡಲಾಧೀಶ್ವರಂ ತಾನುಮೊಂದಂತುಟು | ದ್ದಂಡಮೆನಿಸಿದ ಮೋಹನಾಸ್ತ್ರಮನೆ ತೆಗೆದುಕಿವಿವರೆಗಂಪ್ರಯೋಗಿಸಲದು || ಖಂಡಿಸಿಧರಾತಲದೊಳದಿರಸ್ತ್ರಮಂಕೆಡಹೆ | ಚಂಡಭುಜನೆನಿಪಸೌಮಿತ್ರಿಖಲಲವಣನಸು | ಗೊಂಡದುರ್ದಂಡವಜ್ರಾಸ್ತ್ರಮಂ ತೊಟ್ಟುಕೋದಂಡದೊಳ್ತೆಗೆದೆಚ್ಚನು || ೧೨ ||

ಪಡಿಸರಳ್ಗದುಸಿಲ್ಕದತಿವೇಗದಿಂದೆಬಂ | ದೊಡರಿಸುತೆ ಮೂರ್ಛೆಯಂ ನಟ್ಟನಟ್ಟೆದೆಯೊಳಗೆ | ಕೆಡಹಿಂದುದುಸುರಥನಂ ರಥಗುಪ್ತಿಯೊಳ್ಚೇತರಿಸಿಕೊಂಡನಂಕ್ಷಣದೊಳು || ಕಡುಕೋಪದಿಂದೆಕಣ್ಣೆರಡುಮಿರದುಗುಳೆಕೆಂ | ಗಿಡಿಗಳಂಕೇಳೆಲವೊಸೌಮಿತ್ರಿನಿನ್ನನಿದು | ಕೆಡಹದಿರದೆಂದತಿಭಯಂಕರಾಕಾರಮಾದೊಂದು ಶಕ್ತಿಯನಿಟ್ಟನು || ೧೩ ||

ಮಾರಂಬುಗಳನತಿಕ್ರಮಿಸಿಕೊಂಡಾಶಕ್ತಿ | ಘೋರನೈತಂದು ಕೀಲಿಸಲೆದೆಯೊಳದರಿಂದೆ | ತೇರೊಳಗೆಗಾಢಮೂರ್ಛೆಯನಾಂತು ಸೌಮಿತ್ರಿಬಿದ್ದನಾಬಳಿಕತ್ತಲು || ಭೂರಿಹರ್ಷದೆನೆಗಹಿವಿಜಯಧ್ವಜಂಗಳಂ | ವೀರಭಟರೆಲ್ಲರುಂಜಯಕಲಕಲಂಗೈಯೆ | ಭೂರಮಣನವನೂದಿದಂ ವಿಜಯಶಂಖಮಂ ಜಯಭೇರಿಯಬ್ಬರಿಸಿತು || ೧೪ ||

ಅನಿತರೊಳಗಾನವಕುಮಾರರಿಂ ಜನಕನಂ । ದನಮುಖ್ಯನವವೀರ
ರುಂ ವಿಚಿತ್ರರಾಗಿಪೋ । ದಿನಿಯುಲ್ಲಿಬಸವಳದು ಕೆಡೆದರೇನೆಂಬೆನದನೆಲ್ಲಮಂ
ನೋಡಿದೊಡನೆ ‖ ಕನಕನಲ್ದುಂಭೋಜಸಖತನಯನೊಂದುಲಂ । ಘನೆಯಿಂದೆ
ಸುಥಘಭೂಪಾಲನಂತಡೆದಾಂತು । ಧನುವಿಡಿದುನಿಲ್ಲಲವ್ರೊ ನೀಂಪಡೆಯುದೆನ್ನಿಂ
ದೆ ಮೂರ್ಛೆಯನದೆತ್ತಪೋಪೆ ‖ ೧೫ ‖

ಎನಲದಂಕೇಳ್ದನರೆ ಗಹಗಹಿಸಿಕಲಿಸುರಥ । ಜನಪಾಲನೆಲವೆಲವ್ರೊ
ನೀನೆಲ್ಲಿಯಾದೊಡಂ । ವನದೊಳಗೆ ಕಪಿಗಳೊಡನಾಡಿಕೊಂಡಿರದೀ ರಣಾಂಕ
ಣಕ್ಕೇಕೆಬಂದೆ ‖ ಎನುತೆಪಲವಂಬುಗಳನಿಸಲದಂಗಣಿಸದಾ । ವನೇಚರಾಧೀಶನ
ಲ್ಲಿದೊಂದುಪರ್ವತದ । ಘನಶಿಲಾಖಂಡಗಳನೊಡನೊಡನೆ ತುಡುತುಡುಕಿಬೀ
ರಲಾರಂಭಿಸಿದನು ‖ ೧೬ ‖

ಆಶಿಲೆಗಳೊಳ್ತಾಗದಂತೊಂದುವತ್ತಿತ್ತ । ಕೌಶಲ್ಯದಿಂದೆ ಸಾರಥಿನಡಸೆ
ರಥವನಾ । ಕೀಶಾಧಿಪತಿಯೊಂದು ಲಂಘನೆಯೊಳೆಸಂದು ಪಿಡಿದುಘನಕೂಬರ
ದೊಳ್ಳು ‖ ಆಶತಾಂಗವನಿರದೆ ಚೂರ್ಣಿಸಲ್ಕಂಪಲಾ । ಧೀಶನಿಳೆಯೊಳನಿಂದಂ
ನಿಮಿಷದೊಳ್ಸನೆಶ್ಮೀಪ । ನಾಶುಗವನೆಚ್ಚೊಡದರಿಂದೆಮೂರ್ಛೆಯನಾಂತು
ಕೆಡೆದನಾಸುಗ್ರೀವನು ‖ ೧೭ ‖

ಇಂತುರುಪರಾಕ್ರಮಿಗಳೆನಿಸಿದ ಮಹಾವೀರ । ರಾಂತುಮೂರ್ಛೆಯು
ಕೆಡೆದೊಡುಳಿದಸ್ಯೆನಿಕರಿತ್ತ । ಚಿಂತಿಸುತೆಕದಪಿಟ್ಟುಕಯ್ಯೊಳತಿಕರ್ತವ್ಯತಾ
ಮೂಢರಾಗಿರಲ್ಕೆ ‖ ಸಂತಸಂಗೊಂಡು ರಿಪುವಿಜಯದಿಂಸುರಥಭೂ । ಕಾಂತಂ
ಪಳಂಚಿತಾಂ ವಿವಿಧವಾದ್ಯಧ್ವನಿದಿ । ಗಂತವಂಸೋತುಕಯ್ಸೇರ್ದಪುಷ್ಕಲ
ಮುಖ್ಯರಂ ಪೊಳಲನೈದಿಸಿದನು ‖ ೧೮ ‖

ಅಡವಿಯಿಂಪಿಡಿದುತಂದಂತೆಮದಗಜಗಳಂ । ಪಿಡಿದುತಂದೊಡನೆಕಯ್ಕಾ
ಲ್ಗೆ ಸಂಕಲೆಗಳಂ । ತೊಡಿಸಿಬಳಿಕತ್ತಿತ್ತ ಮಿಡುಕದಂತವರೆಲ್ಲರಂಬಿಡದೆಸೆರೆ
ಯೊಳಿರಿಸೆ ‖ ಪಡೆದುದೈವಾಜ್ಞೆಯಿಂ ಪರಿಭವವನರಿಯಿಂದೆ । ಕಡುಚಿಂತೆಯಾಂ
ತೆ ಶತ್ರುಘ್ನಾದ್ಯರಂನೋಡಿ । ತಡೆಯದಾಸಮಯದೊಳ್ಪವನಜಂ ರಾಮಚಂ
ದ್ರನೆನಿಂತುಜಾನಿಸಿದನು ‖ ೧೯ ‖

ಹಾರಾಮ ಹರಿರಾಮ ನೀಲಮೇಘಶ್ಯಾಮ | ಹಾರಘುಕುಲಾರಾಮ ಚಂದನದ್ರುಮಸೀಮ | ಚಾರುಮುಖಸುತ್ರಾಮ ಪರಿಣತಗುಣಸ್ತೋಮ ನಿಖಿಲಲೋಕಾಭಿರಾಮ || ಹಾರಾವಣೋದ್ದಾಮ ಗಜಸಿಂಹರಣಭೀಮ | ವೀರಭಾರ್ಗವರಾಮ ಗರ್ವಹರನಿಸ್ಸೀಮ | ಕಾರುಣ್ಯರಸಧಾಮ ಕಲುಷಹರನಿಜನಾಮ ಹಾನಾಥ ಸಲಹೆಂದನು || ೨೦ ||

ರಾಮನೀಂತಾಟಕಾದ್ಯರನೊಕ್ಕಲಿಕ್ಕಿ ವಿ | ಶ್ವಾಮಿತ್ರಯಾಗಮಂಕಾದೆ ಖರಮುಖದುಷ್ಟ | ಯಾಮಿನೀಚರರಾಯುವಂ ತೊಡೆದು ಮುನಿಜನದ ಭೀತಿಯಂ ಪರಿಹರಿಸಿದೆ || ಭೀಮಬಲನಂ ಕೊಂದು ವಾಲಿಯಂ ರವಿಜನಂ | ಪ್ರೇಮದಿಂ ಪೊರೆದೆ ರಾವಣನವಧೆಯಿಂದೆ ಗೈ | ದೈಮೂಜಗಕೆ ಹಿತವನೆನ್ನಂ ನೀಸೆರೆಯಿಂದೆ ಬಿಡಿಸದೇತಕ್ಕೆ ಮರೆದೆ || ೨೧ ||

ಇಂಗಡಲೊಳಲರುಣಿಯ ಪಾಸಿನೊಳ್ಸುಖದಿಂ ಮ | ಲಂಗಿ ಲಕ್ಷ್ಮೀದೇವಿಯೊಡಗೂಡಿ ಮುನ್ನೀನ | ಭಂಗನಿದ್ರೆಯೊಳಿರೆಯ ಮೊಂದಾನೆಹಾನಾಥಸಲಹೆಂಬ ಮೊರೆಯಿಡಲ್ಕೆ || ಸಂಗಡಮನೀನಲಸದೆಚ್ಚತ್ತು ಬಂದದಂ | ಮಂಗಳಾಂಗನೆ ಸಲಹಬಿಲ್ಲಮೇಸುರಥನೀ | ಪಾಂಗಿನೆಮ್ಮಂತವಿಪ್ರುದಂ ನೋಡದೆಂತಿರ್ಪೆ ಮೈದೋರಿಸಲಹೆಂದನು ||೨೨||

ಯಾಗದೀಕ್ಷಿತನಾಗಿ ಸರಯೂನದೀತಟದೆ | ಯೋಗಿವರರೊಡಗೂಡಿ ಧರ್ಮಪ್ರಸಂಗಪರ| ನಾಗಿರ್ದೊಡಂಸಚ್ಚಿದಾತ್ಮನಾಗೆಲ್ಲಿಯುಂ ಜಂಗಮಾಜಂಗಮದೊಳು || ಏಗಳುಂ ವ್ಯಾಪಕತ್ವದೊಳಿರ್ಪೆಯೆಲೆಮಹಾ | ಭಾಗನೀನೆಂತರಿಯದಿರ್ಪೆಯೆಮ್ಮೊಡರನಕ | ಟಾಗೋಚರಿಸದಿಂತುಪೇಕ್ಷೆಗೈವುದು ತಗದು ಜಗದೀಶಸಲಹೆಂದನು ||೨೩||

ದನುಜರನನೇಕರಂನಿಗ್ರಹಿಸಿ ದೇವತ | ದ್ವನಿತೆಯರನೆಮ್ಮೆಲ್ಲ ಬಂಧಮಂಬಿಡಿಸಿರ್ಪ | ನಿನಗಿದೊಂದರಿದೆ ಪೇಳ್ಸುರಥನತ್ತಣಿನೆಮ್ಮಯೀಬಂಧನಮಂ ಬಿಡಿಪುದು || ಘನಮಹಿಮ ಗೋಚರಿಸಿ ನಿನ್ನ ಸೇವಕರಬಂ | ಧನಮನೋಸರಿಸದಿರೆ ನಗದೆನಿನ್ನಂಜಗಂ | ನಿನತೆಮ್ಮ ಮಾನಾವಮಾನಂಗಳೆಲ್ಲಮುಂ ಕರುಣಾಳು ಸಲಹೆಂದನು ||೨೪||

ಎಂದುಜಾನಿಸಲಾಕ್ಷಣದೊಳಂದ್ರು ನೀಲರುಚಿ | ಸುಂದರಾಂಗಾನುಷಂಗದೊಳನುಗ್ರಹೀತಾಭಿ | ನಂದನೀಯಸ್ಫುರನ್ಮಣಿ ಮಕುಟಹಾರಕುಂಡಲಮುಖಾಲಂಕಾರನು || ಕುಂದಸುಮಕಾಂತ ಮಂದಸ್ಮಿತಲಸದ್ವದನ | ನಿಂದಿತಶರಚ್ಚಂದ್ರನಾರಾಮಚಂದ್ರನ್ಯೆ | ತಂದುಪುಷ್ಪಕದೆ ಲಕ್ಷ್ಮಣಭರತರೊಲಗಿಸುತಿರಲೊಲ್ದು ವೈದೋರ್ದನು ||೨೫||

ಸ್ವೈರಿಸನೆಬೇಸಗೆಯ ಬೇಗೆಯುಂ ಪಿರಿಬಾ | ಯಾರಿಬಳಲುತ್ತಿರ್ದಚಾತಕಂಕಂಡಂತೆ | ವಾರಿದಾಭ್ಯುದಯಮಂಕಂಡು ಭಕ್ತಾರ್ತಿಹರನಂ ರಾಮಚಂದಿರನನು || ಮಾರುತಿ ಮುಳಂಗಿ ವ್ಯೆಮರೆದು ಪರಮಾನಂದ | ವಾರಿನಿಧಿಯೊಳ್ಮುಳುಗಿ ಹರ್ಷಣ ದ್ವಿಗುಣಿತಾ | ಕಾರನಾಗಡಿಗೆರಗಿದಂ ಕಣ್ಗಳಾನಂದಬಾಷ್ಪಮಂ ಮುಕ್ಕಳಿಸಲು ||೨೬||

ಸುರಥಭೂಪಿಾರಮಣನೊಲವಿಂದೆ ವ್ಯೆದೋರ್ದ | ಪರಮಾತ್ಮರೂಪನೆನಿಸಿದರಾಮಚಂದ್ರನಂ | ನಿರುಕಿಸುತೆ ಮೊಳೆದೋರ್ದಪುಳಕಪ್ರಪಂಚದಿಂ ಕಂಚುಕಿತಗಾತ್ರನಾಗಿ || ನಿರುಪಮಾನಂದಪರವಶನಾಗಿ ಸಾಷ್ಟಾಂಗ | ವೆರಗುತ್ತೆ ನಿರತಿಶಯಭಕ್ತಿಪ್ರಕರ್ಷದಿಂ | ಪರಿಪರಿಯೊಳಂತು ಕ್ಯೆವಾರಿಸಲುಪಕ್ರಮಿಸಿದಂ ಗದ್ಗದಸ್ವರದೊಳು ||೨೭||

ಕ್ಷೀರಾಬ್ಧಿಶಯನಾಯ ನೀರೇಜನಯನಾಯ | ವೀರಾಗ್ರಗಣ್ಯಾಯ ವಸುಧಾಶರಣ್ಯಾಯ | ದರೀಕೃತಾಘಾಯ ದಮಿತದನುಜೌಘಾಯ ಚರಣನತಶತಮಘಾಯ || ಶ್ರೀರಾಮಚಂದ್ರಾಯ ಸಾರಗುಣಸಾಂದ್ರಾಯ | ಕಾರುಣ್ಯಸಿಂಧವೇ ಕಾಮಜಿದ್ಬಂಧವೇ | ನಾರಾಯಣಾಯ ನರಸಿಂಹಾಯ ಹರಯೇ ನಮೋನಮಸ್ತೇ ಎಂದನು ||೨೮||

ಉಪಸಂಹರಿಸಿ ಬಳಿಕತತ್ತದಸ್ತ್ರಂಗಳಂ | ನೃಪನವಂಸೆರೆಯಿಂದೆ ಬಿಡಿಸಲುರುರೋಷದಿಂ | ದಪರಿಮಿತಮಾದಲಜ್ಜಾಭಾರದಿಂದಪರಿಹಾರ್ಯಮಮಾನದಿಂದೆ || ತಪಿಸುತ್ತಮಿರ್ದ ಶತ್ರುಘ್ನ ಭರತಾತ್ಮಭವ | ತಪನನಂದನರುಮಂ ಬಿಡಿಸಿ ಸೆರೆಯಿಂದೆ | ವಿಪುಲತರಹರ್ಷದಿಂ ಶ್ರೀರಾಮಚಂದ್ರಮಂಗಿಂತು ವಿಜ್ಞಾಪಿಸಿದನು ||೨೯||

ನಿನ್ನಡಿಯನಾಂಬಿಡದನೇಕವರ್ಷಂಗಳಿಂ । ದಿನ್ನೆಗಂ ನವವಿಧದಭಕ್ತಿಭಾವದೊಳೆಲೆಜ । ಗನ್ನಾಥಸೇವಿಸುತ್ತಿರ್ದೊಡಂ ನೀನೊಲ್ದು ದರ್ಶನವನೀಯದಿರಲು ॥ ತನ್ನಧರ್ಮದೊಳೀಪರಿಯೊಳವಕೆಸ್ಕೋಸುಗವೆ । ಬನ್ನಗೊಳಿಸಿದೆನಿರದೆಸೆರೆಯೊಳಿಟ್ಟವರನೀ । ಯೆನ್ನತಪ್ಪಂ ಮನ್ನಿಪುದು ಸಿದ್ಧಸಂಕಲ್ಪನಾದೆನಾನಿಂದೆಂದನು ॥೩೦॥

ಆನುಡಿಯನಾಲಿಸಿ ರಘುಪ್ರವರನೆಲೆಸುರಥ । ಭೂನಾಥತಪ್ಪೊಂದುಮಿಲ್ಲವೈ ಕ್ಷತ್ರಿಯಮ । ತಾನುಕಾರದೆ ರಣದಿವೀರರರಂಗೆಲ್ದು ನೀಂಪಡೆದೆಕೀರ್ತಿಯನಿಳೆಯೊಳು ॥ ನೀನುಮೀಮಾರುತಿಯುಮೆನಗತಿಪ್ರಿಯತಮ । ರ್ನ್ನಾನೊಲ್ದೆನೈ ನಿನ್ನಭಕ್ತಿಗೆಂದಪ್ಪಿಕೊಂ । ಡಾನೃಪತಿಯಂಬಳಿಕ ಪುಷ್ಕಲಪ್ರಮುಖರಂ ಸಂತವಿಸಿದಂ ಮುದದೊಳು ॥೩೧॥

ಸುತಮಂತ್ರಿಪುರಸ್ಸರ್ದ್ಧರೊಡಗೂಡಿ ಸುರಥಭೂ । ಪತಿಬಳಿಕ ಸಿಂಗರಿಸಿದಾರಾಜಧಾನಿಯೊ । ಳ್ಗಜತುರಂಗಸೈನ್ಯಪರಿಜನಸಹಿತನಾದ ರಘುವಂಶಮುಕುಟಮಣಿಯನು ॥ ನುತಮಹೋತ್ಸವದೊಳರಮನೆಗೆ ಕರತಂದುತಾ । ನತಿವಿಭವದಿಂ ಸತ್ಕರಿಸಿ ತನ್ನರಾಜ್ಯಮಂ । ವಿತತಭಕ್ತಿಯೊಳಾತನಂಘ್ರಿಕಮಲಕ್ಕೆ ಮಖವಾಜಿಯೊಡನರ್ಪಿಸಿದನು ॥೩೨॥

ಶ್ರೀರಾಮಚಂದ್ರನಾರಾಜ್ಯದೊಳ್ಚಂಪಕಕು । ಮಾರಂಗೆ ಪಟ್ಟಾಭಿಷೇಕಮಂಗೈದತ್ಯು । ದಾರಮೆನಿಪವನ ಕಯ್ಗಾಣ್ಕೆಯಂಕಯ್ಕೊಂಡಯೋಧ್ಯೆಗೊಲವಿಂದೈದಲು ॥ ಆರಾಯನೊಡನತಿಸ್ನೇಹದಿಂ ಸೌಮಿತ್ರಿ । ಮೂರುದಿನಮಲ್ಲಿರ್ದವಂ ಬೆರಸುಬಲಪರೀ । ವಾರಯಾಗಾಶ್ವಂಗಳಿಂಕೂಡಿ ವಿಭವದಿಂದಲ್ಲಿಂದೆಪೊರಮಟ್ಟನು ॥೩೩॥

೨೩ ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೩ ಕ್ಕೆ ಪದ್ಯ ೯೮೦ ಕ್ಕೆ ಮಂಗಳಮಸ್ತು.

ಇಪ್ಪತ್ತನಾಲ್ಕನೆಯ ಸನ್ಧಿ.

ಸೂಚನೆ ॥ ಸಾಂಗವೆನೆನಿಖಿಲಶಸ್ತ್ರಾಸ್ತ್ರ ವಿದ್ಯಾಭ್ಯಾಸ । ಮಂಗೈದ
ವಿಮಲನುಪಮನ್ಯು ಮುನಿಪುಂಗವನೊ । ಳಂಗನಾಮಣಿಸುಲೋ
ಚನೆಯಂ ಸ್ವಯಂವರಮಹೋತ್ಸವದೆ ಕೈವಿಡಿದನು ॥

ಮೌನೀಂದ್ರ ಕೇಳನಂತರದೊಳಾ ಕುಮಾರೆರ । ತ್ಯಾನದೀತಟಮಾರ್ಗ
ದೊಳ್ ಪೋಗುತಿರೆ ಲಕ್ಷ್ಮ । ಣಾನುಜಂ ಸುಮತಿಯಂ ನೋಡುತಲೆ ಸಚಿ
ವೇಂದ್ರ ಮುಂದಾವನಗರಮಿಹುದು ॥ ಮಾನವಾಧಿಪನಾವನಿಹನೆಮ್ಮ ಕುದು
ರೆಯಂ । ತಾನಸಂತಡೆಯಲ್ಸಮರ್ಥನೇನುಸಿರೆಂದೊ । ಡಾನಿಖಿಲಲೋಕಚಾ
ರಿತ್ರವಿಜ್ಞಾನಶೇವಧಿಸುಮತಿಯಿಂತೆಂದನು ॥೧॥

ಸೌಮಿತ್ರಿ ಕೇಳ್ಮುಂದೆ ಚಿತ್ರರಥೆಯೆಂದೆಂಬ । ನಾಮದಿಂ ಪ್ರಖ್ಯಾತ
ಮಾದೊಂದು ಪೊಳಲಿಹುದು । ಭೂಮೀಶಪುಂಗವಂ ಧವಳಾಶ್ವನೆಂಬವಂ ಪಾ
ಲಿಸುತ್ತಿರ್ಪನದನು ॥ ಶ್ರೀಮತಿಯೆನಿಪ್ಪ ರಾಣಿಯೊಳವಂ ಸುಗುಣೈಕ ।
ಧಾಮನಂ ವಿಮಲನೆಂದೆಂಬ ತನುರೂಪಜಿತ । ಕಾಮನಂ ಪಡೆದಂ ಕುಮಾ
ರನಂ ಪುತ್ರಕಾಮೇಷ್ಟಿಯಿಂ ಬಹುಕಾಲಕೆ ॥೨॥

ದಿನದಿನಕ್ಕಭಿವೃದ್ಧಿಯಂ ಪಡೆಯುತಿರ್ಪನಿಜ । ತನುಜನಂ ಕಾಲ
ಮಂಮೀರದತಿ ಮುದದೊಳಾ । ಜನಪಾಲನತಿವಿಭವದಿಂದೆ ಚೌಲೋಪನಯ
ನಂಗಳಂ ಗೈದಬಳಿಕ ॥ ಧನುರಾಗಮಾಚಾರ್ಯನೆಂದೆನಿಪ ಪರಶುರಾ । ಮನ
ಶಿಷ್ಯನೆನಿಸಿದುಪಮನ್ಯುವೆಂದೆಂಬೊರ್ವ । ಮುನಿಕುಲೋತ್ತಮನಲ್ಲಿಗಟ್ಟಿದಂ
ಸಕಲವಿದ್ಯಂಗಳಂ ಶಿಕ್ಷಿಸಲ್ಕೆ ॥೩॥

ಪಲಬರೊಡನಿರೆ ಸಹಾಧ್ಯಾಯಿಗಳ್ವಿಮಲನತಿ । ಲಲಿತಮತಿ ಸಾಂಗ
ವೇದಾಧ್ಯಯನಮಂ ಮಾಡಿ । ಬಳಿಕಸ್ತ್ರವಿದ್ಯೆಯಂ ಕಲಿಯಲ್ಕುಪಕ್ರಮಿಸಿ
ಸಾಂಗಧನುರಾಗಮದೊಳು ॥ ಕಲಿತನಿಷುಸಂಧಾನಮೋಕ್ಷಣ ಕ್ರಮಗಳಂ ।
ಚಲಲಕ್ಷ್ಯಭೇದಾದಿ ಲಕ್ಷ್ಯನಿರ್ಭೇದಕೌ । ಶಲಿಯ ಬಹುರೂಪಮಂತ್ರಾ
ಸ್ತ್ರಪ್ರಯೋಗೋಪಸಂಹಾರರೀತಿಗಳನು ॥೪॥

ಬಳಿಕವಂ ಕಾವ್ಯಚಂಪೂನಾಟಕಾದಿಸ | ಲ್ಲಲಿತವಿದ್ಯಂಗಳೊಳ್ನಿರು ಪಮಪ್ರಜ್ಞೆಯುಂ | ಗಳಿಸಿ ಮುನಿವರನ ಶಿಕ್ಷಾಬಲದೆಮೊದಲನೆಯನೆನಿಸಿ ಸ ಹಪಾಠಿಗಳೊಳು || ನೆಲದೊಳಪ್ರತಿಮವಿಕ್ರಮನೆನಿಸಿಬನದೊಳಗೆ | ತಲೆ ದೋರುವಂದದಿಂ ಸುಗ್ಗಿರುಚಿರಾಂಗದೊ | ಳ್ತಲೆದೋರೆ ತಾರುಣ್ಯಮೊಡ ಲಾಂತಬೇರೊರ್ವ ಮದನನಂತೇನೆಸೆದನೋ ||೫||

ಆಗಳಾವಿರ್ಭವಿಸೆ ಮಧುಮಾಸಮಾಹೂತ | ನಾಗಿವಿಮಲಾದಿನಿಜಶಿ ಷ್ಯರಿಂದೊಡಗೂಡಿ | ಯೋಗೀಂದ್ರನುಪಮನ್ಯು ಧರ್ಮಜ್ಞನೆನಿಸಿದ ಸುಧ ರ್ಮನೃಪನಾಚರಿಸುವ || ಯಾಗಕೋಸುಗಮೊಲವಿನಿಂ ಧರ್ಮನಗರಕ್ಕೆ | ಪೋ ಗಲಾನರನಾಥಪುಂಗವಂ ಕುಶಲಾನು | ಯೋಗಪೂರ್ವಕಮಾಗಿ ತತ್ತದುಚಿತ ಕ್ರಮದೊಳೆಲ್ಲರಂ ಮನ್ನಿಸಿದನು ||೬||

ಅತಿವಿಭವದಿಂದೆ ನಿರ್ವಿಘ್ನಮಾಗಾಮಹೀ | ಪತಿಮಹಾಮಹಿಮರೆನಿಸಿ ದಮುನಿಗಳಿಂ ಪುರೋ | ಹಿತಮಂತ್ರಿ ಸಚಿವಬಾಂಧವ ಮಿತ್ರಪರಿವಾರದಿಂ ಕೂಡಿ ತನ್ಮಖವನು || ಶ್ರುತಿವಿಹಿತಮಾರ್ಗದಿಂದಾಚರಿಸಿ ಭೂಸುರಪ್ರತತಿಗೆ ಮಹರ್ಷಿಜನಕಂಧಬಧಿರಾದಿದು | ರ್ಗತಕುಲಕೆ ಧನವೃಷ್ಟಿಗರೆದುಚಿತಸ ತ್ಕೃತಿಯೊಳೆಲ್ಲರಂ ತಣಿಯಿಸಿದನು ||೭||

ಆಮಹೀಪಾಲನಕುಮಾರಿ ಸುಕುಮಾರಿನಿ | ಸ್ಸೀಮಸೌಂದರ್ಯಖನಿ ಲಾವಣ್ಯಸಾರಜನಿ | ಭೂಮಿಪಂಕಜದಳೋಪಮವಿಲೋಚನೆ ಸುಲೋ ಚನೆಯಾಗಶಾಲೆಯಲ್ಲಿ || ಸೋಮನೆಸೆವಂತೆವೊಲುಡುಸ್ತೋಮದಂತರದೊ | ಳಾಮುನೀಂದ್ರನಶಿಷ್ಯವರ್ಗದಂತರದೊಳಭಿ | ರಾಮರೂಪವನಾಂತುಕಣ್ಗೊ ಳಿಪ ವಿಮಲನಂ ಕೂರ್ಮೆಯಿಂದೀಕ್ಷಿಸಿದಳು ||೮||

ಹರನಯನದಗ್ಧನಂ ಬದುಕಿಸಲ್ಕೋಸುಗಂ | ಸ್ಮರನಂಜಗತ್ತಿನೊ ಳ್ಕಮಲೋದ್ಭವಂ ಶೀತ | ಕಿರಣಮಂಡಲತಲದೊಳಿಟ್ಟುಹದನರಿದು ಪ್ರಾಯ್ದ ಮೃತರಸದೊಳವೆಸಿದ || ಶರದಮೃತಕರನೆಸೆವ ಬೆಳ್ದಿಂಗಳಿಂಗೈದ | ಪರ ಮಸಂಜೀವನೌಷಧವೆನಲ್ಕಾಮನೋ | ಹರಲತಾಂಗಿಯು ಕೋಮಲಾಂಗ ಮಂ ವರ್ಣಿಸಲ್ಕಸದಳಂ ತ್ರಿಭುವನದೊಳು ||೯||

ಅವಳನಗೆಮೊಗದ ನಸಳಾಕೃತಿಯ ನೋಡಿದೊಡೆ । ಹಿಮಗದಿರನುಂ ಲಕ್ಷ್ಮಿಯುಂ ಸಮುದ್ಭವಿಸಿದ । ರ್ಣವದೊಳಗೆಮುನ್ನಮೆ ಮುಳುಂಗಿ ಕೊಂಡಿರ್ದೊಡದುಬಗೆಯೆ ಲೇಸಾಗಿರ್ದುದು ॥ ಅವಳಕಣ್ಗಳನಂತುಮತ್ತವಳನುಣ್ಗುರುಳ । ನವಳಮೆಲ್ಲಡಿಗಳಂ ನೋಡಿದೊಡೆಮೀಂಗಳುಂ । ಕುವಲಯಮುಮಬ್ಜಮುಮಂನೀಗತ್ತಣಿಂದೇಕೆ ತಲೆಯನೆತ್ತುತ್ತಿರ್ಪುವೋ ॥೧೦॥

ನಿರವದ್ಯವಿದ್ಯಾವಿಶಾರದೆಯ ಶಾರದೆಯ । ತೆರದಿಂದೆ ರತಿಯವೋಲಸಮಾನಲಸಮಾನ । ನಿರವಧಿಕರೂಪಭರಧಾರಿಣಿಯ ಧಾರಿಣಿಯಮೇಲಿರ್ಪಯುವತಿಯರ್ಗೆ ॥ ವರಶಿರೋರತ್ನದ ವಿನಯದಿಂದೆ ನಯದಿಂದೆ । ನಿರತಿಶಯಯೌವನೋದಯದಿಂದೆ ದಯದಿಂದೆ । ಪರಿಗತೆಯಗುಣಕೀರ್ತಿ ಮತಿಯಸನ್ಮತಿಯ ಸನ್ನುತಿಪೆ ನಾನೇನವಳನು ॥೧೧॥

ಸ್ವಮನೋಗತಾರ್ಥಮಂ ಪ್ರಕಟಿಸದನಂತರಮೆ । ರಮಣೀಕುಲೋತ್ತಂಸ ಮಣಿಯೆನಿಸಿದಾರಮಣಿ । ವಿಮಲನಾ ವಿಮಲಕುಲಶೀಲನಾಮಂಗಳಂ ಚೇಟಿಯರ ಮುಖದೊಳರಿದು ॥ ರಮಣೀಯಗುಣನಿವನೆರಮಣನೆನಗೆಂದುತಾಂ । ಪ್ರಮದಾತಿಶಯದೊಳಾಶಯದೊಳವನಂ ವರಿಸಿ । ಸಮನಿಸುವುದೆಂದೆನ್ನಕಯ್ಗಿಷ್ಟಫಲಮೊಂದು ಚಿಂತಾರ್ಣವದೊಳದ್ದಳು ॥೧೨॥

ಇಂತಿರೆ ಸುಧರ್ಮನಾಗಿಸಿದಬಳಿಕಾ ಸಪ್ತ । ತಂತುಮಂತತ್ತದನುಗುಣಮಾನದಿಂದೆ ಸಾ । ಮಂತಭೂಕಾಂತರಂ ಮುನಿಗಳಂ ತತ್ತನ್ನಿವಾಸಕ್ಕೆ ಬೀಳ್ಕೊಟ್ಟನು ॥ ಸಂತಸದೊಳಾಶ್ರಮಕೆ ಶಿಷ್ಯರೊಡನೈತಂದ । ಶಾಂತಾತ್ಮನೆನಿಸಿದುಪಮನ್ಯುವಂ ವಿಮಲನ । ತ್ಯಂತ ಸಂಪ್ರೀತಿಯಿಂವಂದಿಸಿ ಸಮಾನ್ಯತ್ತನಾಗಿಂತು ಬೆಸಗೊಂಡನು ॥ ೧೩ ॥

ಗುರುದಕ್ಷಿಣೆಯನೇನನರ್ಪಿಸಲಿ ನಿಮ್ಮಡಿಗೆ । ಗುರುವರನೆಬೆಸಸುವುದನುಗ್ರಹದೊಳೆನಗೆಂದು । ಗುರುಭಕ್ತಿಯಿಂದೆಬೆಸಗೊಳೆ ವಿಮಲನುಪಮನ್ಯುವೆಲೆ ವಿಮಲ ಮುಂದೆನಾನು ॥ ವಿರಚಿಸುವೆನಧ್ವರವನೊರ್ವದಾರುಣಯಾತು । ವಿರದದಂ ಭಂಗಿಸಲ್ಬಹನವನನಧಟಿಂದೆ । ವಿರತಿಯಂಪ್ರೊರ್ದಿಸುವುದೆನಲಾಜ್ಞೆಯೆಂದವಂ ನಿಜನಗರಿಗೈತಂದನು ॥ ೧೪ ॥

ಕಂದಿ ವಿರಹಾನಲಜ್ವಾಲಾಕಲಾಪದಿಂ । ಕುಂದುವಡೆದುದು ಬಳಿಕದಿ
ನದಿನಕ್ಕತ್ತಲಾ । ಸುಂದರೀಕುಲಶಿರೋಮಣಿಯ ಸುಕುಮಾರತನುಮತನು
ಶರಘಾತದಿಂದೆ ॥ ನೊಂದುದುರೆಮಾನಸಂಮದನಮತಿದೀರ್ಘೋಷ್ಣ । ಮೆಂ
ದೆನಿಪನಿಟ್ಟುಸಿರನೆಲೆಯಾಯ್ತು ಕನಸು ಕ । ಣ್ಗೊಂದಿನಿಸುಮಿಲ್ಲೆನಿಸಿತಸು
ಮ ಸಂಕಲ್ಪಮಾದೊಡೆ ಪೆರ್ಚಿತೇನೆಂಬೆನು ॥ ೧೫ ॥

ಬಳಿಕ ಮೀಪರಿಯುಪರಿತಾಪದನಿದಾನಮಂ । ಕೆಳದಿಯರುಪಾ
ಯದಿಂ ತಿಳಿದು ತಾ ಮೇಕಾಂತ । ದೊಳ್ ವಿವಿಧಶೀತೋಪಚಾರಮಂಗೈಯು
ತಿರಲೇನೆಂಬೆನದ್ಭುತಮನು ॥ ತಳಿರ್ವಾಸುಬೆಂದುಸೀಕರಿವ್ರೋಯ್ತು ಸುರಭಿಶೀ ।
ತಳಮಾದ ಸರಸಚಂದನದಣ್ಬುಧೂಳೀಪ । ಟಳಮಾಯ್ತು ಮುದುಡಿ ತಾವರೆ
ಯೆಲೆಗಳಾದ ಮೊಣಗಿದುವವಳಮೈಸೋಂಕಲು ॥ ೧೬ ॥

ನೋಡುವಳ್ನೋಳ್ಪುದಂ ಮತ್ತೆ ತದ್ವ್ಯಕ್ತಿಯಂ । ನೋಡಳಾಲಿಸು
ವಳಾಲಿಪುದನದರರ್ಥಮಂ । ಕೂಡೆ ತಾನರಿಯಳವರವರೊಡನೆ ಸಮಯ
ಸಂದರ್ಭಗಳೊಳಾಡುವುದನು ॥ ಆಡುವಳ್ಸಂಗತಾಸಂಗತವಿಮರ್ಶೆಯಂ ।
ಮಾಡದವಳರೊಳ್ಪ್ರಬಲವಿರಹವೇದನೆಯಿಂದೆ । ನಾಡೆಮದನಾವಸ್ಥೆಗಿಂಬಾಗಿ
ಮಡದಿ ಮರವಾನಿಸಿಕೆಯಂತಿರ್ದಳು ॥ ೧೭ ॥

ವಿಮಲವಸ್ತುಪ್ರಸಕ್ತಿಯೊಳಲ್ಲಿ ಪರಿಜನಂ । ವಿಮಲ ಎಂದೊರೆದೊ
ಡಂ ತನ್ವಂಗಿಯಿರದೆಸಂ । ಭ್ರಮಗೊಂಡದೇನೆಂದೆಯೇನೆಂದೆಯೆಂದು ಬೆಸ
ಗೊಂಡು ತಾನನವರಸುಖವಡೆ ॥ ವಿಮಲಶಬ್ದಮನೊಲ್ದು ಮತ್ತೊಮ್ಮೆ ಕೇಳು
ತಾ । ಸಮಯದೊಳ್ನಿಜಮನೋರಥದಿಂದೆ ಕಲ್ಪಿಸಿದ । ವಿಮಲನನೆನೋಡು
ತೆತ್ತೆತ್ತಲುಂ ಮೀರಿಮದನಾವಸ್ಥೆಗಿಂಬಾದಳು ॥ ೧೮ ॥

ದಿನದಿನಕೆ ಬಳಿಕ ಬಡವಾಗುತಿಹ ನಿಜಸುತೆಯ । ಮನದಚಿಂತೆಗೆಕಾ
ರಣಮನರಿದು ತತ್ಸಖೀ । ಜನದ ಮುಖದಿಂದಾನರೇಂದ್ರನಾಲೋಚನಂಗೈ
ದು ತನ್ನರಸಿಯೊಡನೆ ॥ ತನುಜೆಯಮನೋರಥಂ ಕಯ್ಗೂಡಲೋಸುಗಂ ।
ಮನುಜೇಂದ್ರರಂ ಸ್ವಯಂವರಮಹಕೆಕರೆಯಲ್ಕೆ । ಜನಪದಕೆ ಜನಪದಕೆ
ಬರೆದಸಿರಿಯೋಲೆಸಹಿತಟ್ಟಿದಂ ಬೇಹಸರನು ॥ ೧೯ ॥

ಅರಸನಾಜ್ಞೆಯೊಳಾಬಳಿಕ್ಕ ಸಿಂಗರಿಸಿದಾ । ಪುರವೂ ಮಹೋತ್ಸವದಸುದ್ದಿಯಂ ಸುರಲೋಕ । ಕರುಪಲೆನೆಬಾನಡರ್ದನೇಕ ಧ್ವಜಂಗಳಂ ಶುಭವೈಭವಾಂಭೋಧಿಯ ॥ ತೆರೆಗಳೆನೆ ಕಣ್ಗೊಳಿಪಕನಕತೋರಣಪರಂ । ಪರೆಗಳಂ ಕಲ್ಯಾಣಭವನಂಗಳಂತೆ ನೆರೆ । ಮೆರೆವಖಿಲಜನದಭವನಂಗಳಂದ ತ್ರಿಶೋಭೆಯಾಂತದೇಂ ಕಂಗೊಳಿಸಿತೋ ॥ ೨೦ ॥

ಸಾರಕಸ್ತೂರಿಯ ಜವಾಜಿಯ ಮನೋಜ್ಞಘನ । ಸಾರದುತ್ತಮ ಪುನಕದಭಿನವೋದಾರ ಕಾ । ಶ್ಮೀರಜನ್ಮದ ಸರಸಚಂದನದ ಮಲ್ಲಿಕಾಪಾಟಲಾದಿಗಳೆನಿಸಿದ ॥ ಚಾರುತರವಿವಿಧಮಂಗಳ ಸುಮಂಗಳಸರಳ । ಸಾರಕೃಷ್ಣಾಗರು ಪ್ರಮುಖವರಧೂಪಗಳ । ಸೌರಭ್ಯದಿಂದಾಗಳಾರಾಜಧಾನಿಯೆತ್ತೆತ್ತಲುಂ ತೀವಿರ್ದುದು ॥ ೨೧ ॥

ತೋರಮುತ್ತಿನಹಾರಮಂಪಿಡಿದು ಜೀವಕಳೆ । ಯೇರಿದಂತೆಸೆವಕೀಲ್ಬೊಂಬೆಗಳ ಪೊಂಗಂಬ । ದೋರಣಿಯ ಪರಿಪರಿಯಪೊಂಗೆಲಸದೆಸೆವಚಿತ್ರಾವಳಿಯ ಮೇಲ್ಕಟ್ಟನ ॥ ಭೂರಿಶೋಭೆಯರನ್ನವಣಿಯಸೂಸಕದಗುಡಿ। ತೋರಣದ ಮಣಿಮಯದ್ವಾರಗಳ ಪರಿಣಮಾ । ಗಾರಮಿಳೆಗಿಳಿತಂದದಿವ್ಯಪುಷ್ಪಕಮೆಂಬವೋಲಾಗಳೇಂ ಮೆರೆದುದೋ ॥ ೨೨ ॥

ನಿರವದ್ಯವಿದ್ಯೆಯೊಳು ಮುರುಪರಾಕ್ರಮದೊಳುಂ । ಸಿರಿಯೊಳುಂ ಮತಿಯೊಳುಂ ರೂಪಿನೊಳು ಮೆನಗಿದಾ । ರ್ಸರಿತನಗದಾರ್ಸರಿ ಯೆನುತ್ತೆ ಗರ್ವಿಸುತೆ ನಾನಾದೇಶದರಗುವರರು ॥ ನಿರುಪಮವಿಚಿತ್ರಮಣಿಭೂಷಣಾಂಬರಗಳಂ । ಮೆರೆಯುತ್ತೆ ನಿರತಿಶಯವಿಭವದಿಂದೊಡಗೂಡಿ । ಪೊರಮಟ್ಟುತಮ್ಮತಮ್ಮರಾಜ್ಯ ದಿಂದೈತಂದು ಧರ್ಮಪುರದೊಳ್ನೆರೆದರು ॥ ೨೩ ॥

ವಿಮಲಂ ಸ್ವಯಂವರದಸುದ್ದಿಯಂ ಕೇಳ್ದು ತಾಂ । ಪ್ರಮದದಿಂ ಕಯ್ಕೊಂಡು ಗುರುಜನದ ಹರಕೆಯಂ । ಪ್ರಮಿತಬಲಪರಿವಾರವಿಭವದಿಂದೊಡಗೂಡಿ ಚಿತ್ರಧರೆಯಿಂತೆರಳ್ದು ॥ ಸುಮುಹೂರ್ತದೊಳ್ಧರ್ಮಪುರಿಯಸೇರ್ದಂಬಳಿಕ । ಸಮುಚಿತಮೆನಿಪ್ಪೆಡೆದು ಮನ್ನಣೆಯನಖಿಲಭೂ । ರಮಣರ್ಸ್ವಧರ್ಮನಿಂದಾಸ್ವಯಂವರಮಂಟಪಕೆಬಂದು ಕುಳ್ಳಿರ್ದರು ॥ ೨೪ ॥

ವಾದಕರವೀಣಾದಿ ವಿವಿಧವಾದ್ಯಂಗಳನಿ | ನಾದದಿಂಗಾಯಕರಕರ್ಣಾ
ಮೃತಪ್ರಾಯ | ಮೋದಸಂಗೀತದಿಂನರ್ತಕಿಯ ರತಿಮನೋಹರಮಾದನಾ
ಟ್ಯದಿಂದೆ || ಆದಮುಲ್ಲಾಸದಿಂ ರತ್ನಪೀಠಾರೂಢ | ರಾದನನಿಪಾಲನಂದನರ
ಮಂಡಲದಿಂದ | ಮಾದಿತೇಯೇಶನಾಸ್ಥಾನದಂತಾಸ್ವಯಂವರಭವನಮೇನೆಸೆ
ದುದೋ ||೨೫||

ಬಳಿಕ ಮಂಗಳಮಜ್ಜನಂಗೈದುಧರಿಸಿ ಥಳ | ಥಳಿಪಕನಕಾಂಬರವ
ನಾಂತಮಣಿಭೂಷಣಂ | ಗಳನಂಗಕಾಂತಿಯಿಂ ಬೆಳಗುತುರೆ ಸಮುಚಿತಾಲಂ
ಕಾರದಿಂದೊಪ್ಪುತೆ || ಪೊಳೆವನವರತ್ನಮಯಮಾನಮಂದಣಮನೇರಿ | ಬಳಸಿ
ಬರೆ ಶುಭಗೀತಪಾಡುತೆ ಲತಾಂಗಿಯರ್ | ನರ್ಗಳಲಲೋಚನೆ ಸುಲೋಚನೆ
ಬಂದಳಾಸ್ವಯಂವರಶಾಲೆಗತಿಸಮುದದೊಳು ||೨೬||

ಶರದಿಂದುವದನೆಯರ ನವಕುಂದರದನೆಯರ | ಸರಸಮೃದುವಚನೆ
ಯರ ಸರಸಿರುಹನಯನೆಯರ | ಕರಿರಾಜಗಮನೆಯರ ಲಲನೆಯರ ಚಾಮ
ರಾದ್ಯುಪಚಾರವಿಭವದಿಂದೆ || ಮೆರೆಯುತ್ತೆ ತದ್ರಾಜಸಭೆಯಪ್ರಾಕ್ತಾಮಹೀ |
ವರಪುತ್ರಿ ಕಲಶಾಂಬುರಾಶಿಯೊಳ್ದಿವ್ಯಸುಂ| ದರಿಯರುಪಚಾರದಿಂಮೆರೆಯು
ತ್ತೆ ತಲೆದೋರ್ದ ಸಿರಿಯನೇನೆಣೆಗೊಂಡಳೋ ||೨೭||

ಎವೆಯಿಕ್ಕದೀಕ್ಷಣದಮಾರ್ಗದಿಂ ನಿಜಮನಂ | ಯುವತಿಮಂಡಲಮ
ಣಿಯ ನಾರಮಣಿಯಂಸೇರೆ | ಸವನಿಸಿದಬೆರಗಿಂದೆ ಚಿತ್ತ್ರದಬೊಂಬೆಗಳ
ಪೋಲ್ಕರಂಸ್ತಂಭವಾಂತು || ಅವನೀಂದ್ರಸುತರೆಲ್ಲರುಂ ದೇಹಮಾತ್ರದಿಂ |
ನವರತ್ನಮಯಸಿಂಹಪೀಠಗಳೊಳಿರ್ದರೆನೆ | ವಿವರಿಸಲಸಾಧ್ಯಮಾಸೌಭಾ
ಗ್ಯಶಾಲಿನಿಯ ನಿರತಿಶಯಸೌಂದರಿಯನು ||೨೮||

ಶರದಿಂದುಮುಖಿಯಲಾವಣ್ಯಪ್ರವಾಹದೊ | ಳ್ಕರೆಮುಳುಂಗಿದು
ಪೋಮೀಣಿಂದೀವರೇಕ್ಷಣೆಯ | ಸುರುಚಿರಕಟಾಕ್ಷಜಾಲಕ್ಕೆ ಸಿಲ್ಕಿದುಪೋಮೀ
ಣ್ಕುಂದಸನ್ನಿಭರದನೆಯ || ಪರಹಾಸಮೋಹಭಸ್ಮದ ಪರಿಚ್ಛುರಣದಿಂ | ಮ
ರುಳ್ಗೊಂಡುನೋಪೆಂಬಪೋಲ್ನೃಪಂತನ್ಮಹೀ | ವರಕನ್ಯೆಯೊಳ್ಕರೆದದೃ
ಷ್ಟಿಗಳ್ಮರಳಲಿಲ್ಲೇನೆಂಬೆನದ್ಭುತವನು ||೨೯||

ಅವನಿತಲಕಿಳಿತಂದ ಸುರಸುಂದರಿಯೊ ಮನೋ | ಭವನ ಮಸೆವೆತ್ತ
ಕೂರ್ಗಣೆಯೊ ಮೋಹೊಪ್ಪಮಂ | ಸವನಿಸಿದಕನಕಪುತ್ಥಳಿಯೊ ಎನಿಪವ
ಳನೀಕ್ಷಿಸಿದಕೆಲಗರಗು ಪರರು || ಇವಳಸಂದರ್ಶನದೆ ಧನ್ಯವಾದಂತೆಕ | ಣ್ಣೀ
ವಳಸಂಸ್ಪರ್ಶನದಿನೆಸ್ಕ್ರಯಶರೀರವುಂ | ತವೆಧನ್ಯಮಕ್ಕುಮೆಂದೊಳಗೊ
ಳಗೆ ದೇವರ್ಗೆಕಟ್ಟಿದರ್ಹರಕೆಗಳನು ||೨೦||

ಮೂರುಲೋಕದತರುಣಿಯರ ಶಿರೋಮಣಿಯೆನಿಸಿ | ದಾರಮಣಿಯಂ
ನೋಡಿದೊಡನಖಿಲಪಾರ್ಥಿವರು | ಮಾರರಚ್ಚರಿಗೊಂಡು ದಾರುಣತರಸ್ಮ
ರಶರಾಲೀಢಹೃದಯರಾಗಿ || ಪಾರೇಳೆಮನದುರ್ಕುಧಾತುಗಿಡೆಗರುವಾಯಿ |
ಸಾರೆಧೃತಿಜಾರೆನಾಣ್ಕುಯ್ಯಾರೆತನಕವ್ಯೈ | ದೋರೆ ಸಾತ್ವಿಕಭಾವಮಿರದೆ
ಪರಿಪರಿಯಶೃಂಗಾರಚೇಷ್ಟೆಯುಗೈದರು ||೨೧||

ವೀರಾಸನದೊಳೂರ್ವನಿರದೆತ್ತಿಕೊರಳನತಿ | ಧೀರಭಾವದೆತಿದ್ದುತು
ಗುರ್ಗಳಿಂಮೀಸೆಯುಂ | ವೀರಾಗ್ರಗಣ್ಯನಾಗಿಹೆ ನೆನ್ನನೊಲ್ದುನೀಂವರಿಸೆಂ
ಬಭಾವದಿಂದೆ || ಭೂರಿತರಾಗದಿಂದಾಮಹೀವಲ್ಲಭರು | ಮಾರಿಯಂಲೋಕಿ
ಸಿದನೀರೀತಿಯಿಂದಹಂ | ಕಾರಚೇಷ್ಟೆಯನೆಸಗಿದವನೊಳಾಗಂಭೀರಗುಣೆ
ತಾನದೇನೊಲಿವಳೇ ||೨೨||

ಸನ್ನುತಮಹಾಪುರುಷಲಕ್ಷಣನೆನೊಲ್ದುನೀ | ನೆನ್ನಕಯ್ವಿಡಿಯೆಂ
ದು ಬಲದಮುಂಡಿಯಮೇಲೆ | ತನ್ನದಕ್ಷಿಣದೀರ್ಘಬಾಹುವಂ ನೀಡಿನವದಿಂ
ದೆಹಸ್ತಾಂಬುಜವನು || ಇನ್ನೊರ್ವನಿರದೆ ತೋರ್ದಂಬೇಳ್ಪನಂತೆಕ | ಯ್ಯಂ
ನೀಡಿದಾತನಂನೋಡಿ ನೃಪಲಕ್ಷಣಕೆ | ಭಿನ್ನಮಾದುದುಚೇಷ್ಟೆಯಿವನದೆಂ
ದರಿಯದಾಕುಶಲೆತಾನೇಂವರಿಪಳೇ ||೨೩||

ಪ್ರೊಳೆವನವಮಣಿಪೀಠದಲ್ಲಿ ಕಯ್ಗಳನೂರಿ | ತಲೆವಾಗಿಕೆಲಸರಿದುಮನೆ
ಪದೊಳರ್ಧಾಸನವ | ನುಳಿದುನಿನಗೆರಗಿರ್ಪೆನಾನೆನ್ನಪೀಠವನಲಂಕರಿಸುನೀ
ನೆನುತ್ತೆ || ತಿಳಿಪುವಂತಭಿನಯಿಸಿದಿನ್ನೊರ್ವನಂನೋಡಿ | ಚಲಿಸುವಂಸ್ಥಾನ
ದಿಂದುರದೃಷ್ಟನಿವನೆಂದು | ತಿಳಿದಖಿಲನೀತಿಶಾಸ್ತ್ರಜ್ಞೆಯಾದಾರಾಜಪುತ್ರಿನ
ಜರ್ಸದಿರ್ಪಳೇ ||೨೪||

ನೇರಿತಾಗಿರ್ದೊಡಂ ಜಾರಿದಂತೆಣಿಸಿಕೊಳೆ | ಚೀರವಂ ಮಣಿಕಿರಣ
ಸಂಕೀರ್ಣಕರತಲದೆ | ಬೇರದೊರ್ವಂಧರಾವರಕುಮಾರಂ ಸಾವಗಿಸುತಿತ
ದ್ವ್ಯಾಜದಿಂದೆ ‖ ಸೇರಲೆನ್ನಯಕಯ್ಯನಿಂತು ನಿನ್ನಂತಲೆಯೊ | ಳೇರಿಸುವೆ
ನೆಂದುನಟಿಸಿದನಾಸುಲಕ್ಷಣೆಗೆ | ಮೂರಿತಲೆಯಲ್ಲಿಕಯ್ಯಿಕ್ಕಿದಪಲಕ್ಷಣನಕ
ಯ್ಯಿಡಿಸಳೀನಾತನ ‖೩೫‖

ಇನ್ನುಂ ಕೆಲಂಬರೇನೆಂಬೆನಾಂ ತಮತ್ತಮ್ಮೊ | ಳನ್ನನೇತನ್ನನೇನೆನೋ
ಡಿದಳೆನುತ್ತೆತ್ತಾ | ಮುನ್ನಯಿಸಿನಗೆಮೊಗದೊಳಿರದಂಗಮಂತೊನೆಯುತು
ತ್ಸುಕಂಬಡುತಿರ್ದರು ‖ ಇನ್ನುಂ ಕೆಲಂಬರಾಪವನಧಿಕಪುಣ್ಯಸಂ | ಪನ್ನನಾ
ಗಿಹನೊತಾನವನಕಯ್ಗಲ್ಲದೀ | ಚೆನ್ನೆಬಹಳನ್ನಾರಕಯ್ಗೆಂದು ಗಂಭೀರಭಾ
ವದಿಂ ಕುಳ್ಳಿರ್ದರು ‖೩೬‖

ಬಳಿಕಖಿಲಭೂಕಾಂತಲೋಕವೃತ್ತಾಂತಮಂ | ತೀದೊರ್ವವಂದಿಸ
ತಿಚಾರುಮತಿನಿಂದುಸಭೆ | ಯೊಳಗಾವಧೂಮಣಿಗೆ ಪರಿವಿಡಿಯೊಳೆಸೆವನವ
ರತ್ನಪೀಠಂಗಳಲ್ಲಿ ‖ ಕುಳಿತಿರ್ಪಧರಣೀಂದ್ರರಂತೊರುತಮರವರ | ಕುಲ
ಶೀಲರೂಪವಿಕ್ರಮ ಮುಖ್ಯಗುಣಗಳಂ | ತಿಳುಪಲಮರರಿಂದೆ ನಿಜದೃ
ಷ್ಟಿಯಂತೆಗೆದು ಮುಂಬರಿದಳಾಶುಭಾಂಗಿ ‖೩೭‖

ಬಳಿಕುದಯಪರ್ವತದ ಶಿಖರಭಾಗವನಡರ್ದ | ನಳಿನಸಖನಂತೆಮಂ
ಡಿಸಿ ಸಿಂಹಪೀಠದೊ | ಳ್ತೊಳತೊಳಗುತಿಹ ವಿಮಲರಾಜನೆಡೆಗೈತಂದುಚಾ
ರುಮತಿನೋಡಿದೊಡನೆ ‖ ಭಳಿರೆವರನೀತನೆ ಸುಲೋಚನೆಗೆನುತ್ತಮನ |
ದೊಳಗೆಭಾವಿಸಿ ನಿರುಪಮಪ್ರೀತಿಯಿಂದವನ | ಕುಲಶೀಲಕೀರ್ತಿಶೌರ್ಯಾದಿ
ಗುಣಜಾಲಮಂತಾನಿಂತುವಿವರಿಸಿದಳು ‖೩೮‖

ಸರಸಿಜಾಯತನೇತ್ರೆ ನೋಡಿವಂ ಧರಣಿಯೊ | ಳ್ದೊರೆವೆತ್ತಚಿತ್ರ
ಧರೆಗರಸನಹ ಧವಳಾಶ್ವ | ನರಪತಿಯನಂದನಂ ವಿಮಲಗುಣನೆನಿಸಿದುದರಿಂದೆ
ವಿಮಲಾಭಿಖ್ಯನು ‖ ಪರಶುರಾಮನಶಿಷ್ಯನೆನಿಸಿದುಪಮನ್ಯುಮುನಿ | ಪರನ
ಲ್ಲಿನಿಖಿಲವಿದ್ಯಾಭ್ಯಾಸಮಂಗೈದು | ಪರಮಗುರುರಾಮನಂ ಭುಜಶೌರ್ಯದೊ
ಳುಮಖಿಲವಿದ್ಯೆಯೊಳು ಮನುಕರಿಪನು ‖೩೯‖

ಕಾಮನಂತತಿಶಯಿತತನು ರಾಮಣೀಯಕಂ | ಸೋಮನಂತಖಿಲ
ಲೋಕಾಹ್ಲಾದಕಾರಕಂ | ಧಾಮನಿಧಿಯಂತೆಪ್ರೋಲ್ಲುದ್ದಾಮತೇಜನಮರಾ
ಚಾರ್ಯನಂತೆವಾಗ್ಮಿ || ವೈಮಾನಿಕದ್ರುಮಂತೌದಾರ್ಯಶಾಲಿಸು | ತ್ರಾಮನಂತ
ಮಿತಸುಖಭೋಗಸಂಪದನಿಸಂ | ತಾಮರಸನಯನೆನೋಡೀತನಂ ವರಿಸಲ್ಕೆ
ನಿನಗುಂಟೆಮನವೆಂದಳು ||೪೦||

ಆಲಿಸಿ ಸುಲೋಚನೆ ತದೀಯನಿರ್ದೋಷಗುಣ | ಜಾಲಮಂ ರೋ
ಮಾಂಚಮಂಕುರಿಸೆ ಸಿರಿಮೈಯೊ | ಳೋಲಾಡೆ ಮಾನಸಂಪದಮೀರಿದಾನಂ
ದಪೀಯೂಷಸಾಗರದೊಳು || ಲೀಲೆಮಿಗೆ ಲಜ್ಜಾನುರಾಗಲಕ್ಷಿತದೃಷ್ಟಿ |
ಮಾಲೆಯೊಡನಭಿರಾಮ ಪುಷ್ಪಮಾಲಿಕೆಯ ತ | ತ್ಕಾಲವಿಕಸಿತವದನಕಮ
ಲನಾ ವಿಮಲನಾ ಕೊರಳೊಳ್ಸಮರ್ಪಿಸಿದಳು ||೪೧||

ಏಕಕಾಲದೆ ಬಳಿಕ ಬಾಜಿಸಿದ ಶಂಖಭೇ | ರೀಕಾಹಳೀಮುಖ್ಯಶುಭ
ವಾದ್ಯ ಕಲಕಲಂ | ರಾಕೇಂದುಯೋಗದೊಳ್ಮೀರಿ ಮೇರೆಯನುಕ್ಕುವಂಬುಧಿ
ಯತೆರೆದಿರುಗಲ || ಏಕೀಭವಿಸಿದ ಕಲಕಲದಂದದಿಂದೆ ಭೂ | ವ್ಯಾಕಾಶವಿ
ವರದೊಳ್ತುಂಬಿ ತಾನೇನೆಂಬೆ | ನೀಕುಶಲವಾರ್ತೆಯಂ ಘೋಷಿಸಲ್ಕೆನೆದಿಕ್ಕು
ದಿಕ್ಕಿನೊಳ್ಪರಿದುದಮಮಾ ||೪೨||

ಒಡನೊಡನೆ ತಮ್ತಮ್ಮ ಪೀಠದಿಂದೆದ್ದುದ್ದು | ಕಡುಗಲಿಗಳೆಂದೆನಿಪ
ಪಲಬರವನೀಪಾಲ | ರೊಡವೆರೆದು ನೃಪನೀತನೆಮ್ಮನಿಲ್ಲಿಗೆಬರಿಸಿ ಪರಿಕಿಸದೆ
ವಿಕ್ರಮವನು || ಫಡಫಡಾವಂಚಿಸಿದನಿಂತಿವನನೆಣಗೊಬ್ಬ | ನುಡುಗಿಸುವೆವೆಂ
ದು ಯುದ್ಧಕ್ಕೆಸನ್ನದ್ಧರಾ | ದೊಡೆ ವಿಮಲನವರೆಲ್ಲರಂ ಭುಜಪರಾಕ್ರಮದೆ
ಸೋಲಿಸಿದನಾಹವದೊಳು ||೪೩||

ವಿಮಲನುರುಶೌರ್ಯಮಂ ಶ್ಲಾಘಿಸಿ ಸುಧರ್ಮಭೂ | ರಮಣನಾಬಳಿಕಖಿಲ
ಬಂಧುಕುಲಸಹಿತನಾ | ಗಮಿತಸಂತೋಷದಿಂ ನಿರುಪಮಿತವಿಭವದಿಂ ಶಾ
ಸ್ತ್ರೋಕ್ತಪದ್ಧತಿಯೊಳು || ರಮಣೀಯಸರ್ವಾಂಗಭೂಷಣಾಲಂಕೃತೆಯ |
ರಮಣೀಶಿರೋಮಣಿಯ ನಿಜಸುತೆಯನಾತಂಗೆ | ಸುಮುಹೂರ್ತಸಮಯದೊ
ಳ್ಭಗವದರ್ಪಣಬುದ್ಧಿಯಿಂ ಧಾರೆಯೆರೆದಿತ್ತನು ||೪೪||

ಬಳಿಯೆಸಪ್ತಪದೀಪ್ರವೇಶಹೋಮಾದಿಸಂ | ಗಳನಿವಾಹಾಂಗಕರ್ಮ ಗಳನು ಕ್ರಮದೊಳಾ | ಯಿಳೆಯರಾಣ್ಮನಾವಧೂವರರನತಿಮುದದಿಂದೆ ನಿರತಿ ಶಯವಿಭವದಿಂದೆ || ಪೊಳಲೊಳಗೆ ಗಜವನೇರಿಸಿದಿಕ್ಕುದಿಕ್ಕಿನೊ | ಳ್ಮೊಳಗೆ ಶುಭವಾದ್ಯರವವುತ್ಸವವನಾಗಿಸಿದ | ಬಳಿಕ ತಾನಿಂತುತೊಡಗಿತು ವಸಂ ತೋತ್ಸವಂ ವೈವಾಹವುಂಟಪದೊಳು ||೪೫||

ಅರಸರೊಂದೆಡೆಯರಸಿತಿಯರದೊಂದೆಡೆಯಂತು | ಪರಿಜನವುದೊಂ ದೆಡೆಯುಮುರೆಕುತುಕದಿಂದೆ ಕ | ಸ್ತುರಿಯಕುಂಕುಮದ ಹಿಮವಾಲುಕೆಯ ಸಾರತರಚಂದನದ ವರಪುನಕವ || ಪರಿಮಳದಪಲಗೊಳಗಳೊಳ್ತುಂಬಿದೋ ಕುಳಿಯ | ಪರಿಹಾಸಗೈಯುತೆಪರಸ್ಪರರಮೇಲೆ ಸುರು | ಚಿರಕನಕನಾಳ ಕಾಯಂತ್ರಂಗಳಿಂ ಸೂಸಿದರ್ಬಹುವಿನೋದದಿಂದೆ ||೪೬||

ಬಳಿಕವದಿರೆಲ್ಲರುಂ ಪೇರುಕ್ಕೆವದೊಳ್ಬೆದಿ | ಪ್ರೊಳಲಪ್ರೊರಗಿರ್ಪಯ ಮುನಾನದಿಗೆ ತದ್ವಿಮಲ | ಸಲಿಲದೊಳ್ಮಜ್ಜನಂಗೈದುವಸನಾಭರಣಚಂದನ ಸುಮಂಗಳಿಂದೆ || ಕಲಿತಾಂಗನ್ನೈಪಥ್ಯರಾಗಾಹರಿಸಿ ವಿವಿಧ || ಫಲಭಕ್ಷ್ಯಭೋ ಜ್ಯಪಾನೀಯತಾಂಬೂಲಗಳ | ನೊಲವಿಂದೆ ಮರಳಬಂದುತ್ಸವದೊಳಾಸ್ಥಾನ ಮಂಟಪದೆಕುಳ್ಳಿರ್ದರು ||೪೭||

ಘಲ್ಲುಘಲ್ಲೆನೆಮಂಜುಮಂಜೀರವಾಸಮಯ | ದಲ್ಲಿ ನರ್ತಕಿಯರ್ವಿಲಾ ಸದಿಂ ನರ್ತಿಸಿದ | ರಲ್ಲಿ ಗಾಯಕರತಿಮನೋಜ್ಞಮೆನೆ ಪಾಡಿದರ್ಕುಶಲವಿದ್ಯಾ ನಿಪುಣರು || ಬಲ್ಲಿತಹತವುನ್ನು ಕೌಶಲ್ಯಮಂತೋರ್ದ | ರುಲ್ಲಾಸದಿಂ ಸ ಭಾಸದರೆಲ್ಲರುಂ ಸರಸ | ಸಲ್ಲಾಪಮಂಗೈಯುತಾನಂದದಿಂದೆ ಪರವಶಭಾವ ಮಂ ಪಡೆದರು ||೪೮||

ಸಿರಿಯೊಡನೆಸೇರ್ದಪಂಕೇಜಲೋಚನನಂತೆ | ಧರಣೀಧರೇಂದ್ರನಂದ ನೆಯ ಕಯ್ವಿಡಿದಶಂ | ಕರನಂತೆ ಪೌಲೋಮಿಯೊಡವೆರೆದಸುರಪಾಲನಂತೆ ರತಿಯೊಡಗೂಡಿದ || ಸ್ಮರನಂತೆ ರೋಹಿಣಿಯಸಂಗಮಂಪಡೆದ ಚಂ | ದಿರ ನಂತೆ ನಿರತಿಶಯಮೆನಿಪಾನುರೂಪ್ಯದಿಂ | ಮೆರದನಾ ಅಭಿರಾಮಚಂದ್ರಮು ಖಿಯೊಡಗೂಡಿವಿಮಲನತಿವಿಮಲಗುಣನು ||೪೯||

೨೪ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೪ಕ್ಕೆ ಪದ್ಯ ೧೦೨೯ಕ್ಕೆ ಮಂಗಳಮಸ್ತು.

ಇಪ್ಪತ್ತಯ್ದನೆಯ ಸನ್ಧಿ.

ಸೂಚನೆ ॥ ಗುರುದಕ್ಷಿಣಾರ್ಥದಿಂ ಭಾಷೆಗೊಟ್ಟಿರ್ದಂತೆ | ಪರಿಹರಿಸಿದುರ್ಮ್ಮುಖ
ಪ್ರಮುಖರಹ ರಾಕ್ಷಸರ | ನುರುಬಲಂ ವಿಮಲನುಪಮನ್ಯುಮುನಿ
ಪುಂಗವನಯಾಗಮಂ ರಕ್ಷಿಸಿದನು ॥

ಕಮಲಸಖಕುಲಮಣಿಯೆ ಕೇಳನಂತರದೊಳನು | ಪಮಿತಮಾನಸ
ಸಮುಲ್ಲಾಸದೆ ಸುಧರ್ಮ್ಮಭೂ | ರಮಣನಿತ್ತಳಿಯಂಗೆ ನಂದನೆಗೆಬಲುವಳಿಯ
ಬಂಧುಮಿತ್ರಾದಿಗಳ್ಗೆ ॥ ಸಮುಚಿತಕ್ರಮದೊಳುಡುಗೊರೆಗಳಂ ಕೊಟ್ಟು
ನಿಜ | ರಮಣಿಯಿಂದೊಡಗೂಡಿ ಪತಿಯೊಡನೆ ಪತಿಗೃಹಕೆ | ಗಮಿಸಲ್ಕೆಸನ್ನ
ದ್ಧೆಯಾದಣುಗಿಯಂನೋಡಿ ಮುಡಿದಡವುತಿಂತೆಂದನು ॥೧॥

ತನುಜಾತೆ ನೀನೆಲ್ಲಮಂಬಲ್ಲೆಯಾದೊಡಂ | ನಿನಗೆ ಮತಿವಾದಮಂ
ಪೇಳ್ವುದೆಮ್ಮಯಕಾರ್ಯ | ಮೆನಿಸಿಹುದರಿಂ ಪೇಳ್ವೆನಾಲಿಸಾ ತಲೆವಾಗಿನಡೆಹಿ
ರಿಯರಾದವರೊಳು ॥ ಅನಿಶಮುಂ ನೆರೆನಲಿಯುತಿರಬೇಡನಿಜಸಖಿ | ಜನ
ದೊಡನೆ ಮನೆವಾರ್ತೆಯೊಳ್ನಿರತೆಯಾಗಿಹುದು | ವನಿತಾಜನಕ್ಕೆ ನಾಚ್ಕೆಯುಮ
ವೆನಿತಿರ್ದೊಡನಿತೊಳ್ಳಿತೆಂದರಿಮನದೊಳು ॥೨॥

ಸುತೆಯೆ ನೀನೆಳ್ಳನಿತ್ತಾದೊಡಂ ಮೀರದಿರು | ಪತಿಯಾಜ್ಞೆಯಂಪತಿ
ಯಮತವೆನಿಜಮತವೆಂದು | ಮತಿಯೊಳೆಣಿಸಿರು ಪತಿಯನುಡಿಗೆಪಡಿನುಡಿ
ಯದಿರು ರಾಜಕಾರ್ಯಂಗಳಲ್ಲಿ ॥ ಪತಿಗೆ ಕೇಳ್ಮುಖ್ಯಮಂತ್ರಿಣಿಯೆನಿಪುದೊ
ಡಗೂಡಿ | ಪತಿಯಿಂದೆ ವಿಹಿತಸತ್ಕ್ರಿಯೆಗಳಂ ಮಾಡುವುದು | ಪತಿಯೆಪರ
ದೇವತೆಯೆನುತ್ತೆ ಭಾವಿಸಿ ಮನದೆಪತಿಗೆ ಹಿತೆಯಾಗಿರ್ಪುದು ॥೩॥

ಸತಿಯರಾದವರ್ಗೆನ್ನ ಮುದ್ದಿನರಗಿಳಿಯೆ ಕೇ | ಳ್ಕೃತನಾದುದಾಪಿ
ತನ ಮಾತೃವಿನ ಸೋದರನ | ಸುತನ ಮಿತ್ರರಬಾಂಧವಲೋಕದಾದರಣೆ
ಯೆಂಗೆಂಬುದೇನೆಂಬೆನು ॥ ಕ್ಷಿತಿತಳದೊಳವರು ಪತಿಯಾದರಣೆಯಿಂದೆತಾ
ನತಿಶಯದೊಳಮಿತವಾಗಿರ್ಪುದದರಿಂದೆನೀಂ | ಪತಿಯೆ ನಿಜಸರ್ವಸ್ವಮೆಂದೆ
ನುತೆ ಸರ್ವಪ್ರಕಾರದೊಳು ಮೆಣಿಸಿರ್ಪುದು ॥೪॥

ಕಡೆಗಣಿಸಬೇಡ ಗುರುದೇವತಾತಿಥಿಗಳಂ । ನುಡಿಯದಿರುತೊತ್ತಿರೊ
ಳ್ಕುರಿನವಚನಂಗಳಂ । ಬಡವರೊಳ್ಕರುಣೆಯಿಡು ಮುದದುಬ್ಬಿನಿಂಗರ್ವಪಡ
ಬೇಡ ಸಂಪದದೊಳು ॥ ಬಿಡದಿರು ಸದಾಚಾರಸರಣಿಯಂ ಮಾನಸದೊ । ಳ
ಡು ಮರೆಯದಿದನೆಲ್ಲಮುಮನೆಂದು ನುಡಿದಡವಿ । ಮಿಡಿಯುತ್ತೆ ಕಂಬನಿಯ
ತಡಬಡಿಸೆ ನುಡಿ ವತ್ಸೆಪೋಗಿಬಾರಾ ಎಂದನು ॥೫॥

ಒಡವೆರೆದನಂತರಂ ಕೆಳದಿಯರೊಳವರವ । ರ್ಕಡುನೇಹದಿಂದೆಬಿಗಿದ
ಪ್ಪಿಬಿಡಲಾರದವೊ । ಗಡಿಗೆ ಕಂಬನಿದುಂಬಿ ನುಡಿವನುಡಿಗಳನಾಲಿಸುತ್ತೆ ಬಹು
ಕಷ್ಟದಿಂದೆ ॥ ಬಿಡಿಸಿಕೊಂಡವರಿಂದೆ ಬಂದವಲ್ಲಭೆಯೊಡನೆ । ಪೊಡಮಟ್ಟು
ಪಿರಿಯರ್ಗೆ ವಿಮಲನವರಾಸಿಯುಂ । ಪಡೆದು ರಥವೇರಿಬಲಪರಿವಾರಸಹಿತನಾಗ
ಲ್ಲಿಂದೆ ಪೊರಮಟ್ಟನು ॥೬॥

ಅಂತಃಪುರದೊಳಿಂದೆ ಸೌಧಾಗ್ರಮೇರಿಕ । ಣ್ಗಂತರಿಸುವನ್ನೆಗಂನೋ
ಡುತಿರೆ ನಗರಸೀ । ಮಾಂತಕ್ಕೈತಂದೊಡನೆಬಂದ ಬಾಂಧವಜನವನುಚಿತೋ
ಕ್ತಿಯಿಂ ಮನ್ನಿಸಿ ॥ ಕಾಂತಾರಗಿರಿನದಿಗಳಂದಾಂಟಿ ನಿಜಪುರಿಗೆ । ಸಂತೋಷ
ದಿಂದೆಬಂದಾ ವಧೂವರರನ । ತ್ಯಂತವಿಭವೋತ್ಸವದೊಳರಮನೆಯಪುಗಿಸಿ
ದಂ ಧವಳಾಶ್ವಭೂಪಾಲನು ॥೭॥

ಅರಸನಾಬಳಿಕ ಪರಿಪಂಥಿನೃಪವಿಜಯದಿಂ । ಧರೆಯೊಳ್ಮಹಾವೀರವಿ
ಖ್ಯಾತಿಯುಂ ಪಡೆದ । ನಿರುಪಮ ಪ್ರಜ್ಞಾಬಲಂಗೆ ವಿಮಲಂಗೆ ಸಕಲಪ್ರಜಾ
ಸಮ್ಮತಿಯೊಳು ॥ ನೆರೆವಿಭವದಿಂ ಯೌವರಾಜ್ಯಾಭಿಷೇಕಮಂ । ವಿರಚಿಸಿಧರಿ
ತ್ರಿಯಂ ಧರ್ಮದಿಂ ಸಲಹುತಿರೆ । ವಿರಹಿಜನಹೃದಯಶೂಲಂ ಶಿಶಿರಕಾಲಂ ಧರಾ
ತಲದೊಳಡಿಯಿಟ್ಟುದು ॥೮॥

ಮುಸುಕಿರ್ದಮಂಜಿನಿಂ ಬೆಳ್ಗೊಡಾರಂಗಳಂ । ತೆಸೆಯೆ ಧರಣೀಧರ
ಗಳಲ್ಲಲ್ಲಿ ತಟನಿಗ । ಳ್ಪೊಸರ್ಯುವೀಚಿಗಳಪಾಂಗಿನಿಂ ಕಂಗೊಳಿಸೆ ಚಳಿಯಾ
ಳಸೇನೆಯೊಡನೆ ॥ ನಿಸದಂ ಹಿಮಪ್ರಸನರಥವೇರಿಧಾಳಿಟ್ಟು । ವಸುಧೆಯಂನಡು
ಗಿಸಿದ ಶೀತಭೂಪತಿಯ ಬೆ । ಳ್ಪಸದವೋಲ್ಪೊಳ್ತಡಂ ಮಂಜುದೆಸೆದೆಸೆಯನಿ
ರದಾಗಳಾವರಿಸಿರ್ದುದು ॥೯॥

ಪ್ರಾತರವಸರದೆ ವೈದಿಕಜನಂ ಪಾವನನ | ದೀತಟಾಕಾದಿಜಲದೊಳ್ಮಜ್ಜನಂಗೈದು | ಧೌತವಸ್ತ್ರಮನುಟ್ಟು ಬಾಯ್ತೆಗಲೆ ಚಿತ್ತದೊಳ್ಮಂತ್ರಂಗಳಂ ಜಪಿಸುತೆ ‖ ಬೈತುಕೊಳ್ವರ ತೆರದೊಳಂಗಮಂ ಮುದುಡಿಕೊಂ | ಡೈತಂದು ನಡುಗುತಲ್ಲಿಂದೆ ಬೇಗನೆ ಮನೆಗೆ | ಶೀತಸಂತ್ರಾಸಮಂ ಕಳೆಯಲೆನೆ ಮೊದಲಗ್ನಿಹೋತ್ರಕೆರಗುತ್ತಿರ್ದಪರು ‖೧೦‖

ತಳಿರ್ಗಳಿಂ ಪೂಗಳಿಂ ಪಣ್ಗಳಿಂತಳೆದು ಕ | ಣ್ಗೊಳಿಪ ತರುಲತೆಗಳಿಂ ಭ್ರಮರಝುಂಕಾರದಿಂ | ಮಲಯಮಾರುತಪರಿಸ್ಪಂದದಿಂ ತಿಳಿನೀರ ಕಮಲಾಕರಂಗಳಿಂದೆ ‖ ತೊಳಲಿಸಿದೊಡಂ ವಿರಹಿಗಳನಿತರ ಋತುಗಳೀ | ನೆಲದೊಳ್ವಯಸ್ಥಲೋಕಂ ಪರಸ್ಪರವಿರಹ | ದಳಲನರೆನಿಮಿಸಮುಂ ಸೈರಿಸವ ಶಿಶಿರ ಋತುಗೆಣೆಯೆನಿಪುದೊಂದುಮಿಲ್ಲ ‖೧೧‖

ಕುಳಿರ್ಗೆ ಸೈರಿಸದುದಿರ್ಕೊಳುತೆ ಕರತಳದೆ ಕರ | ತಳವನುದ್ಯಾನಮಂ ಪೊಕ್ಕು ಪೊಳ್ತಡವಳಿಸು | ರಲರ್ಗೆ ಮೊಲ್ಲೆಯ ಪೂಗಳಂ ಕೊಯ್ಯುತೈಕಿಲೊಡವರೆದ ಮಕರಂದರಸಕೆ ‖ ಅಳಿಕುಲಂ ಮುಸುಡನಿಕ್ಕದೆ ಸುರಭಿಕಾಳಕಾ | ವಳಿಗೆರಗಲೊಡಾಡುತತ್ತಿತ್ತ ಮಂಸೋವಿ | ತಿಳಿದರಾಬಾಧೆಯಂ ಗುಣಿಕೆಸಂಚಲನದಿಂದುಣ್ಮಿ ಸೆಗಳಕೆಮೊಯ್ಯೊಳು ‖೧೨‖

ಪರಿಹರಿಸದೇನೆಂಬೆನತಿಮಾನದಾಕ್ಷಿಣ್ಯ | ಪರನಾಗಿ ತೇಜೋನಿಧಾನನೆನಿಸಿರ್ದೊಡಂ | ಸರಸಿರುಹಬಾಂಧವನುಪೇಕ್ಷೆಯಂ ಮಾಡಿದುದರಿಂದೆ ಮೊದಲಾ ಬಳಿಕ್ಕ ‖ ಪರಿವಿಡಿಯೊಳೇಳ್ಗೆಯಂ ಪಡೆದ ಹಿಮನಿವಹದಿಂ | ಪರಿಭೂತನಾಗುತಾಸಮಯದೊಳ್ಸೈರಿಸದೆ | ಪರಿಹರಿಸಲದನುಗ್ರತೇಜನಾಗುತ್ತರತ್ರದೆ ದೃಷ್ಟಿಯಿಟ್ಟಿರ್ದಪನು ‖೧೩‖

ಅರಲ್ಗಳಿಂ ಕಾಯ್ಗಳಿಂ ಪಣ್ಗಳಿಂ ತಳಿರ್ಗಳಿಂ | ನೆರಲಿಂದೆ ಪೊರ್ದಿರ್ದವರಂ ತಣಿಯಿಸುತ್ತಿರ್ದ | ಮರಗಳೇನೊಂದುಮಿಲ್ಲದೆ ಬರಿದುವಾದೊಡಂ ಕಾಲವಶದಿಂ ಬಳಿಕ್ಕ ‖ ನಿರುಕಿಸಿದೊಡೆಲ್ಲಿಯುಂ ಕೊನರುತಿರ್ದಪವೀ | ಧರಣಿಮಂಡಲದೊಳನವರತಂ ಪರೋಪಕೃತಿ | ನಿರತರಾದೊಳ್ಪದರ್ಗೊರ್ಮೆ ಬಡತನಮಡಸಿದೊಡಮದೇಂ ಸ್ಥಿರಮಿಪ್ಪುದೇ ‖೧೪‖

ಯೋಗಿಕುಲತಿಲಕನುಪಮನ್ಯುವಾಸಮಯದೊ | ಳ್ಯಾಗಕ್ಕೆ ಸಂಕಲ್ಪಮಂ ಮಾಡಿ ಮೊದಲ್ ಚಕ್ಕೈ | ತ್ಯಾಗಮಕೆ ವಿಮಲನಂ ಕರೆತರ್ಪುದೆಂದಟ್ಟೆ ಪೈಲನಾಹ್ವಯ ಶಿಷ್ಯನ ‖ ಬೇಗನಲ್ಲಿಂದವಂ ಚಿತ್ರಧರೆಗೊಲವಿಂದೆ | ಸಾಗಿ ಬಂದರಮನೆಯಮುಂದೆ ನಿಲ್ವುದುಮುದಂ | ಬಾಗಿಲೊಳಗಿರ್ದಾಳ್ಗಳೋಲಗದೊಳಿರ್ದರಾಯಂಗೆ ವಿಜ್ಞಾಪಿಸಿದರು ‖೧೫‖

ಜನಪಾಲನಾನುಡಿಯ ಕೇಳ್ದೊಡನೆ ನಡೆತಂದು | ತನಯನೊಡನಭಿವಾದನಂಗೈದು ಸತ್ಕರಿಸಿ | ವಿನಯದಿಂ ನಿಜಸಭಾಸ್ಥಾನಕ್ಕೆ ಕರೆದೊಯ್ದು ಕುಳ್ಳಿರಿಸಿ ವಿಷ್ಟರದೊಳು ‖ ಮುನಿಪನೆ ಸುಖಾಗಮವೆ ಗುರುಗಳ ತಪಃಕರ್ಮ | ವನುಪರೋಧದೆ ಬಳೆಯುತಿರ್ಪುದೆ ಸಾಂಪ್ರತದೊ | ಳೆನಗೆ ನೇಮಿಸುವುದೊಲ್ದೆನ್ನಿಂದೆ ನಿಮಗಾಗತಕ್ಕುದಂ ಕಾರ್ಯವನೆನೆ ‖೧೬‖

ಮುನಿಶಿಷ್ಯನಾನುಡಿಗೆ ಸಂತಸಂಗೊಂಡೆಲೈ | ಜನಪಾಲ ಗುರುಗಳ ತಪಃಕರ್ಮವಿಘ್ನವರ | ಮನುಪರೋಧದೆ ಬಳೆವುವವರೀಗಳಧ್ವರಕೆ ಸಂಕಲ್ಪಮಾಡಿ ನಿನ್ನ ‖ ತನಯನಂ ತದಭಿರಕ್ಷಣೆಗೆ ಕರೆತರ್ಪುದೆಂ | ದೆನಗೆ ಶಾಸನವೀಯಲಾನಿತ್ತಲೈತಂದೆ | ನೆನೆ ಕೇಳ್ದು ಮನದೊಳನಿಸಾಲೋಚನಂಗೈದು ಧವಳಾಕ್ಷನಿಂತೆಂದನು ‖೧೭‖

ಯಮಿಪ ನೀವಿಂದಿಲ್ಲಿ ವಿಶ್ರಮಿಸಿಕೊಂಡಿರ್ದು | ಗಮಿಪುದಾಶ್ರಮಕೆ ಯಾಗಾಭಿರಕ್ಷಣಕಾರ್ಯ | ವೆಮಗೆ ತಾಂ ಸೇರ್ದುದೆಂದೊರೆದಲ್ಲಿಗೈದಲುದ್ಯುಕ್ತನಾದಾತ್ಮಜನನು ‖ ಅಸುರವೈರಿಗಳೊಡನೆ ಕಾಳಗಕ್ಕಟ್ಟಲ್ಕೆ | ವಿಮನಸ್ಕನಾಗಿ ಚಿಂತಿಸುತಾತನಂ ನೋಡಿ | ಕುಮರನೀನೇತಕ್ಕೆ ಗುರುಯಾಗಕಾರ್ಯಕಾನೇಪೋಗಿ ಬಹೆನೆಂಗನು ‖೧೮‖

ಉರುಬಲಂ ಕೇಳ್ದದಂ ವಿಮಲನೆಲೆತಂದೆಕೇ | ಳ್ಗುರುದಕ್ಷಿಣಾರ್ಥದಿಂ ಮಖರಕ್ಷಣೆಯನೆನಗೆ | ಗುರುವರಂ ನೇಮಿಸಿರ್ಪುದರಿಂದೆ ನೀವೆಂತದಕ್ಕೆ ಪೋಗುವಿರೆನಲ್ಕೆ ‖ ಅರಸನೆಲೆವತ್ಸಕೇಳ್ರಣದೊಳನ್ನುಂ ನಿನಗೆ | ಪರಿಚಯಂ ಸಾಲದಾಯೋಧನಂ ಯಾಮಿನೀ | ಚರರೊಡನದಾರಾದೊಡೇಂ ಮುನಿಯ ಯಾಗಸಂರಕ್ಷಣಂ ಮುಖ್ಯಮೆನಲು ‖೧೯‖

ಅದನಾಲಿಸಿದ ವಿಮಲನೆಲೆಜೇಯ ಮದ್ವಿಕ್ರ | ಮದೊಳೇಕನಿನಗೆ
ನಂಬುಗೆಯಿಲ್ಲ ನಿನಗಿರ್ದ | ಪ್ಪುದು ಸಿರತಿಶಯಮಾದಸಾಮರ್ಥ್ಯಮಾಹವದೆ
ಘೋರರಾತ್ರಿಂಚರರನು || ಸದೆದು ಗುರುಯಾಗಮಂ ರಕ್ಷಿಸಲ್ಕಾದೊಡಂ |
ಸದನದೊಳ್ ತರುಣನಾದಾನಿರ್ದು ವೃದ್ಧರೆನಿ | ಸಿದ ನಿಮ್ಮನಸುರರೊಡನಾಹ
ವಕೆ ಕಳುಹಿದೊಡೆ ನಗದೆ ಲೋಕಂತನ್ನನು ||೨೦||

ಇದುಮಿರಲಿವೀರ ಸುಕ್ಷತ್ರಿಯಾನ್ವಯದೊಳವ | ನುದಿಸಿ ಗುರುದಕ್ಷಿ
ಣಾವಿಷಯದೊಳ್ಗುರುನೇಮಿ | ಸಿದ ಕಾರ್ಯಮಂ ಸಾಧಿಸದೆ ಕಳೆದನೆಂದಿಳೆಯೊ
ಳೆನಗಪಯಶಂ ಬಾರದೆ || ಇದರಮೇಲಾಮಹಾಮುನಿ ಸುಲಭಕೋಪನಾ |
ದುದರಿಂದೆ ತಾನಿರದೆ ಶಾಪನಿತ್ತೊಡೆ ವೀರ | ಲದು ಸಾಧ್ಯವೇನೆಮಗೆನೀವಿಂ
ತಿದೆಲ್ಲವಂ ತಿಳಿಯದರೆ ಪೇಳಲೇನು ||೨೧||

ಒರ್ವಮುನಿ ಹೂಂಕರಿಸಿ ಪೀರ್ದನಂಭೋನಿಧಿಯ | ನೊರ್ವನಿದ್ರಂಗ
ಧೋಗತಿಯನಿತ್ತಂ ಮತ್ತ | ದೊರ್ವನೇಕಕ್ಷಣದೊಳುರುಪಿದಂಸಗರಸುತರರು
ವತ್ತುಸಾಸಿರವನು || ಒರ್ವನುಜ್ಜುಗಿಸಿದಂ ಬೇರೆಜಗಮಂಸೃಜಿಸ | ಲೊರ್ವ
ನವನಿಪರನೇಕರಕುಲವನಳಿಯಿಸಿದ | ನೊರ್ವನೈದುವರವಿಯನಿಲಿಸಿದಂ ಮುನಿ
ಶಕ್ತಿಸಾಮಾನ್ಯವೇ ಎಂದನು ||೨೨||

ತಲೆದೂಗಿ ಧವಳಾಶ್ವನಾನುಡಿಗೆ ಭೂಪ್ರಭೂ | ಪೆಲೆವತ್ಸ ನಿನ್ನುಕ್ತಿಯು
ಕ್ತಮಾಗಿರ್ದಪುದು | ಖಲರನಳ್ಕಾಡಿಮುನಿಮಖವನಾಗಿಸಿ ನೀನೆ ವಿಜಯಮಂ
ಸಾಧಿಸೆನಲು || ಕಲಿವಿಮಲನಾಶಾಸನವನುತ್ತಮಾಂಗದೊ | ಳ್ತಳೆದೆರಗಿಗುರು
ಜನದ ಹರಕೆಯುಂ ಕಯ್ಕೊಂಡು | ಬಳಿಕ ಸನ್ನದ್ಧನಾಗಿ ನಿಮುಳಂಕಾಣಲ್ಕೆ
ಪೊಕ್ಕನಂತಃಪುರವನು ||೨೩||

ಅಲ್ಲಿ ತನ್ನಂಕಂಡು ಗದ್ದುಗೆಯನುಳಿದೆದ್ದ | ವಲ್ಲಭೆಯನಪ್ಪಿಪುಳಕಿತ
ಗಾತ್ರನಾಗಿ ಕೇ | ಳ್ನಲ್ಲೆ ಗುರುಮುಖರಕ್ಷಣಾರ್ಥದಿಂದಸುರವಿಜಯಕೆಪೋಗಿ
ಬಹೆನೆನಲ್ಕೆ || ಫುಲ್ಲನವಸರಸೀರುಹಾನನೆ ಸುಲೋಚನೆ ಸ | ಮುಲ್ಲಾಸದಿಂ
ಕವಚಶಸ್ತ್ರಂಗಳತ್ತಿನಿಯ | ಗೆಲ್ಲದಿಂ ಮೆರೆಯುತ್ತೈತಹುದೆಂದು ತವೆಮಂಗ
ಳಾಶಂಸೆಯಂಗೈದಳು ||೨೪||

ಬಳಿಕ ಬಲಪರಿವಾರಯುತನಾಗಿ ರಥವೇರಿ । ಕಲಿವಿಮಲನಲ್ಲಿಂದೆ ಮುನಿಶಿಷ್ಯನೊಡಗೂಡಿ । ತಳರ್ದುಸೇರ್ದಾಶ್ರಮವನುಪಮನ್ಯುಮುನಿಪನಂಕಂಡೆರಗಲಾಮಹಿತನು ‖ ಬಲವುಮಿಗೆ ಪರಸಿ ಮಖದೀಕ್ಷೆಯ ಸುಲಗ್ನದೊ । ಳ್ತಳೆದನಾ ಸುದ್ದಿಯಂಕೇಳ್ದು ಬೊಬ್ಬಿರಿಯುತ್ತೆ । ದಳದುಳನೆಬಂದ ರಕ್ಕಸರಾಯುವಂ ವಿಮಲನಾನಿಮಿಷದೊಳ್ತೊಡೆದನು ‖೨೪‖

ಚರರಮುಖದಿಂದೆ ತಿಳಿದಾವಾರ್ತೆಯಂ ನಿಶಾ । ಚರಯೂಥನಾಯಕಂ ಮಾಯಾವಿದುರ್ಮುಖಂ । ಭರದಿಂದೆಬಂದು ನಿಜಪರಿವಾರಸಹಿತನಾಗಾಕ್ರಮಿಸೆ ಮಖಶಾಲೆಯ ‖ ಉರವಣಿಸಿ ಕಲಿವಿಮಲನುರುತರಕ್ರೋಧದಿಂ । ನಿರುಪಮಾನೇಕದಾರುಣಮಾರ್ಗಣಂಗಳಂ । ದರಗಳಗೆಯೊಳಗವರನೆಲ್ಲರಂಬಿಡದೆ ಬಲಿಗೊಟ್ಟನಾಮಖಶಾಲೆಗೆ ‖೨೫‖

ರಾಮಚಂದ್ರಂಪಿಂದೆ ರಕ್ಷಿಸಿದತೆರದೆ ವಿ । ಶ್ವಾಮಿತ್ರಯಾಗಮಂಸಲಹಿ ನಿಜಗುರುಮಖವ । ನಾಮಹಾಮುನಿಯಿತ್ತ ರಕ್ಷೋಘ್ನನೆಂಬಪೆಸರಂಪಡೆದು ಚಿತ್ರಧರೆಗೆ ‖ ಕ್ಷೇಮದಿಂಸಕಲಲೋಕಪ್ರಥಿತ ನಿರ್ಮಲಯ । ಶೋಮಹಿಮನಾಗಿಬಂದಾತ್ಮಭವನಂ ನಿರುಪ । ಮಾಮೋದದಿಂದೆ ಧವಳಾಶ್ವನೃಪನುತ್ಸವದೊಳರಮನೆಗೆ ಕರೆಯಿಸಿದನು ‖೨೬‖

ಸಾಮಂತಭೂಕಾಂತಮಕುಟವಿಲಸನ್ಮಣಿ । ಸ್ತೋಮಪ್ರಭಾರಾಜಿವಿಭ್ರಾಜಮಾನಾಂಘ್ರಿ । ತಾಮರಸಗಾಂಗೇಯಪೀಠನೆಂದೆನಿಸಿ ಯುವರಾಜನಾಗಿಪ ವಿಮಲನು ‖ ಭೀಮತರಭುಜವಿಕ್ರಮಪ್ರಸರದೊಳ್ಪರಶು । ರಾಮನಂಮತಿ ಚಾತುರಿಯೊಳಮರಗುರುವನು । ದ್ದಾಮಸಂಪತ್ತಿಯೊಳ್ಶಂಭುಸಖನಂ ಪೋಲುತಿಹನೀಗಳೀಧರೆಯೊಳು ‖೨೭‖

ಪರಿಕಿಪೊಡೆ ಶಸ್ತ್ರಾಸ್ತ್ರಪಾಂಡಿತ್ಯದೊಳ್ಕನಗೆ । ಸರಿಗಯ್ಯನೆನಿಪಾತನಿರದೆ ಮುಂದೆಮ್ಮ ಮಖ । ತುರಗಮಂತಡೆದೊಡವನಿಂದವಂ ಬಿಡಿಸಿಕೊಳ್ವುದು ಕಷ್ಟಸಾಧ್ಯಮೆನಲು ‖ ಆರರೆ ಸಚಿವೇಂದ್ರಭಯಮೇಕಿನಿತ್ತನಿಬರಿ । ಲ್ಲುರುಪರಾಕ್ರಮರೆಮ್ಮೊಳಂತಪ್ಪವೀರಾಗ್ರ । ಸರರೆಂದದಂ ಸಡ್ಡೆಗೈಯದೆಯಿರಾಮಚಂದ್ರಾನುಜಂ ಮುಂಬರಿದನು ‖೨೮‖

೨೪ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೪ಕ್ಕೆ ಪದ್ಯ ೧೦೪೭ಕ್ಕೆ ಮಂಗಳಮಸ್ತು.

ಇಪ್ಪತ್ತಾರನೆಯ ಸನ್ಧಿ.

ಸೂಚನೆ ‖ ತನಯ ಮುಖದಿಂದೆ ಧವಳಾಶ್ವನಾಲಿಸಿ ಸುಲೋ | ಚನೆಯನುಡಿಯಂ ನಿಜಪುರೋಹಿತಸದಾನಂದ | ಮುನಿಮುಖದೆ ರಾಮತತ್ವವನರಿದು ಕುದುರೆಯಂ ಸೌಮಿತ್ರಿಗೊಪ್ಪಿಸಿದನು ‖

ಅವಧರಿಸು ಮುನಿಶಿಖಾಮಣಿಯೆ ಮುಂದಣ ಕಥಾ | ವಿವರಮಂ ಪ್ರತ್ಯರ್ಥಿಪೃಥ್ವೀಶಮಂಡಲೀ | ದವಶಿಖಿಪ್ರಿಯ ದಾರುಣಭುಜಪರಾಕ್ರಮಂ ಸಕಲ ಸಂಪತ್ತಿ ಶಾಲಿ ‖ ಧವಳಾಶ್ವನೃಪತಿ ಪಾವನತುರಗಮೇಧಯಾ | ಗವನೆಸಗಲುದ್ಯುಕ್ತನಾಗಿಯಾಗಾರ್ಹಸ್ಯಂ | ಧವವನೆಲ್ಲಿರ್ದೊಡಂ ತಹುದೆಂದು ಯುವರಾಜವಿಮಲಂಗೆ ಬೆಸನಿತ್ತನು ‖೧‖

ಶಿರದಲ್ಲಿ ತಳೆದು ಪಿತನಾಜ್ಞೆಯಂ ವಿಮಲನ | ಧ್ವರತುರಗಮಂ ತರಲ್ಕಪರಿಮಿತಬಲದೊಡನೆ | ಪೊರಮಟ್ಟು ವಾಜಿಪುರನಂ ಪಯುತ್ತಿ ನಿಜಕಾರ್ಯಸಂಗತಿಯ ವಾಜಿಪತಿಗೆ ‖ ಚರರ ಮುಖದಿಂದೆ ನಯಮಾರ್ಗದಿಂದರಿಪಿದೊಡೆ | ನಿರವಧಿಕಕೋಪದಿಂದಾ ಚರರ್ಕಳನವಂ | ತರುಬಿಸಿ ನಿಜಾಸ್ಥಾನದಿಂ ಸೈನ್ಯದೊಡನೆ ಸನ್ನದ್ಧನಾದಂ ಯುದ್ಧಕೆ ‖೨‖

ಬಳಿಕ ತಿಳಿದವನೆಲ್ಲಮಂ ನಿಖಿಲಬಲದೊಡನೆ | ದಳದುಳನೆ ವಿಮಲನೊರ್ಮೊದಲೆ ಭೇದಿಸಿ ಪೊಳಲ | ನೊಳಪೊಕ್ಕು ಮೇಲ್ವಾಯ್ದು ಪರವೀರಯೋಧರ ವರೂಥಿನಿಯನೊಕ್ಕಲಿಕ್ಕಿ ‖ ನೆಲದೆ ಪರಿಯಿಸಿ ಭೂರಿರಕ್ತಪ್ರವಾಹಮಂ | ಮುಳಿದಿದಿರಿಸಿದ ವಾಜಿಪತಿಯುಗೆಲ್ದು ಡಗೊಂಡು | ಬಲುಹಿಂ ತದೀಯೋತ್ತಮಾಶ್ವಂಗಳಯ್ನೂರನಲ್ಲಿಂದೆ ಪೊರಮಟ್ಟನು ‖೩‖

ಬರುತವಂ ಬಲದೊಡನೆ ನಿಜನಗರಿಗಿಕ್ಷ್ವಾಕು | ವರನಧ್ವರಾಶ್ವಮಂ ಕಂಡದರ ಪಣೆಯೊಳಿರೆ | ಮೆರೆವ ಕಾಂಚನಪಟ್ಟಕಾಲೇಖನವಮನೋದಿ ಕಾಪಲಾಳ್ಗಳ ಪಡೆಯನು ‖ ಉರುಬಿ ಜಡಿದೆಬ್ಬಟ್ಟಿ ಬಿಡದವಂ ತಡೆದು ತಾಂ | ತರುತಿರ್ಪ ತುರಗಂಗಳೊಡನೊಲವಿನಿಂ ಚಿತ್ರ | ಧರೆಗೊಯ್ದು ಸಭೆಯಲ್ಲಿ ಕುಳ್ಳಿರ್ದ ತಂದೆಯಂ ಸಾರ್ದು ಮಣಿದಿಂತೆಂದನು ‖೪‖

ಜೀಯಕೇಳ್ವಜಿನಗರಕ್ಕೈದಿ ವಾಜಿಪತಿ | ರಾಯನಂಸೇನೆಯೊಡನಾಹವದೆಗೆಲ್ದವನ | ರಾಯದೊಳಗಿರ್ದ ಸಲ್ಲಕ್ಷಣಾಶ್ವಂಗಳಯ್ನೂರನಾಂತರ್ಪಡೆಯೊಳು || ಈ ಯಾಗಹಯವೊಂದುದೊರೆದುದಿದು ರಾಮಾಭಿ | ಧೇಯನಾದೊರ್ವರಾಯನದೆಂದೊಡಾ ಮುಹಿ | ನಾಯಕಂಕೊಂಡಾಡಿ ಮಗನದಟನಟ್ಟಿದಂಚರನಂ ಪುರೋಹಿತಂಗೆ ||೫||

ಬಳಿಕತ್ತ ಸೌಮಿತ್ರಿ ಹಯನಿರೋಧವನರಿದು | ಮುಳಿದು ರತ್ನಾನದೀತೀರವನರಾಜಿಯೊ | ಳ್ಬಲಮೆಲ್ಲಮಂಬಹುಳದೂರಂಬರಂಪಾಳಯಂಗೊಳಿಸಿಧವಳಾಶ್ವನು | ತಿಳಿದನಂ ನಿಜಗೂಢಚಾರರಿಂದಾಕ್ಷಣಮೆ | ಪೊಳಲನರಿಬಲಮಾಕ್ರಮಿಸುವಂತೆ ಸನ್ನಾಹ | ಗೊಳಿಸಿ ನಿಜಚತುರಂಗವಾಹಿನಿಸಂಸನ್ನದ್ಧನಾದನಾಯೋಧನಕ್ಕೆ ||೬||

ಅದನೆಲ್ಲಮಂ ಸುಲೋಚನೆ ಬಳಿಕ ತಿಳಿದಿದೇ | ನಿದುರಮಣರಣಸಮುದ್ಯಮಮೊಂದು ಬೆಸಗೊಳ | ಲ್ಕೊಡಲಿಂದೆ ವಿಮಲನಾಹವದನೆಲ್ಲಮಂ ತಿಳುಪುವುದುಮಮಾ ಪರಾಪರಜ್ಞೆ || ಹೃದಯೇಶಕೇಳ್ರಾಮನಶ್ವಮೇಧಾಧ್ವರದ | ಕುದುರೆಯಂ ತಡೆವರೆ ವಿವೇಕಿಗಳ್ಬಹುಬಲ | ಮದದಿಂದೆ ದಾಶರಥಿರಾಮನೇಂ ಸಾಮಾನ್ಯಭೂಮೀಶನೇ ಎಂದಳು ||೭||

ಆ ನುಡಿಗೆ ನೆರೆಬೆಕ್ಕಸಂಬಡುತೆ ವಿಮಲನತಿ | ಮಾನಕೌತುಕದಿಂದದಂ ವಿಮರ್ಶಿಸಲೆಳಸಿ | ಮಾನಿನಿಯೆ ವೀರವಧುವೆನಿಸಿ ನೀನಿಂತು ನುಡಿವರೆಯೆಂದು ಬೆಸಗೊಂಡೊಡೆ || ಆ ನೃಪಕುಮಾರಿಕೇಳ್ಪ್ರಿಯಕನ್ಯಕಾದಶೆಯೊ | ಳಾನಿರ್ದ ಕಾಲದೊಳ್ಪಿತೃಕುಲದ ತೀರ್ಥಯಾ | ತ್ರಾನಿಮಿತ್ತದೆ ಧರ್ಮಪುರಕಸಿತಮುನಿ ಮಾರ್ಗವಶದಿಂದೆ ತಾಂ ಬಂದನು ||೮||

ಅರಸಕೇಳಾ ಮಹಾಯೋಗೀಂದ್ರನುಚಿತಸ | ತ್ಕರಣೆಯಂ ತಂದೆಯಿಂಕಯ್ಕೊಂಡು ನಿಲ್ತನೆ | ಮ್ಮರಮನೆಯೊಳೊಲ್ದು ಸನ್ನಿಹಿತಚಾತುರ್ಮಾಸ್ಯ ಸಂಕಲ್ಪಸಾಧನಕ್ಕೆ || ಪಿರಿದು ಸಂತಸಗೊಂಡದಕ್ಕೆಮ್ಮ ತಂದೆಯಾ | ಪರಮರ್ಷಿಯಂಘ್ರಿಸೇವೆಗೆ ನೇಮಿಸಲ್ಕೆನ್ನ | ನುರುಭಕ್ತಿಯಿಂ ಮನದೊಳಾಂತು ನಾನಾತನಂ ಶುಶ್ರೂಷಿಸುತ್ತಿರ್ದೆನು ||೯||

ಸಲಿಲಸೇಚನದಿಂದೆಶುಚಿಗೈದು ಸಂವಾಸ | ನಿಲಯಮಂರಂಗವಲ್ಲಿಯಿನ ಲಂಕರಿಸುವುದು | ಸಲೆಭಗವದರ್ಚನೆಗೆ ನಿಯಮದಿಂ ಕನಕಭಾಜನದೊಳ ಗೊದಕವನು ‖ ಅಲರ್ಗಳಂ ತಂದಿಡುವುದರ್ಚನಾಸಾಧನಂ | ಗಳನನುಗೊ ಳಪುದು ಮೊದಲೆನಿಪ ಶುಶ್ರೂಷಣಂ | ಗಳನೆಸಗುತೊಂದಿನಂ ತತ್ತನ್ಮಹಾತೀ ರ್ಥಮಹಿಮೆಯಂ ಬೆಸಗೊಂಡೆನು ‖೧೦‖

ಪರಮರ್ಷಿಯಾನುಡಿಯನಾಲಿಸಿ ಮುದಂಗೊಂಡು | ತರಳಕೇಳ್ ಹರಿ ದ್ವಾರಬದರೀಮುಖ್ಯ | ಪರತರಾನೇಕವಿಧ ಪುಣ್ಯತೀರ್ಥಂಗಳಹುವವರೆಲ್ಲರೊ ಳ್ಸದ್ಗತಿ ‖ ದೊರೆವುದಾದೊಡೆ ಸುಲಭಮಾರ್ಗದಿಂದೊರೆವುದದು | ನರರ್ಗೆಕಾ ಶ್ಯಾಂತುಮರಣಾನ್ಮುಕ್ತಿಯೆಂದೆಂಬ | ಗುರುಮಹಿಮೆಯಂ ತಳೆದವಾರಾಣಸಿ ಯೊಳೆಂದೊಡಾನಿಂತು ಬೆಸಗೊಂಡೆನು ‖೧೧‖

ಶಾಂತಾತ್ಮವಾರಾಣಸಿಯೊಳಮವ ಮಾನವ | ರ್ಗೆಂತು ಕಯ್ಗೂಡುವು ದು ಮುಕ್ತಿಸುಲಭೋಪಾಯ | ದಿಂ ತತ್ಪ್ರಕಾರಮಂ ಕೇಳಲೆಳಸುವೆನೊಲ್ದು ನುಡಿವುದೆನಲಾ ಮಹಿತನು ‖ ಸಂತಸಂಗೊಂಡದಕ್ಕೆಲೆಜಾಣ ವತ್ಸಕೇ | ಳಂತ ಕಾಲದೊಳಲ್ಲಿ ವಿಶ್ವೇಶ್ವರಂ ಸಕಲ | ಜಂತುಗಳ್ಗಂ ರಾಮತಾರಕಮಹಾಮಂ ತ್ರದುಪದೇಶಮಂಗೈವನು ‖೧೨‖

ತರಳಕೇಳಾಮಹಾಮಂತ್ರೋಪದೇಶದಿಂ | ದೊರಕುವುದು ಕೈವಲ್ಯ ಮೆಂದೊಡಾಮಾತಿಗೆ | ಚ್ಚರಿವಡುತೆನಾಂಗುರುವೆ ರಾಮನಾಮಕಪರಾತ್ಪರವ ಸ್ತುವಾವುದಿಹುದು ‖ ಬರೆವುದೆನಗೊಲ್ದೆಂದು ಬೆಸಗೊಳ್ವುದುಂ ಯೋಗಿ | ವರ ನತಿಪ್ರೇಮದಿಂ ಮುಗುದೆ ಕೇಳಚ್ಯುತಂ | ದುರುಳರಂದಂಡಿಸಲಯೋಧ್ಯೆ ಯೊಳ್ದಶರಥಾತ್ಮಜನಾಗಿ ಜನಿಸಿರ್ದನು ‖೧೩‖

ನರಲೀಲೆಯಿಂದವಂ ಜನಕನೃಪನಂದಿನಿಯ | ಕರವಿಡಿದು ಚಂಡಭುಜ ವಿಕ್ರಮಾಟೋಪದಿಂ | ಪರಿಹರಿಸಿ ನಿಮಿಷದೊಳ್ಪರಶುರಾಮನ ಪರಾಕ್ರಮನು ಮದವನನನೊಳರ್ದ ‖ ಪರಮವೈಷ್ಣವಮಹಾಚಾಪನುಂ ಕಯ್ಕೊಂಡು | ಖರಕುಂಭಕರ್ಣರಾವಣಮುಖ್ಯಖಲನಿಶಾ | ಚರರನಾಹವದೆ ನಿಗ್ರಹಿಸಿ ಧರ್ಮ ದೊಳವನಿಯಂ ಸಲಹುತಿಹನೆಂದನು ‖೧೪‖

ಆದರಿಂದೆ ವಿಜ್ಞಾಪಿಸಿದೆನಿಂತು ಕಾಂತಕೇ । ಳ್ಸದಮಳಚಿದಾನಂದಮೂರ್ತಿಯೊಡನೆಮಗಮವು । ಕದನವೇ ಎಂಬುದುಂ ವಿಮಲನಾಶ್ಚರ್ಯದಿಂ ಸಂಭ್ರಾಂತಚಿತ್ತನಾಗಿ ॥ ಹೃದಯವಲ್ಲಭೆ ಮುನಿಯವಚನಂ ಯಥಾರ್ಥವೆಂ । ಬುದಕೆ ಸಂಶಯಮಿಲ್ಲ ಮಾಲಿಸಾದೊಡೆತಡೆದ । ಕುದುರೆಯಂಪ್ರಾಣರದೆಯೆ ಬಿಡುವುದರಸರ ಪರಾಕ್ರಮಕೊಡರಿಪುದು ಕುಂದನು ॥೧೫॥

ಜನಕಂಗಿದೆಲ್ಲಮಂಬಿನ್ನವಿಪೆನೇನನೆಂ । ಬನೊತಿಳಿವೆನೆಂದು ಬಳಿಕಾತಂಗೆ ತಿಳುಪಲಾ । ಜನಪನೆಲೆವತ್ಸ ವತ್ಸೆಯಸುಲೋಚನೆಯಂನುಡಿಸಮಯಾನುಗುಣಮೆನಿಪುದು ॥ ಜನಿಯಿಪುದನರ್ಥಮಂ ಪೂಜ್ಯಪೂಜಾತಿಲಂ । ಘನಮುನ್ನತಮಲ್ಲಮುನಿವಚನಮಧ್ವರಯತ್ನ । ಮೆನಗೆಂತು ಕರ್ತವ್ಯಮಾವುದೀ ಸಮಯದೊಳಗೆಂದು ನೆರೆಚಿಂತಿಸುತಿರೆ ॥೧೬॥

ಅಂದುಕೇಳ್ದೊಡನೆ ಬೇಹವರುಕ್ತಿಯಂಮಹಾ । ನಂದದಿಂಜಾಹ್ನವೀತಟತಪೋವನದತ್ತ । ಣಿಂದೆ ನಿಜಕುಲಪುರೋಹಿತನನೇಕಚ್ಛಾತ್ರವರ್ಗದಿಂ ಸಹಿತನಾಗಿ ॥ ಛಂದಸಾಂನಿಧಿಸದಾನಂದಮುನಿಯಲ್ಲಿಗೈ । ತಂದನೊಡನತಿಮುದದೊಳಾ ಮಹೀಪಾಲನಿದಿ । ರ್ವಂದರ್ಘ್ಯಪಾದ್ಯಂಗಳಿತ್ತುಮಿಗೆವಿನಯಮಾಸ್ಥಾನಕ್ಕೆ ಕರೆತಂದನು ॥೧೭॥

ಅರಸನಿಂದುಚಿತಸತ್ಕಾರಮಂ ಕಯ್ಕೊಂಡು । ಪರಮಮುನಿಕಳೆದು ಮಾರ್ಗಾಯಾಸಭಾರಮಂ । ನಿರುಪಮಾನಂದದಿಂದಾ ಬಳಿಕ ಕುಳ್ಳಿರ್ದುವಿಷ್ಟರದೊಳೋಲಗದೊಳು ॥ ಧರಣೀಂದ್ರನಿನಗಧ್ವರೋದ್ದೇಶಮಾವುದೆನ । ಲರಸನೆಲೆ ಮುನಿನಾಥಕೇಳಶ್ವಮೇಧಮಂ । ವಿರಚಿಸಲ್ಕೆನಗೆ ಭಗವತ್ಪ್ರೀತಿಫಲಮೆಂದೊಡಾಮುನಿಪನಿಂತೆಂದನು ॥೧೮॥

ಧವಳಾಶ್ವಯತ್ನಮೇತಕ್ಕಿದಕ್ಕಿನಿತುಮಾ । ನವಲೀಲೆಯಾಂತುರಾವಣಕುಂಭಕರ್ಣಾದಿ । ಭುವನಕಂಟಕನಿಶಾಚರವರ್ಗಮಂ ನಿಗ್ರಹಿಸಲೋಸುಗಂ ಧರೆಯೊಳು ॥ ಅವತಾರಗೈದಿರ್ಪ ವೈಕುಂಠಧಾಮನಂ । ದಿವಿಜರಪ್ರಕರಸನ್ನುತ ಮಹಿಮನಂಸುಗುಣ । ನಿವಹಾಭಿರಾಮನಂರಾಮನಂ ಭಜಿಸಿದೊಡದುತ್ತಮಕ್ರತುವೆನಿಸದೆ ॥೧೯॥

ಎನಲದಂ ಕೇಳ್ದು ಧವಳಾಶ್ವನಚ್ಚರಿಗೊಂಡು | ಮುನಿಶಿಖಾಮಣಿಯೆ ಪೇಳೆಂತಪ್ಪ ಮಹಿತಾತ್ಮ | ನೆನಿಸಿದೊಡೆ ರಾಮಚಂದ್ರನನೇಕಭುವನಪ್ರಸಿದ್ಧಸೌಶೀಲ್ಯೆಯಾದ || ಜನಕಭೂಪತಿಸುತೆಯನಪ್ರಾಜ್ಞನಂತೆ ಕಾ | ನನಕಟ್ಟಿದಂ ಮತ್ತಮೇತಕ್ಕೆ ವಿಪ್ರವಧ | ಜನಿತಪಾಪವನೊರಸಲಧ್ವರವನೆಸಪನೆತ್ತಣದನಂಗಘಮೆಂದನು |೨೦||

ಮುನಿವರನದಂ ಕೇಳ್ದು ಕೇಳ್ದೈ ಧರಣೀಂದ್ರ | ಮನುಕುಲದೊಳವತರಿಸಿದಾನಂದ ಬೋಧಮಯ | ನೆನಿಸಿರ್ದರಾಮನೀಲೋಕಮಂ ಮೆಚ್ಚಿಸಲ್ಜನಕನೃಪನಂದಿನಿಯನು || ವನಕಟ್ಟಿದಂ ನರಾಕಾರನವನಧ್ವರವ | ನನುಸರಿಸಿ ಲೋಕಮಂ ಪಾಳ್ಪುದೇನನುಚಿತವೆ | ಮುನಿಗಳೀ ತತ್ವಮಂ ತಿಳಿದಿರ್ಪರಿದರೊಳಗೆ ಸಂದೇಹಮಿನಿಸುಮಿಲ್ಲ ||೨೧||

ಧರಣೀಂದ್ರ ಕೇಳಾವನಡವಿಯೊಳುರುಶಿಲೆಯು ನಿಜ | ಚರಣಸರಸೀರುಹರಜಸ್ಸಂಗಮಾತ್ರದಿಂ | ತರುಣಿಯಂ ಮಾಡಿವನದಾವನುದ್ದಾಮಶಿವಚಾಪಮಂ ಭಂಜಿಸಿದನು || ಧರೆಯೊಳಿರ್ಪತ್ತೊಂದುಬಾರಿ ದುಷ್ಟಾತ್ಮರಾ | ದರಸುಗಳನೊಕ್ಕಲಿಕ್ಕಿದರೇಣುಕಾಸುತನ | ಗರುವಿಕೆಯನಿನ್ನಾವನುಡುಗಿಸಿದನಾತನಂ ನರಮಾತ್ರನೆಂದರಿವರೇ ||೨೨||

ಮುನಿಶಾಪದಿಂ ಕಬಂಧತ್ವಮಂ ಪಡೆದಿರ್ದ | ದನುಜಾವನಿಂ ಶಾಪನಿರ್ಮುಕ್ತನಾಗಿ ಪಡೆ | ದನಘನಿಜರೂಪಮಂ ವ್ಯೋಮಯಾನವನೇರಿಸುರಲೋಕಮಂ ಸಾರ್ದನು || ಮುನಿಗಳೊರೆದಿರ್ದಂತೆ ಶಬರಿಯಾವನಚರಣ | ವನರುಹದ್ವಂದ್ವಮಂ ಕಂಡು ತತ್ಪುಣ್ಯದಿಂ | ವಿನುತನಿರ್ಜರಲೋಕಮಂ ಸಾರ್ದಳಾತನಂ ಪರಮಾತ್ಮನೆನದಿರ್ಪರೆ ||೨೩||

ಕೇವಲವನೇಚರಾನೀಕಸಾಹಾಯ್ಯನಾ | ಗಾವವನಗಾಧವಹ ಸಲಿಲನಿಧಿಯಲ್ಲಿನೂ | ರ್ಗಾವುದಂಬರಮತಿವಿಶಾಲಮಾದುದ್ದಾಮಸೇತುವಂ ಬಂಧಿಸಿದನು || ರಾವಣಿಯ ಸರ್ಪಾಸ್ತ್ರಬಂಧನಂ ಪರಿಹರಿಸಿ | ತಾವನಾಜ್ಞಾವಿಶೇಷದೆ ಬಂದಗರುಡನಿಂ | ಭೂವಧೂರಮಣಕೇಳಾತನೇ ಗರುಡವಾಹನನಬ್ಧಿಶಯನನಲ್ತೆ || ೨೪||

ಎನಲಲ್ಲಿ ನೆರೆದಿರ್ದ ಮಂತ್ರಿಪ್ರಧಾನರದ | ನನುಮೋದಿಸುತೆ ಶಿರಃಕಂ
ಪಪೂರ್ವಕಮಾಗಿ | ಮನುರಾಮನಬ್ಜಾಕ್ಷನವತಾರಮೆಂಬುದಕೆ ಸಂದೇಹಮಿ
ಲ್ಲೆಂದೊಡೆ || ಮನುಜೇಂದ್ರನಾತ್ಮ ಸಂದಿಗ್ಧಮತಿಯಂ ಕಳೆದು | ಮುನಿಪ
ತಿಗೆ ರಾಮನ ಮಹಾಶ್ವದ ನಿರೋಧಮಂ | ವಿನಯದಿಂದರುಪಿ ಮುಂದೇಗೈವು
ದೆಂದು ಬೆಸಗೊಳಲಾತನಿಂತೆಂದನು || ೨೫ ||

ಭೂಮಿಪೇಂದ್ರ ಕೇಳ್ಕುದುರೆಗಾವಲ್ಗೆ ಬಂದಿರ್ಪ | ಸೌಮಿತ್ರಿಯಂ ಸಕ
ಲಪರಿವಾರದೊಡನೆ ಸು | ಪ್ರೇಮದಿಂದರಮನೆಗೆ ಕರೆತಂದು ಸತ್ಕರಿಸಿ ಭೂರಿಸಂ
ಪತ್ತಿ ಸಹಿತ || ಆಮಹಾಮಖತುರಂಗಮುಮನಾತಂಗಿತ್ತು | ರಾಮನಂ ಭಜಿಸಿ
ದೊಡೆ ನೀನಹೆಕೃತಾರ್ಥನೆನೆ | ಲಾಮಾತನತಿಮಾತ್ರಸಮ್ಮೋದದಿಂದೆ ಸಮ್ಮ
ತಿಸಿದಂಧವಳಾಶ್ವನು | ೨೬ ||

ಪರಮುನಿಯೆಕೇಳುತ್ತ ಸೌಮಿತ್ರಿ ನಿಜಸಚಿವ | ಪರಿವಾರದೊಡನೆ ಮುಂ
ದಣ ಕಾರ್ಯಭಾರಮಂ | ನೆರೆಚಿಂತಿಸುತ್ತಿರ್ಪ ಸಮಯದೊಳ್ ಸಮಯಜ್ಞಾನು
ಕೂಲಮತಿಯೆನಿಪ ಸುಮತಿ || ಪರಿಗಣಿಸೆಯಾಗ ಕಾಲಂಸನ್ನಿಹಿತಮಾಯ್ತು |
ತುರಗಮಂ ತಡೆದಿರ್ಪ ನೃಪನಿವಂಬಲ್ಲಿದಂ | ಧುರದೊಳವನಂ ಗೆಲ್ದು ಕುದು
ರೆಯ ಮರಳ್ಚುವುದು ಬಹುಕಾಲ ಸಾಧ್ಯಮಹುದು || ೨೭ ||

ಅದರಿಂದೆ ಯುದ್ಧಮಂ ಗೈಯದಿನನೊಡನುಪಾ | ಯದೆ ಮೈತ್ರಿಯಂ
ಬಳಸಿ ಬಿಡಿಸಿಕೊಂಡಧ್ವರದ | ಕುದುರೆಯನಯೋಧ್ಯೆಗ ವಿಳಂಬದಿಂ ಪೋಗು
ವುದು ತೋರ್ಪುದೆನಗುಚಿತಮಾಗಿ || ಇದರಮೇಲೊಡೆಯನಾಣತಿಯೆಂದು
ಬಿನ್ನವಿಸ | ಲದಕೊಪ್ಪಿ ಚಿತ್ರನರೆಗಾಕ್ಷಣದೊಳೊರೆಯು ತ | ಕ್ಕುದನೊರೆ
ದುಸನ್ನಿಧಿಗವನನೆ ಕಳುಹಿದಂಪ್ರಮಿತ ಸೈನ್ಯಪರಿವಾರದೊಡನೆ || ೨೮ ||

ಬಲದೊಡನೆದೂತನಾಗೈತಂದ ಸುಮತಿಯಂ | ಬಳಿಕಧವಳಾಶ್ವ ಭೂ
ಮಿಪಾಲನೋಲಗ | ಕೈಕಲವಿಂದೆಬರಿಸಿ ಮನ್ನಿಸಿ ಬಂದಕಾರ್ಯಮಂ ಬೆಸಗೊ
ಳಲವಂ ಮುಖದೊಳು || ಎಲೆರಾಯ ರಾಕ್ಷಸಾಂತಕರೆಂಬ ಬಿರುದು ರಘು |
ಕುಲದ ಭೂಮಿಪಾಲಕರ್ಗೆ ಸಲ್ವುದು ಮೊದ | ಲ್ಬಳಿಕ ನಿಮ್ಮನ್ವಯದ
ಭೂಪಾಲಕರ್ಗಲ್ಲದಿನ್ನಾರ್ಗೆತಾಂ ಸಲ್ವುದು || ೨೯ ||

ನೀವಿರ್ವರನ್ಯೋನ್ಯ ಸಂಪ್ರೀತಿಯಿಂ ಮಿತ್ರ | ಭಾವದಿಂದಿಹುದು ಸಮುಚಿತಮಾಗಿ ಕಾಣ್ಬುದೆನ | ಗೀವಿಷಯದೊಳ್ಸಕಲನೀತಿವಿದನೆನಿಪ ನಿನಗೇನುಂಟುಬೋಧಿಸುವುದು || ಭೂವಿನುತ ಶೌರ್ಯನಹ ಪರಶುರಾಮನ ವಿಕ್ರ | ಮಾವಲೇಪವನೊರಸಿದಾ ವೀರದಾಶರಥಿ | ಗಾವನಿದಿರಿಳೆಯೊಳದನೋರೆವುದೇತಕ್ಕೆ ನಿನ್ನಭಿಸನ್ಧಿ ಯೇನೆಂದನು || ೩೦ ||

ಆನುಡಿಯಕೇಳ್ದು ಧವಳಾಕ್ಷ ನಲೆಸಚಿವ ಕೇ | ಳ್ಬಿನುಕುಲ ಕಲಶಾಬ್ಧಿ ಸೋಮನಂ ರಾಮನಂ | ಮಾನವವಿಲಾಸದಿಂದಿಳೆಯೊಳವತಾರ ಗೈದರವಿಂದನಾಭನೆಂದು || ನಾನಾಪ್ತವಚನದಿಂ ತಿಳಿದಿಪೆನ್ ನಿದರೊಳನು | ಮಾನಮಿಲ್ಲೆನ್ನ ಸರಸ್ವದೊಡನಾಸಚ್ಚಿ | ದಾನಂದನಯಮೂರ್ತಿಯಡಿದಾವರೆಯೊಳೊಲ್ದುಗೈವೆನಾತ್ಮಾರ್ಪಣವನು || ೩೧ ||

ಎಂದುನುಡಿದಾತನಿಂದೊಡಗೂಡಿ ಸೌಹಾರ್ದ | ದಿಂದೆ ಬಲಪರಿವಾರಜನಸಹಿತನಾಗಿ ನಡೆ | ತಂದು ರತ್ನಾತಟನಿಯಪರತೀರಕ್ಕಲ್ಲಿ ತನಗೆ ಗುರುಭಾವದಿಂದೆ || ವಂದನಂಗೈದುಚಿತ ಭಾಷಣಂಗೈದು ಮುದ | ದಿಂದೆಬಹುಮಾನಿಸಿದ ಸೌಮಿತ್ರಿಯಂ ಭರತ | ನಂದನಾದ್ಯಖಿಲ ಪರಿಜನದೊಡನೆ ನಿಜಪುರಕೆ ಕರೆತಂದ ನುತ್ಸವದೊಳು || ೩೨ ||

ಸಮನಂತರದೊಳಾಧರಾಧಿಪತಿ ಸಮುಚಿತ | ಕ್ರಮದೊಳತಿವಿಭವದಿಂ ತನಗೆ ಸತ್ಕೃತಿಯುಮಂ | ವಿಮಲಂಗೆ ರಾಜ್ಯದೊಳ್ಪಟ್ಟಾಭಿಷೇಚನವುಮಂ ಮಾಡಿ ಮಖಹಯಮನು || ಅಮಿತನಿಜಸಂಪತ್ತಿಯೊಡನಿತ್ತು ರಾಮಚಂ | ದ್ರಮನ ಸಂದರ್ಶನಕ್ಕುತ್ಸುಕಿಸಲಾತನಂ | ಪ್ರಮದದಿಂದೊಡಗೊಂಡು ಸೌಮಿತ್ರಿಯಲ್ಲಿಂದೆ ಪೊರಮಟ್ಟು ಮುಂಬರಿವನು || ೩೩ ||

ಇಪ್ಪತ್ತಾರನೆಯ ಸನ್ಧಿ ಮುಗಿದುದು.

ಅಂತು ಸನ್ಧಿ ೨೬ ಕ್ಕೆ ಪದ್ಯ ೧೦೯೧ ಕ್ಕೆ ಮಂಗಳಮಸ್ತು.

ಇಪ್ಪತ್ತೇಳನೆಯ ಸನ್ಧಿ.

ಸೂಚನೆ ॥ ಸೀತಾತನೂಭವಂ ಕಲಿಲವಂ ವಾಲ್ಮೀಕಿ । ಯಾತಪೋವನಕೆ ಬಂದಾಕುದುರೆಯಂ ತಡೆದು । ಖ್ಯಾತಿಯಿಂದದನರಸುತ್ತೈತಂದ ಶತ್ರುಘ್ನ ಚರರ ತೋಳ್ಗಳನರಿದನು ॥

ಆಮುಂದೆ ನಡೆದುದಂಪೇಳ್ವೆ ನೊಲ್ದಾಲಿಸು ಮ । ಹಾಮುನಿಯೆ ಪೂರ್ವಕೋಸಲದೇಶದತ್ತ ನಡೆ । ದಾಮುಖ್ಯತುರಂಗಮುಮನನುಸರಿಸಿ ಚತುರಂಗಸೇನಾಸಮೇತನಾಗಿ ॥ ಸೌಮಿತ್ರಿ ಬರುತಿರೆ ಭಗೀರಥಸಮುದ್ಯಮೋ । ದ್ದಾಮಫಲರೂಪಿಣಿ ಭವಾಬ್ಧಿತಾರಿಣಿ ತ್ರಿದಶ । ಧಾಮಸಂಪ್ರಾಪ್ತಿಗುತ್ತಮ ಸರಣಿಯೆನಿಪಮರನಿರ್ಝರಿಣಿ ಕಣ್ಗೆಸೆದುದು ॥ ೧ ॥

ಅಂತರಂಗದೆಭಕ್ತಿ ಮಿಗೆ ತನ್ನೊಳಿಳ್ದನರ । ನಂತರಂಗವತಿಯಿದು ನಿಷ್ಪಾಪನಂಗೈದ । ನಂತರಂಗಮಿಸುವುದು ನಿರ್ವಾಣಸುಖವನೀ ಮೇದಿನೀಮಂಡಲದೊಳುಂ ॥ ಸಂತರಣಮನುಮಾನವಿಲ್ಲದೆ ಭವಾಂಬುಧಿಯ । ಸಂತರಣಮಾಗುವೊಡೆತಾನಿದೆನಿತಾಂತರಭ । ಸಂತರಣಿಯೆಂದೆನುತ್ತಾವುದಂನುಡಿವರಾ ಬಾಂಬೊಳ್ಕಮೇನೆಸೆದುದೋ ॥ ೨ ॥

ಆವುದರಮಹಿಮೆಯಂ ಕೇಳ್ದೊಡಘಕುಲಮಳಿವು । ದಾವುದರ ಭಕ್ತಿಯಿಂದಿಂಟಿದೊಂದಬ್ಬಿಂದು । ದೇವತಾಲೋಕಸಂಪ್ರಾಪ್ತಿ ಕಾರಣಮಾದ ಸುಕೃತಮಂ ತಾಂಬಪ್ಪುವು ॥ ಆವುದಂದಿಟ್ಟಿಸಿದೊಡಖಿಲ ದುಃಖಂಕಳೆವು । ದಾವುದರಪೂನಲೊಳವಗಾಹಮಂ ಮಾಡಿದೊಡೆ । ಕೈವಲ್ಯಮಪ್ಪುದಾ ಲೋಕಪಾವನೆಯ ಭಾಗೀರಥಿಯ ಮಹಿಮೆಯೆನಿತೋ ॥ ೩ ॥

ವಿಮಲಗಂಗಾತೀರ್ಥ ಕಲಿತಾವಗಾಹನಂ । ಕಮಲಿನೀಕಂದನಾಳಾದಿ ಕೃತನರ್ತನಂ । ಸಮಧಿಗತಶುದ್ಧಾತ್ಮಯೋಗಮಭಿರೂಪ ಪಕ್ಷಂ ವನಾವಾಸನಿರತಂ ॥ ಕಮಲಾಸನಸ್ಥಂ ಸುದೃಗ್ಜನಕೆ ಸದ್ಗತಿ । ಕ್ರಮಬೋಧಕಂ ಸಾಧುಗುಣಯುತಂ ಶ್ರುತಿಮನೋ । ರಮಶಬ್ದವಾದಮೇನೆಸೆದುದೋ ಪರಮಹಂಸಪ್ರಕರಮದರತಟದೆ ॥ ೪ ॥

ಸ್ನಾನಕ್ಕೆನಡೆತಂದ ಬಹುಜನದ ಜಯಜಯ | ಧ್ಯಾನಮುಂ ಭಕ್ತಿಯಿಂ
ದವಗಾಹನಂಗೈದು | ದೈನಂದಿನಾಹ್ನಿಕಂಗೈವ ಮುನಿಲೋಕದಘಮರ್ಷಣಾ
ಹ್ವಯಸೂಕ್ತದ ‖ ಪೀನಕೋಲಾಹಲಮುಮಂತು ನಾನಾಮಹಾ | ದಾನಮಂ
ಮಾಳ್ಪವರ ಸಂಕಲ್ಪಕಲಕಲಮು | ಮೇನೆಂಬೆನಾನದಿಯ ತಟದೊಳೆಂದುಂ
ಕೇಳ್ವುದಿಳೆಯೊಳದಕೆಣೆಯಾವುದು ‖ ೫ ‖

ಸ್ತ್ರೀಲೋಕಮಳ್ಕರಿಂದರ್ಪಿಸಿದ ನವಕುಸುಮ | ಮಾಲೆಯಂ ಸೂಡಿ
ವೇಣಿಯೊಳಂಗದಲ್ಲಿ ಶುಭ | ಚೇಲಮಂ ಧರಿಸಿ ಕುಂಕುಮಹರಿದ್ರಾ ಚಂದನಾ
ಕ್ಷತೆಗಳಂದೆಸೆಯುತೆ ‖ ಲೀಲೆಯಿಂ ಲಸದೂರ್ಮಿ ಕರತಲದೊಳಾಂತುಫಲ | ವೀಳ
ಯುವನಧ್ವದೊಳ್ಕೊಂಡಕಂಡಾಳಿಯರ | ನಾಲಿಂಗಿಸುತೆಗಂಗೆ ಪತಿಕುಲಕೆಪೋಗು
ವಂಗನೆಯಂತೆ ಕಣ್ಗೆಸೆದಳು ‖ ೬ ‖

ಗೋಕ್ಷೀರಮಾಕ್ಷಿಕದ್ರಾಕ್ಷಾಫಲೇಕ್ಷುಗಳ | ಸಾಕ್ಷೇಪಿಸುತ್ತಿಂಪಿನಿಂ ಹಂ
ಸಪಕ್ಷಿಕುಂ | ದಕ್ಷಮಾಧ್ಯಕ್ಷರುಚಿಗರ್ವಮಂ ವಿಕ್ಷೋಭಿಸುತ್ತೆ ಧಾವಳ್ಯದಿಂದೆ ‖
ಈಕ್ಷಿತಿಯೊಳಖಿಲಪಾಪಕ್ಷಪಣದಕ್ಷೆಯಂ | ದಕ್ಷಿಣಮಹಿಮೆಯಂ ತಳೆದ
ಗಂಗಾದೇವಿ | ಯೀಕ್ಷಣಪ್ರತ್ಯಕ್ಷಮಂ ಸಾರ್ದಳಿಕ್ಷ್ವಾಕು ಕುಲಚಂದ್ರನನು
ಜಾತನ ‖ ೭ ‖

ಭೂರಿಹರ್ಷಂಗೊಂಡು ಸೌಮಿತ್ರಿಕಂಡು ಭಾ | ಗೀರಥಿಯನಖಿಲ
ಚತುರಂಗಸೈನ್ಯವ ನದರ | ತೀರದೊಳ್ಪಾಳಯಂಗೊಳಿಸೆ ಕೂರ್ತಬ್ಧಿಯುಪ್ಪಿ
ದನೆಂಬ ಪೋಲಿನಿಯಳ ‖ ಪಾರವೇಕಾಣದಂತದು ವಿಲೋಕಿಸಿದೊಡತಿ |
ದೂರಂಬರಂಹರಹಿಕೊಂಡಿರ್ಪುದಿಟ್ಟಣಿಸಿ | ತೋರಿತನಿತರೊಳಾತಪಕ್ಲಾಂತ
ವಿಹ್ವಲಾಧ್ವಗಜನಂ ಮಧ್ಯಂದಿನಂ ‖ ೮ ‖

ಪುರುಹೂತದಿಕ್ತರುಣಿ ಲೀಲೆಯಿಂದಿಟ್ಟ ಭಾ | ಸುರರತ್ನ ಕಂತುಕ
ವಿದೆಂಬಂತೆ ಮೇಣಿವಂ | ಬರವೃಕ್ಷದುಲ್ಲಸತ್ಪುಷ್ಪಸ್ತಬಕಮೆಂಬವೊಲ್ಮೇ
ಣ್ತ್ರೈಲೋಕಮೆಂಬ ‖ ಪಿರಿದೆನಿಪ ಸದನದ ಸೌಧರೆಂಬವೊಲ್ಮೇಣ್ಛತ್ರಮಾ | ವ
ರನ ತೇಜೋಮಯವಿಮಾನಮೆಂಬವೊಲದೇಂ | ಮೆರೆದುದೋ ಗಗನಮಧ್ಯ
ದೊಳು ಜ್ವಲತ್ಪ್ರಭಾಮಂಡಲಂ ರವಿಮಂಡಲಂ ‖ ೯ ‖

ಬಿಸುಗದಿರನಾಗಸದ ನಟ್ಟೆಡೆಯನೇರೆಕಡು | ಬಿಸಿಲಬೇಗೆಯ ಸೈಸದಂಚೆಗಳಡಂಗಿದುವು | ಕೆಸರ್ವಲ್ಲಿಗೆಗಳೆಲೆಗಳೊಳವೊದರೊಳರಡಿಗಳರದೆ ತಾವರೆಮುಗುಳನು || ಮುಸುಡಿಂದೆಕೆರೆದದರ ವಿವರಂಗಳೊಳಸೇರ್ದು | ವಸವಸದೆ ನೀರಡಿಯನೈದಿದುವು ಮೀಂಗಳೀ | ಕ್ಷಿಸಿದೊಡೆಲ್ಲಾ ಪಕ್ಕಿಗಳ್ಕುಗಿಲಿಗಳಾಗಿ ಮರಗಳೊಳ್ಕರೆಗೊಂಡುವು || ೧೦ ||

ಆಗಳಾಸೈನ್ಯದೊಳ್ಮದವೊನಲ್ಕವುತ | ರ್ಭಾಗೀರಥೀಪ್ರವಾಹದೆ ತಂದುಬಿಟ್ಟೆಡೆ ಮ | ಹಾಗಜಂಗಳನವುಸಮುಲ್ಲಾಸ ಸಂಭ್ರಮದೊಳಳದಲ್ಲಿ ಮೆಲ್ಮೆಲ್ಲನೆ || ತೂಗುತೊಡಲಂ ಸೊಂಡಿಲಿಂ ಮೊಗೆದುನೀರನರೆ | ಮೇಗೆತ್ತಿ ತಳೆಯನೀಂಟುತ್ತುಳಿದುದಂಗಂಡ | ಭಾಗಕ್ಕೆ ಫೂತ್ಕರಿಸಿ ನೆರೆಸೂಸಿಕೊಳುತಾತಪೋತ್ತಾಪಮಂ ಕಳೆದುವು || ೧೧ ||

ಅಳಿಕುಲಂಚಲಿಸಿ ಸೊರ್ಕಾನೆಗಳ ಗಂಡಮಂ | ತಲದತ್ತಣಿಂದಲ್ಲಿಪರಿಫುಲ್ಲಪದ್ಮಸಂ | ಕುಲಕೆರಗಲುಜ್ಜುಗಿಸಿಕೂಡೆ ತಾವುಪದ್ಮಲತೆಗಳಂಕೀಳತೊಡಗೆ || ಉಳಿದದಂಪಿಂದಿರುಗಿ ಜಲದೊಳಳ್ದಇಭಂ | ಗಳೊಳಾಶ್ರಯಂ ತಪ್ಪಿಸುತ್ತಿರ್ದುವುಬಾನೊ | ಳುಲಿಯುತ್ತೆ ಮಹದಾಶ್ರಯವನುಳಿದವರ್ಗಾತ್ರಿಶಂಕುವಿನಗತಿಯಾಗದೇ || ೧೨ ||

ಮಳೆಗೆತ್ತುತಳೆಯಮೇಲಾನೆಗಳ್ಸೊಂಡಿಲಿಂ | ತಳಿವನೀರ್ವನಿಗಳಂಚಾದಗೆಗಳ್ಗಂಟಿಸುವು | ಜಲಕರಿಗಳರದೆ ತಮ್ಮೊಡಲ ನೊಡಲಿಂ ಸೋಂಕೆಸಾಜಾತ್ಯಬುದ್ಧಿಯಿಂದೆ || ಕೆಲವುಮೈಮರೆದುವು ಸುಖಾತಿಶಯದಿಂದಲ್ಲಿ | ಜಲದೊಳಳ್ದಾನೆಗಳ ಮೇಲೆಸೆವ ಜಂತಮಂ | ನಳನಿಯಂಕುರಮೆಂದು ಕೀಳಲ್ಕೆತೊಡಗುತಿರ್ದುವು ಕೆಲವು ಮದಕರಿಗಳು || ೧೩ ||

ತುರಗಂಗಳಂ ರಾವುತರ್ಕಳೀಸಾಡಿಸುತ್ತಿರಲಾಮಹಾನದಿಯ ನಿರ್ಝರದೊಳವರೊಳಗೆ | ತರಳವೀಚೀನಿಚಯದೊಡನೆ ಬೆಳ್ಗುದುರೆಗಳ ಭೇದಮಂತಾಂಪಡೆದುವು || ಪರಭಾಗಮಂಪಡೆದು ಪೆರವುಕಂಗೊಳಿಸಿದುವು | ನೆರೆಬಿಗುರ್ತ್ತವರ ಪದಹತಿಗೆ ಬೆಮೆಗೊಂಡಲ್ಲಿ | ತಿರುತಿರುಗಿ ಬಳಬಳಲ್ದಿರದೆ ಜಲಚರಕುಲಮಗಾಧ ತಲಮಂ ಪೊಕ್ಕುದು || ೧೪ ||

ಆಲೋಕಿಸುತ್ತೆ ಪರಮಾನಂದದಿಂದೆ ತ | ತ್ಕಾಲವತಿಯುದ್ಯತ್ಪ್ರವಾಹಮಂತೀರವನ | ಮಾಲೆಯೊಳ್ಕುಳ್ಳಿರ್ದು ಸುಹಿತಮೆನೆ ಮೆಯ್ಯೊಡ್ಡಿ ನೀರ ಮೇಲಣಗಾಳಿಗೆ || ಜಾಳಿಸಿನಿತಾಂತ ಮಾರ್ಗಾಯಾಸಭಾರಮಂ | ಲೀಲೆಯಿಂದಲ್ಲಿ ನೆರೆಕೋಲಾಹಲಂಗೈಯು | ತೋಲಾಡುತವಗಾಹನಂಗೈದು ಸಕಲಸೈನಿಕಜನಂ ಶುಚಿಯಾದುದು || ೧೫ ||

ಸೌಮಿತ್ರಿವೀರಮಣಿಸುರಥಾದಿ ಭೂಪರೊಡ | ನಾಮಹಾತೀರ್ಥದೊಳಗವಗಾಹನಂಗೈದು | ಭೂಮಿದೇವರ್ಗೊಲ್ದು ಧನಕನಕವಸನಾದಿ ದಾನಂಗಳಿತ್ತಂದಿನ || ಯಾಮಿನಿಯಂಕಳೆದಲ್ಲಿ ಸಕಲಪರಿವಾರದೊಡ | ನಾಮರುದಿನಂ ಸಮುಲ್ಲಾಸದಿಂ ಮುಂಬರಿಯ | ಲಾಮೇಧ್ಯತುರಂಗಮಲ್ಲಿಂದೆ ಪೊರಮಟ್ಟು ಘನವಿಪಿನ ಪಥದೊಳ್ನಡೆದನು || ೧೬ ||

ಆಕುದುರೆ ತನ್ನಿಚ್ಛೆಯಿಂದೆ ಮುಂಬರಿದು ವಾ | ಲ್ಮೀಕಿಮುನಿಯಾಶ್ರಮತಪೋವನಕ್ಕೈತರೆ ವಿ | ಲೋಕಿಸಿಸಮಿತ್ಕುಶಫಲಾರ್ಥದಿಂ ಮುನಿಬಾಲರೊಡನಲ್ಲಿ ಚರಿಸುತಿರ್ದ || ಲೋಕಾಭಿನಂದ್ಯಶೌರ್ಯಾರ್ಣವಂ ಕಲಿಲವಂ | ರಾಕೇಂದು ಧವಳಮೀಕುದುರೆಯಾವವನದಿ | ತ್ತೇಕೆಬಂದಪುದಿವರಪಣೆಯಲ್ಲಿ ಪೊಂಬಟ್ಟಮೇನೆಂದದಂ ಪಿಡಿದನು || ೧೭ ||

ತಡೆಯದಾಪೊಂಬಟ್ಟಲೇಖನವನೋದಿ ತ | ನ್ನೊಡನಿರ್ದ ಮುನಿವಟುಗಳಂ ನೋಡಿ ಕೇಳ್ದಿರೇಂ | ಪೊಡವಿಯೊಳದಾವವಂ ರಾಮಚಂದ್ರಾಖ್ಯನೃಪನವನೊರ್ವನೇ ಶೂರನೇ || ಫಡಫಡಾಹೇಡಿಗಳಮಿಕ್ಕರೀಕುದುರೆಯಂ | ತಡೆದುಕಟ್ಟುವೆನಿದಂ ರಣದೊಳೆನ್ನಂಗೆಲ್ದು | ಬಿಡಿಸಿಕೊಳಲಧಟನಿರ್ದೊಡೆ ತೋರ್ಪೆನೀಗಳೆನ್ನಯ ವಿಕ್ರಮವನೆಂದನು || ೧೮ ||

ಆತಪೋಧನಸುತರದಂ ಕೇಳ್ದು ಲವನೆ ಸಾ | ಕೇತಪುರದೊಳಗಿರ್ಪ ರಾಮನೆಂಬರಸು ವಿ | ಖ್ಯಾತಭುಜಬಲಪರಾಕ್ರಮನೆಂದೆನುತ್ತೆ ಕೇಳ್ದಹೆವು ಗುರುಜನಮುಖದೊಳು || ಆತನಮಖಾಶ್ವಮಂ ಕ್ಷತ್ರಿಯರಕುಲದಲ್ಲಿ | ಜಾತನಾದನಿತರ್ಕೆ ಬಾಲನೀತಡೆವರೇ | ನೀತಿಯಲ್ಲಿದು ಪೆರರ್ಗೆಪೋಪಮಾರಿಯಂ ಮನೆಯಪೊಕ್ಕು ಪೋಗೆಂಬುದುಂಟೆ || ೧೯ ||

ಎನೆಕೇಳ್ದು ನಗುತೆ ಲವನೆಲೆಲೆವಟುಗಳರಮೋ | ದಿನಿಯೊಳರಸರ್ಕಳಾಜಿಪ್ರಿಯರ್ಪ್ರಹಿತಭೋ | ಜನಕಾಮರವನಿಸುರರದರಿಂದೆ ನಡೆವುದಾಶ್ರಮಕೆನೀವಿಲ್ಲಿನಿಲದೆ ‖ ದಿನಪನಿಳಗಿಳದೊಡಂ ಬಿಡೆನಾನಿದಂಬಾಲ | ನೆನಿಸಿದೆರ್ಗಡಾನದೇಂಕ್ಷಾತ್ರಮೆನಗಿಲ್ಲವೇ| ನನಲನುಣುವಹಾತ್ರಸುುರುಹದೆ ಮಹಾರಣ್ಯಮಂ ನೋಡಿರೆನ್ನಧಟನೆಂದು ‖೨೦‖

ಎಳೆದೊಯ್ದು ಕುದುರೆಯಂ ಬಿಗಿದಾಮಹಾರಣ್ಯ | ದೊಳಗೊಂದು ಮರಕೆಬಲ್ವಳ್ಳಿಗಳ ಹೊರಜೆಯಿಂ | ಬಳಕ ಬೆಂಬಳಿಯೊಳದುರ್ದ್ದಂಡಕೋದಂಡಮಂ ಕೊಂಡುತಿರುವೇರಿಸಿ ‖ ಕಳಬದಂತಕ್ಷಯನಿಷಂಗಮಂನೇರ್ಪಡಿಸಿ| ಕಳಹಸನ್ನದ್ಧನಾಗಿರೆಲವಂ ಬಂದನಿತ | ರೊಳಕುದುರೆಗಾವಲ ಭಟರ್ಕಂಡು ಹಯಮನಾ ಬಾಲರೊಡನಿಂತೆಂದರು ‖೨೧‖

ಕಡುಮರುಳರಾವಟುಗಳಿರ ಪೇಳರಾವಮಂ | ತಡೆದನಶ್ವಮನೋದನರಿಯದರೆ ನೀವಿದರ | ನಡುವಣೆಯಪಟ್ಟಮಂ ನೋಡಿರೇನಿರ್ದ್ದಿದುನಿಮಗೆ ಚಿಣಿಕೋಲಾಟವೇ ‖ ಬಿಡುಬಿಡಿದಿದಂ ಮೊದಲ್ಬರುತಿಹುದು ಪಿಂದೆಪಡೆ | ನಡೆಯಿರಾಶ್ರಮಕೆ ಮೋಣಸ್ಸರದೊಳ್ಕಲಿರೆಂದು | ಜಡಿದುಕೈದಂತೋದೆರ್ಗಡೆಣಗೆಬಾಯ್ದುಟಿ ಕಂಪಿಸುತೆ ನಿಂದರಾವಟುಗಳು ‖೨೨‖

ಧೀರನಾಜಾನಕೀಸೂನುವೆಲೆ ಖುಲ್ಲರಿರ | ದೂರದೊಳ್ಕಲಿರಿನಿತುಮಾತುನಿಮಗೇತಕ್ಕೆ | ವಾರುಮವನಾನೆ ತಡೆದಿಹನಿದಂಗಂಡೆನಿಪವಂ ಬಂದುಬಿಡಿಸಿಕೊಳಲಿ ‖ ಸಾರಿಮಿಲ್ಲಿಂದೆನೀವೆನೆಬಾಲನಿವನೆಂದು | ಮಿಾರಿತದ್ವಚನಮಂಮಖತುರಂಗಮದಬಳಿ | ಸಾರಲಾಯೋಧರನನೀಸುತಾನಂದನಂಕಡುಮುಳದುಜೇವಡೆದನು ‖೨೩‖

ಕಡುಗಿದಾಟಂಕಾರಶಬ್ದಮಂ ಕೇಳ್ದೊಡನೆ | ಘುಡುಘುಡಿಸುತವರೆಲ್ಲರುಂ ತನ್ನನಿರದೆಸೆರೆ | ವಿಡಿಯಲ್ಕೆಮೇಲ್ವಾಯೆವೀರಲವನರ್ಧಚಂದ್ರಾಕೃತಿಯಶರಗಳಿಂದೆ ‖ ಕಡುಕೋಪವಾಂತುರವಣಿಸುತವರ ತೋಳ್ಗಳಂ | ಕಡಿದನುಳದೊಬ್ಬಿಬ್ಬರಲ್ಲಿನಿಲದೋಡಿಬಂ| ದಡಸಿದುರುಭೀತಿಯಿಂದರುಪಿದರದೆಲ್ಲಮಂ ರಾಮಚಂದ್ರಾನುಜಂಗೆ ‖೨೪‖

೨೭ ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೭ಕ್ಕೆ ಪದ್ಯ ೧೧೧೫ ಕ್ಕೆ ಮಂಗಳಮಸ್ತು.

ಇಪ್ಪತ್ತೆಣ್ಟನೆಯ ಸನ್ಧಿ.

ಸೂಚನೆ ‖ ಚತುರಂಗಬಲದೊಡನೆ ಕಾಲಜಿತ್ತೆಂಬರಘು | ಪತಿಯ ಸೇನಾಧ್ಯ
ಕ್ಷನಂ ಸಂಹರಿಸಿಲವಂ | ಪ್ರತಿಪನ್ನಮೂರ್ಛನಂಮಾಡಿದಂ ಪುಷ್ಕಲ
ಕುಮಾರನಂ ಸಂಗರದೊಳು ‖

ಪರಮಯೋಗೀಂದ್ರಕೇಳಾಬಳಿಕ ಸೌಮಿತ್ರಿ | ಚರರುಕ್ತಿಯಂಕೇ
ಳ್ದು ಕಾಲಜಿನ್ನಾಮನಂ | ನಿರುಕಿಸಿಚಮೂಪನಂ ವೀರದಳಪತಿಯೆಕೇಳೆ
ಮ್ಮ ಮಖಸೈಂಧವವನು ‖ ಇರದೆತಡೆದೆಮ್ಮಯೋಧರತೋಳ್ಗಳಂತರಿದ |
ದುರುಳನೆಂದೆನಿಸಿದಾಕುವರನಂ ಕಾದಿನೆರೆ | ಪರಿಭವಿಸಿಸೆರೆವಿಡಿದು ತಹುದೆಂ
ದು ನೇಮಿಸಿದೊಡಾ ವೀರನಿಂತೆಂದನು ‖೧‖

ಒಡೆಯಕೇಳಾಬಾಲನೆ ನಿತರವನವನೊಡನೆ | ಘಡಘಡಾಕಾಳಗಮದೇ
ಕೆಕಯ್ಸೆರೆವಿಡಿದು | ಬಿಡದೊಯ್ದುಕೊಂಡುಬಹೆನಾನವನ ನರೆಗಳಗೆಯೊಳಗೆ
ನೋಡೆನೆ ರಘುಜನು ‖ ಕಡೆಗಣಿಸದಿರುಬಾಲನೆಂದೆಮ್ಮ ಕುದುರೆಯಂ | ತಡೆ
ದಶ್ವರಕ್ಷಕರ ತೋಳ್ಗಳಂತರಿದವಂ | ಕಡುಗಲಿವಯಸ್ಸುಕಾರಣಮಲ್ಲತೇಜ
ಸ್ವಿಗೆಚ್ಚರಂ ನಿನಗೆಂದನು ‖೨‖

ಆವಚನಮಂಕೇಳ್ದುರಥವೇರಿ ತತ್ಕ್ಷಣದೊ | ಳಾವೀರಸೇನಾನಿಭೇರಿ
ಯಂಪೊಯಿಸಿ ಸನು | ರಾವೇಶದಿಂ ಸನ್ನಣಂಗೊಂಡ ಚತುರಾಗದೊಡಗೂಡಿ
ವನಪಥದೊಳು ‖ ತೀವಿದುತ್ಸಾಹದಿಂ ನಡೆತಂದುಪರಿಭೂತ ‖ ದೇವಪತಿಸುತ
ರೂಪಮದಭಾರನಂ ಜಾನ | ಕೀವಲ್ಲಭಾಕಾರನಂ ಲವಕುಮಾರನಂಕಂಡು
ತಾನಿಂತೆಂದನು ‖೩‖

ಎಲೆಲೆಬಾಲಕಬಿಡುಬಿಡಶ್ವಮಂ ನಿನ್ನಸ | ಲ್ಲಲಿತಾಂಗಮಂ ನೋಳ್ಪ
ಡೆನ್ನಮಾನಸದೊಳಗೆ | ತಲೆದೋರುತಿದೆ ಕನಿಕರಂ ರಾಮಚಂದ್ರನತ್ಯುಗ್ರ
ಪ್ರತಾಪನೆಂದು ‖ ತಿಳಿನಿನಗೆತಕ್ಕುದಲ್ಲಿಂತಪ್ಪಸಾಹಸಂ | ಛಲಮೊಸಗಬೇಡಿಲ್ಲ
ದೊಡೆವತ್ಸನಿನ್ನನರೆ | ಗಳಿಗೆಯೊಳ್ಸೆರೆವಿಡಿದುಕೊಂಡುಪೋಗುವೆ ನೆನ್ನಹಿತ
ವಚನಮಂ ಕೇಳೆನೆ ‖೪‖

ಜಾನಕೀ ತನುಭವಂ ಕಲಿಲವಂ ಗಹಗಹಿಸಿ । ನೀನಾರೆಲಾ ಪುಲ್ಲತನ
ಗರ್ವಪುರ್ವೈನಯುವ । ನಾನಂಜುವೆನೆ ನಿನ್ನ ಬೆದರ್ಪಾರ್ತಿಗೆಲೆಮರುಳೆ ದಯೆಗೈ
ದು ಬಿಟ್ಟೈರ್ಪೆನು ॥ ಪೋ ನಿಮ್ಮರಾಯಂಗೆ ಪೇಳ್ ಹಯಗ್ರಹವ । ನಾನೆಸಪನ
ಲ್ಲನಿನ್ನನ್ನರಂ ಸಾಹಸ್ರ । ಸೇನಾಧಿಪತಿಗಳುಮನೆನೆ ಸಕಲಬಲನಾಥನಾಯುವ
ನನಿಂತೆಂದನು ॥ ೫ ॥

ಬಾಲಕೇಳ್ರಾಮ ಸೇನಾಪತಿಯುನೆನ್ನನರಿ । ಕಾಲಜಿನ್ನಾಮನನೆನಲ್ಕೆ
ಲವನೆಲೆದಳವ । ಕಾಲರೂಪನ ನೆನ್ನಗೆಲ್ದೊಡೀ ನಿನ್ನಪೆಸರನ್ವರ್ಥವಪ್ಪುದೆ
ನಲು ॥ ಕಾಲಾಳೆನಿಪ್ಪ ನಿನ್ನೊಡನೆ ರಥಿಯಾಗಿ ನಾಂ । ಕಾಳಗಂಗೈವುದೆಂತ
ಕಟ ನಿನಗೋಸುಗಂ । ಲೀಲೆಯಿಂ ರಥವನುಳಿದಿರ್ಪೆನಿದೊ ಬಾರೆಸುಕುಮಾ
ರಮುಂದಕ್ಕೆಂದನು ॥ ೬ ॥

ನುಡಿಯನದನಾಲಿಸಿ ಲವಂ ನಸುನಗುತ್ತೆಲವೊ । ಪಡೆವಳಾರಥದೊ
ಳೇಕುಳಿತು ನೀನೆನ್ನೊಡನೆ । ತೊಡಗು ಯುದ್ಧಕ್ಕೆನ್ನವೋಲ್ನಿನ್ನುಮಂ
ಮಾಡಿಕೊಳ್ವ ನರೆನಿವಿಸದೆ ಳಗೆ ॥ ಘುಡಘುಡಿಸಿ ನಿಲ್ಲೆಂದು ಕಳುಹಿ ದೂರಕ್ಕೆ
ತ । ನ್ನೊಡನಿರ್ದ ವಟುಗಳಂ ವಾಲ್ಮೀಕಿ ಜಾನಕಿಯ । ರಡಿಗೆರಗಿ ಮನದೊ
ಳಗೆ ಚಾಪಮಂ ಟಂಕರಿಸೆ ಮೊಳಗಿದುವು ದೆಸೆಗಳೆಂಟು ॥ ೭ ॥

ಬಾಲಕನ ಧೃಷ್ಟತೆಗೆ ಸರೆವಿಸ್ಮಯಂಗೊಂಡು । ಕಾಲಜಿತ್ತಿವನದೇ
ಗೈವನೋ ನೋಳ್ಪೆನಂ । ದಾಲೋಚನಂಗೈದು ಮನದೊಳಗೆ ನಸುನಗುತೆ
ರಥವೇರಿ ಜೇವಡೆದನು ॥ ಬಾಲನವನಕ್ಷಯನಿಷಂಗದಿಂ ತೆಗೆತೆಗೆದು । ಲೀಲೆ
ಯಿಂ ಕೋಲನೊಂದೊಂದನಿಸೆ ಪಡಿಸರಳ । ಮಾಲೆಯಿಂ ಕಡಿವದೆಲ್ಲವನವಂ
ತರಳನಂ ಘಟ್ಟಿಸಿದನೊಕ್ಕಣೆಯೊಳು ॥ ೮ ॥

ಗಣಿಸದಾಘಾತವಂ ಮುಳಿದು ಕಲಿಲವನೆಂಟು । ಕಣೆಗಳಿಂದಾಚಮೂ
ನಾಥನಂ ವಿರಥನಂ । ಕ್ಷಣಮಾತ್ರದೊಳ್ಮಾಡೆ ಬೆಕ್ಕಸಂಬಟ್ಟವಂ ನುಡಿನಿನ್ನ
ಪೆಸರಾವುದು ॥ ಅಣುಗಮಝುಭಾಪ್ರ ನಿನ್ನೀವಿಕ್ರಮಕ್ಕೆ ನಾ । ನಣಿಸುಗಂ
ಮೆಚ್ಚಿದೆ ನೆಮುತ್ತೆ ಸುಡಿದೊಡನೆ ನಾ । ರಣಾವನಿರುಡರ್ದಿದಿರ್ಚಿದನಂ
ಗಹಗಹಿಸಿ ಲವನಿಂತೆಂದನು ॥ ೯ ॥

ಎಲವೆಲವೊ ರಣಖೇಡ ಶತ್ರುಸಂಕುಲವ ನೀ | ನೆಲದೊಳಗೆಲವಶಃಪ್ರಖಂಡಿಸುವ ಲವನೆಂದು | ತಿಳಿಯೆನ್ನ ನೆಲೆಮತ್ತ ನೀನೇರಿದೊಡೆ ಗಜವನಾನಂಜುವೆನೆ ಖುಲ್ಲನೆ ‖ ನಿಲನಿಲಾ ಎಂದುರವಣಿಸುತಿಸಲುಪಕ್ರಮಿಸಿ | ಘಳಿಲನುರೆ ಮಸೆವೆತ್ತ ಬಾಣಂಗಳಿರಪರಿಂ | ತೊಲಗಿಸಿದನವನ ಕಯ್ಯಿಂದೆ ಮುಕ್ಕಡಿಗೈದು ಕಾರ್ಮ್ಮುಕವನೇನೆಂಬೆನು ‖ ೧೦ ‖

ಧರಿಸಿಬಳಿಕಾದಳಪನುರುಗದಾದಂಡಮಂ | ಗುರಿಯಿಟ್ಟು ಮಸ್ತಕಕೆಲಾಗಿಸಲದಂನೋಡಿ | ಧುರಧೀರ ನವನಿಜಾಸೂನು ಕೆಲಸರಿದದರಘಾತಕ್ಕೆಪಕ್ಕಾಗದೆ ‖ ಸರಸರನೆಡೆಗೊಣೆಯಿಂದೆ ತೆಗೆದೆಚ್ಚು ನಿಸ್ತ್ರಿಂಶ್ಯ | ಶರಗಳನುರುಳ್ಚುಧರೆಗಾಮುಹಾಗಜವನರೆ | ವೆರೆಯುಂದದಿರ್ಗ್ಗಣೆಗಳಿಂದಾಬಲಾಧಿಪನ ತೋಳ್ಗಳೆರಡಂ ತರಿದನು ‖ ೧೧ ‖

ಭೂರಿಸಮರಾವೇಶದಿಂ ತನ್ನನಡಿಗಳಿಂ | ಮಾರಿಸಲ್ಬಳಿಕೋಡಿಬರುತಮಿದಿರ್ಗಾಯುವನ | ವೀರನಿಕರ್ಗಿನತಿ ತೀಕ್ಷ್ಣನಾರಾಚಂಗಳಿಂದರಿದು ಕುವರನವನು ‖ ಧಾರಿಣಿಯೊಳುರುಳ್ದೊಡಂ ಕಳಿಯದಿರಲೇನೆಂಬೆ | ನಾರೋಷಮಿರದೆ ಮುಂಜರಿದವನ ಶೀರ್ಷಮಂ | ಕ್ರೂರತರತರವಾರಿಯಿಂ ಚಕ್ಕನರಿದುಜಯಶಂಖನಾದಂಗೈದನು ‖ ೧೨ ‖

ಉರುತರಕ್ರೋಧದಿಂ ಬಳಿಕುರುಬಿಮೇಲ್ವಾಯ್ದು | ಪರಸೇನೆಯಂನೋಡಿ ಕಲಿಲವನಸಂಖ್ಯಾತ | ಶರಗಳಂ ಸರಸರನೆ ತೆಗೆತೆಗೆದವಿಚ್ಛಿನ್ನಮಾಗಿಸಲುಪಕ್ರಮಿಸಲು ‖ ಪರಿದುದಾರಣಮಹಿಯೊಳೆತ್ತೆತ್ತಲುಂ ರಕ್ತ | ಪರಿವಾಹಮಂಬರದೊಳಮ್ಮಾಲೆಗಾಯ್ಗಳಂ | ತಿರೆ ತಲೆಗಳಾಡಿದುವು ಧರೆಯೊಣಿಕೆಯಿಲ್ಲದಟ್ಟೆಗಳಿಂದ ಮಿಟ್ಟಣಿಸಿತು ‖ ೧೩ ‖

ನರಮಾಂಸಮಂ ತಿಂದುತಿಂದು ತೇಗಿದುವಲ್ಲಿ | ನರಿಸೊಣಗ ಪರ್ದುಕಾಗೆಗಳಖಿಲ ಭೂತಕುಲ | ಮರುಣಜಲಪಾನದಿಂ ಮದವೇರಿತೇನೆಂಬೆನಣುಗನಪರಾಕ್ರಮವನು ‖ ಉರವಣಿಸಿಕಾಲಯಮನಂತಖಿಲಸೇನೆಯಂ | ನಿರವಶೇಷೀಕರಿಸುವಾಬಾಲನಿದಿರೆನಿಲ | ಲರಿಯದಳಿದುಳಿದಿರ್ದ ಯೋಧರಲ್ಲಿಂದೆ ಭಯದಿಂಪಲಾಯಿತರಾದರು ‖ ೧೪ ‖

ಅರುಣಾಂಬುಮಯಗಾತ್ರರಾಗಿ ರಣರಂಗದಿಂ । ಮರಳ್ದುಬಂದಾಯೋ
ಧರಂ ನೋಡಿ ಶತ್ರುಘ್ನ । ನರರೆಸಂತೈಸಿಕೊಳ್ಳರೆಲೆ ಮಹಾಯೋಧರಿರ ಕಾಲ
ಜಿತ್ತೇನಾದನು ॥ ಅರಿತಾನದಾವನಂ ಬೇಗನುಸಿರುಸಿರೆನು । ತ್ತುರುತರಕ್ರೋ
ಧದಿಂ ಬೆಸಗೊಂಡು ಕಲಿಲವಂ । ವಿರಚಿಸಿದ ಹಗೆರಣವೆನವರ ಮುಖದಿಂ ಕೇಳ್
ದು ಸುಮತಿಯೊಡನಿಂತೆಂದನು ॥ ೧೫ ॥

ಸುಮತಿ ರಣರಂಗವದು ಬಗೆಯೆ ವಾಲ್ಮೀಕಿಯಾ । ಶ್ರಮ ತಪೋವನ
ಸೀಮೆಯಾಗಿರ್ಕುಮಲ್ಲಿ ಭೂ । ರಮಣರಾರಿರ್ಪರಾಬಾಲನಧಟು ಪರಮಾ
ಶ್ಚರ್ಯಮಾಗಿರ್ಪುದು ॥ ಸಮರಕಟ್ಟುವೆನೀಗಳಾರ ನೆನಲವನವನಿ । ರಮಣರಿಹ
ರಾರಲ್ಲಿ ಕುದುರೆಯಂ ಗರ್ವಿಷ್ಠ । ನಮರಪತಿ ನರರೂಪದಿಂಬಂದು ತಡೆದು
ಪೊಣರುತ್ತಿರ್ಕುಮೀಪರಿಯೊಳು ॥ ೧೬ ॥

ಎಲೆದೇವತಾನವನ ದಾವನಾದೊಡಮಕ್ಕೆ । ಕಳುಹುನೀನೀಗಳಾಯೋ
ಧನಕೆ ಚತುರಂಗ । ಬಲದೊಡನೆ ಕೆಲರನತಿರಥ ಮಹಾರಥರನೊಡಗೊಳಿಸಿ
ಕಲಿಪುಷ್ಕಲನನು ॥ ಬಳಿಕ ನೀನಖಿಲ ಶಸ್ತ್ರಾಸ್ತ್ರ ಸನ್ನಾಹದಿಂ । ತಳ
ರ್ವುದವಿಳಂಬದಿಂದುಚಿತಮೆನೆ ಸೌಮಿತ್ರಿ । ಕಳುಹಿಬಲದೊಡನಂತು ಪುಷ್ಕ
ಲಕುಮಾರನಂ ಪಿಂದೆತಾನುಂ ನಡೆದನು ॥ ೧೭ ॥

ಉಗ್ರಮೆನೆ ಥರಥರದೊಳೆಣಿಕೆಯಿಲ್ಲದೆಬಹಸ । ಮಗ್ರಚತುರಂಗ
ವಾಹಿನಿಯನೀಕ್ಷಿಸಿ ಲಕ್ಷ್ಮಣ । ಶಾಗ್ರಜ ತನೂಜನಿಳುಪಿರ್ದ ಕೋದಂಡಮಂ
ಕಯ್ಕೊಂಡು ತತ್ಕ್ಷಣದೊಳು ॥ ವ್ಯಗ್ರನಾಗದೆ ಮುಂದೆನಿಂದು ಸಂಕ್ಷಯಕಾಲ ।
ದುಗ್ರನವತಾರನೆಂಬಂತೆ ದುರ್ನಿಗ್ರಹರ । ಶಾಗ್ರಹದೊಳುರವಣಿಸುತಿರ್ಪಿರಾಳ್ಗ
ಳೆದೆಯೊಡೆಯೆ ಝೋಯೆಂದು ಜೇವಡೆದನು ॥ ೧೮ ॥

ಆಮಹಾಕೋದಂಡ ಟಂಕಾರಶಬ್ದಮಂ । ರಾಮಚಂದ್ರಾನುಜಂಕೇ
ಳ್ದು ಬಾಲಕನಿವಂ । ಸಾಮಾನ್ಯನಲ್ಲ ಮೀಸಂಬಿಡದುಪಾಯದಿಂ ಸೆರೆವಿಡಿದು
ಕೊಳ್ವುದೆಂದು ॥ ನೇಮಿಸಲ್ಪಡೆಪ ತಂಗಾಳಸೊಡರಂ ಮುತ್ತು । ವಾಮಾಳ್ಕೆ
ಯಿಂ ತನ್ನನಾವರಿಸುತಿರ್ಪುದಂ । ಭೂಮಿಜಾನಂದನಂನೋಡಿ ಕಟ್ಟೆದೆಯಿಂದೆ
ತೊಡಗಿದಂ ಕಾಳಗಕ್ಕೆ ॥ ೧೯ ॥

ಅಕ್ಷಯ್ಯಭುಜಸತ್ವಸಾಹಸಂ ತುಡುತುಡುಕು | ತಕ್ಷಯ್ಯೋಪಾಸಂಗ
ಮುಖದಿಂದೆ ಲಕ್ಷೋಪ | ಲಕ್ಷಬಾಣಂಗಳಂ ತೊಡುತೊಡುತೆ ಚಾಪದೊಳ್
ಗೆತೆಗೆದಿಸುತ್ತಿಸುತ್ತ || ವಿಕ್ಷೋಭಮಂ ಪೊರ್ದಿಸಿದ ನಪರಿಮಿತತದ್ವಿ | ಪಕ್ಷ
ಚತುರಂಗವಾಹಿನಿಯನೇನೆಂಬೆ ನೊಂ | ದೇಕ್ಷಣದೊಳೇಕಾತ್ಮನಾದೊಡಮ
ನೇಕಾತ್ಮನೆಂಬಂತೆ ತೋರ್ಕೆವಡೆದು || ೨೦ ||

ಮುನಿಪಕೇಳ್ವಿಪಿನದೊಳ್ದಾವಾನಲಪ್ರವೇ | ಶನಮಾದವೊಲಾಯ್ತು
ಘನಬೃಂದದೊಳ್ಪ್ರಕಂ | ಪನನೆರಗಿದಂತಾಯ್ತು ಬಿದ್ದವೊಲಾಯ್ತು ಕಂಠೀ
ರವಂ ಮೃಗಕುಲದೊಳು || ವನಧಿನುಗ್ಗಿದವೊಲಾಯ್ತುರೊಳಗೆ ಕದಳಿಕಾ |
ವನದಲ್ಲಿದಂತಾವಳಂ ಪೊಕ್ಕವೊಲಾಯ್ತು | ಜನಕಜಾತನುಜಾತ ನಾಸೇನೆ
ಯಂಪೊಕ್ಕುದೇನೆಂಬೆನದ್ಭುತವನು || ೨೧ ||

ಕುಣಪಮಯಮಾಯ್ತು ಕಳನಮರಮುನಿಗಾಹವೇ | ಕ್ಷಣಿಕಾತು
ಕಂಬೀತುದಳಿಮುಳಿದ ಯೋಧರ ಪ | ರಣಾಗಿ ಹಾಹಾ ಎನುತ್ತಿರ್ದರೆತ್ತಲು
ಮಪಂನೋಡಿ ಭರತಸುತನು || ಸೆಣಸುವಿಗೆಹೋನಿಲಿರೊ ಯೋಧರಿರಬಂದೆ
ನಾ | ನಣಮುಳ್ಕು ಬೇಡನಿಮಗೆಂದು ತಡೆದೆಲ್ಲರಂ | ಕ್ಷಣಮಾತ್ರದಿಂದೆ ಕಣೆ
ಬರ್ಪಂತೆ ಬಂದಿದಿರ್ಚಿದನಾ ಕುಶಾನುಜನನು || ೨೨ ||

ಕೂಡೆಗಗನದೊಳಮರರತಿಮಾತ್ರ ಕುತುಕದಿಂ | ನೋಡಲ್ಕೆ ಸಮ
ಬಲರ ಬಾಲಕರಯುದ್ಧಮಂ | ಕೂಡಿಭರತಿತ್ವರೆಯೊಳೆಮುನಿಪ ಕೇಳ್ಬರ
ತಿಯ ನೋಡಿದೊಡಮೆ ಲವನು || ನೀಡುಮುತ್ಸಾಹದಿಂ ಸನ್ನದ್ಧನಾಗಿನಿಲೆ |
ಖೋಡಿಯಿಲ್ಲದೆ ಭರತಸುತನೆಲೆಕುಮಾರನೀಂ | ಜೋಡಿಯೆಂತೆನಗೆ ರಥಿಕಂಗೆ
ಪದಚರನೀವೆನೀ ರಥವನೇರೆಂದನು || ೨೩ ||

ಆನುಡಿಯುಕೇಳ್ದುಲವ ನೆಲವೆಲವೊ ಬಣಗು ಪೋ | ಗೀನಿನ್ನ ರಥ
ದೊಳಾಂ ಕುಳ್ಳಿರ್ದುಕಾದುವೆನೆ | ತಾನೆನಗೆ ದುರಿತಮದರಿಂದೆ ಘಟಿಸದೆಜಯಂ
ಸಂಶಯಿತಮೆಂದೆನಿಸದೆ || ದಾನಕ್ಕೆ ಧರಣಿಸುರರಲ್ಲವಾಂ ಕ್ಷತ್ರಿಯ | ರ್ಮ್ಮನ
ಯುತರಲೆ ರಥದೊಳೇ ಕುಳಿತುಕಾದುನೀ | ನಾನಿಂತುಪದಗನಾಗಿಯೆ ಕಾ
ದುವೆಂ ಬಳಿಕ ಸಮರಪ್ಪೆವಾವೀರ್ವರು || ೨೪ ||

ಎನೆ ಲವನಧರ್ಮ್ಮಕಂ ಧೃತಿಗಮುಚ್ಚರಿಪಡುತೆ | ಮನದೊಳಾಪುಷ್ಕಲಂ ಸಜ್ಯಮಂ ಮಾಡೆನಿಜ | ಧನುವನೆಡನವನಿಜಾ ತನಯನುಂ ಜೇವಡೆದು ಬಿಲ್ಲನೋಂ ಪ್ರಥಮದಲ್ಲಿ ॥ ಮೊನೆಯಂಬನೆರಡನೆಚ್ಚವನಚಾಪವನೆ ಛೇ | ಕ್ಕನೆ ಮುಕ್ಕಡಿಯಮಾಡಿ ಮುಳಿದವಂ ಪೆರತೊಂದು | ಧನುವನಾಂಪನಿತರೊಳ್ ಕಡಿಕಡಿಯ ಗೈದನಾರುಶರಗಳಿಂ ತನ್ಪ್ರಥನವನು ॥ ೨೫ ॥

ತೇರಳಿಯೆ ಪುಷ್ಕಲಂ ಕೋದಂಡಧರನಾಗಿ | ಧಾರುಣಿಯೊಳ್ ನಿಂದು ಜಾನಕೀಸುತನೊಡನೆ | ಹೋರಾಡಲಾರಂಭಿಸಿದೊಡಿರ್ವ್ವರುಂ ಪರಸ್ಪರನಿಗ್ರಹಕ್ಕೆಳಸುತೆ ॥ ವೀರರುಘೆಭಳರೆಮಝುಭಾಪ್ರಭಾಪೆಂದು ಕೈ | ವಾರಿಸುತೆ ಪಿರಿದು ಮೆಚ್ಚರಿಗೊಂಡು ನೋಡುತಿರೆ | ತಾರಕಮಹಾಸೇನರಂದದಿಂ ದುರುವಣಿಸಿಬಿಡದೆ ಕಾದುತ್ತಿರ್ದರು ॥ ೨೬ ॥

ಕಲಭಕಲಭಂಗಳುಂ ಸಿಂಹಸಿಂಹಂಗಳುಂ | ಪುಲಿಪುಲಿಗಳುಂ ವೃಷಭವೃಷಭಂಗಳುಂ ಕರಂ | ಛಲವೆತ್ತು ತರುಣ ಸಾರಂಗಸಾರಂಗಂಗಳುಂ ಕಾದುವಂದದಿಂದೆ ॥ ಕಲಿಲವಕುಮಾರನುಂ ಪುಷ್ಕಲಕುಮಾರನುಂ | ಬಲಸತ್ತ್ವರ ಜೋದ್ಧವರಾಗಿ ಕಾದುತಿರೆ | ತಿಳಿಯಲರಿದಾಗಿರ್ದುದವರ ಜಯಮುಂ ಪರಾಜಯಮುಂ ಸಮಾನಬಲರ ॥ ೨೭ ॥

ಇರ್ವ್ವರುಂ ಸಮವಯೋರೂಪ ಬಲಸಂಪನ್ನ | ರಿರ್ವ್ವರುಂ ನೂತನಾಭ್ಯಸ್ತಶಸ್ತ್ರಾಸ್ತ್ರಕಲ | ರಿರ್ವ್ವರುಂ ಧೀರಾಗ್ರಗಣ್ಯರಂತಿರ್ವ್ವರುಂ ವೀರವಂಶೋತ್ಪನ್ನರು ॥ ಇರ್ವ್ವರುಂ ಸಕಲಯುದ್ಧಪ್ರಕ್ರಮಾಭಿಜ್ಞ | ರಿರ್ವ್ವರುಂ ಕೀರ್ತಿಪರ ರಿರ್ವ್ವರುಂ ಸಾಹಸಿಗ | ಳಿರ್ವ್ವರುಂ ರಿಪುಹೃದಯವಿದರೆನಿಸಿ ಕಾದಿದರನೇಕ ಪ್ರಕಾರದಿಂದೆ ॥ ೨೮ ॥

ಈಪರಿಯೊಳಿರ್ವ್ವರುಂ ಹೋರಾಡುತಿರೆ ಭರತ | ಭೂಪಸುತನೀಕ್ಷಿಸುತೆ ಲವನನೆಲೆವೀರ ಮಝು | ಭಾಪ್ರಭಾಪಿನ್ನೆಗಂ ನಿನ್ನಂತೆ ಹೋರುವ ಕುಮಾರನಂ ಕಂಡರಿಯೆನು ॥ ಈಪರಾಕ್ರಮಕೆ ಮೆಚ್ಚಿದೆನಯ್ಯ ನೋಡೆನ್ನ | ಚಾಪವಿದ್ಯಾಚಾತುರಿಯ ನಿನ್ನನುರು ಶರಕ | ಲಾಪ ಪಂಜರದೊಳಗೆ ಹುದುಗಿಸುವೆನೆಂದವನ ಮೇಲೆ ಕಣೆಮಳೆಗರೆದನು ॥ ೨೯ ॥

ಮುಸುಕುತಿರಲೆತ್ತಲುಂ ತನ್ನನಾಬಾಣ | ವಿಸರಂಧನುರ್ವೇದಪಂ ಡಿತಂ ನೆರೆಮುಳಿದು | ವಸುಧಾಸುತಾತ್ಮಜನ ದೋಂದೊಂದನೆರಡೆರಡರಿಂದೆ ಕಡಿಕಡಿಯುಗೈದು ‖ ಎಸೆಯುತ್ತೈಕಿಲಮುಸುಕ ನೊರಸಿದಿನನಂತೆ ಲೋ | ಕಿಸಿ ಭರತಸುತನನೆಲೆಕುವರ ನೀನಹುದೊ ಸಾ | ಹಸಿನೋಡು ನೋಡೀಗಳದೊ ನಿನ್ನನಿಳೆಗೆ ರಥದಿಂದುರುಳ್ಚುವೆನೆಂದನು ‖ ೩೦ ‖

ಪುಷ್ಕಲನದಂಕೇಳ್ದು ದುರ್ನಿಗ್ರಹಕ್ರೋಧ | ಪುಷ್ಕಲಂ ನೀನಾರ ಮುಂದಲಾಹೊಸೆಯಾ | ವಿಷ್ಕಿರಿಪಬಿರಿಯುಪಾಗಾಡಂಬರವ ನಿದಕ್ಕಂಜೆನಾನೆಂದುನುಡಿದು ‖ ದುಷ್ಕರಪ್ರತಿರೋಧವೆನಿಪ್ಪೊಂದು ಶರಮನಿಸೆ | ನಿಷ್ಕಪಟ ವಿಕ್ರಮಂ ಲವನದಂಕಡಿದು ಧಾ | ನುಷ್ಕರಚ್ಚರಿವಡೆಯೆ ತಾನುಮೊಂದಂ ತಪ್ಪ ಶರಮಂ ಪ್ರಯೋಗಿಸಿದನು ‖ ೩೧ ‖

ಭರತಸುತ ನದನರ್ಧಪಥದೊಳೇ ಖಂಡಿಸಿದ | ನೊರೆಯುಲೇನತಿರೋಷದಿಂದೆ ರಘುವೀರಸುತ | ನುರವಣಿಸಿ ತೀಕ್ಷ್ಣತರಶಿಖಮಂನಿಷಂಗದಿಂವಿ ಶಿಖ ಮಂತೆಗೆದೊಂದನು | ತಿರುವಿನೊಳ್ತೊಟ್ಟು ಗುರಿಯಿಟ್ಟು ವಕ್ಷಸ್ಥಲಕೆ | ಬರೆಸೆಳೆದು ಕಿವಿವರಂಬಿಟ್ಟೊಡದು ಮೀರಿಪಾಡಿ | ಸರಳಂಪಳಂಚೆ ಪುಷ್ಕಲಕುಮಾರನ ನಿಳೆಗುರುಳ್ಚಿತೇನೆಂಬೆ ನಹಹಾ ‖ ೩೨ ‖

ಮಾರುತಿಯದಂಕಂಡು ತತ್ಕ್ಷಣದೊಳೈತಂದು | ಕಾರುತಿರಲೊಡಲರುಣವಾರಿಯಂ ಮೂರ್ಛಿಸಿದ | ಭಾರತಿಯ ನೆತ್ತಿಕೊಂಡೈದಿ ಶತ್ರುಘ್ನನೆಡೆಯಲ್ಲಿರಿಸಿ ತಾಂ ಬೇಗನೆ ‖ ವೀರರುದ್ರನವೊಲುರವಣಿಸುತ್ತೆ ತಳ್ದೊಂದು | ಭೂರುಹಮನಿದಿರಾಳಬರವನೀಕ್ಷಿಸು ತಿರ್ದ | ವೀರಶೇಖರ ರಾಮಚಂದ್ರನ ಕುಮಾರ ಕಂಠೀರವನ ನಿದಿರಾಂತನು ‖ ೩೩ ‖

೨೮ನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೮ಕ್ಕೆ ಪದ್ಯ ೧೧೪೮ಕ್ಕೆ ಮಂಗಳಮಸ್ತು.

ಇಪ್ಪತ್ತೊಮ್ಬತ್ತನೆಯ ಸನ್ಧಿ.

ಸೂಚನೆ ॥ ಪವಮಾನತನಯನಂಗೆಲ್ದು ವನಿಜಾತನೂ । ಭವನಂರಘುಪ್ರವರ
ನನುಜಾತನುರುಬಾಣ । ದವಘಾತದಿಂದೆ ಪೊರ್ದಿಸಿ ಮೂರ್ಛೆಯಂ
ವಿಜಯಲಕ್ಷ್ಮಿಯಂ ಕಯ್ಕೊಂಡನು ॥

ರಿಸಿಯಾಣ್ಮಕೇಳ್ ಬಳಿಕ ಚರಣಾವಘಾತಕ್ಕೆ । ವಸುಧಾತಲಂಕುಸಿಯೆ
ಸಿಂಹನಾದಾರ್ಭಟಿಗೆ । ದೆಸೆಗಳೆಂಟುಂಮೊಳಗೆ ಕೋಪದಾಟೋಪಕ್ಕೆ ನಿಮಿ
ರೆರೋಮಂಗಳೊಡಲೊಳು ॥ ಮಸಗೆ ಸಮರಾಗ್ರಹಂ ಬೆಳ್ಳಗೆಸೆವುಂಗುಳ್ಗಳಂ
ತೆಸೆಯೆದಾಡೆಗಳೆರಡು ಮಾಡೊತ್ತಿ ರಭಸದಿಂ । ಶ್ವಸನತನು ಸಂಭವನಿದಿರ್ಚೆ
ಬರೆನೋಡಿ ಗಹಗಹಿಸಿಲವನಿಂತೆಂದನು ॥ ೧ ॥

ಎಲೆಕಪೀಬಂದೆನೀನೇತಕ್ಕೆ ಕಾನನವ । ನುಳಿದುರಣರಂಗಕ್ಕೆ ಕಲ್ಗಂ
ಡುಮರಗಳಂ । ತಳೆದುಕಾದುವ ನಿನ್ನೊರಂಟು ತನಕಾನಂಜುವೆನೆ ತೀಕ್ಷ್ಣ
ಶಸ್ತ್ರಧರನು ॥ ಬಲಮಾತ್ರಯುತನಸ್ತ್ರಧಾರಿಗೆನಗೆಣೆಯೆನೀಂ । ನಿಲೊ
ನಿಲೋ ನಿನ್ನಯೆಡೆಯಾಟವಂ ನಿಮಿಷದೊ । ಳ್ಕಳಿಪೆನೆಂದುರವಣಿಸಿ ಪಲವು
ಕೂರಂಬುಗಳ ನೆಡೆವಿಡದೆ ತೆಗೆದೆಚ್ಚನು ॥ ೨ ॥

ಕರದೊಳಾಂತೊಂದು ಶಿಲೆಯಿಂ ತಡೆದದೆಲ್ಲವಂ । ಮರುದಾತ್ಮಜಂ
ಕಿಲಕಿಲಧ್ವನಿಯ ಗೈದವನ । ಶಿರದಮೇಲಿಡಲದಂ ವಜ್ರಾಸ್ತ್ರದಿಂದೆ ರಣಧೀರ
ನಾಸೈತೇಯನು ॥ ಉರವಣಿಸಿ ಪುಡಿಪುಡಿಯಗೈದನಾಬಳಿಕ ವಾ । ನರವರಂ
ಬಾಲನುಂನೀಡೆ ತನ್ನಂಸುತ್ತ । ಲರಿದದಂಪೊಯ್ದು ನುರುತರಶರಾಸಾರದಿಂ ಲವ
ನದೇಂ ಚಟುಲಮತಿಯೋ ॥ ೩ ॥

ತಚ್ಛರಾಘಾತವಂ ಸೈರಿಸದೆಪವನಜಂ । ಪುಚ್ಛವಂಪಿಂದೆಗೆದುಬಳಿಕ
ಮುಷ್ಟೀಮುಷ್ಟಿ । ಗಿಚ್ಛೆಗೈದಿದಿರಾಂತು ಬರ್ಪುದುಂ ಕಲಿಲವಂ ಪಲವುಕೂ
ರಂಬುಗಳನು ॥ ವಿಚ್ಛಿತ್ತಿಯಿಲ್ಲದಿಸೆಮುಂ ಜರಿಯಲಿಲ್ಲದೀ । ಷಚ್ಛಕ್ತಿಯುಂ
ಯುಕ್ತಿಯಿಂ ಹನುಮನಗಣಿತ ಶ । ರಚ್ಛಟಾಂತರದೊಳನವಚ್ಛಿನ್ನ ಬಲನಾ
ದೊಡಂ ಸತ್ತನಂತುರುಳ್ದನು ॥ ೪ ॥

ಪರಿತೇರಂಬಳಿಕ ಬಂದಶೌಮಿತ್ರಿಯಂ | ದೂರದೊಳ್ ಸೀತಾಕುಮಾರನೀಕ್ಷಿಸುತಿವಂ | ವಾರುವದ ಪಣೆವಟ್ಟದೊಳ್ಕಂಡ ಶತ್ರುಘ್ನನಾಗಿರ್ಕುಮೆಂದು ಬಗೆದು || ಧೀರನಾಗಾಹವಕೆ ಸನ್ನದ್ಧನಾಗೆಲವ | ಶಾರಿನಿಟ್ಟಿಸುತಿವಂ ಮಾತೆಜಾನಕಿಪೆತ್ತ | ವೀರರಘುಪ್ರಂಗವ ಕುಮಾರನಾಗಿರ್ಕುಮೆಂದನುಮಾನಿಸುತ್ತಿಂದನು || ೫ ||

ಅರೆಲೆಕುಮಾರನೀಂ ನಿನ್ನ ಮಾತಾಪಿತೃಗ | ಳಾರಲಾ ನಿನ್ನಶೌರ್ಯಕ್ಕೆ ಮೆಚ್ಚಿದೆನಾನು | ದಾರಗುಣಪೇಳ್ನಿನ್ನ ರೂಪಮಂನೋಡಿ ನಲವಾಂತುದೆನ್ನಯುಬಗೆಯೆನೆ || ವೀರಲವನೆಲೆ ರಥಿಕತಾನದಾರಾದೊಡೇಂ | ಶೂರನಾದೊಡೆಕಾದು ಮೇಣ್ಮದಗ್ರಜಕುಶಪ | ದಾರವಿಂದಕ್ಕೆರಗಿ ಕುಮರೆಯಂಬಿಡಿಸಿಕೊಂಡೈದೆಂದು ನಗುತೆಂದನು || ೬ ||

ಆಕರ್ಣಿಸುವುದುಮಾವಚನಮಂ ಶತ್ರುಘ್ನ | ನೀಕುವರನುದ್ದಾಮಕೋಮಲಾಕಾರಮಂ | ಲೋಕಿಸಿದೊಡಾದು ಹಾ ಗರ್ಭವತಿಯಾಗಡವಿಗೈತಂದ ಮಾತೆಯಾದ || ಭೂಕುಮಾರಿಯ ತನೂಭವನಾಗಿ ತೋರ್ಪನಿವ | ನಾಕರಿಸಿದುದರಿಂ ನಿಜಾಗ್ರಜನಪೆಸರ ನಿ | ಷ್ವಾಕುವರ ತನಯನಲ್ಲಾದೊಡಂ ತೋರ್ದಪಂ ಲೋಕೈಕವೀರನಾಗಿ|| ೭ ||

ಆವನಾದೊಡಮಕ್ಕೆತಾನಿವಂ ಪ್ರಕೃತದೊ | ಳ್ಭಾವಿಸುವೊಡಶ್ವದನಿಮಿತ್ತದಿಂದೊಡೆಯನಾ | ಜ್ಞಾವಿಧಿಯನನುಸರಿಸಿ ಪ್ರಾಣವುರ್ದಿವಸೊಡನೆನ್ನ ಕರ್ತ್ತವ್ಯಮೆಂದುಬಗೆದು || ಜೇವಡೆದಿಸಲ್ಕುಪಕ್ರಮಿಸಲಾ ಶರತತಿಯು | ನೇವೇಳ್ವ ನೊಂದೊಂದೆ ಸರಡೆರಡುಕಣೆಗಳಿಂ | ದಾವೀರಲವನುತ್ತರಿಸಿ ಪಿತೃವ್ಯನಮೇಲೆ ಪಲವಂಬುಗಳನೆಚ್ಚನು || ೮ ||

ಅವರಿರ್ವರೊಡನೊಡನಿಸುತ್ತಿರ್ದ ಶರಸಮೂಹ | ಹವೆ ಮುಸುಕಿ ತಂತರಿಕ್ಷಾಂತರದೊಳಾನಡುವೆ | ಪವನನ ಪರಿಕ್ರಮಣಮೆತ್ತಣದೆನ ಲ್ಪಕ್ಷಿಸಂಚರಣದುಕ್ತಿಯೇನು || ಸವನಿಸಿತ್ತಾಗಳತ್ಯಾಹಿತವನಾ ಸೇನೆ | ವಿವರಿಸುವುದೇಂ ಬಹುಳವಾಗಿ ಮುನಿವರಸೆ ಕೇ | ಳ್ಭವನದೊಳ್ಪರಮಾದ್ಭುತಂಗಳಹ ವಿಷಯಗಳೊಳೀಯುದ್ಧಮಂಸೇರ್ದುದು || ೯ ||

ಖಣಿಖಣಿಲು ಚಿಟಚಿಟಿಲೆನಿಪ್ಪದನಿಮಸಗೆ ಮಾ | ರ್ಗಣೆಗಳಂ ಬಿಡವರಿಯು ತವನಿಶಾಸೂನುರಾ | ಮಣಹರಾನುಜನ ಬಿಲ್ಲಂಕಡಿದವಂ ಪೆರತುಬಿಲ್ಲ ನಾಂಪನಿತರೊಳಗೆ ‖ ಕ್ಷಣಮಾತ್ರದಿಂದವನ ಸತುರಂಗಸಾರಥಿಯು | ಮಣಿರಥನ ನವಚೂರ್ಣಿಸಿದೋಡಂಬರದೊಳಮರ | ಗಣವಹಹ ಮಝುಭಾಪು ಭಾಪೆಂದು ಕೊಂಡಾಡಿತೇನೆಂಬೆನದ್ಭುತವನು ‖ ೧೦ ‖

ಏರಿಪೆರತೊಂದುತೇರಂ ಬಳಿಕಶತ್ರುಹಂ | ತಾರನಿದಿರಾಂತುಲವನಂ ವಿಲೋಕಿಸುತೆಲೆ | ವೀರಸಂಶಾಂಕೊರ ಮೆಚ್ಚಿದೆನೆಲಾ ನಿನ್ನ ಶೌರ್ಯವಂ ಭಾಪುಭಾಪು ‖ ಬಾರಮುವಿನಂ ನೋಡಿದೊಡೆ ನಿನ್ನ ರೂಪಬಲ | ಸಾರವಂ ನಿನ್ನೊಡನೆ ಕಾದಲೆಲೆವತ್ಸ ಬಿಡು | ಮಾರುವನ ನೆನಲವಂ ನಿನ್ನ ಸವಿನುಡಿಗೆ ಬಿಡುವೆನೆ ಹಯವನೆಂದೆಚ್ಚನು ‖ ೧೧ ‖

ಕಡುಮುಳಿದದಕ್ಕೆ ಸೌಮಿತ್ರಿ ಕಣೆನಳೆಯನಡೆ | ವಿಡದೆ ಕರೆಯಲೊತ್ತಡಗೆ ಪಡಿಸರಳ್ಗಳನದಂ | ತಡೆಯುತ್ತೆ ಕಲಿಲವಂ ನೆರೆಬಳಲ್ದ ಕಟಕೆಲವಂಬುಗಳ ಸೋಂಕಿನಿಂದೆ ‖ ಒಡಲರುಣಜಲಸಿಕ್ತಮಾಗಲರ್ದಮುತ್ತುಗದ | ಗಿಡುವಿನಂದದೊಳೊಪ್ಪಲೇನೆಂಬೆ ನಿನಿಸುಮೆದೆ | ಗೆಡದೆಚ್ಚು ಶತ್ರುಹಂ ತಾರನ ಕಿರೀಟಕವಚಂಗಳಂ ಖಂಡಿಸಿದನು ‖ ೧೨ ‖

ಬರಸೋರಸುಮಿಗೆ ಲವಣಾವೈರಿಯೊಂದೊಂದಾಗಿ | ಖರತರಶಿಖಂಗಳ ಹಪತ್ತು ವಿಶಿಖಂಗಳಂ | ಗುರಿಗಟ್ಟಿ ಜಾನಕೀನಂದನನ ಪಣೆಗಂ ತುರಸ್ಥಲಕೆ ತೆಗೆದೆಚ್ಚೊಡೆ ‖ ಗರಿಗಟ್ಟಿದಿರ್ಪತ್ತು ಕಣೆಗಳಂ ಕಡಿದಿಕ್ಕಿ | ಧರಣಿಜಾನಂದನನದೆಲ್ಲವಂ ಮಸೆವೆತ್ತ | ಸರಳ್ಗಳೆಂದೆಂಟರಿಂ ಲಕ್ಷ್ಮಣಾನುಜ ನುರಃಪೀಠವಂ ಘಟ್ಟಿಸಿದನು ‖ ೧೩ ‖

ನೊಂದು ಶತ್ರುಘ್ನನಾದಾರುಣ ಶರಾಘಾತ | ದಿಂದಿಪಂ ಮುಜ್ಜಯನೆನುತ್ತರಿದು ಕೋಪಾಗ್ನಿ | ಯಿಂದಹ್ಯಮಾನ ಮಾನಸನಾಗಿ ಶರವೃಷ್ಟಿಯಂ ಕರೆಯಲಾರಂಭಿಸೆ ‖ ಎಂಪಪೆನದೇನನವನೆಲ್ಲವಂ ಮಾರ್ಗಣೆಗ | ಳಿಂದೆ ಕಡಿದಾ ಬಾಲಶಾರ್ದೂಲ ನತ್ಯುಗ್ರ | ಮೆಂದೆನಿಸಿದೊಂದು ನಾರಾಚವಂ ಲಕ್ಷ್ಮಣಾನುಜನೆದೆಗೆ ತೆಗೆದೆಚ್ಚನು ‖ ೧೪ ‖

ತರತರಿಸಿತದ್ವಿಷವು ಶರಬಾಧೆಯಂ ಸಹಿಸ | ದೊರೆಗಿದಂ ಕೂಡೆಮೂ ರ್ಛೆಯನಾಂತುತದ್ರಥಾಂ | ತರದೊಳಗೆ ಸೌಮಿತ್ರಿಕಂಡದಂ ಸಮಧಿಕಕ್ರೋ ಧದಿಂದುಜ್ವಲಿಸುತೆ॥ ಸುರಥಾದಿ ನೃಪವೀರರೇವರಿಯೊಳಾದೊಡಂ | ನೆರೆಗೊಂಬೆ ವೀರ ಬಾಲಕೇಸರಿಯನೆಂ | ದುರವಣಿಸಿ ದಳದುಳನೆಸುತ್ತಿಮುತ್ತಿದರಾತ ನಂ ರಥಾರೂಢರಾಗಿ ॥ ೧೫ ॥

ಎತ್ತಲುಂ ತನ್ನನಿರದವದಿರಾಕ್ರಮಿಸಿಮುಸೆ | ವೆತ್ತಕೂರಂಬುಗಳನೇ ನೆಂಬೆನೆಡೆವಿಡದಿ | ಸುತ್ತೆಮೇಲ್ವಾಯಮತಿಶಾಲಿ ಲವನೇಸಿದನ್ಯಾಯವೆಂದುರೆ ಕನಲ್ದು ॥ ಚಿತ್ತದೊಳ್ಧೃತಿಗೊಂಬು ಗುರಿಯಾಗದವರ ವಿ | ಚ್ಛಿತ್ತಿಯಿಲ್ಲದ ತಚ್ಛರಪ್ರತತಿಗವುನುಕ | ನ್ಗತ್ತಲೆಯುನಡರಿಸಿದನವದಿರೆಲ್ಲರ್ಗೆ ಶರವೃಷ್ಟಿಯಿಂ ನಿಮಿಷದೊಳಗೆ ॥ ೧೬ ॥

ಬಾಲನಧಟಂನೋಡಿ ಬಳಿಕ ಸುರಥಾದಿ ಭೂ | ಪಾಲರಚ್ಚರಿಗೊಂಡು ಮಝುಭಾಪುಭಾಪೇಮ್ರೊ | ಬಾ ತೊಲಗಿನ್ನಿಲ್ಲಿ ನಿಲಬೇಡಬಾಲವಧಮನುಚಿತಮೆನಲ್ಕೆ ಲವನು ॥ ಆಲಿಸಿರೆಲ್ಯರಾಜಭೋಗೈಕ ಶೂರರಿರ | ಸೋಲಿಸದೆ ನಿಮ್ಮನಾಂ ತೊಲಗುವೆನೆಬರಿಯ ವಾ | ಗ್ಜಾಲಮೇಕಧಟರಾದೊಡೆ ನಿಮ್ಮ ತೋಳಬಲ್ಮೆಯ ತೋರಿಮೆಂದೆಚ್ಚನು ॥ ೧೭ ॥

ತುರಗಸಾರಥಿ ರಥವಿಹೀನನಂ ಮಾಡಿದಂ | ಸುರಥನಂವೀರಮಣಿಭೂಪ ತಿಯ ಚಾಪಮಂ | ತರಿದಿಕ್ಕಿದಂಸತ್ಯವಂತನ ಕಿರೀಟಕವಚಂಗಳಂ ಛೇದಿಸಿ ದನು ॥ ಸರಳಪಂಜರದಲ್ಲಿ ಸುಮದನಂ ಹುದುಗಿಸಿದ | ನರರೆಚಕ್ರಾಧಿಪನ ರಥಮಂ ಮುಗುಳ್ಚಿದಂ | ಪರಿಯಿಸಿದನರುಣಾಂಬು ಪೂರನಂ ಧವಳಾಶ್ವನಂಗ ದಿಂ ಸುಕುಮಾರನು ॥ ೧೮ ॥

ಮತ್ತಮಿಂತಿದಿಗಾಂತ ರಥಿಕರನನೇಕರಂ | ಕತ್ತೆಕೂರ್ಗಣೆಗಳಿಂಮೂ ರ್ಛೆಯಾಂತರ್ಕೆಲ | ರತ್ತರಂಗೊಂಡು ಕೆಲರಲ್ಲಿಂಪೆಡಮ್ಮೆಟ್ಟಿದರ್ಕ್ಕಮರನಧ ಟದೆಂತೋ ॥ ಅತ್ತಸೌಮಿತ್ರಿತೆಸ್ಪರಿಸಿಕೊಂಡೆದ್ದು ಬ | ಲ್ಲಿತ್ತೆನಿಪ ಮೂರ್ಛೆ ಯಂ ಪಡೆದಸುರಥಾದಿ ಭೂ | ಪ್ರೋತ್ತಮರ ನೀಕ್ಷಿಸಿಕರಂ ಚಿಂತಿಸುತೆ ಬಂದಿ ದಿರ್ಚಿದಂ ಬಾಲಕನನು ॥ ೧೯ ॥

ಅಲಘುವಿಕ್ರಮನಿವಂ ನರಮಾತ್ರನಲ್ತೆಣಿಸೆ | ಗೆಲಲೆನ್ನನೈತಂದದಾವಸುರಶಕ್ತಿಯೋ | ತಿಳಿಯೆನಿರಲಿನ್ನುರುಳ್ಚುವೆನಿನಿವನನೆಂದು ತನ್ನಯಮನದೊಳಾಲೋಚಿಸಿ ॥ ಎಲೆಬಾಲನೀನೆನ್ನುಮಂ ಮೂರ್ಛಿಸಿದೆ ನಿನ್ನ | ಕಲಿತನಂ ಪಿರಿದು ಮಝುಭಾಪುಭಾಪೆನ್ನ ಭುಜ | ಬಲವನಿನ್ನಿದೊ ತೋರ್ಪೆನ್ನೈ ನೋಡನೋಡನೀ ನೋಡದಿರೆನುತ್ತೆ ನುಡಿದು ॥ ೨೦ ॥

ಕಾಲಾನಲಾಕೃತಿಯ ವಿಲಯಕಾಲದ ಯಮನ | ನಾಲಗೆಯರೂಪಾಂತರದ ಪಿಂದೆಜಿತನಾವ | ನೋಲವಣನಾವುದರಿ ನಾಮಹತ್ತರಬಾಣಮಂ ಚಾಪಕೇರಿಸಿದೊಡೆ ॥ ಜ್ವಾಲಾಸಹಸ್ರದಿಂ ಕಡುಭಯಂಕರಮಾಗಿ | ಮೂಲೋಕಮಂ ದಹಿಸುವಂತೆ ತೋರ್ಪಾ ಶರವ | ನಾಲೋಕಿಸುತ್ತದಂ ಪರಿಹರಿಸಲುರು ಶರಗಳಂ ಲವಂ ತೆಗೆದೆಚ್ಚನು ॥ ೨೧ ॥

ಅವುಸಮಿತ್ತುಗಳಾಗಲಾವಿಶಿಖಶಿಖಿಗೆ ತ | ನ್ನವಲೇಪಭರವನಳ್ಗಸುವ ಬೇರೊಂದು ಶರ | ಮವಕಾಶವಿಲ್ಲದೆಯೆ ಸಂದಿಸಲ್ಕೇನೆಂಬೆನದು ವೇಗದಿಂದೆ ಬಂದು ॥ ಸುವಿಶಾಲಮಾದುರಸ್ಸಿಗೆ ತಾಗಿಮೂರ್ಛೆಯಂ | ಕುವರಂಗೆ ಬರಿಸಿದುದು ಶಿವಮಹಾದೇವದಿ | ಗ್ವಿವರಂಗಳೊಳ್ಬಳಿಕ ರಾಮಚಂದ್ರಾನುಜನ ವಿಜಯಶಂಖಂ ಮೊಳಗಿತು ॥ ೨೨ ॥

ಇಪ್ಪತ್ತೊಂಬತ್ತನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೨೯ ಕ್ಕೆ ಪದ್ಯ ೧೧೬೮ ಕ್ಕೆ ಮಂಗಳಮಸ್ತು.

ಮೂವತ್ತನೆಯ ಸಂಧಿ.

ಸೂಚನೆ ‖ ಸಂತೈಸಿ ಮುನಿಸುತರಮುಖದಿಂದೆಲವನ ವೃ | ತ್ತಾಂತವಂ
ಕೇಳ್ದುಶೋಕಿಸುತಿರ್ದನಿಜಜನನಿ | ಯಂ ತಾಳ್ದು ಡೊಣೆಬಿಲ್ಗಳಂ
ಕುಶಂಪೊರಮಟ್ಟಸುರವಣಿಸಿ ಕಾಳಗಕ್ಕೆ ‖

ಋಷಿವರೇಣ್ಯನೆಕೇಳನಂತರದೊಳಿನವಂಶ | ವೃಷಭನನುಜಾತನ
ತ್ಯುತ್ಸಾಹದಿಂ ಮೋಹ | ವಿಷವೇರಿದಾಬಾಲನಂ ತನ್ನರಥದೊಳಗೆ ಪಟ್ಟುರಿಸಿ
ಕೊಂಡು ನಡೆಯೆ ‖ ವಿಷಮದಶೆಯಾಂತನೆಮ್ಮಯ ಸಖಂಬೇಗನಿಂ | ವಿಷಯ
ಮಂ ಸೀತೆಗರುಪುವೆವೆಂದು ಮುನಿಸುತ | ರ್ಹರ್ಷಿತರಾಗಿರದಾಶ್ರಮಕ್ಕೆ ಬರ್ಪ
ನಿತರೊಳಗಾದಿನಂ ಕೊನೆಗಂಡುದು ‖ ೧ ‖

ಅಂದುಜನಕಾತ್ಮಜೆಯ ಮನವನಾಕ್ರಮಿಸಲ್ಕೆ | ಬಂದಾತ್ಮಭವಶೋ
ಕಪಾವಕಜ್ವಾಲೆಯೆಂ| ಬಂದದಿಂಸಾಂಧ್ಯರಾಗಂತೋರ್ಕೆ ಪಡೆಮದಿವಸಾಧಿಪಂ
ನಿಜವಂಶದ ‖ ನಂದನನ ಶೋಚನೀಯಾವಸ್ಥೆಯಂ ನೋಡಿ | ಮಂದದೀಧಿತಿ
ಯಾಗಿ ಸಹಿಸಲಸಮರ್ಥನೆಂ | ಬಂದದಿಂದಾದುಃಖವಮಂ ಮುಳುಗಿದಂ ಬೇಗ
ನಪರವಾರಾಕರದೊಳು ‖ ೨ ‖

ಕತ್ತಲೆಮುಸುಂಕಿದುದು ಜಗಮಂಕುಶಾನುಜನ | ಚಿತ್ತಮಂ ಮೋಹ
ಮಿರದಾಕ್ರಮಿಸಿದಂತೆಪಡೆ | ದತ್ತುಸೀತಾರಾಮರಂದದಿಂ ಕೋಕಮಿಥುನಂ
ವಿಯೋಗವ್ಯಥೆಯನು ‖ ಪತ್ತಿತು ಪರಿಕ್ಲಿಷ್ಟದಶೆ ಪದ್ಮಸಂಕುಲಕೆ | ಪತ್ತಿದಂ
ತಿರೆಸುಹೃದ್ವ್ಯಥೆವಟುಗಳಾಶಯಕೆ | ಬಿತ್ತರಿಸಿದುದು ಕುಮುದಸಂಪತ್ತು
ಶತ್ರುಘ್ನಜಯವಿಭವಮುರ್ಬಿದಂತೆ ‖ ೩ ‖

ಅಡವಿಗೆ ಸಮಿತ್ಕುಶಫಲಂಗಳ ತರಲ್ಕೆ ಪೊ | ಳ್ತಡಮೆ ಮುನಿಬಾಲರಿಂ
ದೆಂದಿನಂತೊಡಗೂಡಿ | ನಡೆದಲವನಿಂದಿನಿತು ಪೊಳ್ತಾದೊಡಂ ಬಾರನೇಕಿಂ
ತುತಳ್ವಿದಕ್ಕೆ ‖ ಅಡಸಿದೆಡರಾವುದೋ ಬೆಸಗೊಂಬೆನಾನಾರ | ನೊಡನೆಪೋ
ಗಿರ್ದರುಂ ಬಾರದಿಹರಿನ್ನುಮೀ | ಗಡ ಗುರುಗಳುಂ ಕುಶನುಮಿಲ್ಲಿಲ್ಲವೆಂ
ದತ್ತಲವನಿಸುತೆ ಚಿಂತಿಸಿದಳು ‖ ೪ ‖

ಈತಪೋವನದೊಳಿರ್ದೊಡೆ ಕಂದನೆಂದಿನಂ | ತೇತಕ್ಕೆ ಬಾರನಾ
ಖೇಟಪ್ರಿಯಂಸುರ | ಸ್ರೋತಸ್ವಿನಿಯದಾಂಟಿನಡೆದ ರಣ್ಯಾಂತರಕ್ಕೆಮಗೆ ವೈ
ರಿಗಳೆನಿಸಿದ ॥ ಯಾತುಧಾನರಕಣ್ಗೆ ಗೋಚರಿಸಿದನೊ ಸರೋ | ಜಾತನಯ
ನಂ ಕಾಣೆ ನೀಂಗಳೇಗೈವೆನೆಂ | ದಾ ತಪಸ್ವಿನಿಸೀತೆ ಬೆಗಡುಗೊಂಡಕಟೆಂದು
ಹಲುಬಿದಳ್ಪಲತೆರದೊಳು ॥ ೫ ॥

ಅರಿಯೆವಿನ್ನುಂ ಬಾರರೇತಕ್ಕೆ ಲವನೊಡನೆ | ತೆರಳ್ದ ತಮ್ಮ ಮಾಣು
ಗರೆಂದು ಚಿಂತಿಸುತಿರ್ದ | ನೆರೆಹೊರೆಯ ತಾಪಸಸ್ತ್ರೀಯರೊಡನಾಶ್ರಮದ
ಸುತ್ತಲುಂ ಬಾಲಕರನು ॥ ಅರಸಿ ಸಂಬೋಧಿಸುತ ಹಂಬಲಿಸುತಿರ್ದ ರಘು |
ವರನರಸಿ ಬಳಿಕ ತಡೆದಿರದಲ್ಲಿಗೈತಂದ | ತರಳರಂ ನೋಡಿ ಲವನಿಲ್ಲದಿರೆ ಬೆಚ್ಚಿ
ಲವನೆಲ್ಲೆಂದು ಬೆಸಗೊಂಡಳು ॥ ೬ ॥

ನೀನೆನುಡಿ ನೀನೆನುಡಿಯೆಂದವದಿರಿತರೇತರಾನನವ ನೀಕ್ಷಿಸುತೆ ತಲೆವಾ
ಗಿ ಬಿಸುಸುಯ್ಯೆ | ತಾನುಡಿಯಬಾಯ್ಬಿಡದೆ ಸುಮ್ಮನಿರೆ ಕಾತರಿಸಿ ಕಂಬ
ನಿಯ ಮುಕ್ಕುಳಿಸುತೆ ॥ ಮೌನವೇಕೆಲೆ ವಟುಗಳಿರ ಪೇಳಿರೈಪೇಳಿ | ರೇನಾ
ಯ್ತು ಬೇಗನುಸಿರೇತಕ್ಕೆ ತಡಮೆಂದು | ಮಾನಿನೀಮಣಿ ಶೋಕಶಿಖಿದಹ್ಯಮಾ
ನಮಾನಸೆಯಾಗಿ ಬೆಸಗೊಂಡಳು ॥ ೭ ॥

ಅವರೊಳೋರ್ವಂ ಬಳಿಕಲಾಸೀತೆಕೇಳೆಂದು | ಸವಹಯಗ್ರಹಣಾದಿ
ಮೂರ್ಛಾಂತಮಾಗಿರ್ದ | ಲವನ ವೃತ್ತಾಂತಮಂ ವಿವರಿಸಿದೊಡವನಿಸುತೆ
ಹಾಪುತ್ರ ಸಚ್ಚರಿತ್ರ ॥ ರವಿವಂಶದೀಪ ಹಾ ಚಂಡಪ್ರತಾಪ ಹಾ | ಸುವಿದಿತಾ
ಖಿಲವಿದ್ಯ ನಿರವದ್ಯಗುಣಹೃದ್ಯ | ಲವನೆ ಸೀತಾಲತಾಪಲ್ಲವನೆ ಯೆಲ್ಲಿರ್ಪೆ
ಹಾಯೆಂದು ಬಿದ್ದಳಿಳೆಗೆ ॥ ೮ ॥

ಬಸವಳಿದಳೊಡನೆ ದುಃಖಾವೇಶದಿಂದೆ ತಾ | ಪಸಸತಿಯರಾಕ್ಷಣಮೆ
ಶೀತೋಪಚಾರಂಗ | ಳೆಸಗಿ ಸಂತೈಸಿದೊಡೆ ತರದಿಂದೆಚೇತರಿಸಿ ಬಿಸಜಾಕ್ಷಿ
ಮೆಲ್ಲಮೆಲ್ಲನೆ ॥ ಮುಸುಕಿರ್ದ ಕಣ್ಗಳಂ ತೆರೆದು ನಿಟ್ಟುಸಿರಿಡು | ತ್ತೊಸರೆ ಬೆಮ
ರೊಡಲೊಳ್ಪ್ರಯಾಸದಿಂದೆದ್ದು ತಾ | ಪಸಿಯರಂ ಪೊರೆಯೊಳೀಕ್ಷಿಸಿ ಬಂದೆ
ನೇಕಿಲ್ಲಿಗಾನೆಂದು ಬೆಮೆಗೊಂಡಳು ॥ ೯ ॥

ಮುನಿವಟುಗಳಂ ನೋಡಿ ಬಳಿಕ ಸೀತಾದೇವಿ । ತನುಜಾತ ಶೋಕ
ವೇಗಾವೇಶದಿಂದಿಂತು । ಎನಗೆ ಮತಿವಿಭ್ರಮಂ ತೋರಿದುದೆಹಾ ತಿಳಿದೆನಕಟ
ಗಳೇಗೈವೆನು ॥ ಇನಿತೊಂದು ಪ್ರೌಳ್ತಿಗೇನಾಗಿಹನೊ ನುಡಿವರಾ । ರೆನಗೆ ತೋ
ರದೆ ಮುಖವನೆಲ್ಲಿರ್ಪ ಹಾಲವನೆ । ಮನುಕುಲಾರ್ಣವಕುಮುದಬಾಂಧವನೆ
ಹಾಯೆಂದು ರೋದಿಸುತ್ತಿಂತೆಂದಳು ॥ ೧೦ ॥

ಸಿತತುರಗಮಂ ತಡೆವುದರಸರ್ಗೆ ಧರ್ಮವೆನಿ । ಸುವುದೆಂದು ಬಗೆದದಂ
ತಡೆದುದೆಲೆವಟುಗಳಿರ । ಲವನತಪ್ಪಲ್ಲಕುವರನಂ ಬಿಟ್ಟಗೆರ್ವನೇ ಪೋದುದು
ರಣಕ್ಕೆ ತಪ್ಪು ॥ ಅವನನೇ ಕೈತಡೆದರಿಲ್ಲನೀವೆನಗೆ ತಿಳು । ಹುವುದಕ್ಕೆ ತಳ್ವಿದಿರ
ದೇಕೆ ಮೇಣ್ನುವನಿಸಿದ । ಬವರದಂ ಬಾಲನೊರ್ವನೆ ಮಹಾಯುದ್ಧಕ್ಕೆ ಪೋಗು
ವರೆ ಹಾಯೆಂದಳು ॥ ೧೧ ॥

ಅಂತಹ ಮಹಾಸೈನ್ಯದಿಂ ಕೂಡಿ ದಾಶರಥಿಕ । ರೆಂತು ರಥಹೀನನಾಗಿರ್ಪ
ಸುಕುಮಾರನಿದಿ । ರಾಂತರೋ ಯುದ್ಧಕ್ಕೆ ಕುಶನಿರ್ದೊಡವರೆಲ್ಲರಂ ಕೆಡಹು
ತಿರ್ದನಿಳೆಗೆ ॥ ಮುಂತದೇಗೈವೆನಾರಥಿಕನೆತ್ತಲಿ ಸ್ಮರ್ಥಿ । ಯಾಂತೆನ್ನ ಮುದ್ದು
ಕಂದನನೊಯ್ದು ನುಸಿರಿರ್ಕೆ । ಚಿಂತೆ ಪತ್ತಿತು ಚಿತ್ತಕಣುಗನಂ ಬಿಟ್ಟು ಜೀವಿ
ಸಲಾರೆ ನಾನೆಂದಳು ॥ ೧೨ ॥

ಆನುಡಿಯನಾಲಿಸಿತಪಸ್ವಿ ಬಾಲಕರೆಲೆ । ಜಾನಕಿಯೆ ಸಮರಕಸಹಾ
ಯನಾಗೊರ್ವನೇ । ನೀನ್ನೈದುವುದು ಯುಕ್ತಮಲ್ಲಂ ನಾವೆನಿತು ತಡೆದೊ
ಡಂ ನಿನ್ನ ಮಗನು ॥ ದೀನಭೂಸುರರೆನಿಸಿದೆಮ್ಮ ನುಡಿಯಂ ಕೇಳ । ದಾನೆಕ
ರ್ವಿನಗರ್ದಿಯಂ ಪುಗುವ ತೆರದೊಳಾ । ಸೇನೆಯಂ ಪೊಕ್ಕನಾ ವವನಲ್ಲಿ ಗೈವ
ಹಾವಳಿಯನೀಕ್ಷಿಸುತಿರ್ದೆವು ॥ ೧೩ ॥

ಎನೆಕೇಳ್ದು ಜನಕಸುತೆ ನಿಮ್ಮ ತಪ್ಪೇನು ಮಿ । ಲ್ಲೆನತು ದುಷ್ಕರ್ಮ
ಕ್ಕೆ ನೀಂಗಳೇಗೈವಿರೆಲೆ । ಮುನಿಸುತರೆ ನಿಷ್ಕೃಪನು ಮತ್ಪ್ರಪನುಮೆನಿಸಿದಾ
ದುಷ್ಟಮತಿ ಭೂಮಿಪತಿ ॥ ಘನವೀರಯೋಧರೊಡಗೂಡಿ ಕೆಡಹಿದನೆ ಬಾ ।
ಲನನೆಂಬುದೇಂ ಕಾಲಗತಿಕೆಟ್ಟುದೇಕೆ ಕಂದ । ನಿನಗೇಕೆ ಬಿಡುಬಿಸಾದುಷ್ಟರ
ಧ್ವರತುರಗವೆನಗೆ ಮೊಗದೋರೆಂದಳು ॥ ೧೪ ॥

ಭೂವಿನುತಶೌರ್ಯದೊಳ್ಜನಕ ಸದ್ಯಶಂಕುಶಂ । ಸೇವಿಸಿ ಮುನೀಂದ್ರ ರೊಡನುಜ್ಞೆಯಿನಿಯೆೊಳ್ದೇವ । ದೇವನಮಹಾಕಾಲನಂಘ್ರಿ ಪಂಕೇಜವಂ ಕಯ್ಕೊಂಡು ವಾಂಛಿತವನು ॥ ಆವೇಳೆಯೊಳಗಲ್ಲಿಗೈತಂದು ನೋಡಿ ಬಾ । ಷ್ಪಾವಿಲದೃಗಂಬುಜೆಯು ನವನಿಜೆಯನಂಘ್ರಿ ರಾ । ಜೀವದೊಳ್ಬೀಗೆಡೆದು ಸಂಭ್ರಾಂತಚೇತಸ್ಕನಾಗಿಂತು ಬೆಸಗೊಂಡನು ॥ ೧೫ ॥

ಮಾತೆಪೇಳ್ ಬೇಗನೇನಿದೇನೆಂಬಿನಂ । ತಾತಕ್ಕೆನೀನಿಲ್ಲಕಾರಣಂ ತಾನಾವು । ದೀತೆರದ ನಿನ್ನ ದುಃಖಕ್ಕೆ ನಾನಿರ್ಪನ್ನೆಗಂ ನಿನ್ನ ಕಂಬನಿಗಳು ॥ ಭೂತಲಕೆ ಬೀಳಲಾಗದು ಪೇಳದೆತ್ತಲನು । ಜಾತನಾಪವನನೆನಗರಾತಿಯಿಂ ದಾವಂಗೆ । ಬೀತುದಾಯುಸ್ಸೆಂದು ಬೆಸಗೊಳ್ವುದುಂ ಪ್ರೌಢವಿಯುಣಾಗಿತಾನಿಂತೆಂಪಳು ॥ ೧೬ ॥

ಆಲಿಸೆಲೆವತ್ಸನಿನ್ನನುಜಾತ ನಿಂದುಮುನಿ । ಬಾಲರೊಡನೊಂದು ಪ ಋತುರಗವಂ ತಡೆದು ತ । ತ್ಪಾಲನಾದರ್ವ ಚತುರಂಗಬಲಸಹಿತನಾದರಸ ನಿಂ ಗಾಸಿಪಡೆದು ॥ ಪೇಳಲೇಂ ಬಸವಳಿದು ಸೆರೆವಿಡಿಯಪಟ್ಟನೆನೆ । ಕಾಲಾಗ್ನಿಯಂತುರಿದುಮುತುರುಕೋಪದಿಂದೆ ಬಲ । ದೋಳದಿರೆ ವಿಜಯಸೂಚಕಮಿದೆಂದೊಲವಾಂತು ವೀರಕುಶನಿಂತೆಂದನು ॥ ೧೭ ॥

ಬಿಡುಬಿಡಿನ್ನೀಶೋಕವಂ ತಾಯೆ ತಾಯೆನಗೆ । ತಡವೇಕೆ ಸೀಸಕನ ನಂಗಿಯುಂ ಬತ್ತಲಿಕೆ । ಪಡೆಗಬಿಲ್ಲಳನೆಂದು ಚತುರಂಗ ಸೇನೆಯೊಡನಾ ತುರಗಪಾಲಕನನು ॥ ಪ್ರೌಢವಿದೇವತೆಗೆ ಬಲಿಗೊಟ್ಟು ಕೂರ್ಗಣೆಗಳಿಂ । ಬಿಡಿಸಿಕೊಂಡೈತರ್ಪೆ ನನುಜನಂ ಸಮರದೊಳ್ ಕಡೆದೊಡಂ ತಾನದುಮಕೀರ್ತಿಕರ ಮಧಟರ್ಗೆ ಚಿಂತಿಸದಿರಿನ್ನೆಂದನು ॥ ೧೮ ॥

ಆವೀರವಾತೆ ತದ್ವಚನಕ್ಕೆ ಹರುಷಗೊಂ । ಡಾಪೊಡನೆ ಸಕಲರಣ ಸಂಭಾರವಂ ವಿಜಯ । ಭಾವನೆಯೊಳೀಯೆ ನಿಜಹಸ್ತದಿಂದುತ್ಸಾಹವಾಂತು ಸನ್ನದ್ಧನಾಗಿ ॥ ಭಾಪದೊಳ್ನೆದು ಗುರುಪಾದವಂ ಜನನಿಯಡಿ । ದಾವರೆಗೆ ಕುಂಬಿಟ್ಟು ಹರಕೆಗೊಂಡಂದಿನನಿ । ಶಾವಸಾನದೊಳ್ಬೈದಿದಂ ರಾಮಚಂದ್ರನಾ ಹಿರಿಯಮಗನನುವರಕ್ಕೆ ॥ ೧೯ ॥

ಮೂವತ್ತನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೩೦ ಕ್ಕೆ ಪದ್ಯ ೧೧೮೭ ಕ್ಕೆ ಮಂಗಳಮಸ್ತು.

ಮೂವತ್ತೊಂದನೆಯ ಸನ್ಧಿ.

ಸೂಚನೆ || ಬಲಸಹಿತ ಸೌಮಿತ್ರಿಮೊದಲಾದವೀರರಂ | ಕಲಿಕುಶನುರುಳ್ಚಲವಯುತನಾಗಿ ಭಾಸ್ಕರಾ | ನಿಲತನೂಜಾತರಂ ಸೆರೆವಿಡಿದು ಜಯವಾಂತುಬಂದಂ ನಿಜಾಶ್ರಮಕ್ಕೆ ||

ಪರಮಯೋಗೀಶ್ವರನೆ ಬಳಿಕನೀನಾಲಿಸೈ | ಸೆರೆವಿಡಿದಲವನೊಡನೆ ಕುದುರೆಯಂಕೊಂಡುರಘು | ವರನನುಜ ನಳದುಳದಸೇನೆಯು ನೊಡಂಗೊಂಡಯೋಧ್ಯೆಗವಿಳಂಬದಿಂದೆ || ತೆರಳಲ್ಕೆಸನ್ನಾಹವಂ ಗೈಯುತಿರಲನಿ | ತ್ತರೊಳಾಕಳಕ್ಕೆ ನಿರ್ಝರರಣಾವೇಶದಿಂ | ದುರುತರಕ್ರೋಧ ವಿವಶಂಕುಶಂಕಡುವೇಗದಿಂಬಂದು ಜೇವಡೆದನು || ೧ ||

ಆಮಹಾಟಂಕಾರಶಬ್ದಮಂ ಕೇಳ್ದೊಡನೆ | ಸೌಮಿತ್ರಿ ಬೆಗಡುಗೊಂಡಾಕ್ಷಣಮೆಮತ್ತೆ ಸಂ | ಗ್ರಾಮಕ್ಕೆ ಸನ್ನಾಹಗೊಳಿಸೆನಿಜಸೇನೆಯಂ ದಳದುಳನೆಸಕಲಭಟರು || ಭೀಮಾಯುಧಂಗಳಿಂ ತಾವರಿಸೆತನ್ನನು | ದ್ದಾಮಭುಜನೀಕ್ಷಿಸಿ ಲವಾಗ್ರಜಂದಾರುಣಮ | ಹಾಮಾರ್ಗಣಂಗಳನುಪಕ್ರಮಿಸಿದಂ ಪ್ರಯೋಗಿಸಲವಿಚ್ಛಿನ್ನಮಾಗಿ || ೨ ||

ಸೈರಿಸದೆ ತತ್ತೀವ್ರಶರಹತಿಯದಂತಿಘಟೆ | ಮೀರಿಮಾವುತರನುಡಿಯಂ ಘೀಳಿಡುತ್ತೆ ಪಿಂ | ಜಾರಿದುವು ರಾವುತರ್ಕಡಿಯಣವನೆಳೆದೊಡಂನಿಲದೆ ಕಡುಬೆಗಡುಗೊಂಡು || ವಾರುವಂಗಳ ಪಡೆಗಳೋಡಿದುವು ದೆಸೆದೆಸೆಗೆ | ಸಾರಥಿರಥಾಶ್ವಂಗಳಳಿಯೆರಥಗುಪ್ತಿಯೊಳ್ | ವೀರರಥಿಕರ್ಕಳೊಡಲಂ ಬೈತರೆಣಿಕೆಯಿಲ್ಲದೆ ಪದಗರಿಳೆಗುರುಳ್ದರು || ೩ ||

ಆಹವಾವೇಶವಿವಶಂ ಕಲಿಕುಶಂಬಳಿಕ | ಮೋಹನಾಸ್ತ್ರಮನೆಚ್ಚುಕಣ್ಗೆಡಿಸಿತನ್ಮಹಾ | ವಾಹಿನಿಯ ಕಟಕಮಂಪ್ರೊಕ್ಕಾಂತ ಮೂರ್ಛಿತಾಂಕಳಿಯೆ ತನ್ನಯಬರವನು || ಊಹಿಸುತೆಸೆರೆಯೊಳಿರ್ದನುಜನಂಶಾತ್ರವ | ವ್ಯೂಹದಿಂಬಿಡಿಸಿತಂದಾಯುಧಗಳೊಡನೆ ಕಡು | ಸಾಹಸದೆ ಳುಪಸಂಹರಿಸಿ ತದಸ್ತ್ರಮನೂದಿದಂ ಶಂಖಮಂಮುದದೊಳು || ೪ ||

ಆ ಮಹಾವಿಜಯಶಂಖಾರಾವಮಂ ಕೇಳ್ದು । ರಾಮಚಂದ್ರಾನುಜಂ ಬೆಮೆಗೊಂಡಿದೇನೆಂದು । ಭೀಮಕೋದಂಡಧರನಂ ಕಂಡು ಲವನಂತವಗ್ರಜನ ಪೊರೆಯೊಳವರ ॥ ಸಾಮರ್ಥ್ಯಕಾಶ್ಚರ್ಯಗೊಂಡು ಬಾಳ್ದಲೆವಿಡಿವ । ದೇವರಾಳ್ಕೆಯಿಂದ ಮಾದೊಡಮಿವರಿಂದೆನುತೆ । ನೇಮಿಸಿದೊಡಖಿಳಸೇನಾಜನಂ ಪಿಡಿಯಲವರಂ ಮುತ್ತಿತೆತ್ತಲು ॥೫॥

ಮಾರುತಧನಂಜಯರ ಚಂದದಿಂದೊಡಗೂಡಿ । ವೀರಕುಲಮಣಿಗಳಾದಾ ಕುವರರಿರ್ವರುಂ । ಭೂರಿತರರೋಷದಿಂದಿರ್ದಕ್ಕದೊಳ್ನಿಂದು ತದ್ವೈರಿಬಲದಮೇಲೆ ॥ ನೀರಂಧ್ರಶರವರ್ಷಮಂ ಕರೆಯೆ ಸೈನಿಕ । ಧಾರಿಣಿಯೊಳಳಿದಳಿದು ಕೆಡೆ ನರೆಯೊಡನೊಡನರುಣ । ವಾರಿಪ್ರವಾಹಮೆತ್ತೆತ್ತಲುಂ ಪ್ರವಹಿಸಿದುದೇನೆಂಬೆನದ್ಭುತವನು ॥೬॥

ಉಲ್ಲೋಲಕಲ್ಲೋಲಮೆನಿಪ ಕಲ್ಲೋಲಿನೀ । ವಲ್ಲಭನವೋಲಾಯುತ್ತಪ್ಪರೂಥಿನಿವೀರ । ಮಲ್ಲರಪದಕುಶಲವರ ತೀಕ್ಷ್ಣಶರಘಾತದಿಂ ಬೆಗಡುಗೊಂಡಾಕ್ಷಣದೊಳು ॥ ಸೊಲ್ಲಿಸುವುದೇನಾನುಹಾಸ್ಯನ್ಯಮಿಪ್ಪ ಸರ । ದಲ್ಲಿಸತ್ತಿದದವಾಗ್ನಿಯುವನದವೋಲಿರ್ದು । ದಲ್ಲಿಯುಂ ಭಟರ ಹಾಹಾಕಾರವೊಂದೆ ತುಂಬಿದುದಾಕಳದೊಳಮಮಾ ॥೭॥

ಎಲ್ಲಿಯುಂ ಪಡಲಿಟ್ಟ ಶಿರಗಳುಂ ನರಗಳುಮ । ದೆಲ್ಲಿಯುಂ ಖಂಡಿಸಿದ ಕಾಲ್ಗಳುಂ ತೋಳ್ಗಳುಮ । ದೆಲ್ಲಿಯುಂ ಕೆಡೆವಕಟ್ಟಳ್ಗಳುಂ ಭಾಳ್ಗಳುಂ ನೋಡಲಾರಣನುಹಿಮೊಳು ॥ ಎಲ್ಲಿಯುಂ ತೋರ್ದ ತಲೆಸೋಳ್ಗಳುಂ ಧೂಳ್ಗಳುಮ । ದೆಲ್ಲಿಯುಂ ಹೊಂಪಿದಿ ಧಜಯುಗಳುಂ ಹಯುಗಳುಮ । ದೆಲ್ಲಿಯುಂ ಕಡಿವಡೆದ ಡೊಣೆಗಳುಂ ಕಣೆಗಳುಂ ಭೀಕರಂಗಳಾಗಿರ್ದುವು ॥ ೮ ॥

ಮೊಗದಿರುಹದವರಿಲ್ಲ ಹಿಮ್ಮೆಟ್ಟನವರಿಲ್ಲ । ಬಗೆಯೊಳಾಂತುರುಭಯದೊಳೋಡದವರಿಲ್ಲಕ । ಯುಮ್ಮಗಿಮ ಭಕ್ತಿಯುನಾಂತು ಸಂಪ್ರಾಪ್ತಮಾವುದೆಮಗವಸಾನಕಾಲಮೆಂದು ॥ ಜಗದೀಶನಂ ನೆನೆಯದವರಿಲ್ಲಮುಳಿದುಳ್ಕೈ । ದುಗಳಂ ಶರಣ್ವೇಡವರಿಲ್ಲಮುರವಣಿಸಿ । ಜಗದೇಕವೀರರಾಕುಶಲಕರ್ಕಶವೆ ಯುಕರೆಯುತಿರೆ ತದ್ಬಲದೊಳು ॥ ೯ ॥

ಸೈನಿಕರಸಾಹಸಂ ಸಾಗದೇನೊಂದು ಮಹ । ಹಾನಿಮಿಷಮಾತ್ರದೊಳೆಬಟ್ಟೆಬಯಲಾಗು ತಾ । ಸೇನೆನೆರೆದಿರ್ದಕಳ ಮೆಣಿಸಲಳವಲ್ಲದಿಹಪೆಣಗಳಿಂದಿಟ್ಟಣಿಸಿತು ॥ ತಾನದಂನೋಡಿಸೈರಿಸದೆ ಶತ್ರುಘ್ನನತಿ । ಮಾನರೋಷಾವೇಶದಿಂದ ಮುರವಣಿಸುತ್ತೆ । ಜಾನಕಿಯ ಹಿರಿಯಮಗನಂಸಾರ್ದನೇರಿ ಪೊಂದೇರನತಿವೇಗದಿಂದೆ ॥ ೧೦ ॥

ಶ್ರೀರಾಮಮೂರ್ತಿ ಸನ್ನಿಭಮನೋಹರನಿಜಾ । ಕಾರನಂ ಲವನಂ ಕರಂ ಪೋಲ್ವನಂ ಕುಶಕು । ಮಾರನಂ ನೋಡಿ ಸೌಮಿತ್ರಿ ಬಳಿಕೆಲೆಕುಮಾರಾ ನಿನ್ನ ವಿಕ್ರಮಕ್ಕೆ ॥ ಭೂರಿಮುದಮಾಂತು ಮೆಚ್ಚಿದೆನಯ್ಯ ಭಾಪು ನೀ । ಸಾರಲಾಮೊದಲೆನಗೆ ನುಡಿವುದೆನೆ ಮೇಘಗಂ । ಭೀರ ಮಹಾವಾಕ್ತಿಯಿಂ ಮೊಳಗಿಸುತೆ ಯುದ್ಧರಂಗವನಿಂತು ಕುಶನೆಂದನು ॥ ೧೧ ॥

ತನುಜರೆಮ್ಮಿರ್ವರಂ ಪಡೆದಳೈ ವಾಲ್ಮೀಕಿ । ಮುನಿಪನಾಶ್ರಮದೊಳಗೆ ಕುಶಲವಾಭಿಖ್ಯರಂ । ಜನನಿ ಭೂಮೀಜಾತೆ ಸೀತೆ ಬಳಿಕಾಮಹಾಮುನಿವರನನುಗ್ರಹದೊಳು ॥ ಅನಘಂಗಳಾದ ನಿಗಮಾದಿವಿದ್ಯಂಗಳಂ । ಧನುರಾಗಮವನಂತು ಕಲಿತು ಜನನೀಚರಣ । ವನಜಸೇವಾನಿರತರಾಗಿರ್ಪೆವೆಲೆ ವೀರರಥಿಕ ನೀನಾರೆಂದನು ॥ ೧೨ ॥

ಆಮಾತನಾಲಿಸಿ ಮನಸ್ಸಿನೊಳ್ತರಿಂದು । ಸೌಮಿತ್ರಿ ಗರ್ಭವತಿಯಾಗಿ ಬನಕೈತಂದ । ರಾಮಚಂದ್ರಮನರಸಿ ಯೀಯಮಳರಂ ಪಡೆದಳಕ್ಕುಮೆಂದೂಹೆಗೈದು ॥ ಆಮೋದಮಂ ಪಡೆದು ತಾಂ ವೀರಧರ್ಮದೊಳೆ । ಲೈಮಹಾಶೂರ ಕೇಳೆಮ್ಮಗ್ರಭವನಯೋ । ಧ್ಯಾಮಹೀಪತಿ ತುರಗಮೇಧಾಧ್ವರಕ್ಕೆ ದೀಕ್ಷಾಬದ್ಧನಾಗಿರ್ಪನು ॥ ೧೩ ॥

ಅಣುಗಕೇಳಾಮಹಾ ಮಖತುರಂಗಮದ ರ । ಕ್ಷಣೆಗೆಬಂದಿರ್ಪೆನಾಂ ಶತ್ರುಘ್ನನೆಂದೆನ್ನ । ನೆಣಿಸುನಾಮದೊಳಧ್ವರಾಶ್ವಮಂ ಪಿಡಿದರೊಳವಮಾನಮಿಲ್ಲನಿಮಗೆ ॥ ರಣಕರ್ಮವಿದು ಸದೃಶಮಲ್ಲ ವಿದ್ಯಾವಿಚ । ಕ್ಷಣರಾಗಿತೋರ್ಪಿರೀ ಯಾಗದೊಳಗಧ್ವರ್ಯು । ಗಣಮುಖ್ಯನಾಗಿರ್ಪ ವಾಲ್ಮೀಕಿನಿಮ್ಮ ಸಾಹಸವನ ವನೋದಿಸನೆನೆ ॥ ೧೪ ॥

ಕಡುಗಲಿ ಕುಶಂ ಕೇಳ್ದದಂ ಪಿರಿಯ ಕುದುರೆಯಂ | ತಡೆವುದುಂ ಗುರುಗಳೊಡನಾದೊಡಂ ಪ್ರಾಣವುಳ್ಳುದುಂ | ಪೊಡವಿಯೊಳ್ ಧರ್ಮವರಸರ್ಗೆ ಬಿಡೆನಶ್ವಮಂ ಯುದ್ಧವನೆ ಗೈವೆನೆಂದು || ನುಡಿವುದುಂ ಸೌಮಿತ್ರಿಯಿವರೆಂತುಮಶ್ವಮಂ | ಬಿಡರೀಗಳೇಗೈವೆ ನಿನಿತೊಂದು ಮೋಹರಂ | ಮಡಿದಮೇಲೆನಗಿವರೊಡನೆ ಪ್ರಾಣರಕ್ಷೆಯೆಧರ್ಮವೆಂದೆಣಿಸಿ ಜೀವಡೆದನು || ೧೫ ||

ಪೊಡವಿಪನ ಮಗಳಣುಗನಾ ಬಳಿಕ ನಿಜಗುರು ತಪದ | ಕಡುವೈಮೆಯಿಂ ದೆಸೆಗೆದಿತ್ತ ಕೋದಂಡಮಂ | ಮಿಡಿದು ಪುಂಖಾನುಪುಂಖಂಗಳಾದುರುತರಶರಂಗಳಂ ತೆಗೆದುತೆಗೆದು || ಬಿಡಲುಪಕ್ರಮಿಸೆ ಸೌಮಿತ್ರಿಮಾರ್ಗಣೆಗಳಂ | ದೊಡನೊಡನವಂ ಕಡಿಯುತಿರೆ ಕೇಳ್ದುದಾಗಳೆಡೆ | ವಿಡದಸಂಖ್ಯಾತತಚ್ಛರಪುಂಖಬದ್ಧಖಗಪಕ್ಷಸಾಂಕಾರವನುಸಾ || ೧೬ ||

ಬಳಿಕಾ ಕುಮಾರನಾಗ್ನೇಯಮಾದಿ ದಿವ್ಯಾಸ್ತ್ರ | ಗಳನಿಸತ್ತೊಡಗೆ ವಾರುಣಮುಖಪ್ರತ್ಯಸ್ತ್ರ | ಗಳನವಂ ಸೌಮಿತ್ರಿವಾರಿಸಿದ ನೊಡನೊಡನೆ ಸೈತೇಯನದನೀಕ್ಷಿಸಿ || ಮುಳಿದು ನಾರಾಯಣಾಸ್ತ್ರವನೆಚ್ಚನದು ಬಂದು | ನಳಿನಸಖಕುಲವರಸನನುಜನಂ ಮುಟ್ಟದಿರೆ | ತಿಳಿದವಂ ಮಹನೀಯಸಾಮರ್ಥ್ಯಯುತನೆಂದುವಿಸ್ಮಯದೊಳಂತೆಂದನು || ೧೭ ||

ಅರಸ ಮಹನೀಯ ಪೌರುಷಶಾಲಿ ನೀನಹುದೊ | ಪರತರಂ ನಾರಾಯಣಾಸ್ತ್ರಮುಂ ವ್ಯರ್ಥಮಾ | ಯ್ತರರೆ ನಿನ್ನೊಳಗೆನ್ನ ಸಾಮರ್ಥ್ಯಮಂ ನೋಡು ನಿನ್ನನರೆನಿಮಿಷದೊಳಗೆ || ಧರೆಗೆ ನಾಂ ಕೆಡಹದಿರೆ ಬಹುಮಾತ್ರಪುಣ್ಯದಿಂ | ನರಜನ್ಮಮಂ ಪಡೆದದಂ ಸಡ್ಡೆಗೈಯದುರೆ | ದುರಿತಲಂಪಟನಾದ ದುರ್ಮತಿಯ ಘಂಘಟಸಲೆನಗೆಂದು ಪ್ರೊಜ್ಞೆಗೈದನು || ೧೮ ||

ಘೋರತರಕಾಲಾನಲಪ್ರಾಯಮಾದೊಂದು | ನಾರಾಚಮಂ ಪೂಡಿಕಾರ್ಮುಕದೊಳೆಸೆತೆಗೆದು | ಮಾರಂಬಿನಿಂದೆ ಕತ್ತರಿಸಿದನದಂ ನಿಮಿಷಮಾತ್ರದೊಳ್ ಶತ್ರುಘ್ನನು || ಸಾರಮಾದಿನ್ನೊಂದು ಕೂರ್ಗಣೆಯುಮಿಂತಾ ಕು | ಮಾರನತಿರೋಷದಿಂದಿಸಲದಂ ರಾಮಪಾ | ದಾರವಿಂದಸ್ಮರಣೆಯಿಂ ಮಾಡಿ ಕಡಿದನುರುಶರಗಳಂ ಶತ್ರುಘ್ನನು || ೧೯ ||

ಉರುತರಕ್ರೋಧದಿಂದುರವಣಿಸುತಾಬಳಿಕ । ಧರಣಿಜಾನಂದನೆಂಮಮಾತೃಚರಣಾಬ್ಜಮಂ । ಸ್ಮರಿಸಿಬೇರೊಂದುದಾರುಣ ಶರವನಿಸಲದಂ ಪ್ರತಿಮಮಾರ್ಗಣಂಗಳಿಂದೆ ॥ ಪರಿಹರಿಸುವನಿತರೊಳ್ವೀರರಾಮಾನುಜಂ । ಭರದಿಂದ ದುರದೊಳ್ಪಳಂಚಿ ಕೆಡಹಿದುದವನ । ನರರೆಹಾಹಾಕಾರಮುತ್ತಲಿದ್ದುದುಕುಶಂ ಜಯಲಕ್ಷ್ಮಿಯಂ ಪಡೆದನು ॥೨೦॥

ಸುರಥಭೂಪತಿಯುದಂಕಂಡು ಕಿಡಿಕಿಡಿವೋಗಿ । ಧರಿಸಿರ್ದಚಾಪಮಂ ಜೇವಡೆದು ಕಾದಲ್ಕೆ । ಬರೆಲವಂಕಣೆಯೊಳ್ಬಂದು ನಿಂದೆದೆಗೆಚ್ಚಿ ನಿಂದೆಲವೋ ಪೇಡಿಹೇಡಿ ॥ ಅರುಹುನಿನಗಾರಸರ್ಮ್ಮರ್ಥೆಯಂ ತಿಳುಹಿದ । ರ್ತ್ತುರುಗಿನಾಣಿಲಿಯಾಗಿ ಮೊಗವೆತ್ತಿಕೊಂಡು ಸಂ । ಗರಕೆಂತುಬಂದೆ ನೀನೆಂದು ಗಹಗಹಿಸಿ ಕೆಂಗರಿಯಕೋಲ್ಗಳನೆಚ್ಚನು ॥ ೨೧ ॥

ಕಡುಮುಳಿದು ಸುರಥನಾನುಡಿಗಳಂ ಕೇಳ್ದೊಡನೆ । ಪಡಿಸರಳ್ಗಳನೆಚ್ಚುತನ್ನಿಶಿತಶರಗಳಂ । ಕಡಿಕಡಿಯುಮಾಡೆಲವನಭಿನವ ಪ್ರಳಯಕಾಲಾಂತಕನ ಪೋಲ್ಕೆರಳ್ದು ॥ ಪಿಡಿದಿರ್ದತದ್ಧನುವ ನೆರಡಂಬಿನಿಂದೆ ಮು । ಕ್ಕಡಿಗೈದು ಸುರಥನಂ ವಿರಥನಂಮಾಡೆ ಸಂ । ಗಡಮೊತ್ತೊಡಗಿದನಸ್ತ್ರಯುದ್ಧಕ್ಕೆ ತಳೆದು ಬೇರೊಂದು ಕಾರ್ಮ್ಮುಕವನನನು ॥ ೨೨ ॥

ಪ್ರತ್ಯಸ್ತ್ರವರ್ಗದಿಂ ತನ್ಮಹಾಸ್ತ್ರಂಗಳಂ । ಸ್ತುತ್ಯವಿಕ್ರಮನಾಲವಂಬಿಡದೆ ಪರಿಹರಿಸು । ತತ್ಯಧಿಕಕೋಪದಿಂ ಕಾದುತಿರೆ ನೋಡಿದುರ್ಜಯನಿವನೆನುತ್ತೆ ಕುಶನು ॥ ಪ್ರತ್ಯರ್ಥಿಗಿದಿರಾಗೆ ತಾನುಮುತ್ಸಾಹದಿಂ । ಮೃತ್ಯುಸ್ವರೂಪನಾಗಾನೃಪತಿಸುರಥಂ । ಔತ್ಯದಿಂದವರಿರ್ವ್ವರೊಡನೆ ಕಾದಲ್ಕುಪಕ್ರಮಿಸಿ ಕೋಲ್ವಳೆಗರೆದನು ॥ ೨೩ ॥

ಪ್ರತಿಪಕ್ಷನೊಡನೆಕಾದಲ್ಕೆ ಬಂದಣ್ಣನಂ । ನಿತರಾಂರಣಶ್ರಾಂತನಿರೀಕ್ಷಿಸಿಲವಂ ಧರ್ಮ್ಮ । ಮತಿಯಿಂತಟಸ್ಥನಾಗಿರೆ ತಾಂ ಕುಶಂಬಳಿಕ ಸುರಥನೆಚ್ಚಂಬುಗಳನು ॥ ಪ್ರತಿಶರಪ್ರತತಿಯಿಂದರಿದು ಕುಲಿಶಾಯುಧ । ಪ್ರತಿಸಿಧಿಯೆನಿಪ್ಪೊಂದು ಬಾಣಮಂತೆಗೆದೆಚ್ಚೊ । ಡತಿಜವದೊಳದು ವಿಮಾರಿನಾರ್ಕ್ಷಣೆಯನುರದೊಳ್ಪಳಂಚಿಕೆಡಹಿದುದವನನು ॥ ೨೪ ॥

ಸಾರಥಿರಥಾಂತರದೊಳಟ್ಟುಕೊಂಡಾಮಹಾ | ವೀರನಂಪಿಂದೆಸೆಗೆ ಸರಿದುದಂ ಸೀತಾ ಕು | ಮಾರರಿದಿರೊಳಸುಳಿವಂ ಕಾಣದತಿ ಹೃಷಿತರಾಗಿರ್ದುದುಮ ನೀಕ್ಷಿಸಿ || ಸೈರಿಸದೆ ಮಾರುತಪ್ರಭವನೆದ್ದುರ್ಘಟಿಸಿ | ಪಾರಿವಂದಾಂತುನಿಂದಂ ಭ್ರುಕುಟಿಭೀಷಣಾ | ಕಾರನಾಗಿರೆ ವನನೀಡಿಸಿ ಲವಾಗ್ರಜಂ ನಸುನಗುತ್ತಿಂತೆಂದನು || ೨೫ ||

ಬಾರಬಾರೆಲವೆಲವೊ ಕಪಿಯೆನ್ನ ಸಮ್ಮುಖಕೆ | ತೋರತೋರೆನಗೆ ನಿನ್ನಯ ಯುದ್ಧಕೌಶಲವ | ನೀರಣಾಂಕಣಕೇಕೆ ಬಂದೆ ನೀನೆನ್ನ ಬಾಣಂಗಳಂ ನಿಹತನಾಗಿ || ಸಾರುವೆಯೆಮಲಾನಿಮಿಷದೊಳ್ ಕಾಲನಗರಿಗೆನೆ | ಮಾರುತಿಯಿವಂ ರಾಮತನಯನೆಂದರಿದೊಡಂ | ಮೀರತಗದೊಡೆಯನಾಣತಿಯೆಂದು ತೆಗೆದಿಟ್ಟನವನಮೇಲೊಂದು ಮರನಂ || ೨೬ ||

ಕುಶನೋರೆಯಾಗಿ ತಪ್ಪಿಸಿಕೊಂಡದಕ್ಕೆ ರಣ | ಕುಶಲಂ ಸಮೀರಸಂಭವನಂಗದೊಳ್ಕ್ರೂರಂ | ಕುಶಮಾರ್ಗಣತ್ರಯುವ ನಿಸಲದಂ ಲೆಕ್ಕಿಸದವಂ ಭೋಂಕನೋಡಿಬಂದು || ಕುಶದಂಬೊಲಾದುರ್ಘಟ್ಟಿಸಿ ಮುಷ್ಟಿಯಿಂ ಮರಳೆ | ಕುಶಜನ್ಮ ಸಮಬಲಂ ಕುಶನದಂ ಗಣಿಸದೆಯೆ | ಕುಶಲನುಂ ತಡೆಯುತಲ್ಲಿ ವೀರರುಂ ನೋಡಿ ಮಝುಭಾಪುಭಾಪೆಂದರು || ೨೭ ||

ಪರಿಕುಪಿತನಾಗಿ ಕಲಿಕುಶನಾಬಳಿಕ್ಕ ಸಂ | ಹರಿಸಲ್ಕೆ ಹರಿವೀರನಂ ಘೋರರೂಪದಿಂ | ಮರಿವ ಸಂಹಾರಾಸ್ತ್ರಮಂ ಪೂಡಿಚಾಪದೊಳ್ಕಿವಿವರಂ ಸೆಳೆದೆಚ್ಚೊಡೆ || ಮರುದಾತ್ಮಜಂ ಕಂಡದಂ ನೆನೆದು ರಾಮಪದ | ಸರಸಿಜವನದರಿಂದೆ ಹೊಂದದುರೆ ಗಾಸಿವಡೆ | ದರೆನಿಮಿಷದೊಳೆ ಗಾಢಮೂರ್ಛೆಯಂ ಪಡೆದು ಮರನುರುಳ್ದವೋಲುರುಳ್ದನಿಳೆಗೆ || ೨೮ ||

ತದನಂತರದೊಳಳಿದುಳಿದ ಶತ್ರುವಾಹಿನಿಯು | ಸದುದಾರಬಲವಿಭವನವನಿಜಾತನುಭವಂ | ಸದೆಯುತಿರೆ ಸಕಲಸೇನಾನಿಕಂ ದಿಕ್ಕುದಿಕ್ಕಿಗೆ ಪಲಾಯನಗೈದುದು || ಅದನವೇಕ್ಷಿಸಿ ಕರ್ಮಸಾಕ್ಷಿಸುತನುರೆ ಕೆರ | ಳ್ದಿದಿರಾಂತು ಮರಗಳೆರಡಂ ತಳೆದು ಕಾಳಗ | ಕ್ಕೊದಗಲಾಮರಗಳಂ ಕುಶನುರುಶರಂಗಳಂ ತುಮುರುತುಮುರಾಗಿಸಿದನು || ೨೯ ||

ಸುಗ್ರೀವನಾಬಳಿಕ ರಭಸದಿಂದೊಂದು ಸಮು | ದಗ್ರಗಿರಿಶೃಂಗಮಂ
ಕಯ್ಯಲ್ಲಿತಳೆದಾಲ | ವಾಗ್ರಜನಮೊಲಿಡಲ್ಕೋಡಿಬರೆ ಕಂಡವಂಕಲಿಕುಶಂಕ
ಡುಬೇಗನೆ || ಉಗ್ರತರವಜ್ರಾಸ್ತ್ರದಿಂದೆ ಚೂರ್ಣಿಸಿ ಮಿಗೆ ರ | ಣಾಗ್ರಹಂ
ನೇಣ್ಗೆಯ್ಯನಸ್ತ್ರಮುಂ ತೆಗೆದೆಚ್ಚು | ನಿಗ್ರಹಿಸದಾಕಪಿ ಪ್ರವರನಂನೇಣ್ಗಳಿಂಬಿ
ಗಿದು ಕೆಡಹಿದನಿಳೆಯೊಳು || ೩೦ ||

ಬಳಿಕುಳಿದಯೋಧರಿರದಲ್ಲಲ್ಲಿ ಮರೆಗೊಂಡು | ದಳದುಳನೆಪಿಂಜರಿವುದುಂ
ಕುಶಂಪ್ರತಿಭಟರ | ಸುಳಿವನಾಕಳದೊಳತ್ತಿತ್ತಲುಂ ಲೋಕಿಸದೆ ವಿಜಯಶಂಖ
ವನೂದಲು || ಘಳಿಲನಾಬಳಿಗೆವೃತ್ರಾರಿಸುತಪುತ್ರಪು | ಷ್ಕಲವೀರಮಣಿಮು
ಖ್ಯಮಹಾವೀರರಂಗೆಲ್ದು | ಕಲಿಲವಂರಕ್ತಮಯಗಾತ್ರನಾಗೈತಂದನೆಳನೇಸ
ರಂತೆಸೆಯುತೆ || ೩೧ ||

ಇಂತವರಿರೆಒಂದೆಡೆಯೊಳಿರ್ವರುಂಸೇರಿಜಯ | ವಂತರಾಗತಿಶಯಿತತೇ
ಜದಿಂರವಿಶಿಖಿಗ | ಳಂತೆನೆರೆಮೆರೆಯುತ್ತೆ ತಂಬೆಲರ್ಗೆ ಮೆಯ್ಯೊಡ್ಡಿಸಮರದೊ
ಳ್ಜೃಂಭಿಸಿದ || ಶ್ರಾಂತಿಯಂಕಳೆದು ತದ್ರಣಮಹಿಯೊಳತಿಕೌತುಕ | ವಾಂತು
ಚರಿಸುತ್ತೆ ಶತ್ರುಘ್ನಾದಿ ನೃಪವರರ | ಕಾಂತಮಣಿಮುಕುಟಾದಿಭೂಷಣಗ
ಳಂಕೊಂಡು ಮಖತುರಗಮಂತಂದರು || ೩೨ ||

ಇನಿಸಿನಿಸುತಿಳಿವುಳ್ಳರಾದೊಡಂಮಾಣಿಸಾ | ನನವನೆತ್ತದೆಚಲಿಸದತ್ತಿ
ತ್ತ ಕೆಡೆದಿರ್ದ | ಹನುಮದರ್ಕಜರ ನೋರೆರೊರ್ವನೋರೆರೊರ್ವನಂ ಪುಚ್ಛದೊ
ಳ್ಪಿಡಿದುಬಿಡದೆ || ಬಿನವಕ್ಕೆ ಕುತುಕಿಸುತೆನಡಸಿಕೊಂಡಲ್ಲಿಂದೆ | ಮುನಿಸುತರ
ಕಲಕಲಧ್ವನಿಯೊಡನೆರಾಮಜಂ | ದ್ರನವೀರಸುತರಿರ್ವರುಂ ಬಂದರನುಪಮಾ
ನಂದದಿಂದಾಶ್ರಮಕ್ಕೆ || ೩೩ ||

ಮೂವತ್ತೊಂದನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೩೧ ಕ್ಕೆ ಪದ್ಯ ೧೨೨೦ ಕ್ಕೆ ಮಂಗಳಮಸ್ತು.

ಮೂವತ್ತೆರಡನೆಯ ಸನ್ಧಿ.

ಸೂಚನೆ ॥ ಭೂಮಿಜೆಯುಹರಕೆಯಿಂ ಚೇತರಿಸಿ ಹಯದೊಡನೆ । ಸೌಮಿತ್ರಿ ಬರೆಪುರಕೆವಾಲ್ಮೀಕಿವಚನದಿಂ । ರಾಮನಾಕೆಯನಾತ್ಮ ಭವರೊಡನೆ ಕರೆತರಲ್ಕಟ್ಟಿದಂ ಲಕ್ಷ್ಮಣನನು ॥

ಏಕಾಗ್ರಚಿತ್ತನಾಗಾಲಿಸೆಲೆ ಮುನಿಪಧರ । ಣೀಕುಮಾರೀತನಯರಾಶ್ರಮಸ್ಥಳದುತಿರೆ । ಲೋಕಬಾಂಧವ ತನೂಭವನವರನನುಸರಿಸಿ ತಲೆವಾಗಿ ನಡೆತರುತ್ತೆ ॥ ಲೋಕಿಸಿದೊಡೆಮ್ಮನವನೀ ಜಾತೆನಗದಿರ್ಪ । ಳೀ ಕಷ್ಟಮುಳವೆನೀ ಹರಣಮಂ ನಾಣಿಲ್ಲ । ದಾಕೆಗೆಮೊಗಂ ದೋರಲಾರೆನೆಂದನಿಲತನುಜಂಗೆ ಮೆಲ್ಲನೆನುಡಿದನು ॥ ೧ ॥

ಆನುಡಿಯನಾಲಿಸಿ ಸಮೀರಜತನೂಭವನಿ । ದೇನಿಂತುಚಿಂತಿಸುವೆಸುಗ್ರೀವರಘುವೀರ । ಸೂನುಗಳನೆಮಗಾದ ಪರಿಭವಂ ಕೀರ್ತಿಕರಮಲ್ತೆ ರಘುಪುಂಗವಂಗೆ ॥ ಈ ನಿಮಿತ್ತದೊಳಾದೊಡಂ ಲೋಕಮಾತೆಯಹ । ಜಾನಕೀದೇವಿಯಡಿದಾವರೆಯನೋಳ್ಪೆವಾಂ । ನೀನಸುವ ನುಳಿವುದೇತಕ್ಕೆಜೀವನ್ಕುಶಲಮಶ್ನುತೇ ಎಂಬರಲ್ತೆ ॥ ೨ ॥

ಅರಗುವರಿರಾತ್ರಮಂ ಬೆಳಕ್ಕನಿಜಪರ್ಣಮಂ । ದಿರದೆಡೆಗೆಬಂದಲ್ಲಿ ತಡೆದುಪಿಡಿದಿರ್ದಕಪಿ । ವರರುಮಂ ಹಯಮುಮಂ ವಿಜಯದಿಂಮೆರೆಯುತ್ತೆ ಮಾತೆಯಂಕಂಡೆರಗಲು ॥ ಸುರಿಯಲಾನಂದಾಶ್ರುಕಣ್ಗಳೊಳ್ತರಳರಂ । ಹರಸಿಬೋಳ್ಕೈಸಿ ಸಂತೋಷದಿಂದುಪಚರಿಸಿ । ತರಣಿಜಾನಿಲಜರಂ ಕಂಡಾಕೆವಿಸ್ಮಯಂಗೊಂಡು ಬೆಸಗೊಂಡಳಿಂತು ॥ ೩ ॥

ಮಕ್ಕಳರ ಪೇಳಿರೆಲ್ಲಿರ್ದರೀಕಪಿವೀರ । ರಕ್ಕಟಾನೀ ವಿಂತುನೇಣ್ಗಳಂ ಬಿಗಿದುತಹು । ದಕ್ಕೆ ಕಾರಣಮಾವುದಿವರ ತಪ್ಪೇನೆಂದು ಬೆಸಗೊಂಡೊಡಾಕುವರರು ॥ ನಕ್ಕುನಕ್ಕರುಹಿ ನಡೆದುದನೆಲ್ಲಮಂ ವಿನೋ । ದಕ್ಕೋಸುಗಂ ಪಿಡಿದುತಂದಿರ್ಪೆವೀದೊಡ್ಡ । ಮಕ್ಕಳರನೆಂದು ಪರಿತೋಷದಿಂದರುಪುವುದುಮನುಚಿತಮಿದೆಂದುನುಡಿದು ॥ ೪ ॥

ಇವರನೀಬಂಧದಿಂ ಬಿಡಿಸಿರೀಕ್ಷಣದೊಳಂ । ಜವದಿರಂಜಿಡಿಸಿ ನಿರ್ಬಂಧವಿಂ ಕೇಳಿರೆಲೆ । ಕುವರರಿರ ಪುಚ್ಛದೊಳ್ಪಿಡಿದಿವರ ಸೆಳೆದುತಂದುದು ನಿಮಗೆ ತಕ್ಕುದಲ್ಲ ॥ ಇವನೆರಾಕ್ಷಸಕೋಟಿಯಂ ಸಂಹರಿಸಿ ದಹಿಸಿ । ದವನಾ ಮಹಾ ಲಂಕೆಯಂ ಪವನಸಂಭವಂ । ರವಿತನೂಭವನಿವನನೇಕಕೋಟಿಪ್ಲವಗಮಂಡಲಕ್ಕಧಿರಾಜನು ॥ ೫ ॥

ನೀವರಿದರಲ್ಲವತ್ಸರೆ ನಿಮ್ಮತಂದೆಭೂ । ದೇವದಶಕಂಠವಧ ಪಾಪವಂ ಕಳೆಯಲ್ಕೆ । ಗೈವಮಖದಶ್ವಮಂ ತಡೆದುದನುಚಿತಮೊಂದದು ಮೊದಲ್ಬಿಡಿಸೆಲವನು ॥ ಆವುದುಚಿತಮೊ ಕಾಣೆನಾಂ ಕ್ಷಾತ್ರಧರ್ಮದಿಂ । ದೀವಾಜಿಯಂತಡೆದುಕಾದಲಾರಂಭಿಸಿದೆ । ನಾವೊಂದಿನಂ ತಾಯೆಗುರುಪಾದದಿಂ ಕೇಳ್ದುದಂ ಬಿನ್ನವಿಪೆನಾಲಿಸಾ ॥ ೬ ॥

ಅರಸರ್ಗೆ ಮಖತುರಗಮಂ ತಡೆವುದುಂ ರಣದೊ । ಳರಿಗಳವರಿವರೆನದೆ ಕಾಳಗಂಗೈವುದುಂ । ಧರಣಿಯೊಳ್ಧರ್ಮಮೆಂದೆನಿಸಿರ್ಪುದೊಂದುಂ ತನೂಭವಂ ತಂದೆಯೊಡನೆ ॥ ಗುರುಜನಂ ಶಿಷ್ಯಜನದೊಡನೆ ಸಂಗ್ರಾಮಮಂ । ವಿರಚಿಸುಗು ಮೆನುತೆಕೇಳ್ದಪೆ ವಿದರಿಂದೆಮಗೆ । ದೊರೆಯದಘಮೆನೆ ಸೀತೆಯಾದುದಕ್ಕೆರೆವುದಿನ್ನೇನೆಂದು ನುಡಿದುಬಳಿಕ ॥ ೭ ॥

ನೆನೆದುಭರ್ತಾರನಂ ಮನದೊಳಗೆಭಕ್ತಿಯಿಂ । ದಿನನನೀಕ್ಷಿಸಿ ಸಾಕ್ಷಿಭಾವದಿಂ ಕರ್ಮವಾ । ಙ್ಮನದೊಳಾ ನಿನಿಸುಂ ಸತೀಧರ್ಮಮಂ ಮೀರಿ ನಡೆಯದವಳಾದೊಡೆನ್ನ ॥ ತನಯರಿಂ ಭಂಗಮಂ ಪಡೆದ ಶತ್ರುಘ್ನಾದಿ । ಜನಪರುಂ ತನ್ಮಹಾ ಸೇನೆಯುಂ ಚೇತರಿಸ । ಲೆನುತೆತಾಂ ಹರಸಿಕಪಿವೀರರಂ ನೋಡಿವಾತ್ಸಲ್ಯದಿಂದಿಂತೆಂದಳು ॥ ೮ ॥

ಆಲೋಕಿಸಿದೆನಿಂದೆಲ್ಲೈ ಕಪೀಂದ್ರರಿರಬಹು । ಕಾಲಕ್ಕೆ ನಿಮ್ಮನಾನೆ ಖಿಲಸದ್ಧರ್ಮಪರಿ । ಪಾಲಂಗೆಕುಶಲವೇ ಶ್ರೀರಾಮಚಂದ್ರಂಗೆ ಸಪರಿಜನ ಗುರುಜನಂಗೆ ॥ ತ್ರೈಲೋಕ್ಯಪತಿಯತಂದೆಯ ನೆಮ್ಮಬಳಗಮಂ । ಬಾಲರಿವರರಿಯದಾಜನ್ಮದಿಂ ನಿಮ್ಮೊಡನೆ । ಕಾಳಗಂಗೈದು ಪರಿಭವಿಸಿದಪರಾಧಮಂ ಮನ್ನಿಪುದು ನೀವೆಂದಳು ॥ ೯ ॥

ಆವಮಾತನಾಲಿಸಿ ಮರುತ್ತನು ಭವಂ ಕೇಳ್ | ಲಾವಣಾತೆರಾವುಂಗೆಸಪರಿವಾರಂಗೆ ಸು | ಕ್ಷೇಮಮೀಬಾಳಿಕರ ತಪ್ಪೊಂದು ಮಿಲ್ಲಮಿವರೊಡೆಯನಕುಮಾರರೆಂದು || ನಾವರಿದುಮಿವರ್ಗೆಮಕ್ಕ ಸಂಗತಿಯ ನರುಪಿ ಸಂ | ಗ್ರಾಮವಂನಿಲಿಸದಿರ್ದುದುತಪ್ಪು ನಿಮ್ಮ ಸು | ತ್ರಾಮವಂದಿತಪದಾಂಬುಜಮಿವಂ ಕ್ಷಮಿಪುದೆಂದೆರಗಿದಂ ರವಿಜನೊಡನೆ || ೧೦ ||

ಆನುಡಿಯನಾಲಿಸಿ ವಸುಂಧರಾತ್ಮಜೆ ಯೆಲ್ಕೆ| ಮಾನರಾಧೀಶರಿರ ತಾನಾದುದಕ್ಕೆ ಫಲ | ವೇನಾಡಿದ್ದೈವಕೃತಿಗಾರದುಂ ತಪ್ಪಿಲ್ಲಮಿಲ್ಲಿಂದೆ ಪೋಗಿನೀವು || ಸೂನುವತಿಯೂದೆನ್ನವಂದನೆಯ ನೇಕ ಪ| ತ್ನೀನಿಯಮನಿಸ್ಪೃಂಗೆ ಕೃತಯಾಗದೀಕ್ಷಂಗೆ | ಭಾನುಕುಲದೀಪಂಗೆ ಬಿನ್ನವಿಪ್ಪುದೆಂದುನುಡಿದವದಿರಂ ಬೀಳ್ಕೊಟ್ಟಳು || ೧೧ ||

ಬಳಿಕತ್ತಸೌಮಿತ್ರಿ ಚೇತನಂಬಡೆದ ಪ್ರ | ಷ್ಕಲಮುಖ್ಯವೀರರಂ ನಿಖಿಲಬಲಮಂತನ್ನ | ಬಳಿಗೆನಡೆತರುತಿರ್ಪ ಮಖತುರಗಮಂನೋಡಿ ನೆರೆಬೆಕ್ಕಸಂಬಡುತ್ತೆ || ಎಲೆಸುಮತಿ ಪೇಳಿದೆಂತುಜ್ಜೀವಿಸಿದುದೆಮ್ಮ| ಬಲಮೆಲ್ಲಮುಂ ಯಥಾಸ್ಥಿತಿಯೊಳಧ್ವರಹಯಮುಂ | ಪೊಳಲಪಸೆನಟ್ಟಿದಿಂ ಮರೆಯುತ್ತೈತಹುದೆಂದು ಬೆಸಗೊಂಡೊಡವನೆಂದನು || ೧೨ ||

ರಾಮನನುಭಾವದಿಂ ಚೇತನಂಬಡೆದಿರ್ಕು| ಮೀಮಹಾಸೈನ್ಯಮಾಬಾಲರೀಹಯಮುಂ ನಿ | ಕಾಮಕೃಪೆಯಿಂದೆ ಬಿಟ್ಟರ್ಕುಮಧ್ವರದ ಪರಿಪೂರ್ತಿಗೋಸುಗವೆನಲ್ಕೆ || ಸೌಮಿತ್ರಿಯನಿತರೊಳ್ಬಂದನಿಲ ರವಿಜರಿಂ | ಭೂಮಿತನುಭವೆಯ ವೃತ್ತಾಂತಮಂ ತಿಳಿದನುಪ | ಮಾನೋದದಿಂದಯೋಧ್ಯೆಗೆ ಸಪರಿವಾರನಾಗಲ್ಲಿಂದೆ ಪೊರಮಟ್ಟನು || ೧೩ ||

ಪಲವುಕಾಂತಾರ ಪರ್ವತನದೀನದಗಳಂ | ಕಳಿದುಪ್ರಪುಷ್ಕಲಮುಖ್ಯವೀರರಿಂದೊಡಗೂಡಿ | ತಳರ್ದನಾಮಖತುರಗಮಂ ನಡಸಿಕೊಂಡುಸೌಮಿತ್ರಿನೆರೆಸಂತಸದೊಳು || ಪೊಳಗೆಬಹುವಿಧಸಾಧ್ಯ ನಿನದಮೊಲ್ದೆಸೆಯೊಳುಂ | ಪಳವಿಗೆಗಳೋರಣಿಸಿ ಗಗನಚುಂಬಿಗಳಾಗೆ | ತಳರೆಪೇರ್ವೊಗ್ಗಿ ಮುಂದೆಯುಂಪಿಂದೆಯುಂ ಚತುರಂಗವಾಹಿನಿಗಳು || ೧೪ ||

ಚರರಮುಖದಿಂದಯೋಧ್ಯಾಪುರದ ಸೀಮೆಗ | ಧ್ವರಹಯಂ ನಡೆತಂದುದಂ ಕೇಳ್ದು ರಾಮಚಂ | ಪಿರನದಂ ಶತ್ರುಘ್ನಮುಖಮಹಾ ರಥರೊಡನೆ ಪುರವೀಧಿಯೊಳ್ಮೆರೆಯಿಸಿ || ಕರೆತಹುದುಬಹುಮಾನದಿಂದೆಂದು ಲಕ್ಷ್ಮಣಂ | ಗೊರೆದು ಶಾಸನವನನುಲ್ಲಾಸದಿಂದುಳಿದವೋ| ಹರಕೆಬೆಸನಟ್ಟಿದಂ ಸ್ವೇಚ್ಛೆಯಿಂ ವಿಶ್ರಾಂತಿಸುಖವನನುಭವಿಸುವೆಂದು || ೧೫ ||

ಶಿರದೊಳಗ್ರಜನಾಜ್ಞೆಯಂ ತಳೆದುಲಕ್ಷ್ಮಣಂ | ಪರಿಜನಪ್ರಕರದಿಂ ಚತುರಂಗಸೇನೆಯಿಂ | ಪುರಜನಪ್ರಮುಖರಿಂದೊಡಗೂಡಿ ಪೊಂದೇರನೇರಿ ಬಹುವಿಭವದಿಂದೆ || ಪುರಮುಟ್ಟಿಬಂದಿದಿರ್ಕೊಂಡು ಮುಂಗೊಂಡು ಸೋ | ದರನನಾಲಿಂಗಿಸಿಯಥಾವಿಧಿಯೊಳಧ್ವರದ | ತುರಗಮಂ ಪೂಜಿಸಿ ಮಹೋತ್ಸಾಹದಿಂದೆ ಪುರವೀಧಿಯೊಳ್ಮೆರೆಯಿಸಿದನು || ೧೬ ||

ಪರಿಜನದಚಾಮರಚ್ಛತ್ರಾದಿ ವಿವಿಧೋಪ | ಚರಣದಿಂ ನರ್ತಕಿಯರಭಿರಾಮನೃತ್ತದಿಂ | ಪುರಕನ್ಯೆಯರ್ಕಳಾರತಿಗಳಿಂ ನಾನಾವಿಧಾತೋದ್ಯಘೋಷದಿಂದೆ || ಅರರರತಿಗಡಿಗೆಸಪೂಜೆಯಿಂ ವಂದಿಗಳ | ಬಿರುದಿನುದ್ಘೋಷದಿಂ ಕಂಗೊಳಿಪಸಿಂಗರದ | ಪುರದೊಳಾಮುನಿರಾಜಿ ಶತ್ರುಘ್ನಮುಖವೀರರೊಡನುತ್ಸವಂಮೆರೆದುದು || ೧೭ ||

ಪರಮಯೋಗೀಂದ್ರ ಕೇಳೀಪರಿಯೊಳುತ್ತುಂಗ | ತರಸೌಧಶೃಂಗಗತಪೌರಾಂಗನಾನಿಕರ | ಕರಕಿಸಲಯಮುಚ್ಯಮಾನಪುಷ್ಪಾಂಜಲಿಗಳಿಂ ಶೋಭಮಾನವಾದ || ಪುರವೀಧಿಗಳೊಳುತ್ಸವಂ ಮೆರೆದುಬಂದ ಮಖ | ತುರಗಮಂ ಸ್ವರ್ಣಸತಿಯೊಡನೆ ಬಾಗಿಲ್ವರಂ | ಪರಿತಂದುರಾಮನರ್ಚಿಸಿ ಪುರೋಹಿತಯುತಂ ಪುಗಿಸಿದಂ ಮಖಶಾಲೆಯ || ೧೮ ||

ಏರುಪಡೆದಂಗದಿಂ ಶೋಭಿಸುತೆಶತ್ರುಹಂ | ತಾರನುಂ ಪುಷ್ಕಲಕುಮಾರನುಂ ಗುರುಭಕ್ತಿ | ಭಾರದಿಂ ಮಕುಟಮಣಿಕಾಂತಿ ಚಕಚಕನೆ ಪಸರಿಸೆನಿಜಪದಾಂಬುಜದೊಳು || ಸೂರಸುತಸುಮತಿಮರುದಾತ್ಮಭವರೊಡನೆರಗೆ | ಭೂರಿತರಸಂತೋಷದಿಂದವದಿರೆಲ್ಲರಂ | ಶ್ರೀರಾಘವಂ ಪರಸಿ ಪಿಡಿದೆತ್ತಿ ಬೋಳೈಸಿ ಕುಶಲವಂ ಬೆಸಗೊಂಡನು || ೧೯ ||

ಸೌಮಿತ್ರಿಕಯ್ಮುಗಿದು ಸರ್ವರೊಡನಾತ್ಮ ಸು । ಕ್ಷೇಮಮಂ ಬಿನ್ನವಿ
ಪುದುಂ ಪವನಸಂಭವಂ । ಸೌಮನಸ್ಯಮನಾಂತು ಕಯ್ವಿಡಿದು ಕರೆತಂದು ಸು
ಮದನೃಪಮುಖ್ಯರಾದ ॥ ಭೂಮಿಪಾಲಕರನೋರೊರ್ವರಂ ತರದಿಂದೆ । ನಾಮ
ಗ್ರಹಣಪೂರ್ವಮಾಗಿ ಪರಮೇಷ್ಠಿ ಸು । ತ್ರಾಮಮುಖ ದಿವಿಜವಂದಿತಮೆನಿಸಿ
ದೊಡೆಯ ನಡಿದಾವರೆಯೊಳೆರಗಿಸಿದನು ॥ ೨೦ ॥

ಅವರವರ್ಗುಚಿತಪ್ರಕಾರದಿಂದೊಲ್ದು ರಾ । ಘವನೆಸಗಿ ಮನ್ನಣೆಯ
ಸುಮತಿಯುಂ ಬೆಸಗೊಂಡೊ । ಡಸನಾದಿಯಿಂದೆ ದಿಗ್ವಿಜಯಮಂ ಕುಶಲವರ
ಬಲ್ಮೆಯುಮಂ ಬಿನ್ನವಿಸಲು ॥ ಅವಧರಿಸಿ ಕುವರರರವರಿರ್ವರುಂ ತನ್ನ ತನು । ಭವ
ರೆನುತ್ತಧ್ವರ್ಯಮಾಗಿರ್ದ ವಲ್ಮೀಕ । ಭವತಾಪಸೇಂದ್ರನಂ ಕವಿಲೋಕಚಂದ್ರ
ನಂ ತಾನಿಂತು ಬೆಸಗೊಂಡನು ॥ ೨೧ ॥

ಆರೆಲೈ ಮುನಿಪ ನಿಮ್ಮಾಶ್ರಮದೊಳೆನ್ನ ತನು । ಸಾರೂಪ್ಯಮಂಪ
ಡೆದ ಬಹುಶೂರರೆನಿಸಿದ ಕು । ಮಾರರೆನೆ ವಾಲ್ಮೀಕಿಯಿಂತು ಸಮಯಮೆಮ್ಮ
ವಾಕ್ಪ್ರಸರಣಕ್ಕೆಂದುಬಗೆದು ॥ ಶ್ರೀರಾಮಚಂದ್ರಮನೆ ನೀನರಿಯದಿರ್ದಪುದು ।
ಮೂರುಲೋಕದೊಳಾವುದುಂಟಾದೊಡಂ ಪರಮ । ಪೂರುಷನೆ ನಿನ್ನಯ ಮ
ನಸ್ತುಷ್ಟಿಗೋಸುಗಂ ಪೇಳ್ವೆನೊಲ್ದಾಲಿಸೆಂದು ॥ ೨೨ ॥

ತಿಳುಪಿದಂ ಮೊದಲಿಂದೆ ಕುಶಲವರುದಂತಮಂ । ಬಳಿಕವರ್ವರುಣನಂ
ನಿಜಗಾನವಿದ್ಯೆಯಿಂ । ದೊಲಿಸಿದಾಕಥೆಯ ನರುಪಲ್ಕುಪಕ್ರಮಿಸಿ ಕೇಳೆಲರಾ
ಮಬಾಲರವರು ॥ ಕಲಿತೆನ್ನೊಳೊಲ್ದು ನಿಗಮಾಗಮ ಧನುರ್ವಿದ್ಯೆ । ಗಳನಂ
ತು ಕಲಿತು ಸಂಗೀತಮಂ ಚಿದ್ಯೋಗ । ಬಲದೊಳಾಂ ಮೊದಲೆರಚಿಸಿರ್ದ ರಾಮಾ
ಯಣವನರ್ಥವತ್ತಾಗೆ ಪಠಿಸಿ ॥ ೨೩ ॥

ಗಂಗಾತಟಪ್ರದೇಶಂಗಳೊಳಮದ್ರಿ ಕಟ । ಕಂಗಳೊಳಮಂತುಟು
ತಪೋವನನಿಕುಂಜಾಂತ । ರಂಗಳೊಳಮಾಶ್ರಮ ಸಮಾಜಶಾಲೆಗಳೊಳಂ
ನಿನ್ನಯ ಮಹಾಕಥೆಯನು ॥ ಸಂಗೀತಪದ್ಧತಿಯನನುಸರಿಸಿ ಸಪ್ತಸ್ವ । ರಂಗ
ಳಾರೋಹಣಾವರೋಹಣ ಕ್ರಮವಿಭೇ । ದಂಗಳಂ ಪಾಡುತಿರ್ದರ್ ಮೃಗಖಗಂ
ಗಳುಂ ಸುಖಿಪ್ಪವೆಂಬಿನೆಗಮಮಮಾ ॥ ೨೪ ॥

ಇಂತಿರಲ್ಕೊಂದುದಿನ ಮಾಗಾನಮಂ ಕೇಳ್ದು | ಸಂತಸಂ ಮಿಗೆ ಮನದೊಳಾಕುಮಾರರನಿರ್ವ | ರಂತನ್ನ ದಿವ್ಯಭವನಕ್ಕೆ ಕರೆತಂದವರ್ಗುಚಿತಸತ್ಕಾರಮೆಸಗಿ || ಪಿಂತೆಂದುಮಮರೇಂದ್ರ ಸಭೆಯೊಳುಂ ಕೇಳದ | ದ್ಗಂತಪ್ಪತನ್ಮಧುರಗಾನಮಂ ಪೀರ್ದುಪೀ | ದಾಗಂತನಮೃತಾಸ್ವಾದಮಂ ಧಿಕ್ಕರಿಪಮನಸ್ತುಷ್ಟಿಯಂ ವರುಣನಮಮಾ || ೨೫ ||

ಅವರನೆಲ್ಲಿಯುಂಕಾಣದರಸುತ್ತಮನಿ | ಭಮೆಹಲುಬುತೆನಗದಂತಿಳು ಪಲಾಂಜ್ಞಾನಮೈ | ಭಮದೊಳರಿದಮರಿರಮನಾದಿವ್ಯಲೋಕಕ್ಕೆ ಯೋಗಬಲದಿಂದೈದಲು || ಭುವನೇಶನೆನ್ನನೀಕ್ಷಿಸಿ ಸಭೆಯೊಳೆನಗೆ ಪೀ | ಠಮನಿತ್ತು ಸತ್ಕರಿಸಿಮನ್ಮುಖದೊಳರಿದು ಕುಶ | ಲವರುದಂತಮನವರ್ಗಧಿಕ ಗೌರವದಿಂದೆ ಪಿರಿದುಮನ್ನಣೆಯುಮಾಡಿ || ೨೬ ||

ನಿನಗರುಪಮೇಳ್ಕುಮೊಂದೆನಗೆ ಸರ್ವಂಸಹಾ | ತನುಜೆಯನಿಮಿತ್ತದಿಂ ದೊರೆದುದಂಪೇಳ್ವೆ ನೈ | ಮನಪಿಟ್ಟನೀನಾಲಿಪ್ಪುದು ಲೋಕವಿದಿತಪಾತಿವ್ರ್ಯಸಂಪನ್ನೆಮಾನ್ಯೆ || ಜನಕಕುಲಕಲಶಾಬ್ಧಿಲಕ್ಷ್ಮಿ ಸೌಭಾಗ್ಯ ಶಾ | ಲಿನಿಕುಶಲಮತಿ ರೂಪವತಿವಿಮಲಗುಣರತ್ನ | ಖನಿವೀರಸುತೆ ಸೀತೆಸಚ್ಚರಿತಧರ್ಮದಧಿದೇವಿತಾನೆನಿಸಿರ್ಪಳು || ೨೭ ||

ಆಕೆನಾರೀಮಾತ್ರಮೊಂದದಾರರಿವರ್ಕೆ | ಲೋಕನಿರ್ಮಾಣಾಭಿರಕ್ಷಣಕ್ಷಪಣ ಕೆ | ರ್ಕೈಕಕಾದಿಕಾರಣೀಭೂತೆ ಮಹನೀಯ ಮಹಿಮಾಧಾರೆ ನಿರ್ವಿಕಾರೆ || ಸಾಕಾರೆಮತ್ತನಾಕಾರೆಮರ್ಷತಿತಪ | ತ್ರೈಕಾವತಿಷ್ಠತೇ ಚಲತಿ ಯೆಂದೆನುತೆಬುಧ | ಲೋಕಕ್ಕೃತರಾದ್ಧಾಂತೆ ದೂರಾಪಗತಪಾಪೆ ನಿಖಿಲಶಕ್ತಿಸ್ವರೂಪೆ || ೨೮ ||

ಪರಮಾತ್ಮಕೇಳ್ಮನುಜಲೀಲೆಯಿಂ ದಿಳೆಯೊಳವ | ತರಿಸಿರ್ಪನೀನಿರದೆ ಮಿಥ್ಯಾಪವಾದದಿಂ | ತೊರೆದಿರ್ಪುದಾಕೆಯನಸಂಗತಂ ಸಾಕ್ಷಿಯಾಗಿರ್ದಪ್ಪೆ ನಾನವನಿಜೆ || ಪರಿಶುದ್ಧೆಯೆಂಬುದಕ್ಕೀಶನುಂ ಸಾಕ್ಷಿಯಾ | ಗಿರುತಿರ್ಪನಾಕೆಯುಂ ನೀನೊಲ್ದುಕೊಳ್ವುದೈ | ಮೆರೆವುದದರಿಂದೆ ನಿನ್ನಯ ವಿಮಲಕೀರ್ತಿಶಾಶ್ವತಮಾಗಿ ಮೂಜಗದೊಳು || ೨೯ ||

ಜನನಿಲೋಕಕ್ಕೆ ಸೀತಾದೇವಿನೀನಂತು । ಜನಕಕನ್ಯೆನೀಂವಿರ್ವರೊಂದಾಗಿಪೊರೆವಂತೆ । ತನುಜರನನೇಕಕೋಟಿ ಪ್ರಾಣಿಗಳನೊಲ್ದು ಪಾಲಿಸದೆಜನಮೆಚ್ಚುಗೆ ‖ ಅನುಸರಿಸಿನರಲೀಲೆಯಿಂ ಬೇರೆಬೇರಿರ್ಪು । ದನುಚಿತಂಲೋಕಕ್ಕೆಕೇಡಪ್ಪುದಿದರಿಂದೆ । ತನಯುವತಿಯಂ ಪರಿಗ್ರಹಿಸಿ ಭೂಜಾತೆಯಂ ಧರ್ಮವಂಕಾವುದೆಂದು ‖ ೩೦ ‖

ಸ್ಮರಣೆಯಿಂಕರ್ತವ್ಯದೊಳ್ನನಗೆ ಬರ್ಪುದೆಂ । ದೊರೆದಿಂತುದಿವ್ಯಮಣಿಹಾರಾಂಗದಪ್ರಮುಖ। ನಿರತಿಶಯಮಣಿಮಯಾಭರಣಂಗಳಿತ್ತು ಲೋಕೋತ್ತರವರಂಗಳೊಡನೆ ‖ ಪಿರಿದುಮನ್ನಣೆಗೈದು ಬೀಳ್ಕೊಟ್ಟೊಡವರನಾಂ । ಕರೆದುಕೊಂಡಾಶ್ರಮಕೆ ಬಂದೆನೈಗಾರ್ಹಸ್ಥ್ಯ । ಪರಸಾದನಿನಗಾತ್ಮಭವರನಿಂಸಮಯದೊಳ್ಬರಿಸಿಕೊಂಬುದು ತಕ್ಕುದು ‖ ೩೧ ‖

ರಾಮಕೇಳ್ಮಕ್ಕಳಂ ಮಾತೆಮಾತೆಯಂ । ತಾಮವರಗಲ್ದಿರ್ಪರಲ್ಲಮದರಿಂದೆನಿಂ । ನಾಮಹಾಸೈನ್ಯ ಸಂಜೀವನಪ್ರತ್ಯಯದೊಳಾಕೆಯಂ ತನಯರೊಡನೆ ‖ ಪ್ರೇಮದಿಂಬರಿಸಿ ಸಾಕ್ಷಾತ್ಪತ್ನಿಯೊಡಗೂಡಿ । ಸೌಮನಸ್ಯದೊಳಾಗಿಸುವುದು ಸಂಕಲ್ಪಿಸಿ । ಪೀರ್ಮಜವನೆಮಗೆ ಸಮ್ಮತಮೆನಿಪುದೆಂದುಘಂಟಾಘೋಷಮಾಗೊರೆದನು ‖ ೩೨ ‖

ಅನುಮೋದಿಸಿದರಾಮಹಾಸಭೆಯೊಳಿರ್ದಖಿಳ । ಮುನಿಗಳುಂ ನೃಪರುಮಾಸಮಯಕ್ಕೆತಕ್ಕುದೆಂ । ದೆನಿಸಿದಾವಚನಮನದೆಲ್ಲಮಂ ಶ್ರೀರಾಮಚಂದ್ರನಾಲಿಸಿ ಮುದದೊಳುಂ ‖ ಮನದೊಳನುಮಾನಿಸದೆ ಪರತರಾನುಗ್ರಹವಿ। ದೆನಗೆಂದು ಲಕ್ಷ್ಮಣಂಗರುಪಿ ಕೆಲನುಡಿಗಳಂ। ತನಯರೊಡನಿನಿಯಳಂ ಪೊಡವಿಮಗಳಂ ಕರೆದುತಹುದೆಂದು ನೇಮಿಸಿದನು ‖ ೩೩ ‖

ಮೂವತ್ತೆರಡನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೩೨ ಕ್ಕೆ ಪದ್ಯ ೧೨೫೩ ಕ್ಕೆ ಮಂಗಳಮಸ್ತು.

ಮೂವತ್ತುಮೂರನೆಯ ಸನ್ಧಿ.

ಸೂಚನೆ ॥ ಸೌಮಿತ್ರಿ ನುಡಿ ನಿಜಪತಿಯಾಜ್ಞೆಯಂ ಕೇಳ್ದು । ಸೌಮನಸ್ಯದೊಳಾತ್ಮಜಾತರೊಡನೈತಂದ । ಭೂಮಿಜಾತೆಯನೊಲ್ದು ರಾಮಂ ಪರಿಗ್ರಹಿಸಿದಂ ಯಾಗಮಂಟಪದೊಳು ॥

ಪರಮಯೋಗೀಂದ್ರವಾತ್ಸ್ಯಾಯನನೆ ಕೇಳನಂ । ತರದೊಳಗ್ರಜನಾಜ್ಞೆಯಂ ತಳೆದು ಲಕ್ಷ್ಮಣಂ । ಶಿರದೊಳಾತ್ಮಜರೊಡನೆ ಸೀತೆಯಂ ಕರೆತರಲ್ಬಲಪರೀವಾರದೊಡನೆ ॥ ನಿರವಧಿಕಸಂತೋಷದಿಂದೊಡಂಗೊಂಡಂತ । ವುರದಬಹುವಿಧವಾಹನಾವಳಿಯನಂತು ಸಾ । ಸಿರತೆಱಂಬಹುಳಸಂಪತ್ತಿಸಹಿತವಾಗಲ್ಲಿಂದೆ ಪೊರಮಟ್ಟನು ॥ ೧ ॥

ಪುರದಸೀಮಾಂತಮಂ ಕಳೆದುಸುರನದಿಯಂ ಸಂ । ತರಿಸಿಬಹುದೂರಪರ್ಯಂತಮೆತ್ತೆತ್ತಲುಂ । ಪರಿದಿರ್ಪರಕ್ತಪ್ರವಾಹಮಂ ಪೋರ್ದರದಪೋರಾಜಿರಂಗಮಂ ನಿರೀಕ್ಷಿಸಿ ॥ ಪಿರಿದುಮುತ್ಕಟಿಗೆಗೊಂಡು ಕುಶಲವರಶೌರ್ಯಕ್ಕೆ । ಪರಿಹೃತಪರಸ್ಪರವಿರೋಧದಿಂ ಶಾರ್ದೂಲ । ಹರಿಣಾದಿಮೃಗನಿಕರದಿಂದೆಸೆವ ವಾಲ್ಮೀಕಿಯಾಶ್ರಮವನೀಕ್ಷಿಸಿದನು ॥ ೨ ॥

ಮುನಿಜನಕ್ಕುಪರೋಧಮಾಗದೆಂದಾ ತಪೋ । ವನಸೀಮೆಯೊಳಪಾಳೆಯಂಗೊಳಿಸಿ ನಿಖಿಲವಾ । ಹಿನಿಯುಮಿತಪರಿಜನವನೊಡಗೊಂಡು ರಥವನಿಳಿದಲ್ಲಲ್ಲಿಕಂಡಕಂಡ ॥ ಅನಘಸಾಧುಸ್ವಭಾವರ್ಗೆ ತಲೆವಾಗುತ್ತೆ । ವಿನಯದಿಂ ತಾಪಸರಾಶ್ರಮಮಂ ಬೊಕ್ಕು ಪಾ । ವನಮಾದವನಕಜಾತೆಯ ಪರ್ಣಶಾಲಾಂಗಣಸ್ಥಾನಮಂ ಸೇರ್ದನು ॥ ೩ ॥

ಬಾಗಿಲಿಂಬಿನೊಳಿರ್ದ ಕುಶಲವರ್ಕಂಡತಿಥಿ । ಯಾಗಿಬಂದಿಹನಾರಿವಂ ಯಾಗಹಯಪಾಲ । ನಾಗಿಬಂದಿರ್ದ ಶತ್ರುಘ್ನನಂಪೋಲ್ವನಾಕೃತಿಯೊಳೆಂದನುಮಾನಿಸಿ ॥ ಬೇಗನವನಿಜೆಗರುಪಲಾಕೆ ಸಂಭ್ರಮದಿಂದೆ । ಬಾಗಿಲೆಡೆಗೈತಂದು ನೋಡಿತನುಜಾತರಿಂ । ಸ್ವಾಗತಪ್ರಶ್ನಪೂರ್ವಕವಾಗಿ ಮೈದುನನನೆಲೆವನೆಗೆ ಕರೆಯಿಸಿದಳು ॥ ೪ ॥

ಬಳಿಕಲಕ್ಷ್ಮಣನಾರ್ಯೆಯಾದತ್ತಿಗೆಯ ಚರಣ । ನಳಿನದೊಳ್ಮಣಿದಾಂ ತುಶಿರದೊಳ್ತ್ತುದೀಯು ಮಂ । ಗಳತರಾಶೀರ್ವಚನವಂ ಪರಸಿತನಗೆವಂದನೆಗೈದ ಕುಶಲವರನು ‖ ಕುಳಿತುಪಾವನದಾರು ಪೀಠದೊಳ್ವಿಶ್ರಾಂತಿ । ಗೊಳಲೊಡನೆ ಧರಣಿಸುತೆಪತಿಯ ಮೈದುನರ ಪ್ರ । ಷ್ಕಳವಮುಖ್ಯಬಾಲರತ್ತವಿರೋರಗಿತ್ತಿಯರ ಕುಶಲವಂ ಬೆಸಗೊಂಡಳು ‖ ೫ ‖

ಕುಶಲಿಪೂರ್ವಜನುಳಿದ ಸೋದರರ್ಕುಶಲಿಗ । ಳ್ಕುಶಲಿಗಳ್ಬಾಲಕರ್ನಿಮ್ಮೋರಗಿತ್ತಿಯ । ರ್ಕುಶಲಿನಿಯರಂತು ನಿಮ್ಮತ್ತೆವಿರ್ಕುಶಲಿನಿಯರೆಲ್ಲರುಂ ಸಾಂಪ್ರತದೊಳು ‖ ಕುಶಲಧೀಶಾಲಿಗಳ ಜನಕಸನ್ನಿಭನಿರಂ । ಕುಶದುಸ್ಸಹ ಪ್ರತಾಪಾನಲ ಪ್ರಸರಣರ । ಕುಶಲವರ ಸಾಮರ್ಥ್ಯವಂ ಕೇಳ್ದು ಪಿರಿದುಮಾಶ್ಚರಿವಡುತೆ ದಣಿಯರಮನಾ ‖ ೬ ‖

ಜನಕಿಕೇಳಾನಿತ್ತುಬಂದುದಕೆ ಕಾರಣವ । ನನುವರದೊಳವನಿಸುರನೆನಿಸಿರ್ದರಾಕ್ಷಸೇಂ । ದ್ರನ ಹನನದಿಂದೆ ಜನಿಸಿದಪಾಪಮಂ ಕಳೆಯಲೋಸುಗಂ ಶ್ರೀರಾಮನು ‖ ವಿನುತಯಾಗಕೆದೀಕ್ಷೆಗೊಂಡಿರ್ದುದು ನಿಮಗರಿಕೆ । ಮುನಿವರ್ಯರೆನಿಪ ರಿತ್ವಿಜರಭ್ಯನುಜ್ಞೆಯಿಂ । ತನುಜಾತರೊಡನೆನಿಮ್ಮಂ ಕರೆದುತರ್ಪುದೆಂದೆನ್ನನಟ್ಟಿದನಿತ್ತಲು ‖ ೭ ‖

ಚತುರಂಗಸೇನೆಯುಂ ಸನ್ನಿಧಿಯಪರಿಜನ । ಪ್ರತತಿಯುಂರಾಣಿವಾಸದ ವಾಹನಂಗಳುಂ । ನುತವಿವಿಧರಾಜೋಪ ಚಾರೋಪಕರಣಂಗಳೊಡನೊಡೆಯನಾಜ್ಞೆಯಿಂದೆ ‖ ಪ್ರತಿಪಾಲಿಸುತ್ತಿಹವು ಸಮಯಮಂ ನಿಮ್ಮಡಿಯ । ನತಿಕುತುಕದಿಂದಯೋಧ್ಯೆಗೆ ಬಿಜಯಗೆಯಿಸಲೆನೆ । ಸತಿಯದಂಕೇಳ್ದುನೆರೆ ವಿಸ್ಮಯಂಗೊಂಡು ಸೌಮಿತ್ರಿಯೊಡನಿಂತೆಂದಳು‖ ೮ ‖

ಕಂದಲಕ್ಷ್ಮಣನೆ ಕೇಳ್ನಿನ್ನನಿನಿಯಂರಾಮ । ಚಂದಿರಂತೊರೆದೊಡಂ ತೊರೆದಳಲ್ಲಾನಾತ । ನಂದ್ಯೆಪಯೋಗದಿಂ ಪುರುಷಾರ್ಥಸಾಸ್ಥ್ಯೆಯೆನಿಪೆನ್ನಯನಿಮಿತ್ತದಿಂದೆ ‖ ಬಂದಮೇಲಾತಂಗೆ ಪರಿವಾದಮೀರೀತಿ । ಯಿಂದೂರದೊಳಲೇಸು ನಾನಿರ್ಪುದೊಮ್ಮೆನಾಂ । ಬಂದೊಡಮುದಾವುದೈ ನಂಬುಗೆನಿರಂಕುಶಪ್ರಭುತೋಪಲಕ್ಷಿತನೊಳು ‖ ೯ ‖

ಮುನಿಪಕೇಳಿಂತುಸುಚರಿತ್ರೆ ಬಹುಕಾಲದಿಂ | ದನುಭವಿಸಿ ದಾರ್ತಿ
ಯಿಂದುಡುಕಿ ನುಡಿದೊಡನಿರದೆ | ಮನದೊಳಸಮಾಧಾನಮಂ ಪಡೆದುಶಿವಮ
ಹಾದೇವ ತಪ್ಪಾದುದೆಂದು || ಅನುಜಕೇಳ್ಸತಿಯರ್ಗೆ ಪತಿಯದೋಷವನೆಣಿಪು
ದನುಚಿತಮದಾದೊಡಮರಣ್ಯವಾಸಕ್ಲೇಶ | ಜನಿತಬುದ್ಧಿಭ್ರಮೆಯೊಳಾನೊ
ರೆದುದಂ ಮನ್ನಿಸಾಲಿಸೆನ್ನಭಿಮತಿಯನು || ೧೦ ||

ತನುಜಾತರಿವದಿರಭ್ಯಸ್ತನಿಗಮಾಗಮಾ | ದ್ಯನುಪಮಾನೇಕ ವಿದ್ಯಾ
ಸುಶಿಕ್ಷಿತಶರಾ | ಸನಮುಖ್ಯ ಸಕಲಶಸ್ತ್ರಾಸ್ತ್ರವಿದ್ಯರ್ಸಮಧಿಗತಯೌ
ವನಾಭ್ಯುದಯರು || ಅನವಗತರಾಜಕೀಯ ಪ್ರವೃತ್ತಿಗಳಿಂತು | ವನದೊಳಿ
ನ್ನಿಹುದುಚಿತಮಲ್ಲಮದರಿಂದೆ ಜನ | ಕನಸನ್ನಿಧಾನಕ್ಕೆ ಕಳುಹುವೆನೊಡಂ
ಗೊಂಡು ಪೋಗುವುದು ನೀನಿವರನು || ೧೧ ||

ಮೈದುನಾಕೇಳತಃಪರದೊಳಿಂ ಪರಿಪೂತ | ಮಾದೀತಪೋವನದೊ
ಳಿಲ್ದು ಪತಿದೇವತೆಯ | ಪಾದಪಂಕೇರುಹದ್ವಂದ್ವಮಂ ನಿಶ್ಚಲಸ್ವಾಂತವಿ
ಷ್ಟರದೊಳಿರಿಸಿ || ಭೇದವಿಲ್ಲದೆತದೇಕತ್ವ ಭಾವನೆಯೊಳಾ | ಸ್ವಾದಿಸುತ್ತಾ
ನಂದಸುಧೆಯುತಪಮಿರ್ಪೆನಭಿ | ವಾದಿಸಿದಳವನಿಸುತೆಯೆಂದೊರೆವುದೆನ್ನಕ
ಯ್ಯಿಡಿದನಡಿದಾವರೆಯೊಳು || ೧೨ ||

ಮೊದಲಿಂದಮುತ್ತರೋತ್ತರಸು ದುಸ್ಸಹಗಳನಿ | ಸಿದಕಷ್ಟಗಳನ
ನುಭವಿಸಿದುದಾಯ್ತು ಕಟ ಲೋ | ಕದಸರಣಿಯನುಸರಿಸಿ ಸಾಕಿನ್ನದಕ್ಕೆಳಸೆನೆ
ನ್ನಿಂದದಾವುದೆನ್ನ || ಹೃದಯೇಶ್ವರಂಗಾಗತಕ್ಕುದಿಹುದೆನಗೆ ಪತಿ | ಪದಚಿಂತೆ
ಯೊಂದೆತಾರಕಮದೆಲ್ಲಿರೆಯು ಮೆನ|ಲದನೆಲ್ಲಮಂ ಕೇಳ್ದುಲಕ್ಷ್ಮಣಂ ಕಯ್ಮು
ಗಿದು ವಿನಯದಿಂದಿಂತೆಂದನು || ೧೩ ||

ಸಾಕುಸಾಕನ್ಯಥಾಲೋಚಿಸುವುದಾಲಿಸಾ | ಲೋಕದೊಳಗಿರ್ಪನ್ನೆಗಂ
ಲೋಕಪದ್ಧತಿಯು | ನೂಕಿನಡೆವವರೊಳರೆ ಲೋಕವಿದು ಕರ್ಮಾನುಸಾರದಿಂ
ನಡೆವುದಲ್ತ || ಲೋಕಪತಿರಘುವರನೆ ಕರ್ಮಪರನಾಗಿರೆ ಮ | ಹಾಕುಲೀನೆಯ
ರಪ್ಪ ನಿಮಗೆಸಮುಚಿತಮಲೆತ | ದೇಕಮತದಿಂ ನಡೆವುದಿಂತೇಕೆ ಮರೆವೊಲ್ದು
ಕೇಳ್ವುದಾರ್ಯನ ನುಡಿಯನು || ೧೪ ||

ಹರಿಹರಬ್ರಹ್ಮಾದಿದೇವರುಮತಿಕ್ರಮಿಸ | ಲರಿಯರಾವುದನಖಿಲ ಲೋಕಗತಿಯನ್ಯಥಾ | ಪರಿಣಮಿಪುದಿನ್ನದಾವುದರಿಂದ ಮಾದುರ್ವಿಧಿಯ ನಿಯ ಮಮುಣದರಗದು || ಅರಸನಿನ್ನಿಂದಿಂಗಳದು ಭುಕ್ತಮಾಯ್ತು ಮುನಿ | ವರ ವಚಃಪ್ರಾಮಾಣ್ಯದಿಂದೆ ಕಳೆದುದುಲೋಕ | ಪರಿವಾದಮೊಂದುಂ ನಿಜಸ್ಥಿತಿಗೆ ಲೋಪವಿಲ್ಲಿನ್ನೊಲ್ದು ನೀಂಬರ್ಪುದು || ೧೫ ||

ಇಂತರುಹವೇಳ್ಕುಮೆಂದೆನಗಗ್ರಜಂಬೆಸಸಿ | ದಂತೆವಿಜ್ಞಾಪಿಸಿದೆನೌ ಮಾತೆಪತಿಯಾಜ್ಞೆ | ಯೆಂತಪ್ಪುದೊಲ್ದು ನಡೆವುದು ತಪ್ಪದಂತುನಿಮ್ಮನ್ನ ಸು ಚರಿತ್ರೆಯರ್ಗೆ || ಸಂತರನುಮತಿಸಿರ್ಪ ಧರ್ಮವದರಿಂದೆನೀಂ | ಸಂತಸಂಗೊಂ ಡುಬಿಜಯಂಗೈವುದೆನೆ ಸೀತೆ | ಶಾಂತಮಾನಸೆಕೇಳ್ದು ವತ್ಸಕೇಳ್ಪತಿಯಾಜ್ಞೆ ಯಂ ತಲೆಯೊಳಾನಾಂತೆನು || ೧೬ ||

ಪತಿಸೇವೆಯಿಂಬೇರೆ ತಪವಿಲ್ಲಸತಿಯರ್ಗೆ | ಪತಿಪದಧ್ಯಾನದಿಂ ಬೇರೊಂ ದುಜಪವಿಲ್ಲ | ಪತಿಮಾರ್ಗದನುಸರಣವತ್ತಣಿಂಭಾವಿಪೊಡೆ ಬೇರೊಂದುಪದವಿ ಯಿಲ್ಲ || ಪತಿಪೂಜೆಯತ್ತಣಿಂನೋಂಪಿಪೆರತೊಂದಿಲ್ಲ | ಪತಿಯೊಡನೆತಾನಲ್ಲ ದಿಲ್ಲಗತಿಬೇರೊಂದು | ಪತಿಯಾಜ್ಞೆಯಂಮೀರದಿರ್ಪ ಕುಲನಾರಿಯರ್ಗೊಳವಿ ಹಪರಂಗಳೆರಡೂ || ೧೭ ||

ಎಂದುಸಂತೋಷಸಂಭ್ರಮದಿಂದೆ ಧರಣಿಸುತೆ | ನಂದನರನೊಡಗೊಂ ಡುಮುನಿಗಳಂತತ್ಸತಿಯ | ರಂದರ್ಶನಂಗೈದು ಪದಕೆರಗಿಪತಿಯಾಜ್ಞೆಯಿಂದೆ ನ್ನಪುಣ್ಯದಿಂದೆ || ಇಂದುನಾಂಪತಿಪಾದಸನ್ನಿಧಿಗೆ ಪೋಗಿಬಹೆ | ನೆಂದುನುಡಿದ ವರವರ ಹರಕೆಯಂಕಯ್ಕೊಂಡು | ನಿಂದುನಿಂದಲ್ಲಲ್ಲಿ ಕೆಳದಿಯರನೊಲ್ದಪ್ಪಿ ಪೋಗಿಬಹೆನೆಂದು ನುಡಿದು || ೧೮ ||

ಹರಿಸದಿಂಲಕ್ಷ್ಮಣಂತಂದಿತ್ತಭೂಷಣಾಂ | ಬರಮುಖ್ಯವಸ್ತುಗಳನವ ರ್ಗಿತ್ತವರ್ಗಳಿಂ | ದೊರೆಕೊಂಡನುಜ್ಞೆಯಂ ಸಿಂಗರಿಸಿಪುತ್ರರಂ ಸೌಮಿತ್ರಿಯೆ ಳಸಿದಂತೆ || ವರಭೂಷಣಾಂಬರಾದಿಗಳಿಂ ನಿಸರ್ಗಸುಂ | ದರಮಾದ ನಿಜಶರೀ ರವನಲಂಕರಿಸಿಕೊಂ | ಡರಸಿಯರೆಗಳಿಗೆಯೊಳ್ ಪಯಣಕ್ಕೆಸನ್ನದ್ಧೆಯಾದಳೌ ತ್ಸುಕ್ಯದಿಂದೆ || ೧೯ ||

ಪಡೆದು ನಿಜಮಾತೃಪಾದಾಜ್ಞೆಯಂ ಶತ್ರುಘ್ನ । ನೊಡನೆರಾಜೋಪ
ಚಾರೋಪಲಕ್ಷಿತರಥವ । ನಡಕೆ ಕುಶಲವರೊಲ್ದು ಬಳಿಕ ತಾನವನಿಸುತೆರಾಣಿ
ವಾಸದರಥವನು ॥ ಕಡುರಾಗದಿಂದೇರಿ ಪಿಂದೆಯುಂ ಮುಂದೆಯುಂ । ನಡೆಯೆ
ಚತುರಂಗಬಲಮುಪಚರಿಸುತಿರೆ ತೂರ್ತಿ । ರೆಡಬಲದೊಳುಣ್ಮೆ ಶುಭವಾದ್ಯ
ಕಲಕಲಮಯೋಧ್ಯಾಪುರಿಗೆ ನಡೆತಂದಳು ॥ ೨೦ ॥

ರತ್ನಗರ್ಭೆಯ ಗರ್ಭದಿಂದೊಗೆದ ಪರಿಶುದ್ಧ । ರತ್ನಮಿದೊ ಬಂದಪುದು
ಜನಕಭೂಮೀಂದ್ರನಚಿ । ರತ್ನ ಸುತಪಃಫಲವಿಭೂತಿ ಬಂದಪುದಿದೊ ಸತೀ
ಜನಶಿಖಾಭರಣದ ॥ ರತ್ನಮಿದೊ ಬಂದಪುದು ರಾಮಚಂದ್ರನ ಜೀವ । ರತ್ನಮಿ
ದೊಬಂದಪುದಯೋಧ್ಯೆಯ ಸೌಭಾಗ್ಯ । ರತ್ನಮಿದೊಬಂದಪುದೆನುತ್ತೆ ಕುತು
ಕದೊಳಖಿಲಪೌರರವಲೋಕಿಸಿದರು ॥ ೨೧ ॥

ಆದಿಶಕ್ತಿಸ್ವರೂಪಿಣಿತಾನಿದೋ ಬಂದ । ಳಾದಿಪೂರುಷನುರಸ್ಥಲವಿಹಾರಿ
ಣಿ ಬಂದ । ಳಾದಿತೇಯಪ್ರಕರಸನ್ನುತಿತೋದ್ದಾಮ ನಿಜಮಹಿಮೆಯಿದೊ
ಬಂದಳು ॥ ಆದಿಮಧ್ಯಾಂತ ದಶೆಗಳನುಳಿದಖಿಲ ದೇವ । ತಾದಿದೇವತೆ ಬಂದಳಾ
ತ್ತನಾರೀಲೀಲೆ । ವೈದೇಹಿಯಿದೊ ಬಂದಳೆಂದೆನುತ್ತಲ್ಲಿ ತತ್ವಜ್ಞರವಲೋಕಿಸಿ
ದರು ॥ ೨೨ ॥

ನರಿಕೂಗಿದೊಡೆ ಸುರಪುರಂ ಪಾಳಯೊಂದೆಂಬ । ನರಲೋಕದುಕ್ತಿಗನು
ಸಾರದಿಂ ಮೂಢಾತ್ಮ । ನಿರದೆ ತಾನಾವನೋ ಮುಡಿವಳಂ ನುಡಿದೊಡೇನಿಲ್ಲದಾ
ಜೊಲ್ಲಹವನು ॥ ಧರೆಯುರಿಯೆ ಸಾಧ್ವೀಶಿಖಾಮಣಿಯೆನಿಪ್ಪ ರಘು । ವರನರಸಿ
ಯಂ ಕಂಡೆ ವಂದಿಗಿಂದಾವತಪ । ದುರುಫಲವೊ ಎಂದು ಸೂಸುತ್ತಲರನೀಕ್ಷಿ
ಸಿದರವನಿಜೆಯನಂಗನೆಯರು ॥ ೨೩ ॥

ಧರೆಯೊಳವತರಿಸಿದಿಂದ್ರೋಪೇಂದ್ರರೋ ಅಲ್ಲ । ದಿರೆ ರಘೂದ್ವಹನ
ಹಾದಂತಿದಂತಂಗಳೋ । ನಿರುಕಿಪೊಡೆ ಧರಣೀತನೂಜೆಯ ಬಹಿಶ್ಚರಪ್ರಾಣಂ
ಗಳೋ ಮೇಣೆನೆ ॥ ಮೆರೆವರಣಧೀರರಂ ಜಗದೇಕವೀರರಂ । ಸುರುಚಿರಾಕಾ
ರರಂ ಕುಶಲವಕುಮಾರರಂ । ಪಿರಿದುಕೌತುಕದೊಳರ್ಗಳಿಯ ಕರೆಯುತ್ತೆ
ಲ್ಲರುಂ ಪೌರರೀಕ್ಷಿಸಿದರು ॥ ೨೪ ॥

ಧರಣೀತನೂಜೆಯಿಂ ತುತ್ಸವದೊಳಾಪುರದ | ಪರಿಪರಿಯ ಸಿಂಗರದ
ತರತರದ ಸಿಂಧಸೀ | ಗುರಿಪತಾಕೆಯ ಬಹುಜನದ ಸಂದಣಿಯ ರಾಜಪಥದೊ
ಳ್ಕುಮಾರರೊಡನೆ || ಮೆರೆದುಸರಯೂತಟದೊಳುಚ್ಚಲಿಸುತಿರ್ಪ ನಿಜ | ಪರಿ
ವಾದಮಾಲಿನ್ಯಮೆಂಬಂತಳುಂಬಮಂ | ಬರಕಡರ್ದಹೋಮಧೂಮಾಳಿಯಿಂ
ಕೂಡಿದಧ್ವರಶಾಲೆಗೈತಂದಳು ||೨೫||

ದಾಸಿಯರ್ ಪಲಬರ್ಪದಾವಧಾನವನೊರೆಯೆ | ತಾಸೇವಿಸುತ್ತಿರ
ಲ್ಕೊಪ್ಪುಕ್ಕು ಮುಖಮಂಟಪದ | ನಾಸನಮುತ್ಫುಲ್ಲಪಂಕೇಜಮುಖಿ ತನ್ನ ಬಕ್ಕುರ್ಗ
ಮೆಯೊಳುತ್ಸುಕಿಸುತಿರ್ದ || ಕೌಸಲ್ಯೆ ಮೊದಲಾದರಡಿಗೆ ಪಣೆಯಿಟ್ಟವದಿ |
ರಾಸಿಯುಂ ಕಯ್ಕೊಂಡು ಬಳಿಕೋರಗಿತಿಯರಂ | ಸೂಸುತಿರೆ ಕಣ್ಮಲರ್ಗಳಾ
ನಂದಬಾಷ್ಪಮಂ ಬಿಗಿದಪ್ಪಿದಳ್ಮುದದೊಳು ||೨೬||

ಇಂದುಕಳೆದುದು ಭಾಸ್ಕರಾನ್ವಯದಪರಿವಾದ | ಮಿಂದುತಾನೆಮ್ಮರ
ಮನೆಗೆ ಸುಪ್ರಕಾಶವಾ | ಯ್ತೆಂದು ನಿಶ್ಚಿಂತಮಾನಸನೆನಿಸಿದಂ ರಾಮಚಂದ್ರ
ಮನಯೋಧ್ಯಾಪುರಿ || ಇಂದುಸರೆಕಳೆವೆತ್ತುದೀನಾಡಿಗೊರೆಯಲೇ | ನಿಂದುದಿ
ಸಿದುದು ಮಂಗಳಾತಿಶಯಮೊಲ್ದಿಳಾ | ನಂದಿನಿಬರಲ್ಕೆಂದು ಕೊಂಡಾಡಿತಾರಾ
ಣಿವಾಸಮೆಲ್ಲಂ ಮುದದೊಳು ||೨೭||

ಅವನನುಪ್ರಾಪಿಸುಮತಿಯ ಕರಾಳಂಬದಿಂ | ಕುವರರವರಿರ್ವರುಂ
ಶತ್ರುಹಂತಾರನೊಡ | ನವತರಿಸಿ ರಥದಿಂದೆಲೋಕಿಸುತ್ತಿಕ್ಕೆಲದೊಳುಂ ಮಣಿ
ವಸೇವಕರನು || ಅವಿರಳಾನಂದದಿಂ ಪರಿಜನಮೊಡಚರ್ತಿರೆ | ವಿವಿಧೋಪ
ಚಾರವಂ ಮುಖಶಾಲೆವೊಕ್ಕು ಮೊದ | ಲವನಮಿಸಿ ವಾಲ್ಮೀಕಿಮುಖ್ಯರ್ಗೆ ಬ
ಳಿಕೊಲ್ದು ತಂದೆಗಭಿವಂದಿಸಿದರು ||೨೮||

ಮನದೊಳ್ಪ್ರಸಾದಮುಂ ವತ್ಸಲತೆಯುಂ ವಿಲೋ | ಚನಯುಗಳ
ದೊಳ್ಬಾಷ್ಪಲಹರಿಕರದೊಳ್ಪ್ರಕಂ | ಪನಮಂಗದೊಳ್ಪುಳಕಜಾಲಮುದ
ಯಿಸೆ ಧೈರ್ಯವೃತ್ತಿ ವಿಗಳಿಸೆ ಬೇಗನೆ || ತನುಜಾತರಂ ಪರಸಿ ಮಣಿದೆತ್ತಿ ಬೋ
ಳೈಸಿ | ಮನುವಂಶಕೇತು ಬಿಗಿಯಪ್ಪಿಕೊಂಡತ್ತಿತ್ತ | ಕನಕಪೀಠಂಗಳೊ
ಳ್ಕುಳ್ಳಿರಿಸೆ ವಲ್ಮೀಕಭವನವರನಿಂತೆಂದನು ||೨೯||

ಶ್ರೀಮತ್ಕುಮಾರರಿರನಿಂ ಗಳಭ್ಯಸಿಸಿರ್ಪ | ರಾಮಾಯಣವನುಚಿತ ರಾಗಸ್ವರಂಗಳೊಡ | ನೀ ಮಹಾಸಭೆಯೊಳಾಲಾಪಿಸುವುದೆನೆ ವಿನಯದಿಂ ಪಟುಗಳಾವಟುಗಳು || ರಾಮನನುಂಸೌಮಿತ್ರಿ ಭರತರುಂ ಸುರಥಾದಿ | ಭೂಮಿಪರು ಮಖಿಲತಾಪಸರು ಮಂತಃಪುರದ | ಸೀಮಂತಿನಿಯರು ಮತಿಕುತುಕದಿಂದಾಲಿಸಲ್ಕದನುತ್ಸುಕಿಸುತಿರಲ್ಕೆ | ೨೦ ||

ಆರಭಿ ಶ್ರೀಮೋಹನಂ ತೋಡಿಕಲ್ಯಾಣಿ | ಸೌರಾಷ್ಟ್ರಕಾಂಭೋಜಿ ಶಾಹನಂ ನಾಟಿ ಸಾ | ವೇರಿ ಭೈರವಿಶಂಕರಾಭರಣ ಧನ್ಯಾಸಿಸುರಟಿ ಬೇಗಡೆ ಮೊದಲಹ || ಚಾರುರಾಗಂಗಳಿಂ ದರ್ಥರಸಭಾವಾನು | ಸಾರದಿಂ ತೊಡಗಿದ ರ್ಪಾಡಲ್ಗಭೀರವಾ | ಗ್ಧೋರಣಿಯೊಳೀ ಮಹಾಕಾವ್ಯಮಂ ಚಿತ್ರಿಸಿದರೆಂಬ ವೋಲಿರೆ ಸಭಿಕರು || ೨೧ ||

ತಲೆತೂಗಿದುವು ಕೇಳುತಾಗಾನಮಂಸೊದೆಯ | ಮಳೆಕರ್ಣದೊಳ್ಕರೆದುದಾನಂದಬಾಷ್ಪಮುರೆ | ಗಳಗಳನೆಸುರಿದುದೆವೆಯಿಕ್ಕುವುದನಕ್ಷಿಮರೆತುದುಮನಂ ಬೇರೊಂದೆಡೆ || ಚಲಿಸದೆಯೆ ನಿಂದುದಾಳ್ದುದು ಪಾರವಶ್ಯಮಂ| ಪುಳಕಾಳಿಕಂಚುಕಿತಗಾತ್ರಮೇನೆಂಬೆನಾಂ | ಭಳರೆಮಝುಭಾಪು ಮಝುಭಾಪೆಂಬನುಡಿಕೇಳಿಸಿದುವಾಗಳಾ ಸಭಿಕರಾ || ೨೨ |

ಇಂತುತದ್ಗಾನಮಂಕೇಳ್ದು ಪರಮಾನಂದ | ಮಾಂತಕುಂಭಜವಸಿಷ್ಠಾದಿಮುನಿಪುಂಗವ | ರ್ತಂತಮ್ಮ ಬಗೆಗೊಪ್ಪಿದಂದದೊಳಮೋಘಂಗಳೆಂದೆನಿಪ ಹರಕೆಗಳನು || ಮುಂತೆಪಾಲಿಸೆ ಬಳಿಕರಾಮನೊಡಲಂಪುಳಕ | ಸಂತಾನಮುಳ್ಳರಲಾಲಿಂಗಿಸಿ ಕುಮಾರರಂ | ಸಂತಸಂಮಿಗಲಾದಿಕವಿಗೆತಾನತ್ಯಧಿಕ ಸನ್ಮಾನಮಂಗೈದನು || ೨೩ ||

ಇಂತುವಾತ್ಸ್ಯಾಯನಂಶೇಷನುಕ್ತಿಯುಕೇಳ್ದು | ನಂತನುಡಿವಾಲ್ಮೀಕಿಯಾವಕಾರಣದಿಂದ | ದೆಂತೆಲ್ಲಿ ತಾನೀಮಹಾಕಾವ್ಯಮಂ ವಿರಚಿಸಿದನೆಂದು ಬೆಸಗೊಂಡೊಡೆ || ಸಂತಸಂಗೊಂಡದಕ್ಕಾಶೇಷನಾಲಿಸೆಲೆ | ಶಾಂತಾತ್ಮಮಧ್ಯಾಹ್ನಕಾಲನಿಯಮಕ್ಕೊಸು | ಗಂತಳರ್ದನೊಂದಿನಂವಲ್ಮೀಕಸಂಭವಂತಮಸಾನದೀತಟಕ್ಕೆ ೨೪ ||

ತಾಲಹಿಂತಾಲ ವಕುಳಾಶೋಕಜಂಬೂತ । ಮಾಲಕೃತಮಾಲದಾಡಿ
ಮಪನಸಕಿಂಶುಕರ । ಸಾಲಸಾಲಪ್ರಮುಖತರುಗಳಿಂ ಮಾಧವೀಕುಂದಾದಿ
ಲತೆಗಳಿಂದೆ ‖ ರೋಲಂಬಝುಂಕಾರದಿಂ ಸಾರಸಾದಿಖಗ । ಜಾಲಮಂಜುಳ
ನಾದದಿಂದೊಪ್ಪುವಾನದಿಯು । ಕೂಲದೊಳ್ಕಾಮಶರ ಪೀಡಿತಂಕ್ರೌಂಚಯುಗ
ಮೊಲ್ದುವಿಹರಿಸುತಿರ್ದುದು ‖ ೩೫ ‖

ಬೇಡನಾಸಮಯದೊಳಗೊರ್ವ ನಲ್ಲಿಗೆಬಂದು । ಕೂಡಿಕೊಂಡಾಪಕ್ಷಿ
ಮಿಥುನವಂ ಚಾಪದೊ । ಳ್ಸೂಡಿದೊಂದಂಬಿನಿಂದವರೊಳಗೆಗಂಡನೊಂದಂ
ಮಾಂಸಕೆಳಸಿವಧಿಸೆ ‖ ಓಡಿತಾದುಃಖದಿಂಕೂಗುತ್ತೆ ಪೆಣ್ವಕ್ಕಿ । ನೋಡಿಸೈ
ರಿಸವದಂವಾಲ್ಮೀಕಿತದ್ದುಃಖ । ಪೀಡಿತಮನಸ್ಕನಾಗಿಂತು ಛಂದೋರೂಪವಾ
ಕ್ಯನೊಂದಂ ನುಡಿದನು ‖ ೩೬ ‖

ಬಂದುಪಾದಂಮಾನಿಷಾದ ಪ್ರತಿಷ್ಠಾಂತ್ವ । ಮೆಂದೊಂದು ಪಾದಮಗ
ಮಶ್ಶಾಶ್ವತೀಸ್ಸಮಾಃ । ಎಂದುಮಾಪರಿಯಿಂದೆ ಪಾದಮಿನ್ನೊಂದುಯತ್ಕ್ರೌಂ
ಚಮಿಥುನಾದೇಕಂ ‖ ಎಂದುಮವಧೀಃ ಕಾಮಮೋಹಿತಮೆನುತ್ತಮಂ ।
ತೊಂದುಪಾದಮುಮಿಂತು ನಾಲ್ಕುಪಾದಂಗಳು । ಳ್ಳಂದದಿಂವಿದ್ವದಭಿನಂದ್ಯ
ಮೆನಿಸಿದದಿವ್ಯ ಪದ್ಯವೊಂದಂ ನುಡಿದನು ‖ ೩೭ ‖

ಕೆಲಬಲದೊಳಲ್ಲಿರ್ದ ಮುನಿಗಳಾನುಡಿಯು ಕೇ । ಳ್ದಲೆಮಹಾಮುನಿಪ
ವಾಲ್ಮೀಕಿ ನೀಂಬೇಡನೊ । ಳ್ಬಲಿದಕೋಪದೊಳಾಡಿದೀಶಾಪರೂಪ ವಚನಂ
ಶ್ಲೋಕರೂಪದಿಂದೆ ‖ ಲಲಿತಪದಸಂದರ್ಭದಿಂ ದೊಪ್ಪುತಿರ್ಪುದೆಂ । ದೊಲವಿಂ
ದೆ ಕೊಂಡಾಡುತಿರ್ದರಾಸಮಯದೊ । ಳ್ಜಲಜಭವನಲ್ಲಿಗೈತಂದು ವಾಲ್ಮೀಕಿ
ಯಿಂ ಪೂಜೆಗೊಂಡಿಂತೆಂದನು ‖ ೩೮ ‖

ಪರಮರ್ಷಿಪುಂಗವನೆ ವಲ್ಮೀಕಸಂಭವನೆ । ಸರಸತಿಭವನ್ಮುಖದೊ
ಳೊಲ್ದುತಾನವತರಿಸಿ । ಸುರುಚಿರ ಶ್ಲೋಕರೂಪದೊಳ್ಸೆವಳದರಿಂದೆಧನ್ಯ
ನೈನೀನಿಳೆಯೊಳು ‖ ದುರಿತಾಪಹರಮಾದ ರಾಮನ ಚರಿತ್ರಮಂ । ಸರಸ
ಮೆನೆವಿರಚಿಸೀಧರಣಿಯಿರ್ಪನ್ನೆಗಂ । ಸ್ಥಿರಮೆನಿಸಿಭವದೀಯ ನಿರ್ಮಲಯಶಂ
ನಿಲ್ವುದೆಂದೊರೆದು ಮೈಗರೆದನು ‖ ೩೯ ‖

ಮುನಿವರಂ ಮಧ್ಯಾಹ್ನವಿಧಿಯನಾಗಿಸಿ ಶಿಷ್ಯ | ಜನದೊಡನೆ ಬಳಿಕಾಶ್ರಮಕ್ಕೆ ನಡೆತಂದು ರಾ | ಮನ ಲೋಕಪಾವನ ಚರಿತ್ರಯಂ ರಚಿಪೆನಾನೆಂತೆಂದು ಚಿಂತಿಸುತ್ತೆ || ಮನದೊಳಾಗಳೆ ಗೋಚರಿಸಿದ ಮೇಘಶ್ಯಾಮ | ತನುಮನೋಹರನ ರಾಮನ ಮಹಾನುಗ್ರಹದೊ | ಳನುಪಮಯಥಾಶ್ರುತ ಶ್ರೀರಾಮಚರಿತೆಯಂ ರಚಿಸಲಾರಂಭಿಸಿದನು || ೪೦ ||

ರಾಮಚಂದ್ರನ ಸಮುತ್ಪತ್ತಿ ಮೊದಲೆನಿಸಲು | ದ್ದಾಮ ಪಟ್ಟಾಭಿಷೇಚನಮಂತಮೆನಿಸಲಭಿ | ರಾಮಷಟ್ಕಾಂಡದಿಂ ಬಳಿಕಮುತ್ತರದೊಂದುಕಾಂಡದಿಂ ಸಹಿತಮಾಗಿ || ರಾಮಾಯಣಾಖ್ಯೆಯಂ ಪೂರ್ದಿಸಿದಪಂಡಿತ | ಸ್ತೋಮಾಭಿನಂದ್ಯಸದಲಂಕಾರಭಾವರಸ | ರಾಮಣೀಯಕಮಾಂತ ರಾಮಚರಿತೆಯನೊಲ್ದು ಪೂರ್ಣಮೆನೆವಿರಚಿಸಿದನು || ೪೧ ||

ಆದಿಮಮಹಾಕಾವ್ಯಮೆಂದೆನುತೆ ವಿಖ್ಯಾತ | ಮಾದರಾಮಾಯಣದ ಕಾಂಡಂಗಳಾರನೊ | ಲ್ದೋದಿದವರು ಮಾಲಿಸಿದರುಂ ತಮ್ಮತಮ್ಮಮನದಿಷ್ಟಂಗಳಂಪಡೆವರು || ವೇದನಿಭಮಾದಿದಂ ಕೇನೆವರಂಕೇಳ್ದರ್ಗ | ಮೋದಿದರ್ಗಂ ರಾಮಸಾಯುಜ್ಯಮಪ್ಪುದೆಂ | ದಾದಿಶೇಷಂ ನುಡಿದು ಮುನಿಪಕೇಳ್ಬಳಿಕನಡೆದಶ್ವಮೇಧವನೆಂದನು || ೪೨ ||

ಬಳಿಕವಲ್ಮೀಕಭವಮುನಿಪನಾಜ್ಞೆಯೊಳಲ್ಲಿ | ಗಿಳೆಯಣುಗಿನಡೆತಂದು ವಿನಯದಿಂ ತಚ್ಚರಣ | ನಳಿನಕ್ಕೆಮೊದಲೆರಗಿ ಪತಿಪುತ್ರರೊಡನೆಬಾಳೌಸುಖದೊಳೆಂದಾತನ || ಫಲವದಾಶೀರ್ವಾದಮಂಗ್ರಹಿಸಿ ಲಜ್ಜೆಯಿಂ | ತಲೆವಾಗಿನಿಜಪತಿಯಚರಣ ಸರಸೀರುಹವ | ನಳಕಾಳಿಯಿಂದಳಿಕುಲಾಕ್ರಾಂತಮೆಂಬಂತೆಮಾಡಿ ಕಯ್ಗಳಜೋಡಿಸಿ || ೪೩ ||

ಇಂದೆನ್ನ ಜೀವಿತಪ್ರಿಯ ನಿಮ್ಮ ಚರಣಾರ | ವಿಂದದರ್ಶನದಿಂದೆ ಧನ್ಯತೆಯನಾಂತೆನಾ | ನಿಂದುಸುತವತಿಯರೆಂದೆನಿಪ ಮಾನಿನಿಯರೊಳ್ಗಣ್ಯತೆಯನಾಂಪಡೆದೆನು || ಎಂದುನುಡಿವೊಡನೆ ಮುನಿವರರೆಲ್ಲರುಂ ರಾಮ | ಚಂದಿರನೆ ಪರಿಶುದ್ಧ ಮನದೊಳೀಕೆಯನೊಲ್ಮೆ | ಯಿಂದೆಕಯ್ಕೊಳುದೆನೆ ಕಯ್ವಿಡಿದು ರಾಮಂಪರಿಗ್ರಹಿಸಿದಂ ಸತಿಯನು || ೪೪ ||

ಮೊಳಗಿದುವು ದೇವದುಂದುಭಿಗಳೆಣ್ದೆಸೆಯೊಳಲ | ರ್ಗಳೆಕರಂ ಕರೆದು ದಾಗಸದಿಂದೆಸುರಭಿ ಶೀ | ತಳಮಂದಮಾರುತಂ ತೀಡಿದುದುತೊಳತೊಳಗಿದುವು ತಾರಕಾಗ್ರಹಗಳು || ತಿಳಿದುಕಣ್ಗೊಳಿಸಿದುದು ಸಕಲದಿಙ್ಮಂಡಲಂ | ಕಲಮಧುರನಾದದಿಂದುಲಿದುವುಪತತ್ರಿಗ | ಳ್ಫಲಕುಸುಮಭರಿತಂಗಳಾದುವಾರಾಮಂಗಳಿಳಾದೇವಿ ನೆರೆನಲಿದಳು || ೪೫ ||

ಉಕ್ಕಿದುದಯೋಧ್ಯೆಯೊಳ್ಹರುಷದ ಕಡಲ್ದಿಕ್ಕ | ದಿಕ್ಕಿನೊಳ್ಪಸರಿಸಿದುದವನಿಜೆಯಬೆಳ್ಜಸಂ | ಕಕ್ಕುಲಿತೆಯಂ ರಘುವರಂ ಕಳೆದನಾದನಾವಾಲ್ಮೀಕಿನಿಶ್ಚಿಂತನು || ಧಿಕ್ಕರಿಸೆ ಕಾಂಚನಪ್ರತಿಮೆಯುಮನಗಸ್ತ್ಯಂಬ | ಳಕ್ಕ ಯಜಮಾನ ಪತ್ನೀಸ್ಥಾನದೊಳ್ನಿಲಸ | ಲಕ್ಕರಿಂವೈದೇಹಿ ಋತ್ವಿಜರ್ಯಾಗಕರ್ಮಾರಂಭಮಂಗೈದರು || ೪೬ ||

ಬಳಿಕಾಗಮೋಕ್ತಪ್ರಕಾರದಿಂ ದೊಲ್ದು ಮಂ | ಗಳಮಜ್ಜನಂಗೈದು ಪೀತಾಂಬರವನುಟ್ಟು | ಹೊಳೆವ ಮಣಿಭೂಷಣಂಗಳನಾಂತು ಕಯ್ಗೊಂಡು ಮಂಗಳಸುವಸ್ತುಗಳನು || ತಳೆದುಚಿತ ನಿಯಮಮಂ ತುರಗಮೇಧಕೆತನ್ನ | ಬಳಿಸಾರ್ದಸತಿಯೊಡನೆ ಮೃಗಶೃಂಗಧಾರಿ ಕ | ಣ್ಗೊಳಿಸಿದಂ ಶ್ರೀರಾಮಚಂದ್ರಮಂ ಚಿತ್ರಾನುಗತನಪ್ಪಚಂದ್ರನಂತೆ || ೪೭ ||

ಮೂವತ್ತುಮೂರನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೩೩ ಕ್ಕೆ ಪದ್ಯ ೧೩೦೦ ಕ್ಕೆ ಮಂಗಳಮಸ್ತು.

ಮೂವತ್ತುನಾಲ್ಕನೆಯ ಸನ್ಧಿ.

ಸೂಚನೆ || ಸನಹಯಮಂಶಾಪನಿರ್ಮುಕ್ತ ವಾಗಮರಲೋ | ಕವನ್ನೈದೆಸುರಕು
ಲಂಬಂದು ಸಾಕ್ಷಾತ್ತಾಗಿ | ಹವಿಯಂಪರಿಗ್ರಹಿಸೆ ರಘುವರಂಸೀತೆ
ಯೊಡನಧ್ವರವನಾಗಿಸಿದನು ||

ವರಮುನಿಯ ಕೇಳ್ಗುರುವಸಿಷ್ಠನನಿಯೋಗದಿಂ | ಸರಯೂನದೀಪು
ಣ್ಯತೀರ್ಥದೊಳೃತ್ವಿಜ | ರುತ್ತರಗವಂಪರಿಪಠಿಸಿ ವಿಧ್ಯುಕ್ತಮಂತ್ರಮಂ ಸ್ಥಾ
ಪಿಸಿಯಥಾವಿಧಿಯೊಳು || ಪರಿಪೂಜಿಸಿರ್ದಯೂಪಸ್ತಂಭದೊಳ್ಕಟ್ಟಿ | ಪರಿಪರಿ
ಯುವಾದ್ಯಂಗಳೆಣ್ದೆಸೆಯೊಳುಂ ಮೊಳಗೆ | ಭರತಾಗ್ರಜಾತನಿಂ ಘಟಜಾತನಿಂ
ತೊಂದು ಮಂತ್ರಮಂ ನುಡಿಯಿಸಿದನು || ೧ ||

ಧರಣಿಸುರವರಪಠ್ಯಮಾನದ್ವಿಯುಗವೇದ | ಪರಿಪೂತ ಘೋಷಮಯ
ಮೆನಿಪತದಧಿಷ್ಠಾನ | ಸುರಕೋಟಿಸಾನ್ನಿಧ್ಯಮುಳ್ಳ ಸನ್ನಿಹಿತ ಬಹುರಾಜ
ಮಂಡಲಮೆನಿಸಿದ || ಪರಮರ್ಷಿಲೋಕದಿಂದೊಪ್ಪುತಿರ್ಪೀಮಹಾ | ಧ್ವರದೊ
ಳೆಲೆಮಾಹವಿಪ್ರಘಾತ ಕಲುಷಿಯಂ | ಪರಿಪೂತನಂಮಾಳ್ಪುದೆನ್ನನೆಂಬರ್ಥದಾ
ಮಂತ್ರಮಂ ಪಠಿಸಿಬಳಿಕ || ೨ ||

ಸೀತೆಯೊಡನಶ್ವಮಂ ನೀವರಿಸೆಕರ ವಾರಿ | ಜಾತದಿಂರಘುವರಂ ಮು
ನಿಗಳಚ್ಚರಿಗೊಂಡು | ಪಾತಕಶತಂ ನೆನೆದೊಡಾವನಂ ನಿರ್ನಾಮಮಪ್ಪುದೋ
ಲೋಕದೊಳಗೆ || ಆತನಿಂತಾಡುವುದು ಜನವಿಡಂಬನಮೆಂದು | ಮಾತಾಡು
ತಿರೆಪರಸ್ಪರಮಲ್ಲಿ ಬಳಿಕಘಟ | ಜಾತನಭಿಮಂತ್ರಿಸಿದ ಭಾಳನೊಂದಂರಘೂ
ತ್ತಮನ ಹಸ್ತದೊಳಿತ್ತನು || ೩ ||

ಆಕತ್ತಿಯಿಂ ಸೋಂಕಿದೊಡನೆ ತನ್ನಂರಾಮ | ನಾಕುದುರೆ ಪಶುರೂ
ಪಮಂಬಿಟ್ಟು ನಾಕರಮ | ಣೀಕರಾಕಲಿತವ್ಯಜನ ಚಾಮರಂಗಳಿಂದುಪಚ
ರ್ಯಮಾಣನಾಗಿ || ಆಕಾಶಯಾನದೊಳ್ಕಿಳ್ಳಿದುರ್ಧೃತಲಸದ | ನೇಕಭೂಷಣ
ವಸನನಾದೊರ್ವ ಸುರಪುರುಷ | ನಾಕೃತಿಯನಾನಲರಿದುಂರಾಮನದ ನರಿಯು
ದನನವ್ರೋಲಿಂತೆಂದನು || ೪ ||

ನೀನಾವನೈ ದಿವ್ಯತನುರೂಪಧರವರವಿ | ಮಾನದೊಳಗಪ್ಸರಸ್ತ್ರೀ
ಯರಿಂದುಪಸೇವ್ಯ | ಮಾನನಾಗಿತ್ತಲೇನೀಗಳೈತಂದೆ ಪೇಳೆನಲವಂಶ್ರೀರಾ
ಮನೆ || ನೀನರಿಯದಿರ್ಪುದಾವುದುಮಿಲ್ಲಮಾದೊಡಂ | ಮಾನವವಿಲಾಸದಿಂ
ನೀನೆನಗೆ ಬೆಸಸಿದಂ | ತಾನೆನ್ನ ವೃತ್ತಾಂತಮಂ ಬಿನ್ನವಿಸುವೆನೊಲ್ದಾಲಿಸೆಂ
ದಿಂತೆಂದನು || ೫ ||

ಸರ್ವಾಂತರಾತ್ಮಕೇಳೈ ರಾಮಚಂದ್ರಮನೆ | ಪೂರ್ವಸಂಭವದೊಳಾಂ
ಧೂತಪಾಪಾತಟದೊ | ಳೂರ್ವಭೂದೇವನಾಗಲ್ಲಿ ಬಹುಕಾಲದಿಂ ತಪವನಾ
ಚರಿಸುತಿರ್ದ || ಉರ್ವೀದಿವೌಕಸರ ನಿರದೆಮೆಚ್ಚಿಸಲೊಂದು | ಪರ್ವದೊಳ್ಕಾ
ಣಿಸಿ ಸಮಸ್ತ ಸಂಭಾರಮನ | ನಿರ್ವಾಚ್ಯದಂಭದಿಂ ಸದ್ಭಾವಮಿಲ್ಲದಾರಂಭಿಸಿದೆ
ನಧ್ವರವನು || ೬ ||

ನುಡಿಯಲೇಂ ಕಣ್ಗೊಳಿಸಲರ್ಚಿಸಿದಯೂಪಂಗ | ಳೊಡೆಯೆದಿಗ್ಭಿತ್ತಿ
ಗಳನಾಮ್ನಾಯಘೋಷಮಳ | ವಡಿಸಿಮುಸುಕಿಟ್ಟುಮುತ್ತೈದುಗಳ್ತೋರ್ಕ್ಕವ
ಡೆಯಲ್ಕೋಟೀರಾಂಗಣದೊಳು || ಅಡರೆಶಿಖಿಧೂಮಮಭ್ರಕ್ಕೆಕರ್ಮಂಗಳಂ | ಕ
ಡುಜಾಣನೆಂದುತಾಂ ತಿಳಿದಯಾಜಕರ್ಗೆಮಡಿ | ಗಡಿಗೆಬೋಧಿಸುತೆ ಸಾಕ್ಷಾ
ದ್ದಂಭವೆಂಬಂತೆಮಖಿವೇಷದಿಂ ಮೆರೆದೆನು || ೭ ||

ಆಸಮಯದೊಳಗಲ್ಲಿಗಾಲಿಸೆಲೆದೇವ ದು | ರ್ವಾಸನಧ್ವಶ್ರಾಂತನಾಗಿಬರೆ
ಕಂಡು ಮ | ರ್ಘ್ಯಾಸನಾದ್ಯುಪಚಾರದಿಂದೆನಾಂ ಸತ್ಕರಿಸದಿರ್ಪುದುಮಹಂಕೃತಿ
ಯೊಳು || ಆಸುಲಭಕೋಪನಾಕ್ಷಣಮೆ ಶಪಿಸಿದನೆಲವೊ | ಭೂಸುರಾಧಮದಂ
ಭಧರ್ಮಮಂಪುಣ್ಯಮೆನಿ | ಪೀಸರಿತ್ತಟದೊಳಾಚರಿಸಿದುದರಿಂದೆ ನೀನಾಗುಪಶು
ವೆಂದೆನ್ನನು || ೮ ||

ಅನುತಾಪಮಾಂತುನಾಂಬಳಿಕಬಂದಡಿಗೆರಗಿ | ವಿನಯದಿಂ ಬೇಡಿಕೊಳ
ಲಾತನಾಗದುವಿಮೋ | ಚನೆಯೀಗಳೀಶಾಪಕಾದೊಡಮನೇಕ ಜನ್ಮಂಗಳಂಹ
ಯಕುಲದೊಳು || ಅನುಭವಿಸಿರಾಮನಾಮದೊಳಿಳೆಯೊಳವತರಿಪ | ವನರು
ಹಾಕ್ಷನಕರಸ್ಪರ್ಶಮಾದಂದುನೀ | ನನುಪಮಸ್ವರ್ಗ ಪದಮಂ ಪಡೆವೆಯೆಂ
ದೊಲ್ದುನುಡಿದಂ ಪ್ರಸನ್ನನಾಗಿ || ೯ ||

ಇದೊಮಹಾಮುನಿಯನುಗ್ರಹಿಸಿದಂತೆನಗೆ ಕಳೆ | ದುದುಪಶುತ್ವಂ
ಸ್ವರ್ಗಸುಖಮಿಂದು ಸಮನಿಸಿ | ಪೊರ್ದು ನಿನ್ನ ಚರಣಾಬ್ಜಮಂ ಕಂಡು ನೆರೆ
ಧನ್ಯನಾದೆನಾನೆಂದು ನುಡಿದು || ಸದಮಲಾನಂತಬೋಧಾನಂದರೂಪ ನೆನಿ |
ಸಿದರಾಮಚಂದ್ರಮನನುಗ್ರಹದೊಳಾ ವಿಮಾ | ನದೊಳ್ಕುಳ್ಳಿರ್ದು ಶಾಶ್ವತ
ಮೆಂದೆನಿಪ್ಪ ವೈಕುಂಠಪದಮಂ ಸಾರ್ದನು || ೧೦ ||

ಏನಿದಾಶ್ಚರ್ಯಮೆಂದೆನುತದಂ ಕಂಡಾ ವಿ | ತಾನಮಂಟಪದೊಳಿರ್ದೆಲ್ಲ
ರುಂ ತನ್ನಯಮ | ಹಾನುಭಾವತೆಯ ಕೊಂಡಾಡುತಿರೆ ಭಕ್ತಿಪ್ರಕರ್ಷದಿಂ
ಶ್ರೀರಾಮನು || ಮೌನೀಂದ್ರನಂ ಗುರುವಸಿಷ್ಠನಂ ನೋಡಿ ಪಶು | ತಾನಿಂತು
ನಷ್ಟಮಾದುದು ಮುಂದೆ ಕರ್ತವ್ಯ | ಮೇನೆಂದು ಬೆಸಗೊಂಡೊಡಾ ಜಗದ್ವಿಶ್ರುತ
ತಪೋವೀರ್ಯನಿಂತೆಂದನು || ೧೧ ||

ಧರಣೀಂದ್ರಕುಲಲಾಮನೆ ರಾಮಚಂದ್ರಮನೆ | ಪಿರಿದು ನೀನಿಂತಿದ
ಕ್ಕೇತಕ್ಕೆ ಚಿಂತಿಸುವೆ | ಕರೆದಿಲ್ಲಿಗಖಿಲಸುರರಂ ಹವಿರ್ಭಾಗಮಂ ತಾನವರ್ಗೀ
ವೆನೆಂದು || ಕರವೆತ್ತಿ ತತ್ತದಾಮ್ನಾಯ ಮಂತ್ರಂಗಳಂ | ಪರಿಪಠಿಸುವುದುಮ
ನುಕ್ರಮದಿಂದೆ ಶಕ್ರಾದಿ | ಸುರರಲ್ಲಿಗೆಳತರುತಿರಲ್ಕದಂ ಸರ್ವರುಂ ನೋಡಿ ವಿಸ್ಮಿತ
ರಾದರು || ೧೨ ||

ವಾಮದೇವಂ ಚತುರ್ಬಾಹು ಪರಮೇಷ್ಠಿ ಸು | ತ್ರಾಮಯಮವ
ರುಣಧನದರ್ಮೊದಲೆನಿಪ್ಪ ಸಕ | ಲಾಮರರನುಕ್ರಮದೊಳಲ್ಲಿಗೈತಂದು ತಮ್ಮ ತ
ಮ್ಮ ಪರಿವಾರದೊಡನೆ || ರಾಮನಿಂ ಬಹುಮಾನದಿಂ ಪೂಜೆಗೊಂಡು ಪರ |
ಮಾಮೋದದಿಂ ಪರಿಗ್ರಹಿಸಿ ಕುಂಭಜಮುಖ ಮ | ಹಾಮುನಿಪುರಸ್ಕೃತ ಹವಿ
ರ್ಭಾಗಮಂ ತಮ್ಮತಮ್ಮ ಲೋಕಕ್ಕೆ ತೆರಳ್ದರು || ೧೩ ||

ಭರತನುಂ ಲಕ್ಷ್ಮಣನುಮಂತು ಶತ್ರುಘ್ನನುಂ | ಧರಣೀಂದ್ರರಂ ತಾಪ
ಸೋತ್ತಮರನಿತರ ಭೂ | ಸುರವರ್ಗಮಂ ದೇಶಜನಪೌರಜನವೃದ್ಧರಂ ಮ
ನ್ನಿಪಧಿಕೃತಿಯೊಳು || ನಿರತಿಶಯವಿತರಣೆಯ ಸಂತರ್ಪಣೆಯ ಕಾರ್ಯ | ಧು
ರದೊಳ್ಸುಮಂತ್ರಾದಿಮಂತ್ರಿಗಳು ಮಿಕ್ಷ್ವಾಕು | ವರನಿಂ ಸಮಾಜ್ಞಪ್ತರಾಗಿ
ರ್ದರಾಮಹೋದಾರಮಾದಧ್ವರದೊಳು || ೧೪ ||

ವಿಹಿತವಪ್ಪಾದಾಯಾಗದೊಳ್ ಷಡ್ರಸೋಪೇತ । ಸುಹಿತಭೋಜನದಿಂದೆ ಕೃತಸಭಾಜನದಿಂದೆ । ಬಹುಳಸಂತೃಪ್ತಿಯಾಂತೆಲ್ಲರುಂ ಚತುರಂಗಸೈನ್ಯಪರಿವಾರದಿಂದೆ ॥ ಸಹಿತಂಗೆಭರತಂಗೆಮುಂ ಭರದ್ವಾಜಮುನಿ । ಮಹಿಮೆಯಿಂವಿರಚಿಸಿದಸತ್ಕಾರದತ್ತಣಿಂ । ನಹಹಸಂತರ್ಪಣಮಿದೆಣಿಸೆ ಮಿಗಿಲೆನಿಸಿರ್ಪುದೆಂದು ತಾಂ ಶ್ಲಾಘಿಸಿದರು ॥ ೧೫ ॥

ಅನುಪಮೌದಾರ್ಯನೆನಿಪವನಿಜಾಸೋದರ್ಯ । ನಿನವಂಶತಿಲಕನಿಂ ವಿನಿಯುಕ್ತನಾಗಿರ್ದ್ದ । ಮುನಿಜನಕ್ಕಂದ್ವಿಜರ್ಗೆಲ್ಲರ್ಗಮಂತು ದಕ್ಷಿಣೆಯನೀವಧಿಕ್ಕೃತಿಯೊಳಂ ॥ ಧನಕನಕವಸನಮಣಿಭೂಷಣಾದಿಗಳನೆನಿ । ತೆನಿತಿತ್ತೊಡಂಬೊಕ್ಕಸಂಪೂರ್ಣಮಾಗಿರ್ದ । ದಿನಿಸಾದೊಡಂಕುಂದದೆಯ್ಯಲಾರದೆಬಿಟ್ಟರಲ್ಲಲ್ಲಿ ಕೊಂಡವದಿರು ॥ ೧೬ ॥

ಬಂದುತಮ್ಮಿಷ್ಟಮಂ ಪಡೆಯದಾಮುಖಶಾಲೆ । ಯಿಂದೆಪಿಂದಿರುಗಿದವರಿಲ್ಲುಂಡುಮೃಷ್ಟಾನ್ನ । ಮಂದಣಿಯದವರಿಲ್ಲ ಧನಕನಕಮಣಿಗಳಂ ತಮ್ಮಮ್ಮವಂಶದೊಳಗೆ ॥ ಮುಂದಾರುಮನ್ಯರಂ ದೈನ್ಯದಿಂಬೇಡಿಕೊ । ಳ್ವಂದದಿಂ ದಕ್ಷಿಣೆಯಪಡೆದನದಿರಿಲ್ಲಮೇ । ನೆಂದಪೆನೆಲ್ಲೈಮುನಿಪಕೊಂಡಾಡದವರಿಲ್ಲವಾಮುಖದವಿತರಣೆಯನು ॥ ೧೭ ॥

ಸೋಮಪಾನಾದಿತತ್ಸನ್ನಿಹಿತಕರ್ಮಂಗ । ಳಾಮಹಾಮುಖದೊಳಾಗಮವಿಹಿತಮಾಗಿರ್ಪ । ನೇಮದಿಂಸಾಂಗಮೆನೆ ನಿರ್ವರ್ತಿತಂಗಳಾದುವು ಕೇಳ್ಮಿನೀಂದ್ರಬಳಿಕ ॥ ಸೌಮಿತ್ರಿಯಾಜ್ಞೆಯಿಂ ಸಕಲಸಂಭಾರಮು । ದ್ದಾಮವೈಭವದಿಂದೆ ಸಜ್ಜಮಾಗಿರಲೊಡನೆ । ರಾಮಚಂದ್ರಂ ಸರಯುಗವಭೃಥೇಷ್ಟಿಗೆತೆರಳೆಲ್ಲರೊಡನನುವಾದನು ॥ ೧೮ ॥

ಪರಿಗಣನೆಯಿಲ್ಲದಿಹಸೇನೆಸರಯೂನದೀ । ಸರಣಿಯಿಕ್ಕೆಲದೊಳಡಿ ಕಿರಿದುನಿಲೆಸಾಲ್ಗೊಂಡು । ಮೆರೆಯಲಭ್ರಂ ಲಿಹಸತಾಕೆಗಳ್ಕನಕ ತೋರಣರಾಜಿಕಣ್ಗೊಳಿಸಲು ॥ ಪರಮರ್ಷಿಗಳ್ಗಜಾರೋಹಣಂಗೈದುಮುಂ । ಬರಿಯಲನುಜಾತರಶ್ವಾರೂಢರಾಗೊಡನೆ । ಬರಯಾಗಶಾಲೆಯಿಂ ಪೊರಮಟ್ಟನೇರಿಮಣಿರಥವನಾಯದುಜಮಾನನು ॥ ೧೯ ॥

ಅಡಿಗಡಿಗೆಮುಪಚರಿಸುತೊಡನೆಬರೆಚೇಟಿಯರ | ಗಡಣಮಂತಃಪುರಸ್ತ್ರೀಯರಿಂದೊಡಗೂಡಿ | ಪೊಡವಿಮಗಳೆಸೆವಪೊನ್ನಂದಣವನೇರಿ ಪಿಂದೈತರುತ್ತಿರೆ ಮುದದೊಳು || ಪಿಡಿವಸತ್ತಿಗೆಗಳುಂ ಚಾಮರಂಗಳುಮೊಪ್ಪ | ಲೊಡನೊಡನೆವಂದಿಗಳ್ಪೊಗಳೆರಘುವರನೆಲ್ಲ | ರೊಡನೆಕಡುಸಂತಸದೊಳವಭೃಥೇಷ್ಟಿಗೆಪೋಗುವುತ್ಸವಮದೇಂ ಮೆರೆದುದೋ || ೨೦ ||

ಹರಿದಂತರಂಗಳೊಳ್ಮೊಳಗೆಶುಭವಾದ್ಯರುತಿ | ಸರಯುಮಂಸಾರ್ದಂತು ಜಾನಕೀಸಹಚರಂ | ಪರಮರ್ಷಿಪುಂಗವವಸಿಷ್ಠನನಿಯೋಗದಿಂ ತೀರ್ಥಾಧಿದೇವತೆಯುಮನು || ಧರಣಿಸುತೆಯೊಡನೆಪೂಜಿಸಿ ಹೋಮಕರ್ಮಮಂ | ವಿರಚಿಸಿ ಮಹೀಸುರರ್ಗೆ ವಿವಿಧದಾನಂಗಳಂ | ನಿರುಪಮಪ್ರೀತಿಯಿಂದಿತ್ತವಭೃಥೇಷ್ಟಿಯಂ ವಿಭವದಿಂದಾಗಿಸಿದನು || ೨೧ ||

ಬಳಿಕಮವಗಾಹನಂಗೈದಾನದೀಶುದ್ಧ | ಸಲಿಲದೊಳಗೆಲ್ಲರಿಂದೊಡಗೂಡಿ ನಿರತಿಶಯ | ವಿಲಸದಭಿನವವಸ್ತ್ರಧರನಾಗಿ ಕುಸುಮಚಂದನಭೂಷಣಂಗಳಿಂದೆ || ಕಲಿತನೈಪಥ್ಯನಾಗಲ್ಲಿಂದೆ ರಘುವಂಶ | ಕಲಶಾಬ್ಧಿಚಂದ್ರನಾರಾಮಚಂದ್ರಂಬಂದ | ನೊಲವಿಂದೆಬಹುಳವೈಭವದಿಂದೆ ನಿರುಪಮೋತ್ಸವದಿಂದೆ ಮುಖಶಾಲೆಗೆ || ೨೨ ||

ಇಂತುಮುಗಿಯಿಸಿಮಹಾವಿತರಣೆಯೊಳಾಸಪ್ತ | ತಂತುವಂಬ್ರಹ್ಮಹತ್ಯಾದೋಷಮುಳಿಯೆನಿ | ಶ್ಚಿಂತಮಾನಸನಾಗಿ ನಿಖಿಲಹರಿದಂತವಿಶ್ರಾಂತಸತ್ಕೀರ್ತಿಯಾಗಿ || ಸಂತೋಷಭರಿತನಾಗಾದರಿಸಿ ನಿಖಿಲಭೂ | ಕಾಂತರಂ ಮಹನೀಯಮುನಿಗಳಂ ಕಪಿಮುಖ್ಯ | ರಂತತ್ತದುಚಿತಸನ್ಮಾನದಿಂದವರವರತಾಣಕ್ಕೆ ಬೀಳ್ಕೊಟ್ಟನು || ೨೩ ||

ಶ್ರೀರಾಮಚಂದ್ರನಾಬಳಿಕ ಸರಯೂನದೀ | ತೀರದಿಂಬಂದಯೋಧ್ಯೆಗೆ ಮುದಂಮಿಗೆನಿಜಕು | ಮಾರರಿಂದಂತನುಜರಿಂದಮೊಡಗೂಡಿ ನಿತ್ಯೋತ್ಸವಗಳಿಂದೆಸೆಯುತೆ || ಮಾರುತಿಪ್ರಮುಖಭಕ್ತಾಳಿಸೇವಿತಚರಣ | ವಾರಿರುಹನಾಗಿ ನವರತ್ನಮಯಸಿಂಹಾಸ | ನಾರೂಢನಾಗಿ ಜಾನಕಿಯೊಡನೆ ಧರ್ಮದಿಂದವನಿಯಂಪರಿಪಾಲಿಸುತ್ತಿರ್ದನು || ೨೪ ||

ಪೊಡವಿಯೊಳ್ಭಕ್ತಿಯಿಂದೀಮಹಾಕಥೆಯ ಕೇ | ಳ್ದೊಡವೋದಿದೊ
ಡಮಗಲ್ದವರಿಷ್ಟಬಂಧುಜನ | ದೊಡವೆರೆವರೈಶ್ವರ್ಯಕಾಮರೈಶ್ವರ್ಯಮಂಸುತ
ವಿಹೀನರ್ಸುತರನು ‖ ನುಡಿಯಲೇನಾರೋಗ್ಯಕಾಮರಾರೋಗ್ಯಮಂ | ಪಡೆವ
ರಿಳೆಯಾಳ್ಕರರಿವಿಜಯಮಂ ಮೂಲೋಕ | ದೊಡೆಯನಹರಾಮಚಂದ್ರನ
ಕೃಪೆಯೊಳೆಲೆಮುನಿಪಕೇಳೆಂದನಾಶೇಷನು ‖ ೨೫ ‖

ಆದಿಯಿಂದೀಮಹಾಶೇಷರಾಮಾಯಣವ | ನೋದಿದರ್ಗಂತುಕೇಳ್ದರ್ಗೆ
ತಾಂಲಭಿಸುವುದು | ವೇದಪಾರಾಯಣಫಲಂ ತೀರ್ಥಯಾತ್ರಾಫಲಂ ಸುರನದೀ
ತಟದೊಳು ‖ ಆದರಿಸಿಪಾಲ್ಗರೆವ ತುರುಗಳಸಹಸ್ರಮಂ | ಭೂದಿವಿಜರ್ಗಿತ್ತ
ಫಲಮಾಭರಣಸಹಿತ ಕ | ನ್ಯಾದಾನಫಲಮುತ್ತಮ ಕ್ರತುಫಲಂರಾಮಚಂ
ದ್ರಮನನುಗ್ರಹದೊಳು ‖ ೨೬ ‖

ಮೂವತ್ತುನಾಲ್ಕನೆಯ ಸನ್ಧಿ ಮುಗಿದುದು.

ಇಂತು ಸನ್ಧಿ ೩೪ ಕ್ಕೆ ಪದ್ಯ ೧೩೨೬ ಕ್ಕೆ ಮಂಗಳಮಸ್ತು.

ಶೇಷರಾಮಾಯಣಂ

ಸಂಪೂರ್ಣಂ.

ಶುದ್ಧಾಶುದ್ಧ ಪತ್ರಿಕೆ.

ಪುಟ.	ಪದ್ಯ.	ಅಶುದ್ಧ.	ಶುದ್ಧ.
೫	ಸೂಚನೆ	ಗೊಲಲವಿಂದೆ	ಗೊಲವಿಂದೆ
,,	೧	ನೂಡುಗೊಂಡು	ನೊಡಗೊಂಡು.
,,	೩	ಜೊನ್ನಡಲನಂ	ಜೊನ್ನೊಡಲನಂ.
೮	೧೩	ಸ| ಸಜ್ಜನ	ಸ| ಜ್ಜನ
೧೩	೧೨	ಳರ್ಪಿಂದು.	ೞರ್ಪಿಂದು.
೨೧	೨೮	ಪಿಹರಣವುಂರಿದಲ್ಲ	ಹರಣವುಂಪಿರಿದಲ್ಲ.
೨೯	೬೯	ಬಿಸುಸಮ್ಯದತೊಡನೆಯೆ	ಬಿಸುಸುಮ್ಯತೊಡನೆಯೆ.
,,	,,	ವ್ಯೈಹಿ	ವೈದೇಹಿ.
೫೮	೨೨	ನಪಗತರಥ	ನಪಗತರಥರ.
೬೦	೩೩	ಜುಗರೂಕತೆ	ಜಾಗರೂಕತೆ.
೭೦	೨೬	ವನನ	ವವನ
,,	೨೯	ಚೆತ್ರ	ಚೈತ್ರ.
೭೯	೬	ಳಯುವುೞದು	ಳ್ಳುಯುವುೞದು.
,,	,,	ಮುನಿಗಭೞಂ	ಮುನಿಗೞಂ
೮೦	೧೨	ದಿನಿಸಿ	ದನಿಸಿ
೮೧	೧೫	ತೊಡಗೂಡಿ	ದೊಡಗೂಡಿ
೮೨	೨೪	ಬೂಧಿಳುತ್ತಿರ್ದ	ಬಾಳುತ್ತಿರ್ದ
೮೬	೪೧	ನಾಚಕರಿಸಿ	ನಾರಚಿಸಿ.
೯೧	೬೯	ಬಹಿರ್ವನಲ್ಲಿ	ಬಹಿರ್ವನದಲ್ಲಿ.
೧೦೦	೨೦	ನಂತೆ	ನಂತು.
೧೧೩	೮	ಬಲಕ್ಕಿದಿರ್ಚಿ	ಬಲಕಿದಿರ್ಚಿ.

೧೩೪	೧೪	ಮಖ	ಮುಖ.
೧೪೦	೪೨	ತೆನಿರಂ	ತೇರಂ
೧೪೩	೫೫	ಗಣೆಗಂದಾಳಿಶರಥಿ	ಗಣೆಗಳಿಂದಾಶರಥಿ.
,,	೫೯	ನಿಶ್ಚಿಂತರಾದ	ನಿಶ್ಚಿಂತಮಿರ್ದ.
೧೬೫	೧	ಗೈವುದಕ್ಕೆ	ಗೈವನೆಂದು.
೧೭೦	೨೬	ಕಡಿಕಡಿವಾಗಿ	ಕಡಿಕಡಿಯಾಗಿ
೧೭೮	೨೪	ಮುಕ್ಕಲಿಟರುವು	ಮುಕ್ಕಘಟರುವು.
೧೮೧	೧೧	ರುರುಳ್ವಜಡ	ಜಡರುರುಳ್ವ.
೧೯೬	೨೧	ತಡೆದುರಭುಜ	ತಡೆದುಭುಜ.
೨೦೩	೧೭	ಮಾನಸದೆ	ಮಾರಿಸದೆ.
,,	೧೯	ಕೂಂರಬು	ಕೂರಂಬು.
೨೦೪	೨೧	ಸೂಟಯುಂ	ಸೂಟಯಿಂ.
೨೦೮	೧೭	ನಿಂದಂ	ನಿಂದು.
೨೧೫	೧೭	ಮಾಡದಳರೊಳ್	ಮಾಡದದರೊಳ್
೨೧೭	೨೯	ದೃ ಟಿ	ದೃಷ್ಟಿ.
೨೨೬	೨೪	ಎತ್ರನಾಗಿ	ಗಾತ್ರನಾಗಿ.
೨೫೮	೧೪	ನುಮೋದಿಸನೆನೆ	ನನುಮೋದಿಸನೆನೆ.
೨೬೧	೨೫	ಗಿರವನ	ಗಿರದವನ.
೨೭೮	೪೪	ಕಯ್ಕೊಳುದೆನೆ	ಕಯ್ಕೊಳ್ವುದೆನೆ.